Tigh BindingAnd Text light

UNIVERSAL
LIBRARY
OU_200050
UNIVERSAL
LIBRARY

ಗಳಗನಾಥ ಸುರಸ ಗ್ರಂಥಮಾಲೆ



ಕನ್ನಡಿಗರ

ಕರ್ಮಕಥೆ

ಅಥವಾ

ವಿಜಯನಗರರಾಜ್ಯದ ನಾಶ.



ಇದನ್ನು

ವೇಂಕಟೇಶ ತಿರಕೋ ಕುಲಕರ್ಣಿ ಗಳಗನಾಥ,

ಪೆನ್‌ಶನರ ಅಸಿ. ಮಾಸ್ತರ ಟ್ರೀ. ಕಾ. ಧಾರವಾಡ.

ಇವರು ರೂಪಾಂತರಿಸಿದರು.



(ಎರಡನೆಯಾವೃತ್ತಿ ೧೦೦೦ ಪ್ರತಿಗಳು)

ಬೆಂಗಳೂರು ಸಿಟಿ:
ಯೂನಿವರ್ಸಲ್ ಪಬ್ಲಿಕ್ ಪ್ರೆಸ್,

೧೯೩೦.



ಬೆಲೆ ರೂ. ೧—೮—೦.

ಬೆಂಗಳೂರು ಸಿಟಿ:

ಯೂನಿವರ್ಸಲ್ ಪ್ರಿಂಟಿಂಗ್ ಮುದ್ರಾಲಯದಲ್ಲಿ

ಜಿ. ಬಿ. ಶ್ರೀಕಂಠಯ್ಯನವರಿಂದ ಮುದ್ರಿಸಲ್ಪಟ್ಟಿತು.

ಪ್ರಕಾಶಕ—ವೆಂಕಟೇಶ ತಿರುಮಲೇ ಕುಲಕರ್ಣಿ, ಗಳಗನಾಥ.

ಪ್ರಸಿದ್ಧಿಸುವಸ್ಥಳ—"ಶ್ರೀಸದ್ಗುರು" ಆಫೀಸು, ಹಾವೇರಿ. ಜಿ. ಧಾರ್‌ವಾಡ

ಪ್ರಸ್ತಾವನೆ.

ಈ ವರೆಗೆ ಕನ್ನಡದಲ್ಲಿ ಪ್ರಸಿದ್ಧವಾಗಿರುವ ಕಾದಂಬರಿಗಳು ಕನ್ನಡಿಗರ ಸದ್ಗುಣಪೋಷಣಮಾಡತಕ್ಕುಂಥವಿದ್ದರೂ, ಅವು ಕನ್ನಡಿಗರ ಅಭಿಮಾನಕ್ಕೆ ಆಸ್ಪದವಿಲ್ಲದಿರುವವೆಂದು ಹೇಳಬಹುದು; ಅವು ರಜಪೂತರು-ಮಹಾರಾಷ್ಟ್ರರು-ಮುಸಲ್ಮಾನರು ಮುಂತಾದವರ ಅಭಿಮಾನಕ್ಕೆ ಪಾತ್ರವಾದ ಕಾದಂಬರಿಗಳೇ ಇರುತ್ತವೆ. ಕನ್ನಡಿಗರ ಉಜ್ವಲ ಹಿತದ ದೃಷ್ಟಿಯಿಂದ ನೋಡಿದರೆ ಇದೊಂದು ದೊಡ್ಡ ಕೊರತೆಯೆಂದು ಹೇಳಬಹುದು. ಇನ್ನು ಕನ್ನಡಿಗರಲ್ಲಿ ಚರಿತ್ರನಾಯಕರಾದ ರಾಜರೂ, ವೀರರೂ, ಮುತ್ಸದ್ದಿಗಳೂ ಇಲ್ಲದಿದ್ದರೆ ಉಪಾಯವಿದ್ದಿಲ್ಲ; ಆದರೆ ಹಿಂದಕ್ಕೆ ಕರ್ನಾಟಕದಲ್ಲಿ ಚಾಲುಕ್ಯ, ಕದಂಬ, ರಾಷ್ಟ್ರಕೂಟ ಮೊದಲಾದ ಪ್ರಸಿದ್ಧ ರಾಜವಂಶಗಳು ಆಗಿರುವದನ್ನು ಇತಿಹಾಸವು ಸಾರುತ್ತಿರುವದು. ಈಗ ಸರಾಸರಿ ಮುನ್ನೂರಾ ಐವತ್ತು ವರ್ಷಗಳ ಹಿಂದೆ ವಿಜಯನಗರವೆಂಬ ಜಗಪ್ರಸಿದ್ಧ ಕನ್ನಡಿಗರ ರಾಜ್ಯವು ಪರಮವೈಭವದಿಂದ ಮೆರೆಯುತ್ತಿತ್ತೆಂಬದನ್ನು ಕನ್ನಡಿಗರೆಲ್ಲರು ಬಲ್ಲರು. ಅಂದಬಳಿಕ ಕನ್ನಡಿಗರ ವೈಭವಗಳನ್ನು ವ್ಯಕ್ತಪಡಿಸಿ ಕನ್ನಡಿಗರ ಹೃದಯದ ಚಲನವಲನವನ್ನುಂಟುಮಾಡುವ ಕನ್ನಡಿಗರ ಕಾದಂಬರಿಗಳು ಪ್ರಕಟವಾಗದಿರುವದು ಲಾಂಛನವಲ್ಲವೇ? ಇದರಿಂದ ಕನ್ನಡಿಗರ ಔದಾಸೀನ್ಯವೂ, ಅಭಿಮಾನಶೂನ್ಯತೆಯೂ ಚೆನ್ನಾಗಿ ವ್ಯಕ್ತವಾಗುವವು.

ಈ ಕೊರತೆಯನ್ನು ಅರಿತು ನಾನು ಈಗ ೩ ವರ್ಷಗಳ ಹಿಂದೆ "ಕುಮುದಿನಿ" ಅಥವಾ "ಬಾಲಕ್ಕೆ ಬಡಿದಾಟ" ಎಂಬ ತೀರಸ್ವತಂತ್ರ ಕಾದಂಬರಿಯನ್ನು ಬರೆದದ್ದು ಕನ್ನಡಿಗರ ಸ್ಮರಣದಲ್ಲಿರಬಹುದು. ಅದು ವಿಜಯನಗರದ ರಾಜ್ಯವು ನಾಶವಾದ ಬಳಿಕ ಒದಗಿದ ಆ ಅರಸು ಮನೆತನದ ಒಂದು ಅಂತಹಃಕಲಹವನ್ನು ಕುರಿತು ಬರೆಯಲ್ಪಟ್ಟಿರುವದು. ಇದರಂತೆ ವಿಜಯನಗರದ ರಾಜ್ಯದನಾಶ, ಅದರ ಅತ್ಯುತ್ಕರ್ಷ, ಅದರ ಸ್ಥಾಪನೆ ಇವುಗಳನ್ನು ಕುರಿತು ಇನ್ನು ಮೂರು ಕಾದಂಬರಿಗಳನ್ನು ಬರೆಯಬೇಕೆಂದು ಆಗ ನಾನು ನಿಶ್ಚಯಿಸಿದೆನು. ಅದರಂತೆ ಈ ವರ್ಷ ವಿಜಯನಗರದ ರಾಜ್ಯದ ನಾಶವನ್ನು ಕುರಿತು ಬರೆದ ಈ "ಕನ್ನಡಿಗರ ಕರ್ಮಕಥೆ" ಎಂಬ ಕಾದಂಬರಿಯು

ಮುಗಿದಿರುತ್ತದೆ. ಇದು ಕುಮುದಿನಿಯಂತೆ ಸ್ವತಂತ್ರ ಕಾದಂಬರಿಯಾಗಿರದೆ, ಪ್ರಸಿದ್ಧಮಹಾರಾಷ್ಟ್ರ ಕಾದಂಬರೀಕಾರರಾದ ಮ. ರಾ. ರಾ. ಹರಿ ನಾರಾಯಣ ಆಪಟೆಯವರ "ವಜ್ರಾಘಾತ" ವೆಂಬ ಕಾದಂಬರಿಯ ರೂಪಾಂತರವಾಗಿರುವದು. ಇದೇ ಮೇರೆಗೆ ಕನ್ನಡಿಗರ ಅಭಿಮಾನಾಸ್ಪದವಾದ ಇಂಥ ಇನ್ನೂ ಎರಡು ಮನೋಹರ ಕಾದಂಬರಿಗಳು ಬಹುಶಃ ಸ್ವತಂತ್ರ ಹೊಸ ರಚನೆಯಿಂದ ಅನುವು ನೋಡಿ ಬರೆಯಲ್ಪಡಬಹುದು.

ಆನಂದವನ ಅಗಡಿ,
೧೧—೫—೧೯೧೬.

ವಿಧೇಯ
ಗಳಗನಾಥ.

ಎರಡನೆಯ ಆವೃತ್ತಿಯ ಪ್ರಸ್ತಾವನೆ.

ಪ್ರಿಯಕನ್ನಡಿಗರ ಉದಾರಾಶ್ರಯದಿಂದ ಈ ಕಾದಂಬರಿಯ ಒಂದನೆಯ ಆವೃತ್ತಿಯ ಐದು ಸಾವಿರ ಪ್ರತಿಗಳು ತೀರಿ ನಾಲ್ಕಯ್ದು ವರ್ಷಗಳಾಗಿ ಜನರ ಬೇಡಿಕೆಯಿದ್ದರೂ ಬೇರೆ ಹೊಸ ಪುಸ್ತಕಗಳ ಪ್ರಿಂಟಿನ ಪ್ರಸಂಗದಿಂದಲೂ, ಬೇರೆ ತೊಂದರೆಗಳಿಂದಲೂ ಇದರ ಹೊಸ ಆವೃತ್ತಿಯನ್ನು ಹೊರಡಿಸಲಿಕ್ಕೆ ಅನುಕೂಲವಾಗಿದ್ದಿಲ್ಲ; ಆದರೆ ಮದ್ರಾಸ ಸರಕಾರದವರು ಈ ವರ್ಷ ಇದನ್ನು ಪಠ್ಯಪುಸ್ತಕವಾಗಿ ನಿಯಮಿಸಿದ್ದರಿಂದ ಇದು ಎರಡನೆಯ ಆವೃತ್ತಿ ಹೊರಡಿಸುವ ಸುಯೋಗವು ಒದಗಲು, ನನ್ನಲ್ಲಿ ಕೃತಜ್ಞತೆಭಾವವು ಉತ್ಪನ್ನವಾಗಿರುವದು.

ಸದ್ಗುರು ಆಫೀಸ್, ಹಾವೇರಿ.
ತಾ. ೧—೩—೩೦.

ವಿಧೇಯ
ನೇ. ತಿ. ಕುಲಕರ್ಣಿ
ಗಳಗನಾಥ.

ಕನ್ನಡಿಗರ

ಕರ್ಮ-ಕಥೆ.

೧ನೆಯ ಪ್ರಕರಣ ವಿನಾಶಾಂಕುರ

ವಿಜಯನಗರದ ಕೃಷ್ಣದೇವರಾಜನ ಕಾಲವು, ಕನ್ನಡಿಗರ ಅತ್ಯಂತ ಗೌರವದ ಕಾಲವೆಂದು ಹೇಳಲವಶ್ಯವಿಲ್ಲ ಆಗಿನ ಕನ್ನಡಿಗರ ಪ್ರತಾಪದ ಅಬ್ಬರವಲ್ಲಿ ನೆರೆಹೊರೆಯ ಮುಸಲ್ಮಾನ ಅರಸರು ತತ್ತರಿಸುತ್ತಲಿದ್ದರು ಇಂಡಿಯ ದಕ್ಷಿಣ ಹಿಂದುಸ್ಥಾನವು ಕೃಷ್ಣದೇವರಾಯನ ಸ್ವಾಮಿತ್ವಕ್ಕೆ ಒಳಗಾಗಿತ್ತೆಂದು ಹೇಳಬಹುದು. ಮುಸಲ್ಮಾನರಿಗೆ ಮುಂದೆ ಬಹು ದಿವಸ ಕೃಷ್ಣದೇವರಾಯನ, ಹಾಗು ಅವನ ದಂಡಾಳುಗಳ ಭಯವು ತಪ್ಪಲಿಲ್ಲ. ಕೃಷ್ಣದೇವರಾಯನು ಜೀವದಿಂದಿರುವವರೆಗೆ ವಿಜಯನಗರದ ಮೇಲೆ ಸಾಗಿಬರಲಿಕ್ಕೆ ವಿಜಾಪುರದ ಆದಿಲಶಹೆನಿಗೆ ಧೈರ್ಯವಾಗಲಿಲ್ಲ ಈ ಕಾಲದಲ್ಲಿ ಕನ್ನಡಿಗರ ಉತ್ಕರ್ಷದ ಪರಮಾವಧಿಯಾಯಿತೆಂದು ಹೇಳಬಹುದು. ವಿದ್ವಾಂಸರಿಗೆ ಆಶ್ರಯವು ದೊರೆತು, ವೈದಿಕ ವಿದ್ಯೆಗೆ ಉತ್ತೇಜನವಾಯಿತು. ದೊಡ್ಡದೊಡ್ಡ ಕಟ್ಟಡಗಳಿಂದ ರಾಜಧಾನಿಯು ಶೃಂಗರಿಸಲ್ಪಟ್ಟಿತು. ಕೃಷ್ಣಸ್ವಾಮಿಯಗುಡಿ, ಹಜಾರರಾಮಸ್ವಾಮಿಯಗುಡಿ, ವಿಜಯವಿಠ್ಠಲನಗುಡಿ ಮೊದಲಾದ ಪ್ರಸಿದ್ಧ ಗುಡಿಗಳು ಕಟ್ಟಿಸಲ್ಪಟ್ಟುವು, ಧರ್ಮದ ಬಾಹ್ಯಸ್ವರೂಪಕ್ಕೆ ಕಳೆಯೇರಿತು. ತುಂಗಭದ್ರೆಯ ಕಾಲಿವೆ, ಬಸವನ ಕಾಲಿವೆ, ದೊಡ್ಡದೊಂದು ಕೆರೆ ಇವುಗಳಿಂದ ಪ್ರಜೆಗಳ ಸುಖಸಮೃದ್ಧಿಗಳು ಹೆಚ್ಚಿದವು. ಕೃಷ್ಣದೇವರಾಯನು ತನ್ನ ಪ್ರೀತಿಯ ಹೆಂಡತಿಯಾದ ನಾಗಲಾದೇವಿಯ ಸನ್ಮಾನಾರ್ಥವಾಗಿ ಕಟ್ಟಿಸಿದ ನಾಗಲಾಪುರವೆಂಬದು, ಈಗ ಹೊಸಪೇಟೆಯೆಂಬ ಹೆಸರಿನಿಂದ ಪ್ರಸಿದ್ಧವಾಗಿರುತ್ತದೆ. ತೆನ್ನಾರರಾಮಕೃಷ್ಣನೆಂಬ ವಿನೋದಸ್ವಭಾವದ ರಸಿಕವ್ಯಕ್ತಿಯ ಮನೋಹರ ಕಥೆಗಳಿಗೆ, ಈ ಕೃಷ್ಣರಾಯನ ಸಂಬಂಧವಿರುತ್ತದೆಂಬದನ್ನು ಬಹುಜನ ವಾಚಕರು ಅರಿತಿರಬಹುದು. ಒಟ್ಟಿಗೆ ಕೃಷ್ಣದೇವರಾಯನ ಕಾಲವು ಸರ್ವಾಂಗಸುಂದರವೂ, ಬಲಿಷ್ಠವೂ, ಕನ್ನಡಿಗರ ಅಭಿಮಾನಾಸ್ಪದವೂ ಆಗಿತ್ತೆಂದು ನಿರ್ಬಾಧವಾಗಿ ಹೇಳಬಹುದು; ಆದರೆ ನಿರ್ದೋಷವಾದದ್ದು ಜಗತ್ತಿನಲ್ಲಿ ಯಾವದಿರುತ್ತದೆ? ಅದರಂತೆ ಆಗಿನ ವಿಜಯ

ನಗರದ ರಾಜ್ಯಕ್ಕೆ ಅಹಂಕಾರದ ಬಾಧೆಯು ತಟ್ಟಿ, ಅದು ಮುಸಲ್ಮಾನರ ಮನ ಸ್ತಾಪದ ಪ್ರಖರತೆಯಲ್ಲಿ ತನ್ನ ಸರ್ವಸ್ವದ ನಾಶಮಾಡಿಕೊಳ್ಳುವ ಹಾದಿಯನ್ನು ಹಿಡಿದಿತ್ತೆಂದು ದುಃಖದಿಂದ ಹೇಳಬೇಕಾಗುವದು!

ಕೃಷ್ಣದೇವರಾಯನ ಕಾಲದಲ್ಲಿ ಹಿಂದೂ ಸರದಾರರ ವರ್ಚಸ್ಸು ವಿಶೇಷವಾಗಿತ್ತು. ರಾಜ್ಯದ ನಿಜವಾದ ಅಧಿಕಾರವು ಸರದಾರರ ಕೈಯಲ್ಲಿಯೇ ಇತ್ತೆಂದು ಹೇಳಬಹುದು. ಬಹುಜನ ಸರದಾರರು ಅರಸನಿಗೆ ಗೊತ್ತಾಗದಂತೆ ಮನಸೋಕ್ತವಾಗಿ ಆಚರಿಸುತ್ತಲಿದ್ದರು. ಹೀಗಿರುವಾಗ, ರಾನುರಾಜನೆಂಬ ಮಹಾ ಪ್ರತಾಪಿಯಾದ ಸರದಾರನು, ಬೇಟೆಗಾಗಿ ಮುದಗಲಿನ ಹತ್ತರದ ಅರಣ್ಯವನ್ನು ಕುರಿತು ಸಾಗಿದ್ದನು. ಆಗ ವೈಶಾಖ ಮಾಸದ ಕೃಷ್ಣಪಕ್ಷವು ಮುಗಿದು, ಅದೇ ಜ್ಯೇಷ್ಠಮಾಸಕ್ಕೆ ಆರಂಭವಾಗಿತ್ತು. ಮುಂಗಾರಿಯ ಕಪ್ಪು ಮೋಡವು ಕವಿದು, ಗುಡುಗು-ಮಿಂಚುಗಳು ಮಳೆಯ ಅಬ್ಬರವನ್ನು ಸೂಚಿಸುತ್ತಲಿದ್ದವು. ಹೊರಗೆ ಮೂರು ತಾಸು ಹೊತ್ತು ಉಳಿದಿತ್ತು. ಒಕ್ಕಲಿಗರು ಮುಗಿಲಕಡೆಗೆ ಆನಂದದಿಂದ ನೋಡುತ್ತ, ಮಳೆ ಬಂದರೂ ಬರಲಿ, ಆದಷ್ಟು ತಮ್ಮ ಹೊಲಗೆಲಸವನ್ನು ತೀರಿಸಿಕೊಳ್ಳಬೇಕೆಂದು ಚತುರಪಡುತ್ತ, ಎತ್ತುಗಳನ್ನು ಬೆದರಿಸುತ್ತಲಿದ್ದರು. ಕೆಲವರು ಹೊಲಕ್ಕೆ ಗೊಬ್ಬರವನ್ನು ಬೇಗ ಬೇಗ ಕಡಿಯುತ್ತಲಿದ್ದರು. ಒತ್ತರದಿಂದ ಬೀಸುವ ತಂಗಾಳಿಯು ಸೋಂಕಿನಿಂದ ಹಾದಿಕಾರರಿಗೆ ಸುಖವಾಗುತ್ತಿದ್ದರೂ, ತಾವು ತೋಯಿಸಿಕೊಂಡೇವೆಂಬ ಭಯದಿಂದ ಮುಗಿಲುನೋಡುತ್ತ ಲಗುಲಗು ನಡೆಯುತ್ತಲಿದ್ದರು. ಮೋಡಗಳು ಕವಿದದ್ದರಿಂದ ಸೂರ್ಯದರ್ಶನಕ್ಕೆ ಅಸ್ಪದವಿಲ್ಲದಾಯಿತು. ಈ ಮೊದಲು ಪೆಟ್ಟಿನಮೇಲೆ ಪೆಟ್ಟು ಎರಡು ಮೂರು ಮುಂಗಾರಿಯ ದೊಡ್ಡ ಮಳೆಗಳಾದದ್ದರಿಂದ, ಹೊಲಕ್ಕೆ ಹದಬಿದ್ದ ಹಾದಿಬಟ್ಟೆಗಳು ಹಚ್ಚಗಾಗುತ್ತಲಿದ್ದವು. ತಗ್ಗುಗಳಲ್ಲಿ ನೀರು ತುಂಬಿ, ಹಳ್ಳಕೊಳ್ಳಗಳಲ್ಲಿ ನೀರು ಸರವುಗಟ್ಟಿ ಹರಿಯುತ್ತಿದ್ದದ್ದರಿಂದ, ಮಳೆಗಾಲವು ದಿವ್ಯಾಲಂಕಾರಗಳನ್ನಿಟ್ಟುಕೊಂಡಂತೆ ಆಗಿತ್ತು. ಬರಬರುತ್ತ ಗಾಳಿಯು ಒತ್ತರವಾಯಿತು. ಆಕಾಶದಲ್ಲೆಲ್ಲ ಮೋಡಗಳು ಸ್ವಚ್ಛಂದದಿಂದ ಸಂಚರಿಸತೊಡಗಿ, ದೊಡ್ಡ ದೊಡ್ಡ ಹನಿಗಳು ಉದುರಹತ್ತಿದವು ದನಕಾಯುವ ಹುಡುಗರು ತಮ್ಮ ದನಗಳ ಹಿಂಡುಗಳನ್ನು ಓಡಿಸುತ್ತ, ತಮ್ಮ ಕಂಬಳಿಯ ಕೊಪ್ಪಿಗಳ ತುದಿಗಳನ್ನು ಎಡಗೈಯಿಂದ ಹಿಡಿದುಕೊಂಡು, ಬಲಗೈಯಿಂದ ಕೋಲನ್ನೆತ್ತಿ ದನಗಳನ್ನು ಬೆದರಿಸುತ್ತ, ಬಡಿಯುತ್ತ, ಆನಂದದಿಂದ ಸಾಗಹತ್ತಿದರು. ತೋಯಿಸಿಕೊಳ್ಳುವ ಭಯದ ಸುದ್ದಿಯನ್ನು ಕೂಡ

ಆರಿಯದವರಂತೆ ಅವರು ಆನಂದದಿಂದ ಕೂಗುತ್ತಲಿದ್ದರು. ಮೇಲೆಮೇಲೆ ಮಳೆಯಾಗಿ ಹುಡಿಕೂತದ್ದರಿಂದ ಆಗ ಕಣ್ಣು ತೆರೆದು ಸಾಗಲಿಕ್ಕೆ ಯಾರಿಗೂ ಪ್ರತಿಬಂಧವಾಗುತ್ತಿದ್ದಿಲ್ಲ. ಮೋಡದ ಗಮ್ಮಿನಿಂದ ತಳಮಳಿಸುತ್ತಿದ್ದವರಿಗೆ ಆಂಥ ದೊಡ್ಡ ಬಿರುಗಾಳಿಯಿಂದಾದರೂ ಸುಖವೇ ಆಗುತ್ತಿತ್ತು. ಗಾಳಿಯು ಮಳೆಯನ್ನು ತರುವದೂ ಉಂಟು; ಕಳೆಯುವದೂ ಉಂಟು. ಬಿರುಗಾಳಿಯಿಂದ ಮಳೆಯ ಕಸುವು ಕಡಿಮೆಯಾಯಿತು. ಒಂದು ಕಂಬಳಿ ತೋಯ, ವಷ್ಟು ಮಳೆಯಾ, ಮೋಡಗಳು ಚದರಿ ಬಿಸಿಲು ಬಿದ್ದಿತು. ಆಗ ಆಕಾಶದು ಹಾಗು ದಿಕ್ಕುಗಳ ಸುಪ್ರಸನ್ನತೆಯು ಹೆಚ್ಚಿ, ಆದರೊಡನೆ ಪ್ರಾಣಿಗಳ ಆನಂದವೂ ಹೆಚ್ಚಿತು. ಬೇಟೆಗಾಗಿ ಸಾಗಿದ್ದ ರಾಮರಾಜನಿಗಂತು ಹಿಡಿಸಲಾರದಷ್ಟು ಆನಂದವಾಯಿತು. ಆತನು ಒತ್ತಾದಿಂದ ಅರಣ್ಯವನ್ನು ಸೇರಿ, ಒಂದು ನದಿಯ ದಂಡೆಗೆ ಮುಟ್ಟಿದನು.

ಆ ಅರಣ್ಯವು ಹುಲಿ-ಕರಡಿಗಳು ಸೇರುವಷ್ಟು ಗಹನವಾದದ್ದಿದ್ದಿಲ್ಲ; ಆದರೆ ತಪ್ಪಿಸಿಕೊಂಡು ಬಂದ ಒಂದು ಹುಲಿಯು ಪೆಳೆಗಳಲ್ಲಿ ಸೇರಿಕೊಂಡು, ದನಕರುಗಳಿಗೆ ಬಹಳ ಉಪದ್ರವ ಕೊಡುತ್ತಲಿತ್ತು. ಈ ಸುದ್ದಿಯನ್ನು ಕೇಳಿದ ರಾಮರಾಜನು ತಾನೇ ಆ ಹುಲಿಯನ್ನು ಕೊಲ್ಲುವೆನೆಂದು ಹೇಳಿ, ಇಂದು ಒಬ್ಬನೇ ಸ್ವಚ್ಛಂದದಿಂದ ಬೇಟೆಗೆ ನಡೆದಿದ್ದನು. ರಾಮರಾಜನ ಬೇಟೆಯ ಹುಲಿಯೆಂಬ ಭಯದಿಂದ ಒಬ್ಬರೂ ಆದರ ಗೊಡವಿಗೆ ಹೋಗಿದ್ದಿಲ್ಲ. ಏರಿಕೆಯ ರಕ್ತದ ನಮ್ಮ ಆ ತರುಣ ಕನ್ನಡ ಸರದಾರನು, ಒಂದು ಕುರಿಯನ್ನು ಒಂದು ಗಿಡದ ಬೊಡ್ಡಿಗೆ ಕಟ್ಟಿಸಿ, ತಾನು ಗಿಡವೇರಿ ಕುಳಿತುಕೊಂಡನು. ದಡ್ಡಿಯೊಳಗಿದ್ದ ಆ ಕುರಿಯು ಎರಡು ಮರಿಗಳು ಆಕಸ್ಮಾತ್ತಾಗಿ ಮೆವುಗುಟ್ಟುತ್ತ ತಮ್ಮ ತಾಯಿಯ ಬಳಿಗೆ ಬಂದವು; ಕುರಿಯು ಶಿಶುವಾತ್ಸಲ್ಯದಿಂದಬಂದೇಸವನೆ ಒದರುತ್ತ ಮರಿಗಳ ಬಳಿಗೆ ಹೋಗುವದಕ್ಕಾಗಿ ತನ್ನ ಕೊರಳ ಹಗ್ಗವನ್ನು ಕಸುವಿನಿಂದ ಜಗ್ಗುತ್ತ ಕೊಸರಿಹೋಗಲು ಯತ್ನಿಸುತ್ತಿತ್ತು. ಇದನ್ನು ಕೌತುಕದಿಂದ ನೋಡುತ್ತ ಕುಳಿತುಕೊಂಡಿದ್ದ ರಾಮರಾಜನ ಲಕ್ಷವನ್ನು ಆಕಸ್ಮಾತ್ತಾಗಿ ಒಬ್ಬ ತರುಣಿಯು ಎಳೆದುಕೊಂಡಳು. ಹದಿನಾರು ವರ್ಷದ ಮಯಸ್ಸಿನ ಆ ಸುಂದರಿಯು, ಒಂದು ಸಣ್ಣ ಬಿಂದಿಗೆಯನ್ನು ಬಗಲಲ್ಲಿ ಇಟ್ಟುಕೊಂಡು ನದಿಗೆ ನೀರಿಗೆ ಬರುತ್ತಲಿದ್ದಳು. ಆಕೆಯ ಪರಿವಾರವು ಸ್ವಲ್ಪದೂರ ಒಂದು ಗಿಡದ ಬುಡದಲ್ಲಿ ಇಳಿದುಕೊಂಡು ವಿಶ್ರಮಿಸುತ್ತಲಿತ್ತು. ತರುಣಿಯು ಮುಸಲ್ಮಾನಳಾಗಿದ್ದರೂ ಇನ್ನೂ ಲಗ್ನವಾಗದೆಯಿದ್ದದ್ದರಿಂದ, ಆಕೆಯು ಗೋಷೆಯ ನಿಯಮಕ್ಕೆ ಒಳಗಾಗಿದ್ದಿಲ್ಲ. ಸಮೀಪದಲ್ಲಿದ್ದ

ಆ ಹಳ್ಳಿಯನ್ನು ಈಗ ಹೊತ್ತು ಮುಣುಗುವದರೊಳಗೆ ಸೇರೋಣವೆಂಬ ವಿಚಾರದಿಂದ ಆ ತರುಣಿಯ ಪರಿವಾರದವರು ನಿಶ್ಚಿಂತೆಯಿಂದ ತಮ್ಮತಮ್ಮೊಳಗೆ ಹರಟುತ್ತಿದ್ದರು. ಕುರಿಯ ವಾಸನೆಯಿಂದ ಪುಲಿಯು ಹೊರಬೀಳಬಹುದೆಂದು ಹಾದಿಯ ನೋಡುತ್ತಿದ್ದ ರಾಮರಾಜನ ಕಣ್ಣಿಗೆ ಆ ಸುಂದರ ತರುಣಿಯ ಲಾವಣ್ಯ ಪ್ರಾಶನದ ಹೊಸಬೊಂದು ಪ್ರಸಂಗವು ಬಿದ್ದದ್ದರಿಂದ ಆತನ ಮನಸ್ಸು ಇತ್ತಂಡವಾಯಿತು. ಒಬ್ಬನೇ ಪರಾಕ್ರಮವನ್ನು ತೋರಿಸಬೇಕೆಂಬ ಉಬ್ಬಿನಿಂದ ಸಂಗಡ ಯಾರನ್ನೂ ಕರಕೊಳ್ಳದೆ, ಆತನು ತಾನೊಬ್ಬನೇ ಬೇಟೆಗೆ ಬಂದಿದ್ದನು. ಕುರಿಯನ್ನು ತಂದುಕೊಟ್ಟ ಕುರುಬನು ಅದನ್ನು ಮರಕ್ಕೆ ಕಟ್ಟಿ, ಎಲ್ಲ ಸಿದ್ಧತೆಯನ್ನು ಮಾಡಿದಮೇಲೆ ರಾಮರಾಜನು ಆತನಿಗೆ ಹೊರಟು ಹೋಗುವದಕ್ಕೆ ಕಟ್ಟಪ್ಪಣೆಮಾಡಿದ್ದನು. ಇತ್ತ ತನ್ನಮರಿಗಳು ಬಂದು ಮೊಲೆಕುಡಿಯುವತ್ತಿದ್ದರಿಂದ, ಕುರಿಯ ಜಗ್ಗಾಟವು ನಿಂತಿತು. ಬರಬರುತ್ತ ರಾಮರಾಜನ ಮನಸ್ಸನ್ನು ಆ ಸುಂದರ ತರುಣಿಯು ಸಂಪೂರ್ಣವಾಗಿ ಎಳಕೊಂಡದ್ದರಿಂದ ಆತನ ಮೇಲೆ ಆ ತಾಯಿ ಮಕ್ಕಳ ಪವಿತ್ರಪ್ರೇಮದ ಪರಿಣಾಮವಾಗಲಿ, ಬಳಿಯಲ್ಲಿ ಹರಿಯುವ ನದಿಯ ಪ್ರವಾಹದ ಮಂಜುಲನಾದದ ಪರಿಣಾಮವಾಗಲಿ, ಇಳಿಯುವ ಹೊತ್ತಿನ ತಂಗಾಳಿಯ ಸುಖಸ್ಪರ್ಶದ ಪರಿಣಾಮವಾಗಲಿ ಆಗಲಿಲ್ಲ. ಯಾವ ಪಾಪವನ್ನೂ ಅರಿಯದ ಆ ಸುಂದರಿಯ ಮನಸ್ಸು, ಆ ನಿರಪರಾಧಿಗಳಾದ ಮೂಕಪ್ರಾಣಿಗಳ ಕಡೆಗೆ ತಿರುಗಿತು. ಆ ತಾಯಿಮಕ್ಕಳ ಅಕೃತ್ರಿಮ ಪ್ರೇಮವನ್ನು ನೋಡಿ, ಮುಗುಳು ನಗೆನಗುತ್ತ ಆಕೆಯು ಅವುಗಳ ಬಳಿಗೆ ಕುತುಕದಿಂದ ಬರುತ್ತಲಿದ್ದಳು. ಆ ಸುಂದರ ತರುಣಿಯ ಮನೋಹರ ಮುಖವನ್ನೂ, ತೇಜಃಪುಂಜವಾದ ವಿಶಾಲನೇತ್ರಗಳನ್ನೂ, ಮಂದಗಮನವನ್ನೂ ನೋಡುವ ಭರದಲ್ಲಿ, ರಾಮರಾಜನು ಅನ್ಯ ವಿಷಯಗಳನ್ನು ಮರೆತನು. ಆತನಿಗೆ ತನ್ನ ಕೈಯೊಳಗಿನ ತುಬಾಕಿಯ ನೆನಪು ಉಳಿಯಲಿಲ್ಲ; ಹುಲಿಯ ಸ್ಮರಣವಾಗಲಿಲ್ಲ; ತಾನು ಯಾರು, ಯಾಕೆ ಬಂದೆನು, ಎಲ್ಲಿ ಕುಳಿತಿರುವೆನು ಎಂಬದರ ಅರಿವು ಸಹ ನಿಲ್ಲಲಿಲ್ಲ; ಆತನು ಎಲ್ಲವನ್ನು ಮರೆತು ಎವೆಯಿಕ್ಕದೆ ಒಂದೇ ಸವನೆ ಆ ತರುಣಿಯನ್ನು ನೋಡುತ್ತ ಕುಳಿತುಕೊಂಡಿದ್ದನು.

ಇತ್ತ ಆ ತರುಣಿಯು ಕುರಿಯ, ಹಾಗು ಕುರಿಮರಿಗಳ ಪ್ರೇಮದ ಪ್ರಭಾವವನ್ನು ಕೌತುಕದಿಂದ ನೋಡುತ್ತ, ಅವುಗಳ ಬಳಿಗೆ ಬಂದು, ಆ ಕುರಿಯನ್ನು ಕುರಿತು ಉರ್ದೂಭಾಷೆಯಿಂದ—ಯಾವ ದುಷ್ಟನು ನಿನ್ನನ್ನು ಇಲ್ಲಿ ಕಟ್ಟಿದ್ದಾನೆ! ನಿಲ್ಲು, ನಾನು ನಿನ್ನನ್ನು ಈಗ ಬಿಚ್ಚಿಬಿಡುತ್ತೇನೆ, ಎಂದು ನುಡಿಯುತ್ತ ಕುರಿಯ

ಕೊರಳ ಹಗ್ಗವನ್ನು ಬಿಚ್ಚಹೋದಳು. ಆಕೆಯ ಪ್ರಯತ್ನಕ್ಕೆ ಪ್ರತಿಬಂಧವಾ ಡುವದೊತ್ತಟ್ಟಿಗೇ ಉಳಿದ, ರಾಮರಾಜನು ಆಕೆಯ ಚಲನವಲನವನ್ನೂ, ಲಲಿತ ವಾದ ಮನೋಹರ ಹಾವಬಾವವನ್ನೂ ನೋಡುವದರಲ್ಲಿ ಮಗ್ನನಾಗಿ ಹೋದನು. ಆತನು ಹೀಗೆಯೇ ಎಷ್ಟು ಹೊತ್ತು ಮಗ್ನನಾಗಿರುತ್ತಿದ್ದನೋ ತಿಳಿಯದು. ಆದರೆ ಆತನನ್ನು ಎಚ್ಚರಗೊಳಿಸುವಂಥ ಒಂದು ಭಯಂಕರ ಪ್ರಸಂಗವು ಅಕ ಸ್ಮಾತ್ತಾಗಿ ಒದಗಿ, ಆತನ ಚಿತ್ತವು ಚಂಚಲವಾಯಿತು. ಕುರಿಯನ್ನು ಗಿಡಕ್ಕೆ ಕಟ್ಟಿಹೋದ ಕುರುಬನು ಗುಲ್ಲುಮಾಡಿ ಎಬ್ಬಿಸಿದ್ದರಿಂದಲೋ, ಕುರಿಯ ವಾಸನೆ ಯಿಂದಲೋ, ಬೇರೆ ಯಾವ ಕಾರಣದಿಂದಲೋ ಆ ಭಯಂಕರವಾದ ಹುಲಿಯು ಗುರುಗುಟ್ಟುತ್ತ ಎದ್ದಿತು. ಅದರ ಗುರುಗುಟ್ಟುವ ಧ್ವನಿಯು ರಾಮರಾಜನಿಗೆ ಸ್ಪಷ್ಟವಾಗಿ ಕೇಳಿಸಹತ್ತಿತು. ಇನ್ನು ಈ ಹುಲಿಯು ಇತ್ತಕಡೆಗೆ ಬಂದು ಕುರಿ ಯ ಮೇಲಾಗಲಿ, ಸುಂದರಿಯ ಮೇಲಾಗಲಿ ಹಾರಿ, ಪ್ರಾಣಹರಣ ಮಾಡುವ ದೆಂದು ರಾಮರಾಜನು ತಿಳಿದನು. ಆ ರಮಣಿಯೊಬ್ಬಳು ಅಲ್ಲಿ ಇರದಿದ್ದರೆ, ಆತನಿಗೆ ಯಾತರ ಚಿಂತೆಯೂ ಇದ್ದಿಲ್ಲ. ಆತನು ಒಂದು ಕ್ಷಣದಲ್ಲಿ ಗುಂಡು ಹಾಕಿ ಹುಲಿ ಯನ್ನು ಕೊಲ್ಲುತ್ತಿದ್ದನು. ಆದರೆ ಈಗ ಹಾಗೆ ಮಾಡುವ ಹಾಗಿದ್ದಿಲ್ಲ. ಕುರಿ ಯ ಬಳಿಯಲ್ಲಿ ನಿಂತಿದ್ದ ಸುಂದರಿಯನ್ನು ಬೆನ್ನಿಗೆ ಹಾಕಿಕೊಂಡು, ಹುಲಿಗೆ ಎದುರಾಗಿ ನಿಂತು ಆದನ್ನು ಆತನು ಕೊಲ್ಲಬಿದ್ದರೆ, ಆಕೆಯ ಪ್ರಾಣರಕ್ಷಣವಾ ಗುವಂತೆ ಇದ್ದಿಲ್ಲ. ಆದ್ದರಿಂದ ಮಹಾ ಸಾಹಸಿಯಾದ ರಾಮರಾಜನು ತುಬಾ ಕಿಯನ್ನು ಜೋಕೆಯಿಂದ ಹಿಡಿದು ಗಿಡವ ಮೇಲಿಂದ ಕೆಳಗೆ ದುಮುಕಿದನು. ಅಷ್ಟರಲ್ಲಿ ಹುಲಿಯು ಕುರಿಯನ್ನು ಹಿಡಿದಿತ್ತು. ಇನ್ನು ಗುಂಡು ಹಾಕುವದು ಅಶಕ್ಯವಾಗಿ ತೋರಲು ರಾಮರಾಜನು ತುಬಾಕಿಯನ್ನು ಬಿಸುಟಿ, ಟೊಂಕದಲ್ಲಿ ಅಲೆದಾಡುತ್ತಿದ್ದ ಕತಾರಿಯನ್ನು ಕೈಯಲ್ಲಿ ತಕ್ಕೊಂಡು ಹುಲಿಯ ಹೊಟ್ಟೆಯ ಬುಡದಲ್ಲಿ ಸೇರಿಸಿದನು. ಹುಲಿಯ ಬಾಯಲ್ಲಿ ಕುರಿಯಿದ್ದ ದ್ದರಿಂದಾಗಲಿ, ಬೇರೆ ಯಾವ ಕಾರಣದಿಂದೇ ಆಗಲಿ, ಅದರ ಆಯಕಟ್ಟಿನ ಸ್ಥಳನೋಡಿ ಒಂದೇ ಸವನೆ ಕತಾರಿಯಿಂದ ಇರಿಯಲಿಕ್ಕೆ ಆತನಿಗೆ ಅನುಕೂಲವಾಯಿತು. ಹುಲಿಯು ಬಾ ಯೊಳಗಿನ ಕುರಿಯನ್ನು ಚೆಲ್ಲಿಕೊಟ್ಟು, ರಾಮರಾಜನನ್ನು ಹಿಡಿಯಲು ಹಾತೊ ರೆಯಿತು. ಹೀಗೆ ಒಂದೇ ಸಮನೆ ಅವರಿಬ್ಬರ ಗುದುಮುರಿಗೆಯು ನಡೆದಿರಲು, ರಾಮರಾಜನ ಕತಾರಿಯ ಇರಿತಗಳಿಂದ ಹುಲಿಯು ನೆಲಕ್ಕೆ ಉರುಳಿತು. ಹುಲಿ ಯ ಕಾಟತಪ್ಪುವವರೆಗೆ ರಾಮರಾಜನಿಗೆ ಆ ಸುಂದರಿಯ ಯೋಗಕ್ಷೇಮಕ್ಕೆ ಅನುಕೂಲವಾಗಲಿಲ್ಲ. ನೆಲಕ್ಕುರುಳಿ ಆಕ್ರೋಶಮಾಡುವ ಹುಲಿಯು ಇನ್ನು

ಮೇಲಕ್ಕೇಳಲಾರದೆಂದು ಮನಗಂಡು, ರಾಮರಾಜನು ಸುಂದರಿಯ ಕಡೆಗೆ ಹೊರಳಿದನು. ಆಗ ಆಕೆಯು ಮೂರ್ಛಿತಳಾಗಿ ಭೂಮಿಯಲ್ಲಿ ಒರಗಿದ್ದಳು ಮೊದಲು ಹುಲಿಯನ್ನು ಪೂರಾ ಕೊಲ್ಲಬೇಕೋ, ಸುಂದರಿಯನ್ನು ಎಚ್ಚರಗೊಳಿಸಬೇಕೋ ಎಂಬ ವಿಚಾರವು ರಾಮರಾಜನ ಮನಸ್ಸಿನಲ್ಲಿ ಉತ್ಪನ್ನವಾಯಿತು. ಆದರೆ ವಿಚಾರಮಾಡುತ್ತ ಕುಳಿತುಕೊಳ್ಳಲಿಕ್ಕೆ ಆಗ ಸಮಯವಿದ್ದಿಲ್ಲ. ಆತನು ತೀರ ನಿಶ್ಶಾಣವಾಗಿದ್ದ ಹುಲಿಯ ಗೊಡವೆಯನ್ನು ಬಿಟ್ಟು, ತನ್ನ ಮನೋಹರಳಾದ ಯವನ ಸುಂದರಿಯನ್ನು ಜಾಗ್ರತಗೊಳಿಸುವ ಉಪಾಯವನ್ನು ನಡೆಸಿದನು.

ರಾಮರಾಜನು ಮೂರ್ಛಿತಳಾದ ಆ ತರುಣಿಯನ್ನು ದೂರ ಎತ್ತಿಕೊಂಡು ಹೋಗಿ, ತನ್ನ ಸೆಲ್ಲೆಯ ಸೆರಗನ್ನು ನದಿಯಲ್ಲಿ ಎದ್ದಿಕೊಂಡು ಬಂದು ಶೀತೋಪಚಾರಮಾಡಹತ್ತಿದನು. ಕಣ್ಣಿಗೆ ನೀರುಹಚ್ಚಿ ನೆತ್ತಿಗೆ ನೀರುತಟ್ಟಿ ಗಾಳಿಹಾಕಹತ್ತಿದ ಸ್ವಲ್ಪಹೊತ್ತಿನ ಮೇಲೆ ಆ ತರುಣಿಯು ಸ್ವಲ್ಪ ಚೇತರಿಸಿ ಕಣ್ಣು ತೆರೆದಳು; ಆದರೆ ಅಷ್ಟರಲ್ಲಿ ರಾಮರಾಜನ ಮನಸ್ಸಿಗೆ ಏನೋ ಹೊಳೆದು, ಆತನು ಅರ್ಧ ಎಚ್ಚತ್ತಿದ್ದ ಆ ಸುಂದರಿಯನ್ನು ತನ್ನ ಕುದುರೆ ಕಟ್ಟಿದ ಗಿಡದ ಬಳಿಗೆ ಎತ್ತಿಕೊಂಡು ಹೋಗಿ, ಆಕೆಯನ್ನು ಕುದುರೆಯ ಮೇಲೆ ಅಡ್ಡ ಮಲಗಿಸಿ, ತಾನ ಕುದುರೆಯನ್ನು ಹತ್ತಿ ವೇಗದಿಂದ ಸಾಗಿದನು ಇಷ್ಟಾದರೂ ಆ ತರುಣಿಯು ಪೂರ್ಣವಾಗಿ ಎಚ್ಚತ್ತಿರಲಿಲ್ಲ. ಈ ತರುಣನು ಯಾರು, ಈತನು ಏನು ಮಾಡುವನು ಎಂಬುದರ ಪ್ರಜ್ಞೆಯು ಆಕೆಗೆ ಇದ್ದಿಲ್ಲ. ಕುದುರೆಯನ್ನು ಒಂದೇ ಸವನೆ ಓಡಿಸುತ್ತ ಸಾಗಿದ ರಾಮರಾಜನು, ವಿಜಯನಗರದಿಂದ ಕೆಲವು ಹರದಾರಿಯ ಮೇಲಿದ್ದ ಕುಂಜವನವೆಂಬ ಮನೋಹರವಾದ ತನ್ನ ಉದ್ಯಾನಕ್ಕೆ ಬಂದೇನಿಂತುಕೊಂಡನು. ಆ ಉದ್ಯಾನದ ಮಧ್ಯದಲ್ಲಿ ಒಂದು ಸುಂದರವಾದ ಮಂದಿರವು ಒಪ್ಪುತ್ತಿತ್ತು. ರಾಮರಾಜನು ಆ ಮಂದಿರದಲ್ಲಿಯ ಒಂದು ಕೋಣೆಯಲ್ಲಿ ಮಂಡಿಸಿದ್ದ ಪಲ್ಲಂಗದಲ್ಲಿ ಆ ತರುಣಿಯನ್ನು ಮಲಗಿಸಿ, ಆಕೆಯನ್ನು ಸಂಪೂರ್ಣವಾಗಿ ಎಚ್ಚರಗೊಳಿಸುವ ಉಪಾಯಗಳನ್ನು ನಡೆಸಿದನು. ಕೆಲಹೊತ್ತಿನಮೇಲೆ ಆ ತರುಣಿಯು ಎಚ್ಚತ್ತು ಕಣ್ದೆರದು ನೋಡಲು, ತಾನು ಮಚ್ಛರದಾನಿಯನ್ನು ಹಾಕಿದ ಒಂದು ಪಲ್ಲಂಗದ ಮೇಲೆ ಮಲಗಿದ್ದು, ಬಳಿಯಲ್ಲಿ ಒಬ್ಬ ಸುಂದರನಾದ ತರುಣನು ಕುಳಿತಿರುವನೆಂಬದು ಆಕೆಗೆ ಗೊತ್ತಾಯಿತು. ಕೂಡಲೆ ಆಕೆಯು ಮೆಟ್ಟಿಬಿದ್ದು, ಚಟ್ಟನೆ ಎದ್ದು ಪಲ್ಲಂಗದಿಂದ ಇಳಿದು ಕೆಳಗೆ ನಿಂತುಕೊಂಡಳು. ಆಗ ರಾಮರಾಜನು ಅಚ್ಚ ಫಾರಸೀಭಾಷೆಯಿಂದ ಆ ತರುಣಿಯನ್ನು ಕುರಿತು — "ತಾವು ಏಳಬಾರದು, ಇನ್ನೂ ನಿಮ್ಮ ಪ್ರಕೃತಿಯು ನೆಟ್ಟಗಾಗಿಲ್ಲ, ಸ್ವಸ್ಥ

ಮಲಗಿಕೊಳ್ಳಬೇಕು. ಹುಲಿಯ ಭಯವಾಗಲಿ, ಬೇರೆ ಯಾತರ ಭಯವಾಗಲಿ ಇಲ್ಲಿ ಇರುವದಿಲ್ಲ," ಎಂದು ನುಡಿದ ಕೂಡಲೆ ಆ ತರುಣಿಗೆ ಹೊಳೆಯು ದಂಡೆಯ ನೆನಪು ಆಗಿ, ಅಲ್ಲಿಯ ಭಯಂಕರವಾದ ನೋಟವು ಆಕೆಯ ಕಣ್ಣಿಗೆ ಕಟ್ಟಿತು. ಬಿರುಗಾಳಿಗೆ ತತ್ತರಿಸುವ ಬಳ್ಳಿಯಂತೆ ಆಕೆಯು ಗದಗದ ನಡುಗಹತ್ತಿದಳು. ಸ್ವಲ್ಪಹೊತ್ತಿನಮೇಲೆ ಆಕೆಯು ಸಮಾಧಾನ ತಾಳಿ ರಾಮರಾಜನನ್ನು ಕುರಿತು,

ತರುಣಿ—ನನ್ನನ್ನು ಆ ಭಯಂಕರವಾದ ಹುಲಿಯ ಬಾಯೊಳಗಿಂದ ಬಿಡಿಸಿದವರು ತಾವೇ ಏನು?

ರಾಮರಾಜ—ಹೌದು; ಕ್ರೂರ ವ್ಯಾಘ್ರನ ದವಡೆಯೊಳಗಿಂದ ಚಿಗರೆಯನ್ನು ಬಿಡಿಸಿ, ಬೇಟೆಯಲ್ಲಿ ಎರಡು ಫಲಗಳನ್ನು ಸಂಪಾದಿಸಿದ ಮಹದ್ಭಾಗ್ಯಶಾಲಿಯು ನಾನೇ.

ತರುಣಿ—ಆದರೆ ನನ್ನವರು ಎಲ್ಲಿದ್ದಾರೆ?

ರಾಮರಾಜ—ನಾನೂ ನಿಮ್ಮವನೇ ಇರುತ್ತೇನೆ; ಹಾಗು ಮರಣಪರ್ಯಂತರವಾಗಿ ನಿಮ್ಮವನೆನಿಸಿಕೊಳ್ಳುವ ಮಹದ್ಭಾಗ್ಯವು ದೊರೆಯಬೇಕೆಂದು ಮನಃಪೂರ್ವಕವಾಗಿ ನಾನು ಇಚ್ಛಿಸುತ್ತೇನೆ.

ತರುಣಿ—ತಾವು ಯಾರು?

ರಾಮರಾಜ—ಇಂದಿನವರೆಗೆ ನಾನು ವಿಜಯನಗರದ ರಾಜ್ಯದೊಳಗಿನ ಒಬ್ಬ ದೊಡ್ಡ ಸರದಾರನ ಮಗನು ಮಾತ್ರ ಆಗಿದ್ದೆನು. ಇಂದಿನಿಂದ ತಮ್ಮ ದಾಸನೂ ಆಗಿರುವೆನು.

ತರುಣಿ—ಆದರೆ ನಮ್ಮವರು ಎಲ್ಲಿದ್ದಾರೆ.

ರಾಮರಾಜ—ಅವರು ಎಲ್ಲಿರುವರೆಂಬದನ್ನು ನೋಡಲಿಕ್ಕೆ ಆಗ ನನಗೆ ಕೂಡಲೇ ಇಲ್ಲ. ಕತ್ತಲಾಗುತ್ತದೆಂದು ತಮ್ಮನ್ನು ಕರಕೊಂಡು ಬಂದುಬಿಟ್ಟೆನು. ಇನ್ನು ನಿಮಗೆ ಪೂರಾ ನೆಟ್ಟಗಾದಮೇಲೆ ನಿಮ್ಮ ಅಪ್ಪಣೆಯಿಂದ ನಿಮ್ಮ ಮನೆಯವರನ್ನು ಹುಡುಕಿಸುವೆನು.

ತರುಣಿ—ನನ್ನನ್ನು ಸಂಗಡ ಕರಕೊಂಡು ಹೋಗಿಯೇ ನನ್ನ ಮನೆಯವರನ್ನು ಹುಡುಕಿ, ಅವರ ಬಳಿಗೆ ನನ್ನನ್ನು ಕಳಿಸಬೇಕು.

ರಾಮರಾಜ—ಆಮೇಲೆ ನನ್ನನ್ನು ಯಾರಿಗೆ ಒಪ್ಪಿಸಲಿ? ನನ್ನ ಗತಿಯೇನು? ನನ್ನಿಂದ ತಮ್ಮ ಸಂರಕ್ಷಣವಾದಂತೆ, ಇನ್ನು ತಾವು ನನ್ನನ್ನು ರಕ್ಷಿಸಲೇಬೇಕು.

ತರುಣಿ—ಇದೇನು ಮಾತು? ಅನಾಥಳಾದ ನಾನು ನಿಮ್ಮನ್ನು ಹ್ಯಾಗೆ ರಕ್ಷಿಸುವೆನು?

ರಾಮರಾಜ—ಈಗ ನೀವು ಅನಾಥರಾಗಿರುವಿರಾ! ಹೀಗೆ ನುಡಿಯಲಾಗದು. ನಿಮ್ಮ ಸಂರಕ್ಷಣಕ್ಕಾಗಿ ಈಗೊಂದುಸಾರೆ ನನ್ನ ಪ್ರಾಣವನ್ನು ಸಂಕಟಕ್ಕೆ ಗುರಿ ಮಾಡಿದ್ದೆನು. ಇನ್ನು ಮೇಲೆ ನನ್ನ ಜೀವಮಾನವಿರುವತನಕ ನಿಮ್ಮ ಸಂರಕ್ಷಣಕ್ಕಾಗಿ ಜೀವವನ್ನಾವದೂ ಕೊಟ್ಟೇನು; ನಿಮ್ಮಕೂದಲು ಕೊಂಕಗೊಡಲಿಕ್ಕಿಲ್ಲ. ಇನ್ನು ಮೇಲೆ ಇಲ್ಲಿಂದ ಹೋಗುವಮಾತು ಮಾತ್ರ ನೀವು ತೆಗೆಯಬೇಡಿರಿ.

ತರುಣಿ—ಏನು! ನನ್ನನ್ನು ನೀವು ಇಲ್ಲಿಯೇ ಇಟ್ಟುಕೊಳ್ಳುವಿರೊ?

ರಾಮರಾಜ—ನಾನು ಇಟ್ಟುಕೊಳ್ಳುವದಿಲ್ಲ. ನೀವೇ ಇದ್ದು, ನನ್ನ ಪ್ರಾಣಗಳನ್ನು ನಿಮ್ಮ ಬಳಿಯಲ್ಲಿ ಇಟ್ಟುಕೊಳ್ಳುವಿರಿವಿರಿ.

ಈ ಮಾತುಗಳಿಗೆ ಏನೆಂದು ಉತ್ತರಕೊಡಬೇಕೆಂಬದು ಆ ತರುಣಿಗ ಗೊತ್ತಾಗದ್ದರಿಂದ, ಸುಮ್ಮನೆ ನಿಂತುಕೊಂಡಳು ಸ್ವಲ್ಪಹೊತ್ತಿನಮೇಲೆ ತುಸ ಧೈರ್ಯ ತಾಳಿ—

ತರುಣಿ—ನನ್ನ ಅತ್ತಿ ನನ್ನ ಸೋದರಮಾವ ನನ್ನ ಮಾರ್ಜೀನೆ, ನನ್ನ ಅಣ್ಣ, ಇವರು ಏನಂದಾರು?

ರಾಮರಾಜ—ಹುಲಿಯು ತಿಂದಿತೆಂದು ಅಂದಾರು! ನಾಲ್ಕೂಕಡೆಯಲ್ಲಿ ಹುಡುಕಿ, ನಿರಾಶೆಪಟ್ಟು, ಈಗ ಮುಂದೆ ಹೋಗಬೇಕೆಂದು ಹೊರಟಿರುವ ಸ್ಥಳಕ್ಕೆ, ಅಥವಾ ಹಿಂದಕ್ಕೆ ತಿರುಗಿ ತಮ್ಮ ಊರಿಗೆ ಹೋದಾರು.

ತರುಣಿ—ಹಾಗಾದರೆ ನಾನು ಹುಲಿಯ ಬಾಯೊಳಗಿಂದ ಪಾರಾಗಿ ಏನು ಉಪಯೋಗವಾದಹಾಗಾಯಿತು.

ರಾಮರಾಜ—ನೀವು ಸಾರಾದದ್ದರ ಉಪಯೋಗವು ಅವರಿಗೆ ಇರಲಿಕ್ಕಿಲ್ಲ; ಆದರೆ ನನಗಂತೂ ಇರುತ್ತದಷ್ಟೆ? ನನಗೆ ಒಬ್ಬ ಸುಂದರದೇವತೆಯು ಲಭಿಸಿದ್ದೇನು ಸಾಮಾನ್ಯಭಾಗ್ಯವೇನು? ಈವರೆಗೆ ಮುಸಲ್ಮಾನರು ಅಪ್ಸರೆಯರಂಥ ನಮ್ಮ ಎಷ್ಟೋ ಹಿಂದೂ ತರುಣಿಯರನ್ನು ಅಪಹರಿಸಿಕೊಂಡು ಹೋದರು. ಇಂದು ನಾನು ಅವರ ಒಬ್ಬ ಅಪ್ಸರೆಯನ್ನು ಸಂಪಾದಿಸಿರುತ್ತೇನೆ. ಆ ಅಪ್ಸರೆಯ ಪ್ರಾಣರಕ್ಷಣದ ಕಾರ್ಯದಲ್ಲಿ ನನ್ನ ಪ್ರಾಣವನ್ನು ಒಡ್ಡಿ ಪಾರಾಗಿರಲು, ಆದರ ಫಲವನ್ನು ಅನುಭವಿಸುವದಕ್ಕೂ ನನಗೆ ಅಪ್ಪದವಿರಬಾರದೇನು? ಮಾರ್ಜೀನೆಯು ಯಾರು?

ತರುಣಿ—ಅದೇಕೆ? ಮಾರ್ಜೀನೆಯನ್ನೇ ಕೇಳುವದೇಕೆ? ಮಾರ್ಜೀನೆಯಂದರೆ ನನ್ನ ಎರಡನೆಯ ತಾಯಿಯೇ ಸರಿ. ತಾಯಿಗಿಂತ ಹೆಚ್ಚಾಗಿ ಆಕೆಯು ನನ್ನನ್ನು ಪ್ರೀತಿಯಿಂದ ರಕ್ಷಿಸಿರುತ್ತಾಳೆ. ಅಂಥವಳು ಇಂದು ನನ್ನನ್ನು ಆಗಲಿದಳು. ಪರ

ವರದಿಗಾರ, ಎಂಥ ಪ್ರಸಂಗವನ್ನು ನನ್ನ ಮೇಲೆ ತಂದೆಯಲ್ಲ! ನಾವು ಯಾವ ಕೆಲಸಕ್ಕೆ ಹೋಗುತ್ತಿದ್ದೆವು, ಇದೇನು ಗತಿ.....

ಈ ಮೇರೆಗೆ ನುಡಿದು ಆ ತರುಣಿಯು ಒಂದೇಸವನೆ ಕಣ್ಣೀರು ಸುರಿಸಹತ್ತಿದಳು; ರಾಮರಾಜನು ಆಕೆಯನ್ನು ಸಮಾಧಾನಗೊಳಿಸಹತ್ತಿದನು. ಆತನು ತರುಣಿಗೆ—ಇನ್ನು ನೀವು ಹೀಗೆ ಅಳುತ್ತ ಕುಳಿತುಕೊಂಡರೆ ಆಗುವದೇನು? ನಾನು ನಿಮ್ಮವರನ್ನು ಹುಡುಕಿಸಿ ಕರಕೊಂಡು ಬರುವೆನು. ನಿಮ್ಮ ಮಾರ್ಜೀನೆಯೋ ಯಾರು, ಆಕೆಯನ್ನಂತು ಎಲ್ಲಿದ್ದರೂ ಹುಡುಕಿಸುವೆನು. ಈಗ ನೀವು ಮೋರೆತೊಳಕೊಂಡು ಊಟಮಾಡಿ ಸ್ವಸ್ಥ ಮಲಗಿಕೊಳ್ಳಬೇಕು. ನಾಳೆ ಬೆಳಗಾದಬಳಿಕ ನಿಮ್ಮ ಮಾರ್ಜೀನೆಯ ಶೋಧದ ಕೆಲಸವನ್ನು ಮೊದಲು ಮಾಡುವೆನು; ಆದರೆ ತಾವು ನನ್ನ ಮನಸ್ಸಿನ ಒಲವನ್ನನುಸರಿಸಿ ನಡೆಯಲು ನಿರ್ಧರಿಸಿ ನನ್ನ ಮನಸ್ಸನ್ನು ಸಮಾಧಾನಗೊಳಿಸಲೇಬೇಕು.

ಹೀಗೆ ನುಡಿದು ರಾಮರಾಜನು ಆ ತರುಣಿಯ ಕಡೆಗೆ ಆತುರದಿಂದ ನೋಡುತ್ತಿರಲು, ಆ ತರುಣಿಯು ನೆಲವನ್ನು ನೋಡುತ್ತ ಏನೋ ವಿಚಾರ ಮಾಡುತ್ತಿದ್ದಳು. ಆಕೆಯು ಸರ್ವಸಾಧಾರಣ ಮನುಷ್ಯಳಿದ್ದಿಲ್ಲ, ದೊಡ್ಡ ಸರದಾರನ ಮಗಳಿದ್ದಳು. ಒತ್ತಟ್ಟಿಗೆ ಕೃತಜ್ಞತೆ, ಮತ್ತೊತ್ತಟ್ಟಿಗೆ ಪ್ರೇಮ, ಇನ್ನೊತ್ತಟ್ಟಿಗೆ ಕುಲೀನತೆ ಈ ಮೂರರ ಜಗ್ಗಾಟದಲ್ಲಿ ಆಕೆಯು ಗಾಸಿಯಾಗಹತ್ತಿದಳು. ಜೀವದ ಹಂಗು ಇಲ್ಲದೆ ತನ್ನನ್ನು ಹುಲಿಯ ಬಾಯೊಳಗಿಂದ ಬಿಡಿಸಿದ ಕೃತಜ್ಞತೆಗೆ, ರಾಮರಾಜನ ಸೌಜನ್ಯ,—ಸುಂದರರೂಪ—ಶೌರ್ಯ—ಸಾಹಸಗಳು ಜೋಡಾಗಲು, ತಾರುಣ್ಯದ ಸ್ವಾಭಾವಿಕ ಧರ್ಮಕ್ಕನುಸರಿಸಿ ಆ ಸುಂದರಿಯ ಹೃದಯದಲ್ಲಿ ಪ್ರೇಮೋದಯವಾಯಿತು. ಆ ಪ್ರೇಮಕ್ಕೆ ರಾಮರಾಜನ ಸವಿಮಾತುಗಳಿಂದ ಕಳೆಯೇರಿ ಆ ತರುಣಿಯು ರಾಮರಾಜನ ಕೈಸೇರಬೇಕೆನ್ನುವದರೊಳಗೆ ಕುಲೀನತೆಯು ಆಕೆಯನ್ನು ಹಿಂದಕ್ಕೆ ಜಗ್ಗುತ್ತಿತ್ತು! ಮುಸಲ್ಮಾನರು ಹಿಂದೂ ಜನರನ್ನು ಬಹಳವಾಗಿ ನಿಂದಿಸಿ, ಅವರನ್ನು ಕಾಫರರೆಂದು ಕರೆಯುತ್ತಿರಲು, ಇಂಥ ಹಿಂದೂ ತರುಣನಿಗೆ ಕುಲೀನಳಾದ ತಾನು ತನ್ನ ದೇಹವನ್ನು ಅರ್ಪಿಸಿ ಅಪವಿತ್ರವಾಗಲಿಕ್ಕೆ ಆ ತರುಣಿಯು ಹಿಂಜರಿದರೆ ಆಶ್ಚರ್ಯವಲ್ಲ. ಆಕೆಯು ಈ ಮೂರರ ಎಳತದಿಂದ ಗಾಸಿಯಾಗಿ ರಾಮರಾಜನನ್ನು ಕುರಿತು—ತರುಣವೀರರೇ, ಹಿಂದುಗಳೆನಿಸುವ ನೀವು ನನ್ನ ಸೌಂದರ್ಯಕ್ಕೆ ಮೋಹಿಸಿ, ನಿಮ್ಮ ಧರ್ಮವಿರುದ್ಧವಾಗಿ ನನ್ನ ಸಮಾಗಮವನ್ನು ಬಯಿಸುತ್ತಿರುವಿರಿ! ಇದು ಸರಿಯಲ್ಲ. ನಿಮ್ಮ ಈ ಆತುರದ ಪ್ರೇಮವು ಕಡೆತನಕ ನನ್ನ ಮೇಲೆ ನಿಲ್ಲುವದೆಂತಲೂ ಹೇಳಲಾಗುವದಿಲ್ಲ. ನನ್ನ ಮುಸಲ್ಮಾನ ಧರ್ಮ

ಕ್ಕೆ ಕಲಂಕ ಉಂಟಾಗುವ ಕೆಲಸವನ್ನು ನೀವು ಮಾಡಿ, ಕಡೆಗೆ ಪ್ರಸಂಗವಶಾತ್ ಪ್ರೇಮಭಂಗವನ್ನು ಮಾಡಿದರೆ, ನೀವಾಗಿ ವಿನಾಶಾಂಕುರವನ್ನು ಉತ್ಪನ್ನ ಮಾಡಿದಹಾಗಾದೀತು. ಈ ಮಾತನ್ನು ನಾನು ಕಲಿತು ಆಡುತ್ತೇನೆಂದು ತಿಳಿಯಬೇಡಿರಿ. ಅಲ್ಲಾನೇ ನನ್ನ ಮುಖದಿಂದ ಈ ಮಾತನ್ನು ಆಡಿಸುವೆನೆಂದು ತಿಳಿಯಿರಿ, ಎಂದು ನುಡಿಯುತ್ತಿರಲು, ರಾಮರಾಜನು ಆತುರದಿಂದ—ಆಗಲಿ, ನಾನು ಹಾಗೆ ಕೃತಜ್ಞನಾದಪಕ್ಷದಲ್ಲಿ ನೀವಂದಂತೆಯೇ ನನ್ನ ನಾಶವಾಗಲಿ. ಆ ನಾಶವನ್ನು ನಾನು ನನ್ನ ಕೃತಘ್ನತೆಯ ಯೋಗ್ಯ ಪ್ರಾಯಶ್ಚಿತ್ತವೆಂದು ತಿಳಿಯುವೆನು, ಅದರ ಚಿಂತೆ ಬೇಡ. ನಿಮ್ಮ ವಿಯೋಗದಿಂದ ನಾನು ಈಗಲೇ ನಾಶವನ್ನು ಹೊಂದುತ್ತಿರಲು, ಪ್ರಸಂಗವಸಾತ್" ವಿನಾಶಾಂಕುರವನ್ನು ಹುಟ್ಟಿಸಿಕೊಂಡರೆ ಹಾನಿಯೇನು ? ಮೊದಲು ಊಟವಾಗಲಿ, ನಿಮ್ಮ ಮಾರ್ಜಿನೆಯು ಬರುವತನಕ ಯಾವ ಮಾತೂ ಬೇಡ, ಎಂದು ಹೇಳಿ, ರಾಮರಾಜನು ಹೊರಟುಹೋದನು. ಆತನ ಅಪ್ಪಣೆಯಿಂದ ಒಬ್ಬ ವೃದ್ಧ ದಾಸಿಯು ಆ ತರುಣಿಯನ್ನು ಪರಾಮರ್ಶಿಸ ಹತ್ತಿದಳು.

೨ನೆಯ ಪ್ರಕರಣ—ಎಲ! ಇದೇನು?

ಈ ನೇರೆಗೆ ರಾಮರಾಜನು ತರುಣಿಗೆ ಹೇಳಿ ಎರಡನೆಯ ಕಡೆಗೆ ಹೊರಟು ಹೋಗಲು, ಇತ್ತ ಆ ತರುಣಿಯ ಮನೆಯವರು, ಬಹಳ ಹೊತ್ತಾದರೂ ತಮ್ಮ ಪ್ರಿಯ ಮೆಹರ್ಜಾನಳು ಬಾರದಿರುವದನ್ನು ನೋಡಿ ಚಡಪಡಿಸಿ, ಅವರಲ್ಲಿ ಒಬ್ಬಿಬ್ಬರು ಲಗಬಗೆಯಿಂದ ಹೊಳೆಯ ದಂಡೆಗೆ ಬಂದರು. ಅಲ್ಲಿ ಒಂದು ಭಯಂಕರವಾದ ಹುಲಿಯು ಬಿದ್ದಿತ್ತು. ಅದನ್ನು ನೋಡಿ ಅವರು ಬೆದರುತ್ತ ಬೆದರುತ್ತ ಮುಂದಕ್ಕೆ ಹೋಗಿ ನೋಡಲು, ಅಲ್ಲಿ ಅವರ ಮೆಹರ್ಜಾನಳ ಬಿಂದಿಗೆಯು ಮಾತ್ರ ಉರುಳಿತ್ತು. ಹುಲಿಯು ಸತ್ತಿರುವದನ್ನು ನೋಡಿ ಅವರು ನಿರ್ಭಯದಿಂದ ಮತ್ತೆ ಮುಂದಕ್ಕೆ ಹೋಗಿ ನಾಲ್ಕು ಕಡೆಗೆ ನೋಡಿದರು. ಆಗ ದೂರದಲ್ಲಿ ಒಂದು ತುಬಾಕಿಯೂ, ಒಂದು ಸತ್ತುಬಿದ್ದ ಕುದುರೆಯೂ, ಗಿಡದಮೇಲೆ ಮಂಚಿಕೆಯೂ ಅವರ ಕಣ್ಣಿಗೆ ಬಿದ್ದವು. ಇವನ್ನೆಲ್ಲ ನೋಡಿ ಅವರು ತಮ್ಮ ಮೆಹರ್ಜಾನಳಗತಿಯು ಹೀಗೆಯೇ ಆಯಿತೆಂದು ನಿರ್ಧರಿಸಲಾರದಾದರು. ಹುಲಿಯ ಭಯದಿಂದ ಮೆಹರ್ಜಾನಳು ಹೊಳೆಯಲ್ಲಿ ಬಿದ್ದಿರಬಹುದೆಂದು ತರ್ಕಿಸಿ, ಒಮ್ಮೆ ಅವರು ಹೊಳೆಯಲ್ಲಿ ದುಮುಕಿ ಶೋಧಮಾಡಿದರು. ಮತ್ತೊಮ್ಮೆ ಅವರ

ಮನಸ್ಸಿಗೆ, ಮೆಹರ್ಜಾನಳು ಎಲ್ಲಿಯಾದರೂ ಓಡಿಹೋಗಿರಬಹುದೆಂಬ ವಿಚಾರವು ಹೊಳೆಯಿತು. ಆದರೆ ಮೆಹರ್ಜಾನಳನ್ನು ಹುಲಿಯು ಹಿಡಿದಂತೆ ಮಾತ್ರ ಅವರಿಗೆ ತೋರಲಿಲ್ಲ. ಯಾಕಂದರೆ ಮೆಹರ್ಜಾನಳ ಶರೀರದ ಇಲ್ಲವೆ ಶರೀರದ ಮೇಲಿನ ವಸ್ತ್ರಾಭರಣಗಳ ಗುರುತಿನ ಗಂಧವು ಸಹ ಅಲ್ಲಿ ಅವರಿಗೆ ತೋರುತ್ತಿದ್ದಿಲ್ಲ. ಹೊಳೆಯಲ್ಲಿ ಗೊತ್ತು ಹತ್ತದ್ದರಿಂದ, ಆಕೆಯು ಅರಣ್ಯದಲ್ಲಿ ಓಡಿಹೋಗಿ ಎಲ್ಲಯಾದರೂ ಅಡಗಿಕೊಂಡು ಕುಳಿತಿರಬಹುದೆಂದು ತರ್ಕಿಸಿ ಅವರು ಮೆಹರ್ಜಾನಳನ್ನು ಹೆಸರುಗೊಂದು ಕೂಗಿಕೂಗಿ ಹುಡುಕಹತ್ತಿದರು. ಅಷ್ಟರಲ್ಲಿ ಕತ್ತಲಾಯಿತು; ಮೆಹರ್ಜಾನಳ ಗೊತ್ತು ಹತ್ತಲಿಲ್ಲ. ಇತ್ತ ಅವರು ಇಳಕೊಂಡಸ್ಥಳದಲ್ಲಿ ಹೆಂಗಸರು ಒಂದೇಸವನೆ ಅಕ್ರೋಶ ಮಾಡುತ್ತಲಿದ್ದರು. ಅವರನ್ನು ಬಿಟ್ಟು ಬಹಳ ಹೊತ್ತು ಹುಡುಕುವದು ಅವರಿಗೆ ಸರಿದೋರಲಿಲ್ಲ. ಆದ್ದರಿಂದ ಅವರು ತಾವು ಇಳಕೊಂಡ ಸ್ಥಳಕ್ಕೆ ತಿರುಗಿಬಂದರು. ಅವರ ಸಂಗಡ ಮೆಹರ್ಜಾನಳು ಬಾರದಿರುವದನ್ನು ನೋಡಿ, ಹೆಂಗಸರು ಮತ್ತಿಷ್ಟು ಅಕ್ರೋಶ ಮಾಡತೊಡಗಿದರು. ಆಗ ಗಂಡಸರು ಅವರಿಗೆ ಸಿಟ್ಟುಮಾಡಿ ಸಮಾಧಾನ ಗೊಳಿಸಿ ಸುಮ್ಮನಿರಿಸಿದರು. ಅವರೊಳಗೆ ಮೆಹರ್ಜಾನಳ ಶೋಧದ ವಿಷಯವಾಗಿ ಬಹಳ ಚರ್ಚೆಯು ನಡೆಯಿತು. ಕೆಲವರಿಗೆ ಮೆಹರ್ಜಾನಳ ಶೋಧವಾಗುವದು ಅಶಕ್ಯವಾಗಿ ತೋರಿದ್ದರಿಂದ, ಅವರು ಮುಂದಕ್ಕೆ ಸಾಗೋಣವೆಂದು ಹೇಳಿದರು. ಆದರೆ ಅವರಲ್ಲಿ ಒಬ್ಬ ಪ್ರೇಮಲ ಸ್ವಭಾವದ ಪೌಢಸ್ತ್ರೀಯು—ಹಾಗೆ ಹೋಗುವದು ಸರಿಯಲ್ಲ, ನಾವು ಸಮಿಾಪದಲ್ಲಿರುವ ಮುದಗಲ್ಲಿಗೆ ಹೋಗಿ ಅಲ್ಲಿ ಶೋಧಮಾಡೋಣ. ಹಿಂದಿನಿಂದ ಪಶ್ಚಾತ್ತಾಪಪಡುವದಕ್ಕಿಂತ, ಈಗೇ ಆದಷ್ಟು ಶ್ರಮಪಟ್ಟು ಹುಡುಕುವದು ಯೋಗ್ಯವು, ಎಂದು ಹೇಳಿದಳು. ಕಡೆಗೆ ಆಕೆಯ ಮಾತು ಎಲ್ಲರಿಗೂ ಸಮರ್ಪಕವಾಗಿ ತೋರಿ, ಅವರೆಲ್ಲರು ಮರುದಿನ ಬೆಳಗಾದ ಕೂಡಲೆ ಮುದಗಲ್ಲಿಗೆ ಹೋಗಿ, ಅಲ್ಲಿ ಮೆಹರ್ಜಾನಳ ಶೋಧವನ್ನು ನಡೆಸಿದರು.

ಇತ್ತ ರಾಮರಾಜನು ತನ್ನ ಆ ಸುಂದರ ತರುಣಿಯ, ಅಂದರೆ ಮೆಹರ್ಜಾನಳ ಮನೆಯವರ ಶೋಧಕ್ಕಾಗಿ ತನ್ನ ಸಂಗಡ ಒಬ್ಬ ಮನುಷ್ಯನನ್ನು ಕರಕೊಂಡು ಅವರು ಇಳಿದ ಸ್ಥಳಕ್ಕೆ ಹೊರಟನು. ರಾಮರಾಜನ ಸಂಗಡ ಬಂದ ಮನುಷ್ಯನ ಮೈಬಣ್ಣವು, ಎಣ್ಣೆಯಲ್ಲಿ ಎದ್ದಿದ ನೀರಲ ಹಣ್ಣಿನಷ್ಟು ಕಪ್ಪಾಗಿತ್ತೆಂದ್ದು ಹೇಳಬಹುದು; ಆದರೆ ಆತನ ಕಣ್ಣುಗಳು ಬಹು ಹೊಳಪುಳ್ಳವಾಗಿದ್ದು, ಕೃಷ್ಣಸರ್ಪದ ಕಣ್ಣುಗಳಂತೆ ಅವು ಭಯಂಕರವಾಗಿದ್ದವು. ಅವರು ಆ ಇಳಿದ

ಸ್ಥಳಕ್ಕೆ ಹೋಗಿ ಎಡಬಲದಲ್ಲಿ ವಿಚಾರಿಸಲು, ನಿನ್ನೆ ಇಲ್ಲಿ ಇಳಕೊಂಡವರು ಇಂದು ಮುಂಜಾನೆ ಮುದಗಲ್ಲಿಗೆ ಹೋದರೆಂಬ ಸುದ್ದಿಯು ಹತ್ತಿತು. ಕೂಡಲೆ ಅವರು ಮುದಗಲ್ಲಿಗೆ ಬಂದು ಶೋಧಮಾಡಹತ್ತಿದರು. ರಾಮರಾಜನು ಶೋಧ ಮಾಡುವ ಕ್ರಮವನ್ನು ಮೊದಲೇ ಗೊತ್ತುಮಾಡಿದ್ದನು. ಆ ಜನರನ್ನು ಮೊದಲು ದೂರದಿಂದ ನೋಡಿ ಅವರೊಳಗಿನ ಮಾರ್ಜೀನೆಯೆಂಬ ಸ್ತ್ರೀಯನ್ನು ಮಾತ್ರ ಬೇರೆ ಕರೆದು ಭೆಟ್ಟಿಯಾಗಬೇಕೆಂದು ಆತನು ತನ್ನ ಸೇವಕನಾದ ಆ ಧನಮಲ್ಲನಿಗೆ ಹೇಳಿದ್ದನು. ಧನಮಲ್ಲನು ಏನು ಹಂಚಿಕೆ ಮಾಡಿದನೋ ಏನೋ. ಆತನು ಮಾರ್ಜೀನೆಯನ್ನು ರಾಮರಾಜನ ಎದುರಿಗೆ ತಂದು ನಿಲ್ಲಿಸಿದನು. ಆಗ ರಾಮರಾಜನು ಮಾರ್ಜೀನೆಯನ್ನು ಕುರಿತು—ಮಾರ್ಜೀನೇ, ನಿನ್ನ ಮಗಳು ನೆಟ್ಟಗಿದ್ದಾಳೆ. ಆಕೆಯ ಬಳಿಗೆ ನೀನು ಹೋಗಬೇಕೆಂದು ಇಚ್ಛಿಸುತ್ತಿದ್ದರೆ, ಇಗೋ ಈ ಮನುಷ್ಯನ ಸಂಗಡ ನಡೆ. ನಿನ್ನ ಮಗಳ ಹೇಳಿಕೆಯಿಂದಲೇ ನಾವು ನಿನ್ನನ್ನು ಹುಡುಕುತ್ತಿದ್ದೆವು. ಎರಡನೆಯವರಿಗಾರಿಗಾದರೂ ಈ ಸುದ್ದಿಯನ್ನು ನೀನು ಹೇಳಿದರೆ, ನಿನ್ನ ಮಗಳ ಉಗುರು ಸಹ ನಿನ್ನ ಕಣ್ಣಿಗೆ ಬೀಳಲಿಕ್ಕಿಲ್ಲ, ಎಂದು ಹೇಳಲು, ಆ ವೃದ್ಧ ಮಾರ್ಜೀನೆಯು ರಾಮರಾಜನ ತೇಜಸ್ಸನ್ನು ನೋಡಿ, ಆತನಮಾತುಗಳನ್ನು ಕೇಳಿ ಮೊದಲು ಬೆದರಿದಳು. ಆ ಮೇಲೆ ಆಕೆಯು ಸ್ವಲ್ಪ ಧೈರ್ಯ ತಾಳಿ, ಮನಸ್ಸಿನಲ್ಲಿ—ಈ ಗೌಡಬಂಗಾಲೀ ವಿದ್ಯೆಯು ಏನಿರುತ್ತದೆಂಬದನ್ನು ಒಮ್ಮೆ ನೋಡಿಬಿಡೋಣ. ನನ್ನಂಥ ವೃದ್ಧ ಸ್ತ್ರೀಗೆ ಯಾರಿಂದ ಏನಾಗಬೇಕಾಗಿದೆ? ಒಮ್ಮೆ ಮೆಹರ್ಜಾನಳು ನನ್ನ ಕಣ್ಣಿಗಾದರೂ ಬೀಳಲಿ, ಆ ಮೇಲೆ ನೋಡೋಣವಂತೆ, ಎಂದು ಯೋಚಿಸಿ,—"ನಾನು ಈ ಕರಿಯ ಮನುಷ್ಯನ ಸಂಗಡ ಹೋಗುವೆನು" ಎಂದು ರಾಮರಾಜನಿಗೆ ಹೇಳಿದಳು. ಆಗ ರಾಮರಾಜನು —ಈ ಕರಿಯ ಮನುಷ್ಯನು ಮೂಕನಿರುತ್ತಾನೆ. ಈತನಿಗೆ ಮಾತಾಡಲಿಕ್ಕೆ ಬರುವದಿಲ್ಲ; ಈತನ ಹೆಸರು ಧನಮಲ್ಲ, ಎಂದು ಹೇಳಿ, ಕೂಡಲೆ ಎರಡು ಕುದುರೆಗಳನ್ನು ತಂದು ನಿಲ್ಲಿಸಲು, ಒಂದರ ಮೇಲೆ ಮಾರ್ಜೀನೆಯೂ, ಮತ್ತೊಂದರ ಮೇಲೆ ಧನಮಲ್ಲನೂ ಕುಳಿತುಕೊಂಡು ನಡೆದರು. ಧನಮಲ್ಲನು ಮೂರು ಸಂಜೆಗೆ ಮಾರ್ಜೀನೆಯನ್ನು ಕುಂಜವನಕ್ಕೆ ಮುಟ್ಟಿಸಿದನು. ಅಲ್ಲಿ ರಾಮರಾಜನು ಅವರಿಗೆ ಭೆಟ್ಟಿಯಾಗಲು, ಅವರು ಮೂವರು ಕೂಡಿ ಮೆಹರ್ಜಾನಳಿರುವ ಮಂದಿರವನ್ನು ಹೊಕ್ಕರು.

ಆಗ ಮೆಹರ್ಜಾನಳು ಬಗೆಬಗೆಯಾಗಿ ಆಲೋಚಿಸುತ್ತು ಕುಳಿತುಕೊಂಡಿದ್ದಳು. ಅಷ್ಟರಲ್ಲಿ, ರಾಮರಾಜನು ತಾನು ಆಡಿದಂತೆ ಮಾರ್ಜೀನೆಯ ಕರ

ಕೊಂಡು ಬಂದದ್ದನ್ನು ನೋಡಿ ಆ ಸುಂದರಿಯು ಸಂತೋಷಪಟ್ಟಳು. ರಾಮರಾಜನ ಸೌಜನ್ಯದ ವಿಷಯವಾಗಿ ಆಕೆಯಲ್ಲಿ ಆದರವು ಉತ್ಪನ್ನವಾಯಿತು. ಇದನ್ನು ಚಾಣಾಕ್ಷನಾದ ರಾಮರಾಜನು ಅರಿತು, ಆಕೆಯನ್ನು ಕರಿತು ಫಾರ್ಸೀ ಭಾಷೆಯಿಂದ—ನನ್ನ ಕೆಲಸವಾಯಿತು. ಅಪ್ಪಣೆಯಂತೆ ನಡಕೊಂಡಿದ್ದೇನೆ, ಎಂದು ಹೇಳಿದನು. ಆಗ ರಾಮರಾಜನ ಮೇಲೆ ಮನಸ್ಸು ಕೂತಿದ್ದ ಮೆಹರ್ಜಾನಳ ಇಚ್ಛೆಯಿಲ್ಲದಿದ್ದರೂ, ಆಕೆಯ ಕಟಾಕ್ಷವು ರಾಮರಾಜನ ಮೇಲೆ ದುಮುಕಿ ಆತನನ್ನು ಗಾಸಿಗೊಳಿಸಿತು. ಕೂಡಲೆ ಆಕೆಯ ಮುಗಳುನಗೆಯು ಪಳಕ್ಕನೆ ಮಿಂಚಿ, ಮೊದಲೇ ಗಾಸಿಯಾಗಿದ್ದ ರಾಮರಾಜನ ಹೃದಯವನ್ನು ಜುಮ್ಮೆಂದು ನಡುಗಿಸಿತು! ಹೀಗೆ ಕಂಪಿತ ಹೃದಯದ ರಾಮರಾಜನು ಏನೋ ಒಂದು ಕೆಲಸದ ನೆವದಿಂದ ಹೊರಗೆ ಹೋಗುವವನಂತೆ ಅಲ್ಲಿಂದ ಹೊರಟು ಹೋದನು. ಆಗ ವೃದ್ಧ ಮಾರ್ಜೀನೆಯು ಆ ತರುಣ—ತರುಣಿಯರ ಪ್ರೇಮಬಂಧನ ನಾಟಕದ ಈ ಪ್ರಥಮಾಂಕವನ್ನು ನೋಡಿ ಆಶ್ಚರ್ಯಪಟ್ಟಳು. ಒಂದೆಂದರೆ ಒಂದೇ ದಿವಸದಲ್ಲಿ ಆದ ಸಹವಾಸದಿಂದ ಆ ಇಬ್ಬರು ತರುಣರ ರಹಸ್ಯೈಕ್ಯದ ಆರಂಭವಾದದ್ದನ್ನು ನೋಡಿ ಆಕೆಗೆ ಸಮಾಧಾನವಾಗಲಿಲ್ಲ. ಪ್ರೇಮಬಂಧನದಲ್ಲಿ ಇಷ್ಟು ಆತರವು ಕೆಲಸವ್ದಲ್ಲವೆಂದು ಆಕೆಗೆ ತೋರಿದ್ದು ಸಹಜವು. ಕುಲೀನ ಮುಸಲ್ಮಾನ ಮನೆತನದ ಮೆಹರ್ಜಾನಳು, ತಿರಸ್ಕರಣೀಯನಾದ ಹಿಂದುವನ್ನು ಹೀಗೆ ಪ್ರೀತಿಸಹತ್ತಿದ ಕಾರಣವು ಆಕೆಗೆ ತಿಳಿಯದಾಯಿತು. ಆಕೆಯು ಮೆಹರ್ಜಾನಳನ್ನು ಕುರಿತು—ಬೇಟಾ, ಮೆಹರ್ಜಾನ, ಕಾಫರರೆನಿಸುವ ಹಿಂದೂ ಜನರು ಮುಸಲ್ಮಾನ ಕುಲೀನ ಸ್ತ್ರೀಯರ ಪ್ರೀತಿಗೆ ಪಾತ್ರರಾಗುವ ಕೌತುಕದ ಸಂಗತಿಯನ್ನು ನಾನು ಕೇಳಿರುವೆನು; ಆದರೆ ಇದು ನಿನಗೆ ನಿಜವಾಗಿ ತೋರುವದೋ? ನಮ್ಮೆಲ್ಲರನ್ನು ಅಗಲಿ ನೀನು ಇಲ್ಲಿಗೆ ಹೇಗೆ ಬಂದೆ? ನಿನ್ನ ಎಲ್ಲ ಪರಿವಾರವನ್ನು ಬಿಟ್ಟು ನನ್ನೊಬ್ಬಳನ್ನೇ ನೀನು ಕರೆಸಿದ ಕಾರಣವೇನು? ನನಗೆ ಆ ತರುಣ ಹಿಂದುವು ಭೆಟ್ಟಿಯಾದಾಗಿನಿಂದ ಇಲ್ಲಿಯವರೆಗೆ ನಡೆದ ವಿಲಕ್ಷಣ ಸಂಗತಿಗಳ ಮೇಲಿಂದ ನನ್ನ ಮನಸ್ಸಿನಲ್ಲಿ ಇಲ್ಲದ ಕಲ್ಪನೆಗಳು ಬರಹತ್ತಿವೆ; ಆದರೆ ಬೇಟಾ ಮೆಹರ್ಜಾನ, ನೀನು ನನಗೆ ಹೊಟ್ಟೆಯ ಮಗಳಿಗಿಂತಲೂ ಪ್ರೀಯಳಾಗಿರುತ್ತೀ. ನಡೆದ ಸಂಗತಿಯನ್ನು ಮಾಜದೆ ಹೇಳು, ಎಂದು ನುಡಿಯಲು, ಮೆಹರ್ಜಾನಳು ಮೊದಲಿನಿಂದ ಕಡೆತನಕ ನಡೆದ ಯಾವತ್ತು ಸಂಗತಿಗಳನ್ನು ಮಾರ್ಜೀನೆಯ ಮುಂದೆ ಹೇಳಿದಳು. ಅವನ್ನು ಕೇಳಿ ಮಾರ್ಜೀನೆಯು ರಾಮರಾಜನ ಸದ್ಗುಣ—ಸೌಜನ್ಯಗಳಿಗಾಗಿ ಕೆಲಮೆಟ್ಟಿಗೆ ಸಮಾಧಾನಪಟ್ಟರೂ, ಆ ತರುಣನು ಪಾಪಪುಣ್ಯದ ಭಯವಿಲ್ಲದೆ,

ಹಿಂದೂ ಜನರ ಶೀಲಕ್ಕೆ ವಿರುದ್ಧವಾಗಿ ಯವನ ತರುಣಿಯನ್ನು ಬಲಾತ್ಕಾರದಿಂದ ಅಪಹರಿಸಿದ್ದನ್ನು ಸ್ಮರಿಸಿ, ತರುಣನ ಮನಸ್ಸಿನ ಪವಿತ್ರತೆಯ ವಿಷಯವಾಗಿ ಆಕೆಯು ಶಂಕಿಸಿದಳು; ಆದರೆ ಹಾಗೆ ತಾನು ಶಂಕಿಸಿದ ಲಕ್ಷಣವನ್ನು ಮಾತ್ರ ಹೊರಗೆ ತೋರಗೊಡದೆ, ಆಕೆಯು ಮೆಹರ್ಜಾನಳಿಗೆ—ಬೇಟಾ ಮೆಹರ್ಜಾನ, ಸಮಾಧಾನ ತಾಳು. ನಾನು ರಾಮರಾಜನನ್ನು ಏಕಾಂತದಲ್ಲಿ ಕಂಡು, ಆ ಮೇಲೆ ನಿನಗೆ ಹೇಳುವದನ್ನು ಹೇಳುವೆನು. ಅಲ್ಲಿಯವರೆಗೆ ನಿನ್ನ ಹೃದಯದ ಗಾಂಭೀರ್ಯವನ್ನು ಕಳಕೊಳ್ಳಬೇಡ, ಎಂದು ಹೇಳಿದಳು!

ತರುಣನಾದ ರಾಮರಾಜನು ಮೆಹರ್ಜಾನಳ ಮನಸ್ಸನ್ನು ಒಲಿಸಿಕೊಳ್ಳುವದಕ್ಕಾಗಿ ಅತ್ಯಂತ ಆತುರನಾಗಿದ್ದನು. ಮಾರ್ಜೀನೆಯನ್ನು ಒಡಂಬಡಿಸಿದರೆ ತನ್ನ ಕಾರ್ಯವು ಅನಾಯಾಸವಾಗಿ ಆಗುವದೆಂದು ತಿಳಿದು, ಆತನು ಏಕಾಂತದಲ್ಲಿ ಆಕೆಯನ್ನು ಕರೆಸಿಕೊಂಡನು. ಹೀಗೆ ಅವನು ತನ್ನನ್ನು ಕರೆಸಿಕೊಳ್ಳಬಹುದೆಂದು ಮಾರ್ಜೀನೆಯು ಮೊದಲೇ ತರ್ಕಿಸಿದ್ದಳು. ರಾಮರಾಜನು ತಟ್ಟನೆ ಮಾರ್ಜೀನೆಯನ್ನು ಕುರಿತು—ಮಾರ್ಜೀನೆ, ಮೆಹರ್ಜಾನಳು ನಡೆದ ಸಂಗತಿಯನ್ನೆಲ್ಲ ನಿನ್ನ ಮುಂದೆ ಹೇಳಿರಬಹುದು. ಆಕೆಗೆ ನನ್ನ ಹೃದಯವನ್ನು ಒಪ್ಪಿಸಿರುವೆನು. ಆಕೆಯ ಹೊರತು ನನ್ನ ಪ್ರಾಣವು ನಿಲ್ಲುವಹಾಗಿಲ್ಲ. ಆಕೆಯ ಸಲುವಾಗಿ ನನ್ನ ಪ್ರಾಣವನ್ನು ಗಂಡಾಂತರಕ್ಕೆ ಗುರಿಮಾಡಿ ಪಾರಾಗಿರುವೆನು; ಆದ್ದರಿಂದ ಮೆಹರ್ಜಾನಳು ನನ್ನ ಪ್ರತಾಪದ ಫಲವಾಗಿರುವಳು. ಮಾರ್ಜೀನೇ, ನೀನೇ ಹೇಳು; ಮುಸಲ್ಮಾನರು ಬಹುಜನ ಹಿಂದೂಕುಲೀನ ತರುಣಿಯರನ್ನು ಅಪಹರಿಸಿ ಸರ್ವಸಾಧಾರಣ ಸ್ತ್ರೀಯರಂತೆ ಅವರನ್ನು ನಡೆಸಿಕೊಳ್ಳುತ್ತಿರಲು, ನಾನು ಮೆಹರ್ಜಾನಳನ್ನು ಪ್ರಾಣೇಶ್ವರಿಯೆಂದು ಸ್ವೀಕರಿಸಿ, ಜನ್ಮವಿರುವತನಕ ಆಕೆಯನ್ನು ಪ್ರಾಣೇಶ್ವರಿಯೆಂತಲೇ ಭಾವಿಸಿ ನಡೆದುಕೊಂಡರೆ ತಪ್ಪೇನು? ಯಾವ ಮುಸಲ್ಮಾನಸರದಾರನು ಹಿಂದೂ ತರುಣಿಯನ್ನು ಅಪಹರಿಸುವವಿಷಯದಲ್ಲಿ ಇಷ್ಟು ಸೌಜನ್ಯವನ್ನು ತೋರಿಸಿರಬಹುದು? ಬಲಾತ್ಕಾರದಿಂದ ನಿಜವಾದ ಪ್ರೇಮೋದಯವಾಗದು; ಆದ್ದರಿಂದ ಸ್ವಸಂತೋಷದಿಂದಲೇ ಮೆಹರ್ಜಾನಳು ನನ್ನ ಮನೋದಯವನ್ನು ಪೂರ್ಣಮಾಡುವಂತೆ ನೀನು ಯತ್ನಿಸತಕ್ಕದ್ದು, ಎಂದು ಬಡಬಡ ಮಾತಾಡಿ ಬಿಡಲು, ಮಾರ್ಜೀನೆಯು ಮುಗುಳುನಗೆ ನಗುತ್ತ-ಮಹಾರಾಜ, ನಿಮ್ಮ ಸೌಜನ್ಯವನ್ನೂ, ಸದ್ಗುಣಗಳನ್ನೂ ಮೆಹರ್ಜಾನಳು ನನ್ನ ಮುಂದೆ ವರ್ಣಿಸಿದ್ದಾಳೆ. ನೀವಂತು ಆಕೆಯನ್ನು ಪ್ರಾಣೇಶ್ವರಿಯ ಪದವಿ

ಗೇರಿಸಿ, ಆಕೆಗಿಂತ ಒಂದು ಹೆಜ್ಜೆಯನ್ನು ಮುಂದಕ್ಕೆ ಇಟ್ಟಿರುತ್ತೀರಿ. ನೀವಿಬ್ಬರು ತರುಣರಿರುವದರಿಂದ ಒಂದೆರಡು ದಿನದ ಸಹವಾಸದಲ್ಲಿ ಪರಸ್ಪರರ ವಿಷಯವಾಗಿ ನೀವು ವಹಿಸಿದ ಸದಭಿಪ್ರಾಯದ ಬಗ್ಗೆ ನನಗೆ ಸಂಶಯವು ಉತ್ಪನ್ನವಾಗಿರುತ್ತದೆ. ಕನ್ನಡವೀರರೇ, ನಿಜವಾದ ಪ್ರೇಮವು ಬಹು ಜನರ ಹೃದಯದಲ್ಲಿ ಅವರ ಜನ್ಮದೊಳಗೆ ಉದಯವಾಗುತ್ತಿರುವದಿಲ್ಲ. ಅಂಥ ಪ್ರೇಮವು ಸುದೈವದಿಂದ ನಿಮ್ಮಿಬ್ಬರ ಹೃದಯದಲ್ಲಿದ್ದದ್ದಾದರೆ, ಅದನ್ನು ಅಯೋಗ್ಯಸ್ಥಾನದಲ್ಲಿಟ್ಟು ನೀವಿಬ್ಬರೂ ಹಿಂದಿನಿಂದ ಪಶ್ಚಾತ್ತಾಪಪಡಬೇಡಿರೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಮಹಾರಾಜ, ಮೆಹರ್ಜಾನಳು ಅಬಲೆಯು, ಮೇಲೆ ಅಪ್ರಬುದ್ಧಳು; ವ್ಯವಹಾರ ಜ್ಞಾನವಂತು ಆಕೆಗೆ ಇರುದದೇ ಇಲ್ಲ; ಆಕೆಯು ಬೆಳ್ಳಗಿದ್ದದ್ದನ್ನೆಲ್ಲ ಹಾಲೆಂದು ತಿಳಿಯುವಳು. ಆದರೆ ನಿಮ್ಮ ಮಾತು ಹಾಗಲ್ಲ. ನೀವು ಪುರುಷರು, ಮೇಲೆ ಪ್ರಬುದ್ಧರು; ಚಿಕ್ಕಂದಿನಲ್ಲಿ ಓದಿ ಬರೆದು, ಪ್ರಾಯದಲ್ಲಿ ರಾಜಕರಣಾದಿಕಾರಣಗಳಿಂದ ವ್ಯವಹಾರ ಜ್ಞಾನವನ್ನು ಪಡೆದವರು. ಅಂದಬಳಿಕ ಯೋಗ್ಯಾಯೋಗ್ಯಗಳ ವಿಚಾರವನ್ನು ನೀವು ಸಮಾಧಾನದಿಂದ ಮಾಡತಕ್ಕದ್ದು; ಹೀಗಿರಲು, ವಿವಾಹದ ವಿಷಯದಲ್ಲಿ ಅತ್ಯಂತ ಅವಶ್ಯವಾಗಿರುವ ಸಾವಧಾನವನ್ನು ತಾಳದೆ, ಮೆಹರ್ಜಾನಳಿಗಿಂತಲೂ ನೀವು ಚಂಚಲರಾಗಿರುವಿರಲ್ಲ! ನೀವು ಹಿಂದುಗಳು; ಮೆಹರ್ಜಾನಳು. ಮುಸಲ್ಮಾನಳು ನಿಮ್ಮಿಬ್ಬರ ವಿವಾಹವಾಗಬೇಕಾದಲ್ಲಿ ನಿಮ್ಮ ಧರ್ಮದಂತೆ ನೀವು ಮೆಹರ್ಜಾನಳನ್ನು ಹಿಂದುವಾಗಿ ಮಾಡಿಕೊಳ್ಳಬೇಕಾಯಿತಲ್ಲವೆ? ಇದು ತೀರ ಅಶಕ್ಯವಾಗಿರುವದಲ್ಲ? ಅದೂ ಇರಲಿ, ಧರ್ಮಾಧರ್ಮದ ಮಾತು ಒತ್ತಟ್ಟಿಗಿಟ್ಟು ಸ್ವಭಾವಿಕ ಪ್ರೇಮದಿಂದ ಮೆಹರ್ಜಾನಳ ಕೈಹಿಡಿಯುತ್ತೇನೆಂದು ನೀವು ಅನ್ನುತ್ತಿದ್ದರೆ, ನಿಮ್ಮ ವಿಷಯವಾಗಿ ಮೆಹರ್ಜಾನಳಲ್ಲಿ ಸ್ವಾಭಾವಿಕವಾದ ಪ್ರೇಮವು ಎಲ್ಲಿರುತ್ತದೆ? ಸ್ವಾಭಾವಿಕ ಪ್ರೇಮವೆಂದರೆ, ರೂಪ, ಯೌವನ, ಐಶ್ವರ್ಯ, ಅಧಿಕಾರ, ಕೃತಜ್ಞತೆ ಮುಂತಾವ ಬಾಹ್ಯ ಕಾರಣಗಳೇನೂ ಇಲ್ಲದೆ ತಾನಾಗಿ ಉಂಟಾಗುವ ಪ್ರೇಮವು! ಇಂಥ ಹೊರಗಿನ ಕಾರಣಗಳಿಂದುಂಟಾದ ಸಹೇತುಕ ಪ್ರೇಮಕ್ಕಿಂತ ಸ್ವಾಭಾವಿಕ ಪ್ರೇಮದ, ಅಂದರೆ ನಿರ್ಹೇತುಕ ಪ್ರೇಮದ ಯೋಗ್ಯತೆಯು ಹೆಚ್ಚಿನದು; ಯಾಕಂದರೆ, ಸೌಂದರ್ಯಾದಿ ಕಾರಣಗಳಿಂದುಂಟಾದ ಪ್ರೇಮವು, ಕಾರಣಗಳು ನಷ್ಟವಾದ ಕೂಡಲೆ ನಷ್ಟವಾಗುತ್ತದೆ; ಆದರೆ ಸ್ವಾಭಾವಿಕ ಪ್ರೇಮವು ಹಾಗೆ ನಷ್ಟವಾಗುವದಿಲ್ಲ. ಈ ಸ್ವಾಭಾವಿಕ ಪ್ರೇಮಕ್ಕೆ ಉದಾಹರಣವನ್ನು ಕೊಡುವದು ನನಗಂತು ಶಕ್ಯವಲ್ಲ. ಸತ್ಪುರುಷರು ಮಾತ್ರ ಜಗತ್ತಿನಮೇಲೆ ಇಂಥ ಪ್ರೇಮ ಮಾಡುವರೆಂದು ನಾನು ತಿಳಿದಿರುವೆನು

ಮಹಾರಾಜ, ಈ ಜಗತ್ತಿನಲ್ಲಿರುವ ದಂಪತಿಗಳು ವಿವಾಹವೆಂಬ ಕಾರಣದಿಂದ ಪ್ರೇಮವನ್ನು ಸಂಪಾದಿಸಿ, ಆ ಕಾರಣವು, ಅಂದರೆ ವೈವಾಹಿಕಬಂಧನವು ಸ್ಥಿರವಾಗಿರುವವರೆಗೆ ಒತ್ತಾಯದಿಂದಾದರೂ ಪರಸ್ಪರ ಪ್ರೇಮವನ್ನು ಕಾಯ್ದು ಕೊಳ್ಳಬೇಕಾಗುತ್ತದೆ. ನಿಮ್ಮ ಹಿಂದುಗಳಲ್ಲಿ ಬ್ರಾಹ್ಮಣರೊಳಗೆ ವೈವಾಹಿಕಬಂಧನವು ಮರಣಪರ್ಯಂತರ ವೃಥವಾಗಿರುವದರಿಂದ ಬ್ರಾಹ್ಮಣ ದಂಪತಿಗಳು ಪರಸ್ಪರ ಪ್ರೇಮವನ್ನು ಮರಣಪರ್ಯಂತರ ಕಾಯ್ದುಕೊಳ್ಳುವದು ಹೆಚ್ಚು. ಆದರೆ ವೈವಾಹಿಕಬಂಧನವು ಸಿಥಿಲವಾಗಿರುವ ಜನರಲ್ಲಿ ಹೀಗೆ ದಂಪತಿಗಳ ಪ್ರೇಮವು ಸ್ಥಿರವಾದದ್ದು ಕಂಡುಬರುವದು ಕಡಿಮೆ. ಆದ್ದರಿಂದ ಪ್ರೇಮದ ಉತ್ಪತ್ತಿಗೆ ಸೌಂದರ್ಯಾದಿ ಬೇರೆ ಕಾರಣಗಳಿಗಿಂತ ವಿವಾಹವೆಂಬ ಕಾರಣವು ಅತ್ಯಂತ ಪವಿತ್ರವಾದಕಾರಣದಿಂದಲೇ ವಿವಾಹ ಪದ್ಧತಿಯು ಸುಧಾರಿಸಿದ ಜನಾಂಗಗಳಿಗೆಲ್ಲ ಮಾನ್ಯವಾಗಿರುತ್ತದೆ. ಅಂಥ ಪವಿತ್ರ ವೈವಾಹಿಕಬಂಧನಕ್ಕೆ ವಿಧರ್ಮಿಗಳಾದ ನೀವಿಬ್ಬರು ಅಯೋಗ್ಯರಾಗಿರುವದರಿಂದ, ನೀವಿಬ್ಬರೂ ಈ ಹಾದಿಯನ್ನು ಬಿಡಬೇಕೆಂದು ನಾನು ಸ್ಪಷ್ಟವಾಗಿ ಹೇಳುವೆನು. ಮೆಹರ್ಜಾನಳು ನಿಮ್ಮ ವಿಷಯದ ಕೃತಜ್ಞತೆ, ನಿಮ್ಮ ಸ್ವರೂಪ, ಸೌಜನ್ಯ-ಸದ್ಗುಣ, ತಾರುಣ್ಯ ಇವುಗಳ ಮೂಲಕ ನಿಮ್ಮನ್ನು ಪ್ರೀತಿಸುವಳಲ್ಲದೆ, ನಿಮ್ಮವಿಷಯದ ಸ್ವಾಭಾವಿಕಪ್ರೇಮವು ಆಕೆಯಲ್ಲಿರುವದಿಲ್ಲ. ಹಿಂದುವಾದ ನಿಮ್ಮನ್ನು ಅಂಗೀಕರಿಸಲಿಕ್ಕೆ ಆ ಯವನತರುಣಿಯು ಮನಃಪೂರ್ವಕವಾಗಿ ಅಸಮ್ಮತಿಸುವಳು. ಇನ್ನು ಆಕೆಯು ನಿಮ್ಮ ಕೈಯಲ್ಲಿ ಸಿಕ್ಕಿರುವದರಿಂದ ನೀವು ಬೇಕಾದದ್ದು ಮಾಡಬಹುದು. ಪ್ರಸಂಗವಶಾತ್ ನೀವು ಆಕೆಯ ವಿಷಯವಾಗಿ ಕೃತಘ್ನರಾದರೆ, ಅಥವಾ ಸೌಜನ್ಯ-ಸದ್ಗುಣಗಳನ್ನು ಕಳಕೊಂಡರೆ, ಬಹಳ ಹೇಳುವದೇನು, ನೀವು ಮುದುಕರಾದರೆ ಸಹ ಆಕೆಯ ಪ್ರೇಮವು ನಿಮ್ಮ ಮೇಲೆ ಉಳಿಯುವದೋ ಇಲ್ಲವೋ ನಾನು ಹೇಳಲಾರೆನು! ಯಾಕಂದರೆ ವೈವಾಹಿಕಬಂಧನವಿಲ್ಲದ ನಿಮ್ಮ ಪ್ರೇಮದ ಐಕ್ಯಕ್ಕೆ ವ್ಯಭಿಚಾರದ ದೋಷವು ತಟ್ಟುವದರಿಂದ, ನೀವಿಬ್ಬರು ಜಗತ್ತಿನಲ್ಲಿ ಅಪಕೀರ್ತಿಗೂ, ದುಃಖಕ್ಕೂ ಕಾರಣರಾದೀರಿ! ಮಹಾರಾಜ, ಸ್ವಲ್ಪ ವಿಚಾರಮಾಡಿರಿ ಮೆಹರ್ಜಾನಳು ನಿಮ್ಮ ಸೌಜನ್ಯ-ಸದ್ಗುಣಗಳ ಅನುಭವವನ್ನು ನಿಮ್ಮ ಕೃತಿಯಿಂದ ಸದ್ಯದಮಟ್ಟಿಗಾದರೂ ಪಡೆದಿರುವಳು; ಆದರೆ ಆಕೆಯ ತಾರುಣ್ಯ-ಸೌಂದರ್ಯಗಳ ಹೊರತು ಆಕೆಯ ಗುಣಗಳನ್ನು ನೀವೇನು ತಿಳಿದಿರುವಿರಿ? ಅಂದಬಳಿಕ ಕೇವಲ ತಾರುಣ್ಯ-ಸೌಂದರ್ಯಗಳಿಗಿ ಮರುಳಾದ ನೀವು ಮೆಹರ್ಜಾನಳಿಗಿಂತ ಸುಂದರಿಯೂ, ತರುಣಿಯೂ ಆದ ಮತ್ತೊಬ್ಬ ಸ್ತ್ರೀಯು ಲಭಿಸಿದಾಗ, ಮೆಹರ್ಜಾನಳನ್ನು

ನೀವು ನಿಶ್ಚಯವಾಗಿ ನಿರಾಕರಿಸುವಿರಿ! ಹೀಗಿರಲು, ನಿಮ್ಮ ವಿಚಾರವು ಯೋಗ್ಯ ವೆಂದು ನಾನು ಹ್ಯಾಗೆ ಒಪ್ಪಿಕೊಳ್ಳಲಿ! ಮೆಹರ್ಜಾನಳು ಹೊಟ್ಟಿಯ ಮಗಳಿ ಗಿಂತಲೂ ನನಗೆ ಹೆಚ್ಚಿನವಳಲ್ಲವೆ? ಮುಸಲ್ಮಾನರು ಹಿಂದೂ ತರುಣಿಯರನ್ನು ಅಪಹರಿಸಿದರೆಂದು ನೀವು ಹೇಳುತ್ತೀರಿ; ಆದರೆ ಧರ್ಮಿಷ್ಠರಾದ ಯಾವ ಮುಸ ಲ್ಮಾನರು ಅದನ್ನು ಅನೀತಿಯೆಂದು ಭಾವಿಸುವದಿಲ್ಲ? ಹೀಗಿರಲು, ಸಗಣಿಯನ್ನು ಸಗಣಿಯಿಂದ ತೊಳೆದು ಶುದ್ಧಮಾಡಲಿಕ್ಕೆ ಹೋಗುವವರ ಹಾಗೆ ನೀವು ಈಗ ಮಾಡಬಾರದು. ನೀವು ಕೊಟ್ಟ ಮುಸಲ್ಮಾನರ ನೀಚ ಕೃತಿಯ ಉಪಾಹರಣ ವನ್ನು ನಾನು ಕಿವಿಯಿಂದ ಕೂಡ ಕೇಳಲಾರೆನು! ಮಹಾರಾಜ, ಕೈಯಲ್ಲಿ ಕಡ್ಡಿ ಯನ್ನು ಕೊಟ್ಟು ಹೇಳುತ್ತೇನೆ! ಮೆಹರ್ಜಾನಳ ಹೃದಯವನ್ನು ಪರೀಕ್ಷಿಸದೆ ಆಕೆಯನ್ನು ನಿಮ್ಮ ಪ್ರಾಣೇಶ್ವರಿಯನ್ನಾಗಿ ಸರ್ವಥಾ ಮಾಡಿಕೊಳ್ಳಬೇಡಿರಿ. ಪಠಾಣರು ಪ್ರಸಂಗ ಬಂದರೆ ಕೃಷ್ಣಸರ್ಪಕ್ಕೆ ಸಮಾನರು; ಆದ್ದರಿಂದ ಮೆಹ ರ್ಜಾನಳನ್ನು ಕೃಷ್ಣಸರ್ಪವೆಂದು ಭಾವಿಸಿರಿ. ಪ್ರಸಂಗದಲ್ಲಿ ನೀವು ಕೃತಘ್ನರಾ ದರೆ ಆಕೆಯು ಎಂದಿಗೂ ಡಂಕು ಬಿಡಲಿಕ್ಕಿಲ್ಲ! ಮಹಾರಾಜರೆದುರಿನಲ್ಲಿ ಇಷ್ಟು ಮಾತಾಡುವ ಯೋಗ್ಯತೆಯು ನನ್ನದಲ್ಲ; ಯಾರೋ ನಿಮ್ಮ ಪೂಜ್ಯ ಗುರುಗಳೇ ನನ್ನ ಮುಖದಿಂದ ಈ ಮಾತುಗಳನ್ನು ಆಡಿಸುತ್ತಾರೆಂದು ತಿಳಿದು, ನನ್ನನ್ನು ಕ್ಷಮಿಸಿರಿ!

ಈಮೇರೆಗೆ ಮಾರ್ಜೀನೆಯು ತತ್ವಜ್ಞಾನಿಯಂತೆ ಪ್ರೇಮದ ಸ್ವರೂಪವನ್ನು ಅಸ್ಖಲಿತವಾಗಿ ಪ್ರತಿಪಾದಿಸಿದ್ದನ್ನು ನೋಡಿ ರಾಮರಾಜನು ಬೆರಗಾದನು. ಆತನು ಪಿಟ್ಟೆಂದು ಮಾತಾಡದೆ ಮಾರ್ಜೀನೆಯನ್ನು ಎವೆಯಿಕ್ಕದೆ ನೋಡಹತ್ತಿ ದನು. "ಯಾರೋ ನಿಮ್ಮ ಪೂಜ್ಯ ಗುರುಗಳೇ ನನ್ನ ಮುಖದಿಂದ ಈ ಮಾತು ಗಳನ್ನು ಆಡಿಸುತ್ತಾರೆಂದು ತಿಳಿಯಿರಿ" ಎಂದು ಆಕೆಯು ಆಡಿದ ಮಾತುಗ ಳನ್ನು ಕೇಳಿ, ಆತನಿಗೆ ತನ್ನ ಸದ್ಗುರುಗಳ ನೆನಪಾಯಿತು. ಔಪಚಾರಿಕವೇ ಆಗಲೊಲ್ಲದೇಕೆ, ಸತ್ಸಮಾಗಮ ಮಾಡಿದ ರಾಮರಾಜನಿಗೆ ಮಾರ್ಜೀನೆಯ ಉಪ ದೇಶವು ಸಮಪರ್ಕವಾಗಿ ತೋರಿತು. ಇನ್ನು ಮೇಲೆ ಮೆಹರ್ಜಾನಳ ಗೊಡವಿಗೆ ಹೋಗದೆ, ಮಾರ್ಜೀನೆಯೊಡನೆ ಆಕೆಯನ್ನು ಆಕೆಯ ಬಳಗದವರ ಬಳಿಗೆ ಕಳಿಸಿ ಬಿಡಬೇಕೆಂದು ಆತನು ಮಾಡಿದನು. ಮತ್ತು ಮಾರ್ಜೀನೆಯ ಮುಂದೆ ಹಾಗೆ ತಟ್ಟನೆ ನುಡಿಯಬೇಕೆನ್ನುತ್ತಿದ್ದನು. ಅಷ್ಟರಲ್ಲಿ ಮೆಹರ್ಜಾನಳ ಸುಂದರ ರೂಪವು ಆತನ ಕಣ್ಣಿಗೆ ಕಟ್ಟಿ, ಆತನ ಮನಸ್ಸು ಚಂಚಲವಾಯಿತು. ತಾನು ಮೆಹರ್ಜಾನಳನ್ನು ಕುದುರೆಯ ಮೇಲೆ ಅಡ್ಡಹಾಕಿಕೊಂಡು ಬರುವಾಗ ತನ್ನ ಶರೀರಕ್ಕಾದ ಆಕೆಯ ಸುಖಸ್ಪರ್ಶದ ಸ್ಮರಣವೂ, ಆಕೆಯ ಸುಂದರವಾದ ಅವ

ಯವಗಳ, ದರ್ಶನದಿಂದಾದ ಆನಂದದ ಸ್ಮರಣವೂ, ಆಕೆಯು ಕುಂಜವನಕ್ಕೆ ಬಂದಬಳಿಕ ತನ್ನ ಮಾತಿಗೆ ಅರ್ಧ-ಮರ್ಧ ಒಪ್ಪಿಕೊಂಡಂತೆ ಮಾಡಿದ್ದರ ನೆನಪೂ ಆತನಿಗಾಗಿ, ಆತನ ಚಂಚಲ ಮನಸ್ಸು ದೂಷಿತವಾಗುತ್ತಾಗುತ್ತ ಕಡೆಗೆ ಅದರೊಳಗಿನ ವಿವೇಕವು ನಷ್ಟವಾಗಹತ್ತಿತು. ಪ್ರಿಯವಾಚಕರೇ, **"ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ"** ಎಂಬ ಮಹಾತ್ಮರ ಉಕ್ತಿಯಂತೆ ಇಂದ್ರಿಯಗಳ ಸಮೂಹವು ವಿದ್ವಾಂಸನನ್ನಾದರೂ (ವಿದ್ವಾಂಸನ ಮನಸ್ಸನ್ನಾದರೂ) ಜಗ್ಗಿಕೊಳ್ಳತ್ತದೆಂಬ ಮಾತು ಸುಳ್ಳಲ್ಲ. ತುಂಬಿಹೊರಸೂಸುವ ಪ್ರಾಯದ ಸೊಕ್ಕಿನಲ್ಲಿ ನಾವು ಮನಸ್ಸಿಗೆ ಹೊರಚಾಳಿಯನ್ನು ಒಮ್ಮೆ ಹಚ್ಚಿಬಿಟ್ಟರೆ, ಆ ಖೋಡಿ ಮನಸ್ಸು ಅಸುಗೊಳ್ಳದೆ, ತಕ್ಕ ಪ್ರಸಂಗ ಒದಗಿದಾಗೆಲ್ಲ ನಮ್ಮನ್ನು ಎಳೆದೆಳೆದು ಗಾಸಿಮಾಡುತ್ತದೆಂಬದನ್ನು ಪ್ರಾಯಸ್ಥರಾದ ನಿಮ್ಮಲ್ಲಿ ಬಹು ಜನರು ಮನಸ್ಸಿನಲ್ಲಿಯಾದರೂ ಒಪ್ಪಿಕೊಳ್ಳಬಹುದೆಂದು ಅನುಭವದಿಂದ ಹೇಳಬಹುದಾಗಿದೆ! ಆದ್ದರಿಂದ ಪರನಾರೀ ಸೋದರರಾಗುವಂತೆ ಪ್ರತಿಒಬ್ಬ ತರಣರೂ, ಅವರ ಹಿತಚಿಂತಕರೂ, ಮೊದಲೇ ಜಾಗರೂಕರಾಗಿ ಅತ್ಯಂತ ನಿಗ್ರಹದಿಂದ ಆಚರಿಸತಕ್ಕದ್ದು. ಇರಲಿ, ರಾಮರಾಜನು ಹೀಗೆ ನಿಗ್ಗರದಿಂದ ನಡೆಯದೆ, ಮನಸ್ಸನ್ನು ಹರಿಬಿಟ್ಟದ್ದರಿಂದ ಎಂಥ ಘನವಾದ ಸಾಮ್ರಾಜ್ಯದ ಲಯಕ್ಕೆ ಕಾರಣನಾದನೆಂಬದನ್ನು ಈ ಕಾದಂಬರಿಯಲ್ಲಿ ಬರೆಯುವ ದುಃಖದ ಪ್ರಸಂಗವು ನಮಗೊದಗಿದೆ! ರಾಮರಾಜನ ಎಟ್ಟಿಮನಸ್ಸು ಮಾರ್ಜಿನೆಯ ಸದ್ಬೋಧಕ್ಕೆ ಬಗ್ಗಲಿಲ್ಲ; ಗುರುಗಳ ಕ್ಷೋಭಕ್ಕೆ ಬೆದರಲಿಲ್ಲ; ಲೋಕಾಪವಾದಕ್ಕೆ ಹೇಸಲಿಲ್ಲ; ಪಾಪಪುಣ್ಯದ ವಿಚಾರವನ್ನು ಲೆಕ್ಕಿಸಲಿಲ್ಲ. "ವಿನಾಶಕಾಲೇ ವಿಪರೀತ ಬುದ್ಧಿಃ" ಎಂಬಂತೆ ಆ ತರುಣ ಸರದಾರನು ಮಾರ್ಜೀನೆಯನ್ನು ಕುರಿತು ಉದ್ದಾಮತನದಿಂದ—"ಮಾರ್ಜೀನೇ, ಇಷ್ಟೊಂದು ಪಾಂಡಿತ್ಯವನ್ನು ತೋರಿಸುವದಕ್ಕಾಗಿ ನಾನು ನಿನ್ನನ್ನು ಕರೆಸಲಿಲ್ಲ. ನೀನೂ ನಿಮ್ಮ ಮೆಹರ್ಜಾನಳೂ ಈಗ ನನ್ನ ಕೈಯಲ್ಲಿ ಸಿಕ್ಕಿರುತ್ತೀರೆಂಬದನ್ನು ಚನ್ನಾಗಿ ನೆನಪಿನಲ್ಲಿಡು. ಮುಯ್ಯಕ್ಕೆ ಮುಯ್ಯ್ ವೆಂಬಂತೆ ಮುಸಲ್ಮಾನರ ದುರಾಚಾರದ ಸೇಡು ತೀರಿಸಿಕೊಳ್ಳುವದಕ್ಕಾಗಿ, ನಾನು ಮೆಹರ್ಜಾನಳನ್ನು ನನ್ನ ಮನಸ್ಸಿಗೆ ಬಂದಂತೆ ನಡೆಸಿಕೊಳ್ಳುವವನೇ ಸರಿ; ಮೆಹರ್ಜಾನಳು ನನ್ನ ಮಾತಿಗೆ ಅರ್ಧ ಸಮ್ಮತಿಯನ್ನು ಕೊಟ್ಟಂತಾಗಿರುತ್ತದೆ. ಹೀಗಿರಲು, ನೀನು ನಡುವೆ ಕಲ್ಲು ಹಾಕಿದರೆ ನಿಮ್ಮ ಪರಿಣಾಮವಾಗಲಿಕ್ಕಿಲ್ಲ. ನನ್ನ ಕಾರ್ಯಕ್ಕೆ ಅನುಕೂಲವಾಗುವ ಮನಸ್ಸು ನಿನಗಿಲ್ಲದಿದ್ದರೆ ನೀನು ಸುಮ್ಮನಾದರೂ ಇರು ನನ್ನನ್ನು ಬೋಧಿಸಿದಂತೆ ಮೆಹರ್ಜಾನಳನ್ನು ಬೋಧಿಸುವಗೊಡವಿಗೆ ಹೋಗಬೇಡ. ಮಾರ್ಜೀನೇ, ತಿಳಿದು ನೋಡು ನಿನ್ನ ಬೋಧವು

ನಮ್ಮಂಥ ತರುಣರಿಗೆ ತಕ್ಕದ್ದೇ? "ಸೂಳೆ ಮುಪ್ಪಾಗಿ ಜೋಗತಿಯಾದಳೆಂ ಬಂತೆ". ನಿಮ್ಮಂಥ ದಿನ ಹೋದ ಹೆಂಗಸರಿಗೆ, ಪ್ರಸಂಗವಶಾತ್ ನಮ್ಮಂಥ ತರುಣರ ಮುಂದೆ ಇಲ್ಲದ ಪಾಂಡಿತ್ಯವನ್ನು ತೋರಿಸಲಿಕ್ಕೆ ಈ ಬೋಧವು ತಕ್ಕ ದ್ದಾಗಿರುತ್ತದೆ!! ನೀನು ಬೋಧಿಸಿದಂತೆ ನಮ್ಮ ಮೆಹರ್ಜಾನಳು ನನ್ನನ್ನು ಬೋಧಿಸಿದ್ದರೆ ನಾನು ಒಪ್ಪುತ್ತಿದ್ದೆನು. ಅಕೆಯು ನಾನು ಕೇಳಿದ್ದಕ್ಕೆ ಸುಮ್ಮ ನಿದ್ದು ಅರ್ಧ ಸಮ್ಮತಿಯನ್ನು ತೋರಿಸಿರುತ್ತಾಳೆ. ಬಹಳ ಮಾತುಗಳೇನು? ನಾನಿದ್ದೇನೆ, ಮೆಹರ್ಜಾನಳಿದ್ದಾಳೆ. ಆ ಸುಂದರಿಯು ಒಪ್ಪಿಕೊಂಡರೇ ನಾನು ಆಕೆಯ ಪಾಣಿಗ್ರಹಣಮಾಡಿ, ಅವಳನ್ನು ನನ್ನ ಪ್ರಾಣೇಶ್ವರಿಯನ್ನಾಗಿ ಮಾಡಿ ಕೊಳ್ಳುವೆನು. ಆಮೇಲೆ ನನ್ನನ್ನು ಹೀಗೆ ಬೋಧಿಸಿದ ಬಗ್ಗೆ ನಿನಗೇ ಪಶ್ಚಾತ್ತಾಪವಾದೀತು. ಹೋಗು, ನನ್ನ ಈ ಸಿಟ್ಟಿನ ಮಾತುಗಳನ್ನು ಮನಸ್ಸಿಗೆ ಹಚ್ಚಿಕೊಳ್ಳದೆ, ಮೆಹರ್ಜಾನಳು ನನಗೆ ಅನುಕೂಲಳಾಗುವಂತೆ ಮಾಡು, ಎಂದು ಹೇಳಿ, ರಾಮರಾಜನು ಮಾರ್ಜೀನೆಯನ್ನು ಮನೆಗೆ ಕಳಿಸಿಬಿಟ್ಟನು.

ರಾಮರಾಜನು ಮಾರ್ಜೀನೆಯನ್ನು ಹೀಗೆ ಬೆದರಿಸಿ ಕಳಿಸಿದರೂ, ಆ ಸ್ಪಷ್ಟ ಮಾತಿನ ಹೆಣ್ಣುಮಗಳು ಮೆಹರ್ಜಾನಳ ಮನಸ್ಸನ್ನು ಎಲ್ಲಿ ತಿರುಗಿಸುವಳೋ ಎಂದು ಆತನು ಶಂಕಿಸುತ್ತಲಿದ್ದನು. ರಾಮರಾಜನು ಹುಟ್ಟಾ ಚತುರನು, ಕಾರ್ಯಸಾಧಕನು. ಆತನು ಮೆಹರ್ಜಾನಳ ಮನಸ್ಸು ಮೋಹಿಸುವಂಥ ಹಲವು ಹಂಚಿಕೆಗಳನ್ನು ಮೊದಲೇ ಮಾಡಿದ್ದನು. ಆತನ ಸೂಚನೆಯಂತೆ ಆತನ ವೃದ್ಧ ದಾಸಿಯು ರಾಮರಾಜನ ಗುಣಗಳನ್ನೂ, ಪರಾಕ್ರಮವನ್ನೂ, ವೈಭವವನ್ನೂ ಉಪ್ಪುಕಾರ ಹಚ್ಚಿ ಮೆಹರ್ಜಾನಳ ಮುಂದೆ ಹೇಳಿದ್ದಳು. ಯುದ್ಧದಲ್ಲಿ ಅದ್ಭುತ ಪರಾಕ್ರಮವನ್ನು ತೋರಿಸಿ ವಿಜಯನಗರದ ಕೃಷ್ಣದೇವರಾಜರಿಂದ ಉಚಿತವಾಗಿ ಸಂಪಾದಿಸಿದ ಪದಾರ್ಥಗಳು ಇವೆಂದು ಹರಳುಕಲ್ಲಿನ ಅನೇಕ ದಿವ್ಯಾಲಂಕಾರಗಳನ್ನು ಆಕೆಗೆ ಆ ದಾಸಿಯು ತೋರಿಸಿದ್ದಳು. ಅಂಥ ಅಲಂಕಾರಗಳನ್ನು ಮೆಹರ್ಜಾನಳು ಈವರೆಗೆ ನೋಡಿದ್ದಿಲ್ಲವೆಂದು ಹೇಳಬಹುದು. ಆಗ ವಿಜಯನಗರದ ರಾಜರ ಐಶ್ವರ್ಯಕ್ಕೆ ಎಣೆಯಿದ್ದಿಲ್ಲ. ವಿದ್ಯಾನಗರವೆಂದು ಕರೆಸಿಕೊಳ್ಳುತ್ತಿದ್ದ ಆ ವಿಜಯನಗರವೆಂಬ ರಾಜಧಾನಿಯು, ಲಕ್ಷ್ಮಿಯ ನಿವಾಸಸ್ಥಾನವಾಗಿತ್ತು! ಅಂಥ ಐಶ್ವರ್ಯಸಂಪನ್ನನಾದ ಪ್ರಭುವಿನ ಪ್ರೀತಿಯ ಸರದಾರನೆಂದ ಬಳಿಕ, ರಾಮರಾಜನ ಸಂಗ್ರಹದಲ್ಲಿ ಉತ್ತಮೋತ್ತಮವಾದ ಅಲಂಕಾರಗಳಿದ್ದದ್ದೇನು ಆಶ್ಚರ್ಯವಲ್ಲ. ದಾಸಿಯು ರಾಮರಾಜನ ಒಂದೊಂದು ಪರಾಕ್ರಮದ ಕೃತಿಗಳನ್ನು ಕಥೆ ಮಾಡಿ ಹೇಳಿದಳು; ಅದರಂತೆ ಹಿಂದೂ ಧರ್ಮದ ಹಲವು ಸುಂದರಿಯರು ರಾಮರಾಜನನ್ನು ಲಗ್ನವಾಗಲಿಚ್ಛಿಸಿ ನಿರಾಶೆ

ಹಟ್ಟಿದ್ದನ್ನು ಬಗೆಬಗೆಯಾಗಿ ಬಣ್ಣಿಸಿದ್ದಳು; ಹಾಗೆಯೇ ಆ ಚತುರ ದಾಸಿಯು, ಇಂಥ ಸುಂದರ ತರುಣನ ಕೈಹಿಡಿದ ಸುಂದರಿಯು ಪುಣ್ಯವಂತಳೇ ಸರಿಯೆಂದು ಮೆಹರ್ಜಾನಳಿಗೆ ಸ್ಪಷ್ಟವಾಗಿ ಹೇಳಿದಳು. ಮೊದಲೇ ರಾಮರಾಜನಿಗೆ ಮರುಳಾಗಿದ್ದ ಮೆಹರ್ಜಾನಳ ಮನೋಭೂಮಿಯಲ್ಲಿ ಉತ್ಪನ್ನವಾಗಿದ್ದ ಪ್ರೇಮಾಂಕುರವು, ತಾರುಣ್ಯವೆಂಬ ಗೊಬ್ಬರದಿಂದಲೂ, ರಸಭರಿತ ವರ್ಣನವೆಂಬ ಜಲಸೇಚನದಿಂದಲೂ ಪರಿಪುಷ್ಟವಾಗಿ ಭರದಿಂದ ಬೆಳೆಯಹತ್ತಿತು. ಈ ಸ್ಥಿತಿಯಲ್ಲಿ ರಾಮರಾಜನ ಸುಂದರ ಮೂರ್ತಿಯು ಆಕೆಯ ಮನಸ್ಸಿನಲ್ಲಿ ನೆಲಿಸಲು, ತದೇಕಧ್ಯಾನವೆಂಬ ಗೆಯ್ತದಿಂದ ಆ ಪ್ರೇಮವೃಕ್ಷವು ಫಲಿಸಿ ರಾಮರಾಜನ ಪ್ರಾಪ್ತಿರೂಪವಾದ ಫಲವು ಬಲುಸ್ವಾದಿಷ್ಟವಾಗಿ ಆ ಮೆಹರ್ಜಾನಳಿಗೆ ತೋರಹತ್ತಿತು! ಮೆಹರ್ಜಾನಳ ಮನಸ್ಥಿತಿಯು ಅಲ್ಪಾವಕಾಶದಲ್ಲಿ ಇಷ್ಟು ರೂಪಾಂತರ ಹೊಂದಿದ್ದು ಆಶ್ಚರ್ಯವಲ್ಲ. ತರುಣರ ಮನಸ್ಸಿನ ಪ್ರಭಾವವೇ ಅಂತಹದಿರುತ್ತದೆ! ಅದರಲ್ಲಿ ಬಿತ್ತಿದ ಬೀಜವು ಅಷ್ಟುಬೇಗ ಫಲಿಸುತ್ತದೆ! ತರುಣರಿಗೆ ಬಲುಬೇಗ ಸಿಟ್ಟು ಬರಲಿಕ್ಕೂ, ಅವರು ಬಲುಬೇಗ ನಗಲಿಕ್ಕೂ, ಬಲುಬೇಗ ಅಳಲಿಕ್ಕೂ, ಮನಸ್ಸಿಗೆ ಬಂದಕೂಡಲೆ ಅವರು ಯಾವದೊಂದು ಕಾರ್ಯಕ್ಕೆ ತಟ್ಟನೆ ಕೈಹಾಕಲಿಕ್ಕೂ ಇದೇ ಕಾರಣವು. ಏರಿಕೆಯ ರಕ್ತದ ತರುಣರ ಸ್ಥಿತಿಯು ಹೀಗೆಯೇ ಸರಿ. ಅವರಿಗೆ ಪ್ರಯತ್ನದ ಫಲವು ಮಾತ್ರ ಕಣ್ಣಿಗೆ ಕಟ್ಟುತ್ತದಲ್ಲದೆ, ಪ್ರಯತ್ನದಲ್ಲಿಯ ತೊಂದರೆಗಳು ಕಾಣುವದಿಲ್ಲ. ಈ ನಿಯಮಕ್ಕನುಸರಿಸಿ ಮೆಹರ್ಜಾನಳು ರಾಮರಾಜನ ಇಚ್ಛೆಯಂತೆ ನಡಕೊಳ್ಳಲು ಆತುರಪಡುತ್ತಿದ್ದಳು. ಇಂಥ ಸ್ಥಿತಿಯಲ್ಲಿ ಮಾರ್ಜೀನೆಯು ಅವಳ ಬಳಿಗೆ ಬಂದು ರಾಮರಾಜನು ಆಡಿದ ಮಾತುಗಳನ್ನು ಹೇಳಿದಳು. ಅವುಗಳನ್ನು ಕೇಳಿ ಮೆಹರ್ಜಾನಳಿಗೆ ವ್ಯಸನವಾಗುವ ಬದಲು ಆನಂದವಾಯಿತು; ಯಾಕಂದರೆ ಆಕೆಗೆ ರಾಮರಾಜನು ಬೇಕಾಗಿದ್ದನು. ಆಕೆಯು ಮುಗುಳುನಗೆ ನಗುತ್ತ ಮಾರ್ಜೀನೆಗೆ—ಮಾರ್ಜೀನೇ, ನೀನು ಅವರಿಗೆ ಸಿಟ್ಟು ಬರುವಂತೆ ಯಾಕೆ ಮಾತಾಡಿದೆ? ನಾನು ಮನಸ್ಸಿನಿಂದ ಅವರನ್ನು ವರಿಸಿದ್ದೇನೆ. ಪಠಾಣ ತರುಣಿಯರು ಒಬ್ಬ ಪುರುಷನಲ್ಲಿ ಮನಸನ್ನಿಟ್ಟ ಬಳಿಕ, ಅನ್ಯಪುರುಷರನ್ನು ಪಿತೃ ಸಮಾನರೆಂತಲೇ ತಿಳಿಯುವರು! ನನಗೆ ಹಿಂದೂವೇ ಪತಿಯಾಗಬೇಕೆಂದು ಅಲ್ಲಾನ ಸಂಕೇತವಿದ್ದಂತೆ ತೋರುತ್ತದೆ! ಏನೇ ಇರಲಿ, ರಾಮರಾಜನು ನನ್ನ ಪತಿಯು, ಅವರು ನನ್ನ ಪ್ರಾಣೇಶ್ವರರು. ಅವರನ್ನಗಲಿ ನಾನು ಒಂದು ಕ್ಷಣವಾದರೂ ಇರಲಾರೆನು! ನೀನು ಹ್ಯಾಗಾದರೂ ಮಾಡಿ ಅವರ ಸಿಟ್ಟು ಇಳಿಸಿ, ಅವರು ಪ್ರೇಮದಿಂದ ನನ್ನ ಪಾಣಿಗ್ರಹಣಮಾಡುವಂತೆ ಮಾಡು! ಅನ್ನಲು, ಬೆಪ್ಪಾಗಿ ಕುಳಿತುಕೊಂಡಿದ್ದ ಸರಳಮ

ನಸ್ಸಿನ ಆ ಮಾರ್ಜಿನೆಯ ಮುಖದಿಂದ "ಎಲ! ಇದೇನು?" ಎಂಬ ಶಬ್ದವು ತಟ್ಟನೆ ಹೊರಟಿತು!! ಪ್ರಿಯತರುಣವಾಚಕರೇ, ಎಚ್ಚರಿಕೆ, ಸಿಕ್ಕಸಿಕ್ಕ ಬೀಜಗಳು ನಿಮ್ಮ ಮನೋ ಭೂಮಿಯಲ್ಲಿ ಬಿತ್ತದಂತೆ ನೀವು ಜಾಗರೂಕರಾಗಿರತಕ್ಕದ್ದು. ಇಲ್ಲದಿದ್ದರೆ ಮೆಹರ್ಜಾನ-ರಾಮರಾಜರಂತೆ ನೀವು ವಿವೇಕಭ್ರಷ್ಟರಾದೀರಿ!!!

೩ನೆಯ ಪ್ರಕರಣ—ಅಂಕುರಾಭಿವೃದ್ಧಿ.

ಈ ಮೇರೆಗೆ ಮೆಹರ್ಜಾನಳ ಮನಸ್ಸಿನ ಸ್ಥಿತಿಯನ್ನು ನೋಡಿ ಮಾರ್ಜೀನೆಯು ಆಶ್ಚರ್ಯಪಟ್ಟರೂ, ಆ ತರುಣಿಯ ಮನಸ್ಸನ್ನು ತಿರುಗಿಸುವ ಗೊಡವಿಗೆ ಆ ಪ್ರೌಢವಯಸ್ಸಿನ ಬಹುಶ್ರುತಳಾದ ಹೆಣ್ಣುಮಗಳು ಸರ್ವಥಾ ಹೋಗಲಿಲ್ಲ. ಅಲ್ಲಾನ ಸಂಕೇತವೇ ಹೀಗೆ ಇರಬಹುದೆಂದು ತಿಳಿದು ಆಕೆಯು ಮೆಹರ್ಜಾನಳ ಮನಸ್ಸಿನ ಒಲವಿನಂತೆ ನಡೆಯುವದನ್ನು ನಿಶ್ಚಯಿಸಿದಳು. ಭವಿತವ್ಯತೆಯನ್ನು ತಪ್ಪಿಸುವದು ಯಾರಿಂದಲೂ ಆಗದು. ಮೆಹರ್ಜಾನಳ ಪ್ರಾಪ್ತಿಯ ವಿಷಯವಾಗಿ ರಾಮರಾಜನ ಮನಸ್ಸಿನಲ್ಲಿ ಆತುರವು ಉತ್ಪನ್ನವಾದಂತೆ, ರಾಮರಾಜನ ವಿಷಯವಾಗಿಯೂ ಮೆಹರ್ಜಾನಳ ಮನಸ್ಸಿನಲ್ಲಿ ಆತುರವು ಉತ್ಪನ್ನವಾಗಹತ್ತಿತು. ಅಂದಬಳಿಕ ಅವರಿಬ್ಬರ ಪಾಣಿಗ್ರಹಣಕ್ಕೆ ಪ್ರತಿಬಂಧವೇಕೆ ಆಗಬೇಕು? ರಾಮರಾಜನು ಪ್ರೇಮದ ಭರದಲ್ಲಿ ಹಿಂದುಮುಂದಿನ ವಿಚಾರವಿಲ್ಲದೆ ಮೆಹರ್ಜಾನಳಿಗೆ ಹಲವು ವಚನಗಳನ್ನು ಕೊಟ್ಟಿದ್ದನು. ಅವನ್ನೆಲ್ಲ ನಿಜವೆಂದು ನಂಬಿ ಆ ಸರಳಹೃದಯದ ತರುಣಿಯು ಮುಂದೆ ತನಗಾಗಬಹುದಾದ ಅಪಮಾನವನ್ನೆಲ್ಲ ಮರೆತಳು. ತನ್ನನ್ನು ಮುಖ್ಯ ಪತ್ನಿಯನ್ನಾಗಿ ಮಾಡಿಕೊಳ್ಳುವೆನೆಂದು ರಾಮರಾಜನು ಕೊಟ್ಟ ವಚನವನ್ನು ಆಕೆಯು ದೃಢವಾಗಿ ನಂಬಿ, ಅದೊಂದರ ಆಸೆಯಿಂದ ರಾಮರಾಜನ ಪಾಣಿಗ್ರಹಣಕ್ಕೆ ಆಕೆಯು ಒಪ್ಪಿಕೊಂಡಳು. ಕಣ್ವಾಶ್ರಮದಲ್ಲಿ ಶಕುಂತಲೆಯು ದುಷ್ಯಂತನ ಪಾಣಿಗ್ರಹಣ ಮಾಡಿದ ಕಥೆಯನ್ನು ಸವಿಮಾತಿನ ರಾಮರಾಜನು ಮೆಹರ್ಜಾನಳಮುಂದೆ ಹೇಳಿದನು. ಕಡೆಗೆ ಅವರಿಬ್ಬರ ಪಾಣಿಗ್ರಹಣವಾಗಿ ದಾಂಪತ್ಯಸುಖಾನುಭವಕ್ಕೆ ಆರಂಭವಾಯಿತು. ಆಗ ಆ ಕುಂಜವನವು ಸ್ವರ್ಗದೊಳಗಿನ ನಂದನವನ

ದಂತೆ ಅವರಿಗಾಯಿತು. ರಾಮರಾಜನ ಐಶ್ವರ್ಯಸಂಪನ್ನತೆಗೆ ಕೊರತೆಯಿದ್ದಿಲ್ಲ. ವಿಜಯನಗರದ ರಾಜ್ಯಸ್ಥಾಪನೆಯಾಗಿ ಮುನ್ನೂರು ವರ್ಷಗಳಾದದ್ದರಿಂದ, ಕನ್ನಡಿಗರಲ್ಲಿ ಸತ್ವಕ್ಕಿಂತ ವಿಷಯಸುಖಲೋಲುಪತೆಯೂ, ಸೌಜನ್ಯಕ್ಕಿಂತ ಮದಾಂಧತೆಯೂ, ಪೌರುಷಕ್ಕಿಂತ ಡಾಂಭಿಕತೆಯೂ, ಸತ್ಯಕ್ಕಿಂತ ಮೋಸಗಾರಿಕೆಯೂ ವಿಶೇಷವಾಗಿದ್ದವು. ಈ ಸ್ಥಿತಿಯು ರಾಷ್ಟ್ರವನ್ನಂಟಿಕೊಂಡ ಕ್ಷಯರೋಗವೆಂತಲೇ ಹೇಳಬಹುದು. ರಾಮರಾಜನಲ್ಲಿ ಹಲವು ಸದ್ಗುಣಗಳಿದ್ದರೂ ಆತನು ಈ ರಾಷ್ಟ್ರೀಯರೋಗದಿಂದ ಮುಕ್ತನಾಗಿದ್ದಿಲ್ಲ. ಕೇವಲ ಗುಣಲುಬ್ಧನಾಗಿ ತನ್ನ ಕೈ ಹಿಡದಿದ್ದ ಮೆಹಜ್ರಾನಳಿಗೆ ಆತನ ಈ ಗುಪ್ತರೋಗದ ಲಕ್ಷಣಗಳನ್ನು ಲಕ್ಷಿಸಲಿಕ್ಕೆ ಅವಸರವು ದೊರೆಯಲಿಲ್ಲ. ಒಂದು ವರ್ಷದವರೆಗೆ ಅವರಿಬ್ಬರು ನಿರಾತಂಕವಾಗಿ ವಿಷಯಸುಖವನ್ನು ಭೋಗಿಸಿದರು. ಈ ಅವಧಿಯಲ್ಲಿ ರಾಮರಾಜನು ಮೆಹಜ್ರಾನಳನ್ನು ಕ್ಷಣವಾದರೂ ಅಗಲದೆ ಇರುತ್ತಿದ್ದನೆಂದು ಹೇಳಬಹುದು. ಕೃಷ್ಣದೇವರಾಯನ ಅಪ್ಪಣೆಯಿಂದ ಮೆಹಜ್ರಾನಳನ್ನು ಅಗಲಿ ಹೋಗುವ ಪ್ರಸಂಗ ಬಂದರೆ ರಾಮರಾಜನ ಜೀವದಸುತ್ತ ಬಂದಂತಾಗುತ್ತಿತ್ತು. ಸರಳಹೃದಯವ ಮೆಹಜ್ರಾನಳಾದರೂ ತನ್ನ ಹೃದಯವನ್ನು ಸಂಪೂರ್ಣವಾಗಿ ರಾಮರಾಜನಿಗೆ ಒಪ್ಪಿಸಿ, ಸರ್ವಸ್ವವೂ ಆತನೇ ಎಂದು ತಿಳಿದಿದ್ದಳು. ಅವರಿಬ್ಬರ ಈ ಅಕೃತ್ರಿಮ ಪ್ರೇಮಭೂಮಿಯಲ್ಲಿ ನಿರ್ದುಷ್ಟವಾದ ದಾಂಪತ್ಯಸುಖವು ಉತ್ಪನ್ನವಾದದ್ದೇನು ಆಶ್ಚರ್ಯವಲ್ಲ.

ಈ ಪ್ರಕಾರ ಆ ತರುಣ-ತರುಣಿಯರಲ್ಲಿ ಅಕೃತ್ರಿಮ ಪ್ರೇಮವು ಇರುವವರೆಗೆ ಅವರ ಸುಖವಲ್ಲಿ ಕೊರತೆಯುಂಟಾಗಿದ್ದಿಲ್ಲ; ಆದರೆ ರಾಮರಾಜನ ದುರ್ದೈವದಿಂದಲೋ, ಮೆಹಜ್ರಾನಳ ದುರ್ದೈವದಿಂದಲೋ, ಕನ್ನಡಿಗರ ದುರ್ದೈವದಿಂದಲೋ, ಇವರೆಲ್ಲರ ದುರ್ದೈವದಿಂದಲೋ ತಿಳಿಯದು. ಆ ತರುಣರ ಅಕೃತ್ರಿಮ ಪ್ರೇಮವು ರಾಮರಾಜನ ಮಹತ್ವಾಕಾಂಕ್ಷೆಯಿಂದ ಕೃತ್ರಿಮ ಸ್ವರೂಪವನ್ನು ತಾಳಹತ್ತಿತು. ಮೇಲೆ ಹೇಳಿದ ರಾಷ್ಟ್ರೀಯ ಕ್ಷಯರೋಗದ ಎಲ್ಲ ಲಕ್ಷಣಗಳೂ ರಾಮರಾಜನಲ್ಲಿ ಇದ್ದವಲ್ಲದೆ, ಆ ರೋಗದ ಹೆಚ್ಚುವಿಕೆಗೆ ಕಾರಣವಾದ ಮಹತ್ವಾಕಾಂಕ್ಷೆಯು ಆತನಲ್ಲಿ ವಾಸಿಸುತ್ತಿತ್ತು. ಮನುಷ್ಯನು ನ್ಯಾಯವಾದ ಮಹತ್ವವನ್ನು ಅಪೇಕ್ಷಿಸಬಾರದೆಂತಲ್ಲ; ಗುಣೋತ್ಕರ್ಷವನ್ನು ಪಡೆದು, ಆತನು ನರನು ಹೋಗಿ ನಾರಾಯಣನೂ ಆಗಬಹುದು! ಆದರೆ "ಏನಕೇನ ಪ್ರಕಾರೇಣಪ್ರಸಿದ್ಧಪುರುಷೋಭವ" ಎಂಬ ಹೀನವಾದ ಉಕ್ತಿಗೆ ಸಂಬಂಧಿಸುವಂಥ ನೀಚಮಹತ್ವಾಕಾಂಕ್ಷೆಯನ್ನು ಯಾವನೂ ತಾಳಲಾಗದು. ಅಂಥವನು ಕೆಲಕಾಲ

ವನರಿಗೆ ಮಹತ್ವಪಡೆದಂತೆ ತೋರಿದರೂ, ಕಡೆಗೆ ಆತನ ಅಧಃಪತನವೇ ಆಗುವದು. ಇಂಥ ಉದಾಹರಣಗಳು ಇತಿಹಾಸಜ್ಞರಿಗೂ, ವ್ಯವಹಾರಜ್ಞರಿಗೂ ಹೆಲವು ದೊರೆಯಬಹುದು. ಅವುಗಳಲ್ಲಿ ರಾಮರಾಜನದೊಂದು ಐತಿಹಾಸಿಕ ಉದಾಹರಣವೆಂದು ಹೇಳಬಹುದು. ರಾಮರಾಜನಲ್ಲಿ ಗುಣಗಳಿದ್ದಿಲ್ಲವೆಂತಲ್ಲ; ಆದರೆ ಆ ಸುಗುಣಗಳನ್ನು ಪ್ರಸಂಗವಶಾತ್ ಮಣ್ಣುಗೂಡಿಸುವಷ್ಟು ದುರ್ಗುಣಗಳೂ ಅವನಲ್ಲಿ ಇದ್ದದ್ದರಿಂದ, ಆತನ ಮಹತ್ವಾಕಾಂಕ್ಷೆಯು ನಿರ್ದುಷ್ಟವಾದದ್ದೆಂದು ಹೇಳಲಾಗುವದಿಲ್ಲ. ಆತನು ವಿಜಯನಗರದ ಕೃಷ್ಣದೇವರಾಜನಂಥ ಪ್ರತಾಪಿಯ ದರ್ಬಾರದಲ್ಲಿ ದೊಡ್ಡ ಪದವಿಗೇರುವ ಮಹತ್ವಾಕಾಂಕ್ಷೆಗೆ ಬಲಿಬಿದ್ದು, ಕೃಷ್ಣದೇವರಾಜನ ಮನಸ್ಸನ್ನು ಒಲಿಸಿಕೊಳ್ಳುವ ಭರವಸ್ಸಿಲ್ಲಿ ಮೆಹರ್ಜಾನಳನ್ನು ಮರೆಯಹತ್ತಿದನು. ರಾಮರಾಜನು ಹೀಗೆ ಮಾಡಿದ್ದು ತಪ್ಪೆಂತಲೂ ನಾವು ಹೇಳುವದಿಲ್ಲ; ಆ ಮಹತ್ವಾಕಾಂಕ್ಷೆಗೆ ರಾಮರಾಜನು ಕೇವಲ ಅಪಾತ್ರನೆಂತಲೂ ನಾವು ಪ್ರತಿಪಾದಿಸುವದಿಲ್ಲ; ಆದರೆ ಆ ಮಹತ್ವದ ಪದವಿಗೆ ತಕ್ಕ ಕೃತಿಗಳನ್ನು ಆತನು ಮಾಡದಿರುವದು ಮಾತ್ರ ಅನ್ಯಾಯವು. ತನ್ನ ವೈದಿಕ ಧರ್ಮಕ್ಕೆ ವಿರುದ್ಧವಾಗಿ ಆತನು ಮೆಹರ್ಜಾನಳ ಪಾಣಿಗ್ರಹಣವನ್ನೇ ಮಾಡತಕ್ಕದ್ದಿದ್ದಿಲ್ಲ; ಒಂದು ಪಕ್ಷದಲ್ಲಿ ಮಾಡಿದರೂ ಮಾಡಲಿ, ಮುಖ್ಯ ಪತ್ನಿಯನ್ನಾಗಿ ಮಾಡುವೆನೆಂದು ಆಕೆಗೆ ವಚನ ಕೊಡತಕ್ಕದ್ದಿದ್ದಿಲ್ಲ; ಒಮ್ಮೆ ವಚನ ಕೊಟ್ಟಬಳಿಕ ಅದರಂತೆ ನಡೆಯುವದು ಪೌರುಷಕ್ಕೆ ಒಪ್ಪುವ ಮಾತಾಗಿತ್ತು; ಆದರೆ ರಾಮರಾಜನು ಹಾಗೆ ಮಾಡದೆ ಮಹತ್ವಾಕಾಂಕ್ಷೆಯಿಂದ ವಚನಭಂಗದ ಹಾದಿಯನ್ನು ಹಿಡಿದನು. ರಾಮರಾಜನ ಧೈರ್ಯ, ಸಾಹಸ, ಪರಾಕ್ರಮ, ರಾಜಕರಣಕುಶಲತೆ ಮುಂತಾದ ಗುಣಗಳಿಗೆ ಮೆಚ್ಚಿ, ಕೃಷ್ಣದೇವರಾಜನು ಆತನನ್ನು ದೊಡ್ಡ ಪದವಿಗೇರಿಸುತ್ತ ನಡೆದನು. ಕಡೆಗೆ ಆತನು ತನ್ನ ಮಗಳನ್ನು ರಾಮರಾಜನಿಗೆ ಕೊಟ್ಟು ಆಪಸಿಗೆ ತನ್ನ ಮಂತ್ರಿಪದವನ್ನು ಕೊಡಬೇಕೆಂದು ಯೋಚಿಸಿದನು. ಅದರಿಂದ ರಾಮರಾಜನ ಬಾಯಲ್ಲಿ ಜುಳು-ಜುಳು ನೀರು ಬರಹತ್ತಿದವು! ಇಂಥ ಪ್ರಸಂಗದಲ್ಲಿ ರಾಮರಾಜನು ಯವನನ ಸುಂದರಿಯ ಪಾಣಿಗ್ರಹಣ ಮಾಡಿದ್ದು ಆತನ ಉತ್ಕರ್ಷಕ್ಕೆ ಅಡ್ಡಾಗಹತ್ತಿತು. ಕೃಷ್ಣದೇವರಾಯನಂತ ವೈದಿಕ ಸನ್ನಾಭಿಮಾನಿಯಾದ ರಾಜನಿಗೂ, ಆತನ ಪ್ರಜೆಗಳಿಗೂ ಈ ಧಾರ್ಮಿಕ ವಿಪ್ಲವವು ಹ್ಯಾಗೆ ಸೇರಬೇಕು? ಆದ್ದರಿಂದ ರಾಮರಾಜನು ತನ್ನ ಮಂತ್ರಿಪದವಿಗೆ ಕೊಂಡಿಗೆ ಬಂದೀತೆಂದು ಭಯಪಟ್ಟು, ಕುಂಜವನದಲ್ಲಿ ಗುಪ್ತವಾಗಿದ್ದ ಮೆಹರ್ಜಾನಳಬಳಿಗೆ ಜನರ ಸಂಶಯಕ್ಕೆ ಆಸ್ಪದವಾಗದಂತೆ ಕದ್ದು ಮುಚ್ಚಿ ಕೂಡಿದಾಗೊಮ್ಮೆ ಹೋಗಹತ್ತಿದನು.

ಈ ಸ್ಥಿತಿಯು ಮೆಹರ್ಜಾನಳಿಗೆ ಸರಿಬರಲಿಲ್ಲ. ರಾಮರಾಜನು ತನ್ನನ್ನು ಉದಾಸೀನ ಮಾಡುವನೆಂದು ಆಕೆಯು ಭಾವಿಸಹತ್ತಿ, ಅದರ ಬಗ್ಗೆ ರಾಮರಾಜನನ್ನು ಸ್ಪಷ್ಟವಾಗಿ ಕೇಳಹತ್ತಿದಳು. ಆಗ ರಾಮರಾಜನು ಸುಳ್ಳೊಂದು ಸೊಟ್ಟೊಂದು ನೆವಹೇಳಿ ಮೆಹರ್ಜಾನಳನ್ನು ರಮಿಸಹತ್ತಿದನು. ಈ ಸ್ಥಿತಿಯು ಎಷ್ಟು ದಿವಸ ನಡೆಯಬೇಕು? ಬರಬರುತ್ತ ರಾಮರಾಜನಿಗೆ ಮೆಹರ್ಜಾನಳು ಭಾರವಾಗಹತ್ತಿದಳು. ಮಂತ್ರಿಪದವಿಗೇರುವ ಉಬ್ಬಿನಲ್ಲಿ ಆತನು ಯಾವಾಗಾದರೊಮ್ಮೆ ಮೆಹರ್ಜಾನಳ ಬಳಿಗೆ ಹೋಗಹತ್ತಿದನು. ಒಂದುದಿನ ಮೆಹರ್ಜಾನಳು ರಾಮರಾಜನನ್ನು ಈ ವಿಷಯವಾಗಿ ಕೇಳಲು, ಆತನು-ಪ್ರಿಯೆ ಮೆಹರ್ಜಾನ, ನನ್ನಮೇಲಿನ ನಿನ್ನ ವಿಶ್ವಾಸವು ಕಡಿಮೆಯಾಗಹತ್ತಿರುವದನ್ನು ನೋಡಿ ನನಗೆ ಬಹಳ ದುಃಖವಾಗುತ್ತದೆ. ಹೀಗೆ ಮಾಡಬೇಡ. ನಿನ್ನ ಹಿತದ ಸಲುವಾಗಿಯೇ ನಾನು ಯತ್ನಿಸುತ್ತಿರುವೆನು. ಈಗ ಒಬ್ಬ ಸರದಾರನ ಹೆಂಡತಿಯೆನಿಸಿಕೊಳ್ಳುತ್ತಿರುವ ನೀನು ಮಂತ್ರಿಯ ಹೆಂಡತಿಯಾಗಬೇಕೆಂದು ನಾನು ಉದ್ಯೋಗ ನಡೆಸಿರುವೆನು. ಹೀಗಿರಲು, ನೀನು ವಿಕಲ್ಪವೆಣಿಸಬಹುದೊ? ಎಂದು ಕೇಳಲು, ಆ ಸರಳ ಹೃದಯದ ಮೆಹರ್ಜಾನಳು ಅಷ್ಟಕ್ಕೇ ಸಂತೋಷಪಟ್ಟು ವಿಕಲ್ಪವಿಲ್ಲದೆ, ಮೊದಲಿನಂತೆ ರಾಮರಾಜನನ್ನು ಪ್ರೀತಿಸಹತ್ತಿದಳು. ರಾಮರಾಜನ ಈ ಮೋಸದ ನಡತೆಯು ಧೂರ್ತಳಾದ ಮಾರ್ಜೀನೆಗೆ ಗೊತ್ತಾಗದೆ ಇರಲಿಲ್ಲ! ಅದರೂ ಆಕೆಯು ತನ್ನ ಮನಸ್ಸಿನಲ್ಲಿದ್ದದ್ದನ್ನು ಮೆಹರ್ಜಾನಳ ಮುಂದೆ ಆಡಲಿಲ್ಲ. ಹೀಗೆಯೇ ಕೆಲವು ದಿನಸಗಳು ಹೋದವು. ರಾಮರಾಜನು ತನ್ನ ಮನಸ್ಸಿನ ಸಂಶಯದಿಂದ ಮೆಹರ್ಜಾನಳನ್ನು ರಮಿಸುವದಕ್ಕಾಗಿ ಆಗಾಗ್ಗೆ ಬೆಲೆಯುಳ್ಳ ಅಲಂಕಾರಗಳನ್ನು ತಂದುಕೊಡಹತ್ತಿದನು. ತನಗೆ ಬರುವದಕ್ಕೆ ತಡವಾದ ಪ್ರಸಂಗದಲ್ಲಿ ಸವಿಯಾದ ಪತ್ರಗಳನ್ನು ಆಕೆಗೆ ಬರೆದು ಕಳಿಸಹತ್ತಿದನು. ಏನು ಮಾಡಿದರೂ ಮೆಹೇರ್ಜಾನಳ ಮನಸ್ಸಿನಲ್ಲಿ ರಾಮರಾಜನ ಪ್ರೇಮದ ವಿಷಯವಾಗಿ ಆಗಾಗ್ಗೆ ವಿಕಲ್ಪವು ಉತ್ಪನ್ನವಾಗುವದು ಹೋಗಲಿಲ್ಲ. ಮನಸ್ಸು ದೋಷೈಕ ದೃಷ್ಟಿಯಾಯಿತೆಂದರೆ, ಇಲ್ಲದ ಹುಳುಕುಗಳು ಅದಕ್ಕೆ ತೋರಹತ್ತುತ್ತವೆ. ಇತ್ತಿತ್ತ ರಾಮರಾಜನು ತನಗೆ ಬೆಲೆಯುಳ್ಳ ವಸ್ತ್ರಾಲಂಕಾರಗಳನ್ನು ಕೊಡುತ್ತಿದ್ದದ್ದು, ತನ್ನನ್ನು ರಮಿಸುವದಕ್ಕಲ್ಲದೆ ಪ್ರೀತಿಗೋಸ್ಕರವಲ್ಲೆಂದು ಮೆಹರ್ಜಾನಳು ಎಣಿಸಹತ್ತಿದಳು. **"ಮನೋಹಿ ಜನ್ಮಾಂತರ ಸಂಗತಿಜ್ಞಂ"** ಅಂದರೆ, ಮನಸ್ಸು (ಸಂಬಂಧಿಕರ) ಜನ್ಮಾಂತರದ ಸಂಗತಿಗಳನ್ನು ತಿಳಿಯುತ್ತದೆಂದು ಕಾಲಿದಾಸ ಕವಿಯು ಹೇಳಿರುವನೆಂದ ಬಳಿಕ, ಇದೇಜನ್ಮದಲ್ಲಿ ತನಗೆ ಸಂಬಂಧಪಟ್ಟ ರಾಮರಾಜನ ಮನಸ್ಸಿನ ಸ್ಥಿತಿಯನ್ನು ಮೆಹರ್ಜಾ-

ನಳ ಮನಸ್ಸು ತಿಳಿಯದೆ ಹ್ಯಾಗೆ ಹೋಗಬೇಕು? ಆದರೂ ಮೇಹೇರ್ಜಾನಳು ರಾಮರಾಜನಂತೆ ಮಹತ್ವಾಕಾಂಕ್ಷಿಯಿದ್ದಿಲ್ಲ. ತಾನಾಗಿ ಪ್ರಾಪ್ತವಾಗಿದ್ದ ರಾಮರಾಜನ ಅಕೃತ್ರಿಮ ಪ್ರೇಮವನ್ನು ಕಾಯ್ದುಕೊಳ್ಳುವದರ ಹೊರತು ಹೆಚ್ಚಿನ ಉಸಾಬರಿಯು ಆಕೆಗೆ ಬೇಕಾಗಿದ್ದಿಲ್ಲ. ಕಪಟಾಚರಣೆಯನ್ನಂತು ಆ ಸುಂದರಿಯು ಅರಿಯೇ ಅರಿಯಳು; ಆದ್ದರಿಂದ ಆ ನಿರ್ಮಲಾಂತಃಕರಣದ ತರುಣಿಯು ರಾಮರಾಜನ ವಿಷಯವಾಗಿ ಎಷ್ಟು ಶಂಕಿಸಿದರೂ, ಆತನು ಭೆಟ್ಟಿಯಾದಾಗೆಲ್ಲ ಆತನ ವಿಷಯದ ವಿಕಲ್ಪವನ್ನೆಲ್ಲ ಮರೆತು, ಅಕೃತ್ರಿಮ ಪ್ರೇಮದಿಂದ ಆತನನ್ನು ಆಲಿಂಗಿಸುವಳು. ಆತನ ಬಳಿಯಲ್ಲಿರುವ ತನಕ ಆಕೆಯು ಇಲ್ಲದ ವಿಕಲ್ಪಗಳನ್ನು ಒಡನುಡಿದಾಗ ಅವುಗಳಿಗೆಲ್ಲ ರಾಮರಾಜನು ಸಮಾಧಾನ ಹೇಳಲು, ಕೃತಜ್ಞತೆಯಿಂದ ಆತನನ್ನು ಪುನಃ ಕುಂಜವನದಿಂದ ಹೋಗಗೊಡುವಳು. ಮತ್ತೆಕೆಲವು ದಿನ ಆತನು ಬಾರದಾಗಲು, ಮತ್ತೆ ಆಕೆಯ ವಿಕಲ್ಪಕ್ಕೆ ಆರಂಭವಾಗುತ್ತಿತ್ತು. ಈ ಕ್ರಮವು ಮೇಹೇರ್ಜಾನಳ ಬಹುರೂಪವಾದ ವೇಳಾಪತ್ರಕದಂತೆ ಆಗಿ ಹೋಗಿತ್ತು. ಭಿಷ್ಟಿಭಾರಣಿಯ ಸರಳ ಮನಸ್ಸಿನವರ ಸ್ಥಿತಿಯು ಹೀಗೆಯೇ ಸರಿ.

ಹೀಗೆ ಕ್ರಮಿಸುತ್ತಿರಲು, ಒಂದು ದಿನ ಮೇಹೇರ್ಜಾನಳ ಮನಸ್ಸು ತೀರ ಖಿನ್ನವಾಯಿತು. ರಾಮರಾಜನು ಬಾರದೆ ಅಂದಿಗೆ ಎಂಟು ದಿನಗಳಾಗಿ ಹೋಗಿದ್ದವು. ಅಂದು ವಸಂತಕಾಲದ ಪೌರ್ಣಿಮೆಯಾದದ್ದರಿಂದ, ಚಂದ್ರಮನು ಷೋಡಶ ಕಲೆಗಳಿಂದ ಪೂರ್ಣನಾಗಿ ಉದಯ ಹೊಂದಿದನು. ಆ ನಿಶಾಕರನು ಮೇಲಕ್ಕೇರಿ ಒಟ್ಟು ಚಲ್ಲಿದ ಹಾಗೆ ಎಲ್ಲಕಡೆಗೆ ಬೆಳದಿಂಗಳು ಬೀಳಲು, ನಾಲ್ಕು ತಾಸು ರಾತ್ರಿಯು ಮಿರಿ ಐದನೆಯ ಅಮಲು ಆಯಿತು. ಆಗ ಮೇಹೇರ್ಜಾನಳು ಒಬ್ಬಳೇ ಮಂದಿರದಿಂದ ಹೊರಟು ಕುಂಜವನದೊಳಗಿನ ಪುಷ್ಕರಣಿಯ ಕಡೆಗೆ ಸಾಗಿದಳು. ತನ್ನನ್ನು ಹಿಂಬಾಲಿಸಿ ಬಾರದಂತೆ ಆಕೆಯು ಎಲ್ಲರಿಗೆ ಕಟ್ಟಪ್ಪಣೆ ಮಾಡಿದ್ದಳು. ಮಾರ್ಜೀನೆಗೆ ಕೂಡ ಅವಳ ಸಂಗಡ ಹೋಗಲಿಕ್ಕೆ ಧೈರ್ಯಸಾಲಲಿಲ್ಲ. ಮೇಹೇರ್ಜಾನಳು ಪುಷ್ಕರಣಿಗೆ ಹೋದಾಗ ಆ ಮನೋಹರವಾದ ಸರೋವರದ ಶೋಭೆಯು ವರ್ಣಿಸುವ ಹಾಗಿತ್ತು. ಆ ವಿಸ್ತೀರ್ಣವಾದ ಪುಷ್ಕರಣಿಯ ನಟ್ಟ ನಡುವೆ ಒಂದು ಧ್ವಜಸ್ತಂಭವಿದ್ದು ಸುತ್ತುಮುತ್ತು ಸಣ್ಣ-ದೊಡ್ಡ ಗಿಡಗಳ ನೆರಳು ದಟ್ಟವಾಗಿ ಬಿದ್ದಿತ್ತು. ಪುಷ್ಕರಣಿಯಲ್ಲಿ ನೈದಿಲೆಗಳು ಅರಳಿ ಅವು ಅಲ್ಲಿಯ ಸ್ವಚ್ಛವಾದ ಉದಕದಲ್ಲಿ ಪ್ರತಿಬಿಂಬಿಸಿದ್ದವು. ಗಾಳಿ ಸುಳಿದಾಡದ್ದರಿಂದ ಸುತ್ತಲಿನ ಗಿಡಗಳು ಮಿಸುಕುತ್ತಿದ್ದಿಲ್ಲ, ಪುಷ್ಕರಣಿಯಲ್ಲಿ ತೆರೆಗಳು ಉತ್ಪನ್ನವಾಗುತ್ತಿದ್ದಿಲ್ಲ, - ನಿರಭ್ರ

ವಾದ ಆಕಾಶದಲ್ಲಿ ಚಂದ್ರಮನೂ, ನಕ್ಷತ್ರಗಳೂ ಸ್ಥಳಬಿಟ್ಟು ಕದಲದೆ ಸುಮ್ಮನೆ ನಿಂತಲ್ಲಿ ನಿಂತಿರುವಂತೆ ತೋರುತ್ತಿತ್ತು! ಒಟ್ಟಿಗೆ ಮೇಹೇರ್ಜಾನ ಳಂಥ ಲೋಕೋತ್ತರ ಸುಂದರಿಯು ತನ್ನ ಭೀರುಸ್ವಭಾವವನ್ನು ಬದಿಗಿಟ್ಟು ದಿಟ್ಟತನದಿಂದ ಏಕಾಕಿಯಾಗಿ ಮಧ್ಯರಾತ್ರಿಯಲ್ಲಿ ಇಲ್ಲಿಗೆ ಯಾಕೆ ಬಂದಿರ ಬಹುದೆಂಬದನ್ನು ಬೆರಗಾಗಿ ನೋಡುತ್ತಿರುವಂತೆ, ಪುಷ್ಕರಣಿಯಲ್ಲಿಯೂ, ಅದರ ಸುತ್ತಲೂ, ಅದರ ಮೇಲ್ಗಡೆಯಲ್ಲಿಯೂ ಇರುವ ಚಲನವಲನದ ವಸ್ತುಗಳೆಲ್ಲ ಸ್ತಬ್ಧತೆಯನ್ನು ತಾಳಿದಂತೆ ಆಗಿತ್ತು. ಕುಂಜವನದೊಳಗಿನ ವಿವಿಧ ಪುಷ್ಪ ಗಳ ಸುಗಂಧವನ್ನು ಮಂದಮಾರುತನು ಹೊತ್ತೊಯ್ಯದ್ದರಿಂದ ಆ ಪ್ರದೇಶವು ವಿವಿಧ ಪುಷ್ಪಗಳ ಮಿಶ್ರಸುಗಂಧದಿಂದ ತುಂಬಿ ಸೂಸುತ್ತಿತ್ತು. ಆಗ ಚಂದ್ರ ಮಂಡಲವು ಪುಷ್ಕರಣಿಯಲ್ಲಿ ಸ್ವಚ್ಛವಾಗಿ ಪ್ರತಿಫಲಿಸಿ ಅದರ ಮನೋಹರತ್ವಕ್ಕೆ ಕಳೆಯೇರಿತ್ತು. ಇಂಥ ಮನೋಹರ ಪ್ರಸಂಗಗಳಿಂದ ಉಲ್ಲಸಿತಳಾದ ಆ ತರುಣಿಯು ಪುಷ್ಕರಣಿಯ ದಂಡೆಯಲ್ಲಿ ಕಟ್ಟಿದ್ದ ಕ್ರೀಡಾ ನೌಕೆಯನ್ನೇರಿ, ಬಿಚ್ಚಿ, ಬಡಬಡ ಹುಟ್ಟುಹಾಕುತ್ತ ನೌಕೆಯನ್ನು ಮಧ್ಯದ ಕಡೆಗೆ ಸಾಗಿಸಿದಳು. ಕ್ಷಣಮಾತ್ರದಲ್ಲಿ ನೌಕೆಯು ಧ್ವಜಸ್ತಂಭವನ್ನು ಮುಟ್ಟಿತು. ಆಗ ಮೇಹೇ ರ್ಜಾನಳು ನೌಕೆಯನ್ನು ಸ್ತಂಭಕ್ಕೆ ಕಟ್ಟಿ, ಆಕಾಶದಲ್ಲಿ ಲಕಲಕಿಸುತ್ತಿದ್ದ ಚಂದ್ರ ಬಿಂಬವನ್ನು ಕೌತುಕದಿಂದ ನೋಡಹತ್ತಿದಳು. ಆಗ ಆ ಸ್ವಚ್ಛಂದ ವೃತ್ತಿಯ ರಸಿಕ ತರುಣಿಯ ಹೃದಯವನ್ನು ರಾಮರಾಜನು ತಬ್ಬನೆ ಪ್ರವೇಶಿಸಲು, ಹಲವು ಮನೋರಮ ಕಲ್ಪನಾ ತರಂಗಗಳು ಆಕೆಯ ಹೃದಯದಲ್ಲಿ ಉತ್ಪನ್ನವಾಗಿ ಆಕೆಗೆ ವಿರಹದ ಭಾವನೆಯಾಗಹತ್ತಿತು. ಆಗ ಆಕೆಯು ಮಂಜುಲ ಸ್ವರದಿಂದ—

ರಾಗ—(ಭಾವ ಕಲ್ಯಾಣ)

ಹೇರಿ ಆಜ ಸಖೀರಿ ಮೇಕ್ಯಾಕಹು ಅಪನೇ ಜೀಯಾಕೀ ಬಾತ ।
ಹೇರೀ ಆಜ ॥
ಮೇರೇಮನ ಸಖೀ ಪ್ಯಾರೇಕೀ ಮುರತ, ಘಡಿಪಲ ಛೀನದೀನ ರಾತ ।
ಹೇರೀ ಆಜ ॥

ಎಂದು ಗಾಯನ ಮಾಡಿದ ಹಿಂದುಸ್ಥಾನಿ ಖ್ಯಾಲಿಯ ಸುಂದರ ತಾನು, ಬೆಳ ದಿಂಗಳಂತೆ ದಶದಿಕ್ಕುಗಳಲ್ಲಿ ಪಸರಿಸಿ, ನಾದಬ್ರಹ್ಮದ ಆನಂದದಿಂದ ಯಾವತ್ತು ಸೃಷ್ಟಿಯು ಡೋಲಾಯಮಾನವಾಗಹತ್ತಿತ್ತು!

ಈ ಮನೋಹರ ಪ್ರಸಂಗವನ್ನೆಲ್ಲ ಕಣ್ಮುಟ್ಟಿ ನೋಡಿ, ಮಧುರ ಗಾಯನ

ವನ್ನು ಕವಿಮುಟ್ಟಿ ಕೇಳಿ ಧನ್ಯತೆಯನ್ನು ಪಡೆದಿದ್ದ ಒಬ್ಬ ತರುಣನು, ಆ ಪುಷ್ಕರಣಿಯ ಪೂರ್ವದಂಡೆಯ ಮೇಲಿದ್ದ ಒಂದು ಅಶೋಕವೃಕ್ಷದ ಬುಡದಲ್ಲಿ ನಿಂತುಕೊಂಡು ಮೇಹೇರ್ಜಾನಳ ದಿವ್ಯಮೂರ್ತಿಯನ್ನು ಧ್ಯಾನಿಸಹತ್ತಿದ್ದನು. ಆನಂದದ ಭರದಲ್ಲಿ ಆತನ ಶರೀರವೂ ಡೋಲಾಯಮಾನವಾಗಹತ್ತಿತು. ಬರಬರುತ್ತ ಗಾನದ ತಲ್ಲೀನತೆಯಲ್ಲಿ ಆತನು ಜಯದೇವಕವಿಯದೊಂದು ಅಷ್ಟಪದಿಯನ್ನು ಸುಸ್ವರದಿಂದ ಗಾಯನಮಾಡಹತ್ತಿದನು.

ಸಭೃತನಿಕುಂಜಗೃಹಂ ಗತಯಾ ನಿಶಿರಹಸಿ ನಿಲೀಯ ವಸಂತಂ ॥
ಚಕಿತ ವಿಲೋಕಿತ ಸಕಲ ದಿಶಾರತಿ ರಭಸ ಭರೇಣ ಹಸಂತಂ ॥
ಸಖಿ ಹೇಕೇಶೀ ಮಧನಮುದಾರಂ ರಮಯ ಮಯಾಸಹ ॥
ಮದನ ಮನೋರಥ ಭಾವಿತಯಾ ಸವಿಕಾರಂ ॥ ಧೃಂ ॥

ಹೀಗೆ ಅಕಲ್ಪಿತವಾಗಿ ಕವಿಗೆ ಬಿದ್ದ ತರುಣನ ಗಾಯನವನ್ನು ಕೇಳಿದ ಕೂಡಲೆ ಮೇಹೇರ್ಜಾನಳು ಬೆದರಿದ ಚಿಗರಿಯಂತೆ ನಾಲ್ಕೂ ಕಡೆಗೆ ನೋಡಿದಳು. ಕೂಡಲೆ ಆಕೆಯು ಆನಂದದಿಂದ ಚಪ್ಪಾಳೆ ಬಾರಿಸಿ ಧ್ವಜಸ್ತಂಭಕ್ಕೆ ಕಟ್ಟಿದ್ದ ಕ್ರೀಡಾನೌಕೆಯನ್ನು ಬಿಚ್ಚಿ ಅದನ್ನು ಆ ತರುಣನ ಕಡೆಗೆ ಸಾಗಿಸಹತ್ತಿದಳು. ದಂಡೆಗೆ ಮುಟ್ಟುವ ವಿಷಯವಾಗಿ ಆಕೆಯು ಅತ್ಯಂತ ಆತುರಳಾಗಿದ್ದಳು. ನೌಕೆಯ ಹಂಗು ಇಲ್ಲದೆ ಭರ್ರನೆ ಹಾರಿ ದಂಡೆಗೆ ಹೋಗಲಿಕ್ಕೆ ಬರುವ ಹಾಗೆ ಆಕೆಗೆ ರೆಕ್ಕೆಗಳಿರುತ್ತಿದ್ದರೆ, ಆಕೆಯು ಆಗಲೇ ಹಾರಿಹೋಗುತ್ತಿದ್ದಳು! ಆದರೆ ಹಾಗೆ ನೂಡಲು ಶಕ್ಯವಿಲ್ಲದ್ದರಿಂದ ಆಕೆಯು ಅವಷ್ಟು ಬೇಗನೆ ನೌಕೆಯನ್ನು ನಡಿಸಲೇ ಬೇಕಾಯಿತು. ಹುಟ್ಟು ಹಾಕುವಾಗ ಆಕೆಯು ತನ್ನ ದೇಹದ ಶ್ರಮವನ್ನು ಲೆಕ್ಕಿಸಲಿಲ್ಲ. ಜೋಲಿ ಹೋಗಿ ಪುಷ್ಕರಣಿಯಲ್ಲಿ ಬಿದ್ದೆನೆಂಬದರ ಅರವು ಸಹ ಆಕೆಗೆ ಉಳಿಯಲಿಲ್ಲ. ಒಂದೆರಡು ಸಾರೆಯಂತು ನೌಕೆಯು ಹೊಯ್ದಾಡಲು, ಈ ಸುಂದರಿಯು ಜಲಸಮಾಧಿಯನ್ನು ಹೊಂದುವಳೋ ಏನೋ ಎಂಬ ಭಯವು ತರುಣನ ಮನಸ್ಸಿನಲ್ಲಿ ಉತ್ಪನ್ನವಾಯಿತು; ಆದರೆ ಕ್ರೀಡಾ ನೌಕೆಯನ್ನು ನಡಿಸುವ ವಿಷಯದಲ್ಲಿ ಮೇಹೇರ್ಜಾನಳು ಅತ್ಯಂತ ಚತುರಳಾದದ್ದರಿಂದ, ಅಂಥ ಅಪಘಾತವೇನು ಆಗದೆ, ನೌಕೆಯು ಸುರಕ್ಷಿತವಾಗಿ ದಂಡೆಗೆ ಬಂದು ಮುಟ್ಟಿತು. ನೌಕೆಯು ದಂಡೆಗೆ ಮುಟ್ಟುವ ಕೂಡಲೆ ಮೇಹೇರ್ಜಾನಳು ಕ್ರೀಡಾನೌಕೆಯಿಂದಲೇ ತರುಣನ ಕಡೆಗೆ ಸಾಗರ ಬಿದ್ದಳು. ಹೀಗೆ ಸಾಗರ ಬೀಳುವ ತರುಣಿಯನ್ನು ಎತ್ತಿಕೊಳ್ಳಲಿಕ್ಕೆ ತರುಣನು ಸಿದ್ಧನೇ ಇದ್ದನು. ಆತನು ತರುಣಿಯನ್ನು ಆತುರದಿಂದ ಎತ್ತಿಕೊಂಡು ಪ್ರೇಮ

ದಿಂದ ಚುಂಬಿಸಿದನು. ಅವರಿಬ್ಬರು ತರುಣರು ಒಬ್ಬರನ್ನೊಬ್ಬರು ಬಿಗಿಯಾಗಿ ಅಪ್ಪಿಕೊಂಡಾಗ ಆನಂದಾತಿಶಯದಿಂದ ಕೆಲವು ಹೊತ್ತಿನವರೆಗೆ ಮಾತಾಡಲು ಅವರು ಅಸಮರ್ಥರಾದರು. ಆಗ ಒಬ್ಬರನ್ನೊಬ್ಬರು ಮಾತಾಡಿಸಲು ಆತುರ ಪಡುತ್ತಿದ್ದರೂ ಅವರ ಕೋರಿಕೆಯು ಸಫಲವಾಗಲಿಲ್ಲ. ಕಡೆಗೆ ಆ ತರುಣನು ಮೇಹೇರ್ಜಾನಳನ್ನು ಕುರಿತು—

ತರುಣ—ನೀನು ಮಂದಿರದಲ್ಲಿಲ್ಲದ್ದರಿಂದ ಕುಂಜವನದಲ್ಲಿ ಹುಡುಕ ಬೇಕೆಂದು ನಾನು ಹೊರಗೆ ಬರುತ್ತಿರಲು, ನೀನು ಯಾರನ್ನೂ ಸಂಗಡ ಬರ ಗೊಡದೆ ಒಬ್ಬಳೇ ಪುಷ್ಕರಣಿಗೆ ಹೋಗಿರುವೆಯೆಂದು ಮಾರ್ಜೀನೆಯು ನನ್ನ ಮುಂದೆ ಹೇಳಿದಳು! ಪ್ರಿಯ ಮೇಹೇರ್ಜಾನ, ಹೀಗೆ ಅಪರಾತ್ರಿಯಲ್ಲಿ ನೀನು ಒಬ್ಬಳೇ ಪುಷ್ಕರಣಿಗೆ ಬಂದು ಧ್ವಜಸ್ತಂಭದವರೆಗೆ ನೌಕೆಯನ್ನು ಸಾಗಿಸಿಕೊಂಡು ಹೋಗಬಹುದೇ? ಮಾರ್ಜೀನೆಯು ಕೂಡ ಸಂಗಡಬಾರದಷ್ಟು ಮನುಷ್ಯರ ಬೇಸರವು ನಿನಗೆ ಯಾಕೆ ಆಯಿತು? ನಾನಂತು ಅಂಜುತ್ತಂಜುತ್ತಲೇ ಅಶೋಕ ವೃಕ್ಷದ ಬುಡದಲ್ಲಿ ಬಂದು ನಿಂತಿದ್ದೆನು! ಮೊದಲು ನಿನ್ನನ್ನು ನೋಡಿದ ಕೂಡಲೆ ನಾನು ಆಶ್ಚರ್ಯಮಗ್ನನಾದೆನು. ಅಹಹ! ಪ್ರಿಯೇ, ಮೇಹೇರ್ಜಾನ, ನಮ್ಮ ಕಾಳಿದಾಸಾದಿ ಕವಿಗಳು ಸ್ತ್ರೀಮುಖವನ್ನು ಕಮಲಕ್ಕೆ, ಹಾಗು ಚಂದ್ರನಿಗೆ ಹೋಲಿಸಿದ್ದೇನು ಆಟಕ್ಕಲ್ಲವೆಂಬದನ್ನು ನಾನು ಇಂದು ಮನಗಂಡೆನು! ಪುಷ್ಕರಣಿಯಲ್ಲಿ ಒಮ್ಮೆಲೆ ಮೂರು ಚಂದ್ರಗಳು ಎಲ್ಲಿಂದ ಬಂದವೆಂಬದು ನನಗೆ ತಿಳಿಯದಾಯಿತು. ಆಕಾಶದಲ್ಲಿಯೊಬ್ಬ, ಕ್ರೀಡಾ ನೌಕೆಯಲ್ಲಿಯೊಬ್ಬ, ಪುಷ್ಕರಣಿಯ ಜಲದಲ್ಲಿಯೊಬ್ಬ ಹೀಗೆ ಮೂವರು ಚಂದ್ರರು!! ಮುಂದೆ ನೀನು ಮಂಜುಳ ಗಾನದಿಂದ ನನ್ನ ಭ್ರಾಂತಿಯನ್ನು ದೂರಮಾಡದಿದ್ದರೆ, ನಾನು ಎಲ್ಲಿ ಭ್ರಮಿಷ್ಟನೇ ಆಗಿ ಹೋಗುತ್ತಿದ್ದೆನೋ ಏನೋ?

ಮೇಹೇರ್ಜಾನ—ಸಾಕು, ಏನಾದರೂ ಬಣ್ಣದ ಮಾತು ಆಡಿ ನನ್ನನ್ನು ರಮಿಸಬೇಡಿರಿ. ಈಗ ಎಂಟು ದಿನ ನನ್ನನ್ನು ಮರೆತದ್ದನ್ನು ಮುಚ್ಚಿಕೊಳ್ಳಲಿಕ್ಕೆ ಯತ್ನಿಸುವ ಹಾಗೆ ತೋರುತ್ತದೆ; ಆದರೆ ಇಂಥ ಯತ್ನಗಳಿಗೆ ನಾನು ಈಗ ಮೋಸಹೋಗುವ ಹಾಗಿಲ್ಲ.

ತರುಣ—ನಿನ್ನನ್ನು ಮೋಸಗೊಳಿಸಲಿಕ್ಕೆಯಾರು ಯತ್ನಿಸುವರು? ಪ್ರಿಯೆ, ಮೇಹೇರ್ಜಾನ, ನಿನ್ನನ್ನು ಮೋಸಗೊಳಿಸುವದಕ್ಕಾಗಿ ನಾನು ಏನಾದರೂ ಮಾತಾಡುತ್ತೇನೆನ್ನುವ ಹಾಗೆ ನಿನಗೆ ತೋರುತ್ತದೇನು? ಹೋದವರ್ಷ

ನಿನ್ನ ಬಳಿಗೆ ಆಗಾಗ್ಗೆ ಬರುತ್ತಿರುವ ಹಾಗೆ, ಈ ವರ್ಷ ನಾನು ಬಾರದಿರುವದಕ್ಕೆ ಕಾರಣವುಂಟು. ಹಿರಿಯರು ಇರುವ ತನಕ ಅವರ ಸಂಗಡ ಜೇರೆಜೇರೆ ಮುಸಲ್ಮಾನ ಬಾದಶಹರ ಬಳಿಗೆ ಹೋಗಿ ಅವರೊಡನೆ ಮಾಡುವ ಆಲೋಚನೆಗಳನ್ನು ಕೇಳುವದಷ್ಟೇ ನನ್ನ ಕೆಲಸವಾಗಿತ್ತು. ಈಗ ಹಿರಿಯರು ಸ್ವರ್ಗಸ್ಥರಾಗಿರುವದರಿಂದ ಅವರ ಕೆಲಸಗಳನ್ನು ನಾನು ಜವಾಬದಾರಿಯಿಂದ ಮಾಡಬೇಕಾಗಿದೆ. ಕೃಷ್ಣದೇವರಾಜರು ಚಿಟಿಗಿಗೊಮ್ಮೆ, ಮುಟಿಗಿಗೊಮ್ಮೆ ಕರಿಸಿ ಆಲೋಚನೆಗಳನ್ನು ಕೇಳುವರು. ಅವರು ನನಗೆ—ರಾಮರಾಜಾ, ನೀನು ತೀರ ತರುಣನಿರುವೆಯೆಂಬದೇನೋ ನಿಜ; ಆದರೆ ನಿನ್ನ ಹಿರಿಯರ ಕೈಯಲ್ಲಿ ನೀನು ನುರಿತವಸಿರುವದರಿಂದಾಗಲಿ, ಜಾತ್ಯಾ ನೀನು ಯೋಗ್ಯತೆಯವನೆಂಬ ಕಾರಣದಿಂದಾಗಲಿ ನಿನ್ನ ಹಿರಿಯರ ಮಂತ್ರಿಪದವನ್ನು ನಿನಗೆ ಕೊಡಬೇಕೆನ್ನುವ ಹಾಗೆ ನನಗೆ ಆಗಿರುತ್ತದೆ; ಆದರೆ ಮಂತ್ರಿಪದವನ್ನು ಕೊಡುವ ಮೊದಲು ಎರಡನೆಯದೇ ನನ್ನಾವರೂ ನಿನಗೆ ಕೊಡಬೇಕೆಂದು ಮಾಡಿರುವೆನು, ಎಂದು ಹೇಳಿದ್ದಾರೆ. ಹೀಗಿರಲು, ನಾನು ಎಂಟು ದಿನ ಬರಲಿಲ್ಲವೆಂಬದಿಷ್ಟೇ ಕಾರಣದಿಂದ ನೀನು ಹೀಗೆ ನಿಷ್ಕಾರಣವಾಗಬಹುದೋ?

ಮೇಹೇರ್ಜಾನ (ನಕ್ಕು)—ಇದರಲ್ಲಿ ನನ್ನ ನಿಷ್ಕಾರಣತನವೇನು? ಮನಸ್ಸಿನಲ್ಲಿ ಬಂದ ಮಾತನ್ನು ಸಭೆಯಿಂದ ಆಡಿ ತೋರಿಸಿದೆನು. ಅದಿರಲಿ, ಮಹಾರಾಜರು ನಿಮಗೆ ಎರಡನೆಯದೇನು ಕೊಡುವರು?

ಈ ಪ್ರಶ್ನೆಯ ಉತ್ತರವನ್ನು ಕೊಡಲಿಕ್ಕೆ ರಾಮರಾಜನಿಗೆ ಪ್ರಶಸ್ತವಾಗಿ ತೋರಲಿಲ್ಲ; ಯಾಕಂದರೆ, ಕೃಷ್ಣದೇವರಾಜನು ತನ್ನ ಮಗಳನ್ನು ಕೊಡುತ್ತಾನೆಂದು ಹೇಳಿದರೆ, ಆಕೆಗೆ ಸಮಾಧಾನವಾಗುವಂತೆ ಯಿದ್ದಿಲ್ಲ; ಆದ್ದರಿಂದ ಆತನು ಆ ಮಾತನ್ನು ಮರೆಸುವದಕ್ಕಾಗಿ

ರಾಮರಾಜ—ಮೇಹೇರ್ಜಾನ, ಹೀಗೆಯೇ ಅಶೋಕ ವೃಕ್ಷದ ಕೆಳಗೆ ಎಷ್ಟುಹೊತ್ತು ನಿಂತುಕೊಳ್ಳಬೇಕು? ಇನ್ನು ಮೇಲೆ ಮನೆಗೆ.....

ಮೇಹೇರ್ಜಾನ (ಮುಂದೆ ಮಾತಿಗೆ ಅವಕಾಶಕೊಡದೆ)—ಇಲ್ಲ, ಮನೆಗೆ ಹೋಗುವ ಹಾಗಿಲ್ಲ. ಇಂದಿನ ರಾತ್ರಿಯನ್ನೆಲ್ಲ ನಿಮ್ಮೊಡನೆ ಈ ಕ್ರೀಡಾ ನೌಕೆಯಲ್ಲಿ ಕುಳಿತು ಪುಷ್ಕರಣಿಯಲ್ಲಿಯೇ ವಿಹರಿಸಬೇಕೆಂಬ ಇಚ್ಛೆಯು ನನಗೆ ಆಗಿದೆ!

ರಾಮರಾಜ—ಬಹಳ ಸಂತೋಷ. ಆಗಲಿ, ಅದಕ್ಕೆ ಯಾರು ಜೇಡವೆನ್ನುತ್ತಾರೆ.

ಕೂಡಲೆ ರಾಮರಾಜನು ಕ್ರೀಡಾ ನೌಕೆಯನ್ನು ಜಗ್ಗಿಕೊಂಡು ತಾನು ಹತ್ತಿ, ಆಮೇಲೆ ಮೇಹೇರ್ಜಾನಳಿಗೆ ಆಸರಕೊಟ್ಟು ಆಕೆಯನ್ನು ಎತ್ತಿಕೊಂಡನು. ಕೂಡಲೆ ನೌಕೆಯನ್ನು ನಡಿಸಿ ಸರೋವರದ ಮಧ್ಯದಲ್ಲಿದ್ದ ಧ್ವಜಸ್ತಂಭದ ಬಳಿಗೆ ಒಯ್ದನು. ಆತನು ಧ್ವಜಸ್ತಂಭಕ್ಕೆ ನೌಕೆಯನ್ನು ಕಟ್ಟಿ ಮೇಹೇರ್ಜಾನಳ ಹೆಗಲ ಮೇಲೆ ಎರಡೂ ಕೈಗಳನ್ನಿಟ್ಟು—

ರಾಮರಾಜ—ನಿನ್ನ ಮನಸ್ಸಿನಂತೆ ಆಯಿತಷ್ಟೆ? ಆದರೆ ಇಂದು ಸಂಗಡ ಯಾರನ್ನೂ ಕರಕೊಳ್ಳದೆ, ಮಾರ್ಜ್ಯನೆಗೆ ಕೂಡ ನೀನು ಬರಬೇಡವೆಂದು ಬುದ್ಧಿ ಪೂರ್ವಕವಾಗಿ ಹೇಳಿ ಒಬ್ಬಳೆ ಪುಷ್ಕರಣಿಗೆ ಯಾಕೆ ಬಂದೆ? ಹೊತ್ತು ವೇಳೆ ಒಂದೇ ಸವನೆ ಇರುವದಿಲ್ಲ. ಏನಾದರೂ ಅಪಘಾತವಾದರೆ ಹ್ಯಾಗೆ ಮಾಡ ಬೇಕು?

ಮೇಹೇರ್ಜಾನ—ಎಲ್ಲಿಯ ಘಾತ, ಎಲ್ಲಿಯ ಅಪಘಾತ! ತಮ್ಮ ಕೃಪಾ ಛತ್ರವು ನನ್ನ ತಲೆಯ ಮೇಲೆ ಇರುವವರೆಗೆ ಆ ಘಾತಾಪಘಾತಗಳಿಂದ ಏನಾಗ ಬೇಕಾಗಿದೆ? ತಾವು ವಿಜಯನಗರಕ್ಕೆ ಹೋಗಿ ಇಂದಿಗೆ ಎಂಟು ದಿವಸವಾಯಿ ತೆಂಬ ವಿಚಾರವು ಇಂದು ಮುಂಜಾನೆ ನನ್ನ ಮನಸ್ಸಿನಲ್ಲಿ ಹೊಳಿದ ಕೂಡಲೆ ಜೀವಕ್ಕೆ ಹೇಗೆ ಹೇಗೋ ಆಯಿತು, ಸಮಾಧಾನವಾಗಲೊಲ್ಲದು! ಕಡೆಗೆ ಕುಂಜವನದಲ್ಲಿ ಒಬ್ಬಳೇ ಕುಳಿತುಕೊಳ್ಳಬೇಕೆಂದು ಹೋದೆನು. ಆದರೆ ಹಕ್ಕಿ ಗಳ ಕಿಲಿಬಿಲಿಯಿಂದ ಸಹ ನನ್ನ ಏಕಾಂತಕ್ಕೆ ಭಂಗವಾಯಿತು! ಅದರಿಂದ ಏಕಾಂತವನ್ನು ಬಯಿಸಿ, ಅಪರಾತ್ರಿಯ ಲಕ್ಷವಿಲ್ಲದೆಯಿಲ್ಲಿಗೆ ಬಂದು ಬಿಟ್ಟೆನು.

ರಾಮರಾಜ—ಶಾಬಾಸ! ಮೇಹೇರ, ನೀನು ಒಳ್ಳೆ ಮನಸ್ವಿಯು ಕಾಣುತ್ತೀ! ನಿನ್ನ ಮನಸ್ಸಿಗೆ ಅಷ್ಟು ಅಸಮಾಧಾನವಾಗಲಿಕ್ಕೆ ಕಾರಣವೇನು?

ಮೇಹೇರ್ಜಾನ—ಕಾರಣಗಳು ಒಂದೇ ಎರಡೇ ಎಷ್ಟೆಂತ ಹೇಳಲಿ? ನೀವು ಬಳಿಯಲ್ಲಿ ಎಂಟುದಿನ ಇಲ್ಲದಬಳಿಕ ದುಷ್ಟಕಲ್ಪನೆಗಳಿಗೇನು ಕೊರತೆಯು? ಇನ್ನು ಮೇಲೆ ನಿಮ್ಮ ಭೆಟ್ಟಿಯೇ ಆಗುವದಿಲ್ಲೆಂಬ ವಿಚಾರವು ಸಹ ನನ್ನ ಮನಸ್ಸಿ ನಲ್ಲಿ ಬಂದಿತ್ತು! ಅದರಲ್ಲಿ ಈಗಂತು.....

ಈ ಮೇರೆಗೆ ಅರ್ಧಮಾತಾಡಿ ಮೇಹೇರ್ಜಾನಳು ಲಜ್ಜೆಯಿಂದ ತಲೆಬಾಗಿ ಸಲು, ರಾಮರಾಜನು ಆಕೆಯನ್ನು ತಬ್ಬಿಕೊಂಡು ಆಲಿಂಗಿಸಿ ಗದ್ದ ಹಿಡಿದು ಮುಖವೆತ್ತಿ—"ಆದರಲ್ಲಿ ಈಗಂತು" ಎಂದು ಸುಮ್ಮನಾದೆಯಲ್ಲ? ಮೇಹೇರ, ಈಗೇನು ಆಯಿತು ಹೇಳು ಎಂದು ಕೇಳಲು, ಮೇಹೇರ್ಜಾನಳು "ಏನೂ ಇಲ್ಲೆಂ"ದು ಹೇಳಿ ಆ ವಿಷಯವನ್ನು ಮರೆಸಲಿಕ್ಕೆ ಯತ್ನಿಸಿ—ನೀವು ಬೇಕಾದದ್ದು

ಹೇಳಿರಿ ಇಂದು ನನ್ನ ಮನಸ್ಸಿನ ಸ್ಥಿತಿಯೇ ವಿಚಿತ್ರವಾಗಿದೆ. ನೌಕೆಯಲ್ಲಿ ನಾವಿಬ್ಬರು ಕುಳಿತು ನೌಕೆಯು ಮುಂದಕ್ಕೆ ಸಾಗಹತ್ತಿದ ಬಳಿಕ ನನ್ನ ಮನಸ್ಸಿನಲ್ಲಿ ಬಂದ ವಿಚಾರವನ್ನು ಹೇಳಿದರೆ ನಿಮಗೆ ನಗೆ ಬರಬಹುದು; ಅಥವಾ ಯಾರಿಗೆ ಗೊತ್ತು, ಸಿಟ್ಟೂ ಬರಬಹುದು.

ರಾಮರಾಜ—ಏನಂದಿ? ನಿನ್ನ ಮಾತಿಗೆ ನನಗೆ ಸಿಟ್ಟು ಬರಬಹುದೇ? ಮೇಹೇರ, ಈ ಜನ್ಮದಲ್ಲಿ ನಿನ್ನ ವಿಷಯವಾಗಿ ನನಗೆ ಎಂದೂ ಸಿಟ್ಟು ಬರಲಿಕ್ಕಿಲ್ಲ ನೀನು ಮಾತ್ರ ನನ್ನಮೇಲೆ ಯಾವಾಗ ಸಿಟ್ಟಾದಿ, ಯಾವಾಗ ದ್ವೇಷ ಮಾಡೀ ಎಂಬದನ್ನು ಹೇಳಲಾಗುವದಿಲ್ಲ! ಈ ವಿಚಾರವು ಮೇಲಿಂದ ಮೇಲೆ ನನ್ನ ಮನಸ್ಸಿನಲ್ಲಿ ಬಂದು ನನಗೆ ಅಂಜಿಕೆ ಬರುತ್ತದೆ!

ಮೇಹೇರ್ಜಾನ (ತಟ್ಟನೆ ಹಿಂದಕ್ಕೆ ಸರಿದು ರಾಮರಾಜನನ್ನು ದಿಟ್ಟಿಸಿ ನೋಡುತ್ತ)—ಏನು? ನಿಮ್ಮಮೇಲೆ ನನ್ನ ಸಿಟ್ಟೇ, ದ್ವೇಷವೇ? ಅವ್ವಯ್ಯಾ!! ಮಹಾರಾಜ, ಇಂಥ ವಿಚಾರಗಳು ನಿಮ್ಮ ಮನಸ್ಸಿನಲ್ಲಿಯಾದರೂ ಹ್ಯಾಗೆ ಬಂದವು? ನನ್ನ ನಡತೆಯಲ್ಲಿ ತಮಗೆ ಯಾವ ವ್ಯತ್ಯಾಸವು ತೋರಿತು!

ಹೀಗೆ ನುಡಿಯುವಾಗ ಮೇಹೇರ್ಜಾನಳ ಕಣ್ಣುಗಳು ಅಶ್ರುಪೂರ್ಣವಾದವು. ಆಕೆಯ ಕಂಠವು ಬಿಗಿದು ಮಾತುಗಳು ಹೊರಡದಾದವು. ಕಡೆಗೆ ಆ ಸರಲೆಯು ಅಳುವ ಮೋರೆಯಿಂದ ರಾಮರಾಜನನ್ನು ಕುರಿತು ತಟ್ಟನೆ—ಮಹಾರಾಜರೇ, ಪರಸ್ಪರರ ವಿಷಯವಾಗಿ ಇಂಥ ಕುವಿಚಾರಗಳು ಉತ್ಪನ್ನವಾಗುವ ಲಕ್ಷಣವು ಒಳ್ಳೆಯದಲ್ಲ. ಈ ದುರ್ಲಕ್ಷಣದ ದುಷ್ಪರಿಣಾಮವು ಒದಗಬಾರದಾಗಿದ್ದರೆ, ಈಗ ನನ್ನ ಮನಸ್ಸಿನಲ್ಲಿ ಬಂದ ವಿಚಾರದಂತೆ ಕಾರ್ಯವಾಗಬೇಕು, ಅಂದರೆ ನಿಶ್ಚಿಂತೆಯು! ಎಂದು ನುಡಿದಳು. ಆಗ ರಾಮರಾಜನು ಕೃತ್ರಿಮ ನಗೆಯಿಂದ—ಪ್ರಿಯೇ, ಮೇಹೇರ, ಹೇಳು ಹೇಳು; ಅದು ಹ್ಯಾಗೆ ನಿಶ್ಚಿಂತೆಯಾಗುವದು ತಟ್ಟನೆ ಹೇಳು, ಎಂದು ಆತುರಪಡಲು, ಮೇಹೇರ್ಜಾನಳು—ಮಹಾರಾಜ, ಹ್ಯಾಗೆಂಬದನ್ನು ಹೇಳುತ್ತೇನೆ ಕೇಳಿರಿ; ನಾವು ಈಗ ನೌಕೆಯಲ್ಲಿ ಕುಳಿತು ದಂಡೆಗೆ ಹೋಗುವಾಗ ಒಬ್ಬರನ್ನೊಬ್ಬರು ಬಿಗಿಯಾಗಿ ಅಪ್ಪಿಕೊಳ್ಳಬೇಕು. ಹೀಗೆ ಅಪ್ಪಿಕೊಂಡಿರುವಾಗಲೇ ನೌಕೆಯು ಮುಳುಗಿ ಪುಷ್ಕರಣಿಯ ತಳವನ್ನು ಮುಟ್ಟಬೇಕು, ಅಂದರೆ ನಿಶ್ಚಿಂತೆಯಾಗುವದು! ಅನ್ನಲು, ರಾಮರಾಜನ ಮುಖವು ನಿಸ್ತೇಜವಾಗಿ ಆತನ ಸರ್ವಾಂಗದಲ್ಲಿ ಕಂಪವು ಹುಟ್ಟಿತು!! ಪ್ರಿಯವಾಚಕರೇ, ಆ ತರುಣ ದಂಪತಿಗಳ ಮನಸ್ಸಿನ ಈ ಕುಭಾವನೆಗಳೇ ಅವರ ವಿನಾಶಾಂಕುರನ ಅಭಿವೃದ್ಧಿಗೆ ಕಾರಣವಾಗಿರಬಹುದೇನು?

೪ನೆಯ ಪ್ರಕರಣ—ಪ್ರಯಾಣ.

ರಾಮರಾಜನು ಶೂರನಿದ್ದನು; ಆದರೆ ಅಪಮೃತ್ಯುವೆಂಬ ಶಬ್ದವನ್ನು, ಅಥವಾ ಅದನ್ನು ಸೂಚಿಸುವ ಬೇರೆ ಶಬ್ದಗಳನ್ನು ಯಾರ ಮುಖದಿಂದಾದರೂ ಕೇಳಿದ ಕೂಡಲೆ ಆತನ ಎದೆಯು ಧಸಕೆನ್ನುತ್ತಿತ್ತು. ಆತನು ೬೫ ವರ್ಷದವನಾಗುವ ಮೊದಲೇ ಎರಡು ಯುದ್ಧಗಳಲ್ಲಿ ಪರಾಕ್ರಮವನ್ನು ತೋರಿಸಿ, ಮೃತ್ಯುವಿನ ಅತ್ಯಂತ ಉಗ್ರಸ್ವರೂಪವನ್ನು ಕಣ್ಣುಮುಟ್ಟಿ ನೋಡಿದ್ದನು; ಆದರೆ ಯುದ್ಧದ ಹೊರತು ಉಳಿದ ಅಪಘಾತದ ಮೃತ್ಯುವಿನ ಹೆಸರನ್ನು ಕೇಳಿದ ಕೂಡಲೆ ಆತನ ಸೊಂಡೆಯು ಒಣಗುತ್ತಿತ್ತು. ಆತನು ಒಳ್ಳೇ ಮಹತ್ವಾಕಾಂಕ್ಷಿಯಿದ್ದನೆಂದು ಮೇಲೆ ಹೇಳಿದೆಯಷ್ಟೆ? ಆತನು ತನ್ನ ಆಯುಷ್ಯವಲ್ಲಿ ಎಷ್ಟೊಂದು ಯುದ್ಧಗಳನ್ನು ಮಾಡಬೇಕು, ಎಷ್ಟೊಂದು ದೊಡ್ಡದೊಡ್ಡ ಪದವಿಗಳನ್ನು ಸಂಪಾದಿಸುತ್ತ ಹೋಗಬೇಕು ಎಂಬದನ್ನು ಕುರಿತು ಕಲ್ಪಿಸಿಪ್ಪನೆಂಬವನ್ನು ಮನಸ್ಸಿನಲ್ಲಿ ತಂದರೆ, ಆತನು ಅಪಘಾತದ ಮರಣಕ್ಕೆ ಇಷ್ಟು ಯಾಕೆ ಹೆದರುತ್ತಿದ್ದನೆಂಬುವ ಬಗ್ಗೆ ಯಾರಿಗಾದರೂ ಆಶ್ಚರ್ಯವಾಗಬಹುದಾಗಿದೆ. ಆದರೆ ಹೀಗೆ ಆಶ್ಚರ್ಯಪಡುವ ಕಾರಣವಿಲ್ಲ. "ಒಳ್ಳೆಯ ಕುದುರೆಗೊಂದು ಗೋಮುವೆ"ಬಂತೆ ಒಳ್ಳೆಯ ಜನರಲ್ಲಿ ಒಂದೊಂದು ಗೋಮುವಿರುವದುಂಟು.. ಅರ್ಜುನಕರ್ಣರೆಂಬ ಭಾರತೀಯ ಮಹಾಯೋಧರಲ್ಲಿಯೂ ಒಂದೊಂದು ಗೋಮುವಿತ್ತೆಂಬದನ್ನು ವಾಚಕರು ನೆನಪಿನಲ್ಲಿ ತಂದುಕೊಳ್ಳಬೇಕು. ಜರಿದಂತೆ ಅರ್ಜುನನ ಪರಾಕ್ರಮವೂ, ಹೊಗಳಿದಂತೆ ಕರ್ಣನ ಪರಾಕ್ರಮವೂ ಹೆಚ್ಚುತ್ತಿದ್ದವೆಂಬದನ್ನು ವಾಚಕರು ಅರಿತಿರಬಹುದು. ಇದರ ವಿರುದ್ಧಸ್ಥಿತಿಯೊದಗಿದಾಗ, ಅಂದರೆ ಅರ್ಜುನನು ಹೊಗಳಿದಾಗ, ಕರ್ಣನನ್ನು ಬೊಗಳಿದಾಗ ಅವರವರ ಪರಾಕ್ರಮಗಳು ಕುಗ್ಗುತ್ತಿದ್ದವು. ಅದರಂತೆ ರಾಮರಾಜನಲ್ಲಿಯಾದರೂ ಅಪಮೃತ್ಯುವಿನ ಭಯದ ಖೋಡಿಚಾಳಿಯೊಂದು ಇತ್ತು. ಮೇಹೇರ್ಜಾನಳು ಅಂದಂತೆ, ಈಗ ತಾನು ಪುಷ್ಕರಣಿಯಲ್ಲಿ ಮುಣುಗಿ ಹೋದರೆ ತನ್ನ ಮಹತ್ವಾಕಾಂಕ್ಷೆಯೆಲ್ಲ ವ್ಯರ್ಥವಾಗುವದೆಂಬ ವಿಚಾರದಿಂದ ಆ ತರುಣವೀರನು ಭಯಭೀತನಾದನು; ಆದರೂ ಆತನು ಅದನ್ನೇನು ಹೊರಗೆ ತೋರಗೊಡದೆ ಮೇಹೇರ್ಜಾನಳನ್ನು ಕುರಿತು—

ರಾಮರಾಜ—ಶಾಬಾಸ! ನಿನ್ನ ಇಚ್ಛೆಯು ವಿಲಕ್ಷಣವಾದದ್ದೆಂಬದರಲ್ಲೇನು ಸಂಶಯವಿಲ್ಲ: ಆದರೆ ಅದು ಪೂರ್ಣವಾಗಲಿಕ್ಕೆ ದೊಡ್ಡದೊಂದು ಪ್ರತಿಬಂಧವಿರುತ್ತದಲ್ಲ! ಆ ಪ್ರತಿಬಂಧವು ಹ್ಯಾಗೆ ದೂರವಾಗಬೇಕು?

ಮೆಹೇರ್ಜಾನ—ಅದೇನು ಪ್ರತಿಬಂಧ ?

ರಾಮರಾಜ—ಪ್ರತಿಬಂಧವಿಷ್ಟೆ, ನನಗೆ ಚನ್ನಾಗಿ ಈಸಲಿಕ್ಕೆ ಬರುತ್ತದೆ. ಇದಲ್ಲದೆ ದುರ್ಯೋಧನನ ಹಾಗೆ ನನಗೆ ಜಲಸ್ತಂಭನ ವಿದ್ಯೆಯು ಬರುವುದು. ಪಾತಾಳದವರೆಗೆ ಮುಣುಗಿದರೂ ನಾನು ತಿರುಗಿ ಮೇಲಕ್ಕೆ ಬರುವೆನಲ್ಲದೆ, ನಿನ್ನನ್ನು ಸಹ ಮುಣಗಗೊಡದೆ ಮೇಲಕ್ಕೆ ತರುವೆನು! ಮೇಹೇರ, ಹೀಗೆ ನಿನ್ನನ್ನು ಕಳಕೊಳ್ಳಬೇಕೆಂದು ನಾನು ಈ ಮೊದಲೆ ಹುಲಿಯ ಬಾಯೊಳಗಿಂದ ನಿನ್ನನ್ನು ಬಿಡಿಸಿಕೊಂಡು ಬಂದಿರುವೆನೋ ಏನು ?

ಇದನ್ನು ಕೇಳಿ ಸರಳ ಹೃದಯದ ಮೆಹೇರ್ಜಾನಳು ಮನಃಪೂರ್ವಕವಾಗಿ ನಕ್ಕಳು. ಆಕೆಯು ಪ್ರೇಮದಿಂದ ರಾಮರಾಜನನ್ನು ಕುರಿತು—

ಮೆಹೇರ್ಜಾನ— ಒಮ್ಮೆ ನನ್ನ ಜೀವವನ್ನು ಬದುಕಿಸಿದ್ದಕ್ಕಾಗಿ ನನ್ನ ದೇಹವನ್ನೇ ತಮಗೆ ಅರ್ಪಿಸಿರುವೆನು. ಇನ್ನೊಮ್ಮೆ ನನ್ನ ಜೀವವನ್ನು ಬದುಕಿಸಿದರೆ ತಮಗೆ ಕೊಡುವದಕ್ಕಾಗಿ ನನ್ನ ಬಳಿಯಲ್ಲಿ ಏನು ಉಳಿದಿದೆ ?

ರಾಮರಾಜ—ಏನೂ ಇಲ್ಲದಿದ್ದರೆ ಇಲ್ಲ; ನನ್ನಿಂದ ಏನಾದರೂ ಅಪರಾಧವಾದರೆ ಅದನ್ನು ಕ್ಷಮಿಸಲಿಕ್ಕೂ, ನನಗೇನಾದರೂ ಪ್ರಾಣಸಂಕಟ ಒದಗಿ ಬಂದಾಗ, ಶಕ್ಯವಿದ್ದರೆ ನನ್ನನ್ನು ಬದುಕಿಸಲಿಕ್ಕೂ ನನಗೆ ಬರುವದಿಲ್ಲೇನು ? ಅಷ್ಟು ಮಾಡಿದರೆ ಸಾಕು.

ಮೆಹೇರ್ಜಾನ (ಗಾಂಭೀರ್ಯದಿಂದ)—ಸರಿ ಸರಿ, ಇದೊಳ್ಳೆಯಮಾತು ತಾವು ತಪ್ಪು ಮಾಡುವದೂ ಬೇಡ, ನಾನು ಕ್ಷಮಿಸುವದೂ ಬೇಡ; ಅದರಂತೆ ತಾವು ಪ್ರಾಣಸಂಕಟಕ್ಕೆ ಗುರಿಯಾಗುವದೂ ಬೇಡ, ನಾನು ಬದುಕಿಸುವದೂ ಬೇಡ. ಸಾಕು, ಇನ್ನು ಈ ಮಾತುಗಳನ್ನೇ ಮರೆತು ಬಿಡೋಣ !

ರಾಮರಾಜ—ಹಾಗೇ ಆಗಲಿ! ಮೇಹೇರ, ನಾನು ಬೆಳಗಾದ ಕೂಡಲೆ ವಿಜಯನಗರಕ್ಕೆ ಹೋಗಬೇಕಾಗಿದೆ; ಹೀಗೆ ಎಷ್ಟು ಹೊತ್ತು ನೌಕೆಯಲ್ಲಿ ಕುಳಿತುಕೊಳ್ಳಬೇಕೆನ್ನುತ್ತೀ ?

ಮೆಹೇರ್ಜಾನ—ಏನು ? ಬೆಳಗಾದಕೂಡಲೇ ಹೋಗುವಿರಾ ! ಎಂಟು ದಿವಸ ದರ್ಶನವಿಲ್ಲದಿರುವಾಗ ಒಂದೆರಡು ದಿನವಾದರೂ ತಾವು ಇಲ್ಲಿ ಇರದಿದ್ದರೆ ನನಗೆ ಸಮಾಧಾನವಾಗಲಾರದು. ನಾನಂತು ನಾಳೆ ಹೋಗಗೊಡುವದಿಲ್ಲ !

ರಾಮರಾಜ—ಪ್ರಿಯೇ, ಮೇಹೇರ, ಕೃಷ್ಣದೇವರಾಜರು ನನ್ನನ್ನು ಯಾವಾಗ ಕರಿಸಿಯಾರು ಯಾವಾಗ ಕರಿಸಲಿಕ್ಕಿಲ್ಲೆಂಬದರ ನಿಯಮವಿಲ್ಲೆಂದು ನಾನು ಆಗಲೇ ನಿನಗೆ ಹೇಳಲಿಲ್ಲವೆ ?

ಮೇಹೇರ್ಜಾನ—ಹಾಗಿದ್ದರೆ ನನ್ನನ್ನು ಅಲ್ಲಿಗೇ ಕರಕೊಂಡುಹೋಗಿ ಬಿಡಿರಿ ; ಸುಮ್ಮನೆ ಎಡತಾಕುವದೇಕೆ? ಅಲ್ಲಾವುದ್ದೀನ ಬಾದಶಹನು ಉತ್ತರ ಹಿಂದುಸ್ತಾನದಲ್ಲಿ ರಜಪೂತ ಕನ್ನಿಕೆಯನ್ನು ತನ್ನ ಪಟ್ಟರಾಣಿಯಾಗಿ ಮಾಡಿಕೊಂಡಂತೆ, ತಾವು ನನ್ನನ್ನು ಪಟ್ಟರಾಣಿಯಾಗಿ ಮಾಡಿಕೊಂಡಿರುವಿರಷ್ಟೆ ?

ರಾಮರಾಜ—ಹೋ ಹೋ. ! ಮಾಡಿಕೊಂಡಿರುವೆನು. ಅದರಲ್ಲಿ ಸಂಶಯವೇನು ? ಆದರೆ ಕೃಷ್ಣದೇವರಾಯರ ಮನಸ್ಸು ನೋಡಿ ಅವರ ಒಪ್ಪಿಗೆಯನ್ನು ಪಡೆದ ಬಳಿಕ ಅದನ್ನು ಪ್ರಸಿದ್ಧಗೊಳಿಸಬೇಕಾಗಿದೆ. ಅಲ್ಲಿಯವರೆಗೆ ಪ್ರಸಿದ್ಧಮಾಡಿ ಪ್ರಯೋಜನವೇನು ?

ಸಂಭಾಷಣದ ಈ ವಿಷಯವು ರಾಮರಾಜನಿಗೆ ತೀರ ಅಪ್ರಿಯವಾಗಿದ್ದಂತೆ ತೋರಿತು. ಆತನು ತನ್ನ ಮಾತು ಮುಗಿದ ಕೂಡಲೆ ಮೇಹೇರ್ಜಾನಳನ್ನು ಕುರಿತು—ಮೇಹೇರ, ಇಂದಿನ ರಾತ್ರಿಯನ್ನು ಇಲ್ಲಿ ನೌಕೇಯಲ್ಲಿಯೇ ಕುಳಿತು ಕಳೆಯಬೇಕೆಂದು ನಿನ್ನ ಮನಸ್ಸಿನಲ್ಲಿದ್ದರೆ, ಅದಕ್ಕೆ ನನ್ನ ಪ್ರತಿಬಂಧವಿಲ್ಲ ; ಆದರೆ ಆಗಲೆ ಹಾಡಿದಂತೆ ಒಂದು ಸುಂದರ ಚೀಜನ್ನಾದರೂ ಹಾಡು ; ಇಲ್ಲವೆ ನಾನು ನಿನಗೆ ಕಲಿಸಿರುವ ಆ ಅಷ್ಟಪದಿಯನ್ನಾದರೂ ಅನ್ನು ; ಅಥವಾ ನಿಮ್ಮ ಆ ಪಾರಸೀ ಭಾಷೆಯೊಳಗಿನ ಒಂದು ಗಜ್ಜಲವನ್ನು ಅಂದರೂ ಚಿಂತೆಯಿಲ್ಲ ; ಆದರೆ ನಮ್ಮ ಅಷ್ಟಪದಿಯಲ್ಲಿರುವ ಸ್ವಾರಸ್ಯವೇನೂ ನಿಮ್ಮ ಗಜ್ಜಲದಲ್ಲಿ ಬರಲಾರದು, ಅನ್ನಲು, ಮೇಹೇರ್ಜಾನಳು ನಕ್ಕು—ಅವರದವರದು ಅವರವರಿಗೆ ಸ್ವಾರಸ್ಯವೆಂಬ ಮಾತು ಎಲ್ಲಕಡೆಗೂ ನಿಜವಾಗುತ್ತದೆಂದು ಹೇಳಲಿಕ್ಕಾಗುವದಿಲ್ಲ, ಎಂದು ನುಡಿದು, ಪತಿಯನ್ನು ಆಲಿಂಗಿಸಿ, ನೀವು ಕಲಿಸಿದ್ದಲ್ಲದೆ ನಾನೇ ಕಲಿತದ್ದೊಂದು ಅಷ್ಟಪದಿಯನ್ನು ಅನ್ನುವೆನು. ಎಂದು ಹೇಳಿ ಕೆಳಗೆ ಬರೆವ ಅಷ್ಟಪದಿಯನ್ನು ಅಂದಳು.

ನಿಂದತಿ ಚಂದನಮಿಂದುಕಿರಣಮನುವಿಂದತಿ ಖೇದಮಧಿರಮ್ ॥
ವ್ಯಾಲನಿಲಯಮಿಲನೇನ ಗರಲಮಿವ ಕಲಯತಿ ಮಲಯ
ಸಮೀರಮ್ ॥
ಮಾಧವಮನಸಿಜವಿಶಿಖಭಯಾದಿವ ಭಾವನಯಾ ತ್ವಯಿ ಲೀನಾ ।
ಸಾ ವಿರಹೆ ತವ ದೀನಾ ॥ಧೃ॥

ಮೇಹೇರ್ಜಾನಳ ಈ ಅಷ್ಟಪದಿಯ ಮಂಜುಲ ಗಾನಧ್ವನಿಯು ಕುಂಜವನದಲ್ಲಿ ಪುನಃ ತುಂಬಿಹೋಯಿತು ; ಆದರೆ ಅಪಘಾತಕ್ಕೆ ಹೆದರಿದ್ದ ರಾಮರಾಜನಿಗೆ ಅದರಿಂದ ಸುಖವಾಗಲಿಲ್ಲ. ತಾನು ಎಲ್ಲಿ ನೀರಲ್ಲಿ ಮುಣುಗಿಸುತ್ತೇನೋ

ಎಂಬ ಭಯದಿಂದ ಆತನು ಪುಷ್ಕರಣಿಯ ಮಧ್ಯದಲ್ಲಿ ನಿಲ್ಲಲಾರದೆ, ಧ್ವಜ ಸ್ತಂಭಕ್ಕೆ ಕಟ್ಟಿದ್ದ ನೌಕೆಯನ್ನು ಬಿಚ್ಚಿ ಅದನ್ನು ದಂಡೆಯ ಕಡೆಗೆ ಸಾಗಿಸಿದನು. ಗಾನಲೋಲುಪಳಾದ ಮೇಹೇರ್ಜಾನಳಿಗೆ ಇದು ಗೊತ್ತಾಗಲಿಲ್ಲ- ತಾನು ಹಿಡಿದಿದ್ದ ಹಸ್ತವನ್ನು ರಾಮರಾಜನು ಯಾವಾಗ ಬಿಡಿಸಿಕೊಂಡನೆಂಬದರ ಸ್ಮರಣವೂ ಆಕೆಗೆ ಉಳಿಯಲಿಲ್ಲ. ನೌಕೆಯು ದಂಡೆಗೆ ಹತ್ತಿದ ಕೂಡಲೆ ರಾಮರಾಜನು— ಪ್ರಿಯೇ, ಮೇಹೇರ, ಇನ್ನು ಇಲ್ಲಿಯ ಶೀತಹವೆಯು ನಿನಗೆ ತಡೆಯಲಿಕ್ಕಿಲ್ಲ. ನಡೆ, ಮಂದಿರಕ್ಕೆ ಹೋಗೋಣ, ಎಂದು ನುಡಿದು, ಒಂದು ಸಣ್ಣ ಹುಡುಗಿಯನ್ನು ಒತ್ತಾಯದಿಂದ ಕೈಹಿಡಿದು ಕರೆದೊಯ್ಯುವಂತೆ ಮಂದಿರದ ಕಡೆಗೆ ಆಕೆಯನ್ನು ಕರಕೊಂಡು ನಡೆದನು. ಕುಂಜವನವನ್ನು ಬಿಟ್ಟು ಬಂದು, ಮಂದಿರದ ಪಾವಟಿಗೆಗಳನ್ನು ಹತ್ತುವಾಗ ಮೇಹೇರಜಾನಳು ಕಣ್ಣೀರು ಸುರಿಸುತ್ತ ರಾಮರಾಜನನ್ನು ಬಿಗಿಯಾಗಿ ಅಪ್ಪಿಕೊಂಡು— ಪ್ರಿಯಕರಾ, ಯಾವ ಕಾರಣದಿಂದಲೋ ಅದನ್ನು ನಾನು ಹೇಳಲಾರೆನು ; ಆದರೆ ಈ ಕುಂಜವನದಿಂದ, ಹಾಗು ಪುಷ್ಕರಣಿಯಿಂದ ಒದಗಿದ ಇಂದಿನಂಥ ಸುಖವು ಇನ್ನು ತಿರುಗಿ ನನಗೆ ಲಭಿಸಲಾರದೆಂಬ ಹಾಗೆ ತೋರುತ್ತದೆ ; ಆದ್ದರಿಂದ ನಾವಿಬ್ಬರು ದಂಡೆಯಕಡೆಗೆ ಬರುತ್ತಿದ್ದಾಗ ಪುಷ್ಕರಣಿಯಲ್ಲಿ ಮುಣುಗಿ ಹೋಗಿದ್ದರೆ ಬಹಳ ನೆಟ್ಟಗಾಗುತ್ತಿತ್ತೆಂದು ನನ್ನ ಮನಸ್ಸಿನಲ್ಲಿ ಕಟಿಯಹತ್ತಿರುವದು, ಎಂದಳು. ಅದನ್ನು ಕೇಳಿದ ಕೂಡಲೆ ರಾಮರಾಜನ ಹೃದಯವು ಮತ್ತಿ ಕಂಪಿಸಹತ್ತಿತು. ಆತನ ಮನಸ್ಸಿಗೆ ಮೊದಲಿನಂತೆ ಹ್ಯಾಗೆ ಹ್ಯಾಗೋ ಆಗಹತ್ತಿತು. ತಾನು ಪುಷ್ಕರಣಿಯಿಂದ ಹೊರಟು ಮಂದಿರಕ್ಕೆ ಬಂದು ಮುಟ್ಟಿದ್ದನಷ್ಟೇ, ಎಂದು ಆತನು ಸ್ಮರಣಮಾಡಿಕೊಂಡನು. ಈ ಮಾತಿನ ನಂಬಿಗೆಯನ್ನು ಮಾಡಿಕೊಳ್ಳುವದಕ್ಕಾಗಿಯೋ ಏನ್ನುವಂತೆ ಆತನು ಸುತ್ತು ಮುತ್ತಲು ನೋಡಿ, ಕಾಲಬುಡದಲ್ಲಿಯ ಪಾವಟಿಗೆಗಳನ್ನು ನೋಡಿದನು. ಮನಸ್ಸಿನ ನಂಬಿಗೆಯಾದಮೇಲೆ ಆತನು ಮೇಹೇರಜಾನಳನ್ನು ಕುರಿತು—ನೀನು ಸಂಜೆಯಿಂದ ಇಷ್ಟು ಹೊತ್ತಿನವರೆಗೆ ಕುಂಜವನದಲ್ಲಿಯೂ, ಪುಷ್ಕರಣಿಯಲ್ಲಿಯೂ ಕಾಲಹರಣ ಮಾಡಿದ್ದರಿಂದ ನಿನ್ನ ಚಿತ್ತಕ್ಕೆ ಭ್ರಮೆಯಾದಂತೆ ತೋರುತ್ತದೆ. ಆದ್ದರಿಂದ ಶಯನಗೃಹಕ್ಕೆ ಹೋಗಿ ಸ್ವಸ್ಥವಾಗಿ ಮಲಗಿಕೊಳ್ಳು ನಡೆ, ಎಂದು ಹೇಳಿ ಆಕೆಯನ್ನು ಶಯನಗೃಹಕ್ಕೆ ಕರೆದೊಯ್ದು ಪಲ್ಲಂಗದ ಮೇಲೆ ಮಲಗಿಸಿ, ತಾನು ತಲೆಗಿಂಬಿಗೆ ಕುಳಿತುಕೊಂಡು ಆಕೆಯ ತಲೆಯನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡನು. ತನಗೆ ನಿದ್ದೆ ಹತ್ತಿದಬಳಿಕ ರಾಮರಾಜನು ಹೇಳದೆ ಕೇಳದೆ ವಿಜಯನಗರಕ್ಕೆ ಹೋಗಬಹುದೆಂದು ಶಂಕಿಸಿ, ಮೇಹೇರಜಾನಳು ರಾಮ

ರಾಜನ ಬಲಗೈಯ್ಯನ್ನು ತನ್ನ ಎರಡು ಕೈಗಳಿಂದ ಗಟ್ಟಿಯಾಗಿ ಹಿಡಕೊಂಡಳು. ನಿದ್ದೆ ಮಾಡಬಾರದೆಂಬ ನಿಶ್ಚಯದಿಂದ ಆಕೆಯು ಕಣ್ಣು ತೆರೆದು ಮಲಗಿಕೊಂಡಳು; ಆದರೆ ಆ ವಿಶಾಲಾಕ್ಷಿಯ ಮೇಲೆ ಸ್ವಲ್ಪ ಹೊತ್ತಿನಲ್ಲಿಯೇ ನಿದ್ದೆಯ ಅಮಲು ಕೂತು, ಆಕೆಯು ಕಣ್ಣುಗಳನ್ನು ಮುಚ್ಚಿ ಗಡದ್ದು ನಿದ್ದೆ ಮಾಡ ಹತ್ತಿದಳು. ಇದನ್ನು ನೋಡಿ ರಾಮರಾಜನಿಗೆ ಬಹಳ ಸಮಾಧಾನವಾಯಿತು. ಆತನು ಬೇಗನೆ ವಿಜಯನಗರಕ್ಕೆ ಹೋಗಬೇಕಾಗಿತ್ತು; ಆದ್ದರಿಂದ ಆತನು ಮೆಲ್ಲನೆ ತನ್ನ ಕೈಗಳನ್ನು ಬಿಡಿಸಿಕೊಂಡು, ಮೇಹೇರಜಾನಳು ಎಲ್ಲಿ ಎಚ್ಚರಿಯುವಳೋ, ಎಂಬ ಭಯದಿಂದ ಸ್ವಲ್ಪಹೊತ್ತು ಸುಮ್ಮನೆ ಕುಳಿತುಕೊಂಡನು. ಆಮೇಲೆ ತನ್ನ ತೊಡೆಯನ್ನು ಮೆಲ್ಲನೆ ಒಂದೊಂದೇ ಬೆರಳು ಹಿಂದಕ್ಕೆ ಸರಿಸಿಕೊಳ್ಳುತ್ತ, ಸ್ವಲ್ಪಹೊತ್ತು ಸುಮ್ಮನೆ ಕೂಡ್ರುತ್ತ ಕಡೆಗೆಯೊಮ್ಮೆ ಮೇಹೇರಜಾನಳ ತಲೆಯನ್ನು ಬಹು ಸೂಕ್ಷ್ಮವಾಗಿ ಎತ್ತಿ ತಲೆಗಿಂಬಿನ ಮೇಲೆ ಇಟ್ಟು ತನ್ನ ತೊಡೆಯನ್ನು ತಕ್ಕೊಂಡನು. ಮೇಹೇರಜಾನಳಿಗೆ ಎಚ್ಚರವಾಗದಿರುವದನ್ನು ನೋಡಿ ಆತನಿಗೆ ಬಹಳ ಸಮಾಧಾನವಾಯಿತು ಆತನು ಮತ್ತೆ ಕೆಲವು ಹೊತ್ತು ಸುಮ್ಮನೆ ಕುಳಿತುಕೊಂಡು ಮೇಹೇರಜಾನಳಿಗೆ ಎಚ್ಚರವಾಗದಿರುವದನ್ನು ಮನಗಂಡನು. ಆಮೇಲೆ ಆತನು ಮಂಚವನ್ನು ಇಳಿದು ಶಯನಗೃಹದಿಂದ ಹೊರಗೆ ಹೊರಟು ಪ್ರಯಾಣವನ್ನು ಬೆಳಿಸಿದವನಂತೆ ಮಾರ್ಜಿನೆಯ ಬಳಿಗೆ ಹೋದನು.

ಮೇಹೇರಜಾನಳ ಮೇಲೆ ತುಂಬಾ ವಾತ್ಸಲ್ಯವುಳ್ಳ ಮಾರ್ಜಿನೆಯು ಆಗ ಮತ್ತೊಂದು ಕೋಣೆಯಲ್ಲಿ ಏನೋ ಆಲೋಚಿಸುತ್ತ, ಕಣ್ಣಿಗೆ ಕಣ್ಣು ಹಚ್ಚದೆ ತನ್ನ ಹಾಸಿಗೆಯಮೇಲೆ ಹೊರಳಾಡುತ್ತ ಮಲಗಿಕೊಂಡಿದ್ದಳು. ರಾಮರಾಜನು ಅಕಸ್ಮಾತ್ತಾಗಿ ತನ್ನ ಬಳಿಗೆ ಬರುವದನ್ನು ನೋಡಿ ಆಕೆಯು ಚಟ್ಟನೆ ಎದ್ದು ನಿಂತು—ಇದೇನು ? ಮಹಾರಾಜರು ಇಷ್ಟರೊಳಗೆ ಮೇಹೇರಜಾನಳ ಬಳಿಯಿಂದ ಹೊರಟು ಯಾವಕಡೆಗೆ ಹೋಗುವದು ! ಮೇಹೇರಜಾನಳು ಮಹಾರಾಜರನ್ನು ಕಳಿಸಲಿಕ್ಕೆ ಬಾರದಿರುವದನ್ನು ನೋಡಿದರೆ, ಆಕೆ ನಿದ್ದೆ ಹತ್ತಿ ಮಲಗಿಕೊಂಡಹಾಗೆ ತೋರುತ್ತದೆ. ತರುಣಿಯರನ್ನು ವಂಚಿಸಿ ಹೀಗೆ ಹೋಗುವದು ಪುರುಷರಿಗೆ ಸಲ್ಲದು. ಮಹಾರಾಜರೇ, ಮೇಹೇರಜಾನಳು ಅಭಿಮಾನದ ಸ್ವಭಾವದವಳು. ಹೀಗೆ ತಾವು ಮೇಲೆ ಮೇಲೆ ಆಕೆಯನ್ನು ವಂಚಿಸಿ ಹೋಗುವದರಿಂದ ವಿಕಲ್ಪವನ್ನು ಎಣಿಸಿಯಾಳು. ಕಾರ್ಯನಿಮಿತ್ತವಾಗಿ ನಾಳೆ ಹೋಗಲೇ ಬೇಕಾಗಿರುವದೆಂದು ನೀವು ಹೇಳಿದರೆ, ಆಕೆಯು ಬೇಡೆನ್ನುವಳೋ ? ಮೇಹೇರಜಾನಳು ಇಂದಿನ ಇಡಿಯ ರಾತ್ರಿ ಕಣ್ಣಿಗೆ ಕಣ್ಣು ಹಚ್ಚಿ

ರುವದಿಲ್ಲ. ತಮ್ಮ ಎಂಟುದಿನದ ವಿಯೋಗದಿಂದ ಆಕೆ ಒಂದೇ ಸವನೆ ಚಡಪಡಿಸುತ್ತಿರುವಾಗ, ಇಂದು ತಮ್ಮ ದರ್ಶನವಾಗಿ ಆಕೆಗೆ ಸ್ವಲ್ಪ ಸಮಾಧಾನವಾಗಿದೆ. ಇಂಥ ಸ್ಥಿತಿಯಲ್ಲಿ ತಾವು ಗಾಯದಮೇಲೆ ಬರೆಕೊಟ್ಟಂತೆ ಮಾಡಿ ಆಕೆಯನ್ನು ವ್ಯಥೆ ಪಡಿಸಬಾರದು ಆಕೆಯ ಕೋಮಲ ಹೃದಯವನ್ನು ನಾನು ಪೂರಾ ಬಲ್ಲೆನು. ಆಕೆಯು ಬಹು ಸುಜನೆಯು, ಲಜ್ಜಾಶೀಲಳು. ಒಂದು ಗುಪ್ತವಾದ ಸಂಗತಿಯನ್ನು ನಿಮ್ಮ ಮುಂದೆ ಹೇಳಬೇಕು-ಹೇಳಬೇಕು ಎಂದು ಈಗ ಒಂದು ತಿಂಗಳಿಂದ ಆತುರಪಟ್ಟು, ಕಡೆಗೆ ಲಜ್ಜೆಯಮೂಲಕ ಅದನ್ನು ಹೇಳಲಾರದೆ ಸುಮ್ಮನೆ ಇರುತ್ತ ಬಂದಿರುವಳು. ಆ ಗುಪ್ತಸಂಗತಿಯನ್ನು ಆಕೆಯ ಮುಖದಿಂದ ಕೇಳಿದರೆ ನಿಮಗೆ ಬಹಳ ಆನಂದವಾದೀತು; ಆದ್ದರಿಂದ ತಾವು ವಿಜಯನಗರಕ್ಕೆ ಹೋಗಲಿಕ್ಕೆ ಇಷ್ಟು ತವಕಪಡಬೇಡಿ, ಬೆಳಗಾಗುವ ತನಕ ಮೇಹೇರಜಾನಳ ಬಳಿಯಲ್ಲಿದ್ದು, ಸ್ವಲ್ಪ ವಿಶ್ರಮಿಸಿ, ಆಮೇಲೆ ಆಕೆಯ ಅನುಮತಿಯಿಂದ ಬೇಕಾದಲ್ಲಿಗೆ ಹೋಗಬಹುದು, ಎಂದು ಹೇಳಿದಳು. ಇತ್ತಿತ್ತ ರಾಮರಾಜನು ತನ್ನೊಡನೆ ಸರಳತನದಿಂದ ನಡಕೊಳ್ಳದೆ ತನ್ನನ್ನು ಮೋಸಗೊಳಿಸುವನೆಂಬದು ಪ್ರೇಮಲ ಮೂರ್ತಿಯಾದ ಮೇಹೇರಜಾನಳಿಗೆ ಇಷ್ಟು ಸ್ಪಷ್ಟವಾಗಿ ಗೊತ್ತಾಗಿದ್ದರೂ, ಮಾರ್ಜನೆಯು ತನ್ನ ತೀಕ್ಷ್ಣ ಬುದ್ಧಿಯ ಯೋಗದಿಂದ ಅದನ್ನು ಸ್ಪಷ್ಟವಾಗಿ ಅರಿತು ಕೊಂಡಿದ್ದಳು; ಆದ್ದರಿಂದಲೇ ಆಕೆಯು ಹೀಗೆ ಸ್ಪಷ್ಟವಾಗಿ ಮಾತಾಡಿದಳು !

ರಾಮರಾಜನು ಮಾರ್ಜನೆಯ ಮಾತುಗಳನ್ನು ಕೇಳಿ ಸ್ವಲ್ಪ ಹೊತ್ತು ಸುಮ್ಮನಿದ್ದು ಆಮೇಲೆ ಆಕೆಯನ್ನು ಕುರಿತು—ಮಾರ್ಜನೇ, ನೀನು ವಿಲಕ್ಷಣ ಮನುಷ್ಯಳು ಕಾಣುತ್ತೀ. ನನಗೆ ಮೇಹೇರಜಾನಳು ಹೊರಗಿನವಳೇ ? ಪತಿಪತ್ನಿಯರ ಸಂಬಂಧವು ಬಿಡುವಹಾಗಿದೆಯೇ ? ಅಂದಬಳಿಕ ನಾನು ಮೇಹೇರಜಾನಳನ್ನು ಮೋಸಗೊಳಿಸಿದರೆ, ಅಥವಾ ಮೇಹೇರಜಾನಳು ನನ್ನನ್ನು ಮೋಸಗೊಳಿಸಿದರೆ ವಿಕಲ್ಪವನ್ನೆಣಿಸಬಹುದೆ ? ಅತಿವಾತ್ಸಲ್ಯದ ಮೂಲಕ ಮೇಹೇರಜಾನಳ ಮಾತನ್ನು ಮೀರುವದು ನನ್ನಿಂದಾಗುವದಿಲ್ಲ. ಕೆಲಸವು ಬಹು ಸೂಕ್ಷ್ಮವಿರುವದರಿಂದ ಮೇಹೇರಜಾನಳಿಗೆ ಹೇಳದೆ ನಾನು ಈಗ ವಿಜಯನಗರಕ್ಕೆ ಹೊರಟಿರುವೆನು. ಅದಿರಲಿ, ನೀನು ಈಗ ಗುಪ್ತವಾದ ಸಂಗತಿಯೆಂದು ಹೇಳಿದೆಯಲ್ಲ, ಅದು ಯಾವದೆಂಬದನ್ನು ನೀನು ಈಗ ಹೇಳಲೇಬೇಕು. ಆ ಸಂಗತಿಯನ್ನು ಕೇಳಿ ನನ್ನ ಮನಸ್ಸಿಗೆ ಆನಂದವಾದ ಪಕ್ಷದಲ್ಲಿ ನಾನು ನಾಳಿನ ದಿನ ಇಲ್ಲಿಯೇ ಮೇಹೇರಜಾನಳ ಬಳಿಯಲ್ಲಿರುವೆನು. ಹು, ಹೇಳು, ಗುಪ್ತಸಂಗತಿ ಯಾವದು ಹೇಳು.

ತಾನು ಹೇಳುವ ಗುಪ್ತಮಾತನ್ನು ಕೇಳಿ ರಾಮರಾಜನು ಸಂತೋಷಪಟ್ಟು ಈಗಲೇ ವಿಜಯನಗರಕ್ಕೆ ಹೋಗುವದನ್ನು ರಹಿತಮಾಡುವನೆಂದು ಮಾರ್ಜಿನೆಯು ತಿಳಿದಿದ್ದಳು. ಆಕೆಯು ರಾಮರಾಜನನ್ನು ಕುರಿತು ಲಜ್ಜೆಯಿಂದ—ಮಹಾರಾಜ, ಮೇಹೇರಜಾನಳು ಈಗ ನಾಲ್ಕು ತಿಂಗಳು ಗರ್ಭಿಣಿಯಿದ್ದಾಳೆ. ಆಕೆಗೆ ಒಂದೊಂದೇ ಬಯಕೆಗಳು ಆಗಹತ್ತಿರುವವು. ಆಕೆಯು ಈ ವರ್ತಮಾನವನ್ನು ತಾನೇ ಬಾಯಿಬಿಟ್ಟು ನಿಮ್ಮ ಮುಂದೆ ಹೇಳಲಾರದೆ, ನನಗೇ ಹೇಳಿಂದು ಹೇಳಿದ್ದಳು; ಆದರೆ ಒತ್ತಾಯದಿಂದ ಆಕೆಯ ಮುಖದಿಂದ ನೀವು ಕೇಳುವದರಿಂದ ನಿಮಗೆ ಬಹಳ ಸಂತೋಷವಾದೀತು. ಎಂದು ಹೇಳಿ, ರಾಮರಾಜನ ಭಾವವನ್ನ ತಿಳಿದುಕೊಳ್ಳುವದಕ್ಕಾಗಿ ಆತನ ಮುಖವನ್ನು ನೋಡಹತ್ತಿದಳು; ಆದರೆ ಈ ಸುದ್ದಿಯನ್ನು ಕೇಳಿ ರಾಮರಾಜನಿಗೆ ಸಂತೋಷವಾಗುವದರ ಬದಲು ಖೇದವಾವಂತೆ ತೋರಿತು ! ಆತನು ಉಪಚಾರಕ್ಕಾದರೂ ಒಂದು ಒಳ್ಳೆಯ ಮಾತಾಡದೆ, ಅರಗಿನ ಮುದ್ರೆಹಾಕಿದ ಎರಡು ಚೀಲಗಳನ್ನು ಮಾರ್ಜಿನೆಯ ಕೈಯಲ್ಲಿ ಕೊಟ್ಟು, ಇವನ್ನು ಮೇಹೇರಜಾನಳಿಗೆ ಕೊಡೆಂದು ಹೇಳಿ ಮಂದಿರದಿಂದ ಹೊರಬಿದ್ದನು. ಆತನಿಗೆ ಮಂತ್ರಿಪದವು ದೊರೆಯುವದಕ್ಕೂ, ಆತನು ಕೃಷ್ಣದೇವರಾಜರ ಅಳಿಯನಾಗುವದಕ್ಕೂ, ಮೇಹೇರಜಾನಳು ದೊಡ್ಡ ವಿಘ್ನವಾದದ್ದರಿಂದ, ಮೇಹೇರಜಾನಳೊಡನೆ ಆಕೆಯ ಗರ್ಭವೂ ಆತನಿಗೆ ಮತ್ತಿಷ್ಟು ದೊಡ್ಡ ವಿಘ್ನವಾಗಿ, ಅದು ಆತನ ಅಸಂತೋಷಕ್ಕೆ ಕಾರಣವಾಯಿತು. ಅದರಿಂದ ಕೇವಲ ಮಹತ್ವಾಕಾಂಕ್ಷೆಯಿಂದ ಅಂಧನಾದ ಆತನು ಒಬ್ಬ ಅನಾಥ ಅಬಲೆಗೆ ಕೊಟ್ಟ ವಚನವನ್ನು ಮರೆತು ಕೃತಘ್ನತೆಯಿಂದ ಕುದುರೆಯನ್ನು ಹತ್ತಿದನು. ಆಗ ಅತ್ತ ಮೇಹೇರಜಾನಳು ಕನಸಿನಲ್ಲಿ— ಮಹಾರಾಜರೇ, ಈದಿನ ನಾವಿಬ್ಬರೂ ಪುಷ್ಕರಣಿಯಲ್ಲಿ ಮುಣುಗಿ ಹೋದರೆ ನೆಟ್ಟಗಾದೀತು. ಎಂದು ಕನಕರಿಸುತ್ತಿರಲು, ಇತ್ತ ರಾಮರಾಜನು ಅದೇ ಅಪಘಾತದ ನೆನಪಿನಿಂದ ಭಯಗೊಳ್ಳುತ್ತ ಕುದುರೆಯನ್ನು ಮುಂದಕ್ಕೆ ನೂಕಿದನು.

ಮೆಹೇರಜಾನಳು ಸ್ವಪ್ನದಲ್ಲಿ ಹಲವು ಸಂಗತಿಗಳನ್ನು ನೋಡಹತ್ತಿದಳು. ಆಕೆ ಒಮ್ಮೆ ಕೈಗಳನ್ನು ಮೇಲಕ್ಕೆತ್ತಿ ಏನೋ ತೋರಿಸುವಂತೆ ಮಾಡುವಳು. ಒಮ್ಮೆ ಏನೋ ಒಟಗುಟ್ಟುವಳು, ಒಮ್ಮೆ ಆಕೆಯ ತುಟಿಗಳಷ್ಟೇ ಅಲ್ಲಾಡುವವು. ಒಮ್ಮೆ ಆಕೆಯು ಅತ್ತಹಾಗೆ ಮಾಡುವಳು, ಒಮ್ಮೆ ನಗುವಳು. ಹೀಗಾಗುತ್ತಾಗುತ್ತ ಆಕೆಯ ಮುಖದಲ್ಲಿ ಭಯದ ಚಿಹ್ನವು ತೋರಹತ್ತಿತು. ಆಕೆಯು ಪಲ್ಲಂಗದ ತುದಿಯನ್ನು ಗಟ್ಟಿಯಾಗಿ ಹಿಡಿಯಹತ್ತಿದಳು.

ಆಮೇಲೆ ಆಕೆಯು ಒಮ್ಮಿಂದೊಮ್ಮೆ ಚಿಟ್ಟು ಚಿಟ್ಟನೆ ಚೀರುತ್ತ ದೊಪ್ಪನೆ ಮುಂಚದ ಕೆಳಗೆ ಕಡಕೊಂಡು ಬಿದ್ದಳು. ಆಕೆ ಚೀರಿದ್ದು ಮಾರ್ಜಿನೆಯ ಕಿವಿಗೆ ಬೀಳಲು, ಆಕೆಯು ಗಾಬರಿಯಾಗಿ ಮೇಹೇರಜಾನಳ ಕೋಣೆಯೊಳಗೆ ಬಂದಳು. ಮಾರ್ಜಿನೆಯು ರಾಮರಾಜನನ್ನು ಅದೇ ಕಳಿಸಿ ಬರುತ್ತಿದ್ದಳು. ಆಕೆಯು ಪಲ್ಲಂಗದ ಕೆಳಗೆ ಅಸ್ತವ್ಯಸ್ತವಾಗಿ ಬಿದ್ದಿದ್ದ ಮೇಹೇರಜಾನಳನ್ನು ನೋಡಿ ವ್ಯಸನಪಟ್ಟು—"ಅಮ್ಮಾ, ಮೇಹೇರಜಾನ ಹೀಗೆ ಯಾಕೆ ಮಾಡುವೆಯಮ್ಮಾ'" ಎಂದು ಮೇಹೇರಜಾನಳನ್ನು ಹೆಸರುಗೊಂಡು ಕರೆಯುತ್ತ ಮಮತೆಯಿಂದ ಉಪಚರಿಸಹತ್ತಿದಳು. ಆಕೆಯು, ಒಳಿಯಲ್ಲಿರುವ ತಂಬಿಗೆಯೊಳಗಿನ ನೀರನ್ನು ನೆತ್ತಿಗೆ ತಟ್ಟಿ, ಕಣ್ಣಿಗೆ ಹಚ್ಚಿ ಮೇಹೇರಜಾನಳನ್ನು ಎಚ್ಚರಗೊಳಿಸುತ್ತಿದ್ದಳು. ಅಷ್ಟರಲ್ಲಿ ಮೇಹೇರಜಾನಳು ಮತ್ತೆ ಚಿಟ್ಟನೆ ಚೀರಿ "ಬೇಡಿರಿ, ಹೀಗೆ ನನ್ನನ್ನು ಕೊಲ್ಲ.....ಎಂದು ಒಟಗುಟ್ಟುತ್ತ ಮಾರ್ಜಿನೆಯನ್ನು ಕಸುವಿನಿಂದ ಅಪ್ಪಿಕೊಂಡಳು. ಸುಕುಮಾರಿಯಾದ ಮೇಹೇರಜಾನಳಿಗೆ ಇಷ್ಟು ಕಸವು ಎಲ್ಲಿಂದ ಬಂದಿರಬಹುದೆಂದು ಮಾರ್ಜಿನೆಗೆ ಆಶ್ಚರ್ಯವಾಯಿತು. ಆಕೆಯು ಮೆಹೇರಜಾನಳನ್ನು ಒಂದೇಸವನೆ ಹೆಸರುಗೊಂಡು ಕೂಗಿ ಎಚ್ಚರಗೊಳಿಸುತ್ತಿದ್ದಳು. ಮೇಹೇರಜಾನಳ ಮೇಲೆ ಮಾರ್ಜನೆಯ ಪ್ರೀತಿಯು ಎಷ್ಟಿತ್ತೆಂಬದನ್ನು ವಾಚಕರು ಬಲ್ಲರು. ಹೊಟ್ಟೆಯ ಮಗಳಂತೆ ಇದ್ದ ಮೇಹೇರಜಾನಳು ಹೀಗೆ ಮಾಡುವದನ್ನು ನೋಡಿ ಮಾರ್ಜಿನೆಯು ಬಹು ದುಃಖಿತಳಾದಳು. ಆಕೆಯ ಕಣ್ಣೊಳಗಿಂದ ಒಂದೇಸವನೆ ನೀರುಗಳು ಹೋಗಹತ್ತಿದವು. ಯಾವನೊಬ್ಬ ಸೇವಕನನ್ನು ಕರೆಯಬೇಕೆಂಬ ಎಚ್ಚರವು ಸಹ ಇಷ್ಟು ಹೊತ್ತಿನ ತನಕ ಆಕೆಗೆ ಆಗಿದ್ದಿಲ್ಲ. ಇನ್ನು ಮೇಹೇರಜಾನಳನ್ನು ಹ್ಯಾಗೆ ಎಚ್ಚರಗೊಳಿಸಬೇಕೆಂಬದು ತಿಳಿಯದ್ದರಿಂದ ಆಕೆಯು ಗಟ್ಟಿಯಾಗಿ "ಧನಮಲ್ಲ, ಧನಮಲ್ಲ'' ಎಂದು ಕೂಗಿದಳು. ಕೂಡಲೆ ಯಮದೂತನಂತೆ ಭಯಂಕರವಾಗಿ ತೋರುವ ಧನಮಲ್ಲನು ಎದುರಿಗೆ ಬಂದು ನಿಂತನು. ಆತನು ಮಾರ್ಜಿನೆಯನ್ನೂ, ಮೇಹೇರಜಾನಳನ್ನೂ ನೋಡಿ, ಯಾಕೆ ಕರೆದೆಯೆಂದು ಮಾರ್ಜಿನೆಯನ್ನು ಸನ್ನೆಮಾಡಿ ಕೇಳಿದನು. ಆಗ ಮಾರ್ಜಿನೆಯು—ಯಾಕೆ ಕರೆದೆಯೆಂದು ಏನು ಕೇಳುತ್ತೀ? ಕಣ್ಣಿಗೆ ಕಾಣುವದಿಲ್ಲವೆ? ಹಿಡಿ, ಇವರನ್ನು ಎತ್ತಿ ಪಲ್ಲಂಗದಮೇಲೆ ಮಲಗಿಸೋಣ. ನಿದ್ದೆಯಲ್ಲೇನು ಹೆದರಿದರೋ, ಕೆಟ್ಟ ಕನಸು ಬಿದ್ದಿತೋ ಏನಾಯಿತೋ ಯಾರಿಗೆ ಗೊತ್ತು. ಒಂದೇಸವನೆ ಚೀರುತ್ತಿರುವರು ಆಗಿನಿಂದ ಎಷ್ಟು ಒದರಿದರೂ ಎಚ್ಚರವಾಗಲೊಲ್ಲರು. ಇನ್ನು ಇವರನ್ನು ಪಲ್ಲಂಗದ ಮೇಲೆ ಮಲಗಿಸಿ ಹತ್ತರ ಕುಳಿತುಕೊಳ್ಳುತ್ತೇನೆ, ಅನ್ನಲು, ಧನ

ಮಲ್ಲನು ಮುಂದಕ್ಕೆ ಬಂದು ಮೇಹೇರಜಾನಳನ್ನು ಪಲ್ಲಂಗದ ಮೇಲೆ ಮಲಗಿಸುವದಕ್ಕಾಗಿ ಕೈಗಳನ್ನು ಮುಂದಕ್ಕೆ ಮಾಡಿದನು. ಆಗ ಮಾರ್ಜಿನೆಯು ಅವನನ್ನು ಕುರಿತು ತಿರಸ್ಕಾರದಿಂದ—ಜೋಕೆ, ನಿನ್ನ ಆ ಹುರಬರಕ ಕೈಯಿಂದ ಸಿಕ್ಕಹಾಗೆ ಎತ್ತಿ ಲಕ್ಷತನ ಮಾಡಬೇಡ. ಒಂದು ಗುಲಾಬಿಯ ಹೂವನ್ನು ಎತ್ತಿ ಇಡುವಂತೆ ಮೆಲ್ಲಗೆ ಎತ್ತಿ ಮಲಗಿಸು. ಹೂ! ಎತ್ತಿಕೋ, ನಾನು ತಲೆಯಕಡೆಗೆ ಹಿಡಿಯುತ್ತೇನೆ, ಅನ್ನಲು, ಧನಮಲ್ಲನು ಸಣ್ಣಿಯಿಂದ—ನೀವು ಏನೂ ಚಿಂತೆಮಾಡಬೇಡಿರಿ, ನಾನು ಎಲ್ಲ ಮಲಗಿಸುತ್ತೇನೆ. ನೀವು ಹಿಡಿಯ ಗಿಡಿಯ ಬೇಡಿರಿ, ನಾನು ಹೂವಿನಹಾಗೆ ಎತ್ತಿ ಮಲಗಿಸುತ್ತೇನೆ, ಎಂದು ಸೂಚಿಸಿ, ತಾನು ಸೂಚಿಸಿದಂತೆಯೇ ಮೇಹೇರಜಾನಳನ್ನು ಬಹು ಸೂಕ್ಷ್ಮವಾದ ಹೂವಿನಂತೆ ಎತ್ತಿ ಪಲ್ಲಂಗದಮೇಲೆ ಮಲಗಿಸಿದನು. ಆತನು ಮಲಗಿಸಿದ್ದೊಂದೇ ತಡ, ಮೇಹೇರಜಾನಳು ಚಿಟ್ಟನೆ ಚೀರಿ ಪಲ್ಲಂಗದ ಮೇಲೆ ಎದ್ದು ಕುಳಿತುಕೊಂಡಳು. ಆಗ ಆಕೆಯ ಎದುರಿನಲ್ಲಿ ಮಾರ್ಜಿನೆಯೂ, ಧನಮಲ್ಲನೂ ನಿಂತುಕೊಂಡಿದ್ದರು. ಆಕೆಯು ಗಾಬರಿಯಾಗಿ ಸುತ್ತು ಮುತ್ತು ನೋಡುತ್ತಿರಲು, ಮಾರ್ಜಿನೆಯು ಆಕೆಯನ್ನು ಕುರಿತು— ಅಮ್ಮಾ, ಮೇಹೇರಜಾನ, ಹೀಗೆ ಯಾಕೆ ಗಾಬರಿಯಾಗುತ್ತೀ? ಪೆದರಬೇಡಮ್ಮಾ, ಇತ್ತ ನೋಡು, ನಾನು ಇದ್ದೇನೆ-ಧನಮಲ್ಲನು ಇದ್ದಾನೆ. ಬೇಡವೆಂದರೆ ನಿನ್ನೆ ರಾತ್ರಿ ಕುಂಜವನದಲ್ಲಿಯ ಪುಷ್ಕರಣಿಗೆ ಹೋದೆ, ಅಲ್ಲಿ ನಿನಗೆ ಪಿಶಾಚಗಿಶಾಚಿಯ ಬಾಧೆಯು ತಟ್ಟಿತೋ ಏನೋ! ನೆಟ್ಟಗೆ ಎಚ್ಚತ್ತು ನೋಡು. ನಿನಗೆ ಕೆಟ್ಟ ಕನಸು ಬಿದ್ದಿತ್ತೋ ಏನು? ಎಂದು ಮಾತಾಡಿಸಲು, ಆ ಮಾತುಗಳು ಮೇಹೇರಜಾನಳಿಗೆ ಕೇಳಿಸಿದಂತೆ ತೋರಲಿಲ್ಲ. ಆಕೆಯು ನಡುವೇ ಮಾರ್ಜನೆಯನ್ನು ಕುರಿತು ಮಾರ್ಜಿನೇ, ನಾನು ಎಲ್ಲಿ ಇದ್ದೇನೆ? ಅವರು ಎತ್ತ ಹೋದರು? ಅವರು ನನ್ನನ್ನು ನಾಕೆಯೊಳಗಿಂದ ಪುಷ್ಕರಣಿಯಲ್ಲಿ ಎತ್ತಿ ಒಗೆದರು. ಇತ್ತ ನಿಂತವನು ಯಾವನಿವನು? ನನ್ನನ್ನು ಪುಷ್ಕರಣಿಯಲ್ಲಿ ಅವರು ಎತ್ತಿ ಒಗೆಯುವಾಗ ಅವರಹಿಂದೆ ಇವನೇ ನಿಂತಿದ್ದನೇನೇ ಮಾರ್ಜನೇ? ಇವನೇ ಇದ್ದನೆಂಬಂತೆ ಕಾಣುತ್ತದೆ. ಹೌದು ಇವನೇ.....

ಮೇಹೇರಜಾನಳು ಹೀಗೆ ಮಾತಾಡುವದನ್ನು ಕೇಳಿ ಮಾರ್ಜಿನೆಯು ಆಕೆಯ ಕುರುಳುಗಳನ್ನು ತೀಡಿ ಗಲ್ಲಗಳನ್ನು ಹಿಡಿದು—ಮೇಹೇರಜಾನ, ಹೀಗೆ ಯಾಕೆ ಹುಚ್ಚಿಯಹಾಗೆ ಮಾತಾಡುತ್ತೀ? ಈ ಪಲ್ಲಂಗದಮೇಲೆ ಮಲಗಿಕೊಂಡಿದ್ದನೀನು "ಮಹಾರಾಜರು ನನ್ನನ್ನು ಪುಷ್ಕರಣಿಯಲ್ಲಿ ಎತ್ತಿ ಒಗೆದರೆಂ"ದು ಹೇಳು

ತ್ತೀಯಲ್ಲ! ನಿನ್ನ ಸೇವಕನಾದ ಈ ಮೂಕ ಧನವಮಲ್ಲನು ಇಲ್ಲಿಯೇ ಇದ್ದಾನೆ, ಎಲ್ಲಿಯೂ ಹೋಗಿಲ್ಲ. ಇದೆಲ್ಲ ಭೂತಚೇಷ್ಟೆಯೆಂಬಂತೆ ನನಗೆ ತೋರುತ್ತದೆ. ನೀನು ಈಗ ನನ್ನ ಮಾತನ್ನು ಕೇಳಿ ಸ್ವಲ್ಪ ಹೊತ್ತು ಸುಮ್ಮನೆ ಮಲಗಿಕೊಂಡು ನಿದ್ದೆಮಾಡಬೇಕು ನೀನು ನಿದ್ದೆಮಾಡಿ ವಿಶ್ರಾಂತಿಯನ್ನು ಹೊಂದಿದ ಬಳಿಕ ನಿನಗೊಂದು ಜೀನಸನ್ನು ಕೊಡುವೆನು, ಎಂದು ಹೇಳಲು, ಮೇಹೇರಜಾನಳು—ಏನು ಹಾಗಾದರೆ? ನಾನು ನೋಡಿದ್ದೆಲ್ಲ ಸ್ವಪ್ನವೇ ಏನು? ನಾನು ನನ್ನ ಕೋಣೆಯಲ್ಲಿರುವದು ನಿಜವು; ಆದರೆ ಅವರು ಎತ್ತ ಹೋದರು? ಮಾರ್ಜಿನೇ, ಕಡೆಗೆ ಅವರು ನಿದ್ದೆಹತ್ತಿದಾಗ ನನ್ನ ಕೈಯೊಳಗಿಂದ ತಮ್ಮ ಕೈಯನ್ನು ಬಿಡಿಸಿಕೊಂಡು, ತಮ್ಮ ತೊಡೆಯ ಮೇಲಿಟ್ಟಿದ್ದ ನನ್ನ ತಲೆಯನ್ನು ತಲೆಗಿಂಬಿನ ಮೇಲಿಟ್ಟು, ಹೇಳದೆ ಹೊರಟು ಹೋದರಲ್ಲವೆ? ಮಾರ್ಜಿನೆ, ಈಗ ನನಗೆ ಏನೋ ಕೊಡುತ್ತೀನೆಂದು ಹೇಳಿದೆಯಲ್ಲ; ತಾ, ಎಲ್ಲಿ ಅದೆ ಅದು? ಹೇಳದೆ ಹೋದದ್ದಕ್ಕಾಗಿ ನಾನು ಅಸಮಾಧಾನಪಟ್ಟೀನೆಂದು ನನಗೆ ಕೊಡುವದಕ್ಕಾಗಿ ಮಹಾರಾಜರು ಪತ್ರವನ್ನು, ಇಲ್ಲವೆ ಯಾವದೊಂದು ಆಭರಣವನ್ನು ಕೊಟ್ಟಿರಬಹುದು! ಸಣ್ಣ ಹುಡುಗರನ್ನು ರಮಿಸಿದ ಹಾಗೆ ನನ್ನನ್ನು ರಮಿಸಿದರೆ ನಾನು ಕೇಳುವ ಹಾಗಿಲ್ಲ. ಗುಪ್ತಸುದ್ದಿಯನ್ನು ಅವರಿಗೆ ಹೇಳೆಂದು ನಾನು ನಿನಗೆ ಹೇಳಿದ್ದೆನಷ್ಟೆ? ಅವರ ಮುಂದೆ ಹೇಳಿದೆಯೇನು? ಎಂದು ಕೇಳಲು, ಮಾರ್ಜಿನೆಯು—ಹೇಳಿದೆನು, ಗುಪ್ತಸಂಗತಿಯನ್ನು ಮಹಾರಾಜರ ಮುಂದೆ ಹೇಳಿದೆನು; ಆದರೆ ಅವರು ನಿಲ್ಲಲಿಲ್ಲ. ಮೇಹೇರಜಾನ, ಮಹಾರಾಜರ ಆಗ್ರಹದ ಮುಂದೆ ನನ್ನ ಆಟವೇನು ನಡೆಯುವದು ಹೇಳು. ನೀನು ಅಂದಂತೆ ಮಹಾರಾಜರು ನಿನ್ನ ಸಮಾಧಾನಕ್ಕಾಗಿ ಪತ್ರವನ್ನು, ಅಥವಾ ಯಾವದೊಂದು ಅಲಂಕಾರವನ್ನು ಕೊಟ್ಟಿರಬಹುದು; ಆದರೆ ಈಗ ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೋ, ಆ ಮೇಲೆ ಮಹಾರಾಜರು ಕೊಟ್ಟಿರುವ ಮೊಹರು ಮಾಡಿದ ಎರಡು ಚೀಲಗಳನ್ನು ನಿನಗೆ ಕೊಡುವೆನು, ಎಂದು ಹೇಳಿದಳು.

ಮಹಾರಾಜರ ಮುಂದೆ ಗುಪ್ತಸಂಗತಿಯನ್ನು ಹೇಳಿದನೆಂದು ಮಾರ್ಜಿನೆಯು ನುಡಿಯಲು, ಅದನ್ನು ಕೇಳಿ ಮೇಹೇರಜಾನಳಿಗೆ ಮೊದಲು ಮನಸ್ಸಿನಲ್ಲಿ ಬಹಳ ಸಂತೋಷವಾಯಿತು; ಆದರೆ ಅವರು ನಿಲ್ಲದೆ ಹಾಗೇ ವಿಜಯನಗರಕ್ಕೆ ಹೋದದ್ದನ್ನು ಸ್ಮರಿಸಿ, ಆಕೆಯು ಅಸಮಾಧಾನದಿಂದ—ಮಾರ್ಜಿನೆ, ಆ ಮಾತನ್ನು ಕೇಳಿ ಮಹಾರಾಜರು ಏನು ಅಂದರು? ಅವರ ಮುಖಲಕ್ಷಣವು ಹ್ಯಾಗಾಯಿತು? ಅವರು ಎಷ್ಟು ಆನಂದಪಟ್ಟರು? ಇದನ್ನು ಹೇಳಬಾರದೇ? ಮೂಢೆಯ ಹಾಗೆ ಸುಮ್ಮನೆ ಯಾಕೆ ನಿಂತುಕೊಂಡೆ? ನಿನ್ನ ಮಾತನ್ನು ಕೇಳಿ

ಮಹಾರಾಜರಿಗೆ ಬಹಳ ಸಂತೋಷವಾಗಿರಬಹುದು. ಆ ಸಂತೋಷದ ಸುದ್ದಿಯನ್ನು ಕೇಳಿದ ಬಳಿಕ ನನ್ನನ್ನು ಕಾಣದೆ ಅವರು ಹೋಗತಕ್ಕವರಲ್ಲ; ಆದರೆ ಕೃಷ್ಣದೇವಮಹಾರಾಜರ ನೌಕರಿಯ ಮುಂದೆ ಅವರ ಆಟವೇನು ನಡೆಯುವದು? ನಾನು ಬಸುರಿದ್ದ ಸುದ್ದಿಯನ್ನು ಕೇಳಿದ ಬಳಿಕ ಅವರು ನನ್ನನ್ನು ಒಬ್ಬಳನ್ನೇ ಬಿಟ್ಟು ವಿಜಯನಗರದಲ್ಲಿ ಇರದೆ, ಇನ್ನು ಒಂದೆರಡು ದಿನಗಳಲ್ಲಿ ನನ್ನ ಬಳಿಗೆ ಬರಬಹುದು. ಮಾರ್ಜಿನೇ, ನಿನಗೆ ಹ್ಯಾಗೆ ಕಾಣಿಸಿತು ಹೇಳು, ಎಂದು ಕೇಳಿದಳು. ಆಗ ಮಾರ್ಜಿನೆಗೆ ಏನು ಉತ್ತರ ಕೊಡಬೇಕೆಂಬದು ತಿಳಿಯದೆ ಆಕೆಯು ಸುಮ್ಮನೆ ನಿಂತುಕೊಂಡಳು. ಅವನ್ನು ನೋಡಿ ಮೇಹೇರಜಾನಳು ಮತ್ತೆ ಆಕೆಯನ್ನು ಕುರಿತು—ಮಾರ್ಜಿನೆ, ಹೀಗೆ ಯಾಕೆ ದೆನ್ನ ಬಡಿದವರ ಹಾಗೆ ನಿಂತುಕೊಂಡೆ? ಮಾತಾಡಬಾರದೇ? ಮಹಾರಾಜರು ಕೊಟ್ಟ ಜೀನಸಾದರೂ ಯಾವದು ತೋರಿಸು, ಅನ್ನುತ್ತಿರಲು, ಆಕೆಯ ದೃಷ್ಟಿಯು ಧನಮಲ್ಲನ ಕಡೆಗೆ ತಿರುಗಿತು. ಆಗ ಆಕೆಯು ತಿರಸ್ಕಾರದಿಂದ ಅವನನ್ನು ಕುರಿತು—ನೀನು ಅತ್ತ ಹೋಗೋ! ಈ ಟೊಣಪನು ಇಲ್ಲಿ ಯಾಕೆ ಬಂದಿರುತ್ತಾನೆ, ನಡೆ ಅತ್ತ, ಎಂದು ಒಸಕ್ಕನೆ ಅವನ ಮೈ ಮೇಲೆ ಹೋಗಿ ನುಡಿಯಲು, ಧನಮಲ್ಲನು ವಿಲಕ್ಷಣ ಪ್ರಕಾರದಿಂದ ನಕ್ಕನು. ಆತನು ಗಟ್ಟಿಯಾಗಿ ನಗಲಿಲ್ಲ, ಸುಮ್ಮನೆ ನಗೆಯ ಝಳಕು ಮಾತ್ರ ಆತನ ಮೋರೆಯ ಮೇಲೆ ತೋರಿತು. ಆತನು ಮಹಾ ಮೂಢನಂತೆ ಮೇಹೇರಜಾನಳನ್ನು ನೋಡುತ್ತ ನಿಂತಲ್ಲಿ ಸುಮ್ಮನೆ ನಿಂತು, ಕೆಲವು ಹೊತ್ತಿನ ಮೇಲೆ ಅಲ್ಲಿಂದ ಹೊರಟು ಹೋದನು. ಆಗ ಮಾರ್ಜಿನೆಯು, ರಾಮರಾಜನು ಕೊಟ್ಟಿದ್ದ ಎರಡು ಥೈಲಿಗಳನ್ನು ಮೇಹೇರಜಾನಳ ಕೈಯಲ್ಲಿ ಕೊಡಲು, ಒಂದರಲ್ಲಿ ಒಂದು ಪತ್ರವೂ, ಮತ್ತೊಂದರಲ್ಲಿ ಒಂದು ಮುದ್ರೆಯ ಉಂಗುರವೂ ಇದ್ದವು. ಮೇಹೇರಜಾನಳು ಉತ್ಸುಕತೆಯಿಂದ ಪತ್ರವನ್ನು ಓದಲು, ಸಂತಾಪದಿಂದ ಆಕೆಯ ಮೈ ಮೇಲಿನ ಎಚ್ಚರವು ತಪ್ಪಿದಂತಾಯಿತು! ಈ ಸಂತಾಪವೇ ಮುಂದೆ ಆಕೆಯ ಪ್ರಯಾಣಕ್ಕೆ ಕಾರಣವಾಯಿತೆಂದು ಹೇಳಬಹುದು.

೫ನೆಯ ಪ್ರಕರಣ—ಸ್ತ್ರೀಸಾಹಸ.

ರಾಮರಾಜನು ಬರೆದಿದ್ದ ಪತ್ರವು ತೀರ ದೊಡ್ಡದೂ ಇದ್ದಿಲ್ಲ, ತೀರ ಸಣ್ಣದೂ ಇದ್ದಿಲ್ಲ. ಮೇಹೇರಜಾನಳು ಆ ಪತ್ರದ ಮೊದಲನೆಯ ವಾಕ್ಯವನ್ನು ಓದಿದ ಕೂಡಲೆ ಆಕೆಯ ಮೋರೆಯ ಲಕ್ಷಣವು ಹ್ಯಾಗೆ ಹ್ಯಾಗೋ ಆಯಿತು.

ಆಕೆಯ ನೇತ್ರಗಳು ವಿಸ್ತರಿಸಿದವು, ಆಕೆಗೆ ಉಸುರು ಕಟ್ಟಿದಹಾಗೆ ಆಗಹತ್ತಿತು, ಆಕೆಯ ಕೈಗಳು ಗದಗದ ನಡುಗಹತ್ತಿದವು, ಮೈ ಬೆವತಿತು, ತುಟಿಗಳು ಕಂಪಿಸ ಹತ್ತಿದವು. ಅರಕ್ಷಣದಲ್ಲಿ ಆಕೆಯ ಗಲ್ಲಗಳು ನಿಸ್ತೇಜವಾಗಿ ಅವುಗಳಲ್ಲಿಯ ಗುಲಾಬಿಬಣ್ಣದ ಹೊಳಪು ಅಡಗಿತು, ಇನ್ನೊಂದು ಕ್ಷಣದಲ್ಲಿ ಆಕೆಯ ಕಣ್ಣುಗಳು ನೀರಿನಿಂದ ತುಂಬಿದವು, ಮತ್ತೊಂದು ಕ್ಷಣದಲ್ಲಿ ಆಕೆಯ ಗಲ್ಲಗಳೂ ಕಿವಿಗಳೂ ಕೆಂಪಾದವು, ಮುಖದಲ್ಲಿ ಸಂತಾಪವು ವ್ಯಕ್ತವಾಗಹತ್ತಿತು, ಹುಬ್ಬುಗಳು ಅಕುಂಚಿತವಾದವು. ಆಕೆಯು ಅವಡುಗಚ್ಚಿ ಮನಸ್ಸಿನಲ್ಲಿ ಯಾವದೋ ಒಂದು ಮಾತಿನ ನಿಶ್ಚಯವನ್ನು ಮಾಡಿದ ಹಾಗೆ ತೋರಿತು. ಮುಖದಿಂದ ಹೊರಬೀಳಬೇಕೆಂದಿರುವ ಕೆಲವು ಉದ್ಗಾರಗಳನ್ನು ಆಕೆಯು ನಿಶ್ಚಯಪೂರ್ವಕವಾಗಿ ಬಿಗಿಹಿಡಿದಿರುವಳೆಂಬಂತೆ ಸ್ಪಷ್ಟವಾಗಿ ಕಾಣುತ್ತಿತ್ತು. ಹೊರಬೀಳುವ ಅಶ್ರುಗಳನ್ನು ನಿಲ್ಲಿಸಲಿಕ್ಕೂ, ದುಃಖದ ವೇಗವನ್ನು ತಡೆಯಲಿಕ್ಕೂ ಆಕೆಯು ಯತ್ನಿಸುತ್ತಿರುವ ಹಾಗೆ ಕಂಡಿತು. ಇದನ್ನೆಲ್ಲ ಮಾರ್ಜಿನೆಯು ನೋಡುತ್ತಿದ್ದಳು. ಮೊದಲು ಮೇಹೇರ್ಜಾನಳ ಮುಖಲಕ್ಷಣವನ್ನು ನೋಡಿದಾಗ ಆಕೆಯನ್ನು ಅನಕಾ ಏನೂ ಕೇಳಬಾರದೆಂದು ಮಾರ್ಜಿನೆಯು ನಿಶ್ಚಯಿಸಿದಳು. ಮುಂದೆ ಸ್ವಲ್ಪಹೊತ್ತಿನ ಮೇಲೆ ಆಕೆಯು ಧೈರ್ಯಮಾಡಿ ಏನೋ ಕೇಳಬೇಕೆಂದು ಹವಣಿಸಲು, ಮೇಹೇರಜಾನಳು ಮೂಗಿನ ಮೇಲೆ ಬೊಟ್ಟಿಟ್ಟು ಸುಮ್ಮನಿರೆಂದು ನಿರ್ಬಂಧಿಸಿದಳು. ಆ ಮೇಲಂತು ಮೇಹೇರಜಾನಳನ್ನು ಕೇಳಲಿಕ್ಕೆ ಮಾರ್ಜಿನೆಗೆ ಧೈರ್ಯವೇ ಆಗಲಿಲ್ಲ. ಈ ಮೊದಲೇ ಮೇಹೇರಜಾನಳನ್ನು ನೋಡಿದವರು ಆಕೆಯ ಈಗಿನ ಉಗ್ರಮೂರ್ತಿಯನ್ನು ನೋಡಿದ್ದರೆ, ಈಕೆಯು ಮೇಹೇರಜಾನಳೇ ಆಗಿರಬಹುದೇನೆಂಬ ಬಗ್ಗೆ ಅವರಿಗೆ ನಿಶ್ಚಯವಾಗಿ ಸಂಶಯ ಬರುವ ಹಾಗಿತ್ತು! ಆಕೆಯ ಸೌಮ್ಯಮುದ್ರೆಯು ಅಷ್ಟು ನಷ್ಟವಾಗಿ ಅದರ ಸ್ಥಳವನ್ನು ಉಗ್ರತೆಯು ವ್ಯಾಪಿಸಿತ್ತು. ರಾಮರಾಜನ ಪತ್ರವನ್ನು ಓದುವದಾದ ಮೇಲೆ ಮೇಹೇರಜಾನಳು ಬಹಳ ಹೊತ್ತಿನವರೆಗೆ ಅದನ್ನು ಎವೆಯಿಕ್ಕದೆ ನೋಡುತ್ತ ಸುಮ್ಮನೆ ಕುಳಿತುಕೊಂಡಳು. ಬಳಿಕ ಮತ್ತೊಂದು ಥೈಲಿಯಲ್ಲಿದ್ದ ಉಂಗುರವನ್ನು ದಿಟ್ಟಿಸಿ ನೋಡಿದಳು. ಆಮೇಲೆ ಮತ್ತೆ ಸ್ವಲ್ಪಹೊತ್ತು ವಿಚಾರಮಾಡಿ ಆಕೆಯು ತನ್ನ ಬಲಗೈಯ ಅನಾಮಿಕೆಯ ಬೆರಳಿನಲ್ಲಿ ಆ ಉಂಗುರವನ್ನು ಇಟ್ಟುಕೊಂಡು, ಸ್ವಲ್ಪ ತೀವ್ರವಾದ ಸ್ವರದಿಂದ ಮಾರ್ಜಿನೆಯನ್ನು ಕುರಿತು—ಮಾರ್ಜಿನೇ, ನೀನಾದರೂ ನನ್ನ ಮೇಲೆ ತಿರುಗಿಬೀಳದೆ ನನ್ನ ಸಂಗಡ ಬರುವೆಯಾ, ಎಂದು ಕೇಳಲು, ಆಶ್ಚರ್ಯಮಗ್ನಳಾದ ಮಾರ್ಜಿನೆಯು "ಎಲ್ಲಿಗೆ" ಎಂದು ಪ್ರಶ್ನೆಮಾಡಿದಳು. ಅದಕ್ಕೆ ಮೇಹೇರಜಾನಳ ಮುಖದಿಂದ "ಎಲ್ಲಿಯಾದರೂ ಜಗತ್ತಿನಲ್ಲಿ; ನಾನು ಹೋದತ್ತ" ಎಂಬ ಉತ್ತರವು ತಟ್ಟನೆ ಹೊರಟಿತು.

ಈ ಮೇರೆಗೆ ನುಡಿದು ಮೇಹೇರಜಾನಳು ನಿಟ್ಟುಸಿರುಬಿಡಲು, ಮಾರ್ಜಿನೆಯು ಏನೂ ತೋಚದೆ ಮೇಹೇರಜಾನಳನ್ನು ನೋಡುತ್ತ ಸುಮ್ಮನೆ ಕುಳಿತುಕೊಂಡಳು. ಇಂದು ತನ್ನ ಮೇಹೇರ್ಜಾನಳು ಹೀಗೆ ಯಾಕೆ ಮಾಡುವಳು, ಹೀಗೆ ಯಾಕೆ ಮಾತಾಡುವಳು, ಎಂಬದರ ಗೂಢವೇ ಆಕೆಗೆ ತಿಳಿಯದಾಯಿತು. ಮಾರ್ಜಿನೆಯು ಮೇಹೇರ್ಜಾನಳ ಸ್ವಭಾವವನ್ನು ಚಿಕ್ಕಂದಿನಿಂದ ಬಲ್ಲವಳು. ಸಣ್ಣವಳಿರುವಾಗ ಮೇಹೇರ್ಜಾನಳು ಬಹು ಹಟಮಾರಿಯೂ, ತಾಮಸಿಯೂ ಇದ್ದಳು. ಆಕೆಯು ಹನ್ನೆರಡು ವರ್ಷದವಳಾದ ಬಳಿಕ ಆಕೆಯ ಹಟಮಾರಿತನವು ಮೇಲೆ ಮೇಲೆ ವ್ಯಕ್ತವಾಗದೆ, ಯಾವಾಗಾದರೊಮ್ಮೆ ವ್ಯಕ್ತವಾಗುತ್ತಿತ್ತು. ಮುಂದೆ ಸ್ವಲ್ಪ ದಿನಗಳಲ್ಲಿ ಮೇಹೇರ್ಜಾನಳ ತಾಯಿಯು ತೀರಿಕೊಳ್ಳಲು, ಆ ಹಟಮಾರಿತನವೂ, ತಾಮಸ ಸ್ವಭಾವವೂ ತೀರ ಕಡಿಮೆಯಾದವು. ಚಿಕ್ಕಂದಿನಿಂದ ಮೇಹೇರ್ಜಾನಳು ಮಾರ್ಜನೆಯ ಬಳಿಯಲ್ಲಿಯೇ ಇಪ್ಪತ್ತು ನಾಲ್ಕು ತಾಸು ಇರುತ್ತಿದ್ದದ್ದರಿಂದ ಆಕೆಯ ಹಟಮಾರಿತನವನ್ನು ಮಾರ್ಜಿನೆಯು ಚೆನ್ನಾಗಿ ಅರಿತಿದ್ದಳು. ಮೇಹೇರಜಾನಳ ತಂದೆಯಾದ ಖಾನಜಮಾನ ಮಹಮೂದಖಾನನೆಂಬವನು ಗೋವಳಕೊಂಡದ ದರ್ಬಾರದಲ್ಲಿ ಒಬ್ಬ ಸರದಾರನಾಗಿದ್ದನು. ಮೇಹೇರಜಾನಳು ಬಹು ಲಾವಣ್ಯವತಿಯೂ, ಸದ್ಗುಣಿಯೂ ಆದದ್ದರಿಂದ, ಬಹುಜನ ತರುಣ ಸರದಾರರು ಆಕೆಯನ್ನು ಲಗ್ನವಾಗಲಿಚ್ಛಿಸಿ ಖಾನನನ್ನು ಕೇಳಿದ್ದರು; ಆದರೆ ಆತನು ಅಹಮ್ಮದ ನಗರದ ಬಾದಶಹನ ಮನೆತನದೊಡನೆ ಸಂಬಂಧಮಾಡಬೇಕೆಂಬ ಮಹತ್ವಾಕಾಂಕ್ಷೆಯಿಂದ ಮೇಹೇರಜಾನಳನ್ನು ಇಷ್ಟು ದಿನ ಲಗ್ನಮಾಡದೆ ಹಾಗೇ ಬಿಟ್ಟಿದ್ದನು. ಈ ಮಹತ್ವಾಕಾಂಕ್ಷೆಯ ಪರಿಣಾಮವು ಅನರ್ಥಕ್ಕೆ ಹ್ಯಾಗೆ ಕಾರಣವಾಯಿತೆಂಬದನ್ನು ವಾಚಕರಿಗೆ ಈಗ ಬರೆದು ತಿಳಿಸುವ ಕಾರಣವಿಲ್ಲ. ರಾಮರಾಜನು ಬೇಟೆಯಾಡಲಿಕ್ಕೆ ಹೋದಾಗ ಮೇಹೇರಜಾನಳನ್ನು ಅಪಹರಿಸಿದ ಸಂಗತಿಯು ಅವರಿಗೆ ಈ ಮೊದಲೇ ಗೊತ್ತಾಗಿರುತ್ತದೆ. ಹೀಗೆ ಮಾರ್ಜಿನೆಯು ಮೇಹೇರಜಾನಳ ಸ್ವಭಾವವನ್ನು ಪೂರಾ ಬಲ್ಲವಳಾದ್ದರಿಂದಲೇ ಆ ಸರದಾರ ಕುವರಿಯು ಸಂತಾಪಗೊಂಡಿರಲು, ಆಕೆಯ ವಿರುದ್ಧ ಮಾತಾಡುವ ಗೊಡವಿಗೆ ಆ ಜಾಣೆಯು ಹೋಗಲಿಲ್ಲ. ನಿಮಗೆ ಇಷ್ಟು ಸಿಟ್ಟು ಯಾಕೆ ಬಂದಿತು? ಪತ್ರದಲ್ಲಿ ಅಂಥ ಸಂಗತಿಯನ್ನೇನು ಬರೆದದೆ? ಎಂದು ಕೇಳುವ ಉಸಾಬರಿಗೂ ಆಕೆಯು ಹೋಗಲಿಲ್ಲ. ಈಗ ಮೇಹೇರಜಾನಳ ಮಾತಿಗೆ ಒಡಂಬಡುತ್ತ ಹೋಗಿ ಆಕೆಯು ಸ್ವಲ್ಪ ಶಾಂತಳಾದ ಮೇಲೆ ಹೇಳಕೇಳುವದನ್ನು ಮಾಡೋಣವೆಂದು ತಿಳಿದು, ಆ ದೂರದರ್ಶಿಯಾದ ಹೆಣ್ಣು ಮಗಳು ಮೇಹೇರಜಾನಳನ್ನು ಕುರಿತು—ಮೇಹೇರಜಾನ, ನಿನ್ನ ಮಾತಿಗೆ ನಾನು

ಹೊರಗಾದವಳೇ? ನಿಶ್ಚಯವಾಗಿ ನಿನ್ನ ಸಂಗಡ ಬರುವೆನು. ನೀನಿದ್ದಲ್ಲಿ ನಾನು, ಎಂದು ಹೇಳಿದಳು.

ಮಾರ್ಜಿನೆಯು ಹೀಗೆ ಒಡಂಬಟ್ಟಿದ್ದರಿಂದ ಮೇಹೇರಜಾನಳಿಗೆ ಸ್ವಲ್ಪ ಸಮಾಧಾನವಾಯಿತು. ಆದರೆ ಆಕೆಯ ನಿಶ್ಚಯವು ಮಾತ್ರ ಸ್ವಲ್ಪವೂ ಕಡಿಮೆಯಾಗಿದ್ದಿಲ್ಲ. ಆಕೆಯು ಮಾರ್ಜಿನೆಯನ್ನು ಕುರಿತು—ಮಾರ್ಜಿನೆ, ಬಂದುವಾದ ರಾಮರಾಜರನ್ನು ನಂಬಿ, ಅವಸರದಿಂದ ಲಗ್ನವಾಗಬೇಡೆಂದು ನೀನು ನನಗೆ ಹೇಳಿದ್ದರ ಅನುಭವವು ಈಗ ಬಂದಂತಾಯಿತು. ರಾಮರಾಜರ ಕೃತಘ್ನತೆಗೆ ಮೇರೆಯಿಲ್ಲದಾಯಿತು. ಮಾರ್ಜಿನೇ, ಈ ಪತ್ರದೊಳಗಿನ ಸಂಗತಿಯನ್ನು ನೆನಸಿದ ಕೂಡಲೆ ನನ್ನ ಸಂತಾಪವು ಹೆಚ್ಚಿತು, ಮೈಮೇಲಿನ ಎಚ್ಚರವು ತಪ್ಪುತ್ತದೆ. ರಾಮರಾಜರು ವಿಜಯನಗರದ ಮಂತ್ರಿಪದವನ್ನು ಹೊಂದುವದಕ್ಕಾಗಿ ಕೃಷ್ಣದೇವರಾಜನ ಮಗಳನ್ನು ಲಗ್ನವಾಗುವರಂತೆ! ಅಂದಬಳಿಕ ಪಟ್ಟರಾಣಿಯ ಮಾನವು ನನ್ನ ಪಾಲಿಗೆ ಎಲ್ಲಿ ಉಳಿಯಿತು? ಯವನಳಾದ ನನ್ನ ಪಾಣಿಗ್ರಹಣ ಮಾಡಿದ್ದರಿಂದ ರಾಮರಾಜರ ಉತ್ಕರ್ಷಕ್ಕೆ ತೊಂದರೆಯಾಗಿದೆಯಂತೆ! ತಮ್ಮ ವಿವಾಹವಾಗುವವರೆಗೆ ನಾನು ಏಕಾಂತವಾಗಿ ಇರಬೇಕಂತೆ. ಅಲ್ಲಿಯವರೆಗೆ ತಾವು ಕುಂಜವನಕ್ಕೆ ಬಾರದಿದ್ದರೂ ನಾನು ವಿಕಲ್ಪವನ್ನು ಎಣಿಸಬಾರದಂತೆ! ಸರಿ ಸರಿ! ಮಾರ್ಜಿನೇ, ಕಾಫರನಾದ ಈ ಹಿಂದುವಿನ ಕೃತಘ್ನತೆಯು ಆಗ ನನಗೆ ತಿಳಿಯಲಿಲ್ಲ. ನಿನ್ನ ಮಾತುಗಳನ್ನು ಮೀರಿ ನಾನು ರಾಮರಾಜರ ಕೈಹಿಡಿದದ್ದು ಮಹಾಪರಾಧವಾಯಿತು. ಆ ಅಪರಾಧದ ಪ್ರಾಯಶ್ಚಿತ್ತಕ್ಕಾಗಿಯೇ ಇಂದಿನಿಂದ ನಾನು ವಿಷಯಸುಖದ ಆಶೆಯನ್ನು ಬಿಟ್ಟುಬಿಡುವೆನು. ಇನ್ನು ಮೇಲೆ ನಾನು ರಾಮರಾಜರ ಮುಖಾವಲೋಕನವನ್ನು ಮಾಡಲಿಕ್ಕಿಲ್ಲ; ಈ ಕುಂಜವನದಲ್ಲಿ ನಿಂತು ನೀರುಕುಡಿಯಲಿಕ್ಕಿಲ್ಲ. ಪ್ರಸಂಗ ಒದಗಿದಾಗ ಇದರ ಸೇಡು ತೀರಿಸಿಕೊಂಡರೇ, ನಾನು ಪಠಾಣಜಾತಿಯಲ್ಲಿ ಹುಟ್ಟಿದವಳು. ಅನ್ನಲು, ಮಾರ್ಜಿನೆಯು—ಮೇಹೇರಜಾನ, "ಕೆಟ್ಟದ್ದನ್ನು ಅಟ್ಟವಳೇ ಜಾಣಳೆಂ"ಬಂತೆ, ಈಗ ಕೆಟ್ಟುಹೋಗಿರುವ ಕೆಲಸವನ್ನು ತಿದ್ದಿಕೊಳ್ಳುವದರಲ್ಲಿಯೇ ಜಾಣತನವುಂಟು. ಮೊದಲೇ ಅಡ್ಡಹಾದಿಗೆ ಹೋಗತಕ್ಕದ್ದಿದ್ದಿಲ್ಲ. ಹೋದಬಳಿಕ ಅದೇ ಹಾದಿಯ ಸಹಾಯದಿಂದ ಒಳ್ಳೆಯ ಹಾದಿಯನ್ನು ಹುಡುಕಿ ಇದ್ದದ್ದರಲ್ಲಿ ಹಿತಮಾಡಿಕೊಳ್ಳತಕ್ಕದ್ದು. ನೀನು ಪತಿಯೆಂದು ರಾಮರಾಜನ ಪಾಣಿಗ್ರಹಣ ಮಾಡಿರುತ್ತೀ. ಅಂದಬಳಿಕ ಪತಿದ್ರೋಹಕ್ಕೆ ಗುರಿಯಾಗುವದು ಪಾತಕವೇ ಸರಿ. ಯಾವದಾದರೂ ಒಂದು ದಂಡೆಯನ್ನು ಹೊಂದತಕ್ಕದ್ದು. ಆದ್ದರಿಂದ ಹ್ಯಾಗಿದ್ದರೂ ನೀನು ರಾಮ

ರಾಜನನ್ನು ಹೊಂದಿಕೊಂಡಿರುವದೇ ನೆಟ್ಟಗೆ ಕಾಣುತ್ತದೆ. ಇಲ್ಲದಿದ್ದರೆ ಇಬ್ಬರ ಅನರ್ಥಕ್ಕೂ ಕಾರಣವಾಗಬಹುದು. ಮಹಾರಾಜರು ಮಂತ್ರಿಪದವಿಯ ಮಹತ್ವಾಕಾಂಕ್ಷೆಯಿಂದ, ಕೆಲವು ದಿನ ಕುಂಜವನಕ್ಕೆ ಬಾರದಿದ್ದರೆ ತಪ್ಪೇನು? ಆಮೇಲೆ ಅವರು ನಿನ್ನನ್ನು ಪಟ್ಟರಾಣಿಯಾಗಿ ಮಾಡಿಕೊಳ್ಳಲಿಕ್ಕಿಲ್ಲೆಂದು ನೀನು ಯಾಕೆ ತಿಳಕೊಳ್ಳುತ್ತೀ? ಮೇಹೇರ, ಸ್ವಲ್ಪ ಶಾಂತಳಾಗು. ಯಾವದಕ್ಕಾದರೂ ಸ್ವಲ್ಪ ಕೂತು ಮಲಗಬೇಕು. ಮನಸ್ಸಿನಲ್ಲಿ ಏನಾದರೂ ಬಂದ ಕೂಡಲೆ ಹುರ್ರೆನ್ನುವದು ನೆಟ್ಟಗಲ್ಲ. ಅದರಿಂದ ಮುಂದೆ ಪಶ್ಚಾತ್ತಾಪಕ್ಕೆ ಗುರಿಯಾಗಬೇಕಾದೀತು. ನಿನ್ನ ಸಂಗಡ ಬರಲಾರದ್ದಕ್ಕೆ ನಾನು ಇಷ್ಟು ಮಾತಾಡುತ್ತೇನೆಂದು ನೀನು ತಿಳಿಯಬೇಡ. ಮೇಹೇರ, ನನ್ನದೇನು ಅಳುತ್ತದೆ ಹೇಳು; ಆದರೆ ಹಿಂದುಮುಂದುಯಿಲ್ಲದೆ ಅತಂತ್ರವಾಗಿರುವ ನಿನಗೆ, ಹಿತದ ಮಾತನ್ನು ಹೇಳುತ್ತೇನೆ. ಸ್ವಚ್ಛಂದ ವೃತ್ತಿಯಿಂದ ಕುಂಜವನದಿಂದ ಹೊರಟುಹೋಗುವದು ನಿನ್ನ ಶೀಲಕ್ಕೂ, ಮರ್ಯಾದೆಗೂ ಒಪ್ಪುವದಿಲ್ಲ. ಅತ್ತ ಮುಸಲ್ಮಾನರೂ ನಮ್ಮನ್ನು ನಿರಾಕರಿಸಬಹುದು; ಇತ್ತ ರಾಮರಾಜನ ಆಸರವೂ ತಪ್ಪುವದು; ಆದ್ದರಿಂದ ಈಗ ನೀನು ಸಂತಾಪದಲ್ಲಿ ಮಾಡಿರುವ ನಿಶ್ಚಯಕ್ಕೆ ಮಹತ್ವ ಕೊಡಬೇಡ. ಮುಂದೆ ಅಂಥ ಪ್ರಸಂಗ ಬಂದರೆ, ಈಗಿನ ನಿಶ್ಚಯದಂತೆ ಆಗ ನಡೆಯಲಿಕ್ಕೆ ಬಂದೀತು. ಇದರ ಮೇಲೆಯೂ ನಿನ್ನ ಆಗ್ರಹವು ಇದ್ದರೆ, ನಿನ್ನ ಬೆನ್ನಹತ್ತಿ ಬರಲಿಕ್ಕೆ ನಾನು ಸಿದ್ಧಳೇ ಇದ್ದೇನೆ. ಮೇಹೇರ, ಇನ್ನು ನನ್ನದೇನಾಗಬೇಕಾಗಿದೆ? ನಿನ್ನ ಸಲುವಾಗಿ ನಾನು ಪ್ರಾಣವನ್ನಾದರೂ ಕೊಡಲಿಕ್ಕೆ ಸಿದ್ಧಳಿರುವೆನು.

ಮಾರ್ಜಿನೆಯ ಈ ಮಾತುಗಳನ್ನು ಕೇಳಿ ಮೇಹೇರಜಾನಳಿಗೆ ಸ್ವಲ್ಪ ಸಮಾಧಾನವಾಯಿತು; ಆದರೆ ತಾನು ಗರ್ಭಿಣಿಯಿದ್ದೇನೆಂಬ ಸುದ್ದಿಯನ್ನು ಕೇಳಿ ರಾಮರಾಜನು ತನ್ನನ್ನು ಭೆಟ್ಟಿಯಾಗದೆ ಹಾಗೇ ಹೋದದ್ದನ್ನೂ, ಪತ್ರದಲ್ಲಿ ತನ್ನ ಸಲುವಾಗಿ ತೋರಿಸಿದ ಅನಾದರವನ್ನೂ ಸ್ಮರಿಸಿ, ಪುನಃ ಆಕೆಯು ಸಂತಾಪಗೊಂಡು ಮಾರ್ಜಿನೆಯನ್ನು ಕುರಿತು—ಮಾರ್ಜಿನೇ, ನೀನು ಹೇಳುವದೆಲ್ಲ ನಿಜವು; ಆದರೆ ಅಪಮಾನಕ್ಕಿಂತ ಮರಣವೇ ಶ್ರೇಯಸ್ಕರವೆಂದು ತಿಳಿಯುಪ ಅಭಿಮಾನಿಗಳಿಗೆ, ನಿನ್ನ ಬೋಧದಿಂದ ಏನು ಪ್ರಯೋಜನವಾಗುವದು ಹೇಳು? ಈಗ ಒಂದು ತಾಸಿನ ಹಿಂದೆ ಇದ್ದ ಮೇಹೇರಜಾನಳು ಈಗ ಇರುತ್ತಾಳೆಂದು ತಿಳಿಯಬೇಡ. ಆಗ ಆಕೆಯು ಹಿಂದುವಿದ್ದಳು. ಈಗ ಆಕೆಯು ಸುಟ್ಟು ಬೂದಿಯಾಗಿ ಹೋದಳು. ಈಗಿನ ಮೇಹೇರಜಾನಳು ಮುಸಲ್ಮಾನಳಲ್ಲದುತ್ತಾಳೆ. ಆಕೆಯು ತನ್ನ ಜ್ಞಾತಿಗಳಾದ ಮುಸಲ್ಮಾನರಂತೆ ರಾಮರಾಜನ ಸಂಗಡ ದ್ವೇಷ

ಮಾಡುವವಳೇ ಸರಿ. ಆಕೆಯು ತಾನು ಬದುಕಿರುವವರೆಗೆ ರಾಮರಾಜನ ಸೇಡು ತೀರಿಸಿಕೊಳ್ಳಲಿಕ್ಕೆ ಯತ್ನಿಸುವವಳೇ ಸರಿ. ಮೇಹೇರಜಾನಳು ತನ್ನ ತನುಮನೋಧನಗಳನ್ನು ರಾಮರಾಜನಿಗೆ ನಿರ್ವಂಚನೆಯಿಂದ ಒಪ್ಪಿಸಿದ್ದಳು; ಆದರೆ ಆತನು ಈಗ ಅವನ್ನು ನಿರಾಕರಿಸಿ ಚಲ್ಲಿಕೊಡುವದರಿಂದ ಅವು ಕೊಳೆತು ವಿಕಾರವನ್ನು ಹೊಂದಿ, ರಾಮರಾಜನಿಗೆ ಬಾಧಕವಾದರೆ ಯಾರೇನು ಮಾಡ ಬೇಕು? ಮಾರ್ಜಿನೇ, ಬಹಳ ಮಾತುಗಳಿಂದೇನು? ಖಾನಜಮಾನ ಮಹ ಮೂದಖಾನನ ಮಗಳಾದ ಈ ಮೇಹೇರಜಾನಳಿಗೆ ಅಪಮಾನವು ಸಹನವಾಗದು. ಆಕೆಯು ಇಂದಿನಿಂದ ಎಲ್ಲ ಆಶೆಗಳನ್ನು ತೊರೆದಿರುವಳು. ರಾಮರಾಜನ ಸೇಡು ತೀರಿಸಿಕೊಳ್ಳುವದೊಂದು ಆಶೆಯು ಮಾತ್ರ ಆಕೆಗಿರುತ್ತದೆ. ರಾಮರಾಜನ ಹಂಗು ನನಗೆ ಇನ್ನು ಬೇಡ. ಆತನದೊಂದು ರಿಂಬಿಯನ್ನಾದರೂ ನಾನು ಮುಟ್ಟುವದಿಲ್ಲ. ಆತನ ವಸ್ತ್ರಬೇಡ, ವಸ್ತ್ರಗಳು ಬೇಡ; ಮುಡ್ಡು ಬೇಡ, ಧೂಪಬೇಡ. ನಡೆ, ಇಲ್ಲಿಂದ ಹೊರಟು ಎಲ್ಲಿಗಾದರೂ ಹೋಗೋಣ. ನನ್ನ ತಂದೆ ಕೊಟ್ಟಿರುವ ಕೆಲವು ಆಭರಣಗಳು ನಮ್ಮ ಬಳಿಯಲ್ಲಿರುವವಷ್ಟೆ? ಅವನ್ನು ಮುರಿಸಿ ಹ್ಯಾಗಾದರೂ ಕಾಲಹರಣ ಮಾಡೋಣ. ರಾಮರಾಜನು ಈಗ ನನ್ನ ಉದರದಲ್ಲಿ ಬಿತ್ತಿರುವ ವಿಷದ ಬೀಜವು ದೊಡ್ಡ ವೃಕ್ಷವಾಗಿ, ಅದರ ಫಲಗಳ ಸೇವನದಿಂದ ಆ ರಾಮರಾಜನು ಸಮೂಲ ನಾಶಹೊಂದುವ ಹಾದಿಯನ್ನು ನೋಡೋಣ. ಇದರಮೇಲೆಯೂ ನೀನು ವ್ಯರ್ಥವಾಗಿ ನನ್ನನ್ನು ಬೋಧಿಸಿ ಕಾಲಹರಣ ಮಾಡಿದರೆ, ನನ್ನಜೀವವು ನನ್ನ ಕೈಯೊಳಗಿರುತ್ತದೆ. ಆಮೇಲೆ ನಿನ್ನ ಹಂಗಾದರೂ ಏನು? ಮೇಹೇರಜಾನಳ ನಿಶ್ಚಯದಲ್ಲಿ ಇನ್ನು ಅಂತರ ವಾಗಲಾರದು. ನಿನ್ನ ಹಳಿಯ ಬಟ್ಟೆಬರಿಗಳನ್ನೂ, ಬುರುಕೆಯನ್ನೂ ನನಗೆ ಕೊಡು. ಅವನ್ನು ಹಾಕಿಕೊಂಡು ಇಲ್ಲಿಂದ ಹ್ಯಾಗಾದರೂ ಮಾಡಿ ಪಾರಾಗಿ ಹೋಗೋಣ. ಹ್ಯಾಗೂ ನನ್ನ ಸುಖವು ಮಣ್ಣುಗೂಡಿ ಹೋಯಿತು. ಇನ್ನು ಮೇಲೆ ದುಷ್ಟ ಹಿಂದುಗಳಿಂದ ನನ್ನಂಥ ಯವನ ತರುಣಿಯರ ಸುಖವು ಮಣ್ಣು ಗೂಡದಂತೆ ಯತ್ನಿಸುವಾಗ ನನ್ನ ದೇಹವೂ ಮಣ್ಣಾದರೆ, ಒಂದು ಬಗೆಯ ಪರೋಪಕಾರವಾದರೂ ಘಟಿಸಿದಂತಾಗುವದು!

ಮಾರ್ಜಿನೆಗಾದರೂ ಮೇಹೇರಜಾನಳ ಮಾತು ತೀರ ಅಯೋಗ್ಯವಾಗಿ ತೋರಲಿಲ್ಲ. ರಾಮರಾಜನು ತನ್ನ ಯೋಗ್ಯಬೋಧಕ್ಕೆ ಕಿವಿಗೊಡದೆ ವಿಷಯ ಲಂಪಟನಾಗಿ ಸಿಕ್ಕಹಾಗೆ ವಚನಕೊಟ್ಟು, ಲಗ್ನವಾಗಿ ಈಗ ಮೇಹೇರಜಾನಳನ್ನು ಉದಾಸೀನ ಮಾಡಿದ್ದಕ್ಕಾಗಿ ಮಾರ್ಜಿನೆಗೂ ಸಂತಾಪವಾಗಿತ್ತು. ಅಯೋಗ್ಯ ನಡತೆಗಾಗಿ ಸರಳಮನಸ್ಸಿನವರಿಗಾಗುವ ಸಂತಾಪ ಭರವು ಕುಹಕರಿಗೆ ಗೊತ್ತಾ

ಗದು. ಮೇಹೇರಜಾನಳು ಸಂಸಾರಗೇಡಾಗಬಾರದೆಂದು ಮಾರ್ಜಿನೆಯು ಮೊದವೊದಲು ಸಾಮ್ಯವಾರ್ಗವನ್ನು ಹಿಡಿಯುವವಕ್ಕಾಗಿ ಆಕೆಯನ್ನು ಬೋಧಿಸಿದಳು; ಆದರೆ ಮಹಾ ಅಭಿಮಾನಿಯಾದ ಮೇಹೇರಜಾನಳು ತನ್ನ ಸುಖ ಸರ್ವಸ್ವದ ಮೇಲೆ ಪ್ರತಿಜ್ಞೆಯ ಭಾಷೆಯಿಂದ ಎಳ್ಳು ನೀರು ಬಿಟ್ಟದ್ದನ್ನು ನೋಡಿ ಗತ್ಯಂತರಕಾಣದೆ ಮಾರ್ಜಿನೆಯೂ ಸ್ವಕುಲಾಭಿಮಾನವನ್ನು ತಾಳಿದಳು. ಹಿಂದೂಜನರಿಂದ ಮುಸಲ್ಮಾನರಿಗಾಗುತ್ತಿದ್ದ ತ್ರಾಸವನ್ನು ನೆನಿಸಲು ರಾಮರಾಜನಂಥ ಅಯೋಗ್ಯ ಹಿಂದುಗಳ ಶಾಸನವಾಗುವದು ಅನ್ಯಾಯವಲ್ಲೆಂಬ ಭಾವನೆಯು ಆಕೆಯಲ್ಲಿ ಉತ್ಪನ್ನವಾಯಿತು. ಆದರೂ ಆಕೆಯು ಮೇಹೇರಜಾನಳನ್ನು ಕುರಿತು—ಮೇಹೇರ, ನಿನ್ನ ಮಾತು ಅಯೋಗ್ಯವೆಂದು ನಾನು ಹೇಳುವದಿಲ್ಲ; ಆದರೆ ದಂಪತಿಗಳೆನಿಸಿಕೊಳ್ಳುವವರಿಗೆ ಈ ನಡತೆಯು ಒಪ್ಪದು. ಅವರು ಪರಸ್ಪರರ ಅಪರಾಧಗಳನ್ನು ಕ್ಷಮಿಸಿ ಪ್ರೇಮಕ್ಕೆ ಭಂಗಬಾರದಂತೆ ನಡೆದುಕೊಳ್ಳುವದೇ ಯೋಗ್ಯವು. ನಿನ್ನ ಈಗಿನ ಪ್ರತಿಜ್ಞೆಯ ಪರಿಣಾಮವು ಯಾರಿಗೂ ಸುಖಪ್ರದವಾಗುವದಿಲ್ಲ. ಹೀಗಿದ್ದು ರಾಮರಾಜನನ್ನು ನೀನು ಶತ್ರುವೆಂದು ತಿಳಿದು ಆತನ ಸೇಡುತೀರಿಸಿಕೊಳ್ಳುವದಕ್ಕಾಗಿ ಪ್ರತಿಜ್ಞೆಮಾಡುತ್ತೀ! ನಿನ್ನ ಪ್ರತಿಜ್ಞೆಯು ಅಯೋಗ್ಯವಾದರೂ ನಿನ್ನ ಮೇಲಿನ ಪ್ರೇಮಾತಿಶಯದಿಂದ ನಾನು ನಿನ್ನನ್ನು ಅನುಸರಿಸಬೇಕಾಗುತ್ತದೆ. ಇದು ದಂಪತಿಗಳ, ವಿಶೇಷವಾಗಿ ಅರ್ಧಾಂಗಿಯೆನಿಸುವವಳ ಧರ್ಮವಲ್ಲೆಂದು ನಾನು ನಿನಗೆ ಸ್ಪಷ್ಟವಾಗಿ ಕಡೆಯಸಾರೆ ಹೇಳುತ್ತೇನೆ. ರಾಮರಾಜನ ವಚನಭ್ರಷ್ಟತೆಗಾಗಿ ನನಗೂ ಸಂತಾಪವಾಗಿದೆ. ರಾಮರಾಜನಂಥ ಅಯೋಗ್ಯನಡತೆಯ ಹಿಂದುಗಳ ಸಂಬಂಧದ ತಿರಸ್ಕಾರವು ನನ್ನಲ್ಲಿಯೂ ಉತ್ಪನ್ನವಾಗಿರುತ್ತದೆ; ಅಂಥವರ ಶಾಸನವಾದರೆ ನನಗೆ ಅನ್ಯಾಯವಾಗಿಯೂ ತೋರುವದಿಲ್ಲ; ಆದರೂ ಮೇಹೇರ, ನೀನು ಹೀಗೆ ಕೃತಘ್ನಳಾಗುವದು ನನಗೆ ಸರಿದೋರುವದಿಲ್ಲ, ಎಂದು ಹೇಳಿದಳು. ಆಕೆಯ ಮಾತಿನಿಂದ ಮೇಹೇರಜಾನಳ ಮನಸ್ಸು ತಿರುಗಲಿಲ್ಲ. ಆ ಅಭಿಮಾನಸ್ವಭಾವದ ತರುಣಿಯು ಒಂದೇ ಹಟವನ್ನು ಹಿಡಿದಳು. ಆಗ ಮಾರ್ಜಿನೆಯು—ಮೇಹೇರ, ನೀನು ಹೀಗೆ ಹಟಮಾರಿಯಾದರೆ ಉಪಾಯವಿಲ್ಲ. ನಿನ್ನ ಮಾತಿಗೆ ವಿರುದ್ಧವಾಗಿ ನಾನುನಡೆಯಲಾರೆನು, ಇನ್ನು ಕುಂಜವನದಿಂದ ಹೊರಟುಹೋಗುವ ಉಪಾಯವನ್ನು ಮಾಡುವೆನು. ಈಪ್ರಸಂಗದಲ್ಲಿ ನೀನು ನನ್ನ ಮಾತನ್ನು ಕೇಳದಿದ್ದರೆ ಕೆಲಸವಾಗುವದಿಲ್ಲ. ಧನಮಲ್ಲನ ಮನಸ್ಸನ್ನು ಒಲಿಸಿಕೊಂಡಹೊರತು ನಾವು ಇಲ್ಲಿಂದ ಪಾರಾಗಿ ಹೋಗಲಾರೆವು. ಧನಮಲ್ಲನನ್ನು ಕಂಡರೆ ನೀನು ಸೇರುವದಿಲ್ಲ. ಆತನು ಕಣ್ಣಿಗೆ ಬಿದ್ದಕೂಡಲೆ ಕವಕ್ಕದೆ ಆತನ ಮೈಮೇಲೆ ಹೋಗುತ್ತೀ. ಅಂದಬಳಿಕ

ನಾವು ಇಲ್ಲಿಂದ ಹ್ಯಾಗೆ ಪಾರಾಗಿ ಹೋಗಬೇಕು ? ಧನಮಲ್ಲನ ಕಾವಲು, ಕೃಷ್ಣ ಸರ್ಪದ ಕಾವಲು ಇದ್ದಹಾಗೆ ಇರುತ್ತದೆ.

ಮಾರ್ಜಿನೆಯ ಈ ಮಾತುಗಳನ್ನು ಕೇಳಿ, ಮೇಹೇರಜಾನಳು—ಮಾರ್ಜಿನೇ ಧನಮಲ್ಲನನ್ನು ಕಂಡರೆ ನನಗೆ ಬಹಳ ತ್ರಾಸವಾಗುತ್ತದೆ. ಆತನು ಕೃಷ್ಣಸರ್ಪ ದಂತೆ ನನಗೆ ಕಾಣುವದರಿಂದ, ಆತನನ್ನು ನೋಡಿದರೆ ನನಗೆ ಅಂಜಿಕೆಯೂ ಬರುತ್ತದೆ; ಆದರೆ ಈಗ ನಾನು ಆತನ ಉಸಾಬರಿಗೆ ಬರುವದಿಲ್ಲ. ನಾನು ಆತನ ಸಂಗಡ ಮಾತಾಡುವ ಪ್ರಸಂಗವನ್ನೇ ನೀನು ತರಬೇಡ. ನೀನು ಬೇಕಾದ ದ್ದುಮಾಡು; ಇಂದು ಸಂಜೆಯೊಳಗಾಗಿ ನಾವು ಕುಂಜವನವನ್ನು ಬಿಟ್ಟು ಹೋ ಗತಕ್ಕದ್ದು, ಎಂದು ಹೇಳಿದಳು. ಆಗ ಮಾರ್ಜಿನೆಯು ಧನಮಲ್ಲನ ಬಳಿಗೆ ಹೋಗಿ—ಧನಮಲ್ಲ, ಅವ್ವನವರು ಈಗಲೇ ಸಂಗನಪಲ್ಲಿಯೊಳಗಿನ ಪೀರನ ಗೋರಿಯ ದರ್ಶನಕ್ಕಾಗಿ ಹೋಗಬೇಕೆನ್ನುತ್ತಾರೆ. ಶಯಾನವಾಜಪೀರರ ದರ್ಶನ ವಾಗುವವರೆಗೆ ಅವರು ಬಾಯಲ್ಲಿ ನೀರು ಹಾಕುವದಿಲ್ಲವಂತೆ. ನಿನ್ನೆ ರಾತ್ರಿ ಒದಗಿದ ಅನರ್ಥವನ್ನು ನೀನು ಕಣ್ಣಾರೆ ನೋಡಿರುವೆಯಷ್ಟೇ ? ನಿನ್ನೆ ಬೆಳಗು ಮುಂಜಾನೆ ಪೀರಸಾಹೇಬರು ಅವ್ವನವರ ಕನಸಿನಲ್ಲಿ ಬಂದು—ನೀನು ನನ್ನ ದರ್ಶನಕ್ಕೆ ಬಾ, ಅಂದರೆ ಎಲ್ಲ ಅರಿಷ್ಟಗಳ ನಿವಾರಣವಾಗುವದು, ಎಂದು ಹೇಳಿದರಂತೆ ! ಪೀರಸಾಹೇಬರ ಮೇಲೆ ಅವ್ವನವರ ಭಕ್ತಿಯು ಬಹಳ. ಅವರು ಈಗ ದರ್ಶನಕ್ಕೆ ಹೋಗಿಯೇ ತೀರಬೇಕೆಂದು ಹಟಹಿಡಿದಿರುವರು. ಹೋಗು ರಥವನ್ನು ಹೂಡಿಕೊಂಡು ಬಾ, ಎಂದು ಹೇಳಲು, ಧನಮಲ್ಲನು ಬೆರಗಾಗಿ, ಮಾರ್ಜಿನೆಯ ಮೋರೆಯನ್ನು ನೋಡುತ್ತ ನಿಂತುಕೊಂಡನು. ಆಗ ಮಾರ್ಜಿನೆ ಯು ಪುನಃ ಆತನನ್ನು ಕುರಿತು—ಎಲಾ ಹೀಗೆ ಹುಚ್ಚನ ಹಾಗೆ ಸುಮ್ಮನೆ ನೋ ಡುತ್ತ ಯಾಕೆ ನಿಂತುಕೊಂಡೆ ? ನಿನಗೆ ಅವ್ವನವರ ಹಟಮಾರಿ ಸ್ವಭಾವವು ಗೊತ್ತಿಲ್ಲವೆ ? ಅವರ ಬಾಯಿಂದ ಬಂದದ್ದು ಆಗಲೇಬೇಕು. ಅದರಲ್ಲಿ, ಇದು ಪೀರನ ದರ್ಶನದ ಕೆಲಸವು. ದರ್ಶನವಾದ ಹೊರತು ಅವರು ನಿಶ್ಚಯವಾಗಿ ಬಾಯಲ್ಲಿ ನೀರು ಹಾಕುವದಿಲ್ಲ. ಹೋಗು, ಸುಮ್ಮನೆ ರಥಕ್ಕೆ ಎತ್ತುಗಳನ್ನು ಹೂಡಿ ಸಿದ್ಧಮಾಡಿಕೊಂಡು ಬಾ. ನೀನೇ ರಥವನ್ನು ಹೊಡೆಯುವೆಯಂತೆ, ಎಂದು ಹೇಳಿದಳು.

"ನೀನೇ ರಥವನ್ನು ಹೊಡೆಯುವೆಯಂತೆ" ಎಂಬ ವಾಕ್ಯವು ಕಿವಿಗೆ ಬಿದ್ದ ಕೂಡಲೆ, ಧನಮಲ್ಲನು ಗೋಣುಹಾಕಿ ಸಮ್ಮತಿಯನ್ನಿತ್ತು, ರಥವನ್ನು ಹೂಡಿ ಕೊಂಡು ಬರುವದಕ್ಕಾಗಿ ಹೋದನು. ಸ್ವಲ್ಪ ಹೊತ್ತಿನಲ್ಲಿಯೇ ರಥವು ಸಂಗನ

ಸಲ್ಲಿಗೆ ಹೊರಟಿತು. ಹಾದಿಯಲ್ಲಿ ಹೋಗುವಾಗ ಮೇಹೇರಜಾನಳಾಗಲಿ, ಮಾರ್ಜಿನೆಯಾಗಲಿ, ಚಕಾರ ಶಬ್ದವನ್ನು ಮಾತಾಡಲಿಲ್ಲ. ಇಬ್ಬರೂ ವಿಚಾರಮಗ್ನರಾಗಿದ್ದರು. ಮೇಲಾಗಿ ಧನಮಲ್ಲನಿದ್ದದ್ದರಿಂದ ಅವರು ಯಾವ ಮಾತೂ ಆಡುವಹಾಗಿದ್ದಿಲ್ಲ. ಮೇಹೇರಜಾನಳ ಸಂಸಾರಗೇಡಾದದ್ದಕ್ಕಾಗಿ, ಮಾರ್ಜಿನೆಯು ಬಗೆಬಗೆಯಾಗಿ ಆಲೋಚಿಸುತ್ತ ಕುಳಿತುಕೊಂಡಿದ್ದಳು. ಮೇಹೇರಜಾನಳು ತಾನು ಕುಂಜವನದಿಂದ ಆದಷ್ಟು ಬೇಗನೆ ದೂರ ಯಾವಾಗ ಹೋದೇನೆಂಬ ಒಂದೇ ವಿಚಾರದಲ್ಲಿ ಮಗ್ನಳಾಗಿದ್ದಳು. ಕುಂಜವನದಿಂದ ಸಂಗನಪಲ್ಲಿಯು ಆರು ಹರದಾರಿಯಿತ್ತು. ಅಲ್ಲಿಯ ದರ್ಗಾದ ಪೀರನು ಬಹು ಜಾಗ್ರತನೆಂಬ ಖ್ಯಾತಿಯಿದ್ದದ್ದರಿಂದ, ಬಹು ಜನ ಮುಸಲ್ಮಾನರು ದಿನಾಲು ದರ್ಶನಕ್ಕೆ ಬರುತ್ತಿದ್ದರು. ಅಲ್ಲಿಯ ಉತ್ಪನ್ನವು ವಿಶೇಷವಾಗಿದ್ದದ್ದರಿಂದಲೂ, ಪ್ರತಿ ಗುರುವಾರ ಶುಕ್ರವಾರ, ಫಕೀರರಿಗೂ, ಬಡಬಗ್ಗರಿಗೂ ವಿಶೇಷವಾಗಿ ದಕ್ಷಿಣೆ- ದಾನಗಳು, ಸಿಗುತ್ತಿದ್ದದ್ದರಿಂದಲೂ, ದೊಡ್ಡ ಜಾತ್ರೆ ಕೂಡಿದಂತೆ ಅಲ್ಲಿ ಜನರು ನೆರೆಯುತ್ತಿದ್ದರು. ಸಂಗನಪಲ್ಲಿಯು, ವಿಜಯನಗರದ, ಹಾಗು ಮುಸಲ್ಮಾನರ ರಾಜ್ಯಗಳ ಮೇರೆಯಲ್ಲಿದ್ದು, ಅದು ವಿಜಯನಗರದ ಅರಸರ ಸ್ವಾಧೀನದಲ್ಲಿತ್ತು. ಆ ಊರಲ್ಲಿ ಹಿಂದೂಜನರ ಪಸ್ತಿಯೇ ವಿಶೇಷವಾಗಿತ್ತು. ಜನವಾಡಿಕೆಯಂತೆ ಪೀರಸಾಹೇಬರಮೇಲೆ ಮೇಹೇರಜಾನಳ ಭಕ್ತಿಯಾದರೂ ಇತ್ತು. ಆಕೆಯು ಆಗಾಗೆ ಪೀರನ ದರ್ಶನಕ್ಕಾಗಿ ದರ್ಗೆಗೆ ಬರುತ್ತಿದ್ದಳು. ಮನಸ್ಸಿಗೆ ಬಹಳ ಅಸಮಾಧಾನವಾದಾಗ, ಪೀರನ ದರ್ಶನಕ್ಕೆ ಹೋಗುವದು ಆಕೆಯ ವಾಡಿಕೆಯಕ್ರಮವಾಗಿತ್ತು ಎತ್ತುಗಳು ಅತ್ಯುತ್ಕೃಷ್ಟವಾಗಿದ್ದದ್ದರಿಂದ ಅವುಗಳಿಗೆ ಆರು ಹರದಾರಿಯ ಲಕ್ಷ ವಿದ್ದಿಲ್ಲ. ಅವು ಹಾ ಹಾ ಅನ್ನುವದರೊಳಗಾಗಿ ದರ್ಗೆಯ ಬಾಗಿಲಿಗೆ ಹೋದವು. ದರ್ಗೆಯ ಆವಾರವು ಬಹು ಪ್ರಶಸ್ತವಾಗಿತ್ತು; ಆದರೆ ಅದರೊಳಗೆ ಪಶುಗಳನ್ನು ಹೂಡಿದ ರಥಮೊದಲಾದವುಗಳನ್ನು ಒಯ್ಯುವ ಪ್ರಚಾರವಿದ್ದಿಲ್ಲ. ಹಾಗೆ ಮಾಡುವದೆಂದ ಪೀರಸಾಹೇಬರ ಉಪಮರ್ದಮಾಡಿದ ಹಾಗಾಗುತ್ತದೆಂದು ಸರ್ವಾನುಮತದಿಂದ ಗೊತ್ತಾಗಿತ್ತು. ಅಶಕ್ತರೂ, ವೃದ್ಧರೂ, ಹೆಳವರೂ, ಇದ್ದರೆ ಅವರು ಮೇಣೆ, ಪಲ್ಲಕ್ಕಿ, ಡೋಲಿ ಮೊದಲಾದ ಮನುಷ್ಯವಾಹನಗಳಲ್ಲಿ ಕುಳಿತು ಪೀರಸಾಹೇಬರ ಗೋರಿಯ ದರ್ಶನಕ್ಕೆ ಹೋಗಬಹುದಾಗಿತ್ತು; ಆದರೆ ಧಷ್ಟಪುಷ್ಟರಿದ್ದವರು, ಎಂಥ ಶ್ರೀಮಂತರಿದ್ದರೂ, ನಡದೇ ದರ್ಶನಕ್ಕೆ ಹೋಗಬೇಕಾಗಿತ್ತಿತ್ತು.

ರಥವು ದರ್ಗೆಯ ಬಾಗಿಲಲ್ಲಿ ನಿಂತಕೂಡಲೆ, ಮೇಹೇರಜಾನಳು ನಿಟ್ಟುಸುರುಬಿಟ್ಟು ರಥದಿಂದ ಕೆಳಗೆ ಧುಮುಕಿದಳು. ಆಕೆಯು ಮಾರ್ಜಿನೆಗೆ—ಹೂ,

ಲಗು ಇಳಿ, ಜನರ ದಟ್ಟಣೆಯಾದಮೇಲೆ ದರ್ಶನಕ್ಕೆ ತೊಂದರೆಯಾದೀತು, ಎಂದು ಹೇಳುತ್ತಿರಲು, ಮಾರ್ಜಿನೆಯೂ ರಥದಿಂದ ಇಳಿದಳು. ಆಗ ಮಾರ್ಜಿನೆಯು ಧನಮಲ್ಲನಿಗೆ—"ನೀನು ಆ ಗಿಡದ ಬುಡದಲ್ಲಿ ರಥವನ್ನು ಬಿಟ್ಟುಕೊಂಡು ಸ್ವಲ್ಪ ವಿಶ್ರಮಿಸು, ಎಂದಿನಂತೆ ಈಗ ನಾವು ದರ್ಶನತಕ್ಕೊಂಡು ಬಂದಕೂಡಲೆ.... ಎಂದು ನುಡಿಯುತ್ತಿರಲು, ಧನಮಲ್ಲನು ಆ ಮಾತನ್ನು ಕಿವಿಯಮೇಲೆ ಹಾಕಿಕೊಳ್ಳದೆ, ಗಿಡದಕಡೆಗೆ ರಥವನ್ನು ಸಾಗಿಸಿಕೊಂಡು ನಡೆದನು. ಅದನ್ನು ನೋಡಿ ಮಾರ್ಜಿನೆಯು—ಏನು ಟೊಣಪನಿವನು, ಎಂದು ತಿರಸ್ಕರಿಸುತ್ತ, ಮೇಹೇರಜಾನಳನ್ನು ಕರಕೊಂಡು ದರ್ಗೆಯನ್ನು ಪ್ರವೇಶಿಸಿದಳು. ಇತ್ತ ಧನಮಲ್ಲನು ಗಿಡದಬುಡದಲ್ಲಿ ರಥವನ್ನು ಬಿಟ್ಟು, ಗಿಡದಬೇರಿಗೆ ಎತ್ತುಗಳನ್ನು ಕಟ್ಟಿ, ಮೇವು ಚೆಲ್ಲಿ, ತನ್ನ ಕರಿಯ ಕಂಬಳಿಯನ್ನು ಚಲ್ಲಿಕೊಂಡು ಸ್ವಲ್ಪ ಅಡ್ಡಾದನು. ಮಧ್ಯಾಹ್ನದ ಬಿಸಿಲಿನಲ್ಲಿ ಗಿಡದ ತಣ್ಣೆಲಳ ಸುಖಸ್ಪರ್ಶದಿಂದ ಆ ನಿಶ್ಚಿಂತಪುರುಷನಿಗೆ ಗಾಢವಾದ ನಿದ್ರೆಯು ಹತ್ತಿತು. ತಾಸಾಯತು ಎರಡು ತಾಸಾಯಿತು, ಮೂರು ತಾಸಾಯಿತು; ಆದರೂ ಆತನನ್ನು ಎಬ್ಬಿಸಲಕ್ಕೆ ಯಾರೂ ಬರಲಿಲ್ಲ. ಆ ಲಕ್ಷ್ಮಧನಮಲ್ಲನಿಗೂ ಎಚ್ಚರವಾಗಲಿಲ್ಲ. ಮುಂದೆ ಒಂಭತ್ತು ತಾಸಿನ ಸುಮಾರಕ್ಕೆ ಆತನಿಗೆ ಪಕ್ಕನೆ ಎಚ್ಚರಿಕೆಯಾಯಿತು. ಇಷ್ಟು ಹೊತ್ತಾದರೂ ಮೇಹೇರಜಾನಳೂ, ಮಾರ್ಜಿನೆಯೂ ಬಾರದಿರುವದನ್ನು ನೋಡಿ ಅವನು ಗಾಬರಿಯಾದನು. ಬೆಪ್ಪನಂತ ದರ್ಗೆಯ ಆವಾರದಲ್ಲಿ ನಾಲ್ಕೂಕಡೆಯಲ್ಲಿ ಅವರನ್ನು ಹುಡುಕಹತ್ತಿದನು. ಹೋಗಬರುವವರನ್ನು ಸನ್ನೆಮಾಡಿ ಕೇಳಲು, ಈ ವಿಲಕ್ಷಣ ಭವ್ಯಮೂರ್ತಿಯನ್ನು ನೋಡಿ ಜನರು ನಗುತ್ತಿದ್ದರಲ್ಲದೆ, ಧನಮಲ್ಲನಿಗೆ ಆತನ ಜನರ ಗೊತ್ತೇನೂ ಹತ್ತಲಿಲ್ಲ. ಧನಮಲ್ಲನು ದರ್ಗೆಯ ಹಿಂದೆಹೋಗಿ ನೋಡಿದನು. ದರ್ಗೆಯಿಂದ ಬೇರೆ ಬೇರೆ ಕಡೆಗೆ ಹೋಗುವ ಮಾರ್ಗಗಳನ್ನು ಹಿಡಿದುಹೋಗಿ ಅಲ್ಲಿ ಬರುವ ಜನರನ್ನು ಏನೇನೋ ಸನ್ನೆಮಾಡಿ ಕೇಳಿದನು; ಆದರೆ ಅದರಿಂದ ಪ್ರಯೋಜನವೇನೂ ಆಗಲಿಲ್ಲ. ದರ್ಗೆಯೊಳಗಿನ ಮುಖ್ಯ ಮನುಷ್ಯನನ್ನು ಕೇಳಲು, ಆತನು ಮಧ್ಯಾಹ್ನದಲ್ಲಿ ದರ್ಶನಕ್ಕೆ ಬಂದವರು ಆಗಲೇ ಹೋದರೆಂದು ಹೇಳಿದನು. ಹಲವುಸಾರೆ ದರ್ಶನಕ್ಕೆ ಬಂದವರಾದ್ದರಿಂದ ಧನಮಲ್ಲನ ಗುರುತೂ ಮಾರ್ಜಿನೆ-ಮೇಹೇರಜಾನರ ಗುರುತೂ ಆ ಮುಖ್ಯಮನುಷ್ಯನಿಗೆ ಇತ್ತು. ಆತನೂ ಧನಮಲ್ಲನ ಶೋಧಕ್ಕೆ ಸಹಾಯಮಾಡಿದಂತೆ ತೋರಿಸಿದನು. ಕಡೆಗೆ ಹೊತ್ತು ಮುಣುಗಲಿಕ್ಕೆ ಅರ್ಧತಾಸು ಉಳಿಯಿತು. ಆಗ ಧನಮಲ್ಲನು ಮಾರ್ಜಿನೆ-ಮೇಹೇರಜಾನರನ್ನು ಹುಡುಕಬೇಕೋ, ಅವರು ಎಲ್ಲಿಯೋ ಹೋದರೆಂಬ ಸುದ್ದಿಯನ್ನು ರಾಮರಾಜನಿಗೆ ಹೇಳಲಿಕ್ಕೆ ವಿಜಯನಗರಕ್ಕೆ ಹೋಗಬೇಕೋ, ಎಂದು

ಆಲೋಚಿಸಹತ್ತಿದನು. ಕಡೆಗೆ ವಿಜಯನಗರಕ್ಕೇ ಹೋಗಬೇಕೆಂದು ನಿರ್ಧರಿಸಿ, ಅವನು ರಥಕ್ಕೆ ಎತ್ತುಗಳನ್ನು ಹೂಡಿ, ವಿಜಯನಗರದ ಹಾದಿಯನ್ನು ಹಿಡಿದನು.

೬ನೆಯ ಪ್ರಕರಣ—ರಾಮರಾಜನ ಪಶ್ಚಾತ್ತಾಪ.

ದರ್ಗಾದಿಂದ ವಿಜಯನಗರವು ಒಳ್ಳೆ ಹದಿನೆಂಟು ಹರದಾರಿಯಿತ್ತು. ಗಾಡಿಗೆ ಹೂಡಿದ ಎತ್ತುಗಳು ಅತ್ಯುತ್ತಮವಿದ್ದದ್ದರಿಂದ ಅವಕ್ಕೆ ಹಾದಿನಡೆಯುವ ಲಕ್ಷವಿದ್ದಿಲ್ಲ. ಬೆಳಗಾಗುವದರೊಳಗೆ ವಿಜಯನಗರಕ್ಕೆ ಮುಟ್ಟಬೇಕೆಂಬ ಅತುರದಿಂದ ಧನಮಲ್ಲನು ಎತ್ತುಗಳನ್ನು ಒತ್ತರದಿಂದ ನಡಿಸಹತ್ತಿದನು. ಆತನ ಮನಸ್ಸಿಗೆ ಸ್ವಸ್ಥವಿದ್ದಿಲ್ಲ. ಕೇವಲ ಮೇಹೇರಜಾನಳ, ಹಾಗು ಮಾರ್ಜಿನೆಯ ಕಾವಲಿಗಾಗಿ ತನ್ನನ್ನು ನಿಯಮಿಸಿರಲು, ತಾನು ಹೀಗೆ ಅವರನ್ನು ಕಳಕೊಂಡ ಸುದ್ದಿಯನ್ನು ಹೇಳಿದರೆ, ರಾಮರಾಜನು ಏನು ಮಾಡುವನೋ ಎಂಬ ಭಯದಿಂದ ಅವನ ಮನಸ್ಸು ಅಸ್ವಸ್ಥವಾಯಿತು. ಆತನಿಗೆ ಏನೂ ತೋಚಲೊಲ್ಲದು. ಅರುಣೋದಯ ಸಮಯಕ್ಕೆ ಆತನ ರಥವು ರಾಮರಾಜನ ಮನೆಯ ಬಾಗಿಲಿಗೆ ಹೋಯಿತು. ಎತ್ತುಗಳು ರಾತ್ರಿ ಒಂದೇಸವನೆ ನಡೆದು ಬಂದದ್ದರಿಂದ ಬಹಳ ದಣಿದಿದ್ದವು. ಆದ್ದರಿಂದ ಧನಮಲ್ಲನು ಮೊದಲು ಎತ್ತುಗಳ ಯೋಗಕ್ಷೇಮವನ್ನು ತೆಗೆದುಕೊಂಡನು. ಧನಮಲ್ಲನು ರಾಮರಾಜನ ನಂಬಿಗೆಯವರಲ್ಲಿ ಒಬ್ಬನಾಗಿದ್ದನು. ಧನಮಲ್ಲನು ಮಧ್ಯರಾತ್ರಿಯಲ್ಲಿ ಬಂದು ನನ್ನನ್ನು ಕಾಣಬೇಕೆಂದು ಹೇಳಿದರೂ, ಕೂಡಲೇ ನನ್ನನ್ನು ಎಬ್ಬಿಸಿ ಸುದ್ದಿಯನ್ನು ಹೇಳಬೇಕೆಂದು ರಾಮರಾಜನು ಎಲ್ಲರಿಗೆ ಕಟ್ಟಪ್ಪಣೆ ಮಾಡಿದ್ದನು; ಆದರೆ ಈಗ ಧನಮಲ್ಲನು ಅಷ್ಟು ಅವಸರ ಮಾಡಲಿಲ್ಲ. ಮಹಾರಾಜರು ಎದ್ದು ಪ್ರಾತರ್ವಿಧಿಗಳನ್ನು ತೀರಿಸಿಕೊಂಡಕೂಡಲೆ ನಾನು ಬಂದಿದ್ದ ಸುದ್ದಿಯನ್ನು ಹೇಳಬೇಕೆಂದು ಕಾವಲುಗಾರರಿಗೆ ಸನ್ನೆಯಿಂದ ತಿಳಿಸಿದ್ದನು. ಇತ್ತ ಎತ್ತುಗಳ ವ್ಯವಸ್ಥೆಯಾಗುವದರೊಳಗೆ ರಾಮರಾಜನು ಧನಮಲ್ಲನನ್ನು ಕರೆಸಿಕೊಂಡನು. ಧನಮಲ್ಲನು ಒಳಗೆ ಬಂದ ಕೂಡಲೆ ಎಲ್ಲಸೇವಕರನ್ನು ರಾಮರಾಜನು ಹೊರಗೆ ಕಳಿಸಿದನು. ಒಂದು ಕೂಗಿನ ಅಳತೆಯಲ್ಲಿ ನಿಂತಿರುವಂತೆ ಒಬ್ಬಸೇವಕನಿಗೆ ಮಾತ್ರ ಅಪ್ಪಣೆಯಾಗಿತ್ತು. ಧನಮಲ್ಲನು ಏನು ಹೇಳುವನೆಂಬದನ್ನು ಕೇಳಲಿಕ್ಕೆ ರಾಮರಾಜನು ಬಹು

ಉತ್ಸುಕನಾಗಿರುವಂತೆ ತೋರುತ್ತಿತ್ತು. ಧನಮಲ್ಲನು ಸಂಶಯದ ಮುದ್ರೆಯಿಂದ ಒಮ್ಮೆ ಎಲ್ಲಕಡೆಗೆ ನೋಡಿದನು. ಆಗ ರಾಮರಾಜನು ಆತನನ್ನು ಕುರಿತು—ಹೂ, ಮಾತಾಡು, ಮಾತಾಡು: ಇಲ್ಲಿ ನಿನ್ನ ಮಾತು ಯಾರಿಗೂ ಕೇಳಿಸುವಹಾಗಿಲ್ಲ. ಸುಮ್ಮನೆ ಅತ್ತಿತ್ತ ನೋಡಿ ಹೊತ್ತುಗಳೆಯಬೇಡ, ಅನ್ನಲು, ಕನ್ನಡಿಗನಾದ ಧನಮಲ್ಲನು ರಾಮರಾಜನಿಗೆ ಕನ್ನಡಮಾತುಗಳಿಂದ—ಮಹಾರಾಜ, ಪಾರಿವಾಳಗಳು ಹಾರಿಹೋದವು; ಅವು ನನ್ನನ್ನು ಮೋಸಗೊಳಿಸಿದವು, ಎಂದು ಹೇಳಿದನು. ಅದನ್ನು ಕೇಳಿದಕೂಡಲೆ ರಾಮರಾಜನು ಸಂತಾಪದಿಂದ ಎದ್ದು ನಿಂತು—ತಿಳಿಗೇಡಿಯೇ, ಏನುಬೊಗಳುವೆ? ಮೂಕನಸೋಗಿನಿಂದ ನಿನ್ನನ್ನು ಅವರಬಳಿಯಲ್ಲಿಟ್ಟದ್ದು ಇಷ್ಟರಸಲುವಾಗಿಯೇ ಏನು? "ಪಾರಿವಾಳಗಳು ಹಾರಿಹೋದವಂತೆ, ಮೋಸಮಾಡಿದವಂತೆ! ಮೂರ್ಖ, ನೀನೇನು ಕತ್ತೆಯಕಾಯುತ್ತಿದ್ದೆ? ಅವರನ್ನು ಯಾಕೆ ಹೋಗಗೊಟ್ಟೆ? ಬೊಗಳು, ಏನಾಯತೆಂಬದನ್ನು ಬೇಗನೆ ಬೊಗಳು." ಎಂದು ಬೆದರಿಗೇಳಲು, ಧನಮಲ್ಲನು—ನೀವು ಸಮಾಧಾನದಿಂದ ಕೇಳಿಕೊಂಡರೆ ಎಲ್ಲ ಸುದ್ದಿಯನ್ನು ಹೇಳುತ್ತೇನೆ. ಎಲ್ಲವನ್ನು ಕೇಳಿದ ಬಳಿಕ ಅದರಲ್ಲಿ ನನ್ನ ಅಪರಾಧವೇನೂ ಇಲ್ಲೆಂದು ನಿಮಗೆ ಕಾಣಬಹುದು. ಸುದ್ದಿಯನ್ನು ಕೇಳಿಕೊಳ್ಳದೆ ಸುಮ್ಮನೆ ಹೆಸರಿಡುವದಾಗಿದ್ದರೆ, ಅಲ್ಲಿ ಮೂಕನಾಗಿದ್ದಂತೆ ಇಲ್ಲಿಯೂ ನಾನು ಮೂಕನೆಂತಲೇ ತಿಳಿಯಿರಿ!

ಧನಮಲ್ಲನ ಈ ಎಟ್ಟಮಾತುಗಳನ್ನು ಕೇಳಿ, ರಾಮರಾಜನು ತನ್ನ ಸಿಟ್ಟನ್ನು ನುಂಗಿಕೊಳ್ಳಬೇಕಾಯಿತು; ಯಾಕಂದರೆ, ಧನಮಲ್ಲನು ವಿಲಕ್ಷಣಮನುಷ್ಯನೆಂಬದು ರಾಮರಾಜನಿಗೆ ಗೊತ್ತಿತ್ತು; ಆದ್ದರಿಂದ ಆತನು ಸಮಾಧಾನದಿಂದ ಧನಮಲ್ಲನನ್ನು ಕುರಿತು—ಹೂ, ಮಾತಾಡು, ನೂತಾಡು, ಏನು ಹೇಳುವದನ್ನು ಬೇಗನೆ ಹೇಳು, ಅನ್ನಲು, ಧನಮಲ್ಲನು ನಡೆದಸಂಗತಿಯನ್ನೆಲ್ಲ ಹೇಳಿದನು. ಆತನಿಲ್ಲದಾಗ ಮೇಹೇರಜಾನಳೂ, ಮಾರ್ಜಿನೆಯೂ, ಆಡಿದ ಮಾತುಗಳು ಅವನಿಗೆ ಗೊತ್ತಿಲ್ಲದ್ದರಿಂದ ಅವಶ್ಯವನ್ನುಮಾತ್ರ ಹೇಳಲಿಲ್ಲ. ರಾಮರಾಜನು ಧನಮಲ್ಲನ ಎಲ್ಲ ಮಾತುಗಳನ್ನು ಲಕ್ಷಪೂರ್ವಕವಾಗಿ ಕೇಳಿಕೊಂಡಮೇಲೆ, ವಿಚಾರಮಗ್ನನಾಗಿ ಕೆಲಹೊತ್ತಿನಮೇಲೆ ಧನಮಲ್ಲನನ್ನು ಕುರಿತು—

ರಾಮರಾಜ—ಅವರು ತಮ್ಮ ಸಂಗಡ ಏನೇನು ಸಾಮಾನು ಒಯ್ದಿದ್ದಾರೆ?

ಧನಮಲ್ಲ—ಅವರು ಒಂದು ರಿಂಬಿಯನ್ನು ಸಹ ಸಂಗಡ ತಕ್ಕೊಂಡು ಹೋಗಿರುವದಿಲ್ಲ. ಪ್ರತಿ ಒಂದುಸಾರೆ ದರ್ಗಾಕ್ಕೆ ಹೋಗುವಾಗ ಒಯ್ಯುತ್ತಿದ್ದ ಸಾಮಾ

ನುಗಳನ್ನು ಸಹ ಈ ಸಾರೆ ಅವರು ಒಯ್ದಿರುವದಿಲ್ಲ. ಅಂದಬಳಿಕ ಅವರು ತಿರುಗಿ ಬರಲಿಕ್ಕಿಲ್ಲೆಂಬ ಕಲ್ಪನೆಯಾದರೂ ನನಗೆ ಹ್ಯಾಗಾಗಬೇಕು ?

ರಾಮರಾಜ—ದರ್ಗೆಯಲ್ಲಿ ನೀನೇನು ಶೋಧಮಾಡಿದೆ ?

ಧನಮಲ್ಲ—ಮಾಡಲಿಕ್ಕೆ ಶಕ್ಯವಿದ್ದಮಟ್ಟಿಗೆ ಎಲ್ಲಕಡೆಗೂ ಶೋಧಮಾಡಿದೆನು. ಇನ್ನು ಹೀಗೆ ಸುಮ್ಮನೆ ಶೋಧಮಾಡುತ್ತ ಕಾಲಹರಣಮಾಡುವದಕ್ಕಿಂತ ಸನ್ನಿಧಿಯಲ್ಲಿ ಎಲ್ಲ ಸಂಗತಿಯನ್ನು ಹೇಳಿ, ಮುಂದಿನ ಹಾದಿಯನ್ನು ಕಂಡುಕೊಳ್ಳುವದು ಯೋಗ್ಯವೆಂದು ತೋರಿದ್ದರಿಂದ, ತಮ್ಮ ಬಳಿಗೆ ಬಂದೆನು.

ಧನಮಲ್ಲನ ಈ ಉತ್ತರದ ಕಡೆಗೆ ರಾಮರಾಜನ ಲಕ್ಷವಿದ್ದಂತೆ ತೋರಲಿಲ್ಲ. ಆತನ ಮನಸ್ಸಿನಲ್ಲಿ ಹಲವು ವಿಚಾರಗಳು ಉತ್ಪನ್ನವಾಗಿ ಮನಸ್ಸನ್ನು ಚಂಚಲವಾಗಮಾಡಿದ್ದವು. ಸ್ವಲ್ಪ ಹೊತ್ತಿನಮೇಲೆ ಆತನು ಧನಮಲ್ಲನಿಗೆ—ಈಗ ನೀನು ಹೋಗು, ಸಂಜೆಯವರೆಗೆ ವಿಶ್ರಮಿಸು, ಸಂಜೆಯ ಮುಂದೆ, ನಾನು ನಿನ್ನನ್ನು ಕರೆಸುವೆನು. ಏನು ಮಾಡಬೇಕೆಂಬದರ ವಿಚಾರವು ಮುಂದೆ, ಈಗ ಬೇಡ. ಹೂ ನಡೆ, ಈಗ ನೀನು ನನ್ನ ಎದುರಿಗೆ ಸಹ ನಿಲ್ಲಬೇಡ. ಎಂದು ಹೇಳಿ, ಧನಮಲ್ಲನ ಕಡೆಗೆ ಬೆನ್ನುಮಾಡಿ ಕುಳಿತುಕೊಂಡನು. ಧನಮಲ್ಲನಿಗಾದರೂ ಇಷ್ಟೇ ಬೇಕಾಗಿತ್ತು. ಬೆಳತನಕ ನಿದ್ದೆಗೆಟ್ಟು ದಣಿದದ್ದರಿಂದ ಯಾವಾಗ ನೆಲವನ್ನು ಕಂಡೇನೆಂಬ ಹಾಗೆ ಆತನಿಗೆ ಆಗಿತ್ತು. ಕೂಡಲೆ ಆತನು ಅಲ್ಲಿಂದ ಹೊರಟುಹೋದನು. ಇತ್ತ ರಾಮರಾಜನು ನಡೆದ ಸಂಗತಿಯನ್ನು ಕುರಿತು ಬಗೆಬಗೆಯಾಗಿ ಆಲೋಚಿಸುತ್ತ ಕುಳಿತುಕೊಂಡನು. ಮೇಹೇರಜಾನಳು ತಾನಾಗಿ ಹೋದದ್ದರಿಂದ ತನ್ನ ಮಂತ್ರಿಪದವಿಯ ಪ್ರಾಪ್ತಿಗಾಗಿ ಒದಗಿದ್ದೊಂದು ವಿಘ್ನನಿವಾರಣವಾಯಿತೆಂಬಂತೆ ತೋರಿ, ಆತನಿಗೆ ಕೆಲಮಟ್ಟಿಗೆ ಸಮಾಧಾನವಾದಂತೆ ಆಯಿತು. ಹಾಗೆ ಸಮಾಧಾನವಾಗಿರದಿದ್ದರೆ, ಆತನು ಧನಮಲ್ಲನ ವಿಶ್ರಾಂತಿಗೆ ಅಸ್ಪದವನ್ನು ಕೊಡುತ್ತಿದ್ದಿಲ್ಲ. ಮೇಹೇರಜಾನಳನ್ನು ಹುಡುಕಿಕೊಂಡು ಬಾರದಿದ್ದರೆ ನಿನ್ನನ್ನು ನಿಲ್ಲಿಸಿ ಸುಡಿಸುವೆನೆಂದು ಆತನು ಧನಮಲ್ಲನಿಗೆ ಹೇಳಬಹುದಾಗಿತ್ತು. ಮೇಹೇರಜಾನಳಮೇಲಿದ್ದ ರಾಮರಾಜನ ಪ್ರೇಮವನ್ನು ಮನಸ್ಸಿನಲ್ಲಿ ತಂದರೆ, ರಾಮರಾಜನ ಈ ಬೇಸರದ ಕೃತಿಯು ವಾಚಕರಿಗೆ ವಿಲಕ್ಷಣವಾಗಿ ತೋರಿರಬಹುದು; ಆದರೆ ಪ್ರಬಲ ಮಹತ್ವಾಕಾಂಕ್ಷೆಯು ಹೀಗೆ ಪ್ರೇಮಭಂಗವನ್ನು ಮಾಡಿದ್ದು ಆಶ್ಚರ್ಯವಲ್ಲ ! ಆದರೆ ಸ್ವಲ್ಪ ಹೊತ್ತಿನಮೇಲೆ

ರಾಮರಾಜನಿನೆ ಮೇಹೇರಜಾನಳ ಒಂದೊಂದೇ ಪ್ರೇಮದ ಕೃತಿಗಳ ಸ್ಮರಣವಾಗಿ, ಆತನ ಮನಸ್ಸು ಮತ್ತೆ ಅಸ್ವಸ್ಥವಾಯಿತು. ಆತನು ಹಾಸಿಗೆಯಮೇಲೆ ಹೋಗಿ ಮಲಗಿಕೊಂಡು ನಿದ್ದೆಮಾಡಿ ಸಮಾಧಾನ ಪಡಬೇಕೆಂದು ಮಾಡಿದನು; ಆದರೆ ಮೇಹೇರಜಾನಳ ವಿಯೋಗದುಃಖವು ಆತನನ್ನು ಬಾಧಿಸಹತ್ತಿದ್ದರಿಂದ ನಿದ್ದೆಬರುವದೊತ್ತಟ್ಟಿಗುಳಿದು, ಆತನ ಕಣ್ಣೊಳಗಿಂದ ನೀರುಗಳು ಸುರಿಯಹತ್ತಿದವು. ಆತನು ಮೊದಮೊದಲು ಕಣ್ಣೀರುಗಳನ್ನು ಒರಸಿಕೊಂಡನು; ಆದರೆ ಅವು ಸತತವಾಗಿ ಧಾರೆಯಿಟ್ಟು ಸುರಿಯಹತ್ತಲು, ಆತನು ಪೋರೆಯಮೇಲೆ ಸೆರಗು ಹಾಕಿಕೊಂಡು, ಸುಮ್ಮನೆ ಮಲಗಿಬಿಟ್ಟನು. ಅತ್ತು ಅತ್ತು ಆತನ ದುಃಖವೇಗವು ಕಡಿಮೆಯಾಗಹತ್ತಿತು. ಕಡೆಗೆ ಆತನು ಎದ್ದು ಕುಳಿತು ಕಣ್ಣೀರು ಒರಸಿಕೊಂಡು, ಮನಸ್ಸಿನಲ್ಲಿ ಏನೋ ನಿಶ್ಚಯಿಸಿ, ಸೇವಕನನ್ನು ಗಟ್ಟಿಯಾಗಿ ಒದರಿದನು. ಆಗ ಸೇವಕನು ಬಂದು ಕೈಜೋಡಿಸಿ ನಿಂತುಕೊಳ್ಳಲು, ರಾಮರಾಜನು—ಹೋಗು, ನನ್ನ ಕುದುರೆಯನ್ನೂ, ಬೇಟೆಯ ಯಾವತ್ತು ಸಾಮಾನುಗಳನೂ, ಸಿದ್ಧಮಾಡಿಕೊಂಡು ಬರಹೇಳು, ಎಂದು ಆಜ್ಞಾಪಿಸಿದನು. ಸೇವಕನು ಅತ್ತ ಹೋಗಲು, ಮತ್ತೊಬ್ಬಸೇವಕನು ಬಂದು ರಾಮರಾಜನಿಗೆ-ಮಹಾರಾಜ, ತಿರುಮಲರಾಯರು ತಮ್ಮನ್ನು ಕಾಣುವದಕ್ಕಾಗಿ ಬಂದಿದ್ದಾರೆ, ಎಂದು ಹೇಳಿದನು. ಅದನ್ನು ಕೇಳಿ ರಾಮರಾಜನ ಬೇಟೆಗೆ ಹೋಗುವ ಇಚ್ಛೆಯು ವ್ಯರ್ಥವಾದಂತೆ ಆಯಿತು. ಆದರೂ ಪ್ರತ್ಯಕ್ಷ ಅಣ್ಣನ ದರ್ಶನಕ್ಕೆ ಅಸಮ್ಮತಿ ಪಡಲಾರದೆ, ಆತನು ಸೇವಕನಿಗೆ—ಅವಶ್ಯವಾಗಿ ಬರಬಹುದೆಂದು ಅವರಿಗೆ ವಿಜ್ಞಾಪಿಸು. ನನಗೆ ಬರಹೇಳಿದರೆ ನಾನೇ ಬರುವೆನು, ಎಂದು ಹೇಳಿಕಳಿಸುತ್ತಿರಲು, ಆ ಸೇವಕನನ್ನು ಹಿಂಬಾಲಿಸಿ ತಿರುಮಲರಾಯನು ರಾಮರಾಜನ ಬಳಿಗೆ ಬಂದನು.

ಕುಶಲ ಪ್ರಶ್ನೆಗಳಾದಮೇಲೆ ತಿರುಮಲನು ರಾಮರಾಜನನ್ನು ಕುರಿತು—"ಬಂಧುವೇ, ಕೃಷ್ಣದೇವರಾಯರು ನಿನ್ನ ಲಗ್ನದ ಮುಹೂರ್ತವನ್ನು ಗೊತ್ತುಮಾಡುವದಕ್ಕಾಗಿ ಜೋಯಿಸರನ್ನು ಕರೆಯಿಸಿರುವರು. ಅವರ ಅಪ್ಪಣೆಯಂತೆ ನಾವಿಬ್ಬರು ಈಗ ಅಲ್ಲಿಗೆ ಹೋಗಬೇಕಾಗಿದೆ. ಅನ್ನಲು, ಮೊದಲೇ ಖಿನ್ನನಾಗಿದ್ದ ರಾಮರಾಜನ ಮನಸ್ಸು, ಈಗ ಬೇಟೆಗೆ ವಿಘ್ನವೊದಗಿದ್ದರಿಂದ ಮತ್ತಿಷ್ಟು ಖಿನ್ನವಾಯಿತು. ಮನಸ್ಸಿನ ಚೇಷ್ಟೆಗಳನ್ನು ವರ್ಣಿಸುವದು ಆಗದಮಾತೇ ಸರಿ. ಅರಸನ ಅಳಿಯನಾಗಿ, ವಿಜಯನಗರದ ಅರಸರ ಮುಖ್ಯ ಮಂತ್ರಿಯಾಗಬೇ

ಕೆಂಜ ಇಚ್ಛೆಯಿಂದ ಮೇಹೇರಜಾನಳನ್ನು ನಿರಾಕರಿಸಿದ ರಾಮರಾಜನು, ಈಗ ಮೇಹೇರಜಾನಳ ವಿಯೋಗದುಃಖವೊದಗಿರಲು, ಅರಸನ ಅಳಿಯನಾಗುವ ವಿಷಯದಲ್ಲಿ ಔದಾಸೀನ್ಯವನ್ನು ತಾಳಿದನು. ಆತನು ತನ್ನ ಅಣ್ಣನನ್ನು ಕುರಿತು—ಲಗ್ನದ ಮುಹೂರ್ತ ನಿಶ್ಚಯಮಾಡುವಾಗ ನಾನು ಇರುವ ಅವಶ್ಯವೇನು? ಮಹಾರಾಜರಿರುವರು, ನೀವಿರುವಿರಿ; ಮುಹೂರ್ತವನ್ನು ಗೊತ್ತುಮಾಡಿಬಿಟ್ಟರಾಯಿತು. ನಾನು ಈಗ ಬೇಟೆಯ ನೆವದಿಂದ ಹೊರಟಿದ್ದರೂ, ನಿಜವಾದ ಕಾರಣವು ಬೇರೆಯಾಗಿರುತ್ತದೆ. ಇತ್ತಿತ್ತ ಮುಸಲ್ಮಾನ ಬಾದಶಹರು ನಮ್ಮ ರಾಜ್ಯದ ವಿಸ್ತಾರವನ್ನೂ, ವೈಭವವನ್ನೂ, ಬಲವನ್ನೂ ನೋಡಿ, ಹೊಟ್ಟೆ ಕಿಚ್ಚು ಪಡಹತ್ತಿದ್ದಾರೆ. ವಿಜಾಪೂರ, ಅಹಮ್ಮದನಗರ, ಗೋವಳಕೊಂಡ, ಬೇದರ ಈ ನಾಲ್ವರು ಬಾದಶಹರು ಒಟ್ಟಾಗಿ, ನಮ್ಮ ರಾಜ್ಯವನ್ನು ಮೂಲೆಗುಂಪು ಮಾಡುವ ಹವಣಿಕೆಯಲ್ಲಿರುತ್ತಾರೆ. ಅವರ ಒಳಸಂಚುಗಳಿಗೆ ಲಕ್ಷ ಗೊಟ್ಟು, ಅವರನ್ನು ಬಗ್ಗು ಬಡಿಯುವ ಉಪಾಯಮಾಡದಿರುವದು ಯೋಗ್ಯವಲ್ಲ. ನಾಲ್ವರ ಬದಲು ಹತ್ತುಮಂದಿ ಬಾದಶಹರು ಒಟ್ಟು ಗೂಡಿದರೂ, ನಾವು ಮಣಿಯಲಾರೆವೆಂಬದೇನೋ ನಿಜ; ಆದರೂ ನಾವು ನಮ್ಮ ಸೇನಾಬಲವನ್ನು ಹೆಚ್ಚಿಸಿ, ಯುದ್ಧಸಾರಣೆಯನ್ನು ಚನ್ನಾಗಿ ಮಾಡಿಕೊಳ್ಳತಕ್ಕದ್ದು. ನಮ್ಮ ಹಾಗು ವಿಜಾಪುರದ ಬಾದಶಹನ ರಾಜ್ಯದ ಹದ್ದಿನಲ್ಲಿದ್ದು, ನಮ್ಮ ಸ್ವಾಧೀನದಲ್ಲಿರುವ ಸಂಗನಪಲ್ಲಿಯ ದರ್ಗೆಯಲ್ಲಿ ಮುಸಲ್ಮಾನರ ಗುಪ್ತ ಸಂಚುಗಳು ನಡೆಯುತ್ತಿರುವವೆಂದು ನಾನು ಕೇಳಿದ್ದೇನೆ. ನಮ್ಮ ಗುಪ್ತಚಾರನು ಇದೇ ಈಗ ಒಂದು ಸುದ್ದಿಯನ್ನು ಹೇಳಿದ್ದಾನೆ. ಆ ಸುದ್ದಿಯಲ್ಲಿ ಅಷ್ಟು ಅರ್ಥವಿಲ್ಲದಿದ್ದರೂ, ವೈರಿಗಳ ಒಳಸಂಚುಗಳನ್ನು ಉರ್ಲಕ್ಷಿಸಲಾಗದು. ಆದ್ದರಿಂದ ನಾನು ಈಗಲೇ ಸಂಗನಪಲ್ಲಿಗೆ ಹೋಗಿ, ಇದ್ದಸಂಗತಿಯನ್ನು ತಿಳಕೊಂಡು ಬರುತ್ತೇನೆ. ಪೀರನ ಗೋರಿಯ ದರ್ಶನದ ನೆವದಿಂದ ಬಹುಜನ ಮುಸಲ್ಮಾನರು ಅಲ್ಲಿ ಕೂಡುತ್ತಿರುವದರಿಂದ, ಒಳಸಂಚುಗಳಿಗೆ ಆಸ್ಪದವು ದೊರೆಯುವ ಸಂಭವವದೆ. ಹೀಗೆ ನಮ್ಮ ಗ್ರಾಮದಲ್ಲಿ ನಾಲ್ಕೂ ಕಡೆಯಿಂದ ಮುಸಲ್ಮಾನರು ಒಟ್ಟುಗೂಡುವದುಹಿತಕರವಲ್ಲ. ಪೀರನಗೋರಿಯ ಕೆಲಸವಾದ್ದರಿಂದ, ಏನು ಮಾಡುವದನ್ನು ವಿಚಾರದಿಂದ ಮಾಡಬೇಕಾಗಿದೆ. ಇರಲಿ, ನೀವು ಮಹಾರಾಜರಮುಂದೆ ಇಂಥ ಕಾರ್ಯಕ್ಕಾಗಿ ಹೋದನೆಂದು ಹೇಳಿ, ಮುಹೂರ್ತನಿಶ್ಚಯದ ಕಾರ್ಯವನ್ನು ಕೊನೆಗಾಣಿಸತಕ್ಕದ್ದು. ಮಹಾರಾಜರಿಗೆ ಅಷ್ಟು ಮನಸ್ಸಿಗೆ ಹಚ್ಚಿಕೊಳ್ಳುವ ಪ್ರಸಂಗವಿಲ್ಲೆಂದು ಹೇಳತಕ್ಕದ್ದು. ನಾನು ಬಹಳದಿವಸ ಹೋಗುವದಿಲ್ಲ; ನಾಲ್ಕೆಂಟು ದಿವಸಗಳಲ್ಲಿ ಬರುವೆನು.

ಈ ಮೇರೆಗೆ ರಾಮರಾಜನು ಬಡಬಡ ಮಾತಾಡಿದ್ದನ್ನು ಕೇಳಿ ತಿರುಮಲರಾಯನು ವಿಚಾರಮಗ್ನನಾದನು. ತಿರುಮಲರಾಯನು ರಾಮರಾಜನ ಅಣ್ಣನಾಗಿದ್ದರೂ, ಅವರಿಬ್ಬರ ವಯಸ್ಸಿನಲ್ಲಿ ನಾಲ್ಕುವರ್ಷಗಳಿಗಿಂತ ಹೆಚ್ಚು ಅಂತರವಿದ್ದಿಲ್ಲ. ಇದಲ್ಲದೆ ರಾಮರಾಜನ ವರ್ಚಸ್ಸಿನಮುಂದೆ, ತಿರುಮಲರಾಯನ ಮತಿಯು ಕುಂಠಿತವಾಗುತ್ತಿತ್ತು. ಚಿಕ್ಕಂದಿನಿಂದಲೂ ಅಣ್ಣನ ಮೇಲೆ ರಾಮರಾಜನ ವರ್ಚಸ್ಸು ಬಹಳ. ರಾಮರಾಜನು ಆಜ್ಞಾಪಿಸಬೇಕು, ತಿರುಮಲರಾಯನು ಅದರಂತೆ ನಡೆಯಬೇಕು. ಈ ಕ್ರಮವು ಚಿಕ್ಕಂದಿನಿಂದ ಆ ಬಂಧುಗಳಲ್ಲಿ ನಡೆಯುತ್ತ ಬಂದಿತ್ತು. ಆದ್ದರಿಂದ ತಿರುಮಲರಾಯನು ರಾಮರಾಜನ ವಿರುದ್ಧ ಮಾತಾಡಲಾರದೆ, ಸೌಮ್ಯದಿಂದ—ಸರಿ, ನೀನು ಹೇಳುವ ಮಾತು ಅಯೋಗ್ಯವೆಂದು ನಾನು ಹೇಳುವದಿಲ್ಲ. ವೈರಿಗಳ ವಿಷಯವಾಗಿ ನಾವು ಜಾಗರೂಕರಾಗಿರುವದೇ ನೆಟ್ಟಗೆ; ಆದರೆ ಪ್ರತ್ಯಕ್ಷ ಕೃಷ್ಣದೇವರಾಜರೇ ಕರೆದಿರಲು, ನೀನು ಬಾರದಿದ್ದರೆ ವ್ಯತ್ಯಾಸವಾಗಲಿಕ್ಕಿಲ್ಲವೇ? ಮೂರು-ನಾಲ್ಕು ದಿವಸಗಳಲ್ಲಿಯೇ ಲಗ್ನಮುಹೂರ್ತವನ್ನಿಟ್ಟರೆ ಹ್ಯಾಗೆ? ನೀನು ಮಹಾರಾಜರನ್ನು ಕಂಡು ಅವರ ಒಪ್ಪಿಗೆಯನ್ನು ಪಡೆದು ಹೋಗುವದು ನೆಟ್ಟಗೆ ಕಾಣುತ್ತದೆ, ಅನ್ನಲು, ರಾಮರಾಜನು ಅತುರದಿಂದ—ಅಷ್ಟಕ್ಕಿಷ್ಟಕ್ಕೆ ಮಹಾರಾಜರನ್ನು ಕೇಳುತ್ತ ಕುಳಿತುಕೊಳ್ಳುವದರಲ್ಲಿ ಅರ್ಥವೇನು? ರಾಜಕಾರ್ಯದ ಸಲುವಾಗಿಯೇ ನಾನು ಹೋಗುವದರಿಂದ, ಅವರಿಗೆ ವ್ಯತ್ಯಾಸವಾಗದೆ, ನನ್ನ ಕರ್ತವ್ಯತತ್ಪರತೆಗಾಗಿ ಅವರು ಸಂತೋಷಪಡಬಹುದು. ರಾಜಪುತ್ರಿಯ ವಿವಾಹಮುಹೂರ್ತವನ್ನು ಎಲ್ಲಿಯಾದರೂ ಮೂರು-ನಾಲ್ಕು ದಿವಸಗಳಲ್ಲಿ ನಿರ್ಧರಿಸುವ ಸಂಭವವುಂಟೆ? ಸುಮ್ಮನೆ ಇಲ್ಲದ ಸಂಶಯಕ್ಕೆ ಗುರಿಯಾಗಿ, ಕಾಲಹರಣಮಾಡುವದು ಸರಿಯಲ್ಲ. ತಾವು ಮಹಾರಾಜರ ಬಳಿಗೆ ಹೋಗಿ ಲಗ್ನಮುಹೂರ್ತವನ್ನು ನಿರ್ಧರಿಸಿರಿ. ಹಿರಿಯರಿದ್ದಬಳಿಕ ನನ್ನ ಅವಶ್ಯವೇನಿದೆ? ನಾನು ಬೇಗನೆ ಬರುವೆನು. ಒಂದು ಪಕ್ಷದಲ್ಲಿ ಮುಹೂರ್ತವು ಒತ್ತರಿಸಿದರೆ, ನಾನೇನು ದೂರಹೋಗಿರುವದಿಲ್ಲ; ಕರೆಕಳುಹಿದರೆ ಕೂಡಲೆ ಬರುವೆನು, ಎಂದು ಹೇಳಿದನು. ಅದನ್ನು ಕೇಳಿ ತಿರುಮಲರಾಯನು ಹೆಚ್ಚು ಮಾತಾಡಲಾರದೆ ತಮ್ಮನ ಒಪ್ಪಿಗೆಯನ್ನು ಪಡೆದು, ಆತನಿಗೆ ಬೇಗನೆ ಬರಬೇಕೆಂದು ಹೇಳಿ ಹೊರಟುಹೋದನು. ಇತ್ತ ರಾಮರಾಜನು ಧನಮಲ್ಲನನ್ನು ಕರೆಕಳುಹಲು, ದಣಿದು ಹೆಣವಾಗಿ ಬಿದ್ದುಕೊಂಡಿದ್ದ ಆತನು, ಒಟ್ಟುಗುಟ್ಟುತ್ತ ನಿರ್ವಾಹವಿಲ್ಲದೆ ತನ್ನ ಕುದುರೆಯನ್ನು ಹತ್ತಿಕೊಂಡು ರಾಮರಾಜನ ಬಳಿಗೆ ಬಂದನು. ಆಮೇಲೆ ಅವರಿಬ್ಬರು ತಮ್ಮ ಕುದುರೆಗಳನ್ನು ಒತ್ತರದಿಂದ ನಡಿಸುತ್ತ ಕುಂಜವನದ ಕಡೆಗೆ ಸಾಗಿದರು. ಹಾದಿಯಲ್ಲಿ ಹೋಗಹೋಗುತ್ತ

ರಾಮರಾಜನು ಧನಮಲ್ಲನನ್ನು ಕುರಿತು—ಧನಮಲ್ಲ, ಏನೇನು ಸಂಗತಿಯು ವರ್ತಿಸಿತೆಂಬದನ್ನು ಇನ್ನೊಮ್ಮೆ ಹೇಳು, ಎಂದು ಕೇಳಲು, ಧನಮಲ್ಲನು ಯಾವತ್ತು ವೃತ್ತಾಂತವನ್ನು ಒಂದುಳಿಯದಂತೆ ಹೇಳಹತ್ತಿದನು; ಆದರೆ ವಿಚಾರಮಗ್ನನಾದ ರಾಮರಾಜನ ಲಕ್ಷವು ಪೂರ್ಣವಾಗಿ ಅತ್ತಕಡೆಗೆ ಇದ್ದಿಲ್ಲ. ಆದರೂ ಆತನು ಸುದ್ದಿಯನ್ನು ಕೇಳುವವನಂತೆ ನಟಿಸುತ್ತಿದ್ದನು. ಈ ಸ್ಥಿತಿಯಲ್ಲಿ ಅವರು ಒತ್ತರದಿಂದ ಸಾಗುತ್ತ ಕುಂಜವನದ ಸನಿಯಕ್ಕೆ ಬಂದರು. ಆಗ ರಾಮರಾಜನು ಧನಮಲ್ಲನನ್ನು ಕುರಿತು—ನೀನು ಸಂಗನಪಲ್ಲಿಗೆಹೋಗಿ, ಮೆಹೇರಜಾನ—ಮಾರ್ಜಿನೆಯರ ವೃತ್ತಾಂತವನ್ನು ತಿಳಿದು ಬಂದು ನನಗೆ ಹೇಳು. ಅವರು ನಿನ್ನೆ ರಾತ್ರಿಯಲ್ಲಿ ಎಲ್ಲಿಗೂ ಹೋಗಿರಲಿಕ್ಕಿಲ್ಲ; ಅಲ್ಲಿಯೇ ಎಲ್ಲಿಯಾದರೂ ಗುಪ್ತರೀತಿಯಿಂದ ವಾಶಿಸಿರಬಹುದು. ನಡೆ, ಬೇಗನೆ ಹೋಗಿ ಬಾ. ಅವರ ಸುದ್ದಿಯನ್ನು ತರದಿದ್ದರೆ ನಿನ್ನ ಪರಿಣಾಮವಾಗಲಿಕ್ಕಿಲ್ಲ. ನಡೆ, ನಿಲ್ಲಬೇಡ, ಎಂದು ಹೇಳಲು, ಧನಮಲ್ಲನು ಮನಸ್ಸಿನಲ್ಲಿ ತಳಮಳಗೊಳ್ಳುತ್ತ ಸಂಗನಪಲ್ಲಿಯ ಹಾದಿಯನ್ನು ಹಿಡಿದನು.

ಇತ್ತ ರಾಮರಾಜನು ಕುಂಜವನವನ್ನು ಪ್ರವೇಶಿಸಿದನು. ಮೆಹೇರಜಾನಳ ಮೇಲೆ ಆತನ ಪ್ರೇಮಬಹಳ. ಮಂತ್ರಿಪದವಿಯ ಮಹತ್ವಾಕಾಂಕ್ಷೆಯಿಂದ ತಾನು ಮೆಹೇರಜಾನಳನ್ನು ನಿರಾಕರಿಸಿದ್ದಕ್ಕಾಗಿ ಆತನಿಗೆ ಈಗ ಪೂರ್ಣ ಪಶ್ಚಾತ್ತಾಪವಾಗಿತ್ತು. ಮೆಹೇರಜಾನಳ ಸಹವಾಸದಲ್ಲಿರುವಾಗ ಆನಂದಕ್ಕೆ ಕಾರಣವಾದ ಸ್ಥಳಗಳೆಲ್ಲ, ಈಗ ಆತನ ದುಃಖಕ್ಕೆ ಕಾರಣವಾದವು. ಕುಂಜವನದೊಳಗಿನ ಮಂದಿರ, ಆ ಮಂದಿರದೊಳಗಿನ ಶಯನಗೃಹ, ವನಮಧ್ಯದಲ್ಲಿದ್ದ ಪುಷ್ಕರಣಿ, ಅದರ ಸುತ್ತಲಿನ ಮನೋಹರವಾದ ಲತಾಮಂಟಪಗಳು ಇವುಗಳನ್ನು ನೋಡಿ ರಾಮರಾಜನಿಗೆ ಬಹಳ ವ್ಯಸನವಾಯಿತು. ಆತನು ದುಃಖವೇಗವನ್ನು ತಡೆಯಲಾರದೆ, ಪುಷ್ಕರಣಿಯಲ್ಲಿ ಸ್ನಾನಮಾಡಿ ವಿಶ್ರಾಂತಿಯನ್ನು ಹೊಂದಬೇಕೆಂದು ಭಾವಿಸಿ, ತನ್ನ ಉಡಪು-ತೊಡಪುಗಳನ್ನು ಕಳೆದಿಟ್ಟನು. ಇನ್ನು ಆತನು ಪುಷ್ಕರಣಿಯಲ್ಲಿ ದುಮುಕತಕ್ಕವನು; ಅಷ್ಟರಲ್ಲಿ ಹಿಂದಕ್ಕೆ ಮೆಹೇರಜಾನಳು ನುಡಿದ ಅಪಘಾತದ ಶಬ್ದದ ನೆನಪಾಗಿ, ತಾನು ಎಲ್ಲಿ ಪುಷ್ಕರಣಿಯಲ್ಲಿ ಮುಣುಗಿ ಸಾಯುವೆನೋ ಎಂದು ಅಂಜಿ, ಮತ್ತೆ ಆತನು ಉಡಪು-ತೊಡಪುಗಳನ್ನು ಧರಿಸಿಕೊಳ್ಳಹತ್ತಿದನು. ಆ ಪುಷ್ಕರಣಿಯ ತೀರದಲ್ಲಿ ನಿಲ್ಲುವ ಧೈರ್ಯವು ಆತನಿಗೆ ಆಗಲೊಲ್ಲದು. ಆತನು ಅವಸರದಿಂದ ಅಲ್ಲಿಂದ ಹೊರಟು ಒಂದು ಲತಾಮಂಟಪವನ್ನು ಪ್ರವೇಶಿಸಿದನು. ಮಧ್ಯಾಹ್ನವು ತಿರುಗಿಹೋಗಿದ್ದರೂ, ಆತನಿಗೆ ಹಸಿವೆ-ನೀರಡಿಕೆಗಳ ಪರಿವೆಯು ಉಳದಿದ್ದಿಲ್ಲ. ಗ್ಲಾನಿಯು ಬಂದಂತಾಗಿ ಆತನು

ಲತಾಮಂಟಪದ ಪೀಠದಲ್ಲಿ ಒರಗಿದನು. ಅರೆನಿದ್ದೆಯಲ್ಲಿ ಆತನಿಗೆ ಕನಸಿನಮೇಲೆ ಕನಸುಗಳು ಬೀಳಹತ್ತಿದವು. ಹೀಗೆ ಸ್ವಪ್ನಾವಸ್ಥೆಯಲ್ಲಿ ಎರಡು ತಾಸುಗಳು ಕಳೆಮಹೋಗಿರಬಹುದು. ಮುಂದೆ ಒಂಬತ್ತುತಾಸಿನ ಸುಮಾರಕ್ಕೆ ಆತನು ಕನಸಿನಲ್ಲಿ ಪಕ್ಕನೆ ಎದ್ದು ನಿಂತು, ಖಡ್ಗವನ್ನು ಹಿರಿದು ಮುಂದಕ್ಕೆ ದುಮುಕಲಿಕ್ಕೂ, ಧನಮಲ್ಲನು ಆತನ ಎದುರಿಗೆ ಬಂದು ನಿಲ್ಲಲಿಕ್ಕೂ ಗಂಟೀ ಬಿದ್ದಿತು. ಮೊದಲೇ ಅಂಜುತ್ತಂಜುತ್ತ ಬರುತ್ತಿದ್ದ ಧನಮಲ್ಲನು, ತನ್ನಮೇಲೆ ರಾಮರಾಜನು ಹೀಗೆ ದುಮುಕಿದ್ದನ್ನು ನೋಡಿ ಮತ್ತಿಷ್ಟು ಬೆದರಿದನು. ರಾಮರಾಜನಿಗೆ ತಾನು ಯಾರ ಮೇಲೆ ದುಮುಕಿದನೆಂಬದರ ಎಚ್ಚರವು ಉಳಿದಿದ್ದಿಲ್ಲ; ಆದರೆ ಈ ಸ್ಥಿತಿಯು ಬಹಳ ಹೊತ್ತು ಉಳಿಯಲಿಲ್ಲ. ರಾಮರಾಜನು ಪೂರ್ಣವಾಗಿ ಎಚ್ಚತ್ತು, ಧನಮಲ್ಲನನ್ನು ನೋಡಿ—"ಯಾವಾಗಬಂದೆ? ಮೆಹೇರಜಾನಳು ಎಲ್ಲಿರುವಳು? ಎಂದು ಕೇಳಿದನು. ಅದಕ್ಕೆ ಧನಮಲ್ಲನು ಬಾಯಬಿಚ್ಚಿ ಮಾತಾಡದೆ, ಸನ್ನೆ ಮಾಡಿ ಏನೋ ತಿಳಿಸಹತ್ತಿದನು. ಆಗ ರಾಮರಾಜನು ಸಂತಾಪಗೊಂಡು, ಕವಕ್ಕನೆ ಆತನ ಮೈ ಮೇಲೆ ಹೋಗಿ —ಥೂ ಮೂರ್ಖಾ, ಇನ್ನುಮೇಲೆ ಯಾತಕ್ಕೆ ಈ ಸೋಗು? ಮೆಹೇರಜಾನಳು ಎಲ್ಲಿರುವಳು? ಬಾಯಿಬಿಚ್ಚಿ ಹೇಳು ಎಂದು ಕೇಳಲು, ಧನಮಲ್ಲನು ತತ್ತರಿಸುತ್ತ-ಅವರು ನಿನ್ನೇ ವಿಜಾಪುರದ ಕಡೆಗೆ ಹೋದರಂತೆ, ಎಂದು ಹೇಳಿದನು. ಆಗ ರಾಮರಾಜನ ಸಿಟ್ಟು ತಲೆಗೇರಿತು. ಆತನು ಸಂತಾಪದಿಂದ ಉರಿಯುತ್ತ—ಡೊಣಗಾ, ನಿನ್ನನ್ನು ನಾನು ಸುಮ್ಮನೆ ಬಾವುಗನ ಹಾಗೆ ಸಾಕಿದೆನು. ನಿನ್ನ ಬದಲು ಒಂದು ನಾಯಿಯನ್ನು ಸಾಕಿದ್ದರೆ, ನಿನಗಿಂತಲೂ ಅದು ಕಾವಲಿನ ಕೆಲಸವನ್ನು ಚನ್ನಾಗಿ ಮಾಡುತ್ತಿತ್ತು. ಹೋಗು, ನನ್ನೆದುರಿಗೆ ನಿಲ್ಲಬೇಡ. ಮೆಹೇರಜಾನಳು ಎಲ್ಲಿರುವಳೆಂಬದನ್ನು ಗೊತ್ತುಹಚ್ಚಿ, ಆಕೆಯನ್ನು ಕರಕೊಂಡೇ ನನ್ನೆದುರಿಗೆ ಬಾ. ಹಾಗೆ ಮಾಡದೆ, ನೀನು ಎಲ್ಲಿಯಾದರೂ ವಿಜಯನಗರದಲ್ಲಿ ನನ್ನ ಕಣ್ಣಿಗೆ ಬಿದ್ದರೆ, ನಿನ್ನನ್ನು ಶೂಲಕ್ಕೇರಿಸುವೆನು, ಇಲ್ಲವೆ ನಿಲ್ಲಿಸಿ ಸುಡಿಸುವೆನು, ಎಂದು ಗದ್ದರಿಸಿದನು. ಆಗ ಧನಮಲ್ಲನೂ ಸಿಟ್ಟು ಬೆಂಕಿಯಾಗಿದ್ದನು. ಆತನ ಕಣ್ಣುಗಳು ಕೆಂಪಗೆ ಗುಲಗಂಜಿಯ ಹಾಗೆ ಆಗಿದ್ದವು. ಆತನ ಬಾಹುಗಳು ಸ್ಫುರಣಹೊಂದಿದವು. ಅಷ್ಟರಲ್ಲಿ ರಾಮರಾಜನು ಮತ್ತೆ ಧನಮಲ್ಲನ ಮೈ ಮೇಲೆ ಹೋಗಿ—ನಡೆ, ಹಾಳಾಗಿಹೋಗು, ನನ್ನೆದುರಿಗೆ ನಿಲ್ಲಬೇಡ, ಎಂದು ನುಡಿದು, ಅಶ್ವಾರೂಢನಾಗಿ ಕುಂಜವನದಿಂದ ಹೊರಬಿದ್ದು, ವಿಜಯನಗರದ ಕಡೆಗೆ ಸಾಗಿದನು. ಆಗ ಧನಮಲ್ಲನು ಅತ್ಯಂತ ಸಂತಪ್ತಮುದ್ರೆಯಿಂದ ರಾಮರಾಜನನ್ನು ನೋಡುತ್ತ, ಸ್ಥಳಬಿಟ್ಟು ಕದಲದೆ ಅವಡುಗಚ್ಚಿ ತಲೆಯಲ್ಲಾಡಿಸಿದನು. ಅತ್ತ ರಾಮರಾಜನು ಪಶ್ಚಾತ್ತಾಪದಿಂದ ವಿಜ

ಯನಗರಕ್ಕೆ ಸಾಗಲು, ಧನಮಲ್ಲನು ಆ ರಾತ್ರಿ ಕುಂಜವನದಲ್ಲಿ ಉಳಿದುಕೊಂಡು, ಮರುದಿನ ಬೆಳಗಾಗುತ್ತಲೆ ತನ್ನ ಕುದುರೆಯನ್ನು ಹತ್ತಿಕೊಂಡು ತುಂಗಭದ್ರೆಯನ್ನು ದಾಟಿ ಉತ್ತರದಿಕ್ಕಿಗೆ ಸಾಗಿದನು. ಆತನ ಹೃದಯದಲ್ಲಿ ತನ್ನ ಒಡೆಯನ ಸೇಡುತೀರಿಸಿಕೊಳ್ಳುವ ವಿಚಾರವು ಉತ್ಪನ್ನವಾಗಿ, ಅದು ಭರದಿಂದ ಬೆಳೆಯತೊಡಗಿತು.

ನೆಯ ಪ್ರಕರಣ—ಮನಸ್ಸಿನ ತಳಮಳಿಕೆ.

ಹೀಗೆ ರಾಮರಾಜನು ಅಸ್ವಸ್ಥಮನಸ್ಸಿನಿಂದ ವಿಜಯನಗರದ ಕಡೆಗೆ ಸಾಗಿದ್ದನು. ಮೆಹೇರಜಾನಳ ಶೋಧವಾಗದ್ದರಿಂದ ಆತನಿಗೆ ಹುಚ್ಚುಹಿಡಿದಹಾಗಾಗಿತ್ತು. ತಾನು ಮೆಹೇರಜಾನಳಿಗೆ ಪತ್ರ ಬರೆದು ಅಪರಾಧಮಾಡಿದೆನೆಂತಲೂ ಧನಮಲ್ಲನು ದುರ್ಲಕ್ಷದಿಂದ ಅವರನ್ನು ಹೋಗಗೊಟ್ಟು ಅಪರಾಧಮಾಡಿದನೆಂತಲೂ ರಾಮರಾಜನು ಭಾವಿಸಿ, ನಡನಡುವೆ ಸಂತಾಪಗೊಳ್ಳುವನು. ಆತನ ಸಂತಾಪದ ಫಲವನ್ನು, ಆತನ ಕುದುರೆಯು ಭೋಗಿಸಬೇಕಾಯಿತು. ಆತನು ಸಿಟ್ಟಿನಿಂದ ಒಮ್ಮೆ ಕುದುರೆಯ ಲಗಾಮವನ್ನು ಜಗ್ಗುವನು, ಮತ್ತೊಮ್ಮೆ ಸಿಟ್ಟಿನಿಂದ ಕುದುರೆಯನ್ನು ಕೊಸೆಯುವನು, ಇನ್ನೊಮ್ಮೆ ಸಂತಾಪದಿಂದ ಕುದುರೆಯನ್ನು ಚಬಕದಿಂದ ಹೊಡೆಯುವನು. ತನ್ನ ಯಜಮಾನನು ಈದಿನ ಹೀಗೆಯಾಕೆಮಾಡುವನೆಂಬದು ಆತನ ಕುದುರೆಗೆ ತಿಳಿಯದಾಯಿತು. ರಾಮರಾಜನ ಕುದುರೆಯು ನಿಷ್ಕಲಂಕವಾದದ್ದು. ಅದರಮೇಲೆ ರಾಮರಾಜನ ಪ್ರೀತಿಯೂ ರಾಮರಾಜನಮೇಲೆ ಅದರ ಪ್ರೀತಿಯೂ ಬಹಳ. ತನ್ನ ಒಡೆಯನ ಮನಸ್ಸಿನಲ್ಲಿ ವಿಜಯನಗರಕ್ಕೆಬೇಗನೆ ಮುಟ್ಟುವದಿರುತ್ತದೆಂದು ತಿಳಿದು ಆ ಮೂಕಪ್ರಾಣಿಯು ನಾಗಾಲನಡಿಗೆಯಿಂದ ಬಹು ವೇಗವಾಗಿ ಹೋಗಹತ್ತಿತು. ರಾಮರಾಜನು ಎಷ್ಟು ಸಮಾಧಾನಗೊಳಿಸಿದರೂ, ಅದು ತನ್ನ ವೇಗವನ್ನು ಕಡಿಮೆಮಾಡಲಿಲ್ಲ. ಇಷ್ಟು ವೇಗದಿಂದ ಒಂದೇ ಸವನೆಹೋದರೆ ಕುದುರೆಯು ದಣಿದೀತೆಂಬ ಎಚ್ಚರವೂ ರಾಮರಾಜ-

ನಿಗೆ ಉಳಿಯಲಿಲ್ಲ. ಬೇಗನೆ ವಿಜಯನಗರಕ್ಕೆ ಮುಟ್ಟುವದು ರಾಮರಾಜನಿಗೆ ಇಷ್ಟವಾದದ್ದರಿಂದ, ರಾಮರಾಜನು ಕುದುರೆಯ ವೇಗವನ್ನು ಕಡಿಮೆಮಾಡುವ ಭರಕ್ಕೆ ಹೋಗಲಿಲ್ಲ. ಆ ದಿವ್ಯಾಶ್ವವು ಅವಿರಾಮವಾದ ವೇಗದಿಂದ ನಡೆದು, ರಾಮರಾಜನ ಮಂದಿರದ ಬಾಗಿಲಿಗೆ ಮುಟ್ಟಿತು. ಹೀಗೆ ಅಕಸ್ಮಾತ್ತಾಗಿ ರಾಮರಾಜನು ಬಂದದ್ದನ್ನು ನೋಡಿ ಸೇವಕರಿಬ್ಬರು ಲಗಬಗೆಯಿಂದ ಬಂದು ಕುದುರೆಯ ಲಗಾಮು ಹಿಡಿದರು. ರಾಮರಾಜನು ಕುದುರೆಯಿಂದ ಇಳಿದದ್ದೊಂದೇ ತಡ, ಆ ಮೂಕಪ್ರಾಣಿಯು ಉಸರುಗಟ್ಟಿ ದಪ್ಪನೆ ನೆಲಕ್ಕೆ ಬಿದ್ದಿತು. ಆಗ ರಾಮರಾಜನು ಗಾಬರಿಯಾಗಿ ತಿರುಗಿ ನೋಡಲು, ಆತನ ಪ್ರೀತಿಯ ಕುದುರೆಯು ಪ್ರಾಣ ಬಿಟ್ಟಿತು. ಈ ಅನರ್ಥವನ್ನು ನೋಡಿ ರಾಮರಾಜನು ಅಸಮಾಧಾನಪಟ್ಟದ್ದಲ್ಲದೆ, ಇದೊಂದು ದೊಡ್ಡ ಅಪಶಕುನವಾಯಿತೆಂದು ಆತನು ಬೆದರಿದನು. ಈ ಅಪಶಕುನದ ಜೋಡಿಗೆ ಮೇಹೇರಜಾನಳ ವಿಯೋಗವಾದದ್ದೊಂದು ಅಪಶಕುನವು ರಾಮರಾಜನ ಮನಸ್ಸಿನಲ್ಲಿ ಬಂದು ಕುಳಿತುಕೊಂಡಿತು. ಇವೆರಡೂ ಅಪಶಕುನಗಳ ಜೋಡುಗುಂಡು ರಾಮರಾಜನ ಎದೆಗೆ ಬಡೆದಂತಾದದ್ದರಿಂದ, ಆತನು ವ್ಯಥೆಪಟ್ಟು ಹಾಗೇ ಒಳಗೆ ಹೋಗಿ ಪೋಷಾಕು ಸಹ ಇಳಿಸದೆ ಮಂಚದ ಮೇಲೆ ಬಿದ್ದುಕೊಂಡನು. ಆಗ ಆತನಿಗೆ ಎಷ್ಟು ವ್ಯಸನವಾಗಿರಬಹುದೆಂಬದನ್ನು ವಾಚಕರೇ ತರ್ಕಿಸತಕ್ಕದ್ದು. ಆತನ ಉತ್ಸಾಹವು ಅಳಿದು ಹೋಯಿತು, ಆಲಸ್ಯವು ಕುಗ್ಗಿತು. ಆತನು ಉಸುರ್ಗಳೆಯುತ್ತ ಹಾಸಿಗೆಯಮೇಲೆ ಹೊರಳಾಡುತ್ತಿರಲು, ಸೇವಕನು ಬಂದು ತಿರುಮಲರಾಯರು ಭೆಟ್ಟಿಗೆ ಬಂದಿರುವರೆಂದು ವಿಜ್ಞಾಪಿಸಿದನು. ಈ ವಿಜ್ಞಾಪನೆಯಿಂದ ರಾಮರಾಜನಿಗೆ ಎಳ್ಳಷ್ಟು ಸಮಾಧಾನವಾಗಲಿಲ್ಲ. ಆತನು ಸಂತಾಪದಿಂದ ಸೇವಕನ ಮೈಮೇಲೆ ಹೋಗತಕ್ಕವನು, ಅಷ್ಟರಲ್ಲಿ ಆತನಲ್ಲಿ ವಿವೇಕವು ತಲೆದೋರಿ, ಹಾಗೆ ಹರಿಹಾಯುವದು ಸರಿಯಲ್ಲೆಂದು ತಿಳಿದು, ಆತನು ಎದ್ದು ಕುಳಿತು, ಸೇವಕನಿಗೆ—ಹೋಗು, ಅವರನ್ನು ಕರೆದುತಾ, ಎಂದು ಆಜ್ಞಾಪಿಸಿದನು. ರಾಮರಾಜನು ಬಂದಕೂಡಲೆ ತನಗೆ ಸುದ್ದಿಯನ್ನು ಹೇಳಬೇಕೆಂದು ತಿರುಮಲರಾಯನು ಸೇವಕರಿಗೆ ಆಜ್ಞಾಪಿಸಿದ್ದನು. ಅದರಂತೆ ಸೇವಕರು ಸುದ್ದಿಯನ್ನು ಹೇಳಲು, ತಿರುಮಲರಾಯನು ಕ್ಷಣವಾದರೂ ತಡೆಯದೆ ತಮ್ಮನನ್ನು ಕಾಣಲಿಕ್ಕೆ ಬಂದಿದ್ದನು. ಅಣ್ಣನು ಒಳಗೆ ಬಂದಕೂಡಲೆ ರಾಮರಾಜನು ಆತನನ್ನು ಸತ್ಕರಿಸಿ ಕುಳ್ಳಿರಿಸಿಕೊಂಡನು. ಕುಶಲ ಪ್ರಶ್ನಗಳಾದಮೇಲೆ ತಿರುಮಲರಾಯನು ರಾಮರಾಜನನ್ನು ಕುರಿತು—ತಮ್ಮಾ, ನೀನು ಹೋದ ಸುದ್ದಿ ಏನು? ನೀನು ಬೇಗನೆ ಬಂದದ್ದು ಬಹಳ ನಷ್ಟವಾಯಿತು. ನಾನು ಮೊದಲು ನಿನಗೆ ಸೂಚಿಸಿದಂತೆ ನಿನ್ನ ಲಗ್ನದ ಮೂಹೂರ್ತವನ್ನು

ನಾಳ್ಗೇ ದಿನಗಳಲ್ಲಿ ನಿರ್ಧರಿಸಿರುವರು. ಇಂಥ ಸುಮುಹೂರ್ತವು ಇನ್ನು ೫ ವರ್ಷಗಳಲ್ಲಿ ದೊರೆಯುವ ಹಾಗಿಲ್ಲದ್ದರಿಂದ, ಇಷ್ಟು ಅವಸರ ಮಾಡಬೇಕಾಯಿತು. ಮಹಾರಾಜರು ಒಂದೇಸವನೆ ನಿನ್ನ ಹಾದಿಯನ್ನು ನೋಡುತ್ತಿರುವರು. ಇಂದು ನೀನು ಬಾರದಿದ್ದರೆ ನಾಳೆ ನಿನ್ನನ್ನು ಕರೆಕಳುಹಬೇಕಾಗುತ್ತಿತ್ತು. ಇರಲಿ; ಮುಸಲ್ಮಾನರ ಒಳಸಂಚಿನ ಸುದ್ದಿಯೇನು? ಮಹಾರಾಜರು ಕೂಡ ಅದನ್ನು ಕೇಳಲು ಆತುರಪಡುತ್ತಿರುವರು, ಎಂದು ಕೇಳಲು, ರಾಮರಾಜನು ಇಲ್ಲದ ಉತ್ಸಾಹವನ್ನು ಮುಂದೆ ಮಾಡಿ ಅಣ್ಣನ ಸಂಗಡ ಮಾತಾಡಹತ್ತಿದನು. ಆತನು ಅಣ್ಣನ ಮಾತುಗಳಿಗೆ ತಟ್ಟನೆ ಉತ್ತರ ಕೊಡಲಾರದವನಾದನು. ತಾನು ಹೋಗುವಾಗ ಅಣ್ಣನ ಮುಂದೆ ಏನು ಹೇಳಿದ್ದೆನೆಂಬದನ್ನು ಸಹ ಆತನು ಮರೆತು ಬಿಟ್ಟಿದ್ದನು. ಸ್ವಲ್ಪಹೊತ್ತು ಆಲೋಚಿಸಿ ಅದು ನೆನಪಿಗೆ ಬಂದಕೂಡಲೆ, ಆತನು ಅಣ್ಣನನ್ನು ಕುರಿತು—ಸಂಗನಪಲ್ಲಿಯಲ್ಲಿ ಮುಸಲ್ಮಾನರ ಸಂಚುಗಳು ನಡೆಯುತ್ತಿರುವದು ನಿಜವು. ಪೀರನ ಗೋರಿಯ ದರ್ಶನಕ್ಕೆಂದು ಮೊದಮೊದಲು ನೂರಾರು ಜನರು ಬರುತ್ತಿರುವದು ಹೋಗಿ, ಈಗ ಸಾವಿರಾರು ಜನರು ಕೂಡುತ್ತಿರುವರು. ಹೀಗೆಯೇ ನಾವು ದುರ್ಲಕ್ಷ ಮಾಡಿದರೆ, ಯಾತ್ರೆಯ ನೆವದಿಂದ ಲಕ್ಷಾವಧಿ ಮುಸಲ್ಮಾನರು ಕೂಡಿ ನಮ್ಮ ರಾಜ್ಯದಲ್ಲಿ ನುಗ್ಗಲಿಕ್ಕೆ ಅನುಕೂಲವಾಗಬಹುದು. ನನಗೆ ಆ ಗೋರಿಯನ್ನು ಕಿತ್ತಿ ಒಗೆಯುವತನಕ ಸಮಾಧಾನವಾಗುವಹಾಗಿಲ್ಲ. ಯಾತ್ರೆಯ ನೆವದಿಂದ ಬೇರೆ ಬೇರೆ ಮುಸಲ್ಮಾನ ಬಾದಶಹರ ವಕೀಲರು ಅಲ್ಲಿ ಕೂಡಿ ಒಳಸಂಚುಗಳನ್ನು ನಡಿಸುವರೆಂದು ಕೇಳಿದ್ದೇನೆ. ಅಣ್ಣಾ, ನಾನು ಕೇಳಿದ ಸುದ್ದಿಯಲ್ಲಿ ತಥ್ಯವಿರುತ್ತದೆ. ಮುಸಲ್ಮಾನರು ಎಷ್ಟು ಗುಪ್ತರೀತಿಯಿಂದ ಮಸಲತ್ತುಗಳನ್ನು ಮಾಡಿದರೂ, ನಮ್ಮ ಗುಪ್ತಚಾರರು ಕೂಡಲೆ ಅದನ್ನು ನನಗೆ ಬಂದು ತಿಳಿಸುವರು. ನಮ್ಮ ರಾಜ್ಯಕ್ಕೆ ಏನಾದರೂ ಘಾತದ ಪ್ರಸಂಗವು ಒದಗಿದರೆ, ಅದು ಸಂಗನಪಲ್ಲಿಯೊಳಗಿನ ದರ್ಗೆಯ ಯೋಗದಿಂದಲೇ ಒದಗುವದೆಂಬದನ್ನು ಚನ್ನಾಗಿ ಲಕ್ಷದಲ್ಲಿಡಿರಿ, ಎಂದು ನುಡಿದು ಸುಮ್ಮನಾದನು.

ರಾಮರಾಜನು ಹೀಗೆ ಬಡಬಡ ಮಾತಾಡಿದ್ದನ್ನು ಕೇಳಿ ತಿರುಮಲರಾಯನಿಗೆ ಆಶ್ಚರ್ಯವಾಯಿತು. ತನ್ನ ತಮ್ಮನು ಸಂಗನಪಲ್ಲಿಗೆ ಹೋದ ನಿಜವಾದ ಕಾರಣವು ಗೊತ್ತಾದದ್ದರಿಂದ ಆತನು ಹೀಗೆ ಆಶ್ಚರ್ಯಪಟ್ಟದ್ದು ಅಸ್ವಾಭಾವಿಕವಲ್ಲ. ಮುಸಲ್ಮಾನರ ಕಾರಸ್ಥಾನವನ್ನು ನೋಡಿ ಸಂತಾಪಗೊಂಡದ್ದರಿಂದ ತನ್ನ ತಮ್ಮನು ಹೀಗೆ ಬಡಬಡ ಮಾತಾಡುವನೆಂದು ತಿಳಿದು ಆತನು ನಡುವೆ ಪ್ರಶ್ನಗಳನ್ನು ಮಾಡದೆ, ಇದ್ದದ್ದನ್ನೆಲ್ಲ ತೋಡಿಕೊಳ್ಳಲಿಕ್ಕೆ ತಮ್ಮನಿಗೆ ಅವಕಾಶ

ಕೊಟ್ಟನು. ರಾಮರಾಜನು ಸುಮ್ಮನಾಗಲು, ತಿರುಮಲರಾಯನು ಸ್ವಲ್ಪಹೊ
ತ್ತಿನಮೇಲೆ ತಮ್ಮನಿಗೆ ಏನೋ ಪ್ರಶ್ನಮಾಡಬೇಕೆಂದು ಯೋಚಿಸಿ, ಮಾತಾಡ
ತೊಡಗುತ್ತಿರಲು, ರಾಮರಾಜನು—ಅಣ್ಣಾ, ಈಗ ನನಗೆ ಬಹಳ ತ್ರಾಸವಾಗಿದೆ.
ಉಳಿದ ಸಂಗತಿಯನ್ನು ನಾಳೆ ಬೆಳಗಾದ ಬಳಿಕ ಹೇಳುವೆನು. ಹೇಳತಕ್ಕ ಸಂಗ
ತಿಗಳು ಬಹಳ ಇರುತ್ತವೆ. ಇದಲ್ಲದೆ, ವಿಶೇಷ ಸಂಗತಿಯನ್ನು ಅರಿತುಕೊಂಡು
ಬರುವದಕ್ಕಾಗಿ ಎಗಡನೆಯ ದೂತನನ್ನೂ ಕಳಿಸಿದ್ದೀನೆ. ಆತನು ಬಹಳ
ಮಾಡಿ ನಾಳಿಗೆ ಬಂದರೂ ಬರಬಹುದು. ಆಮೇಲೆ ಹ್ಯಾಗೂ ವಿಚಾರಮಾಡೇ
ಮಾಡಬೇಕಾಗುತ್ತದೆ. ಈಗ ಚನ್ನಾಗಿ ವಿಶ್ರಾಂತಿಯು ದೊರೆಯದಿದ್ದರೆ,
ಪ್ರಕೃತಿಯು ಕೆಡುವ ಸಂಭವವಿರುತ್ತದೆ. ನಾನು ಹೋದ ಬಳಿಕ ಇಲ್ಲಿ ಯಾವ
ಸಂಗತಿಗಳು ನಡೆದವೆಂಬದನ್ನು ವಿಚಾರಿಸಲಿಕ್ಕೂ, ಅವನ್ನು ಕೇಳಲಿಕ್ಕೂ ನನಗೆ
ಉತ್ಸುಕತೆಯಿಲ್ಲ. ನೀವು ಇದ್ದಬಳಿಕ ಯಾವ ಮಾತಿಗೂ ಕೊರತೆಯಾಗದು.
ಎಲ್ಲವೂ ಅನುಕೂಲಿಸಿಯೇ ಅನುಕೂಲಿಸುವದು, ಎಂದು ನುಡಿಯಲು, ತಿರುಮಲ
ರಾಯನು—ನಿನಗೆ ಅಷ್ಟು ತ್ರಾಸವಾಗಿದ್ದರೆ ಈಗ ನಾನಾದರೂ ಹೆಚ್ಚಿಗೆ
ಮಾತಾಡುವದಿಲ್ಲ. ನಾಳೆ ಮಾತಾಡೋಣವಂತೆ. ನಾನು ಮೊದಲು ಹೇಳಿ
ದಂತೆ ಮೂಹೂರ್ತವು ತೀರ ಸಮೀಪಿಸಿರುವದರಿಂದ ನೀನು ಎಲ್ಲಿಯೂ ಹೋಗ
ಬಾರದು. ಅರಸನು ಸುಪ್ರಸನ್ನನಾಗಿರುವತನಕ ಎಲ್ಲ ನೆಟ್ಟನೆ ಆತನು ಕ್ಷೋಭಿ
ಸಿದರೆ ಕೆಲಸವು ಕೆಟ್ಟುಹೋದೀತು. ನಮಗೆ ಈಗ ಅಭ್ಯುದಯಕಾಲವು ಒದ
ಗಿರುವಂತೆ ತೋರುತ್ತದೆ ಎಂದು ನುಡಿಯುತ್ತಿರಲು, ರಾಮರಾಜನು ಅಣ್ಣನನ್ನು
ಮುಂದೆ ಮಾತಾಡಗೊಡದೆ ನಾನು ಇನ್ನುಮೇಲೆ ಎಲ್ಲಿಗೂ ಹೋಗುವದಿಲ್ಲ;
ಆದರೆ ಇನ್ನು ನನಗೆ ಸ್ವಸ್ಥವಾಗಿ ಮಲಗಗೊಡಿರಿ. ನೀವು ಹೇಳುವ ಸುದ್ದಿಯು
ಅತ್ಯಂತ ಆನಂದದಾಯಕವಾದದ್ದು; ಆದರೆ ಸದ್ಯಕ್ಕೆ ನಾನು ಕಣ್ಣುತುಂಬ ನಿದ್ದೆ
ಮಾಡಿದ ಹೊರತು, ನನಗೆ ಯಾವ ಮಾತಿನಿಂದಲೂ ಆನಂದವಾಗುವಹಾಗಿಲ್ಲ.
ಶರೀರವು ಸುಖದಿಂದಿದ್ದರೆ, ಎಲ್ಲದರಿಂದ ಸುಖವು. ನಾನು ನಿದ್ದೆಮಾಡಿ ವಿಶ್ರಾಂ
ತಿಯನ್ನು ಹೊಂದಿ ನಾಳೆ ಬೆಳಿಗಿನಲ್ಲಿ ತಮ್ಮ ದರ್ಶನಕ್ಕೆ ಬರುವೆನು. ಇಬ್ಬರೂ
ಮಹಾರಾಜರ ದರ್ಶನಕ್ಕೆ ಹೋಗೋಣ. ಅಲ್ಲಿಯವರೆಗೆ ಮಹಾರಾಜರಿಗೆ
ಏನಾದರೂ ಹೇಳಿ ಸಮಾಧಾನಮಾಡಿರಿ. ಇಲ್ಲದಿದ್ದರೆ, ಊರಿಗೆ ಬಂದು
ಭೆಟ್ಟಿಗೆ ಬರಲಿಲ್ಲೆಂದು ಅವರು ವಿಕಲ್ಪಭಾವವನ್ನು ತಾಳಿಗೀಳಿಯಾರು, ಎಂದು
ನುಡಿದು ಸುಮ್ಮನಾದನು. ಇನ್ನುಮೇಲೆ ಬಹಳ ಹೊತ್ತು ಕುಳಿತುಕೊಳ್ಳುವದ
ರಲ್ಲಿ ಅರ್ಥವಿಲ್ಲೆಂತಲೂ, ರಾಮರಾಜನ ಸ್ಥಿತಿಯು ವಿಲಕ್ಷಣವಾಗಿರುವದೆಂತಲೂ
ತಿಳಿದು, ತಿರುಮಲರಾಯನು ಹೊರಟುಹೋದನು. ಅದರಿಂದ ರಾಮರಾಜನಿಗೆ

ಸಮಾಧಾನವಾದಂತಾಗಿ, ಆತನು ಪುನಃ ಪಲ್ಲಂಗದಮೇಲೆ ಬಿದ್ದುಕೊಂಡನು. ಇನ್ನು ಮೇಲೆ ಯಾರು ಬಂದರೂ ತನ್ನನ್ನು ಎಬ್ಬಿಸಬಾರದೆಂದು ರಾಮರಾಜನು ಸೇವಕರಿಗೆ ಕಟ್ಟಪ್ಪಣೆ ಮಾಡಿ, ನಾನು ಹೀಗೆ ಹೇಳಿ ಮಲಗಿರುವೆನೆಂದು ದರ್ಶನಕ್ಕೆ ಬಂದವರ ಮುಂದೆ ಸ್ಪಷ್ಟವಾಗಿ ಹೇಳಬೇಕೆಂದು ಸೇವಕರಿಗೆ ಸೂಚಿಸಿದ್ದನು

ನಿದ್ದೆಯು ಯಾರ ಕೈಯೊಳಗಿನದೂ ಅಲ್ಲ. ನಿದ್ದೆ ಮಾಡಬೇಕೆನ್ನುವವರಿಗೆ ಅದು ಬರುವದೇ ಇಲ್ಲ. ನಿದ್ದೆ ಮಾಡಬಾರದೆನ್ನುವವರನ್ನು ಮಾತ್ರ ಅದು ದುಂಬಾಲುಬಿದ್ದು ಬಾಧಿಸುತ್ತದೆ. ರಾಮರಾಜನಿಗೆ ಆದ ದಣುವಿಕೆಯನ್ನು ನೋಡಿದರೆ, ಮಲಗಿದಕೂಡಲೆ ಆತನಿಗೆ ಗಪ್ಪನೆ ನಿದ್ದೆಹತ್ತಬೇಕಾಗಿತ್ತು; ಆದರೆ ಮನಸ್ಸಿನ ಅಸ್ವಸ್ಥತೆಯಿಂದ ತಳಮಳಿಸುತ್ತಿದ್ದ ಆತನನ್ನು ನಿದ್ದೆಯು ಸೋಂಕಲೇ ಇಲ್ಲ. ಮೆಹೇರಜಾನಳು ಇನ್ನು ಬರಲಿಕ್ಕಿಲ್ಲವೆ? ಹಾಯ್ ಹಾಯ್! ನಾನು ಇದೇನು ಕೆಲಸ ಮಾಡಿ ಇಟ್ಟೆನು! ಎಂದು ಆತನು ಮರುಗಿ ಉಸುರ್ಗಳೆಯುತ್ತಲಿದ್ದನು. ನಡನಡುವೆ ಮೆಹೇರಜಾನಳ ವಿಷಯವಾಗಿ ಆತನ ಮನಸ್ಸಿನಲ್ಲಿ ಆಶೆಯು ಉತ್ಪನ್ನವಾಗುತ್ತಿತ್ತು. ಮೆಹೇರಜಾನಳು ಸಿಟ್ಟಿನ ಭರದಲ್ಲಿ ಹೋಗಿದ್ದರೂ, ಸಿಟ್ಟು ಇಳಿದ ಬಳಿಕ ಪಶ್ಚಾತ್ತಾಪಪಟ್ಟು ತಾನಾಗಿ ಬರಬಹುದೆಂತಲೂ, ನನ್ನನ್ನು ಅಗಲಿ ಹೋದದ್ದರಿಂದ ಅನುಭೋಗಿಸಬೇಕಾದ ಕಷ್ಟಗಳ ಯೋಗದಿಂದ ಆಕೆಯು ಮನಸ್ಸು ನನ್ನ ಕಡೆಗೆ ತಿರುಗೀತೆಂತಲೂ ಆತನು ಕಲ್ಪಿಸಿದನು. ಮೆಹೇರಜಾನಳು ಗರ್ಭಿಣಿಯಿರುವಳೆಂದು ಮಾರ್ಜಿನೆಯು ಹೇಳಿದ್ದು ನೆನಪಾದ ಕೂಡಲೆ, ರಾಮರಾಜನ ಮನಸ್ಸಿಗೆ ಹ್ಯಾಗೆ ಹ್ಯಾಗೋ ಆಯಿತು. ತಾನು ಧನಮಲ್ಲನಿಗೆ ಒಳಿತಾಗಿ ಸಿಟ್ಟುಮಾಡಿ ಕಳಿಸಿಕೊಟ್ಟಿರುವದರಿಂದ, ಆತನು ಮೆಹೇರಜಾನಳನ್ನು ಗೊತ್ತುಹಚ್ಚಿಕೊಂಡು ಬಾರದೆಯಿರಕ್ಕಿಲ್ಲೆಂಬ ಆಶೆಯೂ ಆತನಲ್ಲಿ ಉತ್ಪನ್ನವಾಯಿತು. ಒಮ್ಮೊಮ್ಮೆ ಇವೆಲ್ಲ ಆಶೆಗಳು ನಿರಾಶೆಯ ಸ್ವರೂಪವನ್ನು ತಾಳುತ್ತಿದ್ದಂತೆಯೇ, ಆತನು ದುಃಖದಿಂದ ತಳಮಳಿಸುವನು. ಹೀಗೆ ಸಮಾಧಾನ—ಅಸಮಾಧಾನ, ಆಶೆ-ನಿರಾಶೆಗಳ ಜಗ್ಗಾಟದಿಂದ ಆತನಿಗೆ ಗ್ಲಾನಿಯು ಬಂದಂತೆ ಆಗಿ, ಆತನು ಕಣ್ಣು ಮುಚ್ಚಿಕೊಂಡು ಬಿದ್ದು ನಿಧ್ರಾಧೀನನಾದಂತೆ ತೋರಿದನು. ಆ ಅರೆನಿದ್ದೆಯ ಗುಂಗಿನಲ್ಲಿ ಆತನಿಗೆ ಸುಖದ ಸ್ವಪ್ನಗಳು ಬಿದ್ದವೋ, ದುಃಖದ ಸ್ವಪ್ನಗಳು ಬಿದ್ದವೋ ಎಂಬದನ್ನು ಹೇಳಲಾಗುವದಿಲ್ಲ. ಆತನಿಗೆ ಸರಾಸರಿ ನಾಲ್ಕು ತಾಸು ರಾತ್ರಿಗೆ ಎಚ್ಚರವಾಯಿತು. ಆಗ ಆತನು ಸೇವಕರನ್ನು ಕರೆದು—ಧನಮಲ್ಲನು ಬಂದಿದ್ದನೋ, ಬೇರೆ ಯಾರಾದರೂ ನನ್ನನ್ನು ಕಾಣಲಿಕ್ಕೆ ಬಂದಿದ್ದ

ರೋ ಎಂದು ಪ್ರಶ್ನಮಾಡಿದನು. ಅದಕ್ಕೆ ಸೇವಕರು—ಧನಮಲ್ಲನು ಬಂದಿಲ್ಲೆಂತಲೂ, ಬಹುಜನ ಸರದಾರರೂ, ಮಾಂಡಲಿಕರೂ ಭೆಟ್ಟಿಯ ಆಶೆಯಿಂದ ಬಂದು ಹೋದರೆಂತಲೂ ಹೇಳಿದರು. ಅದನ್ನು ಕೇಳಿ ರಾಮರಾಜನು ಅಸಮಾಧಾನ ಪಟ್ಟು, ಹೂ! ಎಂದು ತಿರಸ್ಕಾರದಿಂದ ತಲೆಕೊಡವಿ ಸೇವಕರಿಗೆ ಹೊರಟು ಹೋಗ ಹೇಳಿ, ಮತ್ತೆ ಹಾಸಿಗೆಯ ಮೇಲೆ ಮಲಗಿಕೊಂಡನು. ಇನ್ನು ಮೇಲೆ ತನ್ನನ್ನು ಕಾಣಲಿಕ್ಕೆ ಯಾವ ಸರದಾರರೂ, ಮಾಂಡಲಿಕರೂ ಬರುವ ಆಶೆಯಿಲ್ಲೆಂದು ತಿಳಿದು, ಆತನು ಸೇವಕರಿಗೆ—ಧನಮಲ್ಲನು ಬಂದಕೂಡಲೆ ನನಗೆ ತಿಳಿಸಿರಿ. ನಾನು ಮಲಗಿರಲಿ, ನಿದ್ದೆಮಾಡುತ್ತಿರಲಿ ಎಬ್ಬಿಸಿ ಸುದ್ದಿಯನ್ನು ಹೇಳಲಿಕ್ಕೆ ಹಿಂದು ಮುಂದು ನೋಡಬೇಡಿರಿ, ಎಂದು ಆಗ್ರಹದಿಂದ ಹೇಳಿ ಮಲಗಿಕೊಂಡನು. ಧನಮಲ್ಲನು ಬರಲಿಲ್ಲೆಂಬ ಅಸಮಾಧಾನದಿಂದ ಆತನಿಗೆ ನಿದ್ದೆಯು ಬರಲೊಲ್ಲದು, ಆತನು ಹಾಸಿಗೆಯ ಮೇಲೆ ಹೊರಳಾಡಿ ಬೇಸತ್ತನು. ತಾನು ನಿತ್ಯದಲ್ಲಿ ಕುಳಿತುಕೊಳ್ಳುವ ಆಸನದಲ್ಲಿ ಕುಳಿತುಕೊಂಡು ಆಲೋಚಿಸಿದಣಿವನು. ಮತ್ತೆ ಆತನಿಗೆ ಹಾಸಿಗೆ ಹಿಡಿಯಬೇಕಾಯಿತು. ಇನ್ನೂ ಬೆಳಗಾಗಲಿಲ್ಲೆಂಬ ಆತುರದಿಂದ ಆಗಾಗ್ಗೆ ಆತನು ಪೂರ್ವದಿಕ್ಕಿನ ಕಿಟಕಿಗಳಲ್ಲಿ ಹಣಿಕಿ ಹಾಕಿ ನೋಡಿದನು, ಅಂದಿನ ರಾತ್ರಿಯು ರಾಮರಾಜನಿಗೆ ಬಹು ದೀರ್ಘವಾಗಿ ತೋರಿತು. ಆತನು ಒಗೆ ತಳಮಳಿಸುತ್ತ, ಬೇಸರದಿಂದ ರಾತ್ರಿಯನ್ನು ತಿರಸ್ಕರಿಸುತ್ತ ಬೆಳಗಿನ ಹಾದಿಯನ್ನು ನೋಡುತ್ತಿರಲು, ಪೂರ್ವದಿಕ್ಕು ಒಮ್ಮೆ ಬೆಳ್ಳಗಾಯಿತು. ಅದನ್ನು ನೋಡಿ ರಾಮರಾಜನಿಗೆ ಮೊದಲು ಸ್ವಲ್ಪ ಸಮಾಧಾನವಾದರೂ, ಮೆಹೇರಜಾನಳ ವಿಯೋಗದ ಸ್ಮರಣವಾಗಿ ಆತನ ಮನಸ್ಸು ಮತ್ತೆ ಅಸಮಾಧಾನ ಹೊಂದಿತು. ನಿದ್ದೇಗೇಡೂ, ಬುದ್ಧಿಗೇಡೂ ಆಗಿ, ರಾಮರಾಜನಿಗೆ ಹುಚ್ಚು ಹಿಡಿದ ಹಾಗೆ ಆಗಿತ್ತು. ಆತನ ಕಣ್ಣುಗಳು ಉರಿಯುತ್ತಿದ್ದವು. ಮೈಯು ಒಡ್ಡುಮುರಿಯುತ್ತಿತ್ತು. ಆತನಿಗೆ ಆಕಳಿಕೆಗಳು ಆಗಾಗ್ಗೆ ಬರುತ್ತಿದ್ದವು. ಆತನು ವಿಚಾರಮಗ್ನನಾಗಿ ಯಂತ್ರದಂತೆ ಪ್ರಾತರ್ವಿಧಿಗಳನ್ನು ತೀರಿಸಿಕೊಂಡನು. ಕೃಷ್ಣದೇವಮಹಾರಾಜರನ್ನು ಕಾಣಲಿಕ್ಕೂ, ತನ್ನ ಲಗ್ನದ ವರ್ತಮಾನವನ್ನು ಕೇಳಲಿಕ್ಕೂ ಆತನಿಗೆ ಉತ್ಸಾಹವಾಗಲೊಲ್ಲದು. ಇಷ್ಟರಲ್ಲಿ ತಿರುಮಲರಾಯನು ಬರಲು, ಅವರಿಬ್ಬರೂ ರಾಜದರ್ಶನಕ್ಕಾಗಿ ಹೊರಟುಹೋದರು.

ತಾನು ರಾಮರಾಜನಿಂದ ಕೇಳಿದ ಸುದ್ದಿಯನ್ನೆಲ್ಲ ತಿರುಮಲರಾಯನು ಈ ಮೊದಲೆ ಮಹಾರಾಜರಿಗೆ ತಿಳಿಸಿದ್ದನು. ಮತ್ತೆ ಅದನ್ನು ರಾಮರಾಜನ ಮುಖದಿಂಸಿ ತಿಳಕೊಳ್ಳುವ ಇಚ್ಛೆಯಿಂದ ಮಹಾರಾಜರು ರಾಮರಾಜನಿಗೆ ಪ್ರಶ್ನಮಾಡಿ

ದರು. ಹೊಂದಿಸಿ ಹೇಳಲಿಕ್ಕೆ ಅವಕಾಶ ದೊರೆತದ್ದರಿಂದ ರಾಹುರಾಜನು ಮೊದಲೇ ಪಾಜ್ತವಾಗಿ ಕೂಡಿಸಿಟ್ಟುಕೊಂಡಂತೆ ಯಾವತ್ತೂ ಸುದ್ದಿಯನ್ನು ಮಹಾರಾಜರ ಮುಂದೆ ಉಪ್ಪುಕಾರಹಚ್ಚಿ ಸವಿಮಾಡಿ ಹೇಳಿದನು. ಸುದ್ದಿಹೇಳುವದಾದ ಮೇಲೆ ಆತನು ಮಹಾರಾಜರಿಗೆ—ಇನ್ನು ಈ ಮುಸಲ್ಮಾನರ ಬಂದೋಬಸ್ತು ಮಾಡುವ ವಿಚಾರದ ಹೊರತು ಎರಡನೆಯ ವಿಚಾರಗಳು ನನ್ನ ಮನಸ್ಸಿನಲ್ಲಿ ಉತ್ಪನ್ನವಾಗುವದಿಲ್ಲವು. ಹೊತ್ತಿಗೆ ತಕ್ಕ ಬಂದೋಬಸ್ತು ಮಾಡದಿದ್ದರೆ, ನಮ್ಮ ರಾಜ್ಯದ ವ್ಯವಸ್ಥೆಯೇನಾದೀತೆಂಬದನ್ನು ಹೇಳಲಾಗುವದಿಲ್ಲ. ಮೊದಲು ಆ ದರ್ಗೆಯ ಮೇಲೆ ಚೆನ್ನಾಗಿ ಕಣ್ಣಿಡಬೇಕು. ನಮ್ಮ ನಂಬಿಗೆಯ ಸೇವಕರು ದರ್ಗೆಯಲ್ಲಿರುವಂತೆ ವ್ಯವಸ್ಥೆಮಾಡಬೇಕು, ಎಂದು ಹೇಳಿದನು. ಇದನ್ನು ಕೇಳಿ ಕೃಷ್ಣದೇವಮಹಾರಾಜರು ರಾಮರಾಜನುನ್ನು ಕುರಿತು—ಈ ಎಲ್ಲ ಮಾತುಗಳ ವಿಚಾರವನ್ನು ಇನ್ನು ಮೇಲೆ ನೀವೇ ಮಾಡಬೇಕಾಗಿದೆ. ನಿಮ್ಮ ಶೌರ್ಯ—ವೀರ್ಯಗಳ ವಿಷಯವಾಗಿ ನಮಗೆ ಸಂಪೂರ್ಣ ನಂಬಿಗೆಯಿರುತ್ತದೆ. ನೀವು ಎಂಥ ಸಂಕಟಗಳಿಗೂ ಸೊಪ್ಪುಹಾಕಲಾರಿರೆಂಬದು ನಮಗೆ ಗೊತ್ತಿದೆ. ಒಮ್ಮೆ ನಮ್ಮ ಅಪೇಕ್ಷೆಯಂತೆ ಈ ಮಂಗಲಕಾರ್ಯವನ್ನಷ್ಟು ಸಾಂಗವಾಗಿ ಮಾಡಿಕೊಳ್ಳಿರಿ. ಆ ಮೇಲೆ ಯೋಗ್ಯವಾಗಿತೋರಿದಂತೆ ವ್ಯವಸ್ಥೆಮಾಡಬಹುದು. ಕಾರ್ಯವಾದ ಮೇಲೆ ನೀವು ನಾಲ್ಕುದಿನ ಸಂಗನಪಲ್ಲಿಗೆ ಹೋಗಿ ನಿಂತು ವ್ಯವಸ್ಥೆಮಾಡಿ ಬಂದರೂ ಬರಬಹುದು. ಜ್ಯೋತಿಷಿಗಳು "ಶುಭಸ್ಯಶೀಘ್ರಂ" ಎಂದು ಅವಸರದಿಂದ ಮುಹೂರ್ತವನ್ನು ನಿರ್ಧರಿಸಿದ್ದಾರೆ. ನಿರ್ವಿಘ್ನವಾಗಿ ಎಲ್ಲ ಕಾರ್ಯಗಳು ಜರಗುವಂತೆ ವ್ಯವಸ್ಥೆಮಾಡತಕ್ಕದ್ದು. ಯಾವತ್ತು ವ್ಯವಸ್ಥೆಯ ಭಾರವು ತಿರುಮಲರಾಯರ ತಲೆಯಮೆಲಿರುತ್ತದೆ. ಅವರು ನಮ್ಮ ತನಕ ಯಾವ ಮಾತನ್ನೂ ಬರಗೊಡಬಾರದು. ನಮ್ಮ ಮನಸ್ಸಿನ ಇಚ್ಛೆಯು ಈಗ ಪೂರ್ಣವಾಗಲಿಕ್ಕೆ ಬೇಕು. ನಾವು ನಾಲ್ಕೂಕಡೆಗೆ ಅಪ್ಪಣೆಗಳನ್ನು ಕಳಿಸಿರುತ್ತೇವೆ. ಎಲ್ಲ ವ್ಯವಸ್ಥೆಯು ಉತ್ತಮರೀತಿಯಿಂದ ಆಗಲಿಕ್ಕೆ ಬೇಕು. ನಿಮ್ಮ ಹಿರಿಯರು ಇದ್ದರೆ ನಿಮ್ಮ ಮುಂದೆ ಈ ಮಾತುಗಳನ್ನಾಡುವ ಪ್ರಸಂಗವು ನಮಗೆ ಬರುತ್ತಿದ್ದಿಲ್ಲ, ಎಂದು ಹೇಳಿದರು. ಈ ಮೇರೆಗೆ ಮತ್ತೆ ಕೆಲವು ಸಂಭಾಷಣಗಳು ಆದ ಬಳಿಕ ಕೃಷ್ಣದೇವರಾಜನು ಅವರಿಬ್ಬರು ಬಂಧುಗಳಿಗೆ ಅಪ್ಪಣೆ ಕೊಟ್ಟು ಕಳಿಸಿದನು.

∴

....ಏನು ಮಾಡಿದರೂ ರಾಮರಾಜನ ಮನಸ್ಸಿಗೆ ಸೊಗಸಾಗಲಿಲ್ಲ. ಪ್ರತ್ಯಕ್ಷ ರಾಜಪುತ್ರಿಯೊಡನೆ ತನ್ನ ವಿವಾಹವಾಗಿ, ತನಗೆ ರಾಜಜಾಮಾತೃಪದವಿಯು

ದೊರೆಯುವ ಯೋಗವು ಸಮೀಪಿಸಿದರೂ ಆತನಿಗೆ ಸಮಾಧಾನವಾಗಲಿಲ್ಲ. ಆತನ ಅಂತರಂಗ ಬಹಿರಂಗಗಳೆರಡನ್ನೂ ಮೆಹೇರಜಾನಳು ಆಕ್ರಮಿಸಿ ಬಿಟ್ಟಿದ್ದಳು. ಇನ್ನು ನಾನು ಮೆಹೇರಜಾನಳನ್ನು ಕಾಣಲಿಕ್ಕಿಲ್ಲವೇ, ಎಂಬದೊಂದೇ ಚಿಂತೆಯು ರಾಮರಾಜನನ್ನು ಬಾಧಿಸುತ್ತಿತ್ತು. ಆತನು ಹೀಗೆ ಅಸಮಾಧಾನದಿಂದಿರುವಾಗಲೇ ಆತನ ವಿವಾಹಕಾರ್ಯವು ವಿಜೃಂಭಣೆಯಿಂದ ನೆರವೇರಿತು. ಸಮಾರಂಭವು ಪೂರ್ಣವಾಗುವ ಹಾದಿಯನ್ನೇ ರಾಮರಾಜನು ನೋಡುತ್ತಿದ್ದನು. ಕಡೆಯ ಸಮಾರಂಭವು ಮುಗಿದ ದಿನದ ರಾತ್ರಿಯು ಹೋಗಿ ಬೆಳಗಾಗಲು, ರಾಮರಾಜನು ರಾಜದರ್ಶನಕ್ಕೆ ಹೋದನು. ಆತನು ಮಹಾರಾಜರ ಮುಂದೆ—ನನಗೆ ಮತ್ತೆ ಇಂಥ ಇಂಥ ಹೊಸ ಸುದ್ದಿಗಳು ಹತ್ತಿರುತ್ತವೆ, ಎಂದು ಹೇಳಿ, ತನ್ನ ವರ್ಣನಾಶಕ್ತಿಯ ಪರಮಾವಧಿಯಿಂದ ಮುಸಲ್ಮಾನರ ಒಳಸಂಚಿನ ಕಾಲ್ಪನಿಕಸ್ವರೂಪವನ್ನು ಮಹಾರಾಜರ ಕಣ್ಣಮುಂದೆ ಇಟ್ಟನು. ಅದರಿಂದ ಮಹಾರಾಜರ ಮನಸ್ಸಿನಲ್ಲಿ, ಇನ್ನು ಮೇಲೆ ಈ ಸಂಬಂಧದಿಂದ ಏನಾದರೂ ವ್ಯವಸ್ಥೆಮಾಡಲೇಬೇಕೆಂಬ ವಿಚಾರವು ಉತ್ಪನ್ನವಾಯಿತು. ಅವರು ಇದಕ್ಕೆ ಏನು ಉಪಾಯಮಾಡಬೇಕೆಂದು ರಾಮರಾಜನನ್ನು ಕೇಳಿದರು. ಹೀಗೆ ಕೇಳುವದೇ ರಾಮರಾಜನಿಗೆ ಬೇಕಾಗಿತ್ತು. ಮಹಾರಾಜರು ಕೇಳಿದ ಕೂಡಲೆ ರಾಮರಾಜನು ಕೈಜೋಡಿಸಿ, ಅವರನ್ನು ಕುರಿತು—ತಮ್ಮ ಅಪ್ಪಣೆಯಾದರೆ, ನಾನು ಗುಪ್ತವೇಷದಿಂದ ಹೋಗಿ ಯಾವತ್ತು ಗುಪ್ತ ಸಂಗತಿಯನ್ನು ಚಾತುರ್ಯದಿಂದ ತಿಳಿದುಕೊಂಡು ಬರುತ್ತೇನೆ. ಇನ್ನು ಹದಿನೈದು ದಿವಸ ತುಂಗಭದ್ರೆಯ ದಂಡೆಯನ್ನು ಹಿಡಿದು ತಿರುಗುವದು ಅವಶ್ಯವಾಗಿದೆ. ನಾವಾಗಿ ಮೊದಲು ಏನೂ ಮಾಡಬಾರದು. ಎಲ್ಲ ಒಳಸಂಚುಗಳು ಜೈಲಿಗೆ ಬಿದ್ದರೆ, ಎಲ್ಲ ವ್ಯವಸ್ಥೆಯು ತಾನೇ ಆಗುತ್ತದೆ, ಎಂದು ಹೇಳಿ, ವಿದ್ಯಾನಗರದಿಂದ ಹತ್ತು ಹದಿನೈದು ದಿವಸ ಹೊರಗೆ ಹೋಗಲಿಕ್ಕೆ ಮಹಾರಾಜರಿಂದ ಅಪ್ಪಣೆಯನ್ನು ಪಡೆದನು. ಅಪ್ಪಣೆಕೊಡುವಾಗ ಅಳಿಯನಾದ ರಾಮರಾಜನಿಗೆ ಮಹಾರಾಜರು—ಇಲ್ಲದ ಯಾವ ಪ್ರಕಾರದ ಸಾಹಸಕ್ಕೂ ನೀವು ಹೋಗಬೇಡಿರಿ. ಜೀವಕ್ಕೆ ಜೀವಕೊಡುವ ಮನುಷ್ಯರನ್ನು ಸಂಗಡ ಕರಕೊಂಡು ಹೋಗಿರಿ. ಮುಖ್ಯವಾತು, ಎಲ್ಲ ರೀತಿಯಿಂದಲೂ ಜೋಕೆ, ಎಂದು ಹೇಳಿದರು. ಹೀಗೆ ಒಪ್ಪಿಗೆ ದೊರೆತಕೂಡಲೆ ರಾಮರಾಜನು ಕ್ಷಣವಾದರೂ ವಿಲಂಬಮಾಡದೆ ವಿದ್ಯಾನಗರದಿಂದ (ವಿಜಯನಗರದಿಂದ) ಹೊರಟು, ನೆಟ್ಟಗೆ ತನ್ನ ಕುಂಜವನದ ಹಾದಿಯನ್ನು ಹಿಡಿದನು.

೮ನೆಯ ಪ್ರಕರಣ:—ವಿನಾಶವೃಕ್ಷ.



ರಾಮರಾಜನ ಚಿತ್ತವನ್ನು ಮೆಹೇರಜಾನಳು ಸಂಪೂರ್ಣವಾಗಿ ಆಕರ್ಷಿಸಿಕೊಂಡದ್ದರಿಂದ, ಆ ತರುಣಸರದಾರನು ಮೇಲೆ ಹೇಳಿದಂತೆ ಕೃಷ್ಣದೇವರಾಜರ ಮುಂದೆ ಇಲ್ಲದ್ದೊಂದು ಹೇಳಿ ಕುಂಜವನಕ್ಕೆ ಒಂದಿದ್ದನು. ಕುಂಜವನದಲ್ಲಿ ಮೆಹೇರಜಾನಳೊಬ್ಬಳು ಇಲ್ಲದ್ದರಿಂದ ಆ ಮನೋಹರ ವನವು ಈಗ ರಾಮರಾಜನಿಗೆ ದುಃಖದಾಯಕವಾಗಿ ತೋರಹತ್ತಿತು. ಮೆಹೇರಜಾನಳೊಡನೆ ತಾನು ರಮಿಸಿದ ಪ್ರತಿಒಂದು ಸ್ಥಳವೂ, ಲತಾಮಂಟಪಗಳೂ, ವೃಕ್ಷತಲಗಳೂ ರಾಮರಾಜನ ದುಃಖವನ್ನು ಹೆಚ್ಚಿಸತೊಡಗಿದವು. ಆತನು ಮೆಹೇರಜಾನಳ ಶಯನಗೃಹವನ್ನು ಪ್ರವೇಶಿಸಿದನು. ಅಲ್ಲಿ ಆತನ ಕಣ್ಣಿಗೆ ಮೆಹೇರಜಾನಳ ವಸ್ತ್ರಾಭರಣಗಳ ಪೆಟ್ಟಿಗೆಯು ಬಿದ್ದಿತ್ತು. ಆಗ ರಾಮರಾಜನು, ಕೌತುಕದಿಂದ ಅದನ್ನು ತೆರೆಯಹೋಗಲು, ಅದಕ್ಕೆ ಕೀಲಿಯು ಹಾಕಿತ್ತು; ಆದರೆ ಕೀಲಿಯ ಕೈಯು, ಪೆಟ್ಟಿಗೆಯ ಕೀಲಿಯಲ್ಲಿಯೇ ಇರುವದನ್ನು ನೋಡಿ ರಾಮರಾಜನು ಆಶ್ಚರ್ಯಪಟ್ಟು ಪೆಟ್ಟಿಗೆಯಕೀಲಿಯನ್ನು ತೆಗೆದನು. ಒಳಗೆ ವಸ್ತ್ರಾಭರಣಗಳು ಅಸ್ತವ್ಯಸ್ತವಾಗಿ ಬಿದ್ದಿದ್ದವು. ರಾಮರಾಜನು ಅವನ್ನೆಲ್ಲ ಒಂದೊಂದೇ ಹೊರಗೆ ತೆಗೆದುನೋಡಲು, ಆತನು ಕೊಟ್ಟಿದ್ದ ವಸ್ತ್ರಾಭರಣಗಳೆಲ್ಲ ಅಚ್ಚಳಿಯದೆ ಎಲ್ಲವೂ ಇದ್ದವು! ರಾಮರಾಜನು ಕೊಟ್ಟಿದ್ದ ಒಂದು ರಿಂಬಿಯನ್ನು ಕೂಡ ಸಂಗಡ ಒಯ್ಯಲಿಕ್ಕಿಲ್ಲೆಂಬ ಪ್ರತಿಜ್ಞೆಯಿಂದ ಮೆಹೇರಜಾನಳು ಕುಂಜವನದಿಂದ ಹೊರಟದ್ದನ್ನು ವಾಚಕರು ಮರೆತಿರಲಿಕ್ಕಿಲ್ಲ. ಈ ಸ್ಥಿತಿಯನ್ನು ನೋಡಿ ರಾಮರಾಜನು ಬಹಳ ಅಸಮಾಧಾನಪಟ್ಟನು. ತಾನು ಮೊದಲು ಮೆಹೇರಜಾನಳಿಗೆ "ನಿನ್ನನ್ನು ಪಟ್ಟದರಾಣಿಯನ್ನಾಗಿ ಮಾಡಿಕೊಳ್ಳುವೆನೆ"ಂಮ ವಚನ ಕೊಟ್ಟು, ಈಗ ಮೋಸಮಾಡಿದ್ದರಿಂದ ಆಕೆಯು ಹೀಗೆ ತನ್ನಮೇಲೆ ಸಿಟ್ಟಾಗಿ ಅಭಿಮಾನತೊರೆದು ಹೋದಳೆಂದು ತಿಳಿದು, ಆತನು ತನ್ನನ್ನು ಬಹಳವಾಗಿ ಹಳಿದುಕೊಳ್ಳಹತ್ತಿದನು; ಆದರೆ ರಾಮರಾಜನಂಥವರು ಬಹಳಹೊತ್ತು ತಮ್ಮನ್ನು ತಾವು ಹಳಿದುಕೊಳ್ಳುತ್ತ ಕೂಡ್ರುವ ಸಂಭವವು ಕಡಿಮೆ. ಅದರಂತೆ ರಾಮರಾಜನು ತನ್ನನ್ನು ಹಳಿದುಕೊಳ್ಳುವದನ್ನು ಬಿಟ್ಟು, ಮೆಹೇರಜಾನಳ ಮೇಲೆ ತಪ್ಪು ಹೊರಿಸುವ ಉದ್ದೇಶದಿಂದ ತನ್ನೊಳಗೆ-"ಹೀಗೆ ಆಕೆಯು ಹೊರಟುಹೋಗುವಂಥ ಅಪರಾಧವನ್ನಾದರೂ ನಾನು ಏನು ಮಾಡಿದ್ದೆನು? ಕಾರ್ಯನಿಮಿತ್ತದಿಂದ ಕೆಲವುದಿನ ಕುಂಜವನಕ್ಕೆ ಬರುವದಿಲ್ಲೆಂದು ನಾನು ಪತ್ರಬರೆದರೆ, ಕೊಟ್ಟವಚನವನ್ನು ಮುರಿದಹಾಗಾಯಿತೇ! ರಾಜಕರಣಗಳಲ್ಲಿ ಪ್ರಸಂಗಕ್ಕನುಸರಿಸಿ ಸೋಗು ಹಾಕಬೇಕಾಗುತ್ತ

ದೆಂಬ ಮಾತು ಆಕೆಗೆ ತಿಳಿಯಬಾರದೇನು? ಆಕೆಗೆ ಇಲ್ಲಿ ಯಾತರ ಕೊರತೆಯಿತ್ತು? ಇನ್ನು ಮೇಲೆ ಇಷ್ಟು ಸುಖವನ್ನು ಆಕೆಯು ಬೇರೆ ಕಡೆಗೆ ಪಡೆಯಬಹುದೋ? ಅಂದಬಳಿಕ ಆಕೆಯು ಸ್ವಲ್ಪ ಸಮಾಧಾನಮಾಡಿಕೊಳ್ಳತಕ್ಕದಿತ್ತು" ಎಂದು ತನ್ನೊಳಗೆ ಮಾತಾಡಿಕೊಂಡು ತನ್ನ ಸಮಾಧಾನಮಾಡಿಕೊಳ್ಳಹೋದನು; ಆದರೆ ಅದರಿಂದ ಆತನಿಗೆ ಸಮಾಧಾನವಾಗಲಿಲ್ಲ. ಆ ಶಯನಗೃಹದಲ್ಲಿ ಆತನು ಬಹಳ ಹೊತ್ತು ಕುಳಿತುಕೊಳ್ಳಲಾರದೆ ಅಲ್ಲಿಂದ ಹೊರಟು ಪುಷ್ಕರಣಿಯ ತೀರಕ್ಕೆ ಹೋದನು. ಅಲ್ಲಿ ಆತನಿಗೆ ಅಂದಿನ ಮೆಹೇರಜಾನಳ ನೌಕಾಕ್ರೀಡೆಯೂ, ಆಕೆಯ ಮನೋಹರವಾದ **"ಹೇರಿ ಆಜ ಸಖೀರೀ ಮೇಕ್ಯಾಕಹು"** ಎಂಬ ಹಿಂದೂಸ್ಥಾನಿಯ ಮಂಜುಲಗಾನವೂ, ತಾನು ಅದಕ್ಕೆ ಪ್ರತ್ಯುತ್ತರವಾಗಿ ಗಾನಮಾಡಿದ **"ನಿಭೃತನಿ ಕುಂಜಗೃಹಂ"** ಎಂಬ ಸಂಸ್ಕೃತ ಪದ್ಯವೂ ನೆನಪಾಗಿ ಆತನ ಅಂತಃಕರಣವು ಮತ್ತಿಷ್ಟು ವ್ಯಥಿತವಾಗಹತ್ತಿತು. ಆತನು ಅಲ್ಲಿಯೂ ಬಹಳ ಹೊತ್ತು ನಿಲ್ಲದೆ ಭ್ರಮಿಷ್ಮನಂತೆ ಕುಂಜವನದ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸಿ ಕಾಲಹರಣಮಾಡಿದನು. ಅಂದಿನ ರಾತ್ರಿಯೂ ಆತನಿಗೆ ಕಷ್ಟದಾಯಕವಾಯಿತು. ಆ ರಾತ್ರಿಯಲ್ಲಿ ಮೇಹೇರಜಾನಳ ಸಂಬಂಧದ ಕನಸುಗಳು ಬಿದ್ದು ಆತನ ದುಃಖವು ಮತ್ತಿಷ್ಟು ಹೆಚ್ಚಾಯಿತು.

ಮೇಹೇರಜಾನಳನ್ನು ಹುಡುಕಿಸಲಿಕ್ಕೆ ರಾಮರಾಜನಿಗೆ ಮನುಷ್ಯರ ಕೊರತೆ ಇದ್ದಿಲ್ಲ; ಆದರೆ ತಾನು ಧನಮಲ್ಲನಿಗೆ ಬಹಳ ಸಿಟ್ಟುಮಾಡಿ ಕಳಿಸಿರುವದರಿಂದ, ಆತನೇ ಇನ್ನು ಒಂದೆರಡು ದಿನಗಳಲ್ಲಿ ಮೇಹೇರಜಾನಳ ಗೊತ್ತುಹಚ್ಚಿಕೊಂಡು ಬರುವನೆಂಬ ನಂಬಿಗೆಯಿಂದ ರಾಮರಾಜನು ಯಾರನ್ನೂ ಹುಡುಕಲಿಕ್ಕೆ ಕಳಿಸಲಿಲ್ಲ. ಇದಲ್ಲದೆ, ಸಿಟ್ಟಿನ ಭರದಲ್ಲಿ ಹೋದ ಮೇಹೇರಜಾನಳು ಸಿಟ್ಟು ಇಳಿದ ಬಳಿಕ ಆಕೆಯು ತಾನಾಗಿ ಬರಬಹುದೆಂಬ ಆಶೆಯೂ ಆತನನ್ನು ಕೆಲಮಟ್ಟಿಗೆ ಸಮಾಧಾನಗೊಳಿಸಿತ್ತು. ಹೀಗೆ ನಾಲ್ಕೈಂಟುದಿನಗಳು ಕ್ರಮಿಸಿದವು. ರಾಮರಾಜನ ಎಲ್ಲ ಆಶೆ-ದುರಾಶೆಗಳು ವ್ಯರ್ಥವಾದವು. ಆಗ ಆತನು ಧನಮಲ್ಲನನ್ನು ಹುಡುಕಿಕೊಂಡು ಬರವದಕ್ಕಾಗಿ ನಾಲ್ಕೂಕಡೆಗೆ ಆಳುಗಳನ್ನು ಕಳಿಸಿದನು. ತಾನು ನಾಲ್ಕು ದಿವಸ ಇಲ್ಲಿಯೇ ಇರಬೇಕೆಂದು ನಿಶ್ಚಯಿಸಿದನು. ಮುಂದೆ ಆ ನಾಲ್ಕು ದಿನಗಳು ಕ್ರಮಿಸಿಹೋಗಹತ್ತಿದವು. ನಾಲ್ಕನೆಯ ದಿನ ರಾತ್ರಿ ಆರು ತಾಸಿನ ಸುಮಾರಕ್ಕೆ ಆತನಿಗೊಂದು ಸ್ವಪ್ನವು ಬಿದ್ದು, ಅದರಲ್ಲಿ ತಾನು ವಿದ್ಯಾನಗರಕ್ಕೆ ಹೊರಟು ನಿಂತಂತೆಯೂ, ಮೇಹೇರಜಾನಳು ದೀನವಾಣಿಯಿಂದ ತನ್ನನ್ನು ಕುರಿತು—"ಬೇಡಿರಿ, ದಯಮಾಡಿ ಹೀಗೆ ನನ್ನ ವಿಶ್ವಾಸಘಾತಮಾಡ

ಬೇಡಿರಿ'' ಎಂದು ಪ್ರಾರ್ಥಿಸಿದಂತೆಯೂ ಆತನಿಗೆ ಆಯಿತು. ಕೂಡಲೆ ರಾಮರಾಜನು ಗಡಬಡಿಸಿ ಎದ್ದು ಕುಳಿತುಕೊಂಡು ನಾಲ್ಕೂ ಕಡೆಗೂ ಕಣ್ಣೆರಿದು ನೋಡಿದನು. ಆತನಿಗೆ ನೋಡಿದತ್ತೆಲ್ಲ ಕನಸಿನೊಳಗಿನ ಮೆಹೇರಜಾನಳೇ ಕಾಣಹತ್ತಿದಳು. ಆಗ ರಾಮರಾಜನು—ಛೇ ಛೇ! ಇನ್ನೆಲ್ಲಿಯ ಮೆಹೇರಜಾನಳು! ವಿಶ್ವಾಸಘಾತಕಿಯಾದ ನನ್ನ ಮೇಲಿನ ಸಂತಾಪದಿಂದ ಇಲ್ಲಿಯದೊಂದು ರಿಂಬಿಯನ್ನು ಕೂಡ ತಕ್ಕೊಂಡು ಹೋಗದೆಯಿದ್ದ ಹಟಮಾರಿಸ್ವಭಾವದ ಆ ಮೆಹೇರಜಾನಳು ತಿರುಗಿ ಬರಲಾರಳೆಂಬದು ನನಗೆ ಇನ್ನೂ ತಿಳಿಯಬಾರದೇನು? ಇನ್ನು ವ್ಯರ್ಥವಾದ ಆಶೆಯಿಂದ ಹೀಗೆಯೇ ಕುಂಜವನದಲ್ಲಿ ಕಾಲವನ್ನು ಕಳೆಯುತ್ತ ಕುಳಿತುಕೊಂಡರೆ, ಕೃಷ್ಣದೇವರಾಜರ ವಿಕಲ್ಪಕ್ಕೆ ಕಾರಣವಾಗಿ ಇಲ್ಲಿಯ ಕೆಲಸವೂ ಕೆಟ್ಟುಹೋದೀತು. ರಾಜಪುತ್ರಿಯಲ್ಲಿ ನನ್ನ ಪೂರ್ಣವಾದ ಅನುರಾಗವು ಇರುತ್ತದೆಂಬ ನಂಬಿಗೆಯು ಮಹಾರಾಜರಿಗೆ ಆಗುವದು ಅವಶ್ಯವಾಗಿರುತ್ತದೆ. ಹೀಗೆ ಮೂರು ಮೂರು ದಿನಕ್ಕೊಮ್ಮೆ ಏನಾದರೂ ನೆವಮಾಡಿ ವಿಜಯನಗರವನ್ನು ಬಿಟ್ಟು ಬಂದು, ಹದಿನೈದು ದಿನಗಟ್ಟಲೆ ನಾನು ಹೊರಗೆ ಇರಹತ್ತಿದರೆ, ತರ್ಕವಿತರ್ಕಗಳಿಗೆ ಆರಂಭವಾಗಿ, ನನ್ನ ಹುಳುಕು ಹೊರಬಿದ್ದೀತು; ಆದ್ದರಿಂದ ನಾಳೆ ಬೆಳಗಾದ ಕೂಡಲೆ ವಿಜಯನಗರಕ್ಕೆ ಹೋಗಬೇಕು, ಎಂದು ನಿಶ್ಚಯಿಸಿದನು. ಕೃಷ್ಣದೇವರಾಜರು ತಮ್ಮ ಮಗಳನ್ನು ತಮ್ಮ ಸಮಾನಸ್ಕಂಧರಾದ ಉತ್ತರ ಹಿಂದೂಸ್ಥಾನದ ಯಾವನೊಬ್ಬ ರಾಜಪುತ್ರನಿಗೆ ಕೊಡಬಹುದಾಗಿತ್ತು; ಆದರೆ ಮಗಳು ದೂರ ಹೋಗಬೇಕಾಗುವದರಿಂದ ಆಕೆಯ ಯೋಗಕ್ಷೇಮಕ್ಕೆ ಆಸ್ಪದವು ಉಳಿಯುವದಿಲ್ಲೆಂಬ ಕರ್ನಾಟಕರ ಸ್ವಾಭಾವಿಕವಾದ ಹೆಣ್ಣುಗರಳಿಗನ್ನುಸರಿಸಿ, ಅವರು ತಮ್ಮ ದರ್ಬಾರದೊಳಗಿನ ಯಾವನೊಬ್ಬ ತರುಣ ಸರದಾರನಿಗೆ ಕೊಡಬೇಕೆಂದು ಯೋಚಿಸಿ ಆರಿಸಿ ರಾಮರಾಜನಿಗೆ ತಮ್ಮ ಮಗಳನ್ನು ಕೊಟ್ಟಿದ್ದರು! ಅಳಿಯನನ್ನು ಅರಸನ ಯೋಗ್ಯತೆಯವರೆಗೆ ಏರಿಸುವದು ತಮ್ಮ ಕೈಯೊಳಗಿರುತ್ತದೆಂದು ಅವರು ತಿಳಕೊಂಡಿದ್ದರು ಈ ಮಾತು ರಾಮರಾಜನಿಗೂ ಗೊತ್ತಿತ್ತು. ಆದ್ದರಿಂದ ಆತನು ಆತುರಪಟ್ಟು ಬೆಳಗಾಗುವ ಹಾದಿಯನ್ನು ನೋಡದೆ ಮೆಹೇರಜಾನಳ ವಸ್ತ್ರಾಭರಣಗಳ ಪೆಟ್ಟಿಗೆಯನ್ನು ಮುಚ್ಚಿ, ಅದಕ್ಕೆ ಬೀಗ ಹಾಕಿ ಇಟ್ಟು, ತನ್ನ ಕುದುರೆಯನ್ನು ತರಿಸಿ ವೇಗದಿಂದ ವಿಜಯನಗರದ ಕಡೆಗೆ ಸಾಗಿದನು.

ಮುಂದೆ ರಾಮರಾಜನಿಗೆ ೩೦ ವರ್ಷಗಳವರೆಗೆ ಮೆಹೇರಜಾನಳ ಶೋಧವಾಗಲಿಲ್ಲ! ಆತನು ಈ ಮೂವತ್ತುವರ್ಷ ಒಂದೇಸವನೆ ಆಕೆಯನ್ನು ಹುಡುಕಿಸಿದನೆ.

ನ್ನುವ ಹಾಗಿಲ್ಲ. ಮೊದಮೊದಲು ಆತನು ಒಳ್ಳೇ ಆಸಕ್ತಿಯಿಂದ ಆಕೆಯನ್ನು ಹುಡುಕಿಸಿದನು. ಆಕೆಯ ಶೋಧಕ್ಕಾಗಿ ಅಲ್ಲಲ್ಲಿ ಗುಪ್ತಚಾರರನ್ನು ಇಟ್ಟಿದ್ದನು. ಎರಡು ತಿಂಗಳಾದರೂ ಮೆಹೇರಜಾನಳ ಗೊತ್ತೂ ಹತ್ತಲಿಲ್ಲ, ಧನಮಲ್ಲನ ಗೊತ್ತೂ ಹತಲಿಲ್ಲ. ಆಗ ಆತನು—"ಹೋದರೆಹೋದಳು. ನಾನೇನು ಆಕೆಯನ್ನು ಬಿಟ್ಟಿದ್ದಿಲ್ಲ. ಸುಖವನ್ನು ಭೋಗಿಸಬೇಕೆಂಬದು ಆಕೆಯ ಹಣೆಬರಹದಲ್ಲಿಯೇ ಬರದಿಲ್ಲ, ನಾನು ಮಾಡುವದೇನು?" ಎಂದು ಮನಸ್ಸಿನಲ್ಲಿ ಅಂದುಕೊಂಡು, ಹುಡುಕಿಸುವದನ್ನು ಬಿಟ್ಟು ಕೊಟ್ಟನು; ಆದರೆ ಆಕೆಯ ಹಳವಂಡವು ಮಾತ್ರ ಆತನಿಗೆ ಹೋಗಲಿಲ್ಲ. ಇದು ಕಡೆತನಕ ಇರತಕ್ಕದ್ದೇ ಎಂದು ರಾಮರಾಜನು ಅಂದುಕೊಳ್ಳುತ್ತಿದ್ದನು. ಹತ್ತು-ಹದಿನೈದು ದಿನಗಳಿಗೊಮ್ಮೆ ಆತನು ಕುಂಜವನಕ್ಕೆ ಹೋಗುತ್ತ ಬರುತ್ತಲಿದ್ದನು. ಕುಂಜವನದ ವ್ಯವಸ್ಥೆಯನ್ನು ಮೊದಲಿನಂತೆಯೇ ಇಡಬೇಕೆಂದು ರಾಮರಾಜನ ಕಟ್ಟಪ್ಪಣೆಯಿದ್ದದ್ದರಿಂದ, ಅದರ ವ್ಯವಸ್ಥೆಯಲ್ಲಿ ಹೆಚ್ಚುಕಡಿಮೆಯಾಗಿದ್ದಿಲ್ಲ. ರಾಮರಾಜನು ಮೇಲೆ ಮೇಲೆ ಬರುತ್ತಿರುವನೆಂಬ ಭಯವು ವ್ಯವಸ್ಥಾಪಕರಿಗೆ ಇತ್ತು. ಮೊದಲಿಗೆ ಐದಾರು ತಿಂಗಳು ಉತ್ತಮ ವ್ಯವಸ್ಥೆ ಇತ್ತು. ಮುಂದೆ ಬರಬರುತ್ತ ರಾಮರಾಜನ ಆಸಕ್ತಿಯು ಕಡಿಮೆಯಾಯಿತು. ರಾಜಕಾರಣದ ಸಲುವಾಗಿ ಆ ಹಾದಿಯಿಂದ ಹೊದಾಗ ಆತನು ಕುಂಜವನದೊಳಗೆ ಹೋಗಿ, ವ್ಯವಸ್ಥೆಯಲ್ಲಿ ಕೊರತೆಯಾಗಿದ್ದ ಪಕ್ಷದಲ್ಲಿ ವ್ಯವಸ್ಥಾಪರಿಗೆ ಸಿಟ್ಟುಮಾಡುತ್ತಿದ್ದನು. ಹೀಗೆ ಒಂದು ವರ್ಷವು ಕಳೆದುಹೋಯಿತು, ಮತ್ತೂ ಒಂದು ವರ್ಷವು ಕಳೆದುಹೋಯಿತು. ಆ ವರ್ಷದಲ್ಲಿ ರಾಮರಾಜನಿಗೆ ಕುಂಜವನದ, ಇಲ್ಲವೆ ಮೆಹೇರಜಾನಳ, ಅಥವಾ ಧನಮಲ್ಲನ ಸ್ಮರಣವಾದರೂ ಆಗಿತ್ತೋ, ಇಲ್ಲವೋ, ಎಂಬದನ್ನು ಹೇಳಲಾಗುವದಿಲ್ಲ. ಕುಂಜವನದ ವ್ಯವಸ್ಥಾಪಕನು ಹತ್ತು-ಹದಿನೈದು ದಿನಗಳಿಗೊಮ್ಮೆ ಮುಜುರೆ ಮಾಡಲಿಕ್ಕೆ ಬಂದಾಗ, ರಾಮರಾಜನು ಆತನನ್ನು ಕುರಿತು—ಕುಂಜವನದ ವ್ಯವಸ್ಥೆಯು ನೆಟ್ಟಗಿರುತ್ತದಷ್ಟೇ? ನಾವು ಯಾವಾಗ ಬಂದೇವೆಂಬದರ ನಿಯಮವಿಲ್ಲ ಜಾಗ್ರತೆಯಿಂದ ವ್ಯವಸ್ಥೆಯನ್ನು ಕಾಯ್ದುಕೊಳ್ಳತಕ್ಕದ್ದು, ಎಂದು ಹೇಳುವನಲ್ಲದೆ ಮೆಹೇರಜಾನಳ, ಅಥವಾ ಧನಮಲ್ಲನ ವಿಷಯವಾಗಿ ಚಕಾರ ಶಬ್ದವನ್ನು ತೆಗೆಯುತ್ತಿದ್ದಿಲ್ಲ.

ಹೀಗಾಗಲಿಕ್ಕೆ ತಕ್ಕ ಕಾರಣವೂ ವದಗಿತು. ಆ ಮಹತ್ವಾಕಾಂಕ್ಷೆಯಾದ ಸರದಾರನಿಗೆ ತನ್ನ ಮಹತ್ವಾಕಾಂಕ್ಷೆಯನ್ನು ಪೂರ್ಣಮಾಡಿಕೊಳ್ಳುವ ಸಮಯವೂ, ಸಾಮಗ್ರಿಗಳೂ ಅನುಕೂಲವಾದವು. ತಮ್ಮ ಮಗಳನ್ನು ರಾಮರಾಜನಿಗೆ ಲಗ್ನಮಾಡಿಕೊಟ್ಟ ಸ್ವಲ್ಪದಿನಗಳಲ್ಲಿಯೇ ಕೃಷ್ಣದೇವರಾಜರು ಅಕಸ್ಮಾತ್ತಾಗಿ

ಬೇನೆಬಿದ್ದರು. ಅವರು ರಾಮರಾಜನನ್ನು ತಮ್ಮ ಬಳಿಯಲ್ಲಿ ಕುಳ್ಳಿರಿಸಿಕೊಂಡು ರಾಜ್ಯಕಾರಭಾರವನ್ನು ನಡಿಸಹತ್ತಿದರು. ಇಷ್ಟು ಆಸ್ಪದವು ದೊರೆತಕೂಡಲೆ ರಾಮರಾಜನು ತನ್ನ ಲಾಭವನ್ನು ಚೆನ್ನಾಗಿ ಮಾಡಿಕೊಳ್ಳಹತ್ತಿದನು. ಕೃಷ್ಣ ದೇವರಾಜರ ಮನಸ್ಸಿನ ಒಲವನ್ನರಿತು, ಹೀಗೆ ಹೀಗೆ ಅಪ್ಪಣೆಗಳನ್ನು ಬರೆದಿರು ತ್ತೇನೆ, ಎಂದು ಹೇಳಿ ಕೂಡಲೆ ಆಜ್ಞಾಪತ್ರಗಳನ್ನು ಓದಿ ತೋರಿಸುವನು. ಇದರಿಂದ ಕೃಷ್ಣದೇವರಾಜರು ರಾಮರಾಜನ ಧೂರ್ತತನಕ್ಕೆ ಮೆಚ್ಚಿ ಆತನನ್ನು ಅಭಿನಂದಿಸಹತ್ತಿದರು. ಬೇನೆಯಲ್ಲಿ ಅವರಿಗೆ ಕೆಲಸಕಡಿಮೆಯಾಗಿ, ತಮ್ಮ ಮನಸ್ಸಿನಂತೆ ಕೆಲಸವಾದರೆ ಸಾಕಾಗಿತ್ತು. ಮುಂದೆ ಬರಬರುತ್ತ ರಾಮರಾಜನು ಕೃಷ್ಣದೇವರಾಜರ ಒಲವನ್ನು ಲೆಕ್ಕಿಸದೆ, ತನ್ನ ಮನಸ್ಸಿಗೆ ಬಂದಂತೆ ಆಜ್ಞಾಪತ್ರಗಳನ್ನು ಬರೆದು, ಹೀಗೆ ಹೀಗೆ ಬರೆದೆನೆಂದು ರಾಯರ ಮುಂದೆ ನಿವೇದಿಸಹತ್ತಿದನು. ರಾಯರ ಪ್ರಕೃತಿಯು ದಿನದಿನಕ್ಕೆ ಅಶಕ್ತವಾಗುತ್ತ ನಡೆದದ್ದರಿಂದಲೂ, ರಾಮರಾಜನ ಮೇಲೆ ಅವರ ಪೂರ್ಣವಿಶ್ವಾಸವಿದ್ದದ್ದರಿಂದಲೂ ರಾಮರಾಜನ ಮಾತಿನ ವಿಷಯವಾಗಿ ಅವರಿಗೆ ವಿಕಲ್ಪವು ಬಾರದಾಯಿತು. ಬರಬರುತ್ತ ರಾಮರಾಜನು ಸ್ವತಂತ್ರವಾಗಿ ರಾಜ್ಯಕಾರಭಾರವನ್ನು ಸಾಗಿಸಿ, ದಿನಕ್ಕೊಮ್ಮೆ ರಾಯರ ದರ್ಶನಕ್ಕೆ ಬಂದು, ನಡೆದ ವಿಶೇಷ ಸಂಗತಿಗಳನ್ನು ಕುರಿತು ನಾಲ್ಕು ಮಾತುಗಳನ್ನು ಆಡಹತ್ತಿದನು. ರಾಯರಾದರೂ ಪ್ರಕೃತಿಸ್ವಸ್ಥವಿದ್ದರೆ ರಾಮರಾಜನ ಮಾತುಗಳನ್ನು ಕೇಳುತ್ತಿದ್ದರು, ಇಲ್ಲದಿದ್ದರೆ ಅದನ್ನೂ ಕೇಳುತ್ತಿದ್ದಿಲ್ಲ. ಆದ್ದರಿಂದ ರಾಮರಾಜನೇ ವಿಜಯನಗರದರಾಜ್ಯದ ಪ್ರತ್ಯಕ್ಷ ರಾಜನಾದನು.

ರಾಮರಾಜನಂತ ಮಹತ್ವಾಕಾಂಕ್ಷಿಗೆ ಇಂಥ ಪ್ರಸಂಗವು ದೊರೆತಬಳಿಕ ಕೇಳುವದೇನೂ? ರಾಮರಾಜನು ತನ್ನ ಹಿತವನ್ನು ಸಾಧಿಸಿಕೊಳ್ಳಲಿಕ್ಕೆ ಬರುವ ಹಾಗಿದ್ದಮಟ್ಟಿಗೆ, ಅದನ್ನು ಕಸರಿಲ್ಲದೆ ಸಾಧಿಸಿಕೊಂಡನೆಂದು ಹೇಳಬಹುದು. ಆತನು ತನ್ನ ಅಣ್ಣನಾದ ತಿರುಮಲನಿಗೆ ಸೇನಾಪತಿಯ ಅಧಿಕಾರವನ್ನು ಕೊಡಿಸಿದನು; ಮತ್ತು ಶಾರ್ಜದೇವನೆಂಬ ತನ್ನ ಮಿತ್ರನಿಗೆ ಕೃಷ್ಣದೇವರಾಜರ ಖಾಸಗಿ ಕಾರಭಾರಿಯನ್ನಾಗಿ ನಿಯಮಿಸಿದನು. ಒಟ್ಟಿಗೆ, ಅರಸರ ಮುಖ್ಯಕಾರಭಾರವು ತನ್ನ ಕೈಯ್ಯಲ್ಲಿ, ಅರಸರ ಸೈನ್ಯವು ತನ್ನ ಅಣ್ಣನ ಕೈಯಲ್ಲಿ, ಅರಸರ ಖಾಸಗಿಕಾರಭಾರವು ತನ್ನ ಮಿತ್ರನ ಕೈಯಲ್ಲಿ; ಹೀಗಾದ ಬಳಿಕ ಮತ್ತೆ ಬೇಕಾದದ್ದೇನು? ಎಲ್ಲಿಯೂ ಎರಡನೆಯವರ ಕೈಯನ್ನು ಸೇರಿಸಗೊಡಬಾರದೆಂದು ರಾಮರಾಜನು ನಿಶ್ಚಯಮಾಡಿಕೊಂಡಿದ್ದನು. ಕೃಷ್ಣದೇವರಾಜರಿಗೆ ಒಬ್ಬ ಮಗನಿದ್ದನು. ಮಗನನ್ನು ಪಟ್ಟಕ್ಕೆ ಕುಳ್ಳಿರಿಸಿ, ಆತನು ರಾಜ್ಯಕಾರಭಾರ ನಡಿಸುವದನ್ನು ಕಣ್ಣುತುಂಬ ನೋಡಿ, "ಹರಿ ಹರಿ" ಎಂದು ಸ್ವಸ್ಥವಾಗಿ ಇರಬೇಕೆಂದು

ಅವರು ಇಚ್ಛಿಸುತ್ತಿದ್ದರು. ತಮ್ಮ ಮಗನು ಪಟ್ಟಕ್ಕೆ ಕುಳಿತುಕೊಳ್ಳಲು, ರಾಮರಾಜನು ಮುಖ್ಯಕಾರಭಾರಿಯಾಗಿ, ಯಾರ ಬೇಳೆಯನ್ನೂ ಬೇಯಗೊಡದೆ ರಾಜ್ಯವನ್ನು ಸುಯಂತ್ರವಾಗಿ ನಡಿಸಿಯಾನೆಂದು ರಾಯರು ಭಾವಿಸಿದ್ದರು; ಆದರೆ ಏನಾಯಿತೋ ತಿಳಿಯದು, ಆ ರಾಜಪುತ್ರನು ವಿಷಪ್ರಯೋಗದಿಂದ ಅಕಸ್ಮಾತ್ತಾಗಿ ಸತ್ತನು. ವಿಷಪ್ರಯೋಗವನ್ನು ಯಾರು ಹ್ಯಾಗೆ ಮಾಡಿದರೆಂಬಬಗ್ಗೆ ಕೃಷ್ಣದೇವರಾಯರೂ, ರಾಮರಾಜನೂ ಒಳ್ಳೆಯ ನಿಗ್ರಹದಿಂದ ಶೋಧಮಾಡಿದರು; ಆದರೆ ಅವರ ಗೊತ್ತು ಹತ್ತಲಿಲ್ಲ. ಪುತ್ರಶೋಕದಿಂದ ಕೃಷ್ಣದೇವರಾಜರು ಬೇಗನೆ ಮರಣಹೊಂದಿದರು. ಅವರ ತರುವಾಯ ಅವರ ಅನುಮತಿಯಿಂದ ಕಾರಾಗೃಹದಲ್ಲಿದ್ದ ಅವರ ತಮ್ಮನೊಬ್ಬನು ಸಿಂಹಾಸನದಮೇಲೆ ಕುಳ್ಳಿರಿಸಲ್ಪಟ್ಟನು.

ಕೃಷ್ಣದೇವರಾಜರಿಗೆ ವಿಜಯನಗರದ ಸಿಂಹಾಸನವು ಅನಾಯಾಸವಾಗಿ ದೊರೆತಿದ್ದಿಲ್ಲ. ಅವರು, ತಮಗಿಂತಲೂ ಗಾದಿಯಮೇಲೆ ವಿಶೇಷ ಹಕ್ಕು ಇರುವ ತಮ್ಮ ಮೂವರು ತಮ್ಮಂದಿರನ್ನೂ, ಒಬ್ಬ ಅಣ್ಣನಮಗನನ್ನೂ ಮಹತ್ವಾಕಾಂಕ್ಷೆಯಿಂದ ಸರೆಯಲಿಟ್ಟು ವಿಜಯನಗರದ ಪಟ್ಟವೇರಿದ್ದರು. ತಮ್ಮ ಹೂಟ್ಟಿಯಲ್ಲಿ ಸಂತಾನವಾದದ್ದರಿಂದ, ತಮ್ಮ ತರುವಾಯ ತಮ್ಮ ವಂಶಕ್ಕೇ ಸಿಂಹಾಸನವು ಪ್ರಾಪ್ತವಾಗುವದೆಂದು ಕೃಷ್ಣದೇವರಾಯರು ತಿಳಿದಿದ್ದರು; ಆದರೆ ವಿಷಪ್ರಯೋಗದಿಂದ ಮಗನು ಅಕಸ್ಮಾತ್ ಮರಣಹೊಂದಿದ್ದರಿಂದ ಅವರ ಎಲ್ಲ ಆಶೆಗಳು ಬಯಲಾದವು. ರಾಮರಾಜನಮೇಲೆ ರಾಯರ ಪ್ರೀತಿಯು ವಿಶೇಷವಾಗಿತ್ತು. ಈತನು ತಮ್ಮ ಮಗನೊಡನೆ ಸಾಮಿನಿಷ್ಟೆಯಿಂದ ನಡಕೊಂಡು, ತಮ್ಮ ವೈರಿಗಳ, ಹಾಗು ತಮ್ಮ ಅಣ್ಣ-ತಮ್ಮಂದಿರ ಆಟವನ್ನು ನಡೆಯಗೊಡದೆ ರಾಜ್ಯಕಾರಭಾರವನ್ನು ಸಾಗಿಸಿಕೊಂಡು ಹೋಗುವನೆಂತಲೂ ಕೃಷ್ಣದೇವರಾಯರು ನಂಬಿದ್ದರು; ಆದರೆ ರಾಜಪುತ್ರನ ಅಕಸ್ಮಿಕಮರಣದಿಂದ ಅದೆಲ್ಲ ನಿರರ್ಥಕ ಕಲ್ಪನೆಯಾಗಿಹೋಯಿತು. ಕೃಷ್ಣದೇವರಾಜರ ಮರಣದಿಂದ ರಾಜ್ಯಕಾರಭಾರದಲ್ಲಿ ಬಹಳ ಹೆಚ್ಚುಕಡಿಮೆಗಳಾದವು. ಸೆರೆಮನೆಯಲ್ಲಿದ್ದ ಮೂವರು; ರಾಜಬಂಧುಗಳಲ್ಲಿ ಅಚ್ಯುತರಾಯನೆಂಬವನ ಪಕ್ಷದಜನರು ಖಟಾಟೋಪಮಾಡಿ ಆತನನ್ನು ಸಿಂಹಾಸನದಮೇಲೆ ಕುಳ್ಳಿರಿಸಿದರು; ಆದ್ದರಿಂದ ರಾಮರಾಜನಪಕ್ಷವು ಹಿಂದಕ್ಕೆ ಬಿದ್ದು, ಆತನೂ ಆತನ ಅಣ್ಣನೂ, ಆತನ ಮಿತ್ರನೂ ಕೆಲವು ದಿನ ಅಜ್ಞಾತವಾಸ ಮಾಡಬೇಕಾಯಿತು. ಈ ಅಜ್ಞಾತವಾಸವು ರಾಮರಾಜನಿಗೆ ದುಃಸಹವಾಯಿತು; ಆದರೂ ಆತನು ಅದನ್ನು ಹ್ಯಾಗಾದರೂ ನೀಗಿದನು. ಆ ಅಜ್ಞಾತವಾಸದ ಕಾಲವನ್ನು ಆತನು ಸಕುಟುಂಬ ಕುಂಜವನದಲ್ಲಿ ವಾಸಮಾಡಿ ಕಳೆದನು. ಕುಂಜನನಕ್ಕೆ ಬಂದ

ಬಳಿಕ ಆತನಿಗೆ ಮೇಹೇರಜಾನಳ ನೆನಪು ಮೇಲೆ ಮೇಲೆ ಆಗಹತ್ತಿತು; ಆತನು ಸಕುಟುಂಬ ಅಲ್ಲಿ ವಾಸಮಾಡಹತ್ತಿದ್ದರಿಂದ, ಮನುಷ್ಯ ಸ್ವಭಾವಕ್ಕನುಸರಿಸಿ ಬರ ಬರುತ್ತ ಮೇಹೇರಜಾನಳ ನೆನಪು ಸಹ ಆತನಿಗೆ ಅಗದಹಾಗಾಯಿತು. ಮೇಹೇರಜಾನಳ ಈ ನೆನಪಿನ ಗೂಡ ರಾಮರಾಜನ ಮಹತ್ವಾಕಾಂಕ್ಷೆ ಮಾತ್ರ ಅಳಿದು ಹೋಗಿದ್ದಿಲ್ಲ. ಆತನು ಅಚ್ಯುತರಾಯನ ಆಳಿಕೆಯಲ್ಲಿಯಾದರೂ ತನ್ನ ಕುದುರೆಯನ್ನು ಮುಂದಕ್ಕೆ ನೂಕಿ, ಅಚ್ಯುತರಾಯನನ್ನು ನಾಮಧಾರಿಯಾದ ಅರಸನನ್ನು ಮಾಡಬೇಕೆಂದು ಯತ್ನಿಸಹತ್ತಿದ್ದನು. ಅಚ್ಯುತರಾಯನ ಕಾಲದಲ್ಲಿ ವಿಜಯನಗರದ ಗೌರವವೂ, ದರ್ಪವೂ ತೀರ ಕಡಿಮೆಯಾದವು. ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರದ ಸಾಮ್ರಾಜ್ಯವು ಅತ್ಯುತ್ಕರ್ಷವನ್ನು ಹೊಂದಿತ್ತು. ಆಗಿನ ಕಾಲದಲ್ಲಿ ವಿಜಯನಗರದ ರಾಯರ ಭಯವು ಯಾವತ್ತು ಮುಸಲ್ಮಾನ ಬಾದಶಹರಿಗೆ ಇತ್ತು. ವಿಜಾಪುರದ ಇಸ್ಮಾಯಿಲ್ ಅದಿಲಶಹನು ಕೃಷ್ಣದೇವರಾಯನ ಕೈಯಿಂದ ವಿಜಯನಗರದ ರಾಜ್ಯದ ಕೆಲವು ಭಾಗವನ್ನು ಕಸಕೊಳ್ಳಬೇಕೆಂದು ಒಂದೆರಡುಸಾರೆ ಪ್ರಯತ್ನ ಮಾಡಿದನು; ಆದರೆ ಕೃಷ್ಣದೇವರಾಯನು ಆತನ ಆಟವನ್ನು ನಡೆಯಗೊಡಲಿಲ್ಲ. ಈ ಪ್ರಸಂಗವು ಓದತಕ್ಕದ್ದಾದ್ದರಿಂದ ಅದನ್ನು ವಾಚಕರ ಸಲುವಾಗಿ ಕೊಡುವೆವು.

ಇಸ್ಮಾಯಿಲ್ ಅದಿಲ್‌ಶಹನು ರಾಯಚೂರು, ಮದ್ದುಗಲ್ಲಗಿರಿ ಎಂಬ ಎರಡು ಸ್ಥಳಗಳನ್ನು ಕೃಷ್ಣದೇವರಾಯನ ಕೈಯೊಳಗಿಂದ ಕಸಕೊಂಡು, ಮುಸಲ್ಮಾನರ ಸಾಮರ್ಥ್ಯವು ಯಥಾಸ್ಥಿತವಿದ್ದಂತೆ ಹಿಂದುಗಳಿಗೆ ತೋರಿಸಬೇಕೆಂದು ಮಾಡಿದನು. ಆತದ ಸೈನ್ಯವು ಆ ಸ್ಥಳಗಳ ಕಡೆಗೆ ಸಾಗಿಬರಹತ್ತಿತು. ಅವೆರಡು ಸ್ಥಳಗಳು ಮೊದಲು ಮುಸಲ್ಮಾನರವು. ಅವನ್ನು ವಿಜಯನಗರದ ರಾಯರು ಗೆದ್ದು ಕೊಂಡಿದ್ದರು. ಅದಿಲ್‌ಶಹನ ಈ ದಂಡಯಾತ್ರೆಯನ್ನು, ಪೂರ್ಣಜಾಗರೂಕನಾಗಿದ್ದ ಕೃಷ್ಣದೇವರಾಯನು ಕೇಳಿ, ತನ್ನ ಪ್ರಚಂಡಸೈನ್ಯವನ್ನು ಸಿದ್ಧಗೊಳಿದನು. ಕೃಷ್ಣದೇವರಾಜನ ಕಾಲದಲ್ಲಿ ವಿಜಯನಗರದ ಸಾಮ್ರಾಜ್ಯದ ಸಾಮರ್ಥ್ಯವು ಅಧಿಕವಾಗಿತ್ತು. ಅದಿಲಶಹನು ದಂಡು ಸಾಗಿಸಿಕೊಂಡು ಬಂದಬಂದಂತೆ, ಕೃಷ್ಣದೇವರಾಯನೂ ತನ್ನ ಪ್ರಚಂಡಸೈನ್ಯವನ್ನು ಅದಕ್ಕೆ ಎದುರಾಗಿ ಸಾಗಿಸಿಕೊಂಡು ನಡೆದನು. ಅದಿಲಶಹನು ತೀರ ಸನಿಯಕ್ಕೆ ಬಂದನೆಂಬ ಸುದ್ದಿಯನ್ನು ಕೇಳಿ, ಕೃಷ್ಣದೇವರಾಯನು ಕೃಷ್ಣೆಯ ಈಚೆಯ ದಂಡೆಯಲ್ಲಿ ತನ್ನ ಸೈನ್ಯದ ಬಿಡುಬಿಟ್ಟನು. ಆತನನ್ನು ಹಲವುಜನ ಹಿಂದುಮಾಂಡಲಿಕರಾಜರು ತಮ್ಮ ತಮ್ಮ ಸೈನ್ಯಗಳೊಡನೆ ಅಭಿಮಾನದಿಂದ ಬಂದು ಕೂಡಿಕೊಂಡಿದ್ದರು. ಕೃಷ್ಣದೇವರಾಜನ ಈ ಸಿದ್ಧತೆಯನ್ನು ನೋಡಿ ಅಲ್ಲಿ ಅದಿಲಶಹನು ಬೆದರಿ, ಹಿಂದಿರುಗಿ ಹೋಗುವದು ಯುಕ್ತವಾಗಿ

ತ್ತು; ಹಾಗೆ ಮಾಡಬೇಕೆಂದು ಆತನ ಕಡೆಯ ತಿಳಿವಳಿಕೆಯ ಸರದಾರರೂ ಹೇಳಿದರು; ಆದರೆ ಮುಂದಕ್ಕಿಟ್ಟ ಹೆಜ್ಜೆಯನ್ನು ಹಿಂದಕ್ಕಿಡುವದು ಆ ಅಭಿಮಾನಿವುರುಷನ ಮಾನಕ್ಕೆ ಸಾಲಲಿಲ್ಲ. ಆತನು ತಾನು ಹಿಂದಿರುಗಿ ಹೋಗಲಿಕ್ಕಿಲ್ಲೆಂದು ನಿಶ್ಚಯಿಸಿ, ತನ್ನ ಏಳುಸಾವಿರ ಮುಸಲ್ಮಾನ ಸೈನ್ಯಕ್ಕೆ, ತಾನು ಅಪ್ಪಣೆಕೊಟ್ಟಕೂಡಲೆ ಕೃಷ್ಣಾನದಿಯನ್ನು ದಾಟಿ ಶತ್ರುಗಳ ಮೇಲೆ ಬೀಳಬೇಕೆಂದು ಅಪ್ಪಣೆಮಾಡಿದನು. ನದಿಯನ್ನು ದಾಟುವದಕ್ಕಾಗಿ ಮುಸಲ್ಮಾನರ ತೆಪ್ಪಗಳನ್ನು ಕಟ್ಟಹತ್ತಿದರು. ಹೀಗಿರುವಾಗ ಒಂದುದಿನ ಆದಿಲಶಹನು ತನ್ನ ಡೇರೆಯಲ್ಲಿ ಸ್ವಸ್ಥ ವಿಶ್ರಾಂತಿಯನ್ನು ಹೊಂದುತ್ತ ಕುಳಿತಿರಲು, ಯಾರೋ ಹೊರಗೆ—"ಏಳಪ್ಪಾ, ನಿನ್ನ ಕೈಯೊಳಗಿನ ಸುವರ್ಣದ ಪಾತ್ರೆಯನ್ನು ಹಾರಿಸಿ ಮಣ್ಣುಗೂಡಿಸುವದರೊಳಗೆ ಅದರಲ್ಲಿ ಆನಂದರೂಪವಾದ ಮದ್ಯವನ್ನು ತುಂಬಿ ಪ್ರಾಶನಮಾಡು''ಎಂದು ಮುಂಜಲಸ್ವರದಿಂದ ಹಾಡುವದು ಆತನ ಕಿವಿಗೆ ಬಿದ್ದಿತು. ಅದನ್ನು ಕೇಳಿದ ಕೂಡಲೆ ಸುಲ್ತಾನನು ಅಕಸ್ಮಾತ್ ಸ್ಫೂರ್ತಿಗೊಂಡು—"ಅಲ್ಲಾನು ಈ ಗಾಯನದ ರೂಪದಿಂದ ನನಗೆ'' ನಿನ್ನ ಮನಸ್ಸಿನ ಕೋರಿಕೆಯನ್ನು ಪೂರ್ಣಮಾಡಿಕೊಳ್ಳಲಿಕ್ಕೆ ಇದು ಒಳ್ಳೇಸಮಯ'ವೆಂದು ಸೂಚಿಸುತ್ತಾನೆಂದು ತಿಳಿದು, ತನ್ನ ಜತೆಗಾರರೊಡನೆ ರಾತ್ರಿಯಥೇಚ್ಛ ಮದ್ಯಪ್ರಾಶನಮಾಡಿ, ಅಮಲು ತಲೆಗೇರಿರಲು, ಹಿಂದುಮುಂದಿನವಿಚಾರಮಾಡದೆ ಒಮ್ಮೆಲೆ ತನ್ನ ಸೈನಿಕರಿಗೆ—"ನೀವು ಈಗಲೆ ನದಿಯನ್ನು ದಾಟಿ ಶತ್ರುಗಳ ಮೇಲೆ ಬೀಳಬೇಕೆ''ಂದು ಆಜ್ಞಾಪಿಸಿದನು. ಆಗ ವಿಚಾರವಂತ ಸರದಾರರು ಇದು ಯೋಗ್ಯವಲ್ಲೆಂದು ಸುಲ್ತಾನನಿಗೆ ಬಹಳವಾಗಿ ಹೇಳಿದರು; ಮತ್ತು ಹೀಗೆ ಅವಿಚಾರದಿಂದ ಶತ್ರುಗಳ ಮೇಲೆ ಬಿದ್ದರೆ, ಒಬ್ಬರೂ ತಿರುಗಿ ಹೋಗಲಿಕ್ಕಿಲ್ಲೆಂತಲೂ ಅವರು ಸ್ಪಷ್ಟವಾಗಿ ಸುಲ್ತಾನನಿಗೆ ತಿಳಿಸಿದರು; ಆದರೆ ಸಾರಾಯಿಯ ಗುಂಗಿನಲ್ಲಿದ್ದ ಸುಲ್ತಾನನಿಗೆ ಆಗ ಎಚ್ಚರವು ಹುಟ್ಟಲಿಲ್ಲ. ಆತನು ಪುನಃ ತನ್ನ ಸೈನಿಕರಿಗೆ—"ಈಗ ಸಿದ್ಧವಾಗಿದ್ದ ತೆಪ್ಪಗಳ ಮೇಲಿಂದ ಹೋಗಬಹುದಾದಷ್ಟು ಸೈನಿಕರು ಹೋಗಲಿ, ಉಳಿದವರು ಆನೆಯ ಮೇಲಿಂದ ಹೋಗಲಿ. ಇಂದು ಬೆಳಗಾಗುವದರೊಳಗಾಗಿ ಶತ್ರುಗಳ ಮೇಲೆ ಬೀಳಲಿಕ್ಕೇಬೇಕು,'' ಎಂದು ಆಜ್ಞಾಪಿಸಿದನು. ಹೀಗೆ ಮಾಡಿದರೆ ನಾಶವಾದೀತೆಂದು ಸರದಾರರು ಮತ್ತೆ ಹೇಳಿದರು; ಆದರೆ ಸುಲ್ತಾನನು ಅದಕ್ಕೆ ಒಪ್ಪಲಿಲ್ಲ. ತಾನು ಮುಂದೆ ಹೋಗದಿದ್ದರೆ, ಸೈನಿಕರು ಹುರಿದುಂಬರೆಂದು ತಿಳಿದು, ಸುಲ್ತಾನನು ಇಬ್ಬರು ಸರದಾರರೊಡನೆ ಆನೆಯನ್ನು ಏರಿ ತಾನು ಸ್ವತಃ ಕೃಷ್ಣೆಯ ಪ್ರವಾಹವನ್ನು ದುಮುಕಿದನು. ಅದನ್ನು ನೋಡಿ ಉಳಿದ ಸರದಾರರೂ ಸುಲ್ತಾನನನ್ನು ಹಿಂಬಾಲಿಸಿದರು. ಎರಡು ಸಾರೆ ತೆಪ್ಪಗಳ ಮೇಲಿಂದ ಸೈನಿಕರು ಈಚೆಯ ದಂಡೆಯನ್ನು ಕಂಡರು. ಇನ್ನೂರಾ

ಐವತ್ತು ಆನೆಗಳೂ ಸುದೈವದಿಂದ ಏನೂ ಅಪಾಯವನ್ನು ಹೊಂದದೆ ಸುರಕ್ಷಿತವಾಗಿ ಕೃಷ್ಣೆಯನ್ನು ದಾಟಿ ಈಚೆಯ ದಂಡೆಗೆ ಬಂದವು. ಅಷ್ಟರಲ್ಲಿ ಈ ಸುದ್ದಿಯು ಕೃಷ್ಣದೇವರಾಯನಿಗೆ ಹತ್ತಲು, ಆತನ ಆಜ್ಞೆಯಿಂದ ಹಿಂದು ಸೈನಿಕರು ಮುಸಲ್ಮಾನರ ಮೇಲೆ ಒಳ್ಳೇ ಕಸುವಿನಿಂದ ಬಿದ್ದರು. ಹಿಂದುಗಳ ಹೊಡತದಿಂದ ಮುಸಲ್ಮಾನರಿಗೆ ತಿರುಗಿ ಹೋಗಲಿಕ್ಕೂ ಆಸ್ಪದ ದೊರೆಯದಾಯಿತು. ಆಗ ಅವರು ಹಂಗುದೊರೆದು ಒಳ್ಳೇ ಶೌರ್ಯದಿಂದ ಕಾದಿದರು; ಆದರೂ ಹಿಂದೂಜನರ ಪ್ರಚಂಡ ಸೈನ್ಯದ ಮುಂದೆ ಅವರ ಆಟ ನಡೆಯಲಿಲ್ಲ. ಸುಲ್ತಾನನಾದರೂ ಜೀವದಿಂದ ಪಾರಾಗುವನೋ ಇಲ್ಲವೋ, ಎಂಬ ಭಯವು ಮುಸಲ್ಮಾನ ಸೈನಿಕರಲ್ಲಿ ಉತ್ಪನ್ನವಾಯಿತು. ಆಗ ಬಾದಶಹನ ಆನೆಯನ್ನು, ಅವನ ಸರದಾರರು ಹಿಂದಕ್ಕೆ ತಿರುಗಿಸಿ ಕೃಷ್ಣೆಯಲ್ಲಿ ನೂಕಿದರು. ಪ್ರವಾಹದ ಎದುರಿಗೆ ಹೋಗುವ ಪ್ರಸಂಗ ಬಂದದ್ದರಿಂದ ಸುಲ್ತಾನನ ಆನೆಯು ಬಹು ಕಷ್ಟದಿಂದ ಈಸಿ ಪಾರಾಗಿ, ಈಚೆಯ ದಂಡೆಗೆ ಹೋಯಿತು. ಮುಸಲ್ಮಾನರ ದಂಡಿನಲ್ಲಿ ಏಳು ಜನರು ಮಾತ್ರ ಪಾರಾದರು! ಉಳಿದವರೆಲ್ಲ ರಣಭೂಮಿಯಲ್ಲಿ ಬಿದ್ದರು.

ಹೀಗೆ ಒಡತವನ್ನು ತಿಂದು ಮಿತಿಯಿಲ್ಲದೆ ಸೈನ್ಯವನ್ನು ಹಾಳುಮಾಡಿಕೊಂಡು ಓಡಿಹೋಗಬೇಕಾದದ್ದರಿಂದ, ಇಸ್ಮಾಯಿಲ್ ಅದಿಲಶಹನಿಗೆ ಬಹಳ ಪಶ್ಚಾತ್ತಾಪವಾಯಿತು. ಯೋಗ್ಯ ಜನರ ಹಿತದ ಮಾತನ್ನು ಮೀರಿ ಹೋದದ್ದರ ಪ್ರಾಯಶ್ಚಿತ್ತವು ಆತನಿಗೆ ಚೆನ್ನಾಗಿ ಆದಂತಾಯಿತು. ಈಗ ತನಗಾದಅಪಮಾನದ ಸೇಡು ತೀರಿಸಿಕೊಳ್ಳುವವರೆಗೆ ಸಾರಾಯಿಯನ್ನು ಮುಟ್ಟಲಿಕ್ಕಿಲ್ಲೆಂದು ಆತನು ಪ್ರತಿಜ್ಞೆಮಾಡಿದನು; ಆದರೆ ಆಗ ಆತನ ಆಟವು ಏನೂ ನಡೆಯುವ ಹಾಗಿದ್ದಿಲ್ಲ. ಆತನು ಅಸದ ಖಾನನೆಂಬ ಹೆಸರಿನ ಸರದಾರನ ಯೋಗ್ಯವಾದ ಸೂಚನೆಯಂತೆ ವಿಜಾಪುರದ ಹಾದಿಯನ್ನು ಹಿಡಿದನು. ಈ ಜಯದಿಂದ ವಿಜಾಪುರದ ಇಸ್ಮಾಯಿಲ್ ಅದಿಲಶಹನಿಗಷ್ಟೇ ಅಲ್ಲ, ಯಾವತ್ತು ಬಾಮನಿಯ ಬಾದಶಹರಿಗೆ ವಿಜಯನಗರದ ರಾಯರ ಭಯವು ಚೆನ್ನಾಗಿ ಕುಳಿತಿತು. ಇನ್ನು ಕೆಲವು ವರ್ಷಗಳವರೆಗಾದರೂ ಹಿಂದೂ ಜನರ ಸಂಗಡ ಯುದ್ಧಮಾಡುವದು ಅಶಕ್ಯವೆಂದು ಅವರು ತಿಳಕೊಂಡರು. ಈ ಭಯದ ಸಂಗಡ ಆ ಬಾಮನಿ ಬಾದಶಹರಲ್ಲಿ ಒಂದು ಪ್ರಕಾರದ ಜಾಗ್ರತೆಯೂ ಉತ್ಪನ್ನವಾಯಿತೆಂದು ಹೇಳಬಹುದು. ಕೃಷ್ಣರಾಜನು, ಅಥವಾ ವಿಜಯನಗರದ ಬೇರೊಬ್ಬ ರಾಯನು ಪ್ರಬಲನಾಗಿ ಮಹಾ ಸಾಹಸದಿಂದ ಮುಸಲ್ಮಾನರ ನಾಶವನ್ನು ಮಾಡಬಹುದಾದ್ದರಿಂದ, ವಿಜಯನಗರದ ರಾಯರ ಸಮಾಚಾರ ತೆಗೆದುಕೊಳ್ಳುವ ಬಾಬಿನಲ್ಲಿಯಾದರೂ ತಾವೆಲ್ಲರೂ ಒಕ್ಕಟ್ಟಿನಿಂದ ನಡೆಯಬೇಕೆಂದು

ಆವರು ತಮ್ಮೊಳಗೆ ಗೊತ್ತುಮಾಡಿಕೊಂಡರು. ಹೀಗೆ ಅವರು ಒಂದಾದದ್ದು ವಿಜಯನಗರದ ರಾಜ್ಯಕ್ಕೆ ಘಾತಕವಾದದ್ದಲ್ಲದೆ, ವಿಜಯನಗರದ ರಾಯರ ಮಿತಿಮೀರಿದ ಸೊಕ್ಕೂ ವಿಜಯನಗರದ ರಾಜ್ಯದ ನಾಶಕ್ಕೆ ಕಾರಣವಾಯಿತು. ಇರಲಿ, ಇತ್ತ ಜಯಶಾಲಿಯಾದ ಕೃಷ್ಣದೇವರಾಯನು, ಬಹು ಸಂತೋಷದಿಂದ ರಾಯಚೂರನ್ನು ಪ್ರವೇಶಿಸಿದನು. ಆತನು ಪಟ್ಟಣದೊಳಗಿನ ಜನರಿಗೆ ಬಹು ಪ್ರೇಮದಿಂದ ಅಭಯವನ್ನು ಕೊಟ್ಟು, ಜನರ ಮನಸ್ಸಿನಲ್ಲಿ ತನ್ನ ವಿಷಯವಾಗಿ ವಿಶ್ವಾಸವನ್ನುಂಟುಮಾಡಿಕೊಂಡನು; ಆದರೆ ಅದಿಲಶಹನು ಕಳಿಸಿದ ವಕೀಲನ ಸಂಗಡ ಮಾತ್ರ ಆತನು ಬಹಳ ಸೊಕ್ಕಿನಿಂದ ನಡಕೊಂಡನು. ಒಂದು ತಿಂಗಳ ವರೆಗೆ ಆ ವಕೀಲನಿಗೆ ರಾಯನು ದರ್ಶನವನ್ನೇ ಕೊಡಲಿಲ್ಲ. ಆಮೇಲೆ ದರ್ಶನ ಕೊಟ್ಟರೂ, ಆ ವಕೀಲನನ್ನು ಬಹಳವಾಗಿ ಅವಮಾನಗೊಳಿಸಿದನು. ಇದರಿಂದ ಉರಿಯಲ್ಲಿ ಎಣ್ಣೆ ಸುರುವಿದಹಾಗಾಯಿತು. ಅದಿಲಶಹನಂತೆ ಬೇರೆ ಮುಸಲ್ಮಾನ ಬಾದಶಹರೂ ಕೃಷ್ಣದೇವರಾಯನ ಕಡೆಗೆ ತಮ್ಮ ವಕೀಲರನ್ನು ಕಳಿಸಿದರು; ಆದರೆ ಅರಸನಾಗಲಿ, ಆತನ ಕೈಕೆಳಗಿನ ಜನರಾಗಲಿ ಆ ವಕೀಲರ ಹಾಡನ್ನಾದರೂ ಹಾಗೆಯೇ ಮಾಡಿದರು. ಇದರ ಹೊರತು ಎಲ್ಲ ಮುಸಲ್ಮಾನ ಬಾದಶಹರ ಮನಸ್ಸು ನೋಯಲಿಕ್ಕೆ ಇನ್ನೊಂದು ಕಾರಣವಾಯಿತು; ಕೃಷ್ಣದೇವರಾಯನು ಇಸ್ಮಾಯಿಲ್ ಅದಿಲಶಹನ ವಕೀಲನ ಸಂಗಡ ಆತನ ಒಡೆಯನಿಗೆ "ನೀನು ನನ್ನ ದರ್ಶನಕ್ಕೆ ಬಂದು ಮುಜುರೆ ಮಾಡಿ ನನ್ನ ಚರಣವನ್ನು ಚುಂಬಿಸಿದರೆ, ನಾನು ಗೆದ್ದುಕೊಂಡಿದ್ದ ನಿನ್ನ ರಾಜ್ಯವನ್ನೆಲ್ಲ ನಿನಗೆ ತಿರುಗಿ ಕೊಡುವೆನು", ಎಂದು ಹೇಳಿಕಳಿಸಿದನು. ಇದಕ್ಕೆ ಅದಿಲಶಹನು ಒಪ್ಪಿಕೊಳ್ಳಲಿಲ್ಲೆಂಬದಂತು ಸರಿಯೆ; ಇದರಿಂದ ಯಾವತ್ತು ಮುಸಲ್ಮಾನ ಬಾದಶಹರು ಅವಮಾನಿತರಾಗಿ ವಿಜಯನಗರದ ರಾಜ್ಯದ ಮೇಲೆ ಪಂಕಿಯನ್ನು ಮಾತ್ರ ಕಾರಹತ್ತಿದರು. ಅದಿಲಶಹನು ತನ್ನ ಮಾತು ನಡಿಸಲಿಲ್ಲೆಂದು ಕೃಷ್ಣದೇವರಾಜನು ಆತನ ರಾಜ್ಯದ ಮೇಲೆ ದಂಡೆತ್ತಿಹೋಗಿ, ಆತನನ್ನು ಒಂದಕ್ಕೆ ಸರಿಸುತ್ತ ಸರಿಸುತ್ತ ವಿಜಾಪುರವನ್ನು ಮುತ್ತಿ ಅದನ್ನು ಕೈವಶಮಾಡಿಕೊಂಡನು. ಕೆಲವು ದಿನಗಳವರೆಗೆ ರಾಯನು ವಿಜಾಪುರದಲ್ಲಿ ಇದ್ದು, ಅದಿಲಶಹನ ಸೆರೆಯಲ್ಲಿದ್ದ ಮೊದಲಿನ ದಕ್ಷಿಣದ ಸುಭೇದಾರರ ಮೂವರು ಮಕ್ಕಳ ಬಂಧವಿಮೋಚನನುಮಾಡಿದನು. ಅವರಲ್ಲಿ ಹಿರಿಯಮಗನನ್ನು ವಿಜಾಪುರದ ಪಟ್ಟದಮೇಲೆ ಕುಳ್ಳಿರಿಸಿ, ಆತನನ್ನೇ ದಕ್ಷಿಣದ ಬಾದಶಹನನ್ನಾಗಿ ಮಾಡಬೇಕೆಂತಲೂ, ಉಳಿದ ಬಾಮನಿ ಬಾದಶಹರನ್ನು ಮುರಿಯಬೇಕೆಂತಲೂ ರಾಯನು ಯೋಚಿಸಿದನು; ಆದರೆ ಅದು ಸಾಧಿಸಲಿಲ್ಲ. ಇದರಿಂದ ಬಾಮನಿ ಬಾದಶಹರ ಮನಸ್ಸಿನೊಳಗಿದ್ದ ವಿಜಯನಗರದ ರಾಜ್ಯದ

ಮೇಲಿನ ದ್ವೇಷವು ಮಾತ್ರ ಮತ್ತಿಷ್ಟು ಹೆಚ್ಚಾಯಿತು. ಹೀಗಿರುವಾಗ ಕೃಷ್ಣದೇವರಾಯನ ಮರಣವಾರ್ತೆಯು ಕಿವಿಗೆ ಬೀಳಲು, ಯಾವತ್ತು ಮುಸಲ್ಮಾನ ಬಾದಶಹರಿಗೆ ಬಹಳ ಸಂತೋಷವಾದದ್ದರಲ್ಲಿ ಆಶ್ಚರ್ಯವಲ್ಲ. ಅದರಲ್ಲಿ ಅಚ್ಯುತರಾಯನಂಥ ಪುಕ್ಕನು ವಿಜಯನಗರದ ಸಿಂಹಾಸನವೇರಿದ್ದೆಂತು ಮುಸಲ್ಮಾನರ ಹಿತಸಾಧನಕ್ಕೆ ಮತ್ತಿಷ್ಟು ಅನುಕೂಲವಾದಂತಾಗಿ, ವಿಜಯನಗರದ ರಾಜ್ಯದ ವಿನಾಶಾಂಕುರವು ಬೆಳೆದು, ಅದು ವೃಕ್ಷದ ಸ್ವರೂಪವನ್ನು ಹೊಂದಿತು !

೯ನೆಯ ಪ್ರಕರಣ—ಒಳಸಂಚುಗಳು.

ತನ್ನನ್ನು ಸೆರೆಯಲ್ಲಿಟ್ಟಿದ್ದಕ್ಕಾಗಿ ಕೃಷ್ಣದೇವರಾಯನ ಮೇಲೆ ಅಚ್ಯುತರಾಯನ ಸಿಟ್ಟು ವಿಶೇಷವಾಗಿದ್ದದ್ದರಿಂದ, ಅಚ್ಯುತರಾಯನು ತಾನು ಸಿಂಹಾನವೇರಿದಕೂಡಲೆ ಕೃಷ್ಣದೇವರಾಯನ ಪಕ್ಷದ ರಾಮರಾಜನೇ ಮೊದಲಾದವರನ್ನು ಅಧಿಕಾರದಿಂದ ದೂರಮಾಡಿದನು. ಅಚ್ಯುತರಾಯನು ಪುಕ್ಕಸ್ವಭಾವದವನು; ರಾಜ್ಯಕಾರಭಾರಕ್ಕೆ ಎಷ್ಟು ಮಾತ್ರವೂ ಯೋಗ್ಯನಾದವನಲ್ಲ. ಆತನು ಎರಡನೆಯವರ ಬೊಗಸೆಯಿಂದ ನೀರು ಕುಡಿಯುವ ಯೋಗ್ಯತೆಯ ಮನುಷ್ಯನಾದದ್ದರಿಂದ, ಯಾವತ್ತು ರಾಜ್ಯಕಾರಭಾರವು ಆತನ ಹೊಸ ಮಂತ್ರಿಯಾದ ಹೋಜೆ ತಿರುಮಲರಾಯನ ಕೈಸೇರಲು, ಅವನೇ ನಿಜವಾದ ರಾಜನಾದನು. ತಿರುಮಲನಲ್ಲಿ ಕರ್ತೃತ್ವಶಕ್ತಿಯು ಲೇಶವಾದರೂ ಇದ್ದಿಲ್ಲ; ಆದರೆ ಡಾಲು ಬಹಳ. ಬಾಯಿಂದ ದೊಡ್ಡ ದೊಡ್ಡ ಮಾತುಗಳಾಡುವದು ಹೆಚ್ಚು. ಬರಬರುತ್ತ ಆತನ ಸೊಕ್ಕಿನ ನಡತೆಗೆ ಆವನ ಪಕ್ಷದ ಜನರು ಸಹ ಬೇಸತ್ತರು. ಯಾವಾಗ ಯಾರ ಅಪಮಾನವಾದೀತೆಂಬವರ ನಿಯಮು ಉಳಿಯಲಿಲ್ಲ. ತಿರುಮಲನಪ್ರೀತಿಯ ಸೇವಕ

ನಾದ ಮಣಿಮಲ್ಲನೆಂಬವನ ಪ್ರಸ್ಥವು ಹೆಚ್ಚಾಯಿತು. ಮಣಿಮಲ್ಲನ ಒಪ್ಪಿಗೆಯ ಹೊರತು ರಾಜ್ಯಕಾರಭಾರದ ಒಂದು ಕಡ್ಡಿ ಕೂಡ ಕದಲದಾಯಿತು. ರಾಜ ದರ್ಬಾರದೊಳಗಿನ ದೊಡ್ಡ ದೊಡ್ಡ ಜನರು ಕೂಡ ಮಣಿಮಲ್ಲನ ಮರ್ಜಿಯನ್ನು ಹಿಡಿಯಬೇಕಾಯಿತು ಇದು ಬಹು ಜನರಿಗೆ ಸಹನವಾಗಲಿಲ್ಲ. ಕೆಲವರು ಈ ಸ್ಥಿತಿಯು ಹಿತಕರವಾದದ್ದಲ್ಲವೆಂದು ತಿರುಮಲನಿಗೆ ಹೇಳಲು, ಅದರಿಂದ ಪ್ರಯೋ ಜನವಾಗುವದೊತ್ತಟ್ಟಿಗೆ ಉಳಿದು, ತಿರುಮಲನು ಆ ಎಲ್ಲ ಸಂಗತಿಯನ್ನು ಮಣಿ ಮಲ್ಲನಿಗೆ ತಿಳಿಸಿದ್ದರಿಂದ, ಆ ಜನರ ಮೇಲೆ ಮಣಿಮಲ್ಲನ ಡಂಕು ಮಾತ್ರ ಕುಳಿ ತಿತು! ದರ್ಬಾರದ ಈ ಸ್ಥಿತಿಯು, ಹೊಂಚುಹಾಕಿಕೊಂಡು ಕುಳಿತಿದ್ದ ರಾಮ ರಾಜನ ಕಾರ್ಯಸಾಧನಕ್ಕೆ ಬಹಳ ಅನುಕೂಲವಾಯಿತು. ಆತನು ಮೊದಲು ಅಚ್ಯುತರಾಯನ ಪಕ್ಷಕಟ್ಟಿದಹಾಗೆ ತೋರಿಸಿ, ತಿರುಮಲನ ನಿಂದೆಯನ್ನು ಜನ ರಮುಂದೆ ಮಾಡಹತ್ತಿದನು. ಮುಂದೆ ಬರಬರುತ್ತ ತಿರುಮಲನನ್ನು ಶ್ಲಾಘಿಸ ಹತ್ತಿ, ಮಣಿಮಲ್ಲನನ್ನು ನಿರಾಕರಿಸಹತ್ತಿದನು. ಮೊದಮೊದಲಿಗೆ ಇದರಿಂದ ಏನೂ ಪ್ರಯೋಜನವಾಗದಿದ್ದರೂ, ಬರಬರುತ್ತ ಜನರು ರಾಮರಾಜನ ಮಾತಿ ಗೆ ಒಪ್ಪಿಕೊಳ್ಳಹತ್ತಿದರು. "ಅಚ್ಯುತರಾಯನೂ ಅಲ್ಲ, ತಿರುಮಲನೂ ಅಲ್ಲ, ಮಣಿಮಲ್ಲನಂಥ ಕ್ಷುದ್ರಮನುಷ್ಯನು ರಾಜ್ಯದ ಸೂತ್ರಗಳನ್ನೆಲ್ಲಾಡಿಸಿ ದೊಡ್ಡ ದೊಡ್ಡ ಮರ್ಯಾದಸ್ತರ, ಹಾಗೂ ಶೂರರ ಅಪಮಾನಮಾಡುವದು ಯೋಗ್ಯ ವಾಗಬಹುದೋ," ಎಂದು ರಾಮರಾಜನು ಜನರನ್ನು ಕೇಳಹತ್ತಿದನು. ರಾಮ ರಾಜನಮಾತು ಬಹುಜನರಿಗೆ ಒಪ್ಪಿಗೆಯಾಗಿ, ಬರಬರುತ್ತ ರಾಮರಾಜನ ಪಕ್ಷ ವು ಸಮರ್ಥವಾಗಹತ್ತಿತು. ಹೀಗೆ ತನ್ನ ಮನಸ್ಸಿನಂತೆ ಎಲ್ಲ ಅನುಕೂಲತೆಯಾ ದದ್ದನ್ನು ನೋಡಿ, ರಾಮರಾಜನು ಒಂದು ದಿನ ಬಂಡಾಯವನ್ನು ಹೂಡಿ ತಿರು ಮಲರಾಯನನ್ನು ಸೆರೆಹಿಡಿದು, ಆತನನ್ನು ಕಾರಾಗೃಹದಲ್ಲಿರಿಸಬೇಕೆಂದು ಮಾ ಡಿದನು? ಆದರೆ ಈ ಸಂಗತಿಯು ಗುಪ್ತವಾಗಿ ಉಳಿಯಲಿಲ್ಲ, ತಿರುಮಲನ ಕಿವಿ ಗೆ ಮುಟ್ಟಿತು. ಆಗ ಆತನು ಗಾಬರಿಯಾಗಿ ಮುಂದುಗಾಣದೆ ಆಲೋಚಿಸಹ ತ್ತಿದನು.

ಹಿಂದಿನಪ್ರಕರಳರಣದಲ್ಲಿ ಹೇಳಿದಂತೆ, ವಿಜಯನಗರವ ರಾಯರನ್ನೇಡು ತೀರಿ ಸಿಕೊಳ್ಳಲಿಕ್ಕೆ ಹೊಂಚು ಹಾಕಿದ್ದ ವಿಜಾಪುರದ ಇಬ್ರಾಹಿಮಆದಿಲ್‌ಷಹನು, ಈ ಗ ತುಂಗಭದ್ರೆಯ ಆಚೆಯಲ್ಲಿದ್ದ ದರ್ಗೆಯಲ್ಲಿ ತನ್ನ ಸೈನ್ಯದ ತಳಊರಿದ್ದನು. ಆತನು ಹೊತ್ತುನೋಡಿ ವಿಜಯನಗರವನ್ನು ಕೈವಶಮಾಡಿಕೊಳ್ಳತಕ್ಕವನಿದ್ದನು ವಿಜಯನಗರದೊಳಗಿನ ಈ ಅಂತಃಕಲಹದ ಸುದ್ದಿಗಳು ಕ್ಷಣಶಃ ಮುಟ್ಟುವಂತೆ

ಆತನು ಗುಪ್ತಚಾರರನ್ನಿಟ್ಟಿದ್ದನು. ಇತ್ತ ಮೊದಲೇ ಗಾಬರಿಯಾಗಿದ್ದ ತಿರುಮಲನಿಗೆ ಹೆಚ್ಚು ಹೆಚ್ಚು ಭಯಂಕರವಾದ ಒಳಸಂಚಿನ ಸುದ್ದಿಗಳು ಮುಟ್ಟಹತ್ತಿದವು. ತನ್ನಮೇಲೆ ಎಲ್ಲರೂ ತಿರುಗಿಬಿದ್ದು ತನ್ನನ್ನೂ, ಅಚ್ಯುತರಾಯನನ್ನೂ ಇನ್ನು ನಲ್ವೈಂಟುದಿನಗಳಲ್ಲಿ ಹಿಡಿದು ಕೊಲ್ಲುವರೆಂಬ ವರ್ತಮಾನವನ್ನು ಸಹ ಆತನು ಕೇಳಿದನು. ತನ್ನ ಪ್ರಾಣರಕ್ಷಣಮಾಡಿಕೊಳ್ಳುವದಕ್ಕಾಗಿ ಬೇಕಾದದ್ದನ್ನು ಮಾಡಲಿಕ್ಕೆ ಆತನು ಸಿದ್ದನಾದನು. ಆಗ ಮಣಿಮಲ್ಲನು ತಿರುಮಲನಿಗೆ ನೀವು ಆದಿಲಷಹನನ್ನು ವಿಜಯನಗರಕ್ಕೆ ಕರೆಸಿಕೊಂಡು, ಆತನ ಸ್ನೇಹವನ್ನು ಸಂಪಾದಿಸಿರಿ; ಅಂದರೆ ಎಲ್ಲ ಅನಿಷ್ಟವು ಹಿಂಗುವದು, ಎಂದು ಹೇಳಿದನು. ಏ ವೇಕಭ್ರಷ್ಟನಾದ ತಿರುಮಲನಿಗೆ ಕ್ಷುದ್ರಮಣಿಮಲ್ಲನ ಈ ಅದೂರದರ್ಶಿತನದಲ್ಲಿ ದೋಷಗಳು ತೋರಲಿಲ್ಲ. ಹೀಗೆ ಮಾಡಿದರೆ, ಮುಂದೆ ಸುಲ್ತಾನನನ್ನು ತಿರುಗಿಕಳಿಸಲಿಕ್ಕೆ ಎಷ್ಟು ಕಠಿಣವಾದೀತೆಂಬದರ ಎಚ್ಚರವು ಆ ತಿಳಿಗೇಡಿಮಂತ್ರಿಗೆ ಹುಟ್ಟಲಿಲ್ಲ. ಕೂಡಲೆ ಆತನು ಸುಲ್ತಾನನ ಕಡೆಗೆ ವಕೀಲನನ್ನು ಕಳಿಸಿದನು. ಆದಿಲಷಹನು ವಕೀಲನ ಮಾತುಗಳನ್ನು ಕೇಳಿ ಪರಮಾನಂದಪಟ್ಟನು. "ರೋಗ ಬಯಸಿದ್ದೂ ಹಾಲೂಟವನ್ನ, ವೈದ್ಯಹೇಳಿದ್ದೂ ಹಾಲೂಟವನ್ನ" ಎಂಬಂತೆ ಆತನಿಗೆ ಬಹಳ ಸಂತೋಷವಾಯಿತು. ಸುಲ್ತಾನನು ತಿರುಮಲನ ಮಾತಿಗೆ ಸಂತೋಷದಿಂದ ಒಪ್ಪಿಕೊಂಡ ಬಳಿಕ, ವಿಜಯನಗರವನ್ನು ಪ್ರವೇಶಿಸುವ ದಿನವನ್ನು ಅವರಿಬ್ಬರು ಗುಪ್ತರೀತಿಯಿಂದ ಗೊತ್ತುಮಾಡಿಕೊಂಡರು. ಇತ್ತ ರಾಮರಾಮರಾಜನೂ ತಿರುಮಲನನ್ನು ಸೆರೆಹಿಡಿಯುವ ದಿನವನ್ನು ಗುಪ್ತರೀತಿಯಿಂದ ಗೊತ್ತುಮಾಡಿದ್ದನು. ತಿರುವಲನು ಬಾದಶಹನೊಡನೆ ನಡೆಸಿದ ಕಾರಸ್ಥಾನದ ಗಂಧವು ಸಹ ರಾಮರಾಜನಿಗೆ ಬಡಿದಿದ್ದಿಲ್ಲ. ರಾಮರಾಜನು ತಿರುಮಲನನ್ನು, ಗೊತ್ತುಮಾಡಿದ ದಿವಸ ಸೆರೆಹಿಡಿಯಬೇಕೆಂದು ಸಂಚುಗಾರರೊಡನೆ ಯೋಚಿಸುತ್ತಿರುವದರೊಳಗೆ, ರಾಮರಾಜನ ಪಕ್ಷದವನೊಬ್ಬನು ತಿರುಮಲನ ಕಡೆಗೆ ಒಡದು, ರಾಮರಾಜನ ಒಳಸಂಚಿನ ದಿವಸವನ್ನು ತಿರುಮಲನಿಗೆ ತಿಳಿಸಿದನು. ಕೂಡಲೆ ತಿರುಮಲನು ಬಾದಶಹನನು ವಿಜಯನಗರಕ್ಕೆ ಕರೆಯಕಳುಹಿದನು. ಅತ್ತ, ಹಾದಿಯನ್ನೇ ನೋಡುತ್ತ ಕುಳಿತಿದ್ದ ಬಾದಶಹನನ್ನು ತಡಮಾಡದೆ ಸೈನ್ಯದೊಡನೆ ಹೊರಟು ತುಂಗಭದ್ರೆಯನ್ನು ದಾಟಿ ವಿಜಯನಗರವನ್ನು ಪ್ರವೇಶಿಸಿದನು. ತಿರುಮಲನೂ, ಅಚ್ಯುತರಾಯನೂ ಆತನನ್ನು ಎದುರುಗೊಂಡು ಕರತಂದು ವಿಜಯನಗರದ ಸಿಂಹಾಸನದ ಮೇಲೆ ಕೂಡ್ರಿಸಿ, ವಿಲಕ್ಷಣರೀತಿಯಿಂದ ಆತನ ಆದರಸತ್ಕಾರವನ್ನು ಮಾಡಿದರು. ಈವರೆಗೆ ಬಾದಶಹನು ವಿಜಯನಗರದ ಅರಸರ ಘನವಾದ ಐಶ್ವರ್ಯವನ್ನು ಜನರ ಮುಖದಿಂದ ಕೇಳುತ್ತ ಬಂದಿದ್ದನು; ಆತನಿಗೆ ಅದರ

ಅದರ ಅನುಭವವಾಗಿದ್ದಿಲ್ಲ. ಈಗ ಆತನು ರಾಯರ ಐಶ್ವರ್ಯವನ್ನು ಕಣ್ಣು ಮುಟ್ಟ ನೋಡಿ ಬೆರಗಾದನು. ಈ ಪ್ರಸಂಗದಲ್ಲಿ ತಿರುಮಲನು ಒಳ್ಳೇ ಸಂಕಟದಲ್ಲಿ ಸಿಕ್ಕಿರುವದರಿಂದ ಆತನು ಹೇಳಿದ ಹಾಗೆ ಕೇಳುವನೆಂದು ತಿಳಿದು, ಸುಲ್ತಾನನು ತಿರುಮಲನಿಗೆ ಬಹು ದೊಡ್ಡ ರಕಮಿನ ಕಪ್ಪವನ್ನು ಕೇಳಿದನು; ಮತ್ತು ಇಂದಿನಿಂದ ವಿಜಯನಗರದ ಅರಸರು ವಿಜಾಪುರದ ಬಾದಶಹರ ಮಾಂಡಲಿಕತ್ವವನ್ನು ಒಪ್ಪಿಕೊಳ್ಳಬೇಕೆಂದು ಹೇಳಿದನು. ಅದಕ್ಕೆಲ್ಲ ತಿರುಮಲನು ಒಪ್ಪಿಕೊಂಡನು.

ವಿಜಾಪುರದ ಬಾದಶಹನು ಅಕಸ್ಮಾತ್ತಾಗಿ ರಾಜಧಾನಿಯನ್ನು ಪ್ರವೇಶಿಸಿದ್ದನ್ನೂ, ತಿರುಮಲನು ಬಾದಶಹನ ಬೇಡಿಕೆಗಳನ್ನೆಲ್ಲ ಪೂರ್ಣಮಾಡಿದ್ದನ್ನೂ ಕೇಳಿ ವಿಜಯನಗರದ ಜನರಿಗೆ ಬಹಳ ವ್ಯಸನವಾಯಿತು; ಆದರೆ ಅವರ ಸೈನ್ಯದ ಸಿದ್ಧತೆ ಯಿದ್ದಿಲ್ಲ, ಮೇಲೆ ಬಾದಶಹನು ತಮ್ಮ ಮನೆಯಲ್ಲಿ ಬಂದು ಕುಳಿತುಕೊಂಡಿದ್ದನು. ಆತನನ್ನು ಹೊರಗೆ ಹಾಕಿದ ಹೊರತು ಯಾವ ಕೆಲಸ ಮಾಡಲಿಕ್ಕೂ ಬರುವಹಾಗಿದ್ದಿಲ್ಲ. ವಿಜಯನಗರದ ಪವಿತ್ರ ಸಿಹ್ಮಾಸನದ ಮೇಲೆ ಕೇವಲ ಸ್ವಾರ್ಥಾಭಿಲಾಷೆಯಿಂದ ತಿರುಮಲನು ಸುಲ್ತಾನನನ್ನು ಕೂಡ್ರಿಸಿದ್ದಕ್ಕಾಗಿ ಜನರು ಸಂತಾಪಗೊಂಡರು. ಘನವಾದ ಯೋಗ್ಯತೆಯ ರಾಯರ ಚರಣಗಳ ಮೇಲೆ ಬಹುಜನ ಮಾಂಡಲಿಕರಾಜರು ಶಿರಸ್ಸುಗಳನ್ನಿಡುತ್ತಿರಲು, ಅಂಥ ರಾಯನು ಈಗ ಮುಸಲ್ಮಾನ ಬಾದಶಹನ ಮುಂದೆ ತಲೆಬಾಗಿಸುವ ಪ್ರಸಂಗ ತಂದದ್ದಕ್ಕಾಗಿ ಪ್ರತಿ ಒಬ್ಬರು ತಿರುಮಲನ ಮೇಲೆ ಹಲ್ಲುಕಡಿಯ ಹತ್ತಿದರು; ಆದರೆ ಮಾಡುತ್ತಾರೇನು? ಬಾದಶಹನನ್ನು ವಿಜಯನಗರದಿಂದ ಹೊರಗೆ ಹಾಕಿದ ಹೊರತು ಏನುಮಾಡಲಿಕ್ಕೂ ಬರುವಹಾಗಿದ್ದಿಲ್ಲ. ತನ್ನ ಒಳಸಂಚು ಸಫಲವಾಗುವದೊತ್ತಟ್ಟಿಗೆ ಉಳಿದು, ಮುಸಲ್ಮಾನ ಬಾದಶಹನು ರಾಜಧಾನಿಯಲ್ಲಿ ಬಂದು ಕುಳಿತವ್ವಕ್ಕಾಗಿ ರಾಮರಾಜನಿಗೆ ಬಹಳ ಸಂತಾಪವಾಯಿತು; ಆದರೆ ಆತನು ಅದನ್ನೆಲ್ಲ ನುಂಗಿಕೊಂಡನು. ತಿರುಮಲನನ್ನು ಮೋಸಗೊಳಿಸಿ, ಅವನ ಮುಖಾಂತರ ಬಾದಶಹನನ್ನು ರಾಜಧಾನಿಯ ಹೊರಗೆ ಕಳಸಬೇಕೆಂದು ಆತನು ಯೋಚಿಸಿದನು. ಆಗ ರಾಮರಾಜನು ಪ್ರಮುಖರೊಡನೆ ತಿರುಮಲನ ಬಳಿಗೆ ಹೋಗಿ, ವಿನಯದಿಂದ ಆತನನ್ನು ಕುರಿತು—"ನೀವು ನಮಗೆ ಸರ್ವಥಾ ವಂದ್ಯರು. ನಿಮ್ಮ ವಿಷಯವಾಗಿ ನಮ್ಮ ಮನಸ್ಸಿನಲ್ಲಿ ಸ್ವಲ್ಪವಾದರೂ ಸಂಶಯವಿಲ್ಲ; ಈದರೆ ಈಗಿನ ಪ್ರಸಂಗವಲ್ಲಿ ನೀವು ವಿಜಯನಗರದ ಮೇಲೆ ಬಹು ದೊಡ್ಡ ಸಂಕಟವನ್ನು ತಂದಿರುವಿರಿ. ಬಾದಶಹನನ್ನು ಕರತಂದು ಸತ್ಕರಿಸಿದ್ದೆಲ್ಲ ಸರಿಯೆ; ಆದರೆ ಇದರ ಪರಿಣಾಮವು ನೆಟ್ಟಗಾದೀತೆಂದು ತೋರುವದಿಲ್ಲ. ವೈರಿಯನ್ನು

ಮನೆಯೊಳಗೆ ಕರಕೊಳ್ಳುವದು ಸುಲಭವು; ಆದರೆ ಆತನನ್ನು ಹೊರಗೆ ಹಾಕುವದು ಕಠಿಣವಷ್ಟೇ ಅಲ್ಲ, ಅಶಕ್ಯವೆಂತಲೂ ಹೇಳಬಹುದು. ನಮ್ಮ ಹಿಂದುಗಳ ರಾಜ್ಯವನ್ನು ನುಂಗಬೇಕೆಂದು ಜಪ್ಪುಹಾಕಿಕೊಂಡು ಮುಸಲ್ಮಾನ ಬಾದಶಹರು ಬಹುದಿವಸದಿಂದ ಕುಳಿತಿರುವರೆಂಬದು ನಿಮಗೆ ಗೊತ್ತಿಲ್ಲವೆ? ಹೀಗಿದ್ದು ನೀವು ಈಗ ಅನಾಯಾಸವಾಗಿ ಅವರ ಕಾರ್ಯಕ್ಕೆ ಅನುಕೂಲಮಾಡಿಕೊಟ್ಟಿರಿ ಏನಲ್ಲ? ಇದಕ್ಕೆ ಏನನ್ನಜೇಕು? ನೀವು ಸ್ವಾಭಾವಿಕವಾಗಿ ಈ ಕಾರ್ಯಮಾಡಿದಿರಿ; ಆದರೆ ಪರಿಣಾಮವು ಬಹು ಭಯಂಕರವಾಗುವಹಾಗೆ ತೋರುತ್ತದೆ. ನೀವು ಬಾ, ಅಂದಕೂಡಲೆ ಬಾದಶಹನು ಬಂದಂತೆ, ನೀವು ಹೋಗೆಂದಕೂಡಲೆ ಆತನು ಈಗ ಹೋಗಲಾರನು. ನೀವು ಹ್ಯಾಗಾದರೂ ಮಾಡಿ ಆತನನ್ನು ತಿರುಗಿ ಕಳಿಸಿ ಕೊಡಿರಿ. ನಾವೆಲ್ಲರು ಜೇಕಾದ ಆಣೆ ಮಾಡಿ ಹೇಳೆಂದರೂ ಹೇಳುತ್ತೇವೆ, ನಿಮ್ಮ ಮಾತನ್ನು ನಾವು ಸರ್ವಥಾ ಮೀರುವದಿಲ್ಲ. ನೀವು ಹೇಳಿದಹಾಗೆ ಕೇಳುತ್ತೇವೆ. ಆದರೆ ವಿಜಯನಗರದ ಮೇಲೆ ಬಂದಿರುವ ಈ ಕಠಿಣ ಪ್ರಸಂಗವನ್ನು ದೂರಮಾಡಿರಿ" ಎಂದು ಹೇಳಿಕೊಂಡು, ತಿರುಮಲನಿಗೆ ಮಿತಿಮೀರಿ ದೊಡ್ಡಿಸ್ತನವನ್ನು ಕೊಟ್ಟನು. ಮೂರ್ಖನಾದ ತಿರುಮಲನು ಜನರ ಈ ದೊಡ್ಡಿಸ್ತನಕ್ಕೆ ಸುರುಳಾದನು. ತಾನು ಹೋಗೆಂದರೆ ಬಾದಶಹನು ಹೋಗುವದಿಲ್ಲೆಂದು ರಾಮರಾಜನು ಆಡಿಪ್ಪಕ್ಕಾಗಿ ತಿರುಮಲನಿಗೆ ಬಹಳ ಸಿಟ್ಟುಬಂದಿತು. ಅಚ್ಯುತರಾಯನು ತನ್ನ ಕೈಯೊಳಗಿರುವಂತೆ, ಅದಿಲಶಹನೂ, ತನ್ನ ಕೈಯೊಳಗಿರುವನೆಂದು ಆ ತಿಳಿಗೇಡಿ ತಿರುಮಲನು ತಿಳಕೊಂಡಿದ್ದನು. ಜನರು ಸುಮ್ಮನಾದಮೇಲೆ ಆತನು ಅವರನ್ನು ಕುರಿತು ಆಢ್ಯತೆಯಿಂದ—"ನಿಮಗೆ ರಾಜಕಾರಣದ ಸಂಗತಿಗಳು ಏನೂ ತಿಳಿಯುವದಿಲ್ಲ. ನೀವು ನನ್ನ ವಿರುದ್ಧವಾಗಿ ಒಳಸಂಚು ನಡಿಸಿದ್ದಕ್ಕಾಗಿ ಈಗ ನಾನು ಬಾದಶಹನನ್ನು ಕರೆಸಿರುವದಿಲ್ಲ. ನಾಲ್ಕೈದು ಜನ ಮುಸಲ್ಮಾನ ಬಾದಶಹರು ನಮ್ಮ ರಾಜ್ಯವನ್ನು ನುಂಗಲಿಕ್ಕೆ ಹೊಂಚುಹಾಕಿ ಕುಳಿತುಕೊಂಡಿರುವದರಿಂದ, ಅವರೊಳಗಿನ ಒಬ್ಬ ದೊಡ್ಡ ಬಾದಶಹನನ್ನು ನಮ್ಮ ಕಡೆಗೆ ಮಾಡಿ ಇಟ್ಟುಕೊಂಡಿರುವದು ನೆಟ್ಟಗೆಂದು ತಿಳಿದು, ಬಾದಶಹನನ್ನು ಕರೆಸಿಸ್ಪೇನೆ. ನಿಮ್ಮ ಒಳಸಂಚನ್ನು ಮುರಿಯುವ ಸಾಮರ್ಥ್ಯವು ನನ್ನಲ್ಲಿಲ್ಲೆಂದು ತಿಳಿಯಜೇಡಿರಿ. ನಿಮ್ಮನ್ನು ಸಾಲಗಿಡಕ್ಕೆ ತೂಗಹಾಕಿಸಿ ಕೊಲ್ಲಿಸುತ್ತಿದ್ದೆನು, ಇಲ್ಲವೆ ನೆಲದಲ್ಲಿ ಹುಗಿಸುತ್ತಿದ್ದೆನು. ವಿಜಯನಗರದ ರಾಜ್ಯದ ಅಭಿಮಾನವು ನಿಮಗೇ ಇರುವದಿಲ್ಲ, ಆ ರಾಜ್ಯದ ವಿಷಯವಾಗಿ ನಿಮಗಿಂತ ಹೆಚ್ಚು ಅಭಿಮಾನವು ನನಗಿರುತ್ತದೆ. ನಿಮ್ಮ ಸಂಚಿನ ಸಂಗತಿಗಳೆಲ್ಲ ನನಗೆ ಗೊತ್ತಾಗಿರುವವು; ಆದರೆ ಮನೆಹೊಲಸು ತೆಗೆಯಲಿಕ್ಕೆ ಇದು ಸಮಯವಲ್ಲ. ಮೊದಲು

ಹೊರಗಿನ ವೈರಿಗಳ ಸಮಾಚಾರವನ್ನು ತಕ್ಕೊಳ್ಳಬೇಕಾಗಿದೆ. ಈ ಮಾತು ನಿಮಗೆ ಹ್ಯಾಗೆ ತಿಳಿಯಬೇಕು ? ಹೋಗಿರಿ, ನಿಮ್ಮ ಮೇಲೆ ನನ್ನ ನಿಟ್ಟೂ ಇಲ್ಲ, ಲೋಭವೂ ಇಲ್ಲ. ನೀವು ನನ್ನ ಕಾಲು ಬೀಳಲಿಕ್ಕೆ ಬಂದದ್ದೇ ಸಾಕಾಯಿತು. ಇನ್ನು ನಿಮ್ಮನ್ನು ಯಾತಕ್ಕೆ ಕೊಲ್ಲಬೇಕು ? ನೀವು ಮೊದಲೇ ಸತ್ತಿರುತ್ತೀರಿ. ಇನ್ನು ನಾನು ನಿಮಗೆ ಹೆಚ್ಚಿಗೆ ಹೇಳುವದಿಲ್ಲ. ಸುಮ್ಮನೆ ಇಲ್ಲದ ಚಿಂತೆಯಿಂದ ಕೊರಗಬೇಡಿರಿ. ನೋಡಿರಿ, ಇನ್ನು ಬಾದಶಹನನ್ನು ಹಾ ಹಾ ಅನ್ನುವದರೊಳಗೆ ಹ್ಯಾಗೆ ಹೊರಗೆ ಜಾಕುತ್ತೇನೆಂಬದನ್ನು !"

ತಿರುಮಲನ ಈ ಮಾತುಗಳನ್ನು ಕೇಳಿ ಜನರು ಚಕಿತರಾದರು. ರಾಮರಾಜನಿಗೆ ಇನ್ನು ಏನು ಮಾತಾಡಬೇಕೆಂಬದು ತಿಳಿಯದೆ ಹೋಯಿತು. ಆತನು ತಿರುಗಿ ಬಹಳ ಮಾತಾಡಲಿಲ್ಲ; ಆದರೆ ಆತನಿಗೆ ತಿರುಮಲನ ಒಂದು ಮಾತೂ ನಿಜವೆಂದು ತೋರಲಿಲ್ಲ. ತನ್ನ ಸ್ನೇಹಿತರು ತಿರುಮಲನ ಮಾತಿನಿಂದ ಮೋಸ ಹೋಗುವ್ದರಿ, ಅವರನ್ನು ಎಚ್ಚರಗೊಳಿಸಬೇಕೆಂದು ಆತನು ನಿರ್ಣಯಿಸಿದನು. ಆತನು ತಿರುಮಲನ ಮಾತಿಗೆ ಹೆದರಿ, ಅಥವಾ ಮರುಳಾಗಿ ಸುಮ್ಮನೆ ಕುಳಿತು ಕೊಳ್ಳಲಿಲ್ಲ. ತಿರುಮಲನ ಕಿವಿಗೆ, ಆತನ ಎದೆಯೊಡೆದು ನೀರಾಗುವಂಥ ಸುದ್ದಿಗಳು ಮುಟ್ಟುವಂತೆ ಏನು ವ್ಯವಸ್ಥೆ ಮಾಡಬೇಕೆಂಬದು ಆತನು ಯೋಚಿಸುತ್ತಲಿದ್ದನು. ಮುಂದೆ ಬಾದಶಹನ ಒಳಸಂಚಿನ ಭಯಂಕರ ಸುದ್ದಿಗಳು ತಿರುಮಲನ ಕಿವಿಗೆ ಮುಟ್ಟುವಂತೆ ರಾಮರಾಜನು ಮಾಡಿದನು. ಒಂದು ದಿನ, ಬಾದಶಹನು ವಿಜಯನಗರದಲ್ಲಿಯೇ ಕಾಲು ಊರಿ ನಿಲ್ಲುವ ಹವಣಿಕೆಯಲ್ಲಿರುತ್ತಾನೆಂಬ ಸುದ್ದಿಯು ತಿರುಮಲನಿಗೆ ಹತ್ತಿತು. ಅದನ್ನು ಕೇಳಿ ತಿರುಮಲನು—ಇನ್ನು ಮೇಲೆ ಬಾದಶಹನು ಪಟ್ಟಣಬಿಟ್ಟು ಹೋಗದಿದ್ದರೆ ಪರಿಣಾಮವಾಗಲಿಕ್ಕಿಲ್ಲ. ತಾನು ಒಪ್ಪಿಕೊಂಡಂತೆ ರಾಯರು ಬಾದಶಹನ ಮಾಂಡಲಿಕರಾಗುವದೊತ್ತಟ್ಟಿಗುಳಿದು, ನಮ್ಮ ಇಡಿಯ ರಾಜ್ಯವೇ ನಷ್ಟವಾದೀತೆಂಬ ಭಯವು ಆತನನ್ನು ಬಾಧಿಸ ಹತ್ತಿತು. ಅಷ್ಟರಲ್ಲಿ ಬಾದಶಹನು ತಿರುಮಲರಾಯನನ್ನು ಶರಣುಹಿಡಿದು ತೋಫಿನಬಾಯಿಗೆ ಕೊಡಬೇಕೆಂದು ಮಾಡಿರುತ್ತಾನೆಂಬ ಸುದ್ದಿಯು ಹತ್ತಿತು. ಮತ್ತೊಂದುದಿನ, ಬಾದಶಹನು ವಿಜಾಪುರದಿಂದ ಹೊಸದಂಡು ತರಿಸಿ ವಿಜಯನಗರವನ್ನು ಒಮ್ಮೆಲೆ ಸುಲಿದು ಸುಟ್ಟು ಸೂರೆಮಾಡಿ, ಹೆಂಗಸರನ್ನು ಸೆರೆಹಿಡಕೊಂಡು ಹೋಗಬೇಕೆಂತಲೂ, ದೇವಾಲಯಗಳನ್ನು ನಾಶಮಾಡಬೇಕೆಂತಲೂ, ಮಾಡಿರುತ್ತಾನೆಂಬ ಸುದ್ದಿಯನ್ನು ತಿರುಮಲನು ಕೇಳಿದನು. ಈ ಸುದ್ದಿಗಳೆಲ್ಲ ಹುಟ್ಟಲಿಕ್ಕೆ ರಾಮರಾಜನೇ ಕಾರಣನೆಂದು ವಾಚಕರು ಅರಿತಿರಬಹುದು. ಒಂದ

ರಹಿಂದೊಂದರಂತೆ ನಿಂಥ ಸುದ್ದಿಗಳನ್ನು ಕೇಳಿದ ತಿರುಮಲನ ಎದೆಯೊಡೆದು ನೀರಾಯಿತು. ಹಾ ಹಾ ಅನ್ನುವದರೊಳಗೆ ಬಾದಶಹನನ್ನು ಕಳಿಸುವೆನೆಂದೆ. ಡಾಲುಬಡೆದಿದ್ದ ಆತನಿಗೆ, ತಿರುಗಿ ಹೋಗೆಂದು ಬಾದಶಹನಿಗೆ ಹ್ಯಾಗೆ ಹೇಳ ಬೇಕೆಂಬದೇ ಈಗ ತಿಳಿಯದಾಯಿತು.

ಇತ್ತ ಅದಿಲಶಹನು ವಿಜಯನಗರದ ಐಶ್ವರ್ಯವನ್ನೂ, ರಾಯರಿಂದ ತನಗಾದ ಸತ್ಕಾರವನ್ನೂ ನೋಡಿ, ಆಶ್ಚರುಕುತನದಿಂದ ವಿಜಯನಗರವನ್ನು ಬಿಟ್ಟು ಹೋಗದಾದನು. ತಾನು ಹೇಳಿದಂತೆ ತಿರುಮಲರಾಯನು ಕೇಳಿದ್ದನ್ನು ನೋಡಿ, ಬಾದಶಹನ ಬಾಯಲ್ಲಿ ನಿಜವಾಗಿ ನೀರು ಒಡೆದವು. ಕೆಲವು ದಿನಗಳವರೆಗಾದರೂ ವಿಜಯನಗರದಲ್ಲಿ ಇರಬೇಕೆಂದು ಆತನು ನಿಶ್ಚಯಿಸಿದನು; ಆದರೆ ಅತ್ತ ಧೂರ್ತನಾದ ರಾಮರಾಜನು ಬಾದಶಹನಿಗೂ ಉಚ್ಚಾಟನೆಯನ್ನು ಕೊಡದೆಯಿರಲಿಲ್ಲ. ತಿರುಮಲನು ತನ್ನನ್ನು ಕರೆತಂದು ಬಹುಮಾನಮಾಡಿದ್ದು, ತನ್ನನ್ನು ನಾಶಗೊಳಿಸುವದಕ್ಕಾಗಿಯೇ ಎಂಬ ಸಂಶಯವು ಬಾದಶಹನಿಗೆ ಉತ್ಪನ್ನವಾಗುವಂತೆ ರಾಮರಾಜನು ಯುಕ್ತಿಯನ್ನು ಮಾಡಿದನು. ತಿರುಮಲನು ದಕ್ಷಿಣದ ನಿಟ್ಟಿನ ತನ್ನ ಸೈನ್ಯವನ್ನು ಮೆಲ್ಲಮೆಲ್ಲನೆ ಬರಮಾಡಿಕೊಳ್ಳುತ್ತಿದ್ದು, ಅದು ಬಂದಕೂಡಲೆ ತುಂಗಭದ್ರೆಯತ್ತಣ ಹಾದಿಯನ್ನು ಕಟ್ಟಿ, ತನ್ನ ನಾಶಮಾಡುವನೆಂಬ ಸಂಗತಿಯು ಬಾದಶಹನ ಕಿವಿಗೆ ಬಿದ್ದಿತು. ಈ ಮಾತಿನ ನಂಬಿಗೆಯು ಬಾದಶಹನಿಗೆ ಆಗಬೇಕೆಂದು ರಾಮರಾಜನು ಒಂದು ಯುಕ್ತಿಯನ್ನು ಮಾಡಿದನು. ಒಂದುದಿವಸ ತಿರುಮಲನು ಬಾದಶಹನ ಭೆಟ್ಟಿಗೆ ಹೋದಾಗ, ತಿರುಮಲನ ನಂಬಿಗೆಯ ಸೇವಕನ ಮುಖಾಂತರ ಒಂದು ಪತ್ರವು ಬಾದಶಹನ ಸೇವಕರ ಕೈಗೆ ಸಿಗುವಂತೆ ರಾಮರಾಜನು ಕಪಟವನ್ನು ರಚಿಸಿದನು. ರಾಮರಾಜನ ಯುಕ್ತಿಯು ಸಫಲವಾಗಿ, ತಿರುಮಲನು ಹೋದ ಬಳಿಕ ಬಾದಶಹನ ಸೇವಕರು ಆ ಪತ್ರವನ್ನು ಬಾದಶಹನ ಕೈಯ್ಯಲ್ಲಿ ಕೊಟ್ಟರು. ಪತ್ರವು ಕನ್ನಡಿಯಲ್ಲಿ ಸಂಕ್ಷಿಪ್ತವಾಗಿ ಸಂದಿಗ್ಧರೀತಿಯಿಂದ ಬರೆಯಲ್ಪಟ್ಟಿತ್ತು. ದಕ್ಷಿಣದ ಒಬ್ಬ ದೊಡ್ಡ ಕಿಲ್ಲೇದಾರನು ಬರೆದಂತೆ ಅದು ಬರೆದಿದ್ದು, ಆ ಪತ್ರದಲ್ಲಿ—"ನೀವು ಆಜ್ಞಾಪಿಸಿದಂತೆ ಸೈನ್ಯವನ್ನು ಕಳಿಸಿಕೊಟ್ಟಿರುತ್ತೇನೆ. ಸಾಮಗ್ರಿಯು ಪರಿಪೂರ್ಣವಾಗಿರುತ್ತದೆ. ನಿಮ್ಮ ಇಚ್ಛೆಯು ಪೂರ್ಣವಾದತೆ, ಹಾದಿಯೊಳಗಿನದೊಂದು ದೊಡ್ಡ ಮುಳ್ಳನ್ನು ಕಿತ್ತುಚಲ್ಲಿದ ಹಾಗಾಗುತ್ತದೆ," ಎಂದು ಬರೆದಿತ್ತು. ಈ ಪತ್ರದ ಸಂಗತಿಯನ್ನು ಕೇಳಿದ ಕೂಡಲೆ ಬಾದಶಹನು ಸಂತಪ್ತನಾಗಿ, ಈಗಲೇ ತಿರುಮಲನನ್ನು ಕರೆಸಿ ಈ

ಪತ್ರದ ಅರ್ಥವೇನೆಂದು ಕೇಳಿ, ಅವನ ತಲೆಹಾರಿಸಬೇಕೆಂದು ಮಾಡಿದನು; ಆದರೆ ಆತನ ಮಂತ್ರಿಯಾದ ಅಸದಖಾನನು—"ಹೀಗೆ ಅವಸರ ಮಾಡುವದು ಸರಿಯಲ್ಲ, ಸ್ವಲ್ಪ ಸಮಾಧಾನ ತಾಳಬೇಕು. ಇಲ್ಲದ್ದಿರೆ ಸಂಕಟಕ್ಕೆ ಗುರಿಯಾಗಿ ಸೇಚಾಡಬೇಕಾದೀತು. ತಿರುಮಲನು ಈಗಲೇ ತುಂಗಭದ್ರೆಯ ಕಡೆಯ ಮಾರ್ಗವನ್ನು ಕಟ್ಟಿ ನಮ್ಮನ್ನು ನಾಶಮಾಡಿದರೆ ಏನು ಮಾಡಬೇಕು? ಆದ್ದರಿಂದ ಈಗ ದೊರೆತದ್ದರಲ್ಲಿ ಸಂತುಷ್ಟರಾಗಿ ನಾವು ಮೊದಲು ತುಂಗಭದ್ರೆಯನ್ನು ದಾಟಿ ಹೋಗೋಣ. ಒಂದು ಸೈನ್ಯದ ಭಾಗವು ಮಾತ್ರ ತುಂಗಭದ್ರೆಯ ಈಚೆಯ ಕಡೆಗೆ ಇರಲಿ, ಎಂದು ಹೇಳಿದನು.

ಬೀಗೆ ಆಲೋಚನೆಗಳು ನಡೆದಿರುವಾಗ ಮತ್ತೊಂದು ಚಮತ್ಕಾರದ ಸಂಗತಿಯು ಒದಗಿತು. ಬಾದಶಹನು ಒಂದು ದಿನ ಮುಂಜಾನೆ ಒಂದು ಸವಾರರ ಟೋಳಿಯನ್ನು ತುಂಗಭದ್ರೆಯ ಆಚೆಗೆ ಹೋಗಲಿಕ್ಕೆ ಕಳಿಸಿರಲು, ತುಂಗಭದ್ರೆಯ ಕಾವಲುಗಾರರು "ತಿರುಮಲರಾಯರು ಪ್ರತಿಬಂಧಿಸಲಿಕ್ಕೆ ಹೇಳಿದ್ದಾರೆ"ಂದು ಆ ಸವಾರನನ್ನು ಮುಂದಕ್ಕೆ ಹೋಗಗೊಡಲಿಲ್ಲ. ಈ ವರ್ತಮಾನವನ್ನು ಆ ಟೋಳಿಯ ಮುಖ್ಯಸ್ಥನು ಬಾದಶಹನ ಮುಂದೆ ಹೇಳಲು, ಆತನು ಗಾಬರಿಯಾದನು. ತಿರುಮಲನು ಮಹಾಕಪಟಿಯಿದ್ದು, ನಮ್ಮ ನಾಶಮಾಡಲಿಕ್ಕೆ ಹಿಂದುಮುಂದು ನೋಡುವವನಲ್ಲವಾದ್ದರಿಂದ, ನಾವು ಇನ್ನು ಜೇಗನೆ ವಿಜಯನಗರವನ್ನು ಬಿಡಬೇಕೆಂದು ಮಂತ್ರಿಯೊಡನೆ ಬಾದಶಹನು ಆಲೋಚಿಸಿದನು. ತಿರುಮಲನ ವಿಷಯವಾಗಿ ಸಂಶಯ ಬಂದಂತೆ ಈಗ ತಾನು ತೋರಿಸಿದರೆ, ಈಗೇ ಅನರ್ಥವಾದೀತೆಂದು ತಿಳಿದು, ಬಾದಶಹನು ತನ್ನ ಸಂಶಯವನ್ನು ಹೊರಗೆ ತೋರಗೊಡದೆ, ತಿರುಮಲನ ಸಮ್ಮತಿಯಿಂದ ತುಂಗಭದ್ರೆಯನ್ನು ದಾಟಲಿಕ್ಕೆ ಆತುರನಾದನು. ಹೀಗೆ ಚಾಣಾಕ್ಷನಾದ ರಾಮರಾಜನು ಬಾದಶಹನ ವಿಷಯವಾಗಿ ತಿರುಮಲ್ಲನಲ್ಲಿಯೂ, ತಿರುಮಲ್ಲನ ವಿಷಯವಾಗಿ ಬಾದಶಹನಲ್ಲಿಯೂ, ಸಂಶಯವು ಉತ್ಪನ್ನವಾಗುವಂತೆ ಮಾಡಿದನು. ಬಾದಶಹನು ಒಂದು ದಿನ ತಿರುಮಲ್ಲನನ್ನು ಕರಿಸಿ, ನಾನು ಇನ್ನು ವಿಜಾಪುರಕ್ಕೆ ಹೋಗುವೆನೆಂದು ಹೇಳಲು, ತಿರುಮಲ್ಲನು ಮನಸ್ಸಿನಲ್ಲಿ ಸಂತೋಷಪಟ್ಟರೂ ಲೋಕರೀತಿಯಂತೆ ಬಾದಶಹನಿಗೆ—"ಇಷ್ಟು ಅವಸರವೇಕೆ? ಇನ್ನು ನಾಲ್ಕು ದಿನ ಇದ್ದು ಹೋಗಬೇಕು," ಎಂದು ಹೇಳಿದನು. ಆಗ ಬಾದಶಹನು ಮತ್ತಿಷ್ಟು ಸಂಶಯಪಟ್ಟು ಮನಸ್ಸಿನಲ್ಲಿ—ಈ ಠಕ್ಕನ ಸಿದ್ಧತೆಯು ಇನ್ನೂ ಪೂರ್ಣವಾದಂತೆ ತೋರುವದಿಲ್ಲ! ಆದ್ದರಿಂದಲೇ ಇನ್ನು ನಾಲ್ಕು ದಿನ ಇರೆಂದು ನನಗೆ ಹೇಳುತ್ತಾನೆ; ಆದರೆ ಈತನಿಂದ ಕಪ್ಪಗಾಣಿಕೆಯ ರಕಮನ್ನು ಇಸಕೊಂಡು, ಮಾಂಡಲಿಕತ್ವವನ್ನು ಒಪ್ಪಿಕೊಂಡ

ಪತ್ರದ ಮೇಲೆ ಈತನ ಸಹಿಮಾಡಿಸಿಕೊಂಡು ಬೇಗನೆ ವಿಜಯನಗರವನ್ನು ಬಿಡಬೇಕು, ಎಂದು ಯೋಚಿಸಿ ಕಪ್ಪದ ಹಣವನ್ನು ಬೇಗನೆ ಕೊಡಲಿಕ್ಕೂ, ಕರಾರ ಪತ್ರದಮೇಲೆ ಬೇಗನೆ ಸಹಿಮಾಡಲಿಕ್ಕೂ ತಿರುಮಲನಿಗೆ ಆಗ್ರಹಮಾಡಹತ್ತಿದನು. ಆಗ ತಿರುಮಲನು—"ನಾನು ಬೇಗನೆ ಕಪ್ಪದ ಹಣವನ್ನು ಕೊಡದಿದ್ದರೆ, ಅವನ್ನೇ ನೆವಮಾಡಿ ಈತನು ಏನಾದರೂ ಅನರ್ಥಮಾಡಿಯಾನೆಂದು ತಿಳಿದು, ಕಪ್ಪದ ಎರಡು ಕೋಟಿ ರೂಪಾಯಿಗಳನ್ನೂ, ಬೇರೆ ನಜರಾಣೆಗಳನ್ನೂ ಕೊಟ್ಟು, ಕರಾರ ಪತ್ರಿಕೆಯ ಮೇಲೆ ಸಹಿಮಾಡಿದನು. ಆ ಪತ್ರದಲ್ಲಿ ವಿಜಯನಗರದ ಅರಸರು ವಿಜಾಪುರದ ಬಾದಶಹನ ಮಾಂಡಲಿಕರೆಂದು ಸ್ಪಷ್ಟವಾಗಿ ಒಪ್ಪಿಕೊಂಡಿತ್ತು. ಬಾದಶಹನು ತನ್ನ ಕೆಲಸವಾದ ಮೇಲೆ ಮತ್ತೆ ತಿರುಮಲನಿಗೆ—"ನಮ್ಮ ದರ್ಬೆಯು ಇನ್ನು ನಮ್ಮ ಸ್ವಾಧೀನದಲ್ಲಿರಬೇಕು, ನಮ್ಮ ವಕೀಲನೊಬ್ಬನು ನಿಮ್ಮ ರಾಜಧಾನಿಯಲ್ಲಿರುವನು. ಆತನಿಗೆ ದರ್ಬೆಗೆ ಸಮೀಪವಾಗಿರುವ ಕುಂಜವನವನ್ನು ಇರಲಿಕ್ಕೆ ಕೊಡಬೇಕು, ಎಂದು ಹೇಳಿದನು. ಅದಕ್ಕೂ ತಿರುಮಲನು ಒಪ್ಪಿಕೊಂಡನು. ಆತನಿಗೆ ಬಾದಶಹನು ಬೇಗನೆ ರಾಜಧಾನಿಯನ್ನು ಬಿಟ್ಟುಹೋದರೆ ಸಾಕಾಗಿತ್ತು. ಈ ಮೇರೆಗೆ ತನ್ನ ಮನೋದಯಗಳೆಲ್ಲ ಪೂರ್ಣವಾದಂತೆಯಾದ್ದರಿಂದ ಬಾದಶಹನು ತಾನು ಇಂದೇ ತುಂಗಭದ್ರೆಯನ್ನು ದಾಟಿಹೋಗಿ ತಿರುಮಲನ ಕಪಟದ ಕೃತ್ಯಗಳಿಗಾಗಿ ಅವನ ಪ್ರಾಯಶ್ಚಿತ್ತ ಮಾಡಬೇಕೆಂದು ಯೋಚಿಸಿ, ವಿಜಯನಗರವನ್ನು ಬಿಟ್ಟುಹೋದನು.

ಬಾದಶಹನು ರಾಜಧಾನಿಯನ್ನು ಬಿಟ್ಟುಹೋದದ್ದರಿಂದ ತಿರುಮಲನಿಗೂ, ರಾಮರಾಜನಿಗೂ ಕೂಡಿಯೇ ಸಂತೋಷವಾಯಿತು. ಬಾದಶಹನು ಹೋದದ್ದರಿಂದ ರಾಮರಾಜನಿಗೆ ತನ್ನ ಒಳಸಂಚಿನ ಕಾರ್ಯವನ್ನು ನಡಿಸಲಿಕ್ಕೆ ಒಂದು ದಿವಸದ ಅವಕಾಶವು ಸಹ ಬೇಕಾಗಿದ್ದಿಲ್ಲ. ಅದರಂತೆ ಆತನ ಸಿದ್ಧತೆಯೂ ಆಗಿತ್ತು. ಯಾವತ್ತು ಸೈನಿಕರನ್ನು ಒಡಕೊಂಡದ್ದರಿಂದ ರಾಮರಾಜನು ಏಕಸ್ಮಾತ್ತಾಗಿ ತಿರುಮಲನ ಮನೆಯನ್ನು ಮುತ್ತಿದನು. ಮೊದಲೇ ಅಂಜುಬುರುಕನಾದ ತಿರುಮಲನಿಗೆ ಈ ಅಕಸ್ಮಿಕ ಪ್ರಸಂಗದಿಂದ ಹುಚ್ಚೇ ಹಿಡಿಯಿತೆಂದು ಹೇಳಬಹುದು. ರಾಮರಾಜನು ತಿರುಮಲನನ್ನು ಸೆರೆಹಿಡಿಯಬೇಕೆಂದು ಮಾತ್ರ ಮಾಡಿದ್ದನು. ಆದರೆ ತಿರುಮಲನು ಇನ್ನು ಮೇಲೆ ತನ್ನ ಜೀವವು ಉಳಿಯದೆಂದು ನಿಶ್ಚಯಿಸಿದನು. ತನ್ನ ಮಿತ್ರನಾದ ಅದಿಲಷಹನಿಗೆ ಸುದ್ದಿಯನ್ನು ಕಳಿಸಲಿಕ್ಕೂ ಆತನಿಗೆ ಮಾರ್ಗವಿಲ್ಲದೆ ಹೋಯಿತು. ತಾನು ಬಾದಶಹನನ್ನು ಕರಿಸಿ ಮಿತಿಮೀರಿ ಕಪ್ಪ ಕೊಟ್ಟದ್ದೂ, ಆತನ ಮಾಂಡಲಿಕತ್ವವನ್ನು ಒಪ್ಪಿಕೊಂಡದ್ದೂ, ಅಪರಾಧ

ವಾಯಿತೆಂದು ಆತನು ಈಗ ಪಶ್ಚಾತ್ತಾಪಪಡಹತ್ತಿದನು. ಇನ್ನು ಮೇಲೆ ತಾನು ಎಷ್ಟು ಪಶ್ಚಾತ್ತಾಪಪಟ್ಟು, ಎಷ್ಟು ಬೇಡಿಕೊಂಡರೂ ಜನರು ತನ್ನನ್ನು ದೇಶ ದ್ರೋಹಿಯೆಂದು ತಿರಸ್ಕರಿಸಿ ತನ್ನ ಪ್ರಾಣಹರಣ ಮಾಡುವರಲ್ಲದೆ, ತನ್ನನ್ನು ಕ್ಷಮಿಸರೆಂದು ಆತನು ತಿಳಿದುಕೊಂಡನು. ಈ ವಿಚಾರಗಳಿಂದ ಆತನಿಗೆ ಹುಚ್ಚೇ ಹಿಡಿದಂತಾಯಿತು. ಆತನು ಅರಮನೆಯ ಗಜಶಾಲೆಯೊಳಗಿನ ಆನೆಗಳನ್ನೆಲ್ಲ ತರಿಸಿ ಅವುಗಳ ಬಾಲಗಳನ್ನು ಕಿತ್ತಿಸಿ, ಕಣ್ಣುಗಳನ್ನು ಕಳೆದು ತನ್ನ ವೈರಿಗಳ ನಾಶಮಾಡುವದಕ್ಕಾಗಿ ಅವನ್ನು ಹೊರಗೆ ಬಿಟ್ಟಿನು. ತಾನು ಈಗ ಎರಡು ವರ್ಷಗಳಿಂದ ತನ್ನ ಮನೆಯಲ್ಲಿ ತುಂಬಿಕೊಂಡಿದ್ದ ಒಹು ಬೆಲೆಯುಳ್ಳ ಮುತ್ತು ರತ್ನಗಳ ಆಭರಣಗಳನ್ನು ತರಿಸಿ, ಅವುಗಳೊಳಗಿನ ಮುತ್ತು ರತ್ನಗಳನ್ನು ಒಡೆದು ಚೂರು ಚೂರು ಮಾಡಿದನು. ಈ ಶ್ರೇಷ್ಠವಾದ ಅಲಂಕಾರಗಳನ್ನು ವಿಜಯನಗರದ ಪರಾಕ್ರಮಶಾಲಿಗಳಾದ ಎಷ್ಟೋ ಅರಸರು ಹಲವು ರಾಜ್ಯಗಳನ್ನು ಮಣ್ಣುಗೂಡಿಸಿ ಸಂಪಾದಿಸಿದ್ದರು. ಅಂಥವನ್ನು ಈ ದುಷ್ಟ ತಿರುಮಲನು ಕೆಲವು ತಾಸುಗಳಲ್ಲಿ ನಾಶಮಾಡಿಬಿಟ್ಟನು! ಆಮೇಲೆ ಆತನು ಕಂಬಕ್ಕೆ ಕತ್ತಿಯನ್ನು ಕಟ್ಟಿ ಅದರಮೇಲೆ ಕಸುವಿನಿಂದ ಬಿದ್ದು ಆತ್ಮಹತ್ಯೆಮಾಡಿಕೊಂಡನು. ಪ್ರಿಯವಾಚಕರೇ, ಕನ್ನಡಿಗರ ಅಭಿಮಾನಾಸ್ಪದವಾದ ಈ ಪ್ರಬಲ ರಾಜ್ಯದ ಐಶ್ವರ್ಯನಾಶವನ್ನು ತಿರುಮಲನು ಈ ಮೇರೆಗೆ ಹಲವುಬಗೆಯಿಂದ ಮಾಡಿದ್ದನ್ನು ನೋಡಿ, ನಿಮಗೆ ಬಹು ವ್ಯಸನವಾಗಿರಬಹುದಲ್ಲವೆ? ಅದರೆ ಉಪಾಯವಿಲ್ಲ. ಈ ಜಗತ್ತಿನ ರೂಪಾಂತರದ ಕಡೆಗೆ ಲಕ್ಷಗೊಟ್ಟು, ಈ ಜಗತ್ತಿನಲ್ಲಿ ಯಾವದೂ ಸ್ಥಿರವಲ್ಲೆಂಬದನ್ನು ಲಕ್ಷಿಸಿ, ಸಮಾಧಾನ ಮಾಡಿಕೊಂಡು ಮುಂದಿನ ಸಂಗತಿಯನ್ನು ನೀವು ಓದಬೇಕು.

ಈ ಮೇರೆಗೆ ತಿರುಮಲನ ಅಂತವಾದ ಬಳಿಕ ರಾಜ್ಯದ ಸೂತ್ರಗಳು ಮತ್ತೆ ರಾಮರಾಜನ ಕೈಯಲ್ಲಿ ಬಂದವು, ಆತನು ಮೊದಲು ಬಾದಶಹನ ಸಮಾಚಾರ ತೆಗೆದುಕೊಂಡು, ಸಾಧಿಸಿದರೆ, ತಾವು ಕೊಟ್ಟದ್ದ ಕಪ್ಪದ ದೊಡ್ಡರಕಮವನ್ನು ಕಸಕೊಳ್ಳಬೇಕೆಂದು ಒಮ್ಮೆ ಯೋಚಿಸಿದನು; ಆದರೆ ಈ ಕೆಲಸವು ಸುಲಭವಲ್ಲೆಂಬ ಮಾತು ಲಕ್ಷಕ್ಕೆಬಂದದ್ದರಿಂದ, ಆತನು ಮೊದಲು ತನ್ನ ಮನೆಯ ವ್ಯವಸ್ಥೆಯನ್ನು ಸರಿಯಾಗಿಮಾಡಿಕೊಂಡಬಳಿಕ ಹಿಂದುಗಡೆ ಬಾದಶಹನಸಮಾಚಾರತಕ್ಕೊಳ್ಳೋಣವೆಂದುನಿಶ್ಚಯಿಸಿ ಮೊದಲು ತಿರುಮಲನ ಪಕ್ಷದ ಜನರನ್ನು ಸಮಾದಾನಗೊಳಿಸಿದನು ತಿರುಮಲನ ಪಕ್ಷದ ಜನರ ಮೊದಲಿನ ಅಧಿಕಾರಗಳನ್ನು ಅವರಕಡೆಗೇ ಇಟ್ಟು—"ನಾನು ತಿರುಮಲನಿಗೆ ಕೇಡು ಬಗೆಯುತ್ತಿದ್ದಿಲ್ಲ; ಆತನು ಜೀವದಿಂದಿ

ದ್ದರಿ ಆತನಿಗೇ ಮಂತ್ರಿಪದವನ್ನು ಕೊಟ್ಟು, ಆತನ ಕೈಕೆಳಗೆ ನಾನು ಇರುತ್ತಿದ್ದೆನು. ರಾಜ್ಯದ ಗೌರವವನ್ನು ನಷ್ಟಪಡಿಸಿದ್ದರಿಂದ ನಾನು ತಿರುಮಲನ ಗೊಡವಿಗೆ ಹೋಗಬೇಕಾಯಿತು, ಎಂದು ಹೇಳಿದನು. ಇದರಿಂದ ತಿರುಮಲನ ಪಕ್ಷದವರ ಸಮಾಧಾನವಾಯಿತು. ಮುಸಲ್ಮಾನರ ಕೈಯು ತಮ್ಮ ರಾಜ್ಯದಲ್ಲಿ ಸೇರಿದ್ದಕ್ಕಾಗಿ ರಾಮರಾಜನಿಗೆ ಬಹಳ ಅಸಮಾಧಾನವಾಗಿತ್ತು. ಮೊದಲು ಆತನು ಮುಸಲ್ಮಾನರದೊಂದು ಮಸೀದೆಯು (ದರ್ಗೆಯು) ತನ್ನ ರಾಜ್ಯದಲ್ಲಿದ್ದ ದ್ದಕ್ಕಾಗಿ ಅಸಮಾಧಾನಪಡುತ್ತಿರಲು, ಈಗ ಆ ದರ್ಗೆಯು ಮುಸಲ್ಮಾನರ ಕೈ ಸೇರಿದ್ದಲ್ಲದೆ, ತನ್ನ ಕುಂಜವನವು ಸಹ ಬಾದಶಹನ ವಕೀಲನ ವಾಸಸ್ಥಳವಾಯಿತೆಂದು ಆತನು ಬಹಳ ಅಸಮಾಧಾನಪಟ್ಟನು. ಆತನು ಬಾದಶಹನಿಗೆ— "ಕುಂಜವನದ ಬದಲು ಬೇರೆ ಸ್ಥಳವನ್ನು ನಿಮ್ಮ ವಕೀಲನಿಗೆ ಇರಲಿಕ್ಕೆ ಕೊಡುತ್ತೇವೆ" ಎಂದು ತಿಳಿಸಲು, ಅದಕ್ಕೆ ಬಾದಶಹನು—"ನಮ್ಮ ವಕೀಲನಿಗೆ ಅದೇ ಸ್ಥಳವು ಯೋಗ್ಯವಾದದ್ದು, ಎರಡನೆಯ ಸ್ಥಳವು ನಮಗೆ ಬೇಕಾಗಿಲ್ಲ. ಕುಂಜವನವನ್ನು ನೀವು ಕೊಡದಿದ್ದರೆ, ನಮ್ಮ ವಕೀಲನು ನಿಮ್ಮಲ್ಲಿರುವದಕ್ಕೆ ನಿಮ್ಮ ಒಪ್ಪಿಗೆಯಿರುವದಿಲ್ಲೆಂದು ತಿಳಿದು, ನಾವು ಯೋಗ್ಯವ್ಯವಸ್ಥೆಮಾಡುವೆವು" ಎಂದು ಸ್ವಲ್ಪ ಕಠೋರತನದಿಂದ ಉತ್ತರವನ್ನು ಬರೆದು ಕಳಿಸಿದನು. ಅದನ್ನು ಓದಿ ರಾಮರಾಜನು ಸಿಟ್ಟುಬೆಂಕಿಯಾದನು. "ನೀವು ಮಾಡತಕ್ಕದ್ದನ್ನು ಅವಶ್ಯವಾಗಿ ಮಾಡಿರಿ, ನಾನಂತು ಕುಂಜವನವನ್ನು ನಿಮಗೆ ಕೊಡುವದಿಲ್ಲ" ಎಂದು ಸ್ಪಷ್ಟವಾಗಿ ಬರೆಯಬೇಕೆಂದು ಆತನು ಯೋಚಿಸಿದನು; ಆದರೆ ಮತ್ತೆ ವಿಚಾರಮಾಡಿ, ಇದು ಹೀಗೆ ಏರಿಹೋಗಲಿಕ್ಕೆ ಸಮಯವಲ್ಲ, ಈಗ ಸಮಾಧಾನ ಮಾಡಿಕೊಳ್ಳುವದೇ ಯೋಗ್ಯವು, ಎಂದು ತಿಳಿದು, ಬಾದಶಹನ ವಕೀಲನಿಗೆ ಕುಂಜವನವನ್ನು ತೆರವು ಮಾಡಿಕೊಟ್ಟನು. ಇತ್ತ ಬಾದಶಹನು ರಾಮರಾಜನಿಗೆ—"ನಿಮ್ಮ ರಾಜ್ಯದಲ್ಲಿ ಸ್ವಸ್ಥತೆಯಾದ ಬಳಿಕ ನೀವು ನೆರಿಸುವ ಮೊದಲನೆಯ ದರ್ಬಾರಕ್ಕೆ ನಮ್ಮ ವಕೀಲನು ಬರುವನು; ಆದ್ದರಿಂದ ದರ್ಬಾರು ನೆರಿಸಲಿಕ್ಕೆ ಎಂಟು ದಿನಗಳಿರುತ್ತಲೆ ನಮಗೆ ದರ್ಬಾರದ ದಿವಸವನ್ನು ತಿಳಿಸಬೇಕು; ಎಂದು ಪತ್ರವನ್ನು ಬರೆದನು. ಆ ಪತ್ರವನ್ನು, ವಿಶೇಷವಾಗಿ ಆ ಪತ್ರದೊಳಗಿನ ತಾತ್ಪರ್ಯದ ಬರಹವನ್ನು ನೋಡಿ, ರಾಮರಾಜನ ಸರ್ವಾಂಗವು ತಸ್ತುವಾಯಿತು; ಆದರೆ ಇದು ತಡಕೊಂಡು ಹೋಗತಕ್ಕ ಕಾಲವು; ಮುಂದುವರಿದು ಹೋಗತಕ್ಕ ಕಾಲವಲ್ಲೆಂಬ ಮಾತು ಲಕ್ಷದಲ್ಲಿ ಬಂದದ್ದರಿಂದ, ಆತನಿಗೆ ಬಹಳ ವ್ಯಸನವಾಯಿತು. ಆತ

ನು ಹೆಚ್ಚಿನ ಉಸಾಬರಿಗೆ ಹೋಗದೆ, ದರ್ಬಾರದ ದಿನವನ್ನು ಗೊತ್ತುಮಾಡಿ, ಅದನ್ನು ಮುಂಗಡವಾಗಿ ಬಾದಶಹನಿಗೆ ಅತನ ಇಚ್ಛೆಯಂತೆ ತಿಳಿಸಿದನು.



೧೦ ನೆಯ ಪ್ರಕರಣ:—ರಾಮರಾಜನ ಉತ್ಕರ್ಷ.

ಅಚ್ಯುತರಾಯನು ರಾಜ್ಯಕಾರಭಾರಕ್ಕೆ ಕೇವಲ ಅಯೋಗ್ಯನೆಂಬದನ್ನು ವಾಚಕರು ಅರಿತಿರುವರು. ಸ್ವತಂತ್ರರೀತಿಯಿಂದ ಕಾರಭಾರಮಾಲಿಕ್ಕೆ ಅತನಲ್ಲಿ ಯೋಗ್ಯತೆಯೇ ಇದ್ದಿಲ್ಲ. ಹೋಜೆತಿರುಮಲರಾಯನು ಇರುವತನಕ ಅತನ ಕೈಯೊಳಗಿನ ಸೂತ್ರದಗೊಂಬೆಯಾಗಿದ್ದನು. ಈಗ ರಾಮರಾಜನ ಕೈಯೊಳಗಿನ ಸೂತ್ರದಗೊಂಬೆಯಾದನು. ರಾಮರಾಜನ ವಿಷಯವಾಗಿ ಯಾವತ್ತು ಜನರು ಆದರಬುದ್ಧಿಯುಳ್ಳವರಾಗಿದ್ದರು. ಅತನ ಬುದ್ಧಿ ಸಾಮರ್ಥ್ಯದಿಂದಲೇ ವಿಜಯನಗರದ ಸಂರಕ್ಷಣವಾಯಿತೆಂದು ಎಲ್ಲರು ತಿಳಿದಿದ್ದರು. ರಾಮರಾಜನು ಒಳ್ಳೇ ಚತುರನೂ, ಮಹಾ ಪರಾಕ್ರಮಿಯೂ ನಿಜವಾದ ಹಿಂದೂಧರ್ಮಾಭಿಮಾನಿಯೂ, ಎಂಬ ಕೀರ್ತಿಯು ಎಲ್ಲಕಡೆಗೆ ಹಬ್ಬಿತು. ತಿರುಮಲರಾಯನ ಮರಣದನಂತರ ರಾಜ್ಯದಲ್ಲಿ ಸ್ವಾಸ್ಥ್ಯವು ನೆಲಗೊಂಡಬಳಿಕ, ರಾಮರಾಜನು ದರ್ಬಾರು ಕೂಡಿಸಿ- ಅಚ್ಯುತರಾಯನಿಂದ ತಾನು ಮಂತ್ರಿಪದದ ಉಡುಗರೆಗಳನ್ನು ಇಸುಕೊಳ್ಳಬೇಕೆಂದು ಮಾಡಿದನು. ಈ ದರ್ಬಾರದ ನೆವದಿಂದ ವಿಜಯನಗರದ ರಾಜ್ಯದ ಐಶ್ವರ್ಯವನ್ನೂ, ಸಾಮರ್ಥ್ಯವನ್ನೂ, ಪರರಾಜರ ಕಣ್ಣಿಗೆ ಹಾಕಿ, ವಿಜಯನಗರದ ಅರಸರ ವಿಷಯದ ಭಯವು ಅವರ ಮನಸ್ಸಿನಲ್ಲಿ ಉಳಿಯುವಂತೆ ಮಾಡಬೇಕೆಂದು ರಾಮರಾಜನು ಯೋಚಿಸಿದ್ದನು. ಹೋಜೆತಿರುಮಲನ ಕಾಲಕಾಲದಲ್ಲಿ ಉಂಟಾಗಿದ್ದ ವಿಜಯನಗರದ ರಾಜ್ಯದೊಳಗಿನ ಒಡಕು ಹೋಗಿ, ಪುನಃ ರಾಜ್ಯದಲ್ಲಿ ಒಕ್ಕಟ್ಟು ಉತ್ಪನ್ನವಾಗಿರುವದೆಂದು ಎಲ್ಲರಿಗೆ, ವಿಶೇಷವಾಗಿ ಮುಸಲ್ಮಾನ ಬಾದಶಹರಿಗೆ ಅತನು ತೋರಿಸಬೇಕಾಗಿತ್ತು. ಹೀಗೆ ಮುಸಲ್ಮಾನ ಬಾದಶಹರು ತನ್ನ ಸಾಮರ್ಥ್ಯವನ್ನು ಅರಿತು, ಕೆಲವು ವರ್ಷಗಳವರೆಗಾದರು ತನ್ನಗೊಡವೆಗೆ ಬಾರದಿರುವಾಗ, ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ಆ ಮೇಲೆ ವಿಜಾಪುರದ ಇಬ್ರಾಹಿಮ ಆದಿಲಶಹನ ಸಮಾಚಾರವನ್ನು ತಕ್ಕೊಂಡು, ಹೋಜೆತಿರುಮಲರಾಯನ ಕಾಲದಲ್ಲಾಗಿದ್ದ ಅಪಮಾನದ ಸೇಡು ತೀರಿ

ಸಿಕೊಳ್ಳಬೇಕೆಂದು ಮಾಡಿದನು. ಇಬ್ರಾಹಿಮ ಅದಿಲಶಹನಾದರೂ ರಾಮರಾಜನಯೋಗ್ಯತೆಯನ್ನು ನೋಡಿ ಅಂಜಿ ನಡೆಯುತ್ತಿದ್ದನು. ಆತನು ರಾಮರಾಜನಿಗೆ—"ನೀವು ನಿಮ್ಮ ರಾಜ್ಯಕಾರಭಾರವನ್ನು ಬೇಕಾದಹಾಗೆ ನಡಿಸಿರಿ, ಮಾತ್ರ ನಮ್ಮ ವಕೀಲನ ಮಾನಮರ್ಯಾದೆಗಳನ್ನು ಯೋಗ್ಯರೀತಿಯಿಂದ ನಡಿಸಿ, ಒಡಂಬಡಿಕೆಯ ಕರಾರುಗಳನ್ನು ಸರಿಯಾಗಿ ಪಾಲಿಸಿದರಾಯಿತು; ನಮಗೆ ತಿರುಮಲರಾಯರು ಕಾರಭಾರಮಾಡಿದರೂ ಅಷ್ಟೇ, ರಾಮರಾಜನು ಕಾರಭಾರ ಮಾಡಿದರೂ ಅಷ್ಟೇ, ಎಂದು ಹೇಳಿ ಕಳಿಸಿಕೊಡಹತ್ತಿದನು. ರಾಮರಾಜನಿಗೆ ಇಬ್ರಾಹಿಮಶಹನ ಭಯವಿದ್ದಿಲ್ಲ. ಈಗ ಆತನು ತನ್ನನ್ನು ತಡವಲಾರನೆಂಬದು ರಾಮರಾಜನಿಗೆ ಸಂಪೂರ್ಣವಾಗಿ ಗೊತ್ತಾಗಿತ್ತು.

ದರ್ಬಾರದ ದಿವಸವು ಗೊತ್ತಾಯಿತು. ನಾಲ್ಕೂ ಕಡೆಗೆ ಪತ್ರಗಳು ಹೋದವು. ವಿಜಾಪುರ; ಗೋವಳಕೊಂಡ, ಅಹಮ್ಮದನಗರ, ಬೇದರ ಈ ನಾಲ್ವರು ಮುಸಲ್ಮಾನ ಬಾದಶಹರಿಗೂ, ಗೋವೆಯ ರಾಜ್ಯದ ಪೋರ್ತಗೀಜರಿಗೂ ನಿಮಂತ್ರಣ ಪತ್ರಿಕೆಗಳನ್ನು ಕಳಿಸಿದರು. ಸ್ವತಃ ತನ್ನ ರಾಜ್ಯದೊಳಗಿನ ಯಾವತ್ತು ಕಿಲ್ಲೇದಾರರಿಗೂ, ತಾಣೇದಾರರಿಗೂ, ಸುಭೇದಾರರಿಗೂ, ಮಾಂಡಲೀಕರಾಜರಿಗೂ ಸೈನ್ಯಸಹಿತವಾಗಿ ಬರಲಿಕ್ಕೆ ರಾಮರಾಜನು ಆಜ್ಞಾಪತ್ರಗಳನ್ನು ಕಳಿಸಿದನು. ತನ್ನವರಲ್ಲಿ ತನಗೆ ಅನುಕೂಲರಾದ ಜನರನ್ನೂ, ತನಗೆ ಪ್ರತಿಕೂಲರಾದ ಜನರನ್ನೂ ಕೂಡಿಯೇ ಕರಿಸಿ, ಅವರನ್ನು ಕುರಿತು—"ಈಗಿನ ಪ್ರಸಂಗವು ಕಠಿಣವಾದದ್ದು. ನಮ್ಮ ರಾಜ್ಯವನ್ನು ನುಂಗಲಿಕ್ಕೆ ನಾಲ್ವರು ಮುಸಲ್ಮಾನ ಬಾದಶಹರು ಹೊಂಚುಹಾಕಿ ಕುಳಿತಿರುವರೆಂಬದು ನಿಮಗೆ ಗೊತ್ತೇ ಇದೆ. ಇಂಥ ಪ್ರಸಂಗದಲ್ಲಿ ನಮ್ಮಲ್ಲಿ ಒಡಕು ಇರಲಾಗದು. ನಮ್ಮ ರಾಜ್ಯದ ಐಶ್ವರ್ಯವನ್ನೂ, ಬಲವನ್ನೂ ಹೊರಗೆಡವಿ, ಅದರಿಂದ ಎಲ್ಲರನ್ನು ಆಶ್ಚರ್ಯಚಕಿತರನ್ನಾಗಿಮಾಡಬೇಕು. ಅಂದರೆ ಎಲ್ಲರು ತೆಪ್ಪಗಾಗಿ, ನಮ್ಮ ಉಸಾಬರಿಗೆ ಬರಲಿಕ್ಕಿಲ್ಲ. ಆಮೇಲೆ ನಮ್ಮ ಬಲವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಅನುಕೂಲವಾಗುವದು." ಎಂದು ಹೇಳಲು, ಅವರೆಲ್ಲರು ಒಡಂಬಟ್ಟು ರಾಮರಾಜನ ಸೂಚನೆಯಂತೆ ದರ್ಬಾರದ ವ್ಯವಸ್ಥೆಗೆ ಅನುಕೂಲವಾದರು. ರಾಮರಾಜನ ವಿಷಯವಾಗಿ ಅವರಲ್ಲಿ ಪ್ರೇಮಾದರಗಳು ಉತ್ಪನ್ನವಾದವು. ವಿದ್ಯಾನಗರದ ಅಥವಾ ವಿಜಯನಗರದ ಐಶ್ವರ್ಯವು ಅಪಾರವಾಗಿತ್ತು. ರಾಜದರ್ಬಾರವೆಂದರೆ, ರಾಜ್ಯದ ಸಂಪತ್ತಿನ, ಹಾಗು ಸಾಮರ್ಥ್ಯದ ಒಂದು ಬಗೆಯ ಪ್ರದರ್ಶನವೇ ಆಗಿರುತ್ತಿತ್ತು. ಈ ಪ್ರಸಂಗದಲ್ಲಿಯಂತು ರಾಮರಾಜನು ಆ ಪ್ರದರ್ಶನವನ್ನು

ಅತ್ಯುತ್ತಮರೀತಿಯಿಂದ ಮಾಡಿದನೆಂದು ಹೇಳಬಹುದು. ಅರಮನೆಯಿಂದ ಅರಸನ ಮೆರವಣಿಗೆಯು ಹೊರಟು, ರಾಜದರ್ಬಾರಕ್ಕೆ ಬರಬೇಕೆಂದು ಗೊತ್ತಾಗಿತ್ತು. ಅದರಂತೆ ಅರಸನ ಮೆರವಣಿಗೆಯು ಅರಮನೆಯಿಂದ ಹೊರಟಿತು. ಅರಸರ ಮೆರವಣಿಗೆಯು ರಾಜಮಾರ್ಗವನ್ನು ಹಿಡಿದು ಸಾಗಿದಾಗ, ಕಣ್ಣಿಗೆ ಬೀಳುವ ವೈಭವದ ವರ್ಣನಗಳನ್ನು ಪಾಚೀನಕಾವ್ಯಗಳಲ್ಲಿ ವರ್ಣಿಸಿರುವಷ್ಟೇ? ಆದರೆ ಆ ವರ್ಣನಗಳನ್ನು ಹಿಂದಕ್ಕೆ ಸರಿಸುವಂಥ ವೈಭವವು ಈಗಿನ ಮೆರವಣಿಗೆಯಲ್ಲಿ ಕಣ್ಣಿಗೆ ಬೀಳುವಂತೆ ರಾಮರಾಜನು ವ್ಯವಸ್ಥಮಾಡಿದ್ದನು. ಯಾವತ್ತು ಮುಸಲ್ಮಾನ ಬಾದಶಹರಿಂದ ಕಳಿಸಲ್ಪಟ್ಟಿದ್ದ ವಕೀಲರು, ವಿಜಯನಗರದ ಐಶ್ವರ್ಯ-ಸಾಮರ್ಥ್ಯಗಳನ್ನು ನೋಡಿ, ಬೆರಗಾದರು. ಪಟ್ಟಣದ ಯಾವತ್ತು ರಾಜಮಾರ್ಗಗಳಿಂದ ಮೆರವಣಿಗೆಯು ಸಾಗಿಹೋಯಿತು. ಮೆರವಣಿಗೆಯು ಮುಂಭಾಗದಲ್ಲಿ ಬಂದು ದೊಡ್ಡ ಆನೆಯಮೇಲೆ ಒಬ್ಬ ಮನುಷ್ಯನು ವಿಜಯನಗರದ ಧ್ವಜವನ್ನು ಹಿಡಕೊಂಡು ಕುಳಿತುಕೊಂಡಿದ್ದನು. ಆ ಧ್ವಜಪಟದ ಒಂದು ಮಗ್ಗಲಿಗೆ ಶ್ರೀ ವಿಠ್ಠಲಸ್ವಾಮಿಯ ಚಿತ್ರವೂ, ಮತ್ತೊಂದು ಮಗ್ಗಲಿಗೆ ನೃಸಿಂಹನ ಚಿತ್ರವೂ ಕಣ್ಣಿಗೆ ಬೀಳುತ್ತಿದ್ದವು. ಇಂಥ ಧ್ವಜಸ್ತಂಭವನ್ನು ಆನೆಯಮೇಲೆ ಅತ್ತಿತ್ತ ಉಲಕಾಡದಂತೆ ನಿಲ್ಲಿಸಿದ್ದರು. ಧ್ವಜವುಮಾತ್ರ ಗಾಳಿಯಿಂದ ಪಟ ಪಟ ಸಪ್ಪಳಮಾಡುತ್ತ ಆಕಾಶದಲ್ಲಿ ಗಾಂಭೀರ್ಯದಿಂದ ಹೊಯ್ದಾಡುತ್ತಿತ್ತು. ಈ ಆನೆಯ ಹಿಂದೆ ನೂರಾರು ಆನೆಗಳು ಸಾಲುಗೊಂಡು ಸಾಗಿದ್ದವು. ಆಗ ವಿಜಯನಗರದ ಐಶ್ವರ್ಯದ ಸಾಕ್ಷಿಗಾಗಿ ಆ ರಾಜ್ಯದಲ್ಲಿ ಎರಡು ಸಾವಿರದವರೆಗೆ ಆನೆಗಳು ಇದ್ದವು. ಅವುಗಳಲ್ಲಿ ಆರಿಸಿ ತಂದಿದ್ದ ಈ ನೂರಾರು ಆನೆಗಳ ಹಿಂಡು ನೋಡುವವರ ಮನೋರಂಜನವನ್ನಲ್ಲದೆ, ನೋಡುವವರಲ್ಲಿ ಒಂದು ಪ್ರಕಾರದ ಭಯವನ್ನೂ ಉಂಟುಮಾಡುತ್ತಿತ್ತು. ಆ ಮೆರವಣಿಗೆಯಲ್ಲಿ (ಗಜ) ಬೃಂಹಿತ ದೊಡನೆ ಕನ್ನಡಿಗರ ಹೃದಯವು ಅಭಿಮಾನಾನಂದದಿಂದ ಕಂಪಿಸಿದರೆ, ವೈರಿಗಳ ಹೃದಯವು, ಮಾತ್ಸರ್ಯಯುಕ್ತಭಯದಿಂದ ಕಂಪಿಸುತ್ತಿರಬಹುದು! ಈ ಆನೆಗಳ ಹಿಂದೆ ಕುದುರೆಗಳ ಸಾಲುಗಳೂ, ಅವುಗಳ ಹಿಂದಿನಿಂದ ಕಾಲಾಳುಗಳ ತಂಡಗಳೂ ಸಡಗರದಿಂದ ಸಾಗಿದ್ದವು. ಕಾಲಾಳುಗಳ ಸಂಖ್ಯೆಗೆ ಲೆಖ್ಖವಿದ್ದಿಲ್ಲ, ನಟ್ಟನಡುವೆ ಭವ್ಯವಾದ ಆನೆಯ ಮೇಲೆ ಬಂಗಾರದ ಅಂಬಾರಿಯಲ್ಲಿ ಅಚ್ಯುತರಾಯರ ಸವಾರಿಯು ಶೋಭಿಸುತ್ತಲಿತ್ತು. ಅದರ ಹಿಂದೆ ಅಂಥವೇ ಮೂರು ಆನೆಗಳ ಮೇಲೆ ಬೆಳ್ಳಿಯ ಅಂಬಾರಿಯಲ್ಲಿ ರಾಮರಾಜನ, ಹಾಗು ಅತನ ಬಂಧುವಾದ ತಿರುಮಲರಾಯನ, ಅದರಂತೆ ಅತನ ಮಿತ್ರನಾದ ಶಾಜ್ಞ್ಞಧರನ ಸವಾರಿಗಳು ವಿರಾಜಮಾನವಾಗಿದ್ದವು. ನಾನಾಸ್ವರಕಾರವ ರಣವಾದ್ಯಗಳೂ

ಭೇರಿಗಳೂ, ನಗಾರೆ-ನೌಬತ್ತುಗಳೂ, ಕಹಳೆ-ತುತೂರಿಗಳೂ ಅಟ್ಟಹಾಸದಿಂದ ಧ್ವನಿಮಾಡುತ್ತಿದ್ದವು. ಅರಸನ ಸವಾರಿಯು ದರ್ಬಾರದ ಬಾಗಿಲಿಗೆ ಬರುವದರೊಳಗಾಗಿ ರಾಮರಾಜನೂ, ಆತನ ಬಂಧು-ಮಿತ್ರರೂ ತಮ್ಮ ಆನೆಗಳನ್ನಿಳಿದು, ಅರಸನನ್ನು ಇದಿರ್ಗೊಂಡು ಕರಕೊಂಡು ಹೋಗುವದಕ್ಕಾಗಿ ಮುಂಗಡೆ ಬಂದು ನಿಂತಿದ್ದರು. ದ್ವಾರದಲ್ಲಿಯೇ ಮಹಾರಾಜರ ಪಾದವಂದನವೂ, ಪ್ರೋಕ್ಷಣವೂ, ಆದಮೇಲೆ, ಮುಜರೆಗಳನ್ನು ಸ್ವೀಕರಿಸುತ್ತ ಮಹಾರಾಜರು ಸಿಂಹಾಸನಾರೂಢರಾದರು. ಆಮೇಲೆ ಬಂದವರ ಯಾದಿಯನ್ನು ಓದಹತ್ತಿದರು. ಅವರವರ ಹೆಸರು ಬಂದಬಂದಂತೆ, ಅವರವರು ಎದ್ದು ನಿಂತು ವಿನಯದಿಂದ ಅಚ್ಯುತರಾಯನನ್ನು ನಮಿಸಿ, ರಾಮರಾಜನ ಅಭಿನಂದನ ಮಾಡುತ್ತಲಿದ್ದರು. ಇದರಂತೆಯೇ ಮುಸಲ್ಮಾನ ಬಾದಶಹರ ವಕೀಲರೂ ಮಾಡಿದರು, ರಾಮರಾಜನು ದರ್ಬಾರದ ಈ ಪರಮ ವೈಭವವನ್ನು ನೋಡಿ, ಪರಮಾನಂದಪಟ್ಟನು. ಆ ಮೇಲೆ ಅವರವರ ಮಾನಸಪರ್ಯಾದಗಳಂತೆ ಅವರವರಿಗೆ ಉಡುಗರೆಗಳೂ ಕೊಡಲ್ಪಟ್ಟವು. ರಾಮರಾಜನ ಮನೋದಯವು ಈ ಕಾಲದಲ್ಲಿ ಪೂರ್ಣವಾಗಿ ಸಫಲವಾಯಿತು. ಅಚ್ಯುತರಾಯನ ಕಾಲದಲ್ಲಿ ವಿಜಯನಗರದ ರಾಯರು ವಿಜಾಪುರದ ಬಾದಶಹನಿಗೆ ಸಣ್ಣವರಾಗಿ ನಡೆದಾಗ್ಯೂ, ಅವರ ವೈಭವ ಸಾಮರ್ಥ್ಯಗಳು ಯಥಾಸ್ಥಿತವಾಗಿರುತ್ತವೆಂತಲೂ, ರಾಮರಾಜನು ಆ ರಾಜ್ಯದ ಪುರಸ್ಕರ್ತನಾಗಿರುವ ತನಕ, ಅವು ಅಭಿವೃದ್ಧವಾಗುತ್ತ ಹೋಗುವದರಲ್ಲಿ ಸಂಶಯವಿಲ್ಲೆಂತಲೂ, ಮುಸಲ್ಮಾನ ಬಾದಶಹರ ವಕೀಲರೇ ಮೊದಲಾದವರು ತಿಳಕೊಂಡರು. ದರ್ಬಾರದ ಈ ಎಲ್ಲ ಪ್ರಕಾರವನ್ನು ನೋಡಿ ಮುಸಲ್ಮಾನ ವಕೀಲರು ಚಕಿತರಾಗಿ, ರಾಮರಾಜನ ಆಳಿಕೆಯ ಕಾಲದಲ್ಲಿಯಂತು ತಮ್ಮ ಬೇಳೆಯು ಬೇಯಲಿಕ್ಕಿಲ್ಲೆಂದು ತಿಳಿದು, ಅದರಂತೆ ತಮ್ಮ ತಮ್ಮ ಬಾದಶಹರಿಗೆ ತಿಳಿಸಿದರು.

ರಾಮರಾಜನು ವಿಜಯನಗರದ ರಾಜ್ಯದಲ್ಲಿ ವ್ಯವಹರಿಸಿದ ಕಾಲವು ಬಹು ದೀರ್ಘವಾದದ್ದು. ಆತನ ಆಳಿಕೆಯ ಆರಂಭವು ವಿಜಯನಗರದ ರಾಜ್ಯದ ಅತ್ಯುತ್ಕರ್ಷದ ಆರಂಭವಾಗಿದ್ದು, ಆತನ ಆಳಿಕೆಯ ಸಮಾಪ್ತಿಯು ಆ ರಾಜ್ಯದ ವಿಧ್ವಂಸದ ಪರಮಾವಧಿಯಾಗಿರುವದು. ಆ ವಿಧ್ವಂಸದ ಬೀಜವನ್ನು ಆತನು ತನ್ನ ತಾರುಣ್ಯದಲ್ಲಿ ಬಿತ್ತಿ, ಅದರ ಘಾತಕಫಲವನ್ನು ವೃದ್ಧಾಪ್ಯದಲ್ಲಿ ಭೋಗಿಸಿದನು. ಆತನ ದೀರ್ಘಕಾಲದ ಆಳಿಕೆಯಲ್ಲಿ ರಾಮನೀರಾಜ್ಯದ ನಾಲ್ಕು ಶಾಖೆಗಳಲ್ಲಿಯೂ ಇಬ್ಬರಿಬ್ಬರಾದರೂ ಬಾದಶಹರು ಆಗಿಹೋದರು. ರಾಮರಾಜನ ತಂತ್ರಗಳು

ಕೃಷ್ಣದೇವರಾಯರ ಮರಣದಿಂದ, ಅಂದರೆ ೧೫೨೦ ನೇ ಇಸವಿಯಿಂದ ಆರಂಭವಾದವು. ೧೫೨೦ ರಿಂದ ೧೫೬೫ ನೇ ಇಸವಿಯ ವರೆಗೆ ೧೫ ವರ್ಷಗಳಲ್ಲಿ ಆತನು ಕೆಲವು ವರ್ಷಗಳನ್ನು ಅಜ್ಞಾತವಾಸದಲ್ಲಿಯೂ, ಕೆಲವು ವರ್ಷಗಳನ್ನು ಕುಟಿಲ ತಂತ್ರರಚನೆಯಲ್ಲಿಯೂ ಕಳೆದನು. ಅಚ್ಯುತರಾಯನು ಮರಣ ಹೊಂದಿದ ನಂತರ ಆತನ ಅಣ್ಣನಮಗನಾದ ಸದಾಶಿವರಾಯನನ್ನು ರಾಮರಾಜನು ಪಟ್ಟಕ್ಕೆ ಕುಳ್ಳಿರಿಸಿದನು. ಈ ಕೆಲಸದಲ್ಲಿ ರಾಮರಾಜನ ಬಂಧುಗಳಾದ ತಿರುಮಲನೂ, ವೇಂಕಟಾದ್ರಿಯೂ ಒಳಿತಾಗಿ ಸಹಾಯಮಾಡಿದರು. ಸದಾಶಿವರಾಯನು ಸಾಯುವವರೆಗೆ ಈ ಮೂವರ ಕೈಯೊಳಗೆ ಸೆರೆಯಾಳಿನಂತೆ ಜೀವಿಸಿದನು. ಈ ಕಾಲದಲ್ಲಿ ರಾಮರಾಜನೇ ವಿಜಯನಗರದ ನಿಜವಾದ ರಾಜನಾಗಿದ್ದನು; ಆದರೆ ಆತನು ತನ್ನನ್ನು "ಮಹಾರಾಜನೆ"ಂದಾಗಲಿ, "ಸಾಮ್ರಾಟನೆ"ಂದಾಗಲಿ ಕರೆಸಿಕೊಳ್ಳದೆ, "ಮಹಾ ಮಂಡಲೇಶ್ವರ"ನೆಂಬ ಕಡಿಮೆ ಪ್ರತಿಯ ಹೆಸರಿನಿಂದಲೇ ಕರೆಸಿಕೊಳ್ಳಹತ್ತಿದನು. ವರ್ಷವರಡು ವರ್ಷಗಳಿಗೊಮ್ಮೆ, ಅಥವಾ ನಾಲ್ಕು ವರ್ಷಗಳಿಗೊಮ್ಮೆ ಯಾವಾಗಾದರೂ ದರ್ಬಾರು ನೆರಿಸಿ, ಆಗ ಸದಾಶಿವರಾಯನನ್ನು ಸಿಂಹಾಸನದ ಮೇಲೆ ಕೂಡ್ರಿಸಿ, ಎಲ್ಲ ಮುಖ್ಯ ಮರ್ಯಾದೆಗಳನ್ನು ಆತನಿಗೇ ಕೊಡಿಸುತ್ತಿದ್ದನು. ಇಸವಿ ಸನ ೧೫೬೫ ರಿಂದ ಅಂದರೆ, ತನ್ನ ನಿಜವಾದ ಆಳಿಕೆಗೆ ಆರಂಭವಾದಂದಿನಿಂದ ರಾಮರಾಜನು ವಿಜಯನಗರದ ರಾಜ್ಯದ ಉತ್ಕರ್ಷವನ್ನು ಮಾಡಲಾರಂಭಿಸಿದನು. ಆತನು ವಿಜಾಪುರದ ಇಬ್ರಾಹಿಮ ಅದಿಲಶಹನಿಗೂ, ಗೋವಳಕೊಂಡದ ಕುತುಬಶಹನಿಗೂ ಬಹಳ ತ್ರಾಸಕೊಡಹತ್ತಿದನು. ವಿಜಾಪುರದ ಅದಿಲಶಹನ ಮೇಲಂತು ಆತನ ಸಿಟ್ಟು ಇದ್ದೇ ಇತ್ತು. ಆತನ ಸೇಡು ತೀರಿಸಿಕೊಳ್ಳುವ ಸಂಧಿಯನ್ನು ರಾಮರಾಜನು ನೋಡುತ್ತಿದ್ದನು. ಈ ಸಂಧಿಯನ್ನು ಇಬ್ರಾಹಿಮ ಅದಿಲಶಹನೇ ಒದಗಿಸಿ ಕೊಟ್ಟನು. ಆತನು ಗೋವಳಕೊಂಡದ ಬಾದಶಹನ ರಾಜ್ಯವನ್ನು ಕಸಗೊಂಡು, ತನ್ನ ರಾಜ್ಯವನ್ನು ಬೆಳಿಸುವ ಇಚ್ಛೆಯಿಂದ ರಾಮರಾಜನ ಸಹಾಯವನ್ನು ಬೇಡಿದನು. ಆಗ ರಾಮರಾಜನು ಅದಿಲಶಹನಿಗೆ ಸಹಾಯಮಾಡಿ ತನ್ನ ರಾಜ್ಯದೊಳಗಿನ ಆತನ ವಕೀಲನನ್ನು ತಿರುಗಿ ಕಳುಹಿ, ಕುಂಜವನವನ್ನು ತನ್ನ ಕೈಯಲ್ಲಿ ತಕ್ಕೊಂಡನು. ಹೀಗೆ ಮುಸಲ್ಮಾನರ ನಾಲ್ವರು ಬಾದಶಹರಲ್ಲಿ ಕಲಹವನ್ನುಂಟು ಮಾಡಿ, ತಾನು ಒಮ್ಮೆ ಒಬ್ಬರಿಗೆ, ಮತ್ತೊಮ್ಮೆ ಮತ್ತೊಬ್ಬರಿಗೆ ಸಹಾಯಮಾಡುತ್ತ, ರಾಮರಾಜನು ಬಲಿಷ್ಠನಾಗಹತ್ತಿದನು. ಮುಂದೆ ೧೫೬೭ರಲ್ಲಿ ಇಬ್ರಾಹಿಮ ಅದಿಲಶಹನು ಮರಣಹೊಂದಲು, ವಿಜಾಪುರದಲ್ಲಿ ಅಲ್ಲಿ ಅದಿಲಶಹನ ಆಳಿಕೆಗೆ ಆರಂಭವಾಯಿತು.

ಅಲ್ಲಿ ಅದಿಲಶಹನು ವಿಜಾಪುರದ ಸಿಂಹಾಸನವೇರಿದ ಬಳಿಕ ಆತನಿಗೂ ಅಹಮ್ಮದನಗರದ ಹುಸೇನನಿಜಾಮಶಹನಿಗೂ ದ್ವೇಷವುಂಟಾಯಿತು. ತನ್ನೊಬ್ಬನಿಂದ ನಿಜಾಮಶಹನ ಪಾರಿಪತ್ಯಮಾಡುವದಾಗದೆಂದು ತಿಳಿದು, ಅಲ್ಲಿ ಅದಿಲಶಹನು ರಾಮರಾಜನ ಸಹಾಯವನ್ನು ಕೇಳಿಕೊಂಡನು. ಅದಕ್ಕೆ ರಾಮರಾಜನು ಸಂತೋಷದಿಂದ ಒಡಂಬಟ್ಟು ಅಲ್ಲಿಗೆ ಸಹಾಯಮಾಡಿದನು. ಈ ಯುದ್ಧವು ರಾಯಚೂರಲ್ಲಿ ಆಯಿತು. ಈ ಪ್ರಸಂಗದಲ್ಲಿ ಅಲ್ಲಿ ಅದಿಲಶಹನೂ, ರಾಮರಾಜನೂ ಕೂಡಿ ಅಹಮ್ಮದನಗರದ ರಾಜ್ಯದಲ್ಲಿ ಮಾಡಿದ ಅನರ್ಥವನ್ನು ವರ್ಣಿಸಲಾಸಲ್ಲ. ಪರಿಂಡೆಯಿಂದ ಜನ್ನರದವರೆಗೆ, ಮತ್ತು ಅಹಮ್ಮದನಗರದಿಂದ ದೌಲತ್ತಾಬಾದವರೆಗೆ ಒಂದು ಹಳ್ಳಿಯಲ್ಲಿ ಕೂಡ ಜನವಸತಿಯು ಉಳಿಯದಂತೆ ರಾಜ್ಯವನ್ನು ಬೇಚಿರಾಖು ಮಾಡಿದರು. ಮುಂದೆ ಬರಬರುತ್ತ ಅಲ್ಲಿ ಅದಿಲಶಹನಿಗೂ ರಾಮರಾಜನಿಂದ ತ್ರಾಸವಾಗಹತ್ತಿತು. ರಾಮರಾಜನು ಎಲ್ಲ ಮುಸಲ್ಮಾನ ಬಾದಶಹರಿಗೂ ತಲೆಭಾರವಾದನು. ಆತನ ಉತ್ಕರ್ಷವನ್ನು ಆ ಬಾದಶಹರು ಸೈರಿಸದಾದರು. ಒಂದುಸಾರೆ ಸಹಾಯಮಾಡಿದ್ದಕ್ಕಾಗಿಯೇ ಅದಿಲಶಹನು ರಾಮರಾಜನಿಗೆ ಗೋವಳಕೊಂಡ, ಪಾನಗಲ, ಗಂಟೂರ ಕೋಟೆಗಳನ್ನು ಕೊಡಬೇಕಾಯಿತು. ತಮ್ಮತಮ್ಮೊಳಗೆ ಜಗಳಾಡುತ್ತಿರುವದರಿಂದ ಈ ಹಿಂದೂರಾಜನು ಇಷ್ಟು ಬಲಿಷ್ಠನಾದನು; ನಾವೇ ಒಕ್ಕಟ್ಟಿನಿಂದ ಇದ್ದರೆ ಈತನ ನಾಶಮಾಡಲಿಕ್ಕೆ ಅವಕಾಶವು ಬೇಡವೆಂದು ಎಲ್ಲ ಮುಸಲ್ಮಾನ ಬಾದಶಹರು ಭಾವಿಸಿ, ತಮ್ಮೊಳಗೆ ಒಕ್ಕಟ್ಟುಮಾಡಿಕೊಳ್ಳಲಿಚ್ಛಿಸಿದರು. ತಾವು ಒಕ್ಕಟ್ಟು ಬೆಳಿಸಿಕೊಳ್ಳದಿದ್ದರೆ ತಮ್ಮ ರಾಜ್ಯಗಳು ರಸಾತಳಕ್ಕೆ ಇಳಿಯುವದೇ ನಿಶ್ಚಯವೆಂದು ಅವರು ತಿಳಿದರು. ಅವರಲ್ಲಿ ವಿಶೇಷವಾಗಿ ಅಲ್ಲಿ ಅದಿಲಶಹನ ಮನಸ್ಸಿಗೆ ರಾಮರಾಜನ ಉತ್ಕರ್ಷದ ಚಿಂತೆಯು ಬಹಳವಾಗಿ ಹತ್ತಿ, ಆತನು ತಮ್ಮೊಳಗೆ ಒಕ್ಕಟ್ಟು ಬೆಳಿಸುವ ಕೆಲಸದಲ್ಲಿ ಮುಂದುವರಿದು ಪ್ರಯತ್ನಮಾಡಹತ್ತಿದನು. ಎರಡುಸಾರೆ ಆತನು ರಾಮರಾಜನ ಸಹಾಯವನ್ನು ಪಡೆದವನಾದ್ದರಿಂದ, ರಾಮರಾಜನ ಸಾಮರ್ಥ್ಯವೂ, ಆತನ ಸೊಕ್ಕೂ ಅಲ್ಲಿ ಅದಿಲಶಹನಿಗೆ ಗೊತ್ತಾಗಿದ್ದವು. ಅಲ್ಲಿ ಅದಿಲಶಹನು ತನ್ನ ವಿಶ್ವಾಸದ ಸರದಾರನಾದ ಕಿಷ್ಟರಖಾನನೊಡನೆ ಆಲೋಚಿಸಿ, ಎರಡು ಬಗೆಯ ತಂತ್ರಗಳನ್ನು ಹೂಡಿದನು. ಆ ತಂತ್ರಗಳಲ್ಲಿ ಒಂದನೆಯದು, ಉಳಿದ ಮೂವರು ಬಾದಶಹರ ಕಡೆಗೆ ವಕೀಲರನ್ನು ಕಳಿಸಿ ನಾವೆಲ್ಲರೂ ಕೂಡಿ ರಾಮರಾಜನನ್ನು ನಾಶಗೊಳಿಸಬೇಕೆಂದು ಆಲೋಚಿಸುವದು. ರಾಮರಾಜನ ಕಡೆಗೆ ವಕೀಲನನ್ನು ಕಳಿಸಿ, ನಾನೂ ನೀನೂ ಕೂಡಿ ಉಳಿದ ಮೂವರು ಮುಸಲ್ಮಾನ ಬಾದಶಹರನ್ನು ನಾಶಗೊಳಿಸಿ ರಾಜ್ಯವನ್ನು ಹಂಚಿಕೊಳ್ಳೋಣ

ವೆಂದು ಆಲೋಚಿಸುವದು ಎರಡನೆಯ ತಂತ್ರವು. ಬಾದಶಹನು ಹಲವು ಉಪಾಯಗಳಿಂದ ಮುನಲ್ಮಾನ ಬಾದಶಹರಲ್ಲಿ ಬೆಳಿಸುವದಕ್ಕಾಗಿ ೧೫೬೪ ರಲ್ಲಿ ಕಿಷ್ಟರಖಾನನನ್ನು ನಿಯಮಿಸಿ ಆತನಿಗೆ ಸಂಪೂರ್ಣ ಅಧಿಕಾರ ಕೊಟ್ಟು ಕಳಿಸಿದನು.

ಇತ್ತ ರಾಮರಾಜನ ಕಡೆಗೆ ಅಲ್ಲಿಅದಿಲಶಹನು ಒಬ್ಬ ವಕೀಲನನ್ನು ಕಳಿಸಿ, ನಾವಿಬ್ಬರೂ ಒಂದಾಗಿ ಉಳಿದ ಮುಸಲ್ಮಾನ ರಾಜ್ಯಗಳನ್ನು ನಷ್ಟಪಡಿಸೋಣ, ಈ ಕೆಲಸವು ಪೂರ್ಣವಾಗುವವರೆಗೆ ನಮ್ಮ ಒಬ್ಬ ವಕೀಲನನ್ನು ನೀವು ನಿಮ್ಮ ರಾಜಧಾನಿಯಲ್ಲಿ ಇಟ್ಟುಕೊಳ್ಳಬೇಕು, ಎಂದು ಹೇಳಿಕಳಿಸಿದನು. ಅವಕ್ಕೆ ರಾಮರಾಜನು ಸಂತೋಷದಿಂದ ಒಪ್ಪಿಕೊಂಡು, ವಕೀಲನಿಗೆ ಇರಲಿಕ್ಕೆ ಈ ಸಾರಿ ತಾನಾಗಿಯೇ ಕುಂಜವನವನ್ನು ಕೊಟ್ಟನು. ಆ ವಕೀಲನು ಬಂದು ಕುಂಜವನದಲ್ಲಿ ಇರಹತ್ತಿದನಂತರ ಕೆಲವು ದಿನಗಳ ಮೇಲೆ ರಾಮರಾಜನು ದರ್ಬಾರ ನೆರಿಸುವ ದಿವಸವು ಬಂದಿತು. ಅಂದಿನ ದರ್ಬಾರಕ್ಕೆ ವಿಜಾಪುರದ ಹೊಸ ವಕೀಲನೂ ಬಂದಿದ್ದನು. ರಾಮರಾಜನು ಆ ವಕೀಲನ ಸುಂದರ ರೂಪವನ್ನೂ, ತೇಜಸ್ಸನ್ನೂ, ತಾರುಣ್ಯವನ್ನೂ ನೋಡಿ ಸಮಾಧಾನಪಟ್ಟನು. ದರ್ಬಾರದ ಕೆಲಸಕ್ಕೆ ಆರಂಭವಾಗಲು, ಎಲ್ಲರೂ ಅತ್ಯಂತ ವಿನಯದಿಂದ ನಡಕೊಂಡರು; ವಿಜಾಪುರದ ತರುಣ ವಕೀಲನು ಮಾತ್ರ ಹಾಗೆ ನಡೆಯಲಿಲ್ಲ. ಆತನ ಸೊಕ್ಕಿನ ನಡತೆಯನ್ನು ನೋಡಿ ಎಲ್ಲರಿಗೂ ಆಶ್ಚರ್ಯವಾಯಿತು. ಇದಕ್ಕಾಗಿ ರಾಮರಾಜನಿಗೂ ಸಿಟ್ಟುಬಂದಿತು. ಆ ತರುಣ ಸರದಾರನ ವಿಷಯವಾಗಿ ರಾಮರಾಜನ ಮನಸ್ಸಿನಲ್ಲಿ ಆರಂಭಕ್ಕೆ ಉತ್ಪನ್ನವಾಗಿದ್ದ ಆದರವು ನಷ್ಟವಾಗಿ, ತಿರಸ್ಕಾರವು ಉತ್ಪನ್ನವಾಯಿತು. ಅದೇ ಕಾಲಕ್ಕೆ ಆ ತರುಣ ವಕೀಲನನ್ನು ಆತನ ಉದ್ಧಟತನದ ಸಲುವಾಗಿ ಎಚ್ಚರಗೊಳಿಸಬೇಕೆಂದು ರಾಮರಾಜನು ಮಾಡಿದ್ದನು; ಆದರೆ ಇನ್ನೂ ತರುಣನಾದ್ದರಿಂದ ಇವನಿಗೆ ದರ್ಬಾರದ ನಡತೆಗಳು ಗೊತ್ತಿರಲಿಕ್ಕಿಲ್ಲೆಂತಲೂ, ಇಂಥ ತರುಣನನ್ನು ವಕೀಲನನ್ನಾಗಿ ಕಳಿಸಿದ್ದರಲ್ಲಿ ಬಾದಶಹನದೇ ತಪ್ಪೆಂತಲೂ ತಿಳಿದು, ಈ ಸಂಬಂಧವಾಗಿ ಬಾದಶಹನನ್ನೇ ಬರೆದು ಕೇಳೋಣವೆಂದು ಆತನು ಸುಮ್ಮನಾದನು. ದರ್ಬಾರದ ಕಾರ್ಯವು ಮುಗಿದು, ಎಲ್ಲರು ತಮ್ಮತಮ್ಮ ಸ್ಥಳಗಳಿಗೆ ಹೊರಟುಹೋದರು. ವಿಜಾಪುರದ ತರುಣ ವಕೀಲನು ತನ್ನ ಕುಂಜವನಕ್ಕೆ ಹೋದನು. ಆತನು ದರ್ಬಾರದಲ್ಲಿ ಔದ್ಧತ್ಯದಿಂದ ನಡಕೊಂಡದ್ದಕ್ಕಾಗಿ ಆತನ ಜನರು ಆತನನ್ನು ಬಹಳವಾಗಿ ಕ್ಷಾಮಿಸಿದರು. ಅವರಲ್ಲಿ ಒಬ್ಬ ಸರದಾರನು ಆ ವಕೀಲನನ್ನು, ಅಂದರೆ ರಣ

ಮಸ್ತಖಾನನನ್ನು ಕುರಿತು—"ನೀವು ಇಂದು ದರ್ಬಾರದಲ್ಲಿ ನಡಕೊಂಡದ್ದು ನಮ್ಮ ಬಾದಶಹರ ಗೌರವಕ್ಕೆ ಒಪ್ಪುವಹಾಗಿತ್ತು. ನಮ್ಮ ಬಾದಶಹರು ವಿಜಯನಗರದ ಮಾಂಡಲೀಕರಲ್ಲಿ ವಿಜಯನಗರದ ರಾಯರ ಸರಿಜೋಡಿಯವರು. ಅವರು ವಿಜಯನಗರದ ರಾಯರಿಗೆ ಬಗ್ಗಿ ಕುರ್ನಿಸಾತ ಮಾಡಲವಶ್ಯವಿಲ್ಲ. ಈ ಮಾತು ದರ್ಬಾರದೊಳಗಿನವರಿಗೆಲ್ಲ ಇಂದು ಚೆನ್ನಾಗಿ ಗೊತ್ತಾಯಿತು. ನಿಮ್ಮ ನಡತೆಯನ್ನು ನೋಡಿ ದರ್ಬಾರದವರೆಲ್ಲರಿಗೂ ಸಿಟ್ಟು ಬಂದಿತು; ಆದರೆ ಸಿಟ್ಟು ಬಂದು ಮಾಡುತ್ತಾರೇನು? ಎಲ್ಲರು ಮುಂಗೈ ಕಡಿಯುತ್ತ ಸುಮ್ಮನೆ ಕುಳಿತುಕೊಂಡರು! ಒಬ್ಬೊಬ್ಬರು ಇಷ್ಟಿಷ್ಟು ಗಡುತರ ಕಣ್ಣು ತೆರೆದು ನಿಮ್ಮನ್ನು ನೋಡುತ್ತಿದ್ದರು; ಆದರೆ ನೋಡಿ ಮಾಡುವದೇನು? ರಾಮರಾಜನಾದರೂ ಕಣ್ಣು ಕೆಕ್ಕರಿಸಿ ಕೆಕ್ಕರಿಸಿ ನಿಮ್ಮನ್ನು ನೋಡುತ್ತಿದ್ದನು; ಆದರೆ ಕಣ್ಣು ಹರಿಯುವಹಾಗೆ ಕೆಕ್ಕರಿಸಿ ನೋಡಿದರೂ ಆಗತಕ್ಕದ್ದೇನು?" ಎಂದು ನುಡಿದು ರಣಮಸ್ತಖಾನನ ಸ್ತೋತ್ರಮಾಡಿದನು. ಅದನ್ನು ಕೇಳಿ ರಣಮಸ್ತಖಾನನು ಬಹಳ ಸಮಾಧಾನಪಟ್ಟು, ಆ ಸರದಾರನನ್ನು ಕುರಿತು—"ನಾವು ಬಾದಶಹನ ಪ್ರತಿನಿಧಿಗಳಾಗಿ ಬಂದಿರುವೆವು. ಪ್ರತ್ಯಕ್ಷ ಬಾದಶಹರು ಬಂದಾಗ ನಡಕೊಳ್ಳುವಂತೆ ನಾವು ಇಲ್ಲಿ ನಡಕೊಳ್ಳಬೇಕಾಗುವದು; ಮತ್ತು ವಿಜಯನಗರದ ರಾಯರು ಬಾದಶಹರಿಗೆ ಮಾನಕೊಡುವಂತೆ ನಮಗೆ ಮಾನಕೊಡಲಿಕ್ಕಬೇಕು. ಆ ರಾಮರಾಜನ ಸೊಕ್ಕು ತಲೆಗೇರಿರುವದು. ತನ್ನ ರಾಜ್ಯದ ಸುತ್ತುಮುತ್ತಲಿನ ಮುಸಲ್ಮಾನ ರಾಜ್ಯಗಳನ್ನು ಮುರಿದು, ಮಹಮ್ಮದ ಪೈಗಂಬರರ ನಿಶಾನಿಯು ಶೋಭಿಸುತ್ತಿದ್ದಲ್ಲಿ, ತಮ್ಮ ಹಿಂದುಗಳ ನಿಶಾನೆಯನ್ನು ಮೆರಿಸಬೇಕೆಂದು ಆತನು ಮಾಡಿರುವನು. ಒಳ್ಳೇದು ನೋಡೋಣ, ಆತನ ಇಚ್ಛೆಯು ಪೂರ್ಣವಾಗುತ್ತದೋ ನಮ್ಮ ಇಚ್ಛೆಯು ಪೂರ್ಣವಾಗುತ್ತದೋ, ಅನ್ನಲು, ಆ ಸರದಾರನು "ಅಲ್‌ಬತ್, ನಮ್ಮ ಇಚ್ಛೆಯೇ ಪೂರ್ಣವಾಗುವದು. ಅದರಲ್ಲಿಯೂ ಈ ಕಾರ್ಯವು ನೀವು ವಕೀಲರಾಗಿರುವಾಗಲೇ ಆಗುವದೆಂದು ನಮಗೆ ತೋರುತ್ತದೆ. ನಿಮ್ಮ ಯೋಗ್ಯತೆಯನ್ನರಿತೇ ಬಾದಶಹರು ಹಲವುಜನ ಅನುಭವಿಕರನ್ನು ಬಿಂದಕ್ಕೆ ದೂಡಿ ನಿಮ್ಮನ್ನು ಇಲ್ಲಿಗೆ ವಕೀಲರನ್ನಾಗಿ ಕಳಿಸಿರುವರು. ನಿಮ್ಮ ಸಾತನ್ನು ಬಾದಶಹರು ಅಕ್ಷರಶಃ ನಡಿಸುವರು. ಈವೊತ್ತಿಗೆ ಬಾದಶಹರ ನಂಬಿಗೆಯು ನಿಮ್ಮ ಮೇಲೆ ಇದ್ದಷ್ಟು, ಬೇರೆ ಯಾರ ಮೇಲೆಯೂ ಇರುವದಿಲ್ಲ" ಎಂದನು.

ಈ ಸ್ತುತಿಪರ ಭಾಷಣದಿಂದ ಆ ತರುಣ ರಣಮಸ್ತಖಾನನಿಗೆ ಬಹಳ ಸಂತೋಷವಾಯಿತು. ಆದರೆ ಅವನು ವಿನಯದಿಂದ ಆ ಸರದಾರನನ್ನು ಕುರಿತು—

"ಬಾದಶಹನು ಕೈಹಿಡಿದರೆ ಬೇಕಾದವನು ಬೇಕಾದಂಥ ದೊಡ್ಡ ಪದವಿಗೇರಬಹುದು. ಈ ಅಧಿಕಾರದ ಮೇಲೆ ನನ್ನನ್ನು ಕಳಿಸುವಷ್ಟು ಯೋಗ್ಯತೆಯು ನನ್ನಲ್ಲಿಲ್ಲೆಂಬದು ನನಗೆ ಗೊತ್ತಿರುತ್ತದೆ; ಆದರೆ ಬಾದಶಹರ ಆಜ್ಞೆಯನ್ನು ಮೀರಲಿಕ್ಕೆ ಬರುವದಿಲ್ಲ. ನಮ್ಮ ಕೈಯಿಂದಾದಷ್ಟು ಯತ್ನಿಸಿ, ಬಾದಶಹರ ಹಿತಮಾಡಲು ಶಕ್ಯವಿದ್ದಮಟ್ಟಿಗೆ ಮಾಡಬೇಕು. ಯಾಕೆ ಫಿದಾಹುಸೇನಖಾನ, ನನ್ನ ಮಾತು ಸರಿಯಾದದ್ದಷ್ಟೇ? ನಿಮ್ಮ, ಹಾಗು ಈ ಅಲ್ಲಿ ಇಮಾಮಖಾನರ ಧೈರ್ಯದಿಂದ ನಾನು ಈ ಅಧಿಕಾರವನ್ನು ಪಡೆದಿರುತ್ತೇನೆ. ಇವರಿಬ್ಬರನ್ನು ನನ್ನ ಸಂಗಡ ಕಳಿಸಿದರೆ ಮಾತ್ರ ನಾನು ವಿಜಯನಗರದಲ್ಲಿ ಹೋಗಿ ನಿಂತು ಕೊಳ್ಳುವೆನು, ಎಂದು ನಾನು ಬಾದಶಹರ ಮುಂದೆ ಸ್ಪಷ್ಟವಾಗಿ ಹೇಳಿದೆನು. ನಾನು ಸುಮ್ಮನೆ ಹೆಸರಿಗೆ ವಕೀಲನು, ನಿಜವಾದ ವಕೀಲರೂ, ಯೋಗ್ಯ ಆಲೋಚನೆಗಳನ್ನು ಹೇಳುವವರೂ ನೀವೇ. ನಿಮ್ಮಿಬ್ಬರನ್ನು ನಾನು ಹಿರಿಯರೆಂದು ಭಾವಿಸಿರುವೆನು" ಎಂದು ಹೇಳಿದನು. ರಾತ್ರಿಯಾದದ್ದರಿಂದ ಎಲ್ಲರೂ ಹೊರಟುಹೋದರು. ತರುಣ ರಣಮಸ್ತಖಾನನ ಮನಸ್ಸಿನಲ್ಲಿ, ನಾನು ಬಾದಶಹನ ಕಾರ್ಯವನ್ನು ಸಾಧಿಸಿ ಹ್ಯಾಗೆ ಆತನ ಪ್ರೀತಿಗೆ ಪಾತ್ರನಾದೇನೆಂಬ ದೊಂದೇಮಾತು ಯಾವಾಗಲೂ ಕಟೆಯುತ್ತಿತ್ತು. ದರ್ಬಾರದಲ್ಲಿ ತಾನು ಉದ್ಧಟತನದಿಂದ ನಡೆದದ್ದಕ್ಕಾಗಿ ತನ್ನ ಜನರು ಶ್ಲಾಘಿಸಿದ್ದರಿಂದ, ಇಂದು ಆತನಿಗೆ ಬಹಳ ಸಂತೋಷವಾಗಿತ್ತು. ತಾನು ಕಡೆತನಕ ಹೀಗೆಯೇ ಶ್ಲಾಘನೆಗೆ ಹ್ಯಾಗೆ ಪಾತ್ರನಾಗುತ್ತಹೋದೇನೆಂಬ ಚಿಂತೆಯಿಂದ ಆತನಿಗೆ ನಿದ್ದೆ ಬರಲೊಲ್ಲದು. ಆತನ ಮನಸ್ಸಿನಲ್ಲಿ ಒಂದರಹಿಂದೊಂದು ಕಲ್ಪನಾತರಂಗಗಳು ಉತ್ಪನ್ನವಾಗಹತ್ತಿದವು. ಈ ಕಲ್ಪನಾತರಂಗಗಳ ಅಬ್ಬೆದಾಟದಿಂದ, ಅಂದು ಬೆಳತನಕ ಆತನಿಗೆ ನಿದ್ದೆ ಬರಲಿಲ್ಲವೆಂದು ಹೇಳಬಹುದು. ಬೆಳಗು ಹರಿಯುತ್ತಿರಲು, ಆತನು ಸ್ವಲ್ಪ ಕಣ್ಣಿಗೆ ಕಣ್ಣು ಹಚ್ಚಿದನು. ನಿದ್ದೆ ಹತ್ತಿ ಇನ್ನೂ ಎರಡು ತಾಸು ಪೂರ್ಣವಾಗಿದ್ದಿಲ್ಲ; ಅಷ್ಟರಲ್ಲಿ ಯಾರೋ ದೊಡ್ಡ ದನಿಯಿಂದ ತನ್ನನ್ನು ಕೂಗಿ ಎಬ್ಬಿಸುವಂತೆ ಆತನಿಗೆ ಭಾಸವಾಗಿ, ಆತನು ಎಚ್ಚತ್ತು ಲಗಬಗೆಯಿಂದ ಹೋಗಿ ಬಾಗಿಲು ತೆರೆದನು. ಆಗ ಆತನ ಸಿಪಾಯಿಯು ಸಾಷ್ಟಾಂಗ ನಮಸ್ಕಾರ ಹಾಕಿ, ಕೈಯನ್ನು ರುಮಾಲದಿಂದ ಕಟ್ಟಿಕೊಂಡ ಹಾಗೆ ಮಾಡಿ—"ಗರೀಬ ಪರವರ, ತಮ್ಮನ್ನು ಸುಖನಿದ್ರೆಯಿಂದ ಎಚ್ಚರಗೊಳಿಸಿದ ಉದ್ಧಟತನಕ್ಕಾಗಿ ಈ ದಾಸನನ್ನು ಕ್ಷಮಿಸುವದಾಗಬೇಕು. ತಮ್ಮ ಪರಮ ಪೂಜ್ಯ ಮಾತೃಶ್ರೀ ಯವರ ಅಪ್ಪಣೆಯಿಂದ ಹೀಗೆ ಮಾಡಿದೆನು. ಅವರು ತಮ್ಮನ್ನು ಬೇಗನೆ ಕರೆಯಹೇಳಿದ್ದಾರೆ" ಅನ್ನಲು, ರಣಮಸ್ತಖಾನನು—ಏನು! ನಮ್ಮ ಮಾಸಾ

ಹೇಬರು ನನ್ನನ್ನು ಕರೆದಿದ್ದಾರೆಯೇ? ಹೋಗು, ಬೇಗನೆ ಬಿಸಿನೀರು ತಕ್ಕೊಂಡು ಬಾ. ಮೋರೆ ತೊಳಕೊಂಡು, ನಮಾಜು ಮಾಡಿ ಬರುವೆನು, ಎಂದು ಹೇಳಿದನು. ಆಗ ಸಿಪಾಯಿಯು ಓಡುತ್ತ ಹೋಗಿ, ಅಪ್ಪಣೆಯಂತೆ ಬಿಸಿನೀರು ತಂದು, ರಣಮಸ್ತಖಾನನ ಕೈಗೂ ಕಾಲಿಗೂ ಹಾಕಿ ಆತನ ಕೈಕಾಲುಗಳನ್ನು ಒರಿಸಿದನು. ರಣಮಸ್ತಖಾನನು ಮೋರೆಯನ್ನು ಒರಿಸಿಕೊಂಡು, ನಮಾಜು ಮಾಡಿ ತಾಯಿಯ ಬಳಿಗೆ ಹೋದನು.

ಗಿಣಿಯ ಪ್ರಕರಣ:—ಜಾಜ್ವಲ್ಯವೃತ್ತಿಯು.

ರಣಮಸ್ತಖಾನನ ತಾಯಿಯು, ಕುಂಜಪಸದ ಬಂಗಲೆಯೊಳಗಿನ ಒಂದು ಕೋಣೆಯಲ್ಲಿ ಒತ್ತಟ್ಟಿಗೆ ಇದ್ದಹಾಗೆ ಇದ್ದಳು. ಆಕೆಯ ವಯಸ್ಸು ಸರಾಸರಿ ಐವತ್ತು ವರ್ಷದ್ದಿರಬಹುದು. ಆಕೆಯು ಒಬ್ಬ ಸಾಧು ಸ್ತ್ರೀಯಂತೆ ಕಾಲಹರಣ ಮಾಡುತ್ತಿದ್ದಳು. ಒಬ್ಬ ಬಡಫಕೀರಿಯು, ಮಸೀದಿಯ ನುತವಲ್ಲಿಯು ದಯ ಮಾಡಿ ಕೊಟ್ಟಿದ್ದ ಮಸೀದಿಯ ಒಂದು ಕೋಣೆಯಲ್ಲಿ ಇರುವಂತೆ, ಆಕೆಯು ತನ್ನ ಮಗನ ಬಂಗಲೆಯ ಒಂದು ಕೋಣೆಯಲ್ಲಿ ಇರುತ್ತಿದ್ದಳೆಂದು ಹೇಳ ಬಹುದು. ಆ ಕೋಣೆಯಲ್ಲಿ ಒಂದು ನವಾರದ ಹೊರಸು, ಆ ಹೊರಸಿನ ಮೇಲೆ ಏನೋ ಒಂದು ಚವ್ವಾಳಿಯ ಹಾಗೆ ಒಗೆದದ್ದು; ತಲೆಗಿಂಬಿನ ಸಿಟ್ಟಿಗೆ ಚೌರಂಗದ ಮೇಲೆ ಕುರಾಣ, ಹಾಗು ಸಾಧು ಸತ್ಪುರುಷರ ಚರಿತ್ರೆಯ ನಾಲ್ಕಾರು ಪುಸ್ತಕಗಳು; ಅಲ್ಲಿಯೇ ಸಮೀಪದಲ್ಲಿ ಒಂದು ಸರ್ವಸಾಧಾರಣವಾದ ಸಮೆಯು; ಕೆಲವು ಹಸರು-ಹಳದಿ ಮಣಿಗಳು ಪೋಣಿಸಿದ ಜಪಮಾಲೆಯು; ಸೀರಿನಿಂದ ತುಂಬಿದ ಕೆಲವು ಪಾತ್ರೆಗಳು, ಇನಿಷ್ಟು ಒಡವೆಗಳು ಇದ್ದವು. ಕೋಣೆಯಲ್ಲಿ ಲೋಭಾನವು (ಊದು) ವಿಶೇಷವಾಗಿ ಸುಡಲ್ಪಟ್ಟಿದ್ದರಿಂದ, ಅದರ ವಾಸನೆಯು ಕೋಣೆಯ ತುಂಬ ಇಡಿಗಿತ್ತು. ಕೋಣೆಯ ಹೊರಗೆ ಮೂರು ನಾಲ್ಕು ಜನ ಮುದುಕ-ಮುದುಕ ದಾಸಿಯರು ಕುಳಿತಿದ್ದರು. ಹಾಗಲ ಹಣ್ಣಿನಂತೆ ತೀರ ಮುದುಕೆಯಾದ ಒಬ್ಬ ಸ್ತ್ರೀಯು ಕೋಣೆಯೊಳಗೆ ಚೌರಂಗದ ಹತ್ತರ ಕುಳಿತಿದ್ದು, ರಣಮಸ್ತಖಾನನ ತಾಯಿಯು ಪುಸ್ತಕವನ್ನು ಅರ್ಥ ತೆರೆದು ಗಟ್ಟಿಯಾಗಿ ಓದಿ, ಆಕೆಗೆ ಅರ್ಥ ಮಾಡಿ ಹೇಳುತ್ತಿದ್ದಳು. ಹೀಗಿರುವಾಗ ರಣಮಸ್ತಖಾನನು ಒಳಗೆ ಹೋಗಿ, ಕೂಡಲೆ ಮಾಸಾಹೇಬರನ್ನು ವಿನಯದಿಂದ ನಮಸ್ಕರಿಸಿ—

ರಣಮಸ್ತಖಾನ—ತಮ್ಮ ಅಪ್ಪಣೆಯಂತೆ ಬಂದಿದ್ದೇನೆ. ತಮ್ಮ ಪ್ರಕೃತಿಯು ನೆಟ್ಟಗಿರುತ್ತದಷ್ಟೇ? ನಿನ್ನೆ ದರ್ಬಾರದಲ್ಲಿ ನಡೆದ ಸಂಗತಿಯನ್ನು ನಿನ್ನೆ

ರಾತ್ರಿಯೇ ಬಂದು ನಿವೇದಿಸತಕ್ಕವನಿದ್ದೆನು ; ಆದರೆ ಶೋಧಮಾಡಲಾಗಿ ತಾವು ಜಪಮಾಡುತ್ತ ಕುಳಿತಿರುವಿರೆಂದು ಸುದ್ದಿ ಬಂದದ್ದರಿಂದ, ತಮಗೆ ಉಪದ್ರವ ಕೊಡಲಿಕ್ಕೆ ಬರಲಿಲ್ಲ.

ಮಾಸಾಹೇಬ—ನೀನು ಬಾರದೆಯಿದ್ದದ್ದು ವಿಹಿತವೇ ಸರಿ ; ಆದರೆ ದರ್ಬಾರದ ಸುದ್ದಿಯನ್ನು ಕೇಳದಿದ್ದರೆ ನನಗೆಲ್ಲಿ ಸಮಾಧಾನವಾಗಬೇಕು? ನಾನು ಅನ್ಯರ ಮುಖದಿಂದ ಎಲ್ಲ ವೃತ್ತಾಂತವನ್ನು ಕೇಳಿದ್ದೇನೆ. ನೀನು ಬಹಳ ಒಳ್ಳೆಯ ಕೆಲಸ ಮಾಡಿದೆ. ಬಾದಶಹರ ಗೌರವಕ್ಕೆ ಒಪ್ಪುವಂತೆಯೇ ನೀನು ನಡೆಯಲಿಕ್ಕೆಬೇಕು ; ಆದರೆ ನಾನು ನಿನ್ನನ್ನು ಈಗ ಕರೆಸಿದ ಕಾರಣವು ಬೇರೆಯಿರುತ್ತದೆ ಅಹಮ್ಮದನಗರದಿಂದ ವಿಜಾಪುರಕ್ಕೆ ಹೋಗುವನನ್ನೊಬ್ಬನು ಸೂರ್ಯೋದಯವಾಗುವವಕ್ಕೆ ಮುಂಚಿತವಾಗಿ ಬಂದು, ನನ್ನ ಮುಂದೆ ತನ್ನ ವೃತ್ತಾಂತನನ್ನೆಲ್ಲ ಹೇಳಿದನು. ನಾನು ಆತನಿಗೆ ಅಭಯವನ್ನಿತ್ತು ಕುಳ್ಳಿರಿಸಿರುತ್ತೇನೆ. ನೀನು ಆತನ ಬಾಯಿಂದ ಎಲ್ಲ ಸಂಗತಿಯನ್ನು ಕೇಳಿಕೋ. ಇಂಥವರಿಗೆ ಅಭಯಕೊಡುವದು ನನ್ನ ಕರ್ತವ್ಯವಾಗಿರುತ್ತದೆ. ಎಲ್ಲ ಸಂಗತಿಯನ್ನು ಕೇಳಿಕೊಂಡನಂತರ, ನಿನ್ನ ಯೋಗ್ಯತೆಗೆ ಅನುರೂಪವಾಗಿ ನಡೆದುಕೋ. ನೀನು ಹಾಗೆ ನಡೆದುಕೊಳ್ಳುತ್ತೀಯೆಂಬದರಲ್ಲಿ ನನಗೆ ಸಂಶಯವಿಲ್ಲ. ನೀನು ಆ ವೃತ್ತಾಂತವನ್ನು ಕೇಳಿಕೊಂಡ ಮೇಲೆ ಸಂತಾಪಗೊಂಡು, ನನ್ನ ಕರ್ತವ್ಯವೆಂದು ತಿಳಿದು, ನೀನು ಅದನ್ನು ಮನಃಪೂರ್ವಕವಾಗಿ ಮಾಡೇ ಮಾಡುವೆ. ಮನುಷ್ಯರಿಗೆ ಎಚ್ಚರವಿಲ್ಲದ ಹಾಗೆ ಆಗಿದೆ. ತಾವು ಮಾಡಿದ್ದೇ ಪ್ರಮಾಣವೆಂದು ಅವರು ತಿಳಿದಿದ್ದಾರೆ! ಅವರಿಗೆ ನ್ಯಾಯವಿಲ್ಲ, ನೀತಿಯಿಲ್ಲ, ಅವರ ಉನ್ಮತ್ತತನವು ತಲೆಗೇರಿರುತ್ತದೆ!

ರಣಮಸ್ತಖಾನ—ಮಾಸಾಹೇಬ, ತಾವು ಎಂದೂ ಸಿಟ್ಟಿನಿಂದ ಒಂದು ಶಬ್ದವನ್ನು ಕೂಡ ಉಚ್ಚರಿಸತಕ್ಕವರಲ್ಲ. ಹೀಗಿದ್ದು ಇಂದು ತಾವು ಇಷ್ಟು ಸಂತಾಪಗೊಳ್ಳಲಿಕ್ಕೆ ಕಾರಣವೇನು? ಯಾರಾದರೂ ತಮ್ಮ ಉಪಮರ್ದಮಾಡಿದರೋ, ಅಥವಾ ಯಾರಾದರೂ.....

ಮಾಸಾಹೇಬ—ಅಪ್ಪಾ, ನಿನ್ನಂಥ ಸಮರ್ಥ ಮಗನು ಮೂರ್ತಿಮತ್ತಾಗಿ ನನ್ನ ಹತ್ತರ ಇರುತ್ತಿರಲಿಕ್ಕೆ ಅದಾರು ನನ್ನ ಉಪಮರ್ದಮಾಡುವರು! ಆದರೆ ನನ್ನಂಥ ಬೇರೆ ಒಬ್ಬ ಸ್ತ್ರೀಯ, ಅಥವಾ ನಿನ್ನ ಒಡಹುಟ್ಟಿದ ತಂಗಿಯಂತೆ ಇದ್ದ ಒಬ್ಬ ತರುಣಿಯ ಉಪಮರ್ದವಾದರೆ, ನನ್ನ ಉಪಮರ್ದವಾದ ಹಾಗಾಗಲಿಲ್ಲವೆ? ಅದರ ಪರಿಮಾರ್ಜನವನ್ನು ನಾವು ಮಾಡಿಕೊಳ್ಳಲಾಗದೋ? ಅಹಮ್ಮದನಗರದ

ಆ ಒಬ್ಬ ಮನುಷ್ಯನು, ನೀನು ಬಾದಶಹನ ದೊಡ್ಡ ವಕೀಲನೆಂದು ತಿಳಿದು, ನಿನ್ನ ಮುಂದೆ ತನ್ನ ಸಂಕಟವನ್ನು ದೂರಿಕೊಳ್ಳಲಿಕ್ಕೆ ಬಂದಿದ್ದನು; ಆದರೆ ನೀನು ಇನ್ನೂ ಇದ್ದಿಲ್ಲೆಂದು ಹೇಳಲು, ಆತನು ನಿರಾಶೆಯಿಂದ—"ಹಾಗಾದರೆ ಇನ್ನು ನಮ್ಮ ದೂರು ಯಾರು ಕೇಳಬೇಕು" ಎಂದು ಗಟ್ಟಿಯಾಗಿ ಅನ್ನುತ್ತಿದ್ದನು. ಅದನ್ನು ನಾನು ಇಲ್ಲಿಂದಲೇ ಕೇಳಿ ಆತನನ್ನು ಕರಿಸಿಕೊಂಡು, ಆತನ ಎಲ್ಲ ವೃತ್ತಾಂತವನ್ನು ಕೇಳಿಕೊಂಡೆನು. ಆಗ ನನಗೆ ಸರ್ವಾಂಗದಲ್ಲಿ ಸಂತಾಪವು ಉತ್ಪನ್ನವಾಯಿತು. ಕೂಡಲೆ ನಾನು ನಿನ್ನನ್ನು ಕರೆಯಕಳಿಸಿದೆನು. ಈಗ ಆ ಮನುಷ್ಯನನ್ನು ಇಲ್ಲಿಗೇ ಕರಿಸುತ್ತೇನೆ. ನೀನು ಆತನ ಮುಖದಿಂದ ಎಲ್ಲ ವೃತ್ತಾಂತವನ್ನು ಕೇಳಿಕೋ, ಎಂದು ಹೇಳಿ, ಮಾಸಾಹೇಬರು ಆ ಮನುಷ್ಯನನ್ನು ಕರೆಯಲಿಕ್ಕೆ ತಮ್ಮ ದಾಸಿಯನ್ನು ಕಳಿಸಿದರು.

ದಾಸಿಯು ಕರೆದ ಕೂಡಲೆ, ಆ ಮನುಷ್ಯನು ಬಂದು ರಣಮಸ್ತಖಾನನ, ಹಾಗು ಆತನ ತಾಯಿಯ ಮುಂದೆ ಮೊಣಕಾಲೂರಿ, ಮೂರು ಮೂರು ಸಾರೆ ನೆಲಕ್ಕೆ ಹಣೆ ಹಚ್ಚಿ, ತನ್ನ ತಲೆಯ ಮೇಲಿನ ಮುಂಡಾಸವನ್ನು ತೆಗೆದಿಟ್ಟು, ಕೈ ಜೋಡಿಸಿ—ಗರೀಬಪರವರ, ಅಹಮ್ಮದನಗರದ ಸರದಾರನಾದ ಹುಸೇನಅಲ್ಲಿ ಎಂಬವನ ಮಗಳು, ವಿಜಾಪುರದಲ್ಲಿರುವ ತನ್ನ ಅಬಚಿಯ ಮನೆಗೆ, ನಾಲ್ಕುದಿನ ಇದ್ದು ಬರಬೇಕೆಂದು ಹೊರಟಿದ್ದಳು. ಸಂಗಡ ನನ್ನಂಥ ೮-೧೦ ಜನರನ್ನು ಕರಕೊಂಡು ಸ್ವತಃ ಆಕೆಯ ತಂದೆಯು ಬಂದಿದ್ದನು. ನಮ್ಮ ಸಂಗಡ ಶಸ್ತ್ರಾಸ್ತ್ರಗಳು ಇದ್ದವು. ಹೀಗೆ ಒಳ್ಳೇ ಬಂದೋಬಸ್ತಿನಿಂದ ನಾವು ವಿಜಯನಗರದ ರಾಜ್ಯದ ಗಡಿಯಲ್ಲಿ ಬರಲು, ವಿಜಯನಗರದ ಕೆಲವು ಪುಂಡರು, ನಮ್ಮನ್ನೂ, ನಮ್ಮ ಸಂಗಡಿಗರಾದ ಬೇರೆ ಪ್ರವಾಸಿಕರನ್ನೂ ಸುಲಿದರು. ನಮ್ಮ ಬಳಿಯಲ್ಲಿಯ ಒಂದು ಪೈಯನ್ನು, ಒಂದು ಚಲೋ ಅರಿವೆಯನ್ನು ಸಹ ಅವರು ಬಿಡಲಿಲ್ಲ. ಸುಲಿಸಿಕೊಂಡವರಲ್ಲಿ ಹೆಂಗಸರು ನಾಲ್ಕು ಜನರಿದ್ದರು. ನಮ್ಮ ಹುಸೇನಲ್ಲಿಯ ಹದಿನೇಳು ವರ್ಷದ ಮಗಳೊಬ್ಬಳು, ಆಕೆಯ ದಾಸಿಯರಿಬ್ಬರು, ಇನ್ನೊಬ್ಬ ಗೃಹಸ್ಥನ ಹೆಂಡತಿಯೊಬ್ಬಾಕೆಯು. ಸುಲಿಗೆಯಾದ ಮೇಲೆ ದಾರಿ ಸಿಕ್ಕಷ್ಟ ನಮ್ಮ ಸಂಗಡಿಗರೆಲ್ಲರು ಓಡಿಹೋಗಿಬಿಟ್ಟರು. ನಮ್ಮ ಜನರು, ಯಜಮಾನನ, ಹಾಗು ಆತನ ಮಗಳ ಸಂರಕ್ಷಣದ ಸಲುವಾಗಿ ಬಹಳ ಹೆಣಗಾಡಿದರು. ಹೊಡೆದಾಟದಲ್ಲಿ ನಮ್ಮ ಒಡೆಯನಾದ ಹುಸೇನಅಲ್ಲಿಖಾನನು ಮರಣ ಹೊಂದಿದನು. ಅವರಂತೆ ಬೇರೆ ಏಳೆಂಟು ಜನರು ಮರಣಹೊಂದಿದರು. ನಮ್ಮ ಸರದಾರನ ಮಗಳನ್ನೂ, ಆಕೆಯ ಇಬ್ಬರು ದಾಸಿಯರನ್ನೂ ನಮ್ಮಿಬ್ಬರನ್ನೂ ಆ ದುಷ್ಟರು ಸೆರೆಹಿಡಿದು, ರಾಜದರ್ಬಾರಕ್ಕೆ ಕರಕೊಂಡು ಹೋಗಲು

ನಿಶ್ಚಯಿಸಿದರು. ಇನ್ನು ಗುದ್ಯಾಡಿದರೆ ಪ್ರಯೋಜನವಾಗದೆಂದು ತಿಳಿದು ನಾವು ಸುಮ್ಮನೆ ಆ ತುಂಟರ ಅಧೀನವಾಗಿ, ವಿನಯದ ಸೋಗಿನಿಂದ ಅವರೊಡನೆ ಮಾರ್ಗಕ್ರಮಣಮಾಡಹತ್ತಿದೆವು. ವಿಜಾಪುರದ ಬಾದಶಹನ ವಕೀಲನು ವಿಜಯನಗರದಲ್ಲಿರುವನೆಂಬದು ನನಗೆ ಗೊತ್ತಿತ್ತು; ಆದ್ದರಿಂದ ಹ್ಯಾಗಾದರೂ ಮಾಡಿ ಈ ಸುದ್ದಿಯನ್ನು ವಕೀಲಸಾಹೇಬರ ಕಿವಿಗೆ ಮುಟ್ಟಿಸಿದರೆ, ಹೆಂಗಸರ ಮಾನವುಳಿದೀತೆಂದು ತಿಳಿದು, ನಾನು ಕಾವಲುಗಾರರ ಕಣ್ಣು ತಪ್ಪಿಸಿ ನಿಮ್ಮ ಕಡೆಗೆ ಬಂದೆನು. ರಾಜದರ್ಬಾರಕ್ಕೆ ಹೋದ ಬಳಿಕ ಹೆಣ್ಣು ಮಕ್ಕಳ ಮೇಲೆ ಎಂಥ ಪ್ರಸಂಗ ಬರುವದೋ ಏನೋ....''

ರಣಮಸ್ತಖಾನನು ಆ ಮನುಷ್ಯನ ಮಾತುಗಳನ್ನೆಲ್ಲ ಲಕ್ಷಪೂರ್ವಕವಾಗಿ ಕೇಳಿಕೊಂಡನು. ಆ ಮಾತುಗಳ ತಾತ್ಪರ್ಯವು ಆತನ ಮನಸ್ಸಿಗೆ ನಟ್ಟು, ಆತನು ಸ್ಫೂರ್ತಿಗೊಂಡಿದ್ದನು. ಆತನು ಇದಕ್ಕೇನು ಮಾಡಬೇಕೆಂದು ತನ್ನೊಳಗೆ ಆಲೋಚಿಸಹತ್ತಿದನು. ರಾಮರಾಜನು ಮುಸಲ್ಮಾನರ ಉಪಮರ್ದ ಮಾಡುವಲ್ಲಿ ಬಹ್ಮಕಂಕಣನೆಂದು ರಣಮಸ್ತಖಾನನು ಕೇಳಿದ್ದನು; ಆದರಂತೆ ಮುಸಲ್ಮಾನ ಸ್ತ್ರೀಯರ ಸಂಗಡ ರಾಮರಾಜನ ನಡತೆಯು, ಶೂರರಿಗೆ ಒಪ್ಪುವ ಹಾಗೆ ಇರುವದಿಲ್ಲೆಂಬ ಅಪಕೀರ್ತಿಯೂ ಎಲ್ಲ ಕಡೆಗೆ ಹಬ್ಬಿತ್ತು. ಇದನ್ನೆಲ್ಲ ಮನಸ್ಸಿನಲ್ಲಿ ತಂದು ರಣಮಸ್ತಖಾನನು, ಸದ್ಯದ ಪ್ರಸಂಗದಲ್ಲಿಯಾದರೂ ಆ ಮುಸಲ್ಮಾನ ಸ್ತ್ರೀಯರ ಅಪಮಾನವನ್ನು ಮಾಡಗೊಡದೆ, ಅವರನ್ನು ತನ್ನ ಸಂಗಡ ಕುಂಜವನಕ್ಕೆ ಕರಕೊಂಡು ಬರಬೇಕೆಂದು ನಿಶ್ಚಯಿಸಿದನು. ಆತನು ಆ ಮನುಷ್ಯನಿಗೆ—"ಇಷ್ಟು ಹೊತ್ತಿಗೆ ನಿಮ್ಮ ಸಂಗಡಿಗರು ವಿಜಯನಗರವನ್ನು ಮುಟ್ಟಿರಬಹುದೇನು,'' ಎಂದು ಕೇಳಲು, ಆ ಮನುಷ್ಯನು—ಇನ್ನೂ ಮುಟ್ಟಿರಲಿಕ್ಕಿಲ್ಲ. ಇಂದು ಒಂಭತ್ತು ತಾಸಿನ ಸುಮಾರಕ್ಕೆ ಅವರು ವಿಜಯನಗರಕ್ಕೆ ಮುಟ್ಟಬಹುದು. ಅವರು ರಾತ್ರಿಯಲ್ಲಿ ಹಾದಿಯನ್ನು ನಡೆದಿರುವದಿಲ್ಲ. ರಾತ್ರಿಯಾದ್ದರಿಂದಲೇ ನನಗೆ ತಪ್ಪಿಸಿಕೊಂಡು ಬರಲಿಕ್ಕೆ ಅನುವುದೊರೆಯಿತು, ಎಂದು ಹೇಳಿದನು. ಅದಕ್ಕೆ ರಣಮಸ್ತಖಾನನು—"ಏನೂ ಚಿಂತೆಯಿಲ್ಲ, ನೀವು ಸ್ವಸ್ಥವಾಗಿ ಇರ್ರಿ. ಆ ಜನರು ಸುರಕ್ಷಿತವಾಗಿ ನಮ್ಮ ಮಾಸಾಹೇಬರ ಬಳಿಗೆ ಬರುವವರೆಗೆ ನಾನು ಅನ್ನಗ್ರಹಣಮಾಡುವದಿಲ್ಲ,'' ಎಂದು ಪ್ರತಿಜ್ಞೆಮಾಡಿ, ತನ್ನ ತಾಯಿಯ ಕಡೆಗೆ ಬಹು ವಿನಯದಿಂದ ಭಕ್ತಿಪೂರ್ವಕವಾಗಿ ಒಮ್ಮೆ ನೋಡಿ ಅಲ್ಲಿಂದ ತಟ್ಟನೆ ಹೊರಟು ಹೋದನು. ಆತನ ಪ್ರತಿಜ್ಞೆಯನ್ನು ಕೇಳಿ ಮಾಸಾಹೇಬರಿಗೆ ಬಹಳ ಸಂತೋಷವಾಯಿತು. ರಣಮಸ್ತಖಾನನಿಗೆ ಆತನ ತಾಯಿಯು ಬಹು ವಂದ್ಯಳಾಗಿದ್ದಳು.

ಆತನು ದೇವರ ಮೇಲಿಟ್ಟಷ್ಟು ಭಕ್ತಿಯನ್ನು ತನ್ನ ತಾಯಿಯಮೇಲೆ ಇಟ್ಟಿದ್ದನು. ತಾಯಿಯ ಮಾತನ್ನು ಆತನು ಸರ್ವಥಾ ಮೀರುತ್ತಿದ್ದಿಲ್ಲ.

ರಣಮಸ್ತಖಾನನು ತಾಯಿಯ ಬಳಿಯಲ್ಲಿ ಪ್ರತಿಜ್ಞೆಮಾಡಿ ಹೊರಟವನು ತನ್ನ ಸ್ಥಳಕ್ಕೆ ಬಂದನು. ಈಗ ಆತನು ಬಹಳ ರೊಚ್ಚಿಗೆದ್ದಿದ್ದನು. ತನ್ನ ಪ್ರತಿಜ್ಞೆಯನ್ನು ಯಾವಾಗ ಪೂರ್ಣ ಮಾಡೇನೆಂಬ ಆತುರವು ಅವನಿಗೆ ವಿಶೇಷವಾಗಿತ್ತು. ಆತನು ರಾಮರಾಜನ ತನಕ ತಾನೇ ತಪ್ಪಸೆ ಹೋಗಿ, ನಡೆದ ಸಂಗತಿಯನ್ನು ಆತನಿಗೆ ಹೇಳಿ, ಬೇಗನೆ ಕೆಲಸಮಾಡಿಕೊಳ್ಳಬೇಕೆಂದು ಮಾಡಿದನು; ಆದರೆ ತಾನು ಪತ್ರವನ್ನು ಬರೆದು ಕಳಿಸಿದರೆ ಕೆಲಸವಾದೀತೆಂದು ತಿಳಿದು, ತಾನು ಹೋಗುವದನ್ನು ಉದಾಸೀನ ಮಾಡಿದನು. ಹರೆಯದವನಬ್ಬ, ರಾಮರಾಜನು ನನ್ನ ಮಾತು ಯಾಕೆ ಕೇಳುವದಿಲ್ಲೆಂಬ ಸೊಕ್ಕು, ನಾನು ವಿಜಾಪುರದ ಬಾದಶಹನ ವಕೀಲನೆಂಬ ಪೌಲು, ಇವೆಲ್ಲವುಗಳ ಯೋಗದಿಂದ ತನ್ನ ಮಾತನ್ನು ರಾಮರಾಜನು ನಡಿಸಿಯೇ ತೀರುವನೆಂದು ತಿಳಿದು, ರಣಮಸ್ತಖಾನನು ರಾಮರಾಜನಿಗೆ ಒಂದು ಪತ್ರವನ್ನು ಬರೆದು, ಒಬ್ಬ ಸೇವಕನ ಕೈಯಲ್ಲಿ ಕೊಟ್ಟು, ವಿಜಯನಗರಕ್ಕೆ ಕಳಿಸಿದನು. ಆ ಸೇವಕನು ಸ್ವಲ್ಪ ದೂರ ಹೋದನೋ ಇಲ್ಲವೋ ಮತ್ತೆ ಆತನನ್ನು ಕರೆಸಿ—" ನಿನ್ನ ಕುದುರೆಯು ನೆಟ್ಟಗೆ ನಡೆಯಲಿಕ್ಕಿಲ್ಲ. ಅಶ್ವ ಶಾಲೆಯೊಳಗಿನ ಒಂದು ಚಲ್ಲೋಕುದುರೆಯನ್ನು ತಕ್ಕೊಂಡು ಹೋಗು " ಎಂದು ಹೇಳಿ ಆತನನ್ನು ಕಳಿಸಿದನು. ಆ ಸೇವಕನು ಅಶ್ವಶಾಲೆಯನ್ನು ಮುಟ್ಟುವದರೊಳಗೆ ರಣಮಸ್ತಖಾನನು ಮತ್ತೊಬ್ಬ ಸೇವಕನನ್ನು ಕರೆದು—" ನೋಡು, ಅವನಿಗೆ ಒಳ್ಳೆಯ ಕುದುರೆಯು ಸಿಕ್ಕುತೋ ಇಲ್ಲವೋ " ಎಂದು ಹೇಳಿ ಕಳಿಸಿ, ಕೂಡಲೆ " ಈ ಕೆಲಸದಲ್ಲಿ ಮಂದಿಯ ಮೇಲೆ ನಂಬಿಗೆಯಿಡುವದು ಯೋಗ್ಯವಲ್ಲ " ಎಂದು ತಾನೇ ಅಶ್ವಶಾಲೆಗೆ ಹೋಗಿ, ಸೇವಕನು ಆರಿಸಿದ ಕುದುರೆಯು ತಕ್ಕದ್ದಲ್ಲವೆಂದು ಬಿಡಿಸಿ, ತನ್ನ ಪ್ರೀತಿಯ ಕುದುರೆಯನ್ನು ಆತನಿಗೆ ಕೊಡಿಸಿದನು. ಅಷ್ಟರಲ್ಲಿ ಆತನ ವಿಚಾರಪು ಮತ್ತೆ ಬದಲಾಗಿ, ಆತನು ಹೊರಟುನಿಂತ ಸೇವಕನನ್ನು ಕುರಿತು—ನಿಲ್ಲು, ನೀನು ಹೋಗಿ ಪತ್ರದ ಉತ್ತರ ತರಬೇಕು, ಆಮೇಲೆ ನಾನು ಇಲ್ಲಿಂದ ಹೋಗಬೇಕು, ಇಷ್ಟು ವಿಲಂಬವನ್ನಾದರೂ ಯಾಕೆ ಮಾಡಬೇಕು? ನಾನೂ ನಿನ್ನ ಸಂಗಡ ಬಂದುಬಿಡುತ್ತೇನೆ. ನೀನು ರಾಮರಾಜನ ಬಳಿಗೆ ಹೋಗಿ ಪತ್ರದ ಉತ್ತರವನ್ನು ತರುವವರೆಗೆ, ನಾನು ವಿಜಯನಗರದ ಅಗಸೆಯ ಹೊರಗೆ ನಿಂತುಕೊಳ್ಳುವೆನು. ನೀನು ಬೇಗನೆ ಉತ್ತರವನ್ನು ತಕ್ಕೊಂಡು ಬಾ, ಎಂದು ಹೇಳಿ, ತನ್ನ ಕುದುರೆಗೆ ಜೀನು ಹಾಕಿಸಿ, ಅವ

ಸರದಿಂದ ಪೋಷಾಕು ಹಾಕಿಕೊಂಡು, ಕುದುರೆಯನ್ನು ಹತ್ತಿ ವಿಜಯನಗರದ ಕಡೆಗೆ ಸಾಗಿದನು. ಅತ್ಯಂತ ಆತುರಸ್ವಭಾವದ ಆ ತರುಣನಿಗೆ ಎಷ್ಟು ಒತ್ತರದಿಂದ ನಡೆದರೂ ಹಾದಿಯು ಸವೆದಂತೆ ಆಗಲೊಲ್ಲದು. ಆತನಿಗೆ ತಾನು ಯಾವಾಗ ವಿಜಯನಗರಕ್ಕೆ ಹೋದೇನು, ಯಾವಾಗ ಕೆಲಸತೀರಿಸಿಕೊಂಡು ತನ್ನ ಮಾಸಾಹೇಬರಿಗೆ ಭೆಟ್ಟಿಯಾದೇನು ಅನ್ನುವ ಹಾಗೆ ಆಗುತ್ತು. ಕೆಲ ಹೊತ್ತಿನಮೇಲೆ ವಿಜಯನಗರದ ಅಗಸೆಯ ಬಾಗಿಲುಗಳು ಕಾಣಹತ್ತಿದವು. ಆಗ ರಣಮುಸ್ತಖಾನನು ತನ್ನ ಸೇವಕನಿಗೆ—ನೀನು ಇನ್ನು ಬೇಗನೆ ನಡೆ, ನಾನು ಸಾವಕಾಶಬರುವೆನು. ನೀನು ಬರುವವರೆಗೆ ನಾನು ಅಗಸೆಯ ಹೊರಗೆ ಇರುತ್ತೇನೆ, ಎಂದು ಹೇಳಿ, ತಾನು ಮೆಲ್ಲನೆ ಸಾಗಹತ್ತಿದನು. ಆತನ ಮನಸ್ಸಿನಲ್ಲಿ ಹಲವು ವಿಚಾರಗಳು ಉತ್ಪನ್ನವಾದವು. ಈಗ ಆ ಅಹಮ್ಮದನಗರದ ಜನರು ಇಲ್ಲಿ ನನಗೆ ಭೆಟ್ಟಿಯಾದರೆ, ಅವರನ್ನು ಇಲ್ಲಿಂದಲೇ ನನ್ನ ಸಂಗಡ ಕರಕೊಂಡು ಕುಂಜವನಕ್ಕೆ ಹೋಗಿಬಿಡುತ್ತೇನೆ. ಆಮೇಲೆ ರಾಮರಾಜನು ಮಾಡುವದು ಮಾಡಲಿ, ಎಂದು ಆಲೋಚಿಸುತ್ತ ಹಿಂದಕ್ಕೆ ತಿರುಗಿ ನೋಡುತ್ತಿರಲು, ದೂರ ಯಾರೋ ಜನರು ಗುಂಪುಮಾಡಿ ಬರುವಂತೆ ಅವನಿಗೆ ತೋರಿತು. ಆ ಜನರು ಸ್ವಲ್ಪ ಮುಂದಕ್ಕೆ ಬರಲು, ಅವರ ನಡುವೆ ಒಂದು ಮೇಣೆಯಿದ್ದಿದ್ದು ಖಾನನ ಕಣ್ಣಿಗೆ ಬಿದ್ದಿತು. ಅವರೇ ಅಹಮ್ಮದನಗರದವರಿರಬೇಕೆಂದು ಆತನು ತರ್ಕಿಸಿ, ತನ್ನ ಕುದುರೆಯನ್ನು ನಿಲ್ಲಿಸಿದನು. ಆ ಜನರು ಸಮೀಪಕ್ಕೆ ಬಂದಕೂಡಲೆ, ರಣಮುಸ್ತಖಾನನು ಅವರನ್ನು ಕುರಿತು ದರ್ಪದಿಂದ—ಯಾರು ನೀವು? ಈ ಮೇಣೆಯೊಳಗಿನ ಸ್ತ್ರೀಯನ್ನು ಎಲ್ಲಿಗೆ ಕರಕೊಂಡು ಹೋಗುತ್ತೀರಿ? ನನ್ನ ಪ್ರಶ್ನೆಗಳಿಗೆ ಉತ್ತರಕೊಟ್ಟ ಹೊರತು ನಿಮಗೆ ಒಂದು ಹೆಜ್ಜೆಯನ್ನು ಕೂಡ ಮುಂದಕ್ಕೆ ಇಡಗೊಡಲಿಕ್ಕಿಲ್ಲ. ನನಗೆ ನಿಮ್ಮ ದುಷ್ಕೃತ್ಯವೆಲ್ಲ ಗೊತ್ತಾಗಿರುತ್ತದೆ. ನಾನು ವಿಜಾಪುರದ ಬಾದಶಹನ ವಕೀಲನಿರುತ್ತೇನೆ. ಈ ಜನರು ಅಹಮ್ಮದನಗರದಿಂದ ವಿಜಾಪುರಕ್ಕೆ ಹೋಗುತ್ತಿದ್ದರು; ಆದ್ದರಿಂದ ಈಗ ಅವರು ವಿಜಾಪುರದವರಿರುತ್ತಾರೆ. ಸುಮ್ಮನೆ ನನಗೆ ಅವರನ್ನು ಒಪ್ಪಿಸಿರಿ; ಇಲ್ಲದಿದ್ದರೆ.....

ರಣಮುಸ್ತಖಾನನ ಈ ಮಾತುಗಳನ್ನು ಕೇಳಿ ವಿಜಯನಗರದ ಜನಸೊಳಗಿನನನೊಬ್ಬನು ಮುಂದಕ್ಕೆ ಬಂದು, ಅತ್ಯಂತ ಉಪಹಾಸಾಸ್ಪದವಾದ ಸ್ವರದಿಂದ ನಕ್ಕು—"ನಿನ್ನ ಪ್ರತ್ಯಕ್ಷ ಬಾದಶಹನು ಬಂದರೂ ವಿಜಯನಗರದಲ್ಲಿ ಈಗ ಆನನ್ನು ಯಾರೂ ಕೇಳುವಹಾಗಿಲ್ಲ. ಅಂದಬಳಿಕ ನಿನ್ನಂಥ ವಕೀಲನನು

ಯಾರು ಕೇಳಬೇಕು? ನೀನು ನಿನ್ನ ಹಾದಿಯಹಿಡಿದು ಹೋದರೆ ಮರ್ಯಾದೆಯುಳಿದೀತು. ಸಾಕು, ಈಗ ತೋರಿಸಿದ ಪೌರುಷವಷ್ಟೇ ಸಾಕು. ಜೇಟಿಯನ್ನು ಹಿಡಕೊಂಡು ಬಂದವರು, ತಮ್ಮ ಜೇಟಿಯನ್ನು ಹಾದಿಯಲ್ಲಿಯ ಕಳ್ಳನಿಗೆ ಎಂದಾದರೂ ಒಪ್ಪಿಸಬಹುದೋ ? ಎಂದು ನುಡಿಯುತ್ತಿರಲು, ರಣಮಸ್ತಖಾನನು ಸಂತಪ್ತನಾದನು. ಆತನು ತನ್ನ ಖಡ್ಗವನ್ನು ಒರೆಯಿಂದ ಹಿರಿದು, ಆ ಹಿಂದು ಏಗೆ ಒಂದು ಏಟು ಕೊಟ್ಟನು. ಆಮೇಲೆ ಕೇಳುವದೇನು? ಉಳಿದ ಹಿಂದುಗಳೆಲ್ಲ ರಣಮಸ್ತಖಾನನ ಮೇಲೆ ದುಮುಕಿದರು ; ಆದರೆ ರಣಮಸ್ತಖಾನನು ಸರ್ವಸಾಧಾರಣ ಮನುಷ್ಯನಿದ್ದಿಲ್ಲ. ಅವರೆಲ್ಲರಿಗೆ ಸೂಪ್ಪುಹಾಕದವನಂತೆ ಶೌರ್ಯವನ್ನು ಪ್ರಕಟಿಸಹತ್ತಿದನು. ಅಷ್ಟರಲ್ಲಿ ಜನಸಮೂಹವು ನೆರೆಯಿತು. ಕರ್ಮಧರ್ಮ ಸಂಯೋಗದಿಂದ ವಿಜಯನಗರದ ಒಬ್ಬ ದರ್ಬಾರದ ಗೃಹಸ್ಥನು ಅತ್ತಕಡೆಯಿಂದ ಬಂದನು, ಒಬ್ಬನಮೇಲೆ ಎಂಟು ಹತ್ತುಜನರು ಏರಿಹೋಗುವದನ್ನು ನೋಡಿ, ಆತನು ಅವಸರದಿಂದ ಅಲ್ಲಿಗೆ ಬಂದು ವಿಜಾಪುರದ ವಕೀಲನನ್ನು ನೋಡಿದನು. ತಾವೂ ವಿಜಾಪುರದ ಬಾದಶಹನೂ ಒಂದಾಗಿ ಉಳಿದ ಮುಸಲ್ಮಾನ ರಾಜ್ಯಗಳನ್ನು ನಷ್ಟಪಡಿಸಬೇಕೆಂದು ಮಾಡಿರುವಾಗ, ತಮ್ಮ ಜನರು, ಒಬ್ಬನೇ ಒಬ್ಬನಾಗಿ ಸಿಕ್ಕಿದ್ದ ವಿಜಾಪುರದ ವಕೀಲನಿಗೆ ಏನಾದರೂ ಅಪಾಯಮಾಡಿದರೆ, ಕೆಲಸಕೆಟ್ಟೀತೆಂದು ತಿಳಿದು, ಆತನು ತನ್ನ ಜನರನ್ನು ಕುರಿತು—" ತಡೆಯಿರಿ, ತಡೆಯಿರಿ,'' ಎಂದು ನಿರ್ಬಂಧಿಸುತ್ತ, ರಣಮಸ್ತಖಾನನ ಬಳಿಗೆ ಬಂದನು. ಆತನು ಜಗಳದ ಕಾರಣವನ್ನೇನೂ ಅರಿಯದವನಂತೆ, ರಣಮಸ್ತಖಾನನನ್ನು ಕುರಿತು — " ಖಾನಸಾಹೇಬ, ನೀವು ಇಷ್ಟು ಸಿಟ್ಟಿಗೇಳಲಿಕ್ಕೆ ಕಾರಣವೇನಾಯಿತೆಂಬದನ್ನಾದರೂ ಹೇಳಿರಿ '' ಅನ್ನಲು, ಖಾನನು ಯಾವತ್ತು ಸಂಗತಿಯನ್ನು ಹೇಳಿ, ಆ ಗೃಹಸ್ಥನನ್ನು ಕುರಿತು—ನನಗೆ ಎರಡನೆಯದೇನೂ ಬೇಡ. ಈಗ ಹಿಡಿಯಲ್ಪಟ್ಟಿರುವ ಜನರು ಮುಸಲ್ಮಾನ ಬಾದಶಾಹಿಯ ಅಧೀನದವರಿರುವದರಿಂದ, ಅವರನ್ನು ನನಗೆ ಒಪ್ಪಿಸತಕ್ಕದ್ದು. ವಿಜಾಪುರದ ವಕೀಲನು ನಾನು ಇಲ್ಲಿ ಇರುತ್ತಿರುವಾಗ, ಹೀಗೆ ಮುಸಲ್ಮಾನ ಸ್ತ್ರೀಯರ ವಿಡಂಬನವಾಗಗೊಡಲಿಕ್ಕಿಲ್ಲ. ಈಗ ಆದ ಅಪಮಾನವನ್ನು ಸಹಿಸಲಾರೆನು. ಹಾದಿಯಲ್ಲಿ ಹೋಗುವ ಮುಸಲ್ಮಾನ ಹೆಂಗಸರನ್ನು ನಿಮ್ಮ ಪುಂಡಜನರು ಹಿಡಿದುತಂದು ಉಪಹಾಸಮಾಡುವದನ್ನು ನೋಡುತ್ತ ನಾವು ಸುಮ್ಮನೆ ಕುಳಿತುಕೊಳ್ಳಬೇಕೇನು? ಈ ಮೇಣೆಯನ್ನು ಮೊದಲು ಕುಂಜವನಕ್ಕೆ ತಕ್ಕೊಂಡು ನಡೆಯಿರಿ. ಆಮೇಲೆ ನೀವು ಹೇಳುವದನ್ನು ಕೇಳುವೆನು. ಹು, ಎತ್ತಿರಿ ಮೇಣೆಯನ್ನು. ಮೊದಲು ನಮ್ಮ ಕುಂಜವನಕ್ಕೆ ಇದನ್ನು ತಕ್ಕೊಂಡು ನಡೆಯಿರಿ, ಎಂದು ಆಜ್ಞಾಪಿಸಹತ್ತಿದನು. ಅದಕ್ಕೆ ಆ ದರ್ಬಾರಿಮನುಷ್ಯನು—

ಯೋಗ್ಯವು, ನೀವು ಆಡುವ ಮಾತು ಅತ್ಯಂತ ಯೋಗ್ಯವಾಗಿರುತ್ತದೆ; ಆದರೆ ರಾಮರಾಜರ ಕಿವಿಯವರೆಗೆ ಈ ಸುದ್ದಿಯು ಮುಟ್ಟಬೇಕಲ್ಲವೆ? ಅವರ ಅನುಜ್ಞೆಯ ಹೊರತು ತಾವು ಹೇಳುವಂತೆ ನಡುವೆ ಕಾರಭಾರ ಹ್ಯಾಗೆ ಮಾಡಬೇಕು?''

ರಣಮಸ್ತಖಾನ—ಅವರ ಕಡೆಗೆ ನಾನು ಪತ್ರವನ್ನು ಕಳಿಸಿದ್ದೇನೆ. ಆದರೆ ಚಿಂತೆ ನಿಮಗೆ ಬೇಡ. ಈ ಬಾಬಿನಲ್ಲಿ ನಕಾರಾತ್ಮಕ ಶಬ್ದವನ್ನು ನುಡಿಯಲಿಕ್ಕೆ ರಾಮರಾಜರಿಗೆ ಧೈರ್ಯವಾಗಲಾರದು.

ದರ್ಬಾರಿಗೃಹಸ್ಥ—ಧೈರ್ಯವಾಗಲಿಕ್ಕಿಲ್ಲ; ಆದರೆ ವಿಜಯನಗರದ ಗಡಿಯಲ್ಲಿ ಬಂದ ಬಳಿಕ, ಅವರ ಅಪ್ಪಣೆಯ ಹೊರತು ಏನೂವಾಡಲಿಕ್ಕೆ ಬರುವದಿಲ್ಲ. ತಮ್ಮ ಪತ್ರವು ಹ್ಯಾಗೂ ಹೋಗಿರುತ್ತದೆ, ಅದರ ಉತ್ತರ ಬರುವತನಕ ಹಾದಿಯನ್ನು ನೋಡಿರಿ. ಅವರಿಂದ ಉತ್ತರ ಬಂದಕೂಡಲೇ....ಖಾನಸಾಹೇಬ, ಮಹಾರಾಜರು ನಿಮ್ಮ ಮರ್ಜಿಗೆವಿರುದ್ಧವಾಗಿ ನಡೆಯಲಾರರು. ಅವರಿಗೆ ಇಂಥ ಕೃತ್ಯವು ಸೇರುವದಿಲ್ಲ. ಅವರ ಮನಸ್ಸಿನಲ್ಲಿ ಇಂಥ ಪುಂಡಜನರ ಶಾಸನಮಾಡುವದು ಬಹಳ ದಿವಸದಿಂದ ಇದ್ದೇ ಇರುತ್ತದೆ. ಈಗ ಸ್ಪಷ್ಟ ಅಪರಾಧವು ಆಗಿರುವದರಿಂದ ಮಾಡತಕ್ಕ ಶಿಕ್ಷೆಯನ್ನು ಅಪರಾಧಿಗಳಿಗೆ ಅವರು ಮಾತೇ ಮಾಡುವರು. ಅದರಲ್ಲಿ ನೀವು ಹೇಳಿದ ಒಂದಿಕಂತು ಶಿಕ್ಷೆಯು ತಪ್ಪದೆ ಆಗುವದು; ಆದರೆ ಅವರ ಉತ್ತರವು ಏನು ಬರುತ್ತದೆಂಬುದನ್ನಾದರೂ ಸ್ವಲ್ಪ ಹೊತ್ತು ನಿರೀಕ್ಷಿಸಿರಿ.

ಈ ಮಾತುಗಳನ್ನು ಕೇಳಿ ರಣಮಸ್ತಖಾನನು ವಿಜಯನಗರದ ಕಡೆಗೆ ನೋಡಿ—"ಅಗೋ, ಬಂದನು ನೋಡಿರಿ ನಮ್ಮ ಸಿಪಾಯಿಯು'' ಎಂದು ನುಡಿಯುತ್ತಿರಲು, ಸಿಪಾಯಿಯು ಬಂದು ರಾಮರಾಜನು ಕೊಟ್ಟ ಉತ್ತರವನ್ನು ಖಾನನ ಕೈಯಲ್ಲಿ ಕೊಟ್ಟನು. ಖಾನನು ಆತುರದಿಂದ ಅದನ್ನು ಒಡೆದು, ಒಳಗಿನ ಪತ್ರೋತ್ತರವನ್ನು ಓದಹತ್ತಿದನು. ಮೇಲಿನ ವಕ್ಕಣಿಕೆಯು ಮುಗಿದಬಳಿಕ ಮುಂದಿನ ಸಂಗತಿಯು ಅದರಲ್ಲಿ ಹೀಗೆ ಬರೆದಿತ್ತು—"ನೀವು ಬರೆದಿರುವಂತೆ ಕೃತ್ಯವು ಸಂಭವಿಸಿದ್ದರೆ, ಪರಮಾನ್ಯಾಯವು; ಆದರೆ ನಾವು ಈಗ ಒಂದು ಪಕ್ಷದವರ ಅಂಬೋಣವನ್ನು ಕೇಳಿಕೊಂಡಂತಾಯಿತು; ಇನ್ನೊಂದುಪಕ್ಷದವರ ಅಂಬೋಣವನ್ನು ಕೇಳಿಕೊಂಡ ಹೊರತು ಯಾವ ಮಾತನ್ನೂ ಆಡಲಿಕ್ಕೆ ಬರುವದಿಲ್ಲ. ನೀವು ಪತ್ರದಲ್ಲಿ ಬರೆದಿರುವಂತೆ ಆ ಜನರು ಇತ್ತಕಡೆಗೇ ಬರುವರಾದ್ದರಿಂದ, ಅವರು ಬಂದ ಕೂಡಲೆ ವಿಚಾರಿಸಿ, ಯೋಗ್ಯ ವ್ಯವಸ್ಥೆ ಮಾಡಲಾಗುವದು. ನಿಷ್ಕಾರಣವಾಗಿ ಬಡಬಗ್ಗರಿಗೆ, ವಿಶೇಷವಾಗಿ ಸ್ತ್ರೀಯರಿಗೆ, ತ್ರಾಸವಾದದ್ದನ್ನು ಮಹಾ

ರಾಜರು ಎಂದಿಗೂ ತಡೆಯರು. ಹೀಗೆ ತ್ರಾಸಕೊಟ್ಟವರನ್ನು ಶಿಕ್ಷಿಸದೆ ಅವರು ಎಂದಿಗೂ ಉದಾಸೀನಮಾಡರೆಂಬದನ್ನು ತಾವು ಪೂರ್ಣ ಲಕ್ಷದಲ್ಲಿಡಬೇಕು.

೧೨ನೆಯ ಪ್ರಕರಣ:—ಶಾಪಪ್ರದಾನ.

ನಿಜವಾಗಿ ನೋಡಿದರೆ ಪತ್ರದಲ್ಲಿ ಅಯೋಗ್ಯವೇನೂ ಬರೆದಿದ್ದಿಲ್ಲ; ಬರೆಯತಕ್ಕದ್ದನ್ನು ಸ್ಪಷ್ಟವಾಗಿ, ಹ್ಯಾಗೆ ಬರೆಯಬೇಕೋ ಹಾಗೆಯೇ ಬರೆದಿತ್ತು; ಆದರೆ ರಣಮಸ್ತಖಾನಸಿಗೆ ಮಾತ್ರ ಅದು ಸೇರಲಿಲ್ಲ. ಆ ಪತ್ರವು ಅತನಿಗೆ ಮುತ್ಸದ್ದಿತನದ್ದಾಗಿಯೂ, ಕಾರಸ್ಥಾನದ್ದಾಗಿಯೂ, ಮೋಸದ್ದಾಗಿಯೂ ತೋರಿತು. ಕೂಡಲೆ ಅವನು ಸಿಟ್ಟಿಗೆದ್ದು ಆ ದರ್ಬಾರಿ ಗೃಹಸ್ಥನನ್ನ ಕುರಿತು ಸಂತಾಪದಿಂದ—ನಡೆಯಿರಿ ನಡೆಯಿರಿ, ಈ ಜನರನ್ನು ಕರಕೊಂಡು ರಾಮರಾಜರಕಡೆಗೇ ನಡೆಯಿರಿ. ಇವರನ್ನು ಬಿಡಿಸಿದ ಹೊರತು ನಾನು ಅನ್ನಗ್ರಹಣ ಮಾಡಲಿಕ್ಕಿಲ್ಲೆಂದು ನಿಶ್ಚಯಿಸಿದ್ದೇನೆ. ಈ ಹೆಂಗಸರನ್ನು ನನ್ನ ಬಿಡಾರಕ್ಕೆ ಒಯ್ದಬಳಿಕ ಆ ಮೇಲೆ ಅನ್ನ—ನೀರಿನ ವಿಚಾರವು ಅನ್ನಲು, ಆ ಗೃಹಸ್ಥನು—ಅವರು ರಾಮರಾಜರಕಡೆಗೇ ಹೋಗುತ್ತಿದ್ದರು. ನಡುವೆ ನೀವು ಗೊಂದಲ ಹಾಕಿದ್ದರೆ, ಇಷ್ಟು ಹೊತ್ತಿಗೆ ಅವರು ಬಿಡುಗಡೆ ಹೊಂದಿಸಹ ಬರುತ್ತಿದ್ದರು, ಎಂದು ಹೇಳಿದನು. ಅದಕ್ಕೆ ರಣಮಸ್ತಖಾನನು ಏನೂ ಮಾತಾಡಲಿಲ್ಲ. ರಾಮರಾಜನ ಕಡೆಗೆ ಹೋಗುವದಕ್ಕಾಗಿ ಮಾತ್ರ ಜನರಿಗೆ ಅವಸರ ಮಾಡಹತ್ತಿದನು. ಅವರೆಲ್ಲರೂ ರಾಮರಾಜನ ಮಂದಿರದ ಕಡೆಗೆ ನಡೆದರು. ಮಂದಿರದ ಬಳಿಗೆ ಹೋದ ಕೂಡಲೆ, ರಣಮಸ್ತಖಾನನು ತಾನು ಬಂದ ವರ್ತಮಾನವನ್ನು ರಾಮರಾಜನಿಗೆ ತಿಳಿಸಿದನು. ಆಗ ರಾಮರಾಜನ ಸಿರಸ್ತೆದಾರನು ರಣಮಸ್ತಖಾನನನ್ನು ಕರಕೊಂಡು ಹೋಗುವದಕ್ಕಾಗಿ ಎದುರಿಗೆ ಬಂದನು. ಅದನ್ನು ನೋಡಿ ತರುಣ ರಣಮಸ್ತಖಾನನಿಗೆ ಸಮಾಧಾನವಾಗಲಿಲ್ಲ; ಅವನು ರೇಗಿಗೆದ್ದನು. ರಾಮರಾಜನೇ ತನ್ನನ್ನು ಕರಕೊಂಡು ಹೋಗತಕ್ಕದ್ದೆಂದು ಅತನು ಭಾವಿಸಿದನು; ಆದರೆ ಜಗಳ ತೆಗೆಯಲಿಕ್ಕೆ ಇದು ಸಮಯವಲ್ಲೆಂದು ತಿಳಿದು ಅತನು ಸಿರಸ್ತೆದಾರನ ಸಂಗಡ ಹೋದನು. ರಾಮರಾಜನು ಆಗ ತನ್ನ ವಾಡೆಯೊಳಗಿನ ಕಚೇರಿಯಲ್ಲಿ ಕೆಲಸಮಾಡುತ್ತ ಕುಳಿತಿದ್ದನು. ಅತನ ಮುಂದೆ ಸಣ್ಣ ದರ್ಬಾರವೇ ನೆರೆದಂತೆ ಆಗಿತ್ತು. ರಣಮಸ್ತಖಾನನು ಅಲ್ಲಿಗೆ ಹೋದ ಕೂಡಲೆ ರಾಮರಾಜನು ಕುಳಿತ ಸ್ಥಳಬಿಟ್ಟು ಏಳದೆ—"ತಮ್ಮ ಪತ್ರದ ಬೆನ್ನಹಿಂದೆ ತಾವೇ ಬರುವ ಶಮ ತಕ್ಕೊಂಡಿರಲ್ಲ? ಇದು ಈಗ ನಾನು ತಮ್ಮ ಪತ್ರಕ್ಕೆ ಉತ್ತರವನ್ನು ಬರೆದು ಕಳಿಸಿ

ದನು'' ಎಂದು ನುಡಿದು, ತನ್ನಿಂದ ಸ್ವಲ್ಪ ಅಂತರದ ಮೇಲೆ ಕುಳಿತುಕೊಳ್ಳುವದಕ್ಕಾಗಿ ಸನ್ನೆಯಿಂದ ರೆಣಮಸ್ತಖಾನನಿಗೆ ಸೂಚಿಸಿದನು. ಇದರಿಂದಂತು ರಣಮಸ್ತಖಾನನ ಪಿತ್ತವು ತಲೆಗೇರಿತು. ಆತನು ಕುಳಿತುಕೊಳ್ಳದೆ, ನಿಂತುಕೊಂಡೇ ರಾಮರಾಜನಿಗೆ—"ನಾನು ಕುಳಿತುಕೊಳ್ಳುವದಕ್ಕಾಗಿ ಇಲ್ಲಿಗೆ ಬಂದಿರುವದಿಲ್ಲ. ನಾನು ಬಂದ ಕೆಲಸವಾದರೆ ಕುಳಿತುಕೊಂಡಂತೆ ಆಯಿತು. ಆ ಜನರು ಬಂದಿದ್ದಾರೆ. ಒಂದು ನಿಷ್ಟುರ ಜನರ ವಿಚಾರವನ್ನಂತು ನೀವು ಕೇಳಿಕೊಂಡಿರುವಿರಿ. ಇನ್ನೊಂದು ನಿಷ್ಟುರವನ್ನು ಸಾವಕಾಶ ಕೇಳಿಕೊಳ್ಳಿರಿ; ಆದರೆ ಆ ಸ್ತ್ರೀಯರ ವಿಡಂಬನೆ ಮಾಡಬೇಡಿರಿ. ಅವರನ್ನಷ್ಟು ನನಗೆ ಒಪ್ಪಿಸಿರಿ. ಉಳಿದವರ ಮುಖದಿಂದ ಕೇಳಿಕೊಳ್ಳತಕ್ಕದ್ದನ್ನು ಕೇಳಿಕೊಂಡು, ಅವರಿಗೆ ಮಾಡತಕ್ಕ ಶಿಕ್ಷೆಯನ್ನು ಮಾಡಿರಿ" ಎಂದನು.

ರಣಮಸ್ತಖಾನನು ಅತ್ಯಂತ ಆತುರದಿಂದ ಮನಃಪೂರ್ವಕವಾಗಿ ಮಾತಾಡುತ್ತಿದ್ದನು. ರಾಮರಾಜನು ಅರ್ಧ ಆತನಕಡೆಗೆ, ಅರ್ಧ ಜೇರೆ ಕಡೆಗೆ ನೋಡುತ್ತ, ಮುಗುಳುನಗೆ ನಗುತ್ತ, ಆತನ ಮಾತುಗಳನ್ನು ಕೇಳುತ್ತಿದ್ದನು. ರಣಮಸ್ತಖಾನನ ಮಾತುಗಳು ಮುಗಿದ ಕೂಡಲೇ ರಾಮರಾಜನು ಮೇಲಕ್ಕೆ ಮುಖವನ್ನೆತ್ತಿ ಆತನನ್ನು ಕುರಿತು—ಹಿಂದುಗಳ ರಾಜ್ಯದಲ್ಲಿ ಹೆಂಗಸರ ವಿಡಂಬನೆಯ ಹೆಸರು ಸಹ ತೆಗೆಯಬೇಡಿರಿ; ಆದರೆ ವಿಚಾರಮಾಡಿ, ಮಾಡತಕ್ಕದ್ದನ್ನು ಮಾಡೋಣ. "ಯಾರವರು ಅಲ್ಲಿ? ಬಂದ ಆ ಜನರನ್ನು ಕರೆಯಿರಿ ಇತ್ತ'' ಎಂದು ಆಜ್ಞಾಪಿಸುವದರೊಳಗೆ, ಆ ಜನರು ಬಂದ ಸುದ್ದಿಯನ್ನು ಒಬ್ಬ ಸೇವಕನು ರಾಮರಾಜನಿಗೆ ಹೇಳಿದನು. ಆಗ ರಾಮರಾಜನು, ಈಗಲೇ ಅವರನ್ನು ನನ್ನ ಎದುರಿಗೆ ಕರದುಕೊಂಡು ಬಾ. ಎಂದು ಹೇಳುತ್ತಿರಲು, ರಣಮಸ್ತಖಾನ—"ತಾವು ಈ ಅಪ್ಪಣೆಯನ್ನು ಯಾರಸಲುವಾಗಿ ಮಾಡುವಿರಿ? ಒಳಗೆ ತಮ್ಮ ಎದುರಿಗೆ ಯಾರನ್ನು ಕರಕೊಂಡು ಬರತಕ್ಕದ್ದು? ಆ ಸ್ತ್ರೀಯರನ್ನು ಕರಕೊಂಡು ಬರಬೇಕೆಂದು ತಮ್ಮ ಅಪ್ಪಣೆಯಿರುವದೋ ಏನು? ಹೀಗೆ ಆಜ್ಞಾಪಿಸಿ ಸ್ತ್ರೀಯರನ್ನು ದರ್ಬಾರದಲ್ಲಿ ಬರಮಾಡುವದು ತೀರ ಅಯೋಗ್ಯವು. ಈ ಮಾತನ್ನು ತಮಗೆ ನಾನು ಸ್ಪಷ್ಟವಾಗಿ ಹೇಳುತ್ತೇನೆ" ಅನ್ನಲು, ರಾಮರಾಜನು ಹುಬ್ಬು ಗಂಟಿಕ್ಕಿ, ರಣಮಸ್ತಖಾನನ ಕಡಗೆ ನೋಡಿದನು ಮಾತ್ರ. ಆ ಮೇಲೆ ಆತನು ಗಟ್ಟಿಯಾಗಿ ತನ್ನ ಸಿರಸ್ತೆದಾರನನ್ನು ಕುರಿತು—"ಎಲ್ಲರನ್ನು ಕರತಂದು ನನ್ನ ಮುಂದೆ ನಿಲ್ಲಿಸಿರಿ. ವಿಜಾಪುರದವರು ನಮ್ಮ ಮಿತ್ರರೆನಿಸಿಕೊಳ್ಳುತ್ತಿದ್ದರೂ, ಅವರು ಅಹಮ್ಮದನಗರದವರೊಡನೆ ಒಕ್ಕಟ್ಟು ಬೆಳಸಿ, ಕಾರ್ಯಸಾ

ಧನ ನಡಿಸುತ್ತಿರುವರೆಂಬ ಸುದ್ದಿಯು ನಮ್ಮ ಕಿವಿಗೆ ಬಿದ್ದಿರುತ್ತದೆ. ಆ ಸುದ್ದಿಗೆ ಇದೊಂದು ಪ್ರತ್ಯಕ್ಷ ಸಾಕ್ಷಿಯಾಗಿರುವಂತೆ ನನಗೆ ತೋರುವುದು. ಹೀಗೆ ಹೆಂಗ ಸರನ್ನು ಕಳಿಸುವ ನೆವದಿಂದ ಇಲ್ಲಿಯ ಸರದಾರರು ಅಲ್ಲಿಗೆ ಹೋಗಿ, ಅಲ್ಲಿಯ ಸರದಾರರು ಇಲ್ಲಿಗೆ ಬಂದು ಗುಪ್ತಸುದ್ದಿಯನ್ನು ತಿಳಿಸುತ್ತಿರುವರು. ಇವರಲ್ಲಿ ಕಾಗದಪತ್ರಗಳೇನಾದರೂ ಇರುತ್ತವೆಯೋ ಹ್ಯಾಗೆಂಬದನ್ನು ಪರೀಕ್ಷಿಸಿ, ಆ ಮೇಲೆ ಬಿಟ್ಟುಬಿಡೋಣ. ಇಂಥ ಜನರನ್ನು ಇಟ್ಟುಕೊಂಡು ನಾವು ಮಾಡುವದೇನು?" ಅನ್ನಲು, ತನ್ನನ್ನು ಉದ್ದೇಶಿಸಿ ನುಡಿದ ಈ ಮಾತುಗಳನ್ನು ಕೇಳಿ ರಣಮಸ್ತಖಾನನ ಕಣ್ಣುಗಳು ಕೆಂಡದಂತಾದವು. ಅಷ್ಟರಲ್ಲಿ ಎಲ್ಲೆ ಜನರನ್ನು ಒಳಗೆ ಕರಕೊಂಡು ಬಂದರು. ಅವರಲ್ಲಿ ಸ್ತ್ರೀಯರೂ ಇದ್ದರು.

ರಾಮರಾಜನು ರಣಮಸ್ತಖಾನನಿಗೆ ಮತ್ತೊಮ್ಮೆ—"ತಾವು ಇಲ್ಲಿ ಕುಳಿತುಕೊಳ್ಳಿರಿ ಎಲ್ಲ ವಿಚಾರವು ತಮ್ಮ ಸಮಕ್ಷಮ ಆಗುವದು." ಎಂದು ಹೇಳಿ, ತನ್ನ ಬಲಗಡೆ ಇದ್ದ ಸ್ಥಳದಲ್ಲಿ ಕುಳಿತುಕೊಳ್ಳಲಿಕ್ಕೆ ಕೈಯಿಂದ ತೋರಿಸಿದನು; ಆದರೆ ರಣಮಸ್ತಖಾನನಿಗೆ ಅದೂ ಒಂದು ಅಪಮಾನದ ಸಂಗತಿಯಾಗಿಯೇ ತೋರಿತು. ತಮ್ಮ ಸ್ತ್ರೀಯರನ್ನು ದರ್ಬಾರದಲ್ಲಿ ಕರತರಬೇಡಿರಂದು ತಾನು ಹೇಳಿದ್ದನ್ನು ನಿರಾಕರಿಸಿದ್ದಕ್ಕಾಗಿ ರಣಮಸ್ತಖಾನನಿಗೆ ಪರಮಾವಧಿ ಸಂತಾಪವಾಯಿತು. ಆತನಲ್ಲಿ ಸಾಮರ್ಥ್ಯವಿದ್ದರೆ, ರಾಮರಾಜನನ್ನು ಅದೇ ಕ್ಷಣದಲ್ಲಿ ನಿಲ್ಲಿಸಿ ಸುಡಿಸಲಿಕ್ಕೆ ಅವನು ಅಪ್ಪಣೆಕೊಡುತ್ತಿದ್ದನು; ಆದರೆ ಸದ್ಯಕ್ಕೆ ಆತನು ತನ್ನ ತುಟಿಗಳನ್ನು ತಾನೇ ಕಡಕೊಳ್ಳುತ್ತ ಸುಮ್ಮನೆ ನಿಂತುಕೊಳ್ಳಬೇಕಾಯಿತು. ಆಮೇಲೆ ರಾಮರಾಜನು ರಣಮಸ್ತಖಾನನ ಕಡೆಗೆ ವಿಶೇಷ ಲಕ್ಷಕೊಡಲಿಲ್ಲ. ಆತನು ತನ್ನ ಜನರನ್ನು ಕುರಿತು—"ಈ ಪಿಡಿದು ತಂದ ಜನರ ಮುಖ್ಯರು ಯಾರು?" ಎಂದು ಕೇಳಿದನು. ಆಗ ಪಾಳಯಗಾರರಲ್ಲಿ ಮುಖ್ಯನಾದವನು ಮುಂದಕ್ಕೆ ಬಂದು—"ಮಹಾರಾಜ, ಇವರ ಮುಖ್ಯಸ್ಥನಿದ್ದವನು ಹೊಡದಾಟದಲ್ಲಿ ಮರಣಹೊಂದಿದನು. ಇವರಿಗೆ ನಾವು ಮೊದಲು ಒಳ್ಳೆಯಮಾತಿನಿಂದ ಹೇಳಿದೆವು; ನೀವು ನಮ್ಮ ಸಂಗಡ ಏನೂ ಮಾತಾಡಬೇಡಿರಿ; ಬಡಿದಾಟ-ಹೊಡದಾಟಮಾಡಬೇಡಿರಿ; ನಮ್ಮ ಮಹಾರಾಜರ ಬಳಿಗೆ ನಿಮ್ಮನ್ನು ಕರಕೊಂಡು ಹೋಗವೆವು; ಹೇಳಿಕೊಳ್ಳುವದನ್ನು ನೀವು ಅಲ್ಲಿ ಹೇಳಿಕೊಳ್ಳಿರಿ; ಎಂದು ಪರಿಪರಿಯಾಗಿ ಹೇಳಿದೆವು; ಆದರೆ ನಮ್ಮ ಮಾತನ್ನು ಅವರು ಕೇಳಲಿಲ್ಲ. ಒಮ್ಮೆಲೆ ಕತ್ತಿಗಳನ್ನು ಹಿರಿದು ನಮ್ಮ ಮೈ ಮೇಲೆ ಬಂದರು. ಆಗ ನಾವೂ ನಿರ್ವಾಹವಿಲ್ಲದೆ ಕತ್ತಿಗಳನ್ನು ಹಿರಿಯಬೇ

ಕಾಯಿತು. ಬಡಿದಾಟದಲ್ಲಿ ಕೆಲವರು ಸತ್ತರು, ಕೆಲವರು ಗಾಯ ಹೊಂದಿದರು. ಕೆಲವರು ಓಡಿಹೋದರು. ಉಳಿದವರನ್ನು ಕರಕೊಂಡು ಬಂದಿದ್ದೇವೆ. ಪ್ರಭುಗಳು ಕೇಳುವದನ್ನು ಕೇಳಿಕೊಳ್ಳಬೇಕು. ಇವರ ಮುಖ್ಯಸ್ಥನು ದೊಡ್ಡ ಸರದಾರನಿದ್ದನೆಂದು ಗೊತ್ತಾಗುತ್ತದೆ'' ಎಂದು ಹೇಳಿದನು. ಆಗ ರಾಮರಾಜನು ಆ ಹಿಡಿದುತಂದ ಜನರಲ್ಲಿ ಒಬ್ಬನನ್ನು ಮುಂದಕ್ಕೆ ಕರೆದು—ನಿಮ್ಮಬಳಿಯಲ್ಲಿ ರಾಜಕರಣದ ಏನಾದರೂ ಕಾಗದ ಪತ್ರಗಳಿದ್ದರೆ ನಮಗೆ ಒಪ್ಪಿಸಿಬಿಡಿರಿ, ಅಂದರೆ ನಾವು ನಿಮ್ಮನ್ನು ಈಗಲೆ ಬಿಟ್ಟುಬಿಡುವೆವು. ನಿರುಪದ್ರವಿಗಳಾದ ದಾರಿಕಾರರಿಗೆ ತ್ರಾಸ ಕೊಡುವ ಇಚ್ಛೆಯು ನಮಗಿಲ್ಲ. ನಮ್ಮ ಸಂಬಂಧವಿದ್ದ ಮಟ್ಟಿಗೆ ನಾವು ನೋಡಬೇಕಾಗುವದು, ಎಂದು ನುಡಿದು, ರಣಮಸ್ತಖಾನನ ಕಡೆಗೆ ತಿರುಗಿ—ಅಹಮ್ಮದನಗರದಿಂದ ವಿಜಾಪುರಕ್ಕೆ ಹೋಗುವ ಹಾದಿಯು ನಮ್ಮ ಹದ್ದಿನೊಳಗಿಂದಲೇ ಹಾದು ಹೋಗಿರುತ್ತದೆನ್ನುವಹಾಗಿಲ್ಲ. ನಿಜವಾಗಿನೋಡಿದರೆ, ಅಹಮ್ಮದನಗರದಿಂದ ವಿಜಾಪುರಕ್ಕೆ ಹೋಗುವವರು ನಮ್ಮುಗಡಿಯನ್ನು ಸ್ಪರ್ಶಮಾಡುವ ಕಾರಣವಿಲ್ಲ. ಬೇರೆಕಡೆಯಿಂದ ಹಾದಿಯಿರುತ್ತದೆ. ಹೀಗಿದ್ದು ಬುದ್ಧಿಪೂರ್ವಕವಾಗಿ ನಮ್ಮ ಹದ್ದಿನೊಳಗಿಂದ ಹಾಯಬೇಕಾದರೆ, ಇವರ ಉದ್ದೇಶವು ಬೇರೆಪ್ರವಾಸಿಗಳ ಉದ್ದೇಶದಂತೆ ಸರಳವಾದದ್ದಿರಲಿಕ್ಕಿಲ್ಲ. ನಮ್ಮದಿಷ್ಟು ಸಂಶಯವನ್ನು ನೀವು ದೂರಮಾಡಿಕೊಟ್ಟು, ಈಗೇ ಇವರನ್ನು ಕರಕೊಂಡು ಹೋಗಿರಿ, ನಮ್ಮ ದೇನೂ ಪ್ರತಿಬಂಧವಿಲ್ಲ; ಆದರೆ ನಾನು ಹೇಳಿದಂತೆ ಸಂಶಯಕ್ಕೆ ಆಸ್ಪದವಿರುತ್ತದೋ; ಇಲ್ಲವೋ, ನೀವೇ ಹೇಳಿರಿ. ಬುದ್ಧಿಪೂರ್ವಕವಾಗಿ ಇವರು ನಮ್ಮಸೀಮೆಯೊಳಗಿಂದ ಹೋಗಲಿಕ್ಕೆ ಕಾರಣವೇನೆಂಬದನ್ನು ನೀವೇ ವಿಚಾರಮಾಡಿರಿ; ಎಂದು ಹೇಳಿದನು. ಅದಕ್ಕೆ ರಣಮಸ್ತಖಾನನು—"ಈ ಕಾಲದಲ್ಲಿ ನಾನು ಏನೂ ಮಾತಾಡುವದಿಲ್ಲ; ಯಾವವಿಚಾರವನ್ನೂ ಮಾಡುವದಿಲ್ಲ. ನೀವು ವಿಚಾರ ಮಾಡಬೇಕಾದದ್ದನ್ನು ಮಾಡಿಕೊಳ್ಳಿರಿ.''ಎಂದು ನುಡಿದು, ಮೊದಲಿನಂತೆ ಕ್ಷುದ್ರದೃಷ್ಟಿಯಿಂದನೋಡುತ್ತ ನಿಂತುಕೊಂಡನು. ಅವನ್ನು ನೋಡಿ ರಾಮರಾಜನು ತನ್ನೊಳಗೆ ನಕ್ಕು, ಹಿಡಿಯಲ್ಪಟ್ಟಿದ್ದ ಜನರಲ್ಲಿ ಒಬ್ಬನನ್ನು ಕುರಿತು—ಯಾಕರಿ, ನಮ್ಮ ಪ್ರಶ್ನವು ನಿಮಗೆ ತಿಳಿಯಿತೋ ಇಲ್ಲವೋ? ನಿಮ್ಮಲ್ಲಿ ಕಾಗದಪತ್ರಗಳೇನಾದರೂ ಇರುವವೋಹ್ಯಾಗೆ? ನೀವು ವಿಜಾಪುರಕ್ಕೆ ಹೋಗುವ ಸರಳಮಾರ್ಗವನ್ನು ಬಿಟ್ಟು ನಮ್ಮ ಸೀಮೆಯೊಳಗಿಂದ ಯಾಕೆ ಬಂದಿರಿ? ಇವೆರಡು ಪ್ರಶ್ನಗಳಿಗೆ ಸರಳವಾದ ಸಮಾಧಾನಕಾರಕ ಉತ್ತರಗಳು ನಿಮ್ಮಿಂದ ದೊರೆತರೆ, ಈಗಲೇ ನಿಮ್ಮನ್ನು ಬಿಟ್ಟುಕೊಡುವೆವು; ಅಥವಾ ನಮ್ಮ ಈ ವಕೀಲರಿಗೆ ನಿನ್ನುನ್ನು ಒಪ್ಪಿಸುವೆವು. ಹಾಗೆ

ಉತ್ತರ ದೊರೆಯದೆ ಇದ್ದ ಪಕ್ಷದಲ್ಲಿ, ಯಾರ ಮುಲಾಜನ್ನೂ ಹಿಡಿಯದೆ ಮಾಡ ತಕ್ಕದ್ದನ್ನು ನಾವು ಮಾಡುವೆವು.

ರಾಮರಾಜನ ಈ ಮಾತುಗಳನ್ನು ಕೇಳಿ ಆ ಹಿಡಿದುತಂದ ಮನುಷ್ಯರಲ್ಲಿ ಯೊಬ್ಬನು ಧೀರ ಗಂಭೀರಸ್ವರದಿಂದ—" ಕಾಗದ ಪತ್ರಗಳೇನೂ ನಮ್ಮ ಬಳಿಯಲ್ಲಿ ಇರುವದಿಲ್ಲ. ನಿಮ್ಮ ಸೀಮೆಯೊಳಗಿಂದ ಹಾದುಹೋಗಲಿಕ್ಕೆ, ನಮ್ಮ ಒಡೆಯನ ಮಗಳಾದ ಈ ಹೆಣ್ಣು ಮಗಳಿಗೆ ಸಂಗನಪಲ್ಲಿಯ ದರಗೆಯ ದರ್ಶನ ಮಾಡಿಸಬೇಕೆಂದು ನಮ್ಮ ಒಡೆಯನು ಇಚ್ಛಿಸಿದ್ದೇ ಕಾರಣವು " ಎಂದು ಹೇಳಿದನು. ದರಗೆಯ ಹೆಸರು ಕಿವಿಗೆ ಬಿದ್ದಕೂಡಲೆ ರಾಮರಾಜನು ಉಪಹಾಸದಿಂದ ನಕ್ಕು—ಸರಿಸರಿ. ಈ ದುರಗೆಯು, ನಮ್ಮ ರಾಜ್ಯದ ಸ್ಥಿತಿಗತಿಗಳನ್ನು ನೋಡಿ ಹೋಗಲಿಕ್ಕೂ, ಗುಪ್ತ ಒಳಸಂಚುಗಳನ್ನು ಮಾಡಲಿಕ್ಕೂ ನಿಮಗೆ ತಕ್ಕ ಸ್ಥಳವಾಗಿರುತ್ತದೆ. ಆ ದರಗೆಯು ಇಲ್ಲದ ಹಾಗೆ ಆದ ದಿನವೇ ಸುದಿನವು. ಈಗಂತು ನಮ್ಮ ಸಂಶಯವು ಮತ್ತಿಷ್ಟು ಹೆಚ್ಚಾಯಿತು. ನೀವು ನಮ್ಮ ರಾಜ್ಯ ದೊಳಗಿನ ಗುಪ್ತ ಸಂಗತಿಗಳನ್ನು ತಿಳಕೊಳ್ಳಲಿಕ್ಕೆ ಬಂದಂತೆ ತೋರುತ್ತದೆ; ಆದರೆ ನಮ್ಮ ಜನರ ಜಾಗರೂಕತೆಯಿಂದ ಅದು ಜೈಲಿಗೆ ಬಿದ್ದಿರುತ್ತದೆ. ಈ ಗೋಷೆಯಲ್ಲಿದ್ದವರು ಹೆಣ್ಣುಮಕ್ಕಳೇ ಇರುವರೋ ಎಂಬ ಬಗ್ಗೆ ನಮಗೆ ಸಂಶಯ ಬರಹತ್ತಿದೆ. ತರುಣರು, ವೃದ್ಧರು, ಗೋಷೆಯ ಹೆಂಗಸರ ಸೋಗಿನಿಂದ ಗುಪ್ತ ಚಾರರ ಕೆಲಸಗಳನ್ನು ಮಾಡುತ್ತಿರುವರು. ಹಿಂದೂ ಜನರು ಸ್ತ್ರೀಯರನ್ನು ತಡವುವದಿಲ್ಲೆಂಬದು ಎಲ್ಲರಿಗೂ ಗೊತ್ತಿರುವದು. ಯಾರಾದರೂ ಹೆಂಗಸರ ಅಪಮಾನ ಮಾಡಿದರೆ, ನಮಗೆ ಸಂತಾಪವಾಗುವದು. ನಮ್ಮ ಈ ಉದಾರಗುಣದ ಲಾಭ ಮಾಡಿಕೊಂಡು, ಹೆಂಗಸರ ಸೋಗಿನಿಂದ ಕಾಗದ ಪತ್ರಗಳನ್ನು ಬಚ್ಚಿಕೊಂಡಿಟ್ಟರೆ, ನಾವು ಮಾಡುವದೇನು? ಆದ್ದರಿಂದ, ಈ ಮೂವರೂ ಹೆಂಗಸರು ತಮ್ಮ ತಮ್ಮ ಬುರಕಿಗಳನ್ನು ತೆಗೆದು, ತಮ್ಮ ಮೋರೆಗಳನ್ನು ತೋರಿಸಿದರೆ ಅವರ ಬಿಡುಗಡೆಯಾಗುವದು. ಇಲ್ಲದಿದ್ದರೆ ಇಲ್ಲ ಎಂದು ನುಡಿಯಲು, ಮೊದಲೇ ಸಂತಪ್ತನಾಗಿದ್ದ ರಣಮಸ್ತಖಾನನು, ರಾಮರಾಜನ ಈ ಮಾತುಗಳನ್ನು ಕೇಳಿ, ಕ್ರೋಧಪರವಶನಾಗಿ ಕಂಪಿತ ಸ್ವರದಿಂದ—" ಈ ಸ್ತ್ರೀಯರ ಬುರಕಿಗಳನ್ನು ನಾನು ಕಾಲತ್ರಯದಲ್ಲಿಯೂ ತೆಗೆಯಗೊಡಲಿಕ್ಕಿಲ್ಲ. ಇದೇನು ಹುಡುಗಾಟಿಕೆಯೋ ಏನು? ಎಂದು ಕೇಳಿದನು. ರಾಮರಾಜನು ಆತನ ಈ ಮಾತಿನ ಕಡೆಗೆ ಎಷ್ಟು ಮಾತ್ರವೂ ತನ್ನ ಲಕ್ಷವಿಲ್ಲದಂತೆ ತೋರಿಸಿ, ಮತ್ತೆ ಆ ಹೆಂಗಸರನ್ನು ಕುರಿತು—" ಅವರವರು ತಮ್ಮ ತಮ್ಮ ಬುರಕಿಗಳನ್ನು ತಾವೇ ತೆಗೆದು ಮೋರೆ ತೋರಿಸಬೇಕು; ಇಲ್ಲದಿದ್ದರೆ ಎರಡನೆಯವರು ಬುರಕಿ ತೆಗೆಯಬೇಕಾಗುವದು.

ಯಾರು ಯಾರು ಬುರಕಿಗಳನ್ನು ತೆಗೆಯಲಿಕ್ಕೆ ಎಷ್ಟು ಎಷ್ಟು ತಡಮಾಡುವರೋ ಅಷ್ಟು ಅಷ್ಟು ನಮ್ಮಲ್ಲಿ ಅವರ ವಿಷಯವಾಗಿ ಹೆಚ್ಚು ಹೆಚ್ಚು ಸಂಶಯವು ಉತ್ಪನ್ನವಾಗುವದು; ಆದ್ದರಿಂದ ಇನ್ನು ನಮ್ಮ ನಿಶ್ಚಯದಲ್ಲಿ ಎಂದಿಗೂ ಅಂತರವಾಗಲಿಕ್ಕಿಲ್ಲ.

ಈ ಮಾತುಗಳನ್ನು ಕೇಳಿ ರಣಮಸ್ತಖಾನನ ಮೈಮೇಲಿನ ಎಚ್ಚರವು ತಪ್ಪಿದಂತಾಯಿತು. ಆತನಿಗೆ ಏನು ಮಾತಾಡಬೇಕು, ಏನು ಮಾಡಬೇಕು ಎಂಬದು ತಿಳಿಯದೆ ಹೋಯಿತು. ಆತನು ಕ್ರೋಧಾತಿರೇಕದಿಂದ ಥರಥರ ನಡುಗ ಹತ್ತಿದನು. ಆಗಿನ ಕಾಲದ ಆತನ ಮುದ್ರೆಯನ್ನು ನೋಡಿ, ಸ್ವತಃ ರಾಮರಾಜನು ಕೂಡ ಸ್ವಲ್ಪ ಬೆದರಿದನು. ಇನ್ನು ಇಪಕ್ಕೂ ಹೆಚ್ಚಿಗೆ ಮುಂದಕ್ಕೆ ಹೋಗದೆ, ಇಲ್ಲಿಂದ ಹಿಂದಕ್ಕೆ ಸರಿಯಬೇಕೆನ್ನುವ ಹಾಗೂ ಆತನಿಗೆ ಒಮ್ಮೆ ಅನಿಸಿತು; ಆದರೆ ಆತನು ತನ್ನ ಮನಸ್ಸನ್ನು ತಿರುಗಿಸಿ "ತನ್ನ ಮುಖದಿಂದ ಒಮ್ಮೆ ಉಚ್ಚರಿಸಿಹೋದ ಮಾತನ್ನು ಇನ್ನು ನಡಿಸದಿದ್ದರೆ, ಜನರ ಮನಸ್ಸಿನ ಮೇಲೆ ತನ್ನ ದರ್ಪದ ವಿಷಯವಾಗಿ ದುಷ್ಪರಿಣಾಮವಾದೀತು; ಆದ್ದರಿಂದ ತಾನು ನುಡಿದಂತೆ ನಡೆಯಲೇಬೇಕು" ಎಂದು ವಿಚಾರಮಾಡಿ, ಆತನು ಪುನಃ ಆ ಹೆಂಗಸರನ್ನುದ್ದೇಶಿಸಿ—ಯಾಕೆ, ಸುಮ್ಮನೆ ನಿಂತಿರಿ? ನೀವು ಬುರುಕಿಗಳನ್ನು ತೆಗೆಯಲೇಬೇಕು. ಎಲ್ಲರ ಬುರಕಿಗಳನ್ನು ತೆಗಿಸಿ, ನಿಮ್ಮ ಮುಖಮುದ್ರೆಯನ್ನು ನೋಡಿದ ಹೊರತು ನಾನು ಬಿಡುವವನಲ್ಲ, ಎಂದು ನುಡಿದು, ರಣಮಸ್ತಖಾನನ ಕಡೆಗೆ ತಿರುಗಿ—ನೀವು ನಿಮ್ಮ ಪದವಿಗೆ ಯೋಗ್ಯವಾಗಿ ಆಚರಿಸಿರಿ. ನೀವು ಏನು ತಿಳಿಸಬೇಕಾದದ್ದನ್ನು ನಿಮ್ಮ ಬಾದರಹರಿಗೆ ತಿಳಿಸಿರಿ. ಇಲ್ಲಿ ಅಮಲು ನಮ್ಮದಿರುತ್ತದೆ. ನಮ್ಮ ರಾಜ್ಯದ ಸುರಕ್ಷಿತೆಯ ಬಗ್ಗೆ ನಾವು ಎಚ್ಚರಪಡಲಿಕ್ಕಬೇಕು. ನೀವು ಸಾಹಸದಿಂದ ಮುಂದುವರಿದದ್ದರಿಂದ ಏನಾದರೂ ಅನರ್ಥವಾದಿತ, ಅದರ ಜವಾಬುದಾರಿಯು ನಮ್ಮ ಮೇಲೆ ಇರುವದಿಲ್ಲ. ಹಿಂದೂ ಜನರು ಸ್ತ್ರೀಯರ ವಿಡಂಬನೆಯನ್ನು ಎಂದೂ ಮಾಡುವದಿಲ್ಲ; ಒಂದು ಪಕ್ಷದಲ್ಲಿ ಅಪ್ಪಿತಪ್ಪಿ ಅಂಥ ಅಪರಾಧವು ಅವರಿಂದ ಘಟಿಸಿದರೆ, ಅವನ್ನು ಕೇಳುವ ಅಧಿಕಾರವು ನಿಮಗೆ ಇರುವದಿಲ್ಲ. ನೀವು ಹಿಂದಕ್ಕೆ ಸರಿದು, ನಿಮ್ಮ ಸ್ಥಳಕ್ಕೆ ಹೋಗಿರಿ. ನೀವು ಇಲ್ಲಿ ಒಬ್ಬರೇ ಇರುತ್ತೀರಿ. ಎಷ್ಟು ಹಾರಾಡಿದರೂ ನಾವು ನಿಮ್ಮ ಮಾತು ನಡೆಯುಗೊಡಲಿಕ್ಕಿಲ್ಲ.

ತನ್ನ ಈ ನಿರ್ಧಾರದ ಮಾತುಗಳನ್ನು ಕೇಳಿದಕೂಡಲೆ ರಣಮಸ್ತಖಾನನು ಅಂಜಿ ಹಿಂದಕ್ಕೆ ಸರಿದಾನೆಂದು ರಾಮರಾಜನು ತಿಳಿದಿದ್ದನು; ಆದರೆ ಆ ತರುಣ ವಕೀಲನು ಹಾಗೇನು ಮಾಡದೆ, ಮತ್ತೆ ಎರಡು ಹೆಜ್ಜೆ ಮುಂದಕ್ಕೆ ಬಂದು ಆ

ಸ್ತ್ರೀಯರನ್ನು ಕುರಿತು—" ನೀವು ಬುರಕಿಯನ್ನು ತೆಗೆದುಗಿಗಿದೀರಿ. ಯಾರು ನಿಮ್ಮ ಮೈಮುಟ್ಟುತ್ತಾರೋ ನಾನು ನೋಡುತ್ತೇನೆ" ಎಂದು ನುಡಿದು, ತನ್ನ ಖಡ್ಗವನ್ನು ಒರೆಯಿಂದ ಹಿರಿದನು. ಇದರಿಂದ ರಾಮರಾಜನ ಶಾಂತ ಮುದ್ರೆಯು ಅಣು ಮಾತ್ರವೂ ಕುಗ್ಗಲಿಲ್ಲ. ಆತನು ರಣಮಸ್ತಖಾನನಿಗೆ—" ನಿಮ್ಮ ಈ ದುರಾಗ್ರಹವನ್ನು ನೋಡಿ ನನ್ನ ಮನಸ್ಸಿನಲ್ಲಿ ಮತ್ತೊಂದು ಸಂಶಯವು ಉತ್ಪನ್ನವಾಗಿರುತ್ತದೆ. ನೀವು ಇವರನ್ನು ಇಷ್ಟು ಮೇಲುಗಟ್ಟಿ ಬರುವದರಿಂದ, ನಿಮಗೆ ಇವರ ಸಂಬಂಧವೇನಾದರೂ ಇರಲಿಕ್ಕೆ ಬೇಕು. ಸರಿ ಸರಿ, ಈಗ ನನ್ನ ಲಕ್ಷದಲ್ಲಿ ಬಂದಿತು. ಈ ಜನರು ನಿಮ್ಮ ಬಳಿಗೆ ಕಾಗದ-ಪತ್ರಗಳನ್ನು ಕೊಡುವದಕ್ಕಾಗಿಯೇ ಈ ಹಾದಿಯಿಂದ ಬಂದಿರಬಹುದು. ನೀವು ಏನೇನು ಒಳಸಂಚುಗಳನ್ನು ನಡಿಸಿರುವಿರೆಂಬದನ್ನು ಕೇಳಿಕೊಂಡು ಹೋಗುವ ಉದ್ದೇಶವೂ ಇವರದಿರಬಹುದು. ದರಗೆಯ ಹರಿಕೆ ಗಿರಿಕೆಗಳೆಲ್ಲ ಸುಳ್ಳು; ಇಲ್ಲದಿದ್ದರೆ ನೀವು ಇಷ್ಟು ಮೇಲುಗಟ್ಟಿ ಬರುವ ಕಾರಣವೇನು? ಈಗ ನಾನು ಕೈಮುಟ್ಟಿ ಪ್ರತಿಯೊಬ್ಬರ ಬುರಕಿಯನ್ನು ತೆಗೆಯುತ್ತೇನೆ. ನೀವು ನನ್ನ ಜೀವಕ್ಕೆ ಅಪಾಯಮಾಡಲಿಕ್ಕೆ ಮುಂದುವರಿದರೆ....."

ಆದರೆ ಆತನ ಮುಖದಿಂದ ಮುಂದಿನ ಮಾತುಗಳು ಹೊರಡಲಿಲ್ಲ. ಆತನು ಸ್ವಲ್ಪ ಹೊತ್ತು ಸುಮ್ಮನಿದ್ದು, ಬಹು ಕಷ್ಟದಿಂದ ಖಾನನನ್ನು ಕುರಿತು—" ನಿಮಗೆ ಸ್ವಲ್ಪವೂ ಅಪಾಯವಾಗಬಾರದೆಂದು ನಾನು ಇಚ್ಛಿಸುತ್ತೇನೆ; ಇದರ ಮೇಲೆ ನಿಮ್ಮ ಇಚ್ಛೆಯು" ಅನ್ನಲು, ಆಗ ರಣಮಸ್ತಖಾನನು—" ನನ್ನ ಶರೀರದ ಸಾವಿರಾರು ಚೂರುಗಳಾದರೂ ಚಿಂತೆಯಿಲ್ಲ; ಆದರೆ ನಾನು ಬದುಕಿರುವವರೆಗೆ ಈ ಸ್ತ್ರೀಯರ ಮೈಮೇಲಿನ ಬುರಕಿಗಳನ್ನು ದೂರಮಾಡಗೊಡಲಿಕ್ಕಿಲ್ಲ" ಎಂದು ಉತ್ತರ ಕೊಟ್ಟನು. ಮಾತಾಡುವಾಗಿನ ಆತನ ಅವಿರ್ಭಾವವು ವಿಲಕ್ಷಣವಾದದ್ದಿತ್ತು. ಈತನು ನುಡಿದಂತೆ ನಡೆಯದೆ ಬಿಡನೆಂದು ಎಲ್ಲರ ನಂಬಿಗೆಯಾಯಿತು. ರಣಮಸ್ತಖಾನನು ಇಷ್ಟು ಮಾತಾಡುವದರೊಳಗಾಗಿ ಏನು ಚಮತ್ಕಾರವಾಯಿತೋ ತಿಳಿಯದು. ಆ ಸ್ತ್ರೀಯರಲ್ಲಿ ಮುಖ್ಯಳಾದ ತರುಣಿಯು, ಒಮ್ಮೆಲೆ ತನ್ನ ಬುರಕಿಯನ್ನು ಕಳಚಿ ಜೆಲ್ಲಿ, ತನ್ನ ಟೊಂಕದ ಮೇಲೆ ಎರಡೂ ಕೈಯಿಟ್ಟುಕೊಂಡು ಮುಖವೆತ್ತಿ ನಿಂತಳು. ಆಗ ಆಕೆಯ ಮುಖದಿಂದ—'ಛೇ ಛೇ' ನನ್ನ ಸಲುವಾಗಿ ಇಂಥ ಶೂರ ಪುರುಷನ ಶರೀರದ ಸಾವಿರಾರು ತುಣುಕುಗಳಾಗುವದು ಸರಿಯಲ್ಲ. ಅರಸಾ ನೋಡು; ನಿನ್ನ ಸಂಶಯವಿದ್ದದ್ದನ್ನು ದೂರಮಾಡಿಕೋ; ಆದರೆ ನೀನು ಸರಗಿಗೆಗಂಟು ಹೊಡೆದುಕೊಳ್ಳ ಇಂದಿನ

ನಿನ್ನ ಈ ಕೃತಿಯ ಪರಿಣಾಮವು ಘೋರವಾಗುವದು! ಒಹಳ ಘೋರವಾಗುವದು!!



೧೩ ನೆಯ ಪ್ರಕರಣ.—ಸಂಘಾಷಣೆ.



ಇಷ್ಟು ಶಬ್ದಗಳನ್ನು ಆ ತರುಣಿಯು ಅಚ್ಚ ಪಾರಸೀ ಭಾಷೆಯಲ್ಲಿ ತನ್ನ ಸ್ವಾಭಾವಿಕವಾದ ಮಂಜುಲಸ್ವರದಿಂದ, ಆದರೆ ಸಂತಾಪದ ಮೂಲಕ ಅತ್ಯಂತ ತೀವ್ರಸ್ವರದಿಂದ ನುಡಿಯಲು, ಅವು ಎಲ್ಲರ ಹೃದಯದಲ್ಲಿ ಏಪಲಸ್ತ್ರಬಾಣಗಳಂತೆ ನಟ್ಟವು. ಎಲ್ಲರು ಬೆರಗಾಗಿ ಭಯದಿಂದ ಆಕೆಯನ್ನು ನೋಡಹತ್ತಿದರು. ರಣಮಸ್ತಖಾನನ ಕಣ್ಣುಗಳಂತು ಪೂರ್ಣವಾಗಿ ಆಕೆಯ ಮುಖಮುದ್ರೆಯಲ್ಲಿ ನಟ್ಟು ಹೋದವು. ಆಕೆಯು ಅತ್ಯಂತ ರೂಪವತಿಯಾಗಿದ್ದಳು. ರಾಮರಾಜನಾದರೂ ಆಕೆಯನ್ನು ಎವೆಯಿಕ್ಕದೆ ನೋಡಹತ್ತಿದನು. ಆ ಸಂತಪ್ತಳಾದ ಸುಂದರಿಯು ಸುಮ್ಮನಾದಕೂಡಲೆ ಆಕೆಯ ವಿಶಾಲವಾದ ನೇತ್ರಗಳಿಂದ ಒಂದೇಸವನೆ ಅಶ್ರುಗಳು ಸುರಿಯಹತ್ತಲು, ಅವುಗಳನ್ನು ನೋಡಿ ಜನರ ಮನಸ್ಸಿನ ಸ್ಥಿತಿಯು ಬಹು ಚಮತ್ಕಾರವಾಯಿತು. ರಾಮರಾಜನ ಮನಸ್ಸಿನ ಸ್ಥಿತಿಯಂತು ವಿಲಕ್ಷಣವಾಯಿತು- ಮುಂದೆ ಏನು ಮಾಡಬೇಕೆಂಬದು ಆತನಿಗೆ ತೋಚಲೊಲ್ಲದು. ಆ ಸ್ತ್ರೀಯುಕೊಟ್ಟ ಶಾಪವು ತನಗೆ ತಟ್ಟಬಹುದೋ, ಎಂಬ ಸಂಶಯವು ಆತನನ್ನು ಬಾಧಿಸ ಹತ್ತಿತು. ಆಕೆಯು ಶಾಪವನ್ನೇ ಕೊಟ್ಟಳೆಂದು ಆತನು ತಿಳಕೊಂಡನು. ದರ್ಬಾರದೊಳಗಿನ ಬಹುಜನರು ಹಾಗೆಯೇ ತಿಳಕೊಂಡರು; ಆದರೆ ಈ ಪ್ರಸಂಗದಿಂದ ಹ್ಯಾಗಾದರೂ ಪಾರಾಗಬೇಕೆಂದು ತಿಳಿದು ರಾಮರಾಜನು ರಣಮಸ್ತಖಾನನಿಗೆ— "ಇನ್ನು ನೀವು ಈ ಜನರನ್ನು ನಿಮ್ಮ ಬಿಡಾರಕ್ಕೆ ಕರಕೊಂಡು ಹೋಗಿ, ಇವರನ್ನು ಮುಂದಕ್ಕೆ ಕಳಿಸುವ ವ್ಯವಸ್ಥೆ ಮಾಡಿರಿ. ಸಾಮೋಪಚಾರದಿಂದ ಎಲ್ಲಮಾತಿನ ವಿಚಾರಮಾಡಿದ್ದರೆ, ಈ ಮನೆಗೆ ಬರುತ್ತಿದ್ದಿಲ್ಲ", ಎಂದು ನುಡಿದು, ಆ ತರುಣಿಯನ್ನು ಕುರಿತು, ಆದರೆ ಆಕೆಯಕಡೆಗೆ ನೋಡದೆ—"ಇನ್ನು ನೀವು ನಿಮ್ಮ ಬುರುಕಿಯನ್ನು ಹಾಕಿಕೊಂಡು ಇವರ ಸಂಗಡ ಹೋಗಿರಿ. ಇವರು ನಿಮ್ಮನ್ನು ನಿಮ್ಮ ಊರಿಗೆ ಕಳಿಸುವ ವ್ಯವಸ್ಥೆ ಮಾಡುವರು" ಎಂದು ಹೇಳಿದನು. ಆ ಮೇಲೆ ಅಲ್ಲಿ ಕುಳಿತಿರುವ ಜನರಿಗೆ ಹೊರಟುಹೋಗಲು ಸಂಜ್ಞೆ

ಮಾಡಿ ತಾನು ಕುಳಿತಸ್ಥಳದಿಂದ ಎದ್ದು, ಮತ್ತೆ ರಣಮಸ್ತಖಾನನಿಗೆ—ನೀವು ನನ್ನಮಾತು ಕೇಳುವಹಾಗಿದ್ದರೆ, ಇವರನ್ನು ನಮ್ಮ ರಮ್ಯೋದ್ಯಾನಕ್ಕೆ ಕರ ಕೊಂಡು ಹೋಗಿ, ಅಲ್ಲಿ ಉಪಾಹಾರ ಮಾಡಿಸಿ, ವಿಶ್ರಾಂತಿಯನ್ನು ಹೊಂದಿದ ಬಳಿಕ, ಇವರನ್ನು ಕುಂಜವನಕ್ಕೆ ಕರಕೊಂಡು ಹೋಗಿರಿ. ಇವರಿಗೆ ಬೇಕಾಗುವ ಮೇಣೆ ಮೊದಲಾದವುಗಳ ವ್ಯವಸ್ಥೆಯನ್ನು ನಾನು ಮಾಡಿಸಿ ಕೊಡುತ್ತೇನೆ, ಅನ್ನಲು—ಅದನ್ನು ಕೇಳಿ, ಆ ತರುಣಿಯು ಮತ್ತೊಮ್ಮೆ ಸಂತಾಪದಿಂದ—"ಇನ್ನು ನಾನು ನಿಮ್ಮಗಡಿಯಲ್ಲಿ ಅನ್ನೋದಕಗ್ರಹಣಮಾಡುವದಂತು ಇರಲಿ. ಉಗುಳುಸಹ ಗುಟಕರಿಸುವಹಾಗಿಲ್ಲ. ಇನ್ನು ಈ ಜಗತ್ತಿನಲ್ಲಿ ನನ್ನದೇನು ಆಗಬೇಕಾಗಿದೆ? ನನ್ನ ತಂದೆಯು...." ಎಂದು ನುಡಿಯುತ್ತಿರಲು, ಮುಂದಿನ ಶಬ್ದಗಳು ಆಕೆಯ ಮುಖದಿಂದ ಹೊರಡದಾದವು. ಆಕೆಯ ಕಣ್ಣುಗಳೊಳಗಿಂದ ಒಂದೇಸವನೆ ನೀರುಗಳು ಸುರಿಯಹತ್ತಿದವು. ಅದನ್ನು ನೋಡಿ ರಾಮರಾಜನು ಮತ್ತೊಮ್ಮೆ ರಣಮಸ್ತಖಾನನಿಗೆ—"ನಾನು ಇನ್ನು ವಿಶೇಷ ಹೇಳುವದಿಲ್ಲ. ಈ ನಮ್ಮ ಮನುಷ್ಯನನ್ನು ನಿಮ್ಮ ವಶಕ್ಕೆ ಕೊಟ್ಟಿರುತ್ತೇನೆ. ಈತನು ನಿಮಗೆ ಬೇಕಾದ ಅನುಕೂಲತೆಯನ್ನು ಮಾಡಿಕೊಡುವನು" ಎಂದು ಹೇಳಿ, ಅಲ್ಲಿಂದ ಹೊರಟುಹೋದನು. ರಾಮರಾಜನು ಹೊರಟುಹೋದ ಬಳಿಕ ರಣಮಸ್ತಖಾನನ ಮೈ ಮೇಲೆ ಎಚ್ಚರಬಂದಂತಾಯಿತು. ಆಮೇಲೆ ಆತನು ಅಸುಂದರಿಯ ಕಡೆಗೆ ಹೊರಳಿ—"ಈ ಹದ್ದಿನಲ್ಲಿ ನೀರುಸಹ ಕುಡಿಯಲಿಕ್ಕಿಲ್ಲೆಂದು ನೀವು ಹೇಳಿದ್ದು ಯೋಗ್ಯವೇ ಸರಿ; ಆದರೆ ಕುಂಜವನವು ಇಲ್ಲಿಂದ ದೂರವಿರುವದರಿಂದ ಸ್ವಲ್ಪ ಉಪಾಹಾರಮಾಡುವದು ನೆಟ್ಟಗೆ ಕಾಣುತ್ತದೆ. ಸುಮ್ಮನೆ ಉಪವಾಸ ಬಿದ್ದರೆ ಪ್ರಯೋಜನವಾಗದು, ಎಂದು ಹೇಳಲು, ಆ ತರುಣಿಯು ಅದಕ್ಕೆ ಒಪ್ಪಲಿಲ್ಲ. ಆಮೇಲೆ ರಣಮಸ್ತಖಾನನು, ಆಗ್ರಹಮಾಡದೆ ರಾಮರಾಜನ ಸೇವಕನಿಗೆ ಹೇಳಿ, ತನಗೆ ಬೇಕಾದ ಅನುಕೂಲತೆಯನ್ನು ಮಾಡಿಸಿಕೊಂಡು ಆ ಸ್ತ್ರೀಯರೊಡನೆ ಬೇಗನೆ ಕುಂಜವನದಕಡೆಗೆ ಸಾಗಿದನು.

ಈ ಮೊದಲೆ ಕುಂಜವನದಿಂದ ವಿಜಯನಗರಕ್ಕೆ ಬರುವಾಗ ರಣಮಸ್ತಖಾನನು ತನ್ನ ಕುದುರೆಯನ್ನು ವೇಗದಿಂದ ಬಿಟ್ಟಂತೆ ಈಗ ಬಿಡುವಹಾಗಿದ್ದಿಲ್ಲ; ಯಾಕಂದರೆ, ಆ ಸ್ತ್ರೀಯರ ಮೇಣೆ-ಡೋಲಿಗಳನ್ನನುಸರಿಸಿ ಆತನು ಈಗ ಹೋಗಬೇಕಾಗಿತ್ತು. ಹೀಗೆ ಸಾವಕಾಶವಾಗಿ ಹೋಗುವಾಗ ಆತನ ಮನಸ್ಸಿನಲ್ಲಿ ಪಲವು ವಿಚಾರಗಳು ಉತ್ಪನ್ನವಾದವು. ಆ ತರುಣಿಯ ರೂಪಕ್ಕೆ ರಣಮಸ್ತಖಾನನು ಮೋಹಿತನಾಗಿದ್ದನು. ರಾಮರಾಜನು ಈ ತರುಣಿಯ ಬುರಕಿಯ

ನ್ನು ತೆಗೆಸಿ ಅನ್ಯಾಯಮಾಡಿದರೂ, ಅದೊಂದು ತನ್ನಮೇಲೆ ದೊಡ್ಡ ಉಪಕಾರವೇ ಆದಂತಾಯಿತೆಂದು ಖಾನನು ತಿಳಿದನು. ರಾಮರಾಜನು ಹಾಗೆ ಮಾಡದಿದ್ದರೆ, ಆ ಸುಂದರಿಯ ರೂಪವು ರಣಮಸ್ತಖಾನನ ಕಣ್ಣಿಗೆ ಬೀಳುವ ಸಂಭವವಿದ್ದಿಲ್ಲ. ಇದರಿಂದ ರಣಮಸ್ತಖಾನನು ದುರಾಚಾರಕ್ಕೆ ಮನಸ್ಸು ಮಾಡುವಂಥ ಕ್ಷುದ್ರನಿದ್ದನೆಂದಾಗಲಿ, ರಾಮರಾಜನಮೇಲಿನ ಯಾವತ್ತು ಸಿಟ್ಟನ್ನು ಆ ತರುಣ ಮುಸಲ್ಮಾನನು ಬಿಟ್ಟುಬಿಟ್ಟನೆಂದಾಗಲಿ ವಾಚಕರು ಭಾವಿಸಬಾರದು. ಆದರೆ ಮನುಷ್ಯಸ್ವಭಾವಕ್ಕನುಸರಿಸಿ, ಆ ತರುಣನ ಮನಸ್ಸು, ಆ ತರುಣಿಯ ಸೌಂದರ್ಯದಿಂದ ಆಕರ್ಷಿತವಾಗಲು, ಆ ಗೊಂದಲದಲ್ಲಿ ಆತನ ಮನಸ್ಸು ಅನ್ಯವಿಚಾರಗಳನ್ನು ಬಿಟ್ಟು, ಆ ಸುಂದರಿಯ ವಿಷಯದ ವಿಚಾರದಲ್ಲಿಯೇ ತೊಡಗಿತೆಂದು ತಿಳಿಯಬೇಕು. ಹಾದಿಯಲ್ಲಿ ಹೋಗಹೋಗುತ್ತ ಇದೊಂದೇ ವಿಚಾರಕ್ಕೆ ಆತನಿಗೆ ಅವಕಾಶ ದೊರೆತದ್ದರಿಂದ, ಆತನು ವಿಚಾರಮಾಡುತ್ತ ಮಾಡುತ್ತ ಬಹು ದೂರದ ವಿಚಾರಕ್ಕೆ ಹೋಗಹತ್ತಿದನು. ಈ ಸುಂದರಿಯ ಜನ್ಮದ ಸೋಬತಿಯು ತನಗಾದರೆ ಧನ್ಯನಾದೇನಲ್ಲ, ಎಂತಲೂ ಆತನು ಭಾವಿಸಹತ್ತಿದನು. ನಮ್ಮಿಬ್ಬರ ಸಂಘಟನವು ಯೋಗವಿರುವದರಿಂದಲೇ ಈ ಅಕಲ್ಪಿತ ಪ್ರಸಂಗವು ಒದಗಿತೆಂದು ಆತನು ತಿಳಕೊಂಡನು. ಆದರೆ ಈ ಮಾತು ಹ್ಯಾಗೆ ಕೂಡಿಬರಬೇಕೆಂಬ ಸಂಶಯದಿಂದ ಆತನು ನಡನಡುವೆ ಸ್ವಲ್ಪ ಉದಾಸೀನನಾಗುವನು. ಈಕೆಯು ದೊಡ್ಡ ಸರದಾರನ ಮಗಳಾದದ್ದರಿಂದ ನನ್ನ ಕೈ ಒಡಿಯುವಸಂಭವವಿಲ್ಲೆಂಬ ನಿರಾಶೆಯು ಆತನನ್ನು ಬಾಧಿಸಹತ್ತಿತು; ಆದರೂ ಈಕೆಯನ್ನು ವಿಜಾಪುರಕ್ಕೆ ಈಕೆಯು ಅಬಚಿಯ ಮನೆಗೆ ಕಳಿಸುವದರೊಳಗೆ ಈಕೆಯ ಮನಸ್ಸಿನೊಳಗಿದ್ದದ್ದನ್ನು ತಿಳಕ್ಕೊಳ್ಳಬೇಕೆಂದು ಆತನು ನಿಶ್ಚಯಿಸಿದನು. ರಾಮರಾಜನಿಂದ ನಮ್ಮಿಬ್ಬರಿಗೂ ಆದ ಅಪಮಾನದ ಸೇಡು ತೀರಬೇಕಾದರೆ, ನಮ್ಮಿಬ್ಬರ ವಿವಾಹವಾಗುವದೇ ಅನುಕೂಲವೆಂದು ಆತನು ತಿಳಿದನು. ಹಾದಿಯ ನಡೆಯುವಾಗೆಲ್ಲ ಇವೇ ವಿಚಾರಗಳು ರಣಮಸ್ತಖಾನನ ಮನಸ್ಸಿನಲ್ಲಿ ನಡದಿದ್ದವು. ಆ ಸುಂದರಿಯ ಮನಸ್ಸಿನೊಳಗಿದ್ದದ್ದನ್ನು ಆಕೆಯ ದಾಸಿಯಮುಖಾಂತರವಾಗಿ, ಇಲ್ಲವೆ ತನ್ನ ತಾಯಿಯ ವೃದ್ಧದಾಸಿಯ ಮುಖಾಂತರವಾಗಿ ತಿಳಕೊಳ್ಳಬೇಕೆಂದು ಆತನು ಗೊತ್ತುಮಾಡಿದನು. ಮುಂದೆ ಕೆಲವು ಹೊತ್ತಿನಮೇಲೆ ಅವರೆಲ್ಲರು ಕುಂಜವನವನ್ನು ಮುಟ್ಟಿದರು. ರಣಮಸ್ತಖಾನನು ಆ ತರುಣಿಯನ್ನು ತನ್ನ ತಾಯಿಯಬಳಿಗೆ ಕಳಿಸಿ, ಆಕೆಯ ಯಾವತ್ತು ಯೋಗಕ್ಷೇಮದ ಬಗ್ಗೆ ಅನುಕೂಲಮಾಡಿಕೊಟ್ಟನು. ಆನೇಲೆ ರಣಮಸ್ತಖಾನನು ಊಟವಾಯಿತು, ಬಂದ ಜನರೂ ಉಂಡರು.

ಇತ್ತ ರಾಮರಾಜನು ಬಹಳಪಶ್ಚಾತ್ತಾಪಕ್ಕೆ ಒಳಗಾಗಿದ್ದನು. ಆತನ ಮನಸ್ಸಿಗೆ ಬಹಳ ಚಡಪಡಿಕೆಯಾಗಿತ್ತು. ಆತನು ಈವರೆಗೆ ಎಷ್ಟೋ ನ್ಯಾಯಾನ್ಯಾಯದ ಕೆಲಸಗಳನ್ನು ಮಾಡಿದ್ದನು; ಆದರೆ ಅವುಗಳಲ್ಲಿ ಒಂದಾದರೂ ಇಂದಿನ ಪ್ರಸಂಗದಷ್ಟು ಆತನ ಮನಸ್ಸಿಗೆ ಹತ್ತಿದ್ದಿಲ್ಲ. "ನಾನು ಇಂದು ಒಬ್ಬ ಕುಲಸ್ತ್ರೀಯ ಅಪಮಾನವನ್ನಷ್ಟೇ ಅಲ್ಲ, ಲಜ್ಜಾಹರಣವನ್ನೂ ಮಾಡಿದೆನಲ್ಲ! ಹೀಗೆ ಮಾಡಲಕ್ಕೆ ಕಾರಣವೇನು ಇದ್ದಿಲ್ಲ. ಗಂಡಸರು ಬುರುಕೆಯ ನೆವದಿಂದ ಹೆಂಗಸರಂತೆ ನಟಿಸುತ್ತಾರೆಂಬ ಸಂಶಯ ಬಂದಿದ್ದರೆ, ಅವರ ಪರೀಕ್ಷೆಯನ್ನು ನಮ್ಮ ಸ್ತ್ರೀಯರ ಮುಖಾಂತರ ಮಾಡಿಸಬಹುದಾಗಿತ್ತು. ಕೂಡಿದ ದರ್ಬಾರದಲ್ಲಿ ಹೆಂಗಸರ ಬುರುಕೆಯನ್ನು ತೆಗಿಸಿದ್ದು ಅನ್ಯಾಯವಾಯಿತು" ಎಂಬ ವಿಚಾರದಿಂದ ಆತನ ಮನಸ್ಸು ಅಸಮಾಧಾನಪಡುತ್ತಿರುವಾಗ, ಪುರಾಣಾಂತರದಲ್ಲಿ ದ್ರೌಪದಿಯೇ ಮೊದಲಾದ ಕುಲಸ್ತ್ರೀಯರ ಅಪಮಾನದ ದುಷ್ಪರಿಣಾಮವಾದದ್ದು ನೆನಪಾಗಿ, ಆತನ ಮನಸ್ಸು ಮತ್ತಿಷ್ಟು ಉದ್ವಿಗ್ನವಾಯಿತು. "ಇಂದಿನ ಈ ನಿನ್ನ ಕೃತ್ಯದಪರಿಣಾಮವು ಘೋರವಾಗುವದು! ಬಹು ಘೋರವಾಗುವದು" ಎಂದು ಆ ಸ್ತ್ರೀಯು ಸಂತಾಪದಿಂದ ನುಡಿದದ್ದು ಆತನ ಕಿವಿಯಲ್ಲಿ ಬಾಧಿಸಹತ್ತಿತು. ತನಗೆ ಆ ಶಬ್ದದ ಸ್ಮರಣವಾಗಬಾರದೆಂದು ಆತನು ಬಹಳ ಪ್ರಯತ್ನ ಮಾಡಿದನು; ಆದರೆ ಅದೆಲ್ಲ ವ್ಯರ್ಥವಾಯಿತು. ತನ್ನ ಕೆಲಸಗಳನ್ನೆಲ್ಲ ತೀರಿಸಿಕೊಂಡು ಆತನು ಶಯ್ಯಾಗೃಹದಲ್ಲಿ ಹೋಗಿ ಮಲಗಿಕೊಂಡನು. ಆದರೆ ಆ ತರುಣಿಯು ಉಚ್ಚರಿಸಿದ ಶಬ್ದಗಳು ಆತನಿಗೆ ಕೇಳಿಸದೆಯಿರಲೊಲ್ಲವು; ಮತ್ತು ಆ ತರುಣಸ್ತ್ರೀಯ ಉಗ್ರಮೂರ್ತಿಯು ಆತನ ಕಣ್ಣಿಗೆ ಕಟ್ಟಿದ್ದು ಮರೆಯಾಗಲೊಲ್ಲದು. ಇಂಥ ಸಣ್ಣಮಾತಿಗಾಗಿ ಇಷ್ಟು ಅಸಮಾಧಾನವಾದ ಬಳಿಕ ಮುಂದಿನ ದೊಡ್ಡದೊಡ್ಡ ಕಾರ್ಯಗಳು ನನ್ನಿಂದ ಹ್ಯಾಗಾದಾವು! ನಾನು ಯೋಗ್ಯವಾದದ್ದನ್ನೇ ಮಾಡಿದ್ದೇನೆ. ಹೆಂಗಸರ ಕೆಲಸ, ಕೂಡಿದ ದರ್ಬಾರದಲ್ಲಿ ಬುರುಕೆ ತೆಗದದ್ದರಿಂದ ಸಂತಾಪವಾಗಿ ನಾಲ್ಕು ಬಿರಿನುಡಿಗಳನ್ನು ಆಡಿರಬಹುದು. ಇದರಲ್ಲಿ ಶಾಪಕೊಟ್ಟಹಾಗೇನಾಯಿತು! ಮುಸಲ್ಮಾನರೆಲ್ಲರು ಒಕ್ಕಟ್ಟಾಗುವಂತೆ ಈಗ ಒಳಸಂಚು ನಡೆದಿರುವದರಿಂದ; ನಾನು ಹೀಗೆ ಶೋಧಿಸಿದ್ದರಲ್ಲಿ ಅನ್ಯಾಯವಾದರೂ ಏನಿರುತ್ತದೆ? ನಾನೇನು ಅವರ ರೂಪವನ್ನು ನೋಡಬೇಕೆಂದು ಅವರ ಬುರುಕೆಗಳನ್ನು ತೆಗೆಸಿರುವದಿಲ್ಲ. ಇಷ್ಟೂ ತೆಗೆಸುತ್ತಿದ್ದಿಲ್ಲ; ಆದರೆ ನಾನಾಗಿ ನನ್ನ ರಾಜ್ಯದಲ್ಲಿ ಇಟ್ಟುಕೊಂಡಿದ್ದ ಆ ತರುಣವಕೀಲನು ಸೊಕ್ಕಿನಿಂದ ನಡೆದನು. ಅವನ ಸೊಕ್ಕಿನ ನಡತೆಯನ್ನು ನಡೆಯಗೊಡುವದು ನನಗೆ ಅಸಮಾನಕರವಲ್ಲವೆ? ಎಂಬಿವೇ ಮೊದಲಾದ ವಿಚಾರಗಳಿಂದ ಅವನು ತನ್ನ ಮನಸ್ಸಿನ

ಸಮಾಧಾನಮಾಡಿಕೊಳ್ಳಹೋದನು; ಆದರೆ—"ನೀನು ದುರ್ಬುದ್ಧಿಯಿಂದಲೇ ಈ ಕಾರ್ಯ ಮಾಡಿದೆಯೆ"ಂದು ಆತನ ಮನಸ್ಸು ಕಟಿಯಹತ್ತಿತು. ಆತನು ಅಂದಿನ ಪ್ರಸಂಗವನ್ನು ಮೊದಲಿನಿಂದ ಕಡೆಯವರೆಗೆ ಮತ್ತೊಮ್ಮೆ ನೆನಪುಮಾಡಿಕೊಂಡನು. ಅಂದು ಅವನ ಮನಸ್ಸು ಪಶ್ಚಾತ್ತಾಪದಿಂದ ಶುದ್ಧವಾದಂತೆ ಆಗಿತ್ತು. ಈ ಸ್ಥಿತಿಯಲ್ಲಿ, ಆತನು ಬಹುದಿವಸದಿಂದ ಮರೆತುಬಿಟ್ಟಂತೆ ಆಗಿದ್ದ ಮೆಹೇರಜಾನಳ ಸುಂದರಪ್ರತಿಮೆಯು ಆತನ ಮನಃಪಟಲದ ಮೇಲೆ ಮೂಡಿತು. ಕೂಡಲೆ ಆಕೆಯ ಅತ್ಯಂತ ಸುಂದರರೂಪದ, ಹಾಗು ಅತ್ಯಂತ ಪ್ರೇಮಲ ಸ್ವಭಾವದ ಸ್ಮರಣವಾಗಿ ರಾಮರಾಜನು ಬಹು ದುಃಖಿತನಾದನು. ಆತನು ಹಾಸಿಗೆಯಮೇಲೆ ಮಲಗಿಕೊಳ್ಳಲಾರದೆ, ಚಟ್ಟನೆ ಮೇಲಕ್ಕೆದ್ದು ಹುಚ್ಚನಹಾಗೆ ಅತ್ತಿತ್ತ ನೋಡಹತ್ತಿದನು. ಆತನಿಗೆ ಮೆಹೇರಜಾನಳ ವೃತ್ತಾಂತವೆಲ್ಲ ನೆನಪಾಯಿತು. ಇದು ಆತನ ತಾರುಣ್ಯದೊಳಗಿನ ಅತ್ಯಂತ ರಮಣೀಯವಾದ ದ್ದೊಂದು ಪ್ರಸಂಗವಾಗಿತ್ತು. "ತಾನು ಆಡಿದಂತೆ ಆಕೆಯನ್ನು ಪಟ್ಟರಾಣಿಯಾಗಿ ಮಾಡಿಕೊಳ್ಳುವದರೊಳಗೇ ಆ ಮೇಹೇರಜಾನಳು ತನ್ನಮೇಲೆ ತಪ್ಪು ಹೊರಿಸಿ, ಅವಸರದಿಂದ ಹೊರಟುಹೋದಳು," ಎಂದು ಆತನು ಸಮಾಧಾನ ಮಾಡಿಕೊಳ್ಳಹತ್ತಿದನು. ಆದರೆ ಅದರಿಂದ ಪ್ರಯೋಜನವೇನೂ ಆಗದೆ, ಈಗಲೇ ಕುಂಜವನಕ್ಕೆ ಹೋಗಿ, ಬರಬೇಕೆಂಬ ಇಚ್ಛೆಯುಮಾತ್ರ ಆತನಿಗೆ ಉತ್ಪನ್ನವಾಯಿತು. ಆಗ ಮಧ್ಯರಾತ್ರಿಯಾಗುತ್ತ ಬಂದಿತ್ತು. ಅಂಥ ಹೊತ್ತಿನಲ್ಲಿ ಒಬ್ಬನೇ ಕುಂಜವನಕ್ಕೆ ಹೋಗುವದು ಸರಿಯಲ್ಲೆಂಬದು ಆತನ ಮನಸ್ಸಿನಲ್ಲಿ ಬರಲಿಲ್ಲ. ಇದಲ್ಲದೆ ಕುಂಜವನವು ಈಗ ವಿಜಾಪುರದ ವಕೀಲನ ಕೈಯೊಳಗಿರುತ್ತದೆಂಬದನ್ನು ಆತನು ಮರೆತಿದ್ದನೋ ಏನೋ ಯಾರಿಗೆ ಗೊತ್ತು! ಆತನು ಒಮ್ಮೆಲೆ ತನ್ನ ಸೇವಕನನ್ನು ಕರೆದು, ತನ್ನ ಕುದುರೆಗೆ ಜೀನುಹಾಕಿಕೊಂಡು ಬಾರೆಂದು ಆಜ್ಞಾಪಿಸಿದನು. ಈ ಅಪ್ಪಣೆಯನ್ನು ಕೇಳಿ ಸೇವಕನಿಗೆ ಬಹಳ ಆಶ್ಚರ್ಯವಾಯಿತು. ಇಷ್ಟು ರಾತ್ರಿಯಲ್ಲಿ ಎಲ್ಲಿಗೆ ಹೋಗುತ್ತಿರಬಹುದೆಂದು ಆ ಸೇವಕನು ಆಲೋಚಿಸತೊಡಗಿದನು; ಆದರೆ ಬಾಯಿಬಿಟ್ಟುಹಾಗೆ ರಾಮರಾಜನನ್ನು ಕೇಳುವ ಧೈರ್ಯವು ಆತನಿಗಾಗಲಿಲ್ಲ. ಆದರೂ ಆತನು ತನ್ನ ಒಡೆಯನಿಗೆ—"ಸಂಗಡ ಯಾರು ಬರುವರು?" ಎಂದು ಕೇಳಲು, ರಾಮರಾಜನು ಒಮ್ಮೆಲೆ ಅವನ ಮೈಮೇಲೆ ಕವಕ್ಕನೆ ಹೋಗಿ—ಯಾರೆಂದರೆ? ಧನಮಲ್ಲನು! ಎಲ್ಲಿಹೋದನವನು?" ಎಂದು ಪ್ರಶ್ನೆಮಾಡಿದನು. ಈ ಪ್ರಶ್ನವನ್ನು ಕೇಳಿಯಂತು ಆ ಸೇವಕನು ಬೆರಗಾದನು. ಬಹಳ ದಿವಸಗಳಹಿಂದೆ ಧನಮಲ್ಲನೆಂಬ ಒಬ್ಬ ಸೇವಕನು ಇದ್ದನೆಂಬದು ಆ ಹೊಸ ಸೇವಕನಿಗೆ ಕೇಳಿಮಾತ್ರ ಗೊತ್ತಿತ್ತು.

ಧನಮುಲ್ಲನು ಒಮ್ಮಿಂದೊಮ್ಮೆ ಇಲ್ಲದಹಾಗೆ ಆದನೆಂಬದನ್ನೂ ಜನರ ಮುಖದಿಂದ ಆ ಸೇವಕನು ಕೇಳಿದ್ದನು. ಅಂಥವನ ನೆನಪು ಈಗ ಮಹಾರಾಜರಿಗೆ ಒಮ್ಮಿಂದೊಮ್ಮೆ ಯಾಕೆ ಆಗಿರಬಹುದು? ನೆನಪು ಆದರೂ ಆಗಲಿ, ಅವನೇ ಈಗ ಚಾಕರಿಯಮೇಲೆ ಇರುವನೋ ಅನ್ನುವಂತೆ ಮಹಾರಾಜರು ಈಗ ಯಾಕೆ ಮಾತಾಡಿರಬಹುದು? ಎಂಬ ಪ್ರಶ್ನೆಗಳು ಉತ್ಪನ್ನವಾಗಿ, ಆ ಸೇವಕನಿಗೆ ಆಶ್ಚರ್ಯವಾಯಿತು. ಆದರೆ ಹಾಗೆ ಆಶ್ಚರ್ಯಪಡುತ್ತ ನಿಂತುಕೊಳ್ಳಲಿಕ್ಕೆ ಆದು ಸಮಯವಾಗಿದ್ದಿಲ್ಲ. ಧನಮುಲ್ಲನು ಈಗೆಲ್ಲಿ ಇದ್ದಾನೆ? ಎಂದು ರಾಮರಾಜನನ್ನು ಕೇಳಲಿಕ್ಕೂ ಆತನಿಗೆ ಧೈರ್ಯವಾಗಲೊಲ್ಲದು. ಆತನು ಸುಮ್ಮನೆ ಅಲ್ಲಿಂದ ಹೊರಟು ಅಶ್ವಶಾಲೆಗೆ ಹೋದನು. ತನ್ನ ಒಡೆಯನಿಗೆ ಏನೋ ಭ್ರಾಂತಿಯಾದಂತೆ ಆಗಿರುವದರಿಂದ, ಈ ಸ್ಥಿತಿಯಲ್ಲಿ ಆತನನ್ನು ಒಬ್ಬನನ್ನೇ ಹೋಗಗೊಡುವದು ಯೋಗ್ಯವಲ್ಲೆಂದು ಆತನು ಆಲೋಚಿಸುತ್ತ, ಕುದುರೆಗೆ ಜೀನುಹಾಕಿ ತಂದು ನಿಲ್ಲಿಸಿದನು. ಪ್ರಸಂಗಬಂದರೆ ತಾನೂ ಸಂಗಡ ಹೋಗಬೇಕೆಂದು ತಿಳಿದು, ಆತನು ತನ್ನ ಕುದುರೆಯನ್ನೂ ಜೀನುಹಾಕಿಸಿ ಮತ್ತೊಬ್ಬ ಸೇವಕನಿಂದ ತರಿಸಿ ನಿಲ್ಲಿಸಿದ್ದನು. ಅಷ್ಟರಲ್ಲಿ ರಾಮರಾಜನು ಪೋಷಾಕು ಹಾಕಿಕೊಂಡು, ಸೇವಕನು ತಂದ ಕುದುರೆಯನ್ನು ಚಟ್ಟನೆ ಹತ್ತಿದನು. ಆಗ ಸೇವಕನು;—ನಾನೂ ಸಂಗಡ ಬರಲಷ್ಟೆ? ಎಂದು ಕೇಳಲು, ರಾಮರಾಜನು ಬರಿಯ ತಲೆಯಲ್ಲಾಡಿಸಿ ಬರಬಹುದೆಂದು ಸೂಚಿಸಿದನು. ಕೂಡಲೆ ಆ ಸೇವಕನು ಸಿದ್ಧವಾಗಿ ನಿಂತಿದ್ದ ತನ್ನ ಕುದುರೆಯನ್ನು ಹತ್ತಿ, ಒಡೆಯನನ್ನು ಹಿಂಬಾಲಿಸಿ ಭರದಿಂದ ಸಾಗಿದನು. ಉಳಿದ ಸೇವಕರು—ಇಷ್ಟು ರಾತ್ರಿಯಲ್ಲಿ ಮಹಾರಾಜರು ಎಲ್ಲಿ ಹೋಗುತ್ತಿರಬಹುದು, ಎಂದು ತಮ್ಮ ತಮ್ಮೊಳಗೆ ಪ್ರಶ್ನೆಮಾಡಹತ್ತಿದರು. ಆದರೆ ಯಾರಿಗಾದರೂ ಗೊತ್ತಿದ್ದರಷ್ಟೇ ಅವರ ಪ್ರಶ್ನಕ್ಕೆ ಉತ್ತರವನ್ನು ಹೇಳುವದು.

ಈ ಮೇರೆಗೆ ಸ್ವಚ್ಛಂದವಾಗಿ ಹೊರಟಿದ್ದ ರಾಮರಾಜನು ಕುದುರೆಯನ್ನು ಭರದಿಂದ ಸಾಗಿಸಿಕ್ಕೊಂಡುಹೋಗಿ ತಾಸುಹೊತ್ತು ಏರಿರುವಾಗ ಕುಂಜವನವನ್ನು ಮುಟ್ಟಿದನು. ಆಗ ಕುಂಜವನವು ರಣಮಸ್ತಖಾನನ ಸ್ವಾಧೀನವಲ್ಲಿದ್ದದ್ದರಿಂದ, ರಾಮರಾಜನು ಅದನ್ನು ಒಮ್ಮೆಲೆ ಪ್ರವೇಶಿಸುವಂತೆ ಇದ್ದಿಲ್ಲ. ಆತನು ಮೊದಲು ಒಂದುಸಾರೆ ಕುಂಜವನವನ್ನು ಸುತ್ತುವರಿದುಬಂದು, ಅದರ ದ್ವಾರರಕ್ಷಕರಿಗೆ, ತಾನು ಬಂದಿರುವೆನೆಂದು ರಣಮಸ್ತಖಾನನಿಗೆ ಸುದ್ದಿಯನ್ನು ಹೇಳಲು ಆಜ್ಞಾಪಿಸಿದನು. ದ್ವಾರರಕ್ಷಕನು ಹೋಗಹೋಗುತ್ತ ಹಾದಿಯಲ್ಲಿ ಈ ಸುದ್ದಿಯನ್ನು ತನ್ನ ಜನರಿಗೆ ಹೇಳಲು, ಅವರು ಪರಮಾಶ್ಚರ್ಯಪಟ್ಟರು. ಅದರೊ-

ಳಗೆ, ನಿನ್ನಿನ ದರ್ಬಾರದಲ್ಲಿ ಅನರ್ಥಪ್ರಸಂಗ ಒದಗಿರಲು, ಇಂದು ಬೆಳಗಾಗುವದರೊಳಗೆ ರಾಮರಾಜನು ಒಬ್ಬನೇ ಯಾಕೆ ಬಂದಿರಬಹುದೆಂಬದು ಅವರಿಗೆ ತಿಳಿಯದಾಯಿತು. ಇಲ್ಲಿಯವರೆಗೆ ರಾಮರಾಜನು ಮುಂಗಡ ಸೂಚನೆಯನ್ನು ಕಳಿಸದೆ ಎಂದೂ ಬಂದಿದ್ದಿಲ್ಲ. ನಿಜವಾಗಿ ನೋಡಿದರೆ, ಆಗಿನ ಕಾಲದಲ್ಲಿ ಶತ್ರುಗಳ ಬಿಡಾರವನ್ನು ರಾಮರಾಜನಂಥವರು, ಸಂಗಡ ಒಬ್ಬನೇ ಒಬ್ಬ ಸೇವಕನನ್ನು ಕರಕೊಂಡು ಹೋಗುವದು ಪರಮ ಸಾಹಸದಕಾರ್ಯವೆಂದು ಹೇಳಬಹುದಾಗಿತ್ತು. ಮುಸಲ್ಮಾನ ವಕೀಲನ ಭಾವಣೆಯಲ್ಲಿಯೇ ಆಗಲೊಲ್ಲದೇಕೆ. ತನ್ನ ಜೀವವನ್ನು ತನ್ನ ಶತ್ರುವಿನ ಕೈಯಲ್ಲಿ ಒಪ್ಪಿಸುವದು ಚಮತ್ಕಾರದ ಸಂಗತಿಯೇ ಸರಿ; ಅದರಲ್ಲಿ ನಿನ್ನಿನ ದರ್ಬಾರದಲ್ಲಿ ವಿಲಕ್ಷಣಪ್ರಸಂಗ ಒದಗಿತ್ತು. ಆದರೆ, ರಾಮರಾಜನ ಮನಸ್ಸಿನಲ್ಲಿ ಯಾವವಿಚಾರವು ಉತ್ಪನ್ನವಾಯಿತೋ, ಆತನು ಇಂಥ ಸಾಹಸವನ್ನು ಯಾಕೆಮಾಡಿದನೋ ದೇವರಿಗೇ ಗೊತ್ತು. ಬಂದವನು ರಾಮರಾಜನೇ ಎಂಬ ನಂಬಿಗೆಯು ಸೇವಕನಿಗಿದ್ದ್ದರಿಂದ ಆತನು ನೆಟ್ಟಗೆ ಹೋಗಿ ರಣಮಸ್ತಖಾನನಿಗೆ ಸುದ್ದಿಯನ್ನು ಹೇಳಿದನು. ಅದನ್ನು ಕೇಳಿ ರಣಮಸ್ತಖಾನನಿಗೂ ಪರಮಾಶ್ಚರ್ಯವಾಯಿತು. ಆತನು ಸ್ವಲ್ಪ ಹೊತ್ತಿನಮೇಲೆ ತನ್ನ ಮನಸ್ಸಿನಲ್ಲಿ—"ನಿನ್ನಿನ ಸಮಗ್ರಪ್ರಕರಣವನ್ನು ರಾಮರಾಜನು ಮನಸ್ಸಿನಲ್ಲಿ ತಂದು, ತನ್ನಿಂದಾದ ಉದ್ಧಟತನಕ್ಕೆ ಭಯಪಟ್ಟು ನನಗೆ ಹೇಳಿಕೊಳ್ಳಲಿಕ್ಕೆ ಬಂದಿರಬಹುದೆಂದು ಕಾಣುತ್ತದೆ. ಆ ಮಾತಿನಸಲುವಾಗಿ ಪಶ್ಚಾತ್ತಾಪವಾಗಿರಲು, ಆ ಪಶ್ಚಾತ್ತಾಪದ ಭರದಲ್ಲಿ ಸವಾರಿಯು ಹೊರಟುಬಂದಿರಬಹುದು, ಎಂದು ಕಲ್ಪಿಸಿ, ಆತನು ಮನಸ್ಸಿನಲ್ಲಿ ಉಬ್ಬಿದನು. ಹ್ಯಾಗೇ ಇರಲಿ, ಈಗ ತಾನು ಆತನನ್ನು ಕಾಣಲಿಕ್ಕೆ ಬೇಕೆಂದು ತಿಳಿದು, ರಣಮಸ್ತಖಾನನು ಸೇವಕನಿಗೆ—"ಹೋಗು ನಾನು ಎದುರಿಗೆ ಬರುವೆನು." ನೀನು ಅವರನ್ನು ಒಳಗೆ ಬರಗೊಡು, ಎಂದು ಹೇಳಿ, ತಾನು ಪೋಷಾಕು ಹಾಕಿಕೊಂಡು ಹೊರಡಲನುವಾದನು. ಇತ್ತ ರಾಮರಾಜನು ಸೇವಕನ ವಿಜ್ಞಾಪನೆಯಂತೆ ಕುಂಜವನವನ್ನು ಪ್ರವೇಶಿಸಿದನು. ಆತನು ಕೆಲವು ಅಂತರವನ್ನು ಕ್ರಮಿಸಿ ಹೋಗುತ್ತಿರಲು, ಅಲ್ಲಿ ಆತನ ಧನಮಲ್ಲನು ರಣಮಸ್ತಖಾನನ ಸೇವಕರಿಂದ ಸುತ್ತುಗಟ್ಟಲ್ಪಟ್ಟವನಾಗಿ ಅಕಸ್ಮಾತ್ ಅವನಕಣ್ಣಿಗೆ ಬಿದ್ದನು. ಈಗ ಐವರ್ಷಗಳ ಮೇಲೆ ಹೀಗೆ ಅಕಸ್ಮಾತ್ ಧನಮಲ್ಲನು ಕಣ್ಣಿಗೆ ಬಿದ್ದದ್ದನ್ನು ನೋಡಿ ರಾಮರಾಜನು ಆಶ್ಚರ್ಯಪಟ್ಟನು. ಆತನು ತನ್ನ ಕುದುರೆಯ ಕಡವಾಣವನ್ನು ಬಿಗಿಹಿಡಿದು ನಿಲ್ಲಿಸಲು, ಆ ಸ್ವಾಮಿಸೇವಕರು ಪರಸ್ಪರ ಒಬ್ಬರನ್ನೊಬ್ಬರು ನೋಡಿದರು. ಧನಮಲ್ಲನು ಆಶ್ಚರ್ಯಚಕಿತನಾಗಿ ಎದ್ದು ನಿಂತನು. ರಣಮ

ಸ್ತಖಾನನ ಸೇವಕರು ಇವರೆಲ್ಲರನ್ನು ನೋಡುತ್ತ ಸುಮ್ಮನೆ ನಿಂತುಕೊಂಡರು. ಐದು ಪಳವಾಯಿತು, ಹತ್ತು ಪಳವಾಯಿತು, ಗಳಿಗೆಯಾಯಿತು; ಆದರೂ ಅವರಿಬ್ಬರು ಸುಮ್ಮನೆ ಒಬ್ಬರನ್ನೊಬ್ಬರು ನೋಡುತ್ತ ನಿಂತುಕೊಂಡರು. ರಣ ಮಸ್ತಖಾನನ ಸೇವಕರು, ಧನಮಲ್ಲನನ್ನು ರಾಮರಾಜನ ಗುಪ್ತಚಾರನೆಂದು ಭಾವಿಸಿದರು. ತನ್ನ ಗುಪ್ತಚಾರನು ವೈರಿಗಳ ಕೈಯಲ್ಲಿ ಸಿಕ್ಕಿದ್ದರಿಂದ ತನ್ನ ಗುಟ್ಟು ಹೊರಬೀಳುವದೆಂದು ತಿಳಿದು ರಾಮರಾಜನು ಹೀಗೆ ಆಶ್ಚರ್ಯದಿಂದ ನೋಡುವನೆಂದು ಅವರು ತಿಳಿದರು. ಹೀಗೆ ತಾನು ನಿಲ್ಲುವದು ಸಂಶಯಕ್ಕೆ ಕಾರಣವೆಂದು ತಿಳಿದು, ಏನೋ ತನ್ನ ಮನಸ್ಸಿನಲ್ಲಿ ನಿಶ್ಚಯಿಸಿ, ರಾಮರಾಜನು ತನ್ನ ಕುದುರೆಯನ್ನು ಮುಂದಕ್ಕೆ ನೂಕಿದನು. ಇತ್ತ ರಣಮಸ್ತಖಾನನ ಸೇವಕರು ಧನಮಲ್ಲನನ್ನು ಕರಕೊಂಡು ಎರಡನೆಯ ಕಡೆಗೆ ನಡೆದರು. ಧನಮಲ್ಲನು ಎಲ್ಲಿಂದಲೋ ಕುಂಜವನಕ್ಕೆ ಅದೇ ಬಂದಿದ್ದನು.

ರಾಮರಾಜನು ಮಂದಿರದ ಸನಿಯಕ್ಕೆ ಬರುತ್ತಿರಲು, ರಣಮಸ್ತಖಾನನು ತನ್ನ ಕೆಲ ಜನರೊಡನೆ ಆತನ ಎದುರಿಗೆ ಹೋದನು. ಆಗ ರಾಮರಾಜನು ಕುದುರೆಯಿಂದ ಇಳಿದು ರಣಮಸ್ತಖಾನನ ಕೈಯನ್ನು ಹಿಡಕೊಂಡು ಮಂದಿರದ ಕಡೆಗೆ ನಡೆದನು. ಕುಂಜವನವು ಈ ಮೊದಲೆ ರಾಮರಾಜನು ಮೇಹೇರಜಾನಳೊಡನೆ ರಮಿಸಿದ ಸ್ಥಳವಾದ್ದರಿಂದ ಆತನಿಗೆ ಅಲ್ಲಿಯ ಯಾವಪ್ರದೇಶವೂ ಅಪರಿಚಿತವಾದದ್ದಿದ್ದಿಲ್ಲ. ಕುಶಲಪ್ರಶ್ನೆಗಳನ್ನು ಕೇಳುತ್ತ, ಸಮಯೋಚಿತ ಮಾತುಗಳನ್ನಾಡುತ್ತ ಅವರೆಲ್ಲರು ಬಂಗಲೆಯ ಕಡೆಗೆ ನಡೆದರು. ಬಂಗಲೆಯೊಳಗಿನ ದರ್ಬಾರಖಾನೆಯಲ್ಲಿ ಹೋದಕೂಡಲೆ ರಣಮಸ್ತಖಾನನು ರಾಮರಾಜನನ್ನು ಮಧ್ಯಸ್ಥಾನದ ಉಚ್ಚಾಸನದಲ್ಲಿ ಕುಳ್ಳಿರಿಸಿ—"ಇಷ್ಟು ಅಕಸ್ಮಿಕವಾಗಿ, ಅದರಲ್ಲಿಯೂ ಮೊದಲು ಸುದ್ದಿಯನ್ನು ಹೇಳಿಕಳಿಸದೆ ಬರಲಿಕ್ಕೆ ಕಾರಣವೇನೆ"ಂದು ರಾಮರಾಜನನ್ನು ಕೇಳಿದನು. ಅದಕ್ಕೆ ರಾಮರಾಜನು—"ಏನೂ ಇಲ್ಲ, ಸಹಜವಾಗಿ ಬಂಸೆನು. ಈ ಕುಂಜವನದಲ್ಲಿ ನಾನು ಎಷ್ಟೋ ಸುಖದ ದಿವಸಗಳನ್ನು ಕಳೆದಿದ್ದೆನು; ಆದ್ದರಿಂದ ಯಾವಾಗಾದರೊಮ್ಮೆ ಇದನ್ನು ನೋಡಬೇಕೆಂಬ ಉತ್ಕಟೇಚ್ಛೆಯು ನನಗೆ ಆಗುತ್ತಿರುತ್ತದೆ. ಅದರಂತೆ ನಿನ್ನೆರಾತ್ರಿ ಇಚ್ಛೆಯಾಗಲು, ಕೂಡಲೆ ಹೊರಟು ಬಂದೆನು" ಎಂದು ಹೇಳಿದನು. ಅದನ್ನು ಕೇಳಿ ರಣಮಸ್ತಖಾನನಾದರೂ ಅತ್ಯಂತ ಆದರದಿಂದ ರಾಮರಾಜನಿಗೆ—"ಕುಂಜವನವು ತಮ್ಮದೇ ಇರುವದರಿಂದ ತಾವು ಯಾವಾಗ ಬಂದರೂ ನಾವು ತಮ್ಮ ಆದರ ಸತ್ಕಾರವನ್ನು ಮಾಡಲಿಕ್ಕೆ ಸಿದ್ಧರೇ ಇರುತ್ತೇವೆ; ಆದರೆ ಮೊದಲು ಸೂಚನೆಯಾದರೆ ಮಾನಮರ್ಯಾ

ದೆಗೆ ತಕ್ಕಂತೆ ಎಲ್ಲ ವ್ಯವಸ್ಥೆ ಮಾಡಲಿಕ್ಕೆ ಅನುಕೂಲವಾಗುವದು. ಅಕಸ್ಮಿಕವಾಗಿ ಬರುವದರಿಂದ ನಮ್ಮಿಂದಲ್ಲದಿದ್ದರೂ, ನಮ್ಮ ಸೇವಕರಿಂದ ತಪ್ಪುಗಳಾಗುವ ಸಂಭವವಿರುತ್ತದೆ. ಇದಕ್ಕಾಗಿಯೇ ಸೂಚಿಸಿದೆನಲ್ಲದೆ ಬೇರೆ ಏನೂ ಇಲ್ಲ. ತಾವು ಬೇಕಾದಾಗ ಬರಬಹುದು. ನಿನ್ನಿನ ಪ್ರಸಂಗವನ್ನೆಲ್ಲ ಮರೆತು ಇಂದು ತಾವು ಬಂದದ್ದಕ್ಕಾಗಿ ನಮಗೆ ಬಹಳ ಆನಂದವಾಗಿದೆ. ಏನಾದರೂ ವಿಶೇಷತರದ ಅಪ್ಪಣೆಯಿದ್ದರೆ ತಿಳಿಸುವ ಕೃಪೆಯಾಗಬೇಕು. ಮನಸ್ಸಿನಲ್ಲಿ ಯಾವ ಪ್ರಕಾರದ ಸಂಕೋಚವನ್ನೂ ತಂದುಕೊಳ್ಳಬಾರದು, ಎಂದು ಹೇಳಿದನು. ರಣಮಸ್ತಖಾನನ ಈ ಸಾನಮರ್ಯಾದೆಯ, ಹಾಗು ವಿನಯದ ಮಾತುಗಳನ್ನು ಕೇಳಿ ರಾಮರಾಜನು ಅವನನ್ನು ಕುರಿತು—"ನೀವು ಬಹಳ ಸುಜ್ಞರಿರುತ್ತೀರಿ. ತರುಣರಿದ್ದು ಬಹಳ ಏವೇಕಿಗಳಿರುತ್ತೀರಿ. ನಿಮ್ಮನ್ನು ನೋಡಿ ನನಗೆ ಬಹಳ ಸಂತೋಷವಾಗಿರುತ್ತದೆ ನಿನ್ನಿನ ಪ್ರಸಂಗದ ವಿಷಯವಾಗಿ ನಾನು ಮನಸ್ಸಿನಲ್ಲಿ ಏನೂ ಪಿಡಿದಿರುವದಿಲ್ಲ. ನಿಮ್ಮ ಸ್ಥಿತಿಯಲ್ಲಿ ನಾನು ಇರುತ್ತಿದ್ದರೆ, ನೀವು ಮಾಡಿದಂತೆಯೇ ನಾನೂ ಮಾಡುತ್ತಿದ್ದೆನು. ಆದ್ದರಿಂದ ನಿನ್ನಿನ ನಡತೆಯ ವಿಷಯವಾಗಿ ನನ್ನಲ್ಲಿ ಸ್ವಲ್ಪವಾದರೂ ಕುಭಾವನೆಯಿರುವದಿಲ್ಲ. ತಿರುಗಿ ಕೇಳಿದರೆ, ನಿಮ್ಮ ತೇಜಸ್ವಿತೆಗಾಗಿ ನಾನು ನಿಮ್ಮ ಅಭಿನಂದನವನ್ನೇ ಮಾಡೇನು," ಎಂದು ನುಡಿದು, ರಾಮರಾಜನು ಕೆಲವು ವೇಳೆಯವರೆಗೆ ಸುಮ್ಮನೆ ಕುಳಿತುಕೊಂಡನು. ಆಮೇಲೆ ರಣಮಸ್ತಖಾನನ್ನು ಕುರಿತು—"ನಾನು ನಿಮ್ಮ ಸಂಗಡ ಕೆಲವು ಏಕಾಂತದ ಮಾತುಗಳನ್ನು ಆಡಬೇಕಾಗಿದೆ, ಆದ್ದರಿಂದ ಈ ಸ್ಥಳವನ್ನಾದರೂ ನಿರ್ಜನವಾಗಿ ಮಾಡಿರಿ; ಅಥವಾ ನಾವೇ ಬೇರೆ ನಿರ್ಜನ ಪ್ರದೇಶಕ್ಕೆ ಹೋಗೋಣ" ಎಂದು ನುಡಿಯಲು, ರಣಮಸ್ತಖಾನನು ಸ್ವಲ್ಪಹೊತ್ತು ವಿಚಾರಮಾಡಿ ತನ್ನ ಜನರ ಕಡೆಗೆ ತಿರುಗಿ—'ನೀವು ಎಲ್ಲರೂ ಇಲ್ಲಿಂದ ಹೊರಟುಹೋಗಿರಿ, ಒಬ್ಬರೂ ನನ್ನ ಹತ್ತಿರ ಇರಲಾಗದು," ಎಂದು ಆಜ್ಞಾಪಿಸಿದನು.

ರಣಮಸ್ತಜಾನನು ಹೀಗೆ ಆಜ್ಞಾಪಿಸಿದ ಕೂಡಲೆ ಎಲ್ಲ ಜನರು ಹೊರಟು ಹೋಗಹತ್ತಿದರು. ಅವರಲ್ಲಿ ಒಬ್ಬಿಬ್ಬರು ಸಂಶಯದ ಸ್ವಭಾವದವರಾಗಿದ್ದರು. ಅವರ ಮನಸ್ಸಿಗೆ ಏನು ತಿಳಿಯಿತೋ ಏನೋ, ಅವರು ತಮ್ಮ ಶಸ್ತ್ರಗಳ ಮೇಲೆ ಕೈಯಿಟ್ಟುಕೊಂಡು ರಣಮಸ್ತಖಾನನನ್ನೂ, ರಾಮರಾಜನನ್ನೂ ನೋಡುತ್ತ ನಿಂತುಕೊಂಡರು. ರಾಮರಾಜನು ಇದನ್ನು ನೋಡಿ ನಗುತ್ತ ಅವರಿಗೆ—ಹೋಗಿರಿ ಹೋಗಿರಿ, ನಿಮ್ಮ ಯಜಮಾನನ ಜೀವದ ಚಿಂತೆಯನ್ನು ನೀವು

ಸ್ವಲ್ಪವೂ ಮಾಡಬೇಡಿರಿ. ನಾನು ಅಂಥ ದುರಾಲೋಚನೆಯಿಂದ ಇಲ್ಲಿಗೆ ಬಂದವನಲ್ಲ. ಮೇಲಾಗಿ ತನ್ಮ್ಯ ಸಂರಕ್ಷಣವನ್ನು ಮಾಡಿಕೊಳ್ಳಲಿಕ್ಕೆ ನಿಮ್ಮ್ಯ ಯಜಮಾನರು ಸ್ವತಃ ಸಮರ್ಥರೇ ಇದ್ದಾರೆ, ಎಂದು ಹೇಳಿದನು. ಅದನ್ನು ಕೇಳಿ ರಣಮಸ್ತ್ಖಾನನೂ ನಗುತ್ತ—ಎಂಥಾ ಹುಚ್ಚರಿರುವಿರೋ ನೀವು? ಹೋಗಿರಿ ಹೋಗಿರಿ; ಏನೂ ಚಿಂತೆಮಾಡಬೇಡಿರಿ, ಎಂದು ಹೇಳಲು ಆ ಸೇವಕರು ಹೊರಟು ಹೋದರು. ಆಗ ರಣಮಸ್ತ್ಖಾನನು ರಾಮರಾಜನಿಗೆ—ಏನು ಮಾತಾಡುವವನ್ನು ಇನ್ನು ನಿಶ್ಶಂಕೆಯಿಂದ ಮಾತಾಡಬೇಕು, ಎಂದು ಸೂಚಿಸಿದನು.

೧೪ನೆಯ ಪ್ರಕರಣ:—ವಿಲಕ್ಷಣಭಾವನೆ.

ರಾಮರಾಜನಿಗೆ ಏಕಾಂತದ ಮಾತುಗಳನ್ನು ಹೇಳಲಿಕ್ಕೆ ಸಂಕೋಚವಾಗಹತ್ತಿತು. ಆತನಿಗೆ ರಣಮಸ್ತ್ಖಾನನನ್ನು ನೋಡಿ ಒಂದು ಸಂಶಯವು ಉತ್ಪನ್ನವಾಗಿತ್ತು. ಮೇಹೇರಜಾನಳು ತನ್ನನ್ನು ಬಿಟ್ಟುಹೋದಾಗ ಗರ್ಭಿಣಿಯಿದ್ದದ್ದು ರಾಮರಾಜನಿಗೆ ಗೊತ್ತಿತ್ತು. ಆ ಮಾತಿಗೆ ಸರಾಸರಿ ೩೦-೩೫ ವರ್ಷಗಳಾಗಿದ್ದು, ರಣಮಸ್ತ್ಖಾನನ ವಯಸ್ಸೂ ಅಷ್ಟೇ ವರ್ಷದ್ದಾಗಿತ್ತು. ರಣಮಸ್ತ್ಖಾನನ ರೂಪವು ರಾಮರಾಜನ ರೂಪವನ್ನು ಅಚ್ಚಳಿಯದೆ ಹೋಲುತ್ತಿತ್ತು. ಮತ್ತು ರಣಮಸ್ತ್ಖಾನನನ್ನು ನೋಡಿದ ಕೂಡಲೆ ರಾಮರಾಜನ ಮನಸ್ಸಿನಲ್ಲಿ ಒಂದು ಪ್ರಕಾರದ ಪ್ರೇಮವು ಸ್ವಾಭಾವಿಕವಾಗಿಯೇ ಉತ್ಪನ್ನವಾಗುತ್ತಿತ್ತು. ಮೇಲಾಗಿ ಮೇಹೇರಜಾನಳ ಮುಖಮುದ್ರೆಯ ಕೆಲವು ಚಿಹ್ನಗಳು ರಣಮಸ್ತ್ಖಾನನ ಮುಖದಲ್ಲಿ ತೋರುತ್ತಿದ್ದವು. ಇವೆಲ್ಲ ಲಕ್ಷಣಗಳಿಂದ ರಾಮರಾಜನು ಮನಸ್ಸಿನಲ್ಲಿ—ರಣಮಸ್ತ್ಖಾನನು ಮೆಹೇರಜಾನಳಲ್ಲಿ ಹುಟ್ಟಿದ ತನ್ನ ಮಗನಾಗಿರಬಹುದೋ ಎಂಬ ಸಂಶಯವು ಉತ್ಪನ್ನವಾಗಿತ್ತು. ಸಿನ್ನೆರಾತ್ರಿ ಮೇಹೇರಜಾನಳ ನೆನಪು ಆದಕೂಡಲೆ ಇವೆಲ್ಲ ಮಾತುಗಳು ಅವನ ಮನಸ್ಸಿನಲ್ಲಿ ಒಮ್ಮೆಲೆ ಹೊಳೆಯಲು, ಆತನು ಕುಂಜವನದಲ್ಲಿ ಮೆಹೇರಜಾನಳು ಇರಬಹುದೆಂಬ ಸಂಶಯದಿಂದ ತಪ್ಪನೆ ಕುಂಜವನಕ್ಕೆ ಬಂದಿದ್ದನು. ಇದೇ ವಿಷಯವಾಗಿಯೇ ಕೆಲವು

ಮಾತುಗಳನ್ನು ರಣಮಸ್ತಖಾನನಿಗೆ ಏಕಾಂತದಲ್ಲಿ ಕೇಳಬೇಕೆಂದು ಆತನು ಮಾಡಿದ್ದನು; ಆದರೆ ಹಾಗೆ ಕೇಳಲಿಕ್ಕೆ ಪರಮಾವಧಿ ಸಂಕೋಚವಾಗಿ ಆತನು ಆಮಾತಿನ ಉಸಾಬರಿಯನ್ನೇ ಬಿಟ್ಟು, ಸುಮ್ಮನೆ ಏನಾದರೂ ಮಾತಾಡಿ ಹೊತ್ತು ಗಳೆಯುವದಕ್ಕಾಗಿ ಆತನು ರಣಮಸ್ತಖಾನನನ್ನು ಕುರಿತು—ನಾನು ಹ್ಯಾಗೂ ಇಂದು ಇಲ್ಲಿಗೆ ಅನಾಯಾಸವಾಗಿ ಬಂದಿದ್ದೇನೆ. ಒಮ್ಮೆ ಆ ಪುಷ್ಕರಣಿಯ ಕಡೆಗೆ ಹೋಗಿಬರೋಣ, ದಂಡೆಯ ಮೇಲಿಂದ ಒಮ್ಮೆ ಅದರ ಪ್ರದಕ್ಷಿಣೆ ಹಾಕಬೇಕೆಂಬ ಇಚ್ಛೆಯು ನನಗೆ ಆಗಿರುತ್ತದೆ. ನೀವೂ ಸಂಗಡ ಬರುತ್ತಿದ್ದರೆ ಬಿಡ್ರಿ, ಇಲ್ಲವೆ ನನ್ನೊಬ್ಬನನ್ನೇ ಅಲ್ಲಿಗೆ ಹೋಗಗೊಡಿರಿ. ನಾನು ಒಮ್ಮೆ ಸುತ್ತುವರಿದು ಬರುವೆನು. ಮನಸ್ಸಿಗೆ ಬಂದರೆ ಒತ್ತಟ್ಟಿಗೆ ಗಳಿಗೆರಡುಗಳಿಗೆ ಕುಳಿತು ಸ್ವಲ್ಪ ವಿಶ್ರಾಂತಿಯನ್ನು ಹೊಂದುವೆನು, ಇಲ್ಲದಿದ್ದರೆ ಬೇಗನೆ ತಿರುಗಿ ಬರುವೆನು; ಎಂದು ನುಡಿಯಲು, ರಾಮರಾಜನ ಇಂದಿನ ವಿಚಿತ್ರಸ್ಥಿತಿಯನ್ನು ನೋಡಿ ರಣಮಸ್ತಖಾನನಿಗೆ ಬಹಳ ಆಶ್ಚರ್ಯವಾಯಿತು. ರಾಮರಾಜನ ದಿನದ ಉದ್ಧಾಮ ವೃತ್ತಿಯು ಇಂದು ಎಲ್ಲಿಯೋ ಹೋಗಿಬಿಟ್ಟಿತ್ತು. ಕುಂಜವನದೊಳಗೆ ಬಂದಾಗಿನಿಂದ ಈತನು ತನ್ನ ಸಂಗಡ ಇಷ್ಟು ನಮ್ರತೆಯಿಂದ ಯಾಕೆ ನಡಕೊಳ್ಳುತ್ತಾನೆಂಬದು ರಣಮಸ್ತಖಾನನಿಗೆ ತಿಳಿಯದಾಯಿತು. ರಾಮರಾಜನ ನಡತೆಯಲ್ಲಿ ಬರಿಯ ನಮ್ರತೆಯಷ್ಟೇ ಅಲ್ಲ, ಸ್ವಲ್ಪ ಪ್ರೇಮದ ಲಕ್ಷಣವೂ ರಣಮಸ್ತಖಾನನಿಗೆ ತೋರಿತು. ಆಗ ಆ ತರುಣ ಸರದಾರನು ಮನಸ್ಸಿನಲ್ಲಿ—"ಈ ಸ್ಥಳವು ರಾಮರಾಜನದಿದ್ದು, ಈತನಿಗೆ ಒಂದು ಸಾರೆ ಪುಷ್ಕರಣಿಯ ಸುತ್ತು ತಿರುಗಿಬರಲಿಕ್ಕೆ ಬೇಡವೆನ್ನುವದು ಹ್ಯಾಗೆಂ"ದು ಯೋಚಿಸಿ, ರಾಮರಾಜನನ್ನು ಕುರಿತು—ಅಲಬತ್, ಅಲಬತ್! ತಾವು ಅವಶ್ಯವಾಗಿ ಪುಷ್ಕರಣಿಯನ್ನು ಸುತ್ತುಹಾಕಿಕೊಂಡು ಬಿಡ್ರಿ. ತಮ್ಮ ಮನಸ್ಸಿಗೆ ಅಲ್ಲಿ ಕೆಲವು ಹೊತ್ತು ಕುಳಿತುಕೊಳ್ಳುವ ಹಾಗಾದರೆ ಅವಶ್ಯವಾಗಿ ಕುಳಿತುಕೊಳ್ಳಿರಿ. ನೀವು ಹೀಗೆ ಸಂಕೋಚಪಡುವದೇಕೆ? ಎಂದು ಕೇಳಿದನು. ಅದಕ್ಕೆ ರಾಮರಾಜನು—ಸಂಕೋಚವೇನೂ ಇಲ್ಲ; ಆದರೆ ನೀವು ನನ್ನ ಸಂಗಡ ಬರುವ ಹಾಗಿದ್ದರೆ ಬಿಡ್ರಿ. ಪುಷ್ಕರಣಿಯ ದರ್ಶನದಿಂದ ನನಗೆ ಬಹಳ ಸಮಾಧಾನವಾಗುವದು, ಆದ್ದರಿಂದ ಬಿಡ್ರಿ, ಹೋಗಿಬರೋಣ.

ರಣಮಸ್ತಖಾನನು ರಾಮರಾಜನ ಈ ಮಾತಿಗೆ ಒಪ್ಪಿಕೊಂಡು ಆತನೊಡನೆ ಪುಷ್ಕರಣಿಯ ದಾರಿಯ ಹಿಡಿದನು. ಬರುತ್ತಬರುತ್ತ ಅವರಿಬ್ಬರು ಪುಷ್ಕರಣಿಯ ದಂಡೆಯನ್ನು ಮುಟ್ಟಿದರು. ಅಲ್ಲಿ ಹೋದಕೂಡಲೆ ರಾಮರಾಜನಿಗೆ

ಹಿಂದಿನದೆಲ್ಲ ನೆನಪಾಗಿ, ಮೇಹೇರಜಾನಳು ಆತನ ಕಣ್ಣಿಗೆ ಕಟ್ಟಿದಳು. ಪುಷ್ಕರಣಿಯ ದಂಡೆಯಮೇಲೆ ನಿಂತುಕೊಂಡು ಆತನು ಸುತ್ತುಮುತ್ತು ನೋಡಹತ್ತಿದನು. ಹಿಂದಕ್ಕೆ ೩೦।೩೫ ವರ್ಷಗಳ ಹಿಂದೆಯಿದ್ದಂತೆಯೇ ಪುಷ್ಕರಣಿಯ ಸೌಂದರ್ಯವು ಈಗಾದರೂ ಇತ್ತು. ತನ್ನ ಸಂಗಡ ರಣಮಸ್ತಖಾನನು ಇರುವನೆಂಬವನ್ನು ರಾಮರಾಜನು ಮರೆತು ಬಿಟ್ಟಂತೆ ತೋರಿತು. ಆತನಿಗೆ ಪುಷ್ಕರಣಿಯ ಹೊರತು ಬೇರೆಯೇನೂ ಕಾಣುತ್ತಿದ್ದಿಲ್ಲ. ಅವನು ಪುಷ್ಕರಣಿಯ ಸುತ್ತುಮುತ್ತು ನೋಡಿದನು, ಕಳಗೆ ಕಮಲಮಯವಾದ ಜಲದ ಕಡೆಗೆ ನೋಡಿದನು. ಆ ಮೇಲೆ ಆಕಾಶದ ಕಡೆಗೆ ನೋಡಿ ಒಮ್ಮೆ ಗಟ್ಟಿಯಾಗಿ ನಿಟ್ಟುಸಿರುಬಿಟ್ಟನು. ಅಷ್ಟರಲ್ಲಿ ಒಂದು ಮಗ್ಗಲಿಗೆ ಕಟ್ಟಿದ್ದ ನೌಕೆಯ ಕಡೆಗೆ ಆತನ ದೃಷ್ಟಿಯು ಹೋಯಿತು. ನೌಕೆಯನ್ನು ನೋಡಿದ ಕೂಡಲೆ ರಾಮರಾಜನ ವೃತ್ತಿಯು ಅತ್ಯಂತ ವ್ಯಾಕುಲವಾಯಿತು. ಕೂಡಲೆ ಆತನ ಕಣ್ಣೊಳಗಿಂದ ನೀರುಗಳು ಬಂದವು. ಆತನು ತನ್ನ ಮೋರೆಯನ್ನು ಒತ್ತಟ್ಟಿಗೆ ತಿರುಗಿಸಿ ಕಣ್ಣುಮುಚ್ಚಲು, ಕಣ್ಣೀರ ಹನಿಗಳು ಆತನ ಗಲ್ಲಗಳ ಮೇಲೆ ಪಟಪಟ ಬಿದ್ದವು. ಅವನ್ನು ರಾಮರಾಜನು ಮೆಲ್ಲಗೆ ಒರಿಸಿಕೊಂಡು ಎರಡುಕ್ಷಣ ಹಾಗೇ ಕಣ್ಣುಗಳನ್ನು ಮುಚ್ಚಿಕೊಂಡಿದ್ದನು. ಆಮೇಲೆ ಕಣ್ಣುತೆರೆಯಲು, ಎದುರಿಗಿನ ಲತಾಮಂಟಪದಲ್ಲಿ ಒಬ್ಬ ಸ್ತ್ರೀಯು ನಿಂತುಕೊಂಡಿದ್ದು, ಆಕೆಯು ತನ್ನನ್ನು ಎವೆಯಿಕ್ಕದೆ ನೋಡುತ್ತಿರುವಂತೆ ರಾಮರಾಜನಿಗೆ ತೋರಿತು. ಆಗ ಆತನಿಗೆ ತಾನು ಎಲ್ಲಿ ಇರುತ್ತೇನೆ, ಏನು ಮಾಡುತ್ತೇನೆ ಎಂಬದರ ಎಚ್ಚರ ಉಳಿಯದೆ, ಆತನು ಬಾಯಿಂದ—"ಮೇಹೇರಜಾನ! ಮೇಹೇರಜಾನ!" ಎಂದು ಒಟಗುಟ್ಟುತ್ತ ಆ ಕುಂಜವನದ ಕಡೆಗೆ ಓಡಿದನು. ಕರ್ಮಧರ್ಮಸಂಯೋಗದಿಂದ ರಾಮರಾಜನು ಒಟಗುಟ್ಟಿದ್ದು ರಣಮಸ್ತಖಾನನಿಗೆ ಕೇಳಲಿಲ್ಲ, ಕೇಳಿದ್ದರೂ ಅದರ ಅರ್ಥವು ಆತನಿಗೆ ನೆಟ್ಟಗೆ ತಿಳಿಯಲಿಲ್ಲ. ಏನಾದರೂ ನೆನಪಾದದ್ದರಿಂದ ಈತನು ಒಟಗುಟ್ಟುತ್ತ ಹೀಗೆ ಒಡಿಹೋಗಿರಬಹುದು; ಆದರೆ ನಾನು ಆತನ ಬೆನ್ನುಹತ್ತಿ ಹೋಗುವದು ಸರಿಯಲ್ಲ, ಎಂದು ರಣಮಸ್ತಖಾನನು ಅಲ್ಲಿಯೇ ನಿಂತುಕೊಂಡನು. ಇನ್ನೊಂದು ಮಾತಿನಲ್ಲಿ ದೇವರು ಕಾದನು; ಯಾಕಂದರೆ, ರಾಮರಾಜನ ಕಣ್ಣಿಗೆ ಬಿದ್ದ ಸ್ತ್ರೀಯು ರಣಮಸ್ತಖಾನನ ಕಣ್ಣಿಗೆ ಬೀಳಲಿಲ್ಲ.

ರಾಮರಾಜನು ಓಡಿದವನು ಆ ಲತಾಮಂಟಪವನ್ನು ಪ್ರವೇಶಿಸಿ ನೋಡಿದನು; ಆದರೆ ಅಲ್ಲಿ ಆ ಸ್ತ್ರೀಯು ಇದ್ದಿಲ್ಲ. ಆಕೆಯು ಇಲ್ಲಿಯೇ ಎಲ್ಲಿಯಾದರೂ ಗಿಡಗಳ ಮರೆಯಲ್ಲಿ ಅಡಗಿರಬಹುದೆಂದು ತಿಳಿದು ಆತನು—"ಮೇಹೇರಜಾನ!

ಮೇಹೇರಜಾನ!" ಎಂದು ಗಟ್ಟಿಯಾಗಿ ಕೂಗುತ್ತ ಅತ್ತಇತ್ತ ಓಡಾಡಿ ಹುಡುಕ ಹತ್ತಿದನು. ಆದರೆ ಯಾರೂ ಕಣ್ಣಿಗೆ ಬೀಳಲಿಲ್ಲ. ತಾನು ಕುಂಜವನದಲ್ಲೆಲ್ಲ ಹುಡುಕಿದರೂ ಮೇಹೇರಜಾನಳು ಸಿಗದಿರಲು, ರಾಮರಾಜನು ಒಂದು ಕಡೆಗೆ ಸುಮ್ಮನೆ ನಿಂತುಕೊಂಡನು. ನಿಂತನಿಂತಿರುವಾಗ ಆತನು ಮನಸ್ಸಿನಲ್ಲಿ— "ಇದು ಕೇವಲ ನನ್ನ ಭ್ರಾಂತಿಯಾಗಿರಬಹುದು. ಇಲ್ಲದಿದ್ದರೆ ಇಷ್ಟುವರ್ಷಗಳ ಮೇಲೆ ಮೇಹೇರಜಾನಳು ಇಲ್ಲಿ ನನ್ನ ಕಣ್ಣಿಗೆ ಹ್ಯಾಗೆಬೆದ್ದಾಳು? ಭ್ರಾಂತಿಯು, ನಿಶ್ಚಯವಾಗಿ ಭ್ರಾಂತಿಯು"ಎಂದು ತನ್ನಮನಸ್ಸಿನಲ್ಲಿ ಅಂದುಕೊಂಡು, ಇನ್ನು ಹಿಂದಕ್ಕೆ ತಿರುಗಬೇಕೆನ್ನುತ್ತಿರಲು, ಮತ್ತೆ ಆತನ ಮನಸ್ಸಿನಲ್ಲಿ—"ಭ್ರಾಂತಿಯೆಂದು ಹ್ಯಾಗೆ ಅನ್ನಬೇಕು? ಮೇಹೇರಜಾನಳನ್ನು ನಾನು ಈಗ ಪ್ರತ್ಯಕ್ಷ ನೋಡಿದ್ದೇನೆ. ಮೇಲಾಗಿ ರಣಮಸ್ತಖಾನನ ರೂಪವು ನನ್ನ ರೂಪವನ್ನು ಅಚ್ಚಳಿಯದೆ ಹೋಲುತ್ತದೆ. ಇವಲ್ಲದೆ ಮೇಹೇರಜಾನಳ ಕೆಲವು ಲಕ್ಷಣಗಳು ಆ ತರುಣ ಸರದಾರನ ಮೋರೆ-ಮಾತು-ನಡಿಗೆ-ದನಿ ಮೊದಲಾದವುಗಳಲ್ಲಿ ತೋರುತ್ತವೆ. ಮೇಹೇರಜಾನಳೂ ಹೋಗಿ ಇಂ-ಇಂ ವರ್ಷಗಳಾದವು. ರಣಮಸ್ತಖಾನನಿಗೂ ಅಷ್ಟೇ ವರ್ಷಗಳಾಗಿವೆ; ಅಂದಬಳಿಕ ಮಗನೊಡನೆ ಮೇಹೇರಜಾನಳು ಇಲ್ಲಿಗೆ ಬಂದಿರಲಿಕ್ಕೆಲ್ಲಿಂದು ಹ್ಯಾಗೆ ಹೇಳಬೇಕು? ಅವರಲ್ಲಿ ಧನಮಲ್ಲನೂ ಇಲ್ಲಿಯೇ ಇದ್ದಾನೆ. ಇವೆಲ್ಲವುಗಳ ಮೇಲಿಂದ ಮೇಹೇರಜಾನಳು ನಿಶ್ಚಯವಾಗಿ ಇಲ್ಲಿಯೇ ಇದ್ದಾಳೆ; ರಣಮಸ್ತಖಾನನು ನನ್ನಿಂದ ಆಕೆಯಲ್ಲಿ ಹುಟ್ಟಿದ ಮಗನೇ ನಿಶ್ಚಯವು! ಆದರೆ ಆತನು ವಿಜಾಪುರದ ಬಾದಶಹನ ವಕೀಲನಾಗಿ ಬರುವ ಸಂಭವವು ಹ್ಯಾಗೆ? ಮೇಹೇರಜಾನಳು ನನಗೆ ವಿರೋಧಿಯಾಗಿದ್ದ ಪಕ್ಷದಲ್ಲಿ, ತನ್ನಮಗನನ್ನು ವಕೀಲನನ್ನಾಗಿ ಹ್ಯಾಗೆ ಬರಗೊಟ್ಟಾಳು? ನನ್ನ ಮೇಲೆ ಆಕೆಯ ಪ್ರೇಮವು ಯಥಾಸ್ಥಿತವಾಗಿದ್ದ ಪಕ್ಷದಲ್ಲಿ, ಇಷ್ಟುದಿನ ಆಕೆಯು ನನ್ನಬಳಿಗೆ ಬಾರದೆ ಉಳಿಯುವದಾದರೂ ಹ್ಯಾಗೆ? ಒಟ್ಟಿಗೆ ಇದೇನು ನಿಜವೋ, ಭ್ರಾಂತಿಯೋ, ಸ್ವಪ್ನವೋ ನನಗಂತು ತಿಳಿಯದಾಗಿದೆ. ಎಲ! ನಾನು ಭಯಂಕರವಾದ ಇಂದ್ರಜಾಲದಲ್ಲಿ ಸಿಕ್ಕಿಕೊಂಡೆನೋ ಏನೋ?

ಈ ಮೇರೆಗೆ ರಾಮರಾಜನು ಭ್ರಮಿಷ್ಟನಂತೆ ಆಚರಿಸುತ್ತಿರಲು, ರಣಮಸ್ತಖಾನನು ತಾನು ನಿಂತ ಸ್ಥಳದಲ್ಲಿಯೇ ನಿಂತುಕೊಂಡು ಅದನ್ನು ನೋಡಿ, ಈತನು ಇಂದೇ ಹೀಗೆ ಯಾಕೆ ಮಾಡುತ್ತಿರಬಹುದೆಂದು ಯೋಚಿಸುತ್ತಿದ್ದನು. ಆತನಿಗೆ ರಾಮರಾಜನು ಒದರಿದ್ದೂ ಕೇಳಿಸಿದ್ದಿಲ್ಲ; ಕಣ್ಣೀರು ಸುರಿಸಿದ್ದೂ ಕಂಡಿದ್ದಿಲ್ಲ; ವಿಲಕ್ಷಣ ಬುದ್ಧಿಶಾಲಿಯಾದ ಈ ಕುಲೀನಮನುಷ್ಯನು ಇಂದು ಹೀಗೆ

ಯಾಕೆ ಮಾಡುತ್ತಿರಬಹುದೆಂಬದರ ಗೂಢವೇ ರಣಮಸ್ತಖಾನನಿಗೆ ತಿಳಿಯದಾಯಿತು. ತನ್ನ ಪ್ರೀತಿಯ ಕುಂಜವನದಲ್ಲಿ ಹಿಂದಕ್ಕೆ ಒದಗಿದ್ದೊಂದು ಮನೋಹರ ಪ್ರಸಂಗದ ನೆನಪಾದದ್ದರಿಂದ ಈತನು ಹೀಗೆ ಮಾಡುತ್ತಿರಬಹುದೆಂದು ತರ್ಕಿಸಿ ಆತನು ತನ್ನ ಸಮಾಧಾನಮಾಡಿಕೊಳ್ಳುತ್ತಿದ್ದನು. ಅಷ್ಟರಲ್ಲಿ ರಾಮರಾಜನು ನಿರಾಕಪಟ್ಟು ಇನ್ನು ವಿಜಯನಗರಕ್ಕೆ ಹೋಗಬೇಕೆಂದು ನಿಶ್ಚಯಿಸಿ ರಣಮಸ್ತಖಾನನು ನಿಂತಲ್ಲಿಗೆ ಬಂದು—ಕುಂಜವನವನ್ನು ನೋಡಲಿಕ್ಕೆ ನನಗೆ ಪರವಾನಿಗೆಯನ್ನು ಕೊಟ್ಟದ್ದರಿಂದ ನನ್ನ ಮೇಲೆ ನೀವು ಬಹಳ ಉಪಕಾರಮಾಡಿದಂತಾಯಿತು. ಆ ಉಪಕಾರವನ್ನು ಹ್ಯಾಗೆ ತೀರಿಸಬೇಕೆಂಬದು ನನಗೆ ತಿಳಿಯದಾಗಿದೆ. ತಿರುಗಿ ಮತ್ತೆ ಯಾವಾಗ ನನಗೆ ಕುಂಜವನಕ್ಕೆ ಬರುವ ಮನಸ್ಸಾದೀತೋ, ಆಗ ನಾನು ಬರುವೆನು. ಈಗಿನಂತೆಯೇ ಆಗ ನನಗೆ ಪರವಾನಿಗೆಯನ್ನು ಕೊಡಿರೆಂದರಾಯಿತು." ಅನ್ನಲು, ರಣಮಸ್ತಖಾನನು ಅತ್ಯಂತ ಸಹಾನುಭೂತಿಯಿಂದ ಛೇ ಛೇ, ಇದೇನು ಮಾತಾಡೋಣವು! ಕುಂಜವನವು ನಿಮ್ಮದಿದ್ದು ನನಗಿಷ್ಟು ಯಾಕೆ ಹೇಳಿಕೊಳ್ಳಬೇಕು? ಕುಂಜವನದ ಮೇಲೆ ತಮ್ಮದಿಷ್ಟು ಪ್ರೇಮವಿರುತ್ತದೆಂಬದು ನನಗೆ ಮೊದಲಿಗೆ ಗೊತ್ತಾಗಿದ್ದರೆ, ನಾನು ಇಲ್ಲಿ ಇರುತ್ತಿದ್ದಿಲ್ಲ, ಬೇರೆ ಕಡೆಗೆ ಇರುತ್ತಿದ್ದೆನು. ಸ್ಥಳವು ನಿಮ್ಮದು, ನಾನೇನು ನಾಲ್ಕುದಿವಸ ಇದ್ದು ಹೋಗುವವನು. ತಾವು ಬೇಕಾದಾಗ ಬರ್ರಿ, ಬೇಕಾದಹಾಗೆ ತಿರುಗಾಡಿರಿ. ನಿಮಗೆ ಬೇಡೆನ್ನುವವರು ಯಾರು? ಈಗ ನಾನು ವಿನಯದಿಂದ ತಮ್ಮನ್ನು ಬೇಡಿಕೊಳ್ಳುವದೇನಂದರೆ, ಹೊತ್ತು ಬಹಳವಾಗಿದೆ. ಸ್ನಾನ-ಸಂಧ್ಯೆ ತೀರಿಸಿಕೊಂಡು ಊಟಮಾಡಿ ಹೋಗಬೇಕು. ಇಲ್ಲಿ ಬಂದು ತಾವು ಉಪವಾಸ ಹೋಗುವದೂ, ತಮ್ಮನ್ನು ನಾವು ಹಾಗೆ ಹೋಗಗೊಡುವದೂ ಸರಿಯಲ್ಲ; ಎಲ್ಲ ಪದಾರ್ಥಗಳನ್ನು ಸಿದ್ಧಮಾಡಿಸಿ ಕೊಡುವೆನು. ತಮಗೆ ಅಡಿಗೆಮಾಡಿ ಹಾಕಲಿಕ್ಕೆ ಜನರೂ ಇಲ್ಲಿ ಇರುತ್ತಾರೆ, ಅನ್ನುತ್ತಿರಲು, ರಾಮರಾಜನು ಅದನ್ನು ಪೂರಾ ಕಿವಿಯಮೇಲೆ ಸಹ ಹಾಕಿಕೊಳ್ಳದೆ, ಬಗಬಗೆಯಿಂದ ಆತನನ್ನು ಕುರಿತು—ಬೇಡ ಬೇಡ, ಅದರ ಸಲುವಾಗಿ ನೀವು ನನಗೆ ಆಗ್ರಹಮಾಡಬೇಡಿರಿ. ಉಂಡದ್ದಕ್ಕಿಂತಲೂ ಹೆಚ್ಚೆಂದು ತಿಳಿಯಿರಿ. ನಾನು ಇನ್ನು ಇಲ್ಲಿ ಒಂದು ಕ್ಷಣವಾದರೂ ನಿಂತುಕೊಳ್ಳಲಿಚ್ಛಿಸುವದಿಲ್ಲ, ಎಂದು ನುಡಿದು ನೇ ತಟ್ಟನೆ ಹೊರಟನು. ರಣಮಸ್ತಖಾನನೂ ಆತನ ಬೆನ್ನು ಹತ್ತಿ ನಡೆದನು. ರಾಮರಾಜನು ತನ್ನ ಕುದುರೆಯನ್ನು ಬಿಟ್ಟದ್ದ ಸ್ಥಳಕ್ಕೆ ಬಂದು ಅದನ್ನು ಹತ್ತಿದನು; ಇಲ್ಲಿಯವರೆಗೆ ತನ್ನ ಸಂಗಡ ಬಂದಿದ್ದ ಸೇವಕನ ನೆನಪು ಸಹ ಆತನಿಗೆ ಆಗಿದ್ದಿಲ್ಲ; ಆದರೆ ಸೇವಕನು ತನ್ನ ಬಳಿಯಲ್ಲಿ ನಿಂತದ್ದನ್ನು ನೋಡಿ ರಾಮರಾಜನು ಆತನಿಗೆ "ನಡೆ" ಎಂದು

ನುಡಿದು, ರಣಮಸ್ತಖಾನನ ಕಡೆಗೆ ಹೊರಳಿ ಆತನ ಅನುಜ್ಞೆಯನ್ನು ಪಡೆದಂತೆ ಸಂಜ್ಞೆಮಾಡಿ ಕುದುರೆಯನ್ನು ಮುಂದಕ್ಕೆ ಬಿಟ್ಟನು. ಇತ್ತ ರಣಮಸ್ತಖಾನನು ಇಂದಿನ ರಾಮರಾಜನ ವಿಲಕ್ಷಣ ಸ್ಥಿತಿಯ ಬಗ್ಗೆ ಆಲೋಚಿಸುತ್ತ ತನ್ನ ತಾಯಿಯ ಕೋಣೆಯಕಡೆಗೆ ಹೊರಟನು. ನಿನ್ನೆ ತನ್ನ ಬಳಿಗೆ ಬಂದಿದ್ದ ಸುಂದರಿಯ ಯೋಗ ಕ್ಷೇಮವನ್ನು ತಕ್ಕೊಳ್ಳುವದಕ್ಕೆ ಆತನ ಮನಸ್ಸು ಹರಿಯಹತ್ತಿತು. ಆತನು ತನ್ನ ತಾಯಿಯ ವೃದ್ಧದಾಸಿಯಾದ ತೈಲಿಯೆಂಬವಳನ್ನು ಕಂಡು ಆಕೆಯನ್ನು ಕುರಿತು—

ರಣಮಸ್ತಖಾನ—ನಿನ್ನೆ ಬಂದಿರುವ ತರುಣಿಯ ಯೋಗಕ್ಷೇಮವು ಸರಿಯಾಗಿ ನಡೆದಿರುವದಷ್ಟೇ?

ದಾಸಿ—ಆ ತರುಣಿಯ ವ್ಯವಸ್ಥೆಯು ಬಹಳ ನೆಟ್ಟಗಿರುತ್ತದೆ. ಮಾ ಸಾಹೇಬರು ಆಕೆಗೆ ತಮ್ಮ ಹತ್ತರ ಇರಹೇಳಿದ್ದಾರೆ. ರಾತ್ರಿ ಆಕೆಯ ತಾಸಿಗೆಯನ್ನು ಸಹ ತಮ್ಮ ಬಳಿಯಲ್ಲಿ ಹಾಸಬೇಕೆಂದು ಹೇಳಿರುವರು. ಏನು ಚಮತ್ಕಾರವೋ ತಿಳಿಯದು, ಆ ತರುಣಿಯು ಕೇವಲ ಹೊಟ್ಟಿಯ ಮಗಳಂತೆ ಮಾ ಸಾಹೇಬರ ಸೇವೆಯನ್ನು ಮಾಡಹತ್ತಿದ್ದಾಳೆ. ಆಕೆಯ ಸ್ಥಿತಿಯನ್ನು ನೋಡಿದರೆ, ಆಕೆಯು ಇಲ್ಲಿಂದ ಹೋಗುವ ಹಾಗೆ ತೋರುವದಿಲ್ಲ.

ರಣಮಸ್ತಖಾನ—ಏನಂದಿ? ಆಕೆಯು ಇಲ್ಲಿಂದ ಹೋಗುವಹಾಗೆ ಕಾಣುವದಿಲ್ಲವೆ? ಹಾಗಾದರೆ ಆಕೆಯು ಇಲ್ಲಿಯೇ ಇರುತ್ತಾಳೋ ಏನು?

ದಾಸಿ—ಹೌದು, ಆಕೆಯು ಇಲ್ಲಿಯೇ ಇರುವಂತೆ ತೋರುತ್ತದೆ. ಇಂದು ಮುಂಜಾನೆ ನನ್ನ ಮುಂದೆ ಆಕೆಯು—ಮಾಸಾಹೇಬರ ಸಹವಾಸದಲ್ಲಿಯೇ ನನ್ನ ಜನ್ಮವನ್ನು ಕಳೆಯುವ ಪ್ರಸಂಗ ಬಂದರೆ, ನಾನು ಧನ್ಯಳಾಗುವೆನು, ಎಂದು ಹೇಳಿದಳು. ನಿಮ್ಮನ್ನೆಂತು ಆಕೆಯು "ನವಾಬ ಸಾಹೇಬರು" ಎಂದು ಕರೆದ ಹೊರತು ಬಾಯಿ ಎತ್ತುವದಿಲ್ಲ.

ರಣಮಸ್ತಖಾನ—ಶಬಾಸ! ಆ ತರುಣಿಯು ಒಳ್ಳೇ ಸುಂದರ ಹೆಸರು ಹುಡುಕಿ ತೆಗೆದಿದ್ದಾಳೆ ಬಿಡು! ಇದಕ್ಕಾಗಿ ನಾನು ಆಕೆಯನ್ನು ಪ್ರತ್ಯಕ್ಷ ಕಂಡು ಕೃತಜ್ಞತೆಯನ್ನು ಪ್ರಕಟಿಸತಕ್ಕದ್ದು. ನೀನು ಆದಷ್ಟು ಸಂಧಿಯನ್ನು ಸಾಧಿಸಿ ಕೊಡುವಹಾಗಿದ್ದರೆ ನೋಡಬಾರದೆ?

ದಾಸಿ—ಆ ಸಂಧಿಯನ್ನು ಒದಗಿಸಿ ಕೊಡಲಿಕ್ಕೆ ನಾನು ಯಾಕೆ ಬೇಕು? ಆಕೆಯ ಮನಸ್ಸಿಗೆಬಂದರೆ ತಾನಾಗಿ ನಿಮಗೆ ಆ ಸಂಧಿಯನ್ನು ಒದಗಿಸಿಕೊಟ್ಟಾಳು. ಆಕೆಯು ಎಲ್ಲ ಸ್ಥಿತಿರೀತಿಗಳನ್ನು ನೋಡುವದರ ಮೇಲಿಂದ, ಆಕೆಯು ಸ್ವಚ್ಛಂದ

ವೃತ್ತಿಯವಳಿರುವಂತೆ ನನಗೆ ತೋರುತ್ತದೆ. ಈಗ ಆಕೆಯು ಪುಷ್ಕರಣಿಯ ಕಡೆಗೆ ಹೋಗಿರುತ್ತಾಳೆ.

ದಾಸಿಯ ಈ ಮಾತುಗಳನ್ನು ಕೇಳಿ ರಣಮಸ್ತಖಾನನು ಅಲ್ಲಿ ಬಹಳ ಹೊತ್ತು ನಿಲ್ಲದೆ ಅಲ್ಲಿಂದ ಹೊರಟು ಹೋದನು. ಆ ಸುಂದರಿಯು ಕುಂಜವನದಲ್ಲಿ ಹೋಗಿರುವದರಿಂದ ತಾನೂ ಅತ್ತಕಡೆಗೆ ಹೋಗಬೇಕೆಂದು ಮಾಡಿದನು. ಆದರೆ ಅಪರಿಚಿತ ತರುಣಿಯೊಬ್ಬಳು, ಏಕಸ್ಮಾತ್ತಾಗಿ ತನ್ನ ಮನೆಗೆ ಬಂದಿರಲು, ತಾನು ಆಕೆಯನ್ನು ಏಕಾಂತವಲ್ಲಿ ಕಾಣಲಿಚ್ಛಿಸುವದೂ, ಆಕೆಯೊಡನೆ ಏಕಾಂತದಲ್ಲಿ ಮಾತಾಡುವದೂ ದೊಡ್ಡಿಸ್ತನಕ್ಕೆ ಒಪ್ಪುವದಿಲ್ಲೆಂಬ ವಿಚಾರವು ಅತನ ಮನಸ್ಸಿನಲ್ಲಿ ಉತ್ಪನ್ನವಾಯಿತು; ಆದರೂ ಅತನು ತನ್ನ ವಿಚಾರವನ್ನು ತಿರುಗಿಸಲಿಲ್ಲ, ದೂರಿಂದ ಆಕೆಯನ್ನು ನೋಡಿದರೆ ತಪ್ಪೇನು? ಮುಂದೆ ಪ್ರಸಂಗ ನೋಡಿ ನಡೆದರಾಯಿತು, ಎಂದು ಆಲೋಚಿಸುತ್ತಿರಲು, ಮಂದಿರದ ಕಡೆಗೆ ನಡೆದಿದ್ದ ಅವನ ಕಾಲುಗಳು ಮೆಲ್ಲಮೆಲ್ಲನೆ ಕುಂಜವನದೊಳಗಿನ ಪುಷ್ಕರಣಿಯ ಕಡೆಗೆ ಸಾಗಹತ್ತಿದವು. ಆತನು ಹಲವು ಲತಾಮಂಟಪಗಳನ್ನು ಲಕ್ಷಪೂರ್ವಕವಾಗಿ ಹುಡುಕಿದನು; ಆದರೆ ಎಲ್ಲಿಯೂ ಆ ಸುಂದರಿಯ ಗೊತ್ತುಹತ್ತಲಿಲ್ಲ. ಆ ಸುಂದರಿಯು ಏಕಸ್ಮಾತ್ತಾಗಿ ಭೆಟ್ಟಿಯಾದರೆ, ತಾನು ಹ್ಯಾಗೆ ನಿಲ್ಲಬೇಕು? ಹ್ಯಾಗೆ ಮಾತಾಡಬೇಕು ಎಂಬ ವಿಚಾರಗಳಲ್ಲಿ ಆತನ ಮನಸ್ಸು ತೊಡಗಿತ್ತು. ಆತನು ಆತರುಣಿಯನ್ನು ಶೋಧಿಸುತ್ತ ಹೋಗುತ್ತಿರಲು, ಲತಾಮಂಟಪದೊಳಗಿನ ಪೀಠದಲ್ಲಿ ತಾನು ಹುಡುಕುತ್ತಿದ್ದ ತರುಣಿಯು ಸಚಿಂತ ಮುದ್ರೆಯಿಂದ ಆಲೋಚಿಸುತ್ತ ಕುಳಿತದ್ದನ್ನು ಆತನು ನೋಡಿದನು. ಆಗ ಆ ತರುಣಿಯ ದರ್ಶನದ ವಿಷಯವಾಗಿ ಅತ್ಯಂತ ಆತುರನಾಗಿದ್ದ ಆ ತರುಣ ಸರದಾರನು ಹಿಂದುಮುಂದಿನ ವಿಚಾರವಿಲ್ಲದೆ ತಟ್ಟನೆ ಆಕೆಯ ಮುಂದೆ ಹೋಗಿ ನಿಂತುಕೊಂಡನು. ಹೀಗೆ ರಣಮಸ್ತಖಾನನು ಆ ತರುಣಿಯ ಎದುರಿಗೆ ಹೋಗಿ ನಿಂತದ್ದೊಂದೇ ತಡ,, ಆಕೆಯು ಮೆಟ್ಟಿಬಿದ್ದು ತಟ್ಟನೆ ಎದ್ದು ನಿಂತುಕೊಂಡು ಮೈತುಂಬ ಸೆರಗುಹೊತ್ತುಕೊಂಡಳು. ಆಗ ರಣಮಸ್ತಖಾನನ ಮನಸ್ಸಿನಲ್ಲಿ ಈವರೆಗೆ ಎಂದೂ ಅನುಭವಕ್ಕೆ ಬಾರದ ವಿಲಕ್ಷಣ ಭಾವನೆಯುಂಟಾಯಿತು!

ಗಾಜನೆಯ ಪ್ರಕರಣ - ಪ್ರತಿಜ್ಞೆ.

ಆ ತರುಣಸ್ತ್ರೀಯು ಹೀಗೆ ಗಾಬರಿಯಾಗಿ ಎದ್ದು ನಿಂತಳಿಷ್ಟೇಅಲ್ಲ, ಅಕೆಯು ಥರಥರ ನಡುಗಹತ್ತಿದಳು. ಅದನ್ನು ನೋಡಿದ ಕೂಡಲೆ ರಣಮಸ್ತಖಾನನು ಆಶ್ಚರ್ಯಮಗ್ನನಾದನು. ತರುಣಿಯು ಆನಂದವೃತ್ತಿಯವಳಿದ್ದು, ಅಕೆಯ ಕುಂಜವನದಲ್ಲಿ ಈಗ ಉಲ್ಲಾಸದಿಂದ ಗಾಯನಮಾಡುತ್ತ, ರಮಿಸುತ್ತಿರಬಹುದೆಂದು ಆತನು ಆ ವೃದ್ಧ ದಾಸಿಯ ಮಾತಿನಮೇಲಿಂದ ತಿಳಿದಿದ್ದನು; ಆದರೆ ಅದರ ವಿರುದ್ಧಸ್ಥಿತಿಯು ರಣಮಸ್ತಖಾನನ ಕಣ್ಣಿಗೆ ಬಿದ್ದಿತು. ಆತನು ಆಕೆಯು ಮುಂದೆ ನಿಂತುಕೊಂಡಿದ್ದನು, ಆಕೆಯು ಆತನ ಮುಂದೆ ನಿಂತುಕೊಂಡಿದ್ದಳು; ಆವಳು ನೆಲವನ್ನು ನೋಡುತ್ತಿದ್ದಳು. ಆತನು ಆಕೆಯ ಬಾಡಿದ ಮೋರೆಯನ್ನು ನೋಡುತ್ತಿದ್ದನು. ತನ್ನ ಕಣ್ಣೊಳಗಿಂದ ಹೊರಸೂಸುವ ನೀರುಗಳು ಆತನ ಕಣ್ಣಿಗೆ ಬೀಳಬಾರದೆಂದು ಆಕೆಯು ಯತ್ನಿಸುತ್ತಿದ್ದಳು, ಆತನಾದರೂ ತನ್ನ ಕಣ್ಣೊಳಗಿಂದ ನೀರುಗಳು ಬರಬಾರದೆಂದು ಸ್ವಯತ್ನಮಾಡುತ್ತಿದ್ದನು. ಆಕೆಯ ದೇಹವು ಥರಥರ ನಡುಗುತ್ತಿತ್ತು, ಆತನ ಹೃದಯವು ಕಂಪಿಸತೊಡಗಿತ್ತು. ಮಾತಾಡುವ ಇಚ್ಛೆಯು ಅವಳಿಗಿತ್ತೋ ಇಲ್ಲವೋ ದೇವರಿಗೆ ಗೊತ್ತು, ಈತನು ಮಾತ್ರ ಯಾವಾಗ ಮಾತಾಡೇನೆಂದು ಆತುರಪಡುತ್ತಲಿದ್ದನು. ನೂರಜಹಾನಳು ಬಹಳ ಸುಂದರಿಯಿದ್ದಳು ರಾಮರಾಜನ ದರ್ಬಾರದಲ್ಲಿ ಆಕೆಯು ಸಂತಪ್ತಮುದ್ರೆಯಿಂದಿದ್ದಾಗ್ಯೂ ಆಕೆಯ ಸೌಂದರ್ಯದಲ್ಲಿ ಕೊರತೆಯುಂಟಾಗಿದ್ದಿಲ್ಲ. ಈಗ ಮನಸ್ಸಿನ ವ್ಯಾಕುಲತೆಯಿಂದ ಅತ್ಯಂತ ಮ್ಲಾನಪದನಳಾಗಿದ್ದರೂ, ಆಕೆಯ ಸೌಂದರ್ಯದಲ್ಲಿ ಈಗೂ ಕೊರತೆಯುಂಟಾಗಿದ್ದಿಲ್ಲ. ಸ್ವಾಭಾವಿಕವಾಗಿಯೇ ಸುಂದರವಾಗಿದ್ದ ಅಪ್ಸರೆಯು, ಕ್ರೋಧದಿಂದ ಸಂತಪ್ತಳಾಗಿರಲಿ, ದುಃಖದಿಂದ ದಗ್ಧಳಾಗಿರಲಿ ಆಕೆಯ ಸೌಂದರ್ಯದಲ್ಲಿ ಕೊರತೆಯು ಹ್ಯಾಗೆ ಉಂಟಾಗಬೇಕು? ಬೇರೆ ಬೇರೆ ವಿಕಾರಗಳಿಂದ ಆ ಸೌಂದರ್ಯದ ಬೇರೆ ಬೇರೆ ರೂಪಾಂತರಗಳಾದಂತಾಗಿ, ಆದಕ್ಕೆ ಬೇರೆ ಬೇರೆ ಮನೋಹರ ದ್ರವ್ಯಸ್ವರೂಪಗಳು ಪ್ರಾಪ್ತವಾಗುತ್ತಿರುವವಷ್ಟೇ? ನೂರಜಹಾನಳ ಸ್ಥಿತಿಯಾದರೂ ಹಾಗೆಯೇ ಆಯಿತು ರಣಮಸ್ತಖಾನನ ಕಣ್ಣಿಗೆ ಆಕೆಯ ಸ್ವರೂಪಸೌಂದರ್ಯದಲ್ಲಿ ಏನೂ ಕೊರತೆಯು ಕಂಡುಬರಲಿಲ್ಲ. ತನ್ನನ್ನು ಒತ್ತಾಯದಿಂದ ಇಲ್ಲಿ ಇಟ್ಟುಕೊಂಡಿರುವರೆಂಬ ಕಲ್ಪನೆಯಿಂದ ಈಕೆಯು ಇಷ್ಟು ಶೋಕಾಕುಲಳಾಗಿದ್ದರೆ, ಈಕೆಯನ್ನು ಇಂದೇ ಊರಿಗೆ ಕಳಿಸಿ ಕೊಡಬೇಕೆಂದು ರಣಮಸ್ತಖಾನನು ಯೋಚಿಸಿ, ಧೈರ್ಯದಿಂದ ಆಕೆಯನ್ನು ಕುರಿತು—"ನಾನು ಪಂಜರದಲ್ಲಿ ಸಿಕ್ಕುಬಿದ್ದೆನು, ಇಲ್ಲಿಂದ

ಹಾರಿಹೋಗಬೇಕೆಂಬ ಇಚ್ಛೆಯು ಅರಗಿಳಿಗೆ ಆಗಿರುವದೇನು? ಯಾಕೆ, ಮೌನ ವೇಕೆ ? ಅರಗಿಳಿಯೂ ಯಾಕೆ ಮಾತಾಡುವದಿಲ್ಲ? ನಾನು ಪಂಜರದಲ್ಲಿರುತ್ತೇ ನೆಂದು ಅರಗಿಳಿಯು ತಿಳಿಯಬಾರದು. ಹಾರಿಹೋಗುವ ಇಚ್ಛೆಯಾದ ಕೂಡಲೆ ಅದು ಹಾರಿಹೋಗಬಹುದು.

ಈ ಅರ್ಥದಿಂದ ಪ್ರೇಮಯುಕ್ತ ಭಾಷಣದಿಂದ ಧೈರ್ಯ ಬಂದದ್ದರಿಂದಲೋ ಏನೋ ನೂರಜಹಾನಳು ರಣಮಸ್ತಖಾನನನ್ನು ಕುರಿತು—"ನಿಮ್ಮ ಮನೆಯ ತುಂಬೆಗಳಮೇಲೆ ಕುಳಿತುಕೊಳ್ಳುವ ಕುದ್ರಪಕ್ಷಿಗಳ ಯೋಗ್ಯತೆಯೂ ನನಗೆ ಇಲ್ಲದಿರಲು, ನನಗೆ ಅರಗಿಳಿಯಂಥ ಸುಂದರ ಪಕ್ಷಿಯ ಹೆಸರು ಕೊಡುವದೇಕೆ? ಅರಗಿಳಿಯ, ಯಾವ ಯೋಗ್ಯತೆಯನ್ನು ನನ್ನಲ್ಲಿ ನೋಡಿದಿರಿ ? ಎಂದು ಮಾತಾ ಡಲು, ಆಕೆಯ ಈ ಅತ್ಯಂತ ಮಧುರಸ್ವರಯುಕ್ತ ವಿನಯವಾಣಿಯನ್ನು ಕೇಳಿ, ಆನಂದದಿಂದ ರಣಮಸ್ತಖಾನನ ನೈಮೇಲಿನ ಕೂದಲುಗಳು ನೆಟ್ಟಗಾದವು. ತನ್ನ ಮಾತುಗಳಿಗೆ ಈಕೆಯು ಉತ್ತರವನ್ನು ಕೊಟ್ಟಾಳೋ ಎಂದು ಆತುರ ದಿಂದ ಆತನು ಎದುರು ನೋಡುತ್ತಿರುವಾಗ, ಆ ಸುಂದರಿಯು ಹೀಗೆ ಮಂಜುಲ ಸ್ವರದಿಂದ ನುಡಿದದ್ದನ್ನು ಕೇಳಿ,ಖಾನನು ಅತ್ಯಾನಂದದಿಂದ—"ನಾನು ಕೊಟ್ಟ ಹೆಸರು ನಿಮ್ಮ ಯೋಗ್ಯತೆಗೆ ತಕ್ಕದ್ದಲ್ಲ. ಬೇರೆ ಸುಂದರವಾದ ಹೆಸರು ಗೊತ್ತಾ ಗದ್ದರಿಂದ ಅದನ್ನೇ ನಾನು ನಿಮಗೆ ಕೊಟ್ಟೆನು; 'ಆದರೆ ನಿನ್ನೆ ನನಗೆ ಕೊಟ್ಟ ರುವ 'ನಬಾಬ' ಎಂಬ ಹೆಸರು ಮಾತ್ರ ನಿಶ್ಚಯವಾಗಿ ನನ್ನ ಯೋಗ್ಯತೆಯನ್ನು ವಿಚಾರಿದ್ದಿರುತ್ತದೆ; ಆದರೆ ಇಂಥ ಗೌರವದ ಹೆಸರನ್ನು ನನಗೆ ಕೊಡುವ ಕಾರಣ ವೇನು? ಎಂದು ಕೇಳಲು ಅತನ ಮಾತುಗಳಿಂದ ನೂರಜಹಾನಳ ಆಂಜಿಕೆಯು ಮತ್ತಿಷ್ಟು ದೂರವಾಗಿ, ಆಕೆಯು ರಣಮಸ್ತಖಾನನನ್ನು ಕುರಿತು—ಅದಕ್ಕೂ ಯೋಗ್ಯವಾದ ಹೆಸರು ನನಸಾಗದ್ದರಿಂದಲೇ ಆಗ ಆ ಹೆಸರನ್ನು ತಮಗೆ ನಾನು ಕೊಟ್ಟೆನು; ಅದರಿಂದ ತಮಗೆ ಸಿಟ್ಟು ಬಂದಿದ್ದರೆ, ನಾನು ಕ್ಷಮೆಯನ್ನು ಯಾ ಚಿಸುತ್ತೇನೆ; ಆದರೆ ....

ಈ ಮೇರೆಗೆ ನುಡಿದು ಆಷ್ಟಕ್ಕೆ ನೂರಜಹಾನಳು ಸುಮ್ಮಾನಾದಳು, ಮುಂದೆ ಆಡಬೇಕೆಂದಿದ್ದ ಮಾತುಗಳನ್ನು ಆಕೆಯು ನುಂಗಿಕೊಂಡಳು. ಅದನ್ನು ನೋಡಿ ರಣಮಸ್ತಖಾನನು—"ಮಾತುಗಳನ್ನು ನುಂಗುವದೇಕೆ? ಆಡಿಬಿಟ್ಟ ರಾಯಿತು. ನಿಮ್ಮ ಬಹುಮಾನವಾಚಕ ಶಬ್ದದಿಂದ ಯಾರಿಗೆ ಸಂತೋಷವಾಗ ಲಿಕ್ಕಿಲ್ಲ? ಆದರೆ ಬಹುಮಾನವಾಚಕಶಬ್ದದಿಂದ ನನ್ನನ್ನು ಕರೆಯುವಾಗ ಆದರಲ್ಲಿ ಉಪಹಾಸ ಭಾವನೆಯಿರದಿದ್ದರೆ ಆಯಿತು.

ನೂರಜಹಾನ (ಗಂಭೀರಮುದ್ರೆಯಿಂದ)—ಏನು? ನಿಮ್ಮ ಸಲುವಾಗಿ ಉಪಹಾಸವೆ? ನಿಮ್ಮನ್ನು ನಾನು ಉಪಹಾಸದಿಂದ ಕರೆಯುವೆನೆ? ಛೀ, ಛೀ! ಯಾವ ಕೈಗಳು ನನ್ನ ಪ್ರಾಣವನ್ನು, ವಿಶೇಷವಾಗಿ ಪ್ರಾಣಕ್ಕಿಂತಲೂ ಹೆಚ್ಚಿನ ಮರ್ಯಾದೆಯನ್ನು ಒಳ್ಳೇ ಕಠಿನಪ್ರಸಂಗದಲ್ಲಿ ರಕ್ಷಿಸಿದವೋ, ಅಂಥ ಕೈಗಳನ್ನು ಹರಿದುಕೊಳ್ಳುವಂಥ ದುಷ್ಟ ಡಾಕಿನಿಯು ನಾನಲ್ಲ! ನಿಮ್ಮಿಂದಾದ ಉಪಕಾರವು ಹ್ಯಾಗೆ ತೀರೀತೆಂಬ ವಿಚಾರದಲ್ಲಿ ನಾನು ಮಗ್ನಳಾಗಿರುವೆನು!

ರಣಮುಸ್ತಖಾನ—ಇದರಲ್ಲಿ ಉಪಕಾರವೇತರದು? ಯಾರು ಯಾರಮೇಲೆ ಉಪಕಾರಮಾಡಿದರು? ಆದನ್ನು ಯಾರು ತೀರಿಸಬೇಕು? ನಿಜವಾದ ಸಾಲವಿದ್ದರೆ ಮಾತ್ರ ಅದನ್ನು ತೀರಿಸುವದು, ಅಥವಾ ಅದನ್ನು ತೀರಿಸುವದಕ್ಕಾಗಿ ಚಿಂತಿಸುವದು. ಕಾಲ್ಪನಿಕ ಸಾಲವನ್ನು ತೀರಿಸುವದಕ್ಕಾಗಿ ಚಿಂತಿಸುವದು ಎಲ್ಲಿಯ ರೀತಿಯು? ನಾನು ನನ್ನ ಕರ್ತವ್ಯವನ್ನು ಮಾಡಿದ್ದೇನೆ. ಆದರಲ್ಲಿ ಉಪಕಾರವೇತರದು? ಆದರೂ ಇಲ್ಲದ ಉಪಕಾರವನ್ನು ಕಲ್ಪಿಸಿ ಅದನ್ನು ತೀರಿಸಬೇಕೆಂದು ನೀವು ಇಚ್ಛಿಸುತ್ತಿದ್ದರೆ, ಅದಕ್ಕೆ ಹಾದಿಯಿಲ್ಲೆಂದು ಮಾತ್ರ ತಿಳಿಯಬೇಡಿರಿ.

ರಣಮುಸ್ತಖಾನನು ಇಷ್ಟು ಮಾತಾಡಿ, ತನ್ನ ನಾಲಿಗೆಯನ್ನು ಕಚ್ಚಿಕೊಂಡನು. ನಾನು ಇದೇನು ಪುಚ್ಚನಹಾಗೆ ಮಾತಾಡಿದೆನು, ಎಂದು ಆತನು ತನ್ನ ನಾಲಿಗೆಯನ್ನು ಬಿಗಿಹಿಡಿದು ಸುಮ್ಮನಾದನು. ಆತನ ಮಾತುಗಳ ಭಾವವು ನೂರಜಹಾನಳಿಗೆ ತಿಳಿಯಲಿಲ್ಲ. ಆತನ ಮುಖವನ್ನು ನೋಡುವದರಿಂದ ತಿಳಿದರೆ ನೋಡಬೇಕೆಂತಲೋ ಏನೋ ಆಕೆಯು ಮುಗುಳುನಗೆನಕ್ಕು, ಆಶ್ಚರ್ಯದಿಂದ ಆತನ ಮೋರೆಯನ್ನು ನೋಡಿದಳು. ಅಷ್ಟರಲ್ಲಿ ಇನ್ನೊಂದು ಮೋಜು ಆಯಿತು. ಆಕೆಯು ಮುಖವೆತ್ತಿ ನೋಡಲಿಕ್ಕೂ, ಗಾಳಿಯಿಂದ ಗಿಡದ ಎಲೆಗಳು ಒತ್ತಟ್ಟಿಗಾಗಿ ಒಂದು ಸೂರ್ಯಕಿರಣದರೇಖೆಯು ಆಕೆಯ ಮುಖದಮೇಲೆ ಬೀಳಲಿಕ್ಕೂ ಗಂಟೇ ಬಿದ್ದಿರು. ಕೆಂಚಿತ್ ಹಾಸ್ಯ, ಕೆಂಚಿತ್ ಆಶ್ಚರ್ಯ ಗಿಡದ ಎಲೆಗಳ ಸಂದಿಯೊಳಗಿಂದ ಹಾದುಬಿದ್ದ ಸೂರ್ಯಕಿರಣದಕಾಂತಿ ಇವುಗಳ ಯೋಗದಿಂದ, ಮೊದಲೇ ಸುಂದರವಾಗಿದ್ದ ಆಕೆಯ ಮುಖವು ಮತ್ತಷ್ಟು ಸುಂದರವಾಗಿ ತೋರಿ, ಖಾನನ ಮನಸ್ಸು ಚಂಚಲವಾಯಿತು. ಆತನು ಚಕಿತನಾಗಿ ನೂರಜಹಾನಳ ಮುಖವನ್ನು ಎವೆಯಿಕ್ಕದೆ ನೋಡುತ್ತ ನಿಂತುಕೊಂಡನು. ಆತನ ಮನಸ್ಸಿನಲ್ಲಿ ಉತ್ಪನ್ನವಾಗಿದ್ದ ಪ್ರೇಮವಿಕಾರಾಂಕುರವು ದೊಡ್ಡದಾಯಿತು. ಆತನು ಪ್ರೇಮದಭರದಲ್ಲಿ ನೂರಜಹಾನಳನ್ನು ಅಪ್ಪಿಕೊಳ್ಳಬೇಕೆಂದು ಕೈಗಳನ್ನು ಇನ್ನು ಮುಂದಕ್ಕೆ ಚಾಚತಕ್ಕ

ವನಿದ್ದನು;ಅಷ್ಟರಲ್ಲಿ ಪರಸ್ತ್ರೀಯೆಂಬ ಎಚ್ಚರವು ಹುಟ್ಟಿದ್ದರಿಂದ, ಆತನು ತನ್ನ ಕೈಗಳನ್ನು ಬಿಗಿಹಿಡಿದು, ಇನ್ನು ಇವು ಮುಂದಕ್ಕೆ ಹೋಗಬಾರದೆಂದು ಒಂದನ್ನೊಂದು ಹಿಡಿದುಕೊಂಡು ಪ್ರತಿಬಂಧಿಸಲ್ಪಡುವಂತೆ, ಅವನ್ನು ಸ್ವಸ್ತಿಕಾಕಾರವಾಗಿ ಎದೆಯಮೇಲೆ ಇಟ್ಟುಕೊಂಡನು; ಆದರೆ ಕಣ್ಣುಗಳಮೇಲೆ ಮಾತ್ರ ಆತನ ಆಜ್ಞಾಶಕ್ತಿಯು ನಡೆಯಲಿಲ್ಲ ಅವು ಒಂದೇಸವನೆ ನೂರಜಹಾನಳನ್ನು ನೋಡ್ತ್ತಲಿದ್ದವು. ತರುಣನ ಈಸಂಕಟವನ್ನು ತಿಳಿದು, ಅದನ್ನು ದೂರಮಾಡುವದಕ್ಕಾಗಿಯೋ ಅನ್ನುವಂತೆ ನೂರಜಹಾನಳು ರಣಮಸ್ತಖಾನನನ್ನು ಕುರಿತು- "ಸಾಲ ತೀರಿಸುವ ಉಪಾಯವಿರುವದೆಂದು ಹೇಳಿದಂತೆ, ಆ ಉಪಾಯವನ್ನಿಷ್ಟು ನನಗೆ ಹೇಳಿಬಿಡಬೇಕು; ಅಂದರೆ ಕೈಯೊಳಗಿದ್ದರೆ ನಾನು ಸಾಲ ತೀರಿಸಿಬಿಡುತ್ತೇನೆ.

ರಣಮಸ್ತಖಾನ--ನಿಮ್ಮಕೈಯೊಳಗೇ ಇರುತ್ತದೆ, ಇಲ್ಲವೆನ್ನುವಹಾಗಿಲ್ಲ; ಆದರಮೂಲತಃ ಸಾಲವೇ ಇಲ್ಲ, ಇಲ್ಲದಸಾಲವನ್ನು ಕಲ್ಪಿಸಿ ಆದನ್ನು ತೀರಿಸಬೇಕೆಂದರೆ ನಿಮ್ಮ ಕೈಯೊಳಗಿದ್ದರೂ ಆದನ್ನು ತೀರಿಸಲಿಕ್ಕೆ ನಿಮಗೆ ಬರುವಹಾಗಿಲ್ಲ.

ನೂರಜಹಾನ—ಏನು? ನನ್ನ ಕೈಯೊಳಗಿದ್ದರೂ ಆದನ್ನು ತೀರಿಸಲಿಕ್ಕೆ ಬರುವಹಾಗಿಲ್ಲನೇ? ಅಂಥಾ ಉಪಾಯವಾದರೂ ಯಾವದದು?

ರಣಮಸ್ತಖಾನ--ಆದನ್ನು ನನಗೆ ಹೇಳಲಿಕ್ಕೆ ಬರುವಹಾಗೂ ಇಲ್ಲ.

ನೂರಜಹಾನ(ನಕ್ಕು)-ಇದೊಳ್ಳೆಯ ಉಪಾಯವು!ನೀವು ಹೇಳದಿದ್ದರೆ ನನಗಾದರೂ ಆದುಹ್ಯಾಗೆ ಗೊತ್ತಾಗಬೇಕು?ಗೊತ್ತಾದಹೊರತು ಆದನ್ನು ತೀರಿಸಲಿಕ್ಕೆ ಬರುವದೋಇಲ್ಲವೋ ಎಂಬದಾದರೂ ನನಗೆಹ್ಯಾಗೆ ತಿಳಿಯಬೇಕು? ಆ ಪಾಯವು ತಕ್ಕದಿರುತ್ತದೆಂಬದೇ ನನಗೆ ತಿಳಿಯದೆ ಹೋದಬಳಿಕ,ಸಾಲವನ್ನು ನಾನು ತೀರಿಸುವದಾದರೂ ಹ್ಯಾಗೆ?ನನಗಂತು ಸಾಲತೀರಿಸುವಇಚ್ಛೆಯು ಬಹಳವಾಗಿರುತ್ತದೆ

ಇದನ್ನುಕೇಳಿ ರಣಮಸ್ತಖಾನನು ನಕ್ಕನು. ಆತನು ಬಹಳಹೊತ್ತು ಸುಮ್ಮನೆ ನಿಂತುಕೊಂಡನು. ಮಾತಾಡಬೇಕೆಂದರೆ ಆತನ ಮುಖದಿಂದ ಅಕ್ಷರಗಳೇ ಹೊರಡಲೊಲ್ಲವು. ಇದು ನೂರಜಹಾನಳಿಗೆ ಗೊಶ್ಕಾಯಿತು. ಆತನು ಒಂದೇಸವನೆ ನೂರಜಹಾನಳನ್ನು ನೋಡುತ್ತಲಿದ್ದನು. ಆಗ ಆಕೆಯು ರಣಮಸ್ತಖಾನನ ಕಡೆಗೆ ನೋಡದೆ,ಮೊದಲಿನಂತೆ ನೆಲವನ್ನು ನೋಡುತ್ತ ಅಂಗುಷ್ಠದಿಂದ ನೆಲವನ್ನು ಗೀರತೊಡಗಿದಳು. ಹೀಗೆ ಬಹಳಹೊತ್ತಾದಮೇಲೆ ರಣಮಸ್ತಖಾನನು ನೂರಜಹಾನಳನ್ನು ಕುರಿತು--ನೂರಜಹಾನ,ಅರಗಿಳಿಯೇ, ನನ್ನ ಮನಸ್ಸಿನಲ್ಲೇನಿರುತ್ತದೆಂಬದನ್ನು ನಾನು ಆಡಿಯೇ ತೋರಿಸಬೇಕೇನು? ನನ್ನ ಮನಸ್ಸಿನ ಸ್ಥಿತಿಯೇನಾಗಿರುವದೆಂಬದು ನಿನಗೆ ಕಾಣುವದಿಲ್ಲವೆ?ಆಡಿಯೇ ತೋರಿಸಬೇಕೆಂದು ನೀನು ಆಗ್ರಹ

ಪಡುತ್ತಿದ್ದರೆ, ನಾನು ಅದಕ್ಕೆ ಈಗ ಹಿಂದುಮುಂದು ನೋಡುವುದಿಲ್ಲ ಆದರೆ..... ಆದರೆ....ಆದರೆ....ನನ್ನ ಮನೋಭಯವು ಪೂರ್ಣವಾಗುವ ಆಶೆಯು ಸ್ವಲ್ಪವಾದರೂ ಇದ್ದರೆ, ನಾನು ಅದನ್ನು ಬಾಯಿಂದಲೂ ಆಡಿಬಿಡುವೆನು.

ಈಕಾಲದ ರಣಮಸ್ತಖಾನನ ಧ್ವನಿಯನ್ನು ಕೇಳಿದಕೂಡಲೆ ನೂರಜಹಾನಳು ಚಿಕಿತಳಾಗಿ, ಕೂಡಲೆ ಆತನ ಮುಖದ ಕಡೆಗೆ ನೋಡಿದಳು. ಆಗ ಆತನ ಮುಖ ಲಕ್ಷಣವು ವಿಲಕ್ಷಣವಾಗಿತ್ತು. ಆತನ ಮನಸ್ಸಿನಲ್ಲಿರುವದನ್ನು ಓದನ್ನು ಡಿಯುವ ಅವಶ್ಯಕತೆಯು ನೂರಜಹಾನಳಿಗೆ ತೋರಲಿಲ್ಲ. ಖಾನನ ಭಾವವು ಆಕೆಗೆ ತಿಳಿದಿದ್ದರೂ, ಅದನ್ನು ಆಕೆಯು ಆಡಿ ತೋರಿಸಲಾರದಾದಳು. ಆತನ ಮುಖದಿಂದಲೇ ಹೊರಟರೆ ನೆಟ್ಟಗೆಂದು ಆಕೆಯು ಮನಸ್ಸಿಗೆ ತೋರುತ್ತಿತ್ತು. ನೀವೇ ಹೇಳಿರಿಂದ, ನುಡಿಯುಲಿಕ್ಕೂ ಈಗಲಕೆಗೆ ಬಾಯಿಬರಲೊಲ್ಲದು. ಹೀಗಾಗಿ ಆಕೆಯು, ಖಾನನ ಮುಖಚರ್ಯದಕಡೆಗೆ ನೋಡುತ್ತ ನಿಂತುಕೊಂಡಳು ಅದನ್ನು ನೋಡಿ ರಣಮಸ್ತಖಾನನು ಮತ್ತಿಷ್ಟು ಉತ್ಕಂಠಿತನಾದನು. ಆಕೆಯು ತನ್ನ ಪ್ರಶ್ನೆಗೆ ಏನು ಉತ್ತರಕೊಡ ವಳೆಂಬದನ್ನೂ, ತನ್ನ ಮಾತಿನ ಅರ್ಥವು ಈಕೆಗೆ ತಿಳಿಯಿತೋ ಇಲ್ಲವೋ ಎಂಬದನ್ನೂ ನೋಡುವವನಂತೆ ಆತನೂ ನೂರಜಹಾನಳ ಕಡೆಗೆ ಎವೆಯಿಕ್ಕದೆ ನೋಡುತ್ತ ನಿಂತುಕೊಂಡನು ತನ್ನ ಮನಸ್ಸಿನಭಾವವು ಈಕೆಗೆ ಗೊತ್ತಾಯಿತೆಂಬದು ಕೂಡಲೆ ಆತನಿಗೆ ತಿಳಿಯಿತು; ಆದ್ದರಿಂದ ಆತನು ಮಾತಾಡಲಿಕ್ಕೆ ಧೈರ್ಯಗೊಂಡು--ಸುಂದರಿ,ಸ್ಪಷ್ಟವಾಗಿ ಮಾತಾಡಬೇಕಾದದ್ದರಿಂದ ನಿರ್ವಾಹವಿಲ್ಲದೆ ಮಾತಾಡುತ್ತೇನೆ, ಅದಕ್ಕಾಗಿ ನನ್ನನ್ನು ಕ್ಷಮಿಸು. ನನ್ನ ಜೀವನ ಸರ್ವಸ್ವವನ್ನು ನಿನ್ನ ಚರಣಕ್ಕೆ ಅರ್ಪಿಸಿದ್ದೇನೆ,ನೀನು ನನ್ನನ್ನು ಅಗಲಿ ಹೋದರೆ ನಾನು ಮೃತಪ್ರಾಯನಾಗುವೆನು. ನನ್ನ ಕೈಯಿಂದ ಏನಾದರೂ ಮಹತ್ಕಾರ್ಯ-ಗಳಾಗಬೇಕಾಗಿದ್ದರೆ, ನೀನು ನನ್ನ ಕೈಹಿಡಿಯುವದರಿಂದಲೇ ಅವು ಆದಾವು,ಎಂದು ನುಡಿದು, ಈಕೆಯು ಏನು ಉತ್ತರ ಕೊಡುವಳೋ ನೋಡಿ ಮತ್ತೆ ಮಾತಾಡಬೇಕೆಂದು ಆತನು ಆತುರದಿಂದ ನೂರಜಹಾನಳ ಕಡೆಗೆ ನೋಡುತ್ತ ನಿಂತುಕೊಂಡನು. ನೂರಜಹಾನಳು ಸ್ತಬ್ಧಳಾಗಿ ನಿಂತುಕೊಂಡಿದ್ದಳು;ಆಕೆಗೆ ಏನು ಮಾತಾಡಬೇಕೆಂಬದು ತೋಚದಾಯಿತು. ಆದರೂ ಪ್ರಯತ್ನದಿಂದ ಆಕೆಯು ರಣಮಸ್ತಖಾನನನ್ನು ಕುರಿತು--

ನೂರಜಹಾನ---ಸ್ತ್ರೀಯರು ಕೇವಲ ಪರಾಧೀನರು. ಆದರಲ್ಲಿ ನಾನಂತೂ ನಿನ್ನಿನವರೆಗೆ ಕೇವಲ ಪರಾಧೀನಳಾಗಿದ್ದೆನು, ಆದರೆ ಇಂದು ಮುಂಜಾವಿನಿಂದ

ನಾನು ಬೇರೆಸ್ತ್ರೀಯರಂತೆ ಪರಾಧೀನಳಾಗಿರುವದಿಲ್ಲ. ನಿನ್ನಿನವರೆಗೆ ನಾನು ನನ್ನ ಹಿರಿಯರ ಆಧೀನದಲ್ಲಿದ್ದೆನು, ಇಂದಿನಿಂದ ನನ್ನಿಷ್ಟಕ್ಕೆ ನಾನು ಸ್ವತಂತ್ರಳಾಗಿರುತ್ತೇನೆ.

ರಣಮಸ್ತಖಾನ(ಅತ್ಯಂತಹರುಷದಿಂದ)--ಹಾಗಾದರೆ ಮತ್ತೇನು ಬೇಕು? ನನ್ನ ಮನೋದಯವು ಪೂರ್ಣವಾಗಲಿಕ್ಕೆ ಪ್ರತಿಬಂಧವೇ ಇಲ್ಲದಹಾಗಾಯಿತಲ್ಲ ?

ನೂರಜಹಾನ (ಸುಮ್ಮನಿರಲು ಕೈಯಿಂದ ಸನ್ನೆಮಾಡಿ) ನಾನು ಸ್ವತಂತ್ರಳಾದೆನೆಂದು ಹೇಳಿದ್ದೇನೋ ನಿಜವು, ಆದರೆ ಕೆಲವೊಂದು ಸಂಗತಿಯಿಂದ ನಾನು ಪರಾಧೀನಳೇ ಇರುತ್ತೇನೆ.

ರಣಮಸ್ತಖಾನ[ದೈನ್ಯದಿಂದ]ನನ್ನ ಅರಗಿಳಿಯೇ,ಹೀಗೆ ನನ್ನನ್ನು ನಿರಾಶಗೊಳಿಸಬೇಡ, ನನ್ನನ್ನು ಸಂಶಯಗ್ರಸ್ತನಾಗಮಾಡಬೇಡ.ಏನು ಹೇಳುವದನ್ನು ಸ್ಪಷ್ಟವಾಗಿಹೇಳು, ಯಾವಬಾಬಿನಿಂದ ನೀನು ಪರಾಧೀನಳಾಗಿರುತ್ತೀ ನಿನ್ನಸಲುವಾಗಿ ಕೇವಲಪರಾಧೀನವಾಗಿರುವ ನನ್ನ ಮನಸ್ಸನ್ನು ಹೆಚ್ಚಿಗೆಗಾಸಿಮಾಡಬೇಡ. ನನ್ನ ಸ್ಥಿತಿಯು ನಿನ್ನ ಸ್ಥಿತಿಗೆ ಕೇವಲವಿರುದ್ಧವಾಗಿರುತ್ತದೆ,ನೀನು ನಿನ್ನಿನವರೆಗೆ ಪರತಂತ್ರಳಾಗಿದ್ದು ಇಂದಿನಿಂದ ಸ್ವತಂತ್ರಳಾದೆನೆಂದು ಹೇಳುತ್ತೀ, ಆದರೆ ನಿನ್ನಿನ ವರೆಗೆ ಸ್ವತಂತ್ರನಾಗಿದ್ದ ನಾನು,ನಿನ್ನನ್ನು ನೋಡಿದಾಗಿನಿಂದ ಪರತಂತ್ರನಾದೆನು. ನಿನ್ನಹಾಗೆ ನಾನು ಯಾವ ಬಾಬಿನಿಂದಲೂ ಈಗ ಸ್ವತಂತ್ರನಾಗಿರುವದಿಲ್ಲ; ನನ್ನ ಪ್ರಾಣಗಳನ್ನೆಲ್ಲ ನಿನಗೆ ಒಪ್ಪಿಸಿದ್ದೇನೆ; ಆದ್ದರಿಂದ ನನ್ನನ್ನು ಉಳಿಸುವದು ಅಥವಾ ಕೊಲ್ಲುವದು ನಿನ್ನಿಕೈಯಲ್ಲಿಯೇಇರುತ್ತದೆ.ಜೀವದಾನವನ್ನು ಬೇಡಿಕೊಳ್ಳುವತಪ್ಪುಗಾರನು,ತಾನುಹೇಳತಕ್ಕದ್ದನ್ನೆಲ್ಲ ಬಾದಶಹನಮುಂದೆ ಹೇಳಿಕೊಂಡನು, ದೇವರನ್ನು ಬೇಡಿಕೊಳ್ಳತಕ್ಕಹಾಗೆ ಬೇಡಿಕೊಂಡನು, ಇನ್ನು ಬಾದಶಹನು ಏನು ಆಜ್ಞೆಕೊಡುವನೆಂಬದರಕಡೆಗೆ ಆ ತಪ್ಪುಗಾರನು ನೋಡುತ್ತಿರುವನು, ಆಯಿತು, ನೂರಜಹಾನ, ಇನ್ನು ನಾನು ಏನೂ ಮಾತಾಡುವದಿಲ್ಲ. ಮಾತಾಡು, ಅರಗಿಳಿಯೇ ಮಾತಾಡು-ಸೋಕ್ಷವೋ ಮೋಕ್ಷವೋ ಎಂಬದನ್ನು ಹೇಳಿಬಿಡು.

ನೂರಜಹಾನ—ನಾನು ಇಂದಿನಿಂದ ಸ್ವತಂತ್ರಳಾದೆನೆಂದು ಹೇಳಿದೆನಲ್ಲ? ಅದು ಎಷ್ಟುಮಾತ್ರವೂ ನಿಜವಲ್ಲ.

ಇದನ್ನು ಕೇಳಿದ ಕೂಡಲೆ ರಣಮಸ್ತಖಾನನು ಏನೋ ಮಾತಾಡಬೇಕೆ

ನ್ನು ತ್ತರಲು, ನೂರಜಹಾನಳು ಪುನಃ ಕೈಯಿಂದ ಸಂಜ್ಞೆ ಮಾಡಿ ಸುಮ್ಮನಿರಿಸಿ—ಇನ್ನು ನನ್ನ ಮಾತುಗಳನ್ನು ಕೇಳಿಕೊಳ್ಳಿರಿ," ಎಂದು ಹೇಳಿದಳು. ಅದಕ್ಕೆ ರಣಮಸ್ತಖಾನನು—ನಿನ್ನ ಮಾತುಗಳನ್ನೆಲ್ಲ ನಾನು ಕೇಳಿಕೊಳ್ಳುವದು ಆಶ್ಚರ್ಯವಲ್ಲ, ನೀನು ಯಾವಾಗಲು ನನ್ನ ಸಂಗಡ ಮಾತಾಡುತ್ತಲೇ ಇರಬೇಕೆಂದು ನನ್ನ ಉತ್ಕಟೇಚ್ಛೆಯಿರುತ್ತದೆ. ಅಮೃತವೃಷ್ಟಿಯಾಗುತ್ತಿರಲು, ಅದು ಮೈ ಮೇಲೆ ಬೀಳಬಾರದೆಂದು ಯಾರಾದರೂ ಇಚ್ಛಿಸಬಹುದೋ? ಆದರೆ ವೃಷ್ಟಿಯಾಗುವ ಮೊದಲು ಅದು ಅಮೃತದ್ದೋ ವಿಷದ್ದೋ ಎಂಬದು ಗೊತ್ತಾದರೆ ನೆಟ್ಟಗೆ! ಒಂದು ಬಿಂದುವು ಮೊದಲು ನನ್ನ ಕಿವಿಯಲ್ಲಿ ಬೀಳಲಿ, ಇದು ಅಮೃತದ್ದೇ ಎಂಬದು ತನ್ನ ಮನಸ್ಸಿಗೆ ಗೊತ್ತಾಗಲಿ, ಆಮೇಲೆ ನಾನಾಗಿಯೇ ಆ ವೃಷ್ಟಿಯಲ್ಲಿ ತಪ್ಪನೆ ತೊಯಿಸಿಕೊಳ್ಳಲಿಕ್ಕೆ ಸಿದ್ಧನಾಗುವೆನು. ಒಂದೇಮಾತು—ನಾನು ನಿನ್ನವನೋ, ನಿನ್ನವನಲ್ಲವೋ? ಹೇಳು ಎಂದು ಕೇಳಲು, ನೂರಜಿಹಾನಳು ನಕ್ಕು—ಮೊದಲು ನನ್ನ ಮಾತುಗಳನ್ನೆಲ್ಲ ಸಮಾಧಾನದಿಂದ ಕೇಳಿಕೊಳ್ಳಿರಿ; ಏಂದರೆ ಎಲ್ಲ ನಿಮಗೆ ಗೊತ್ತಾಗುವದು, ಎಂದು ಹೇಳಿದಳು. ಇಷ್ಟು ಮಾತಾಡುವದರೊಳಗೆ ಆಕೆಯ ಸುಂದರಮುಖವಲ್ಲಿಯ ನಗೆಯು ಅಡಗಿ, ಆ ಮುಖವು ಬಹಳ ಗಂಭೀರವಾಯಿತು. ಬರಿಯ ಗಾಂಭೀರ್ಯವಷ್ಟೇ ಅಲ್ಲ, ಬರ ಬರುತ್ತ ಆ ಮುಖದ ಗಾಂಭೀರ್ಯದಲ್ಲಿ ಸಂತಾಪಯುಕ್ತ ಖೇದದ ವಿಶ್ರಾಣವಾದಂತೆ ತೋರಹತ್ತಿತು. ಆಕೆಯ ವಿಸ್ತೀರ್ಣವಾದ ಭಾಲಪ್ರದೇಶದಲ್ಲಿ ನಿರಿಗೆಗಳು ತೋರಹತ್ತಿದವು. ಆಕೆಯ ಹುಬ್ಬುಗಳು ಆಕುಂಚಿತವಾದದ್ದರಿಂದ, ಆಕೆಯ ವಿಶಾಲನೇತ್ರಗಳೂ ಆಕುಂಚಿತವಾಗಿ ಉಗ್ರವಾದವು. ಆಕೆಯ ಮುಖದಲ್ಲಿ ನಿಶ್ಚಯದ ಚಿಹ್ನವು ತೋರಹತ್ತಿತು. ಇದನ್ನೆಲ್ಲ ನೋಡಿ ರಣಮಸ್ತಖಾನನು ಬೆರಗಾದನು ಒಮ್ಮಿಂದೊಮ್ಮೆ ಆದ ಈ ರೂಪಾಂತರವು ತನ್ನ ಆಶಾತಂತುವು ಹರಿದುಹೋಗುವುದಕ್ಕೆ ಕಾರಣವಾಯಿತೆಂದು ಅವನು ತಿಳಿದುಕೊಂಡನು. ಆತನು ಏನೋ ಮಾತಾಡಬೇಕೆಂದು ತುಟಿಯನ್ನು ಅಲ್ಲಾಡಿಸುತ್ತಿರಲು, ಪುನಃ ನೂರಜಹಾನಳು ಸಂಜ್ಞೆಮಾಡಿ ಸುಮ್ಮನಿರಿಸಿ, ಕೂಡಲೆ ಮಾತಾಡಹತ್ತಿದಳು—

ನಬಾಬಸಾಹೇಬರೇ, ನಾನು ಒಬ್ಬ ಯಃಕಶ್ಚಿತ ಮನುಷ್ಯನಮಗಳಿರುವೆನು, ಯಾವನೊಬ್ಬ ಬಾದಶಹನ ಮಗಳಲ್ಲ, ಸ್ವರ್ಗದೊಳಗಿನ ದೇವತೆಯಲ್ಲ; ಆದರೆ ನನ್ನ ಶೀಲವು ನನಗೆ ಅತ್ಯಂತ ಪ್ರಿಯವಾಗಿರುವದು. ನಿನ್ನೆ ಒಬ್ಬ ಹಿಂದೂ ರಾಜನು, ಕೂಡಿದ ದರ್ಬಾರದಲ್ಲಿ ಎಲ್ಲ ಗಂಡಸರ ಮುಂದೆ ನನ್ನ ಲಜ್ಜಾಹರಣ

ವನ್ನು ಮಾಡಿದನು. ಆ ನೀಚನು ಅಷ್ಟಕ್ಕೇ ಸುಮ್ಮನಿರದೆ, ಇಂದು ಬೆಳಗಿನಲ್ಲಿ ನನ್ನನ್ನು ಹರಣಮಾಡುವದಕ್ಕಾಗಿ ಈ ಕುಂಜವನಕ್ಕೆ ಬಂದಿದ್ದನು. ನನ್ನ ಶೋಧಮಾಡುತ್ತ ಮೊದಲು ಆತನು ಬಂಗಲೆಗೆ ಬಂದನು. ನಾನು ಕುಂಜವನದಲ್ಲಿರುವೆನೆಂಬದು ಗೊತ್ತಾದಕೂಡಲೆ, ಆತನು ನಿಮ್ಮನ್ನು ಕರಕೊಂಡು ಇಲ್ಲಿಗೆ ಬಂದನು. ಆ ದುಷ್ಟನು ಚಿಗರೆಯ ಬೇಟೆಮಾಡುವಂತೆ ಕುಂಜವನದ ತುಂಬ ನನ್ನನ್ನು ಹುಡುಕುತ್ತ ತಿರುಗಾಡಿದನು. ನಾನು ಅವನ ಕಣ್ಣಿಗೆ ಬಿದ್ದಿದ್ದರೆ, ಏನು ಮಾಡುತ್ತಿದ್ದನೆಂಬುದನ್ನು ಹೇಳಲಾರೆನು. ನಾನು ಅವನ ಮುಂದೆ ನನ್ನ ಬುರುಕಿಯನ್ನು ತೆಗೆದು ನಿಂತಾಗಿನಿಂದ ಅವನ ಮೈಮೇಲಿನ ಎಚ್ಚರವು ತಪ್ಪಿರಲೇಬೇಕು. ಇಲ್ಲದಿದ್ದರೆ ಅವನು ಇಷ್ಟುಬೇಗನೆ ಕುಂಜವನಕ್ಕೆ ಬರುತ್ತಿದ್ದಿಲ್ಲ. ಇಷ್ಟು ಬೇಗನೆ ಇಲ್ಲಿಗೆ ಬರಬೇಕಾದರೆ ನಿನ್ನೆ ಅವನು ಯಾವಾಗ ಹೊರಟಿರಬಹುದೆಂಬುದನ್ನು ನೀವೇ ಕಲ್ಪಿಸಿರಿ. ನನ್ನ ಮೇಲೆ ಆತನ ಅಭಿಲಾಷೆಯು ಇಲ್ಲದಿದ್ದರೆ ಆತನು ಇಷ್ಟು ಬೇಗನೆ ಕುಂಜವನಕ್ಕೆ ಬರುತ್ತಿದ್ದನೆ? ಹಿಂದಕ್ಕೆ ಎಂದಾದರೂ ಹೀಗೆ ಬಂದಿದ್ದನೆ? ಬಂದರೂ ಬರಲಿ, ತಾನು ಯಾತರ ಸಲುವಾಗಿ ಬಂದನೆಂಬುವನ್ನು ನಿಮ್ಮ ಮುಂದೆ ಹೇಳಿದನೋ? ಆತನು ಬಂದು ಏನುಮಾಡಿದನೆಂಬುದರ ಕಲ್ಪನೆಯಾದರೂ ನಿಮಗೆ ಇರುತ್ತದೆಯೋ? ಇನ್ನು ಈ ದುಷ್ಟನು ಹೀಗೆಯೇ ಎಷ್ಟು ಜನ ಮುಸಲ್ಮಾನ ತರುಣಿಯರ ಲಜ್ಜೆ ಹರಣಮಾಡುವನು ನಿಮ್ಮ ಬಾದಶಹನು ಹೀಗೆಯೇ ಎಷ್ಟದಿನ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳುವನು? ಗಂಡಸರೆನಿಸುವ ನೀವು ಸುಮ್ಮನೆ ಈ ಅವಿಚಾರತನವನ್ನು ಸಹಿಸುತ್ತ ಹೋಗುವವರೆಗೆ, ನಮ್ಮ ಧರ್ಮ ಅನಾಥ ಅಬಲೆಯರ ಮೇಲೆ ಈ ತೆರೆಳಗಳು ಹೀಗೆ ಮುಗಿಬೀಳುವುದೇ ಸರಿ! ದೂರವೇಕೆ, ಇಲ್ಲಿ ನೋಡಿರಿ, ಆ ದುಷ್ಟನು ನನ್ನ ಬೆನ್ನುಹತ್ತಿ ಇಂದು ಬಂದನೋ ಇಲ್ಲವೊ? ನೀವು ಆತನ ಸಂಗಡ ಇರದೇ ನಾನು ಆತನ ಕೈಗೆ ಸಿಕ್ಕಿದ್ದರೆ, ಆತನು ನನ್ನನ್ನು ಎಲ್ಲಿಯೋ ಅಡಗಿಸಿ ಇಟ್ಟುಬಿಡುತ್ತಿದ್ದನು. ಆತನು ಒಬ್ಬನೇ ಬಂದಿದ್ದನೆಂದು ನಿಮ್ಮ ತಿಳುವಳಿಕೆಯಾಗಿರಬಹುದು; ಆದರೆ ಈ ಕಾರ್ಯಕ್ಕಾಗಿ ಆತನು ಎಷ್ಟು ಜನರನ್ನು ಕುಂಜವನದ ಹೊರಗೆ ನಿಲ್ಲಿಸಿದ್ದನೆಂಬುದು ನಿಮಗೆ ಗೊತ್ತದೆಯೋ? ನೀವು ಅವರ ಶೋಧಮಾಡಿಸಿರುವಿರಾ? ಇಷ್ಟು ದಿನ ಇಲ್ಲಿ ನೀವು ಇದ್ದರೂ ನಿಮಗೆ ಗೊತ್ತಾಗದ ಒಂದು ಸಂಗತಿಯನ್ನು ನಾನು ಹೇಳುತ್ತೇನೆ ಕೇಳಿರಿ. ಇದೇ ಈ ಕುಂಜವನದಲ್ಲಿ ಈ ದುಷ್ಟರಾಮರಾಜನು ಹಿಂದಕ್ಕೆ ನನ್ನಂಥ ಒಬ್ಬ ಅಬಲೆಯನ್ನು ಕಂದಿಟ್ಟು, ಆಕೆಯ ಸರ್ವಸ್ವವನ್ನು ಮಣ್ಣುಗೂಡಿಸಿದನು. ಈಗಿಷ್ಟು ಮುದುಕನಾಗಿದ್ದರೂ ಈ ಕಾಮಾನ್ಧನು

ನನ್ನ ಅಖಿಲಾಷೆಯಿಂದ ಇಲ್ಲಿಗೆ ಬಂದನು. ಯಾಕೆ, ಮಾತಾಡಿದ ನನ್ನ ಮಾತಿನ ವಿರುದ್ಧವಾಗಿ ನಿಮ್ಮ ಕಲ್ಪನೆಯೇನಾಗಿರುತ್ತದೆಂಬದನ್ನು ಸ್ಪಷ್ಟವಾಗಿ ಹೇಳಿರಿ. ನನ್ನ ಸ್ಪಷ್ಟಮಾತುಗಳಿಗಾಗಿ ವಿಕಲ್ಪವೆಣಿಸದೆ, ದಯವಿಟ್ಟು ನನ್ನನ್ನು ಕ್ಷಮಿಸಬೇಕು. ನಬಾಬಸಾಹೇಬ, ನಿನ್ನೆ ದರ್ಬಾರದಲ್ಲಿ ಎಲ್ಲಗಂಡಸರ ಎದುರಿಗೆ ಬುರುಕಿಯನ್ನು ತೆಗೆದು ನಿಂತಾಗಲೇ ನಾನು ನಾಚಿಕೆಯನ್ನು ಬಿಟ್ಟುಬಿಟ್ಟಿರುತ್ತೇನೆ. ಇನ್ನು ಯಾವನು ಈ ದುಷ್ಟನಶಾಸನ ಮಾಡುವನೋ, ಹೀಗೆ ಸ್ತ್ರೀಯರ ಪಾತಿವ್ರತ್ಯಭಂಗವಾಗುತ್ತಿರುವ ಈ ವಿಜಯನಗರದ ರಾಜ್ಯವನ್ನು ಯಾವನು ನಷ್ಟಪಡಿಸುವನೋ, ಆಪುರುಷಶ್ರೇಷ್ಠನೇನನಗೆ ಪುನಃ ಬುರುಕಿಯನ್ನು ಹೊದಿಸಲಿಕ್ಕೆ ಅಧಿಕಾರಿಯಾಗುವನು!

ಈ ಮೇರೆಗೆ ನುಡಿದು ನೂರಜಹಾನಳು ಸುಮ್ಮನಾದಳು. ರಣಮಸ್ತಖಾನನು ಆಕೆಯಮಾತುಗಳನ್ನು ಕೇಳಿ ಅತ್ಯಂತಚಕಿತನಾದನು. ಆಕೆಯ ಮುಂಗಾಲಪುಟಿಕೆಯ ಪ್ರತಿಒಂದುಮಾತು ಆತನಿಗೆ ಅಕ್ಷರಶಃನಿಜವಾಗಿ ತೋರಿತು. ರಾಮರಾಜನು ಈದಿನ ಭ್ರಮಿಷ್ಟನಹಾಗೆ ಮಾಡಿದ್ದರಕಾರಣವು ಅವನ ಮನಸ್ಸಿಗೆ ಈಗ ಹೊಳೆದು, ಆತನು ಸಂತಾಪಗೊಂಡನು. ತಾನುಇಲ್ಲಿಗೆ ಇಷ್ಟುದೊಡ್ಡ ವಕೀಲನಾಗಿ ಬಂದಿದ್ದು,ಇಷ್ಟು ಸ್ವಾಭಾವಿಕಮಾತಿನ ಕಲ್ಪನೆಯಾಗದ್ದಕ್ಕೆ ಆತನು ತನ್ನನ್ನು ಬಹಳವಾಗಿ ಹಳಿದುಕೊಂಡನು. ನಾನು ಮಹಾಮೂರ್ಖನು,ನನ್ನನ್ನು ಮೋಸಗೊಳಿಸಲಿಕ್ಕೆಆ ನೀಚನು ಬಂದಿದ್ದನು,ಎಂದುಯೋಚಿಸುವಾಗ ಆತನ ಕಣ್ಣುಗಳು ಕೆಂಡದಂತಾದವು,ತುಟಿಗಳು ನಡುಗಹತ್ತಿದವು. ಏನುಮಾಡಲಿ,ಏನುಬಿಡಲಿ ಅನ್ನುವಹಾಗಾಗಿ,ಅತನು ಏನೋಮಾತಾಡಬೇಕೆಂದು ನೂರಜಹಾನಳಕಡೆಗೆ ನೋಡಿದನು. ಆಗ ಆಕೆಯಕಣ್ಣೊಳಗಿಂದ ಒಂದೇಸವನೆ ನೀರುಸುರಿಯುತ್ತಿದ್ದವು. ಆಕೆಗೆ ಉಂಟಾಗಿದ್ದ ಸಂತಾಪದಿಂದ ಆಕೆಯ ಅವಸಾನವು ಕುಗ್ಗಿದಂತೆ ಆಗಲು, ಆಕೆಯು ಗಿಡದ ಬೊಡ್ಡೆಗೆ ಆತುಕೊಂಡು ಅದರ ಆಶ್ರಯದಿಂದ ನಿಂತುಕೊಂಡಳು. ಆದರೆ ರಣಮಸ್ತಖಾನನು ತನ್ನಕಡೆಗೆ ನೋಡಿದಕೂಡಲೆ ಆಕೆಯು ಅವಸಾನಗೊಂಡು ತನ್ನಕಣ್ಣೀರುಗಳನ್ನು ಒರಿಸಿಕೊಂಡು, ಆತನನ್ನುಕುರಿತು—"ನಾನು ಒಬ್ಬಯಃಕಶ್ಚಿತಸ್ತ್ರೀಯು,ನನ್ನನ್ನು ಹಿಡಕೊಂಡುಹೋಗಿ ಅವಮಾನಗೊಳಿಸಿದ್ದರೂ ಮಹತ್ವವಿದ್ದಿಲ್ಲ. ಆದರೆ ಈವರೆಗೆ ನನ್ನಂಥ ಎಷ್ಟುಜನರನ್ನುಆದುಷ್ಟನು ಅವಮಾನಗೊಳಿಸಿರುವನೋ ಯಾರಿಗೆ ಗೊತ್ತು! ಒಬ್ಬಸುಂದರಿಯ ಸಂಸಾರಗೇಡನ್ನು ಇದೇದುಷ್ಟನೇ ಇದೇಕುಂಜವನದಲ್ಲಿ ಮಾಡಿದನೆಂದು ನಾನು ಕೇಳಿದ್ದೇನೆ! ಇದರ ಮೇ

ಲಿಂದ ನೋಡುತ್ತಿರಲು, ನಮ್ಮ ಮುಸಲ್ಮಾನ ಜನರಲ್ಲಿ ರಕ್ಷಕರು ಯಾರೂ ಉಳಿಯಲಿಲ್ಲೆಂದು ಅನ್ನಬೇಕಾಗುತ್ತದೆ. ಅಂದಬಳಿಕ ನಮ್ಮಂಥ ತರುಣಿಯರು ತಮ್ಮ ಜನ್ಮವನ್ನು ಹೀಗೆಯೇ ಅವಿವಾಹಿತಸ್ಥಿತಿಯಲ್ಲಿ ಯಾಕೆ ಕಳೆಯಬಾರದು? ನಮ್ಮನ್ನು ಹಡೆದವರು ನಮ್ಮ ಲಗ್ನವನ್ನು ಯಾಕೆ ಮಾಡಿಕೊಡಬೇಕು? ನಮ್ಮ ಗಂಡಂದಿರು, ತಮ್ಮ ಹೆಂಡತಿಯೆಂದು ನಮ್ಮನ್ನು ಯಾಕೆ ಕರೆಯಬೇಕು? ಮೈಯಲ್ಲಿ ಸಾಮರ್ಥ್ಯವಿದ್ದರೆ ನಾವು ನಮ್ಮ ಸಂರಕ್ಷಣವನ್ನು ಮಾಡಿಕೊಳ್ಳತಕ್ಕದ್ದು, ಇಲ್ಲದಿದ್ದರೆ ಭಾವಿಕೆರೆಗಳಪಾಲಾಗತಕ್ಕದ್ದು! ಅದೂಆಗದಿದ್ದರೆ, ಆದುಷ್ಪರಾಮರಾಜನ ರಾಣೀವಾಸವನ್ನು ಸೇರತಕ್ಕದ್ದು! ನಾನಂತು ಹೀಗೆಯೇ ಮಾಡಬೇಕೆಂದು ನಿಶ್ಚಯಿಸಿದ್ದೇನೆ. ನಾನು ಸರ್ವಥಾ ವಿವಾಹಮಾಡಿಕೊಳ್ಳುವದಿಲ್ಲ; ಯಾಕಂದರೆ, ತಮ್ಮ ಹೆಂಡಿರಮರ್ಯಾದೆಯನ್ನು ರಕ್ಷಿಸಿಕೊಳ್ಳುವ ಸಾಮರ್ಥ್ಯವು ಮುಸಲ್ಮಾನ ಪುರುಷರಲ್ಲಿ ಉಳಿದಿರುವದಿಲ್ಲ! ದೇಶಾಂತರಕ್ಕೆ ತೆರಳಬೇಕೆಂತಲೂ ನನ್ನ ಮನಸ್ಸಿನಲ್ಲಿ ಮಾಡಿದ್ದೇನೆ ಇದೇ ನನ್ನ ನಿರ್ಧಾರವು ಇದೇ ನನ್ನ ಪ್ರತಿಜ್ಞೆಯು. ನಾನು ಯಃಕಶ್ಚಿತ ಸ್ತ್ರೀಯಾಗಿದ್ದರೂ ನನ್ನಂಥ ತರುಣಿಯರಿಗೆ ನಾನು ಇದೇಮಾತನ್ನು ಉಪದೇಶಿಸುವೆನು. ಇನ್ನು ನಾನು ನನ್ನಷ್ಟಕ್ಕೆ ಸ್ವತಂತ್ರಳಾದೆನು. ನನ್ನ ದಾನ ಮಾಡಲಿಕ್ಕೆ ನನ್ನತಂದೆಯು ಮಾಲಕನಲ್ಲ, ನನ್ನ ದಾನ ತಕ್ಕೊಳ್ಳಲಿಕ್ಕೆ ಯಾವ ಪುರುಷನೂ ಸಮರ್ಥನಲ್ಲ. ದಾನ ತಕ್ಕೊಳ್ಳುವವನಲ್ಲಿಯಾವರೂ ದತ್ತ ವಸ್ತುವಿನ ಸಂರಕ್ಷಣವಾಡುವ ಸಾಮರ್ಥ್ಯವಿರಬೇಕಾಗುತ್ತದಲ್ಲವೆ ?

ಆಯಿತು, ನೂರಜಹಾನಳ ಮಾತುಗಳ ಪರಮಾವಧಿಯಾಯಿತು. ಪ್ರಯತ್ನಪೂರ್ವಕವಾಗಿ ಒಟ್ಟುಗೂಡಿಸಿದ ಆಕೆಯ ಧೈರ್ಯವೆಲ್ಲ ಲುಪ್ತವಾಗಿಹೋಗಿಗಿಡದ ಬೊಡ್ಡೆಗೆ ಆತು ನಿಲ್ಲುವಷ್ಟು ಅವಯವವೂ ಆಕೆಯಲ್ಲಿ ಈಗ ಉಳಿಯಲಿಲ್ಲ. ಆಕೆಯು ಹಾಗೆಯೇ ನೆಲಕ್ಕೆ ಕುಳಿತಳು. ಆಕೆ ಮೂರ್ಛಿತಳಾಗಿ ಬೀಳುವಹಾಗೆ ತೋರಿತು. ಆದರೆ ಆಕೆಯನ್ನು ಹಿಡಿಯಬೇಕೆಂಬ ಎಚ್ಚರವೂ ರಣಮಸ್ತಖಾನನಿಗೆ ಉಳಿದಿದ್ದಿಲ್ಲ. ನೂರಜಹಾನಳ ಮಾತಿನ ಪೆಟ್ಟುಗಳಿಂದ ಆತನು ತೀರ ಶೂನ್ಯಚಿತ್ತನಾಗಿದ್ದನು. ಆತನಿಗೆ ಬಧಿರತ್ವವು ಪ್ರಾಪ್ತವಾದಂತಾಗಿತ್ತು. ಆಕೆಯ ಪ್ರತಿಯೊಂದು ಶಬ್ದವು ಕಾದಸೀಸದ ರಸದಂತೆ ಆತನ ಕಿವಿಯೊಳಗಿಂದ ಹಾದುಹೋಗಿ, ಆತನ ಹೃದಯದಲ್ಲಿ ತುಂಬಿಕೊಂಡಿತ್ತು! ಆದರಿಂದ ಆತನ ಮೈಮೇಲಿನ ಎಚ್ಚರವು ತಪ್ಪಿತ್ತು. ತಾನಾಡುವ ಮಾತುಗಳನ್ನು ಕೇಳುವ ಸ್ಥಿತಿಯಲ್ಲಿ ನೂರಜಹಾನಳು ಇರುವಳೋ, ಇಲ್ಲವೋ ಎಂಬದನ್ನು ತಿಳಕೊಳ್ಳುವಷ್ಟು ಎಚ್ಚರವೂ ಆತನ ಮೈಮೇಲೆ ಇದ್ದಿದ್ದಿಲ್ಲ. ಸಂತಾಪದಿಂದ ಅವನ ಸರ್ವಾಂ

ಗವು ತಪ್ಪವಾಗಿತ್ತು. ಆತನು ಕಡೆಗೆ ನೂರಜಹಾನಳನ್ನು ಕುರಿತು—"ನೆಟ್ಟ ಗಾಯಿತು, ನೀನು ಇಂದು ನನ್ನ ಕಣ್ಣುಗಳನ್ನು ತೆರೆದೆ! ನಾನು ಈಗ ಬಹಳ ಮಾತಾಡುವದಿಲ್ಲ. ನನ್ನಲ್ಲಿ ಏನಾದರೂ ಸಾಮರ್ಥ್ಯವಿದ್ದದ್ದೇ ನಿಜವಿದ್ದರೆ, ಆ ದುಷ್ಟನ ಶಾಸನವನ್ನು ಮಾಡಿತೀರುವೆ . ನನ್ನ ಬರ್ಚಿಯ ತುದಿಗೆ ಆ ದುಷ್ಟನ ರುಂಡವನ್ನು ಚುಚ್ಚಿಕೊಂಡು ಬಂದು, ನಿನ್ನ ಚರಣದಮೇಲೆ ಕೆಡವುವೆನು. ಈ ಅಧರ್ಮದ ರಾಜ್ಯವನ್ನು ಮಣ್ಣುಗೂಡಿಸಿದ ಬಳಿಕ ನಿನ್ನ ಪಾಣಿಗ್ರಹಣದ ಮಾತು. ಅಲ್ಲಿಯವರೆಗೆ ನೀನು ಮಾತ್ರ ಈಗ ಇದ್ದಹಾಗೆಯೇ ಇರು. ನನ್ನ ಈ ಪ್ರತಿಜ್ಞೆಯು ಒಂದು ವರ್ಷದೊಳಗೆ ನಿಜವಾಗದಿದ್ದರೆ, ನಿನಗೆ ವೋರೆ ತೋರಿಸಲಿಕ್ಕಿಲ್ಲ! ಎಂದು ನುಡಿದು, ರಣಮಸ್ತಖಾನನು ತಟ್ಟನೆ ಅಲ್ಲಿಂದ ಹೊರಟು ಹೋದನು. ಮಗನ ಈ ಪ್ರತಿಜ್ಞೆಯನ್ನು ಅಕಸ್ಮಾತ್ತಾಗಿ ಅಲ್ಲಿಗೆಬಂದು ಮರೆಗೆ ನಿಂತಿದ್ದ ಮಾಸಾಹೇಬರು ಕೇಳಿ ಚಕಿತರಾದರು !

ಎಂಟನೇ ಪ್ರಕರಣ—ಸಂಬಂಧಸೂಚನೆ.

ಹಿಂದಿನ ೧೪ ನೆಯ ಪ್ರಕರಣದಲ್ಲಿ ಹೇಳಿದಂತೆ ರಾಮರಾಜನು ಕುಂಜವನದಿಂದ ಹೊರಟವನು ವಿಜಯನಗರದಕಡೆಗೆ ಒತ್ತರದಿಂದ ಸಾಗಿದ್ದನು; ಆದರೆ ಆತನ ಚಿತ್ತಕ್ಕೆ ಸಮಾಧಾನವಿದ್ದಿಲ್ಲ. ಆತನು ಭ್ರಮಿಷ್ಟನಂತೆ ಆಗಿದ್ದನು. ತಾನು ಕುಂಜವನದಲ್ಲಿ ಮೋಹೇರಜಾನಳನ್ನು ನೋಡಿದಂತೆ ಭಾಸವಾದಾಗಿನಿಂದ, ಆತನಿಗೆ ೩೫ ವರ್ಷದ ಹಿಂದಿನ ತನ್ನ ಕರ್ಮಕಥೆಯೆಲ್ಲ ನೆನಪಾಗಿತ್ತು. ಆದರಲ್ಲಿ ಧನಮಲ್ಲನು ಈಗ ೩೫ ವರ್ಷಗಳಮೇಲೆ ಅಕಸ್ಮಾತ್ತಾಗಿ ಕುಂಜವನದಲ್ಲಿ ಅಂದೇ ಕಣ್ಣಿಗೆ ಬಿದ್ದಿದ್ದನು. ರಾಮರಾಜನು ಕುದುರೆಯಮೇಲೆ ಕುಳಿತು ಸಾಗಿದ್ದರೂ, ಕುದುರೆಯ ನಡಿಗೆಯ ಕಡೆಗೆ ಆತನ ಲಕ್ಷವಿದ್ದಿಲ್ಲ. ಸುಮ್ಮನೆ ಪರಾಧೀನನಂತೆ ಕುದುರೆ ಒಯ್ದತ್ತ ಸಾಗಿದ್ದನು. ಕುದುರೆ ಹಾದಿಯನ್ನು ಹಿಡಿದಿರುವದೋ, ಅಡವಿಯನ್ನು ಬಿದ್ದಿರುವದೋ ಎಂಬದನ್ನು ಆತನು ನೋಡುತ್ತಿದ್ದಿಲ್ಲ ! ಕುದುರೆಯು ಬಹು ಸೂಕ್ಷ್ಮಸ್ವಭಾವದ್ದಿದ್ದದ್ದರಿಂದ ಅದು ನೆಟ್ಟಗೆ ವಿಜಯನಗರದ ಹಾದಿಯನ್ನು ಹಿಡಿದು ಸಾವಕಾಶವಾಗಿ ನಡೆದಿತ್ತು. ಆತನು ಹಲವು ವಿಚಾರಗಳ ಗುಂಗಿನಲ್ಲಿರುವಾಗ, ವಿಜಯನಗರವನ್ನು ಮುಟ್ಟಿ ತನ್ನ ಮಂದಿರವನ್ನು ಪ್ರವೇಶಿಸಿದನು; ಆತನ ಊಟ-ಉಪಚಾರಗಳು ಆದವು; ಆತನ ನಿತ್ಯದ ರಾಜಕರಣದ ಕಾರ್ಯಗಳೂ ನಡೆದವು; ಆತನು ಜನರ ದರ್ಶನ ತಕ್ಕೊಳ್ಳು ಹತ್ತಿದನು; ಆಜ್ಞಾಪತ್ರಗಳನ್ನು ಕಳಿಸಹತ್ತಿದನು; ಆದರೆ ಅವೆಲ್ಲ

ವ್ಯಾಪಾರಗಳು ನಿದ್ದೆಯೊಳಗಿನ ವ್ಯಾಪಾರಗಳಂತೆ ಆದವು. ಹೀಗೆ ಭ್ರಮಿಷ್ಟನಂತೆ ಆಗಿದ್ದ ರಾಮರಾಜನ ವ್ಯವಹಾರಗಳು ಮನಃಪೂರ್ವಕವಾಗಿ ನಡೆಯದೆಯಿದ್ದಾಗ, ಕುಂಜವನದಿಂದ ಒಬ್ಬ ಗುಪ್ತಚಾರನು ಬಂದಿದ್ದಾನೆಂದು ದ್ವಾರರಕ್ಷಕನು ಆತನಿಗೆ ಹೇಳಿದನು. ಆದನ್ನು ಕೇಳಿದಕೂಡಲೆ ರಾಮರಾಜನು ಆ ಚಾರನನ್ನು ಕರಿಸಿಕೊಂಡು ಸುದ್ದಿಯೇನೆಂದು ಕೇಳಲು, ಆ ಚಾರನು—"ನೂರ ಜಹಾನಳನ್ನು ಕಳಿಸುವದಕ್ಕಾಗಿ ರಣಮಸ್ತಖಾನನು ವಿಜಾಪುರಕ್ಕೆ ಹೋದನೆ"ಂದು ಹೇಳಿದನು.

ಈ ಸುದ್ದಿಯನ್ನು ಕೇಳಿದಕೂಡಲೆ ರಾಮರಾಜನ ಮನಸ್ಸಿಗೆ ಹ್ಯಾಗೆ ಹ್ಯಾಗೋ ಆಯಿತು. ಕೆಲಹೊತ್ತಿನವರೆಗೆ ಆತನು ಆ ಗುಪ್ತಚಾರನಿಗೆ ಏನೂ ಪ್ರಶ್ನ ಮಾಡದೆ ಸುಮ್ಮನೆ ಕುಳಿತುಕೊಂಡನು. ಆಮೇಲೆ ಆತನು ಚಾರನನ್ನು ಕುರಿತು–ರಣಮಸ್ತಖಾನನ ಸಂಗಡ ಮತ್ತೆಯಾರು ಹೋದರು? ಸಂಗಡ ಎಷ್ಟು ಜನರು ಹೋಗಿರುವರು? ಆತನ ಮನೆಯ ಜನರೂ ಹೋದರೇನು, ಎಂದು ಕೇಳಲು, ಚಾರನು—ಇಲ್ಲ, ಅವರ ತಾಯಿಯೇ ಮೊದಲಾದವರು ಇಲ್ಲಿಯೇ ಇದ್ದಾರೆ. ನೂರಜಹಾನಳು, ಆಕೆಯ ಪರಿವಾರದವರು, ರಣಮಸ್ತಖಾನನು, ಹಾಗೂ ಅವನ ಕೆಲವು ಪರಿವಾರವು ಇಷ್ಟೇ ಜನರು ವಿಜಾಪುರಕ್ಕೆ ಹೋಗಿರುವರು. ಉಳಿದವರೆಲ್ಲ ಇಲ್ಲಯೇ ಇರುವರು, ಎಂದು ಹೇಳಿದನು ಪುನಃ ರಾಮರಾಜನು ಸುಮ್ಮನೆ ಕುಳಿತುಕೊಂಡನು. ಆಮೇಲೆ ಆತನು ಮತ್ತೆ ಚಾರನನ್ನು ಕುರಿತು ---"ನೀನು ನಿನ್ನ ಕೆಲಸವನ್ನು ನೆಟ್ಟಗೆ ಮಾಡುವದಿಲ್ಲೆನ್ನುವಹಾಗೆ ಕಾಣುತ್ತದೆ. ನಿನ್ನೆ ಮುಂಜಾನೆ ನಾನು ಅಲ್ಲಿಗೆ ಬಂದಾಗ ಒಬ್ಬ ಬಲಭೀಮನಂಥ ಲಠ್ಠ ಕರಿಯ ಮನುಷ್ಯನನ್ನು ವಕೀಲನ ಜನರು ಮುತ್ತಿ, ಆತನನ್ನು ಏನೇನೋ ಕೇಳುತ್ತಿದ್ದದ್ದನ್ನು ನಾನು ನೋಡಿದೆನು; ಆದರೆ ಆ ಕರಿಯ ಮನುಷ್ಯನು ಯಾರು? ಅಲ್ಲಿಗೆ ಯಾವಾಗ ಬಂದನು? ಎಂಬದನ್ನೇನೂ ನೀನು ನನ್ನ ಮುಂದೆ ಹೇಳಲಿಲ್ಲ? ಆ ಸುದ್ದಿಯನ್ನು ಹೇಳುವದು ನಿನ್ನ ಕೆಲಸವಲ್ಲವೊ?"ಎಂದು ಕೇಳಲು ಆ ಚಾರನು—ಸರಕಾರ, ತಾವು ಬರುವದಕ್ಕಿಂತ ಮೊದಲು ಗಳಿಗೆ-ಎರಡುಗಳಿಗೆಯ ಸುಮಾರಕ್ಕೆ ಆ ಮನುಷ್ಯನು ಅಲ್ಲಿಗೆ ಬಂದಿದ್ದನು. ವಕೀಲನ ಜನರು ಆತನಿಗೆ ಹಲವು ಪ್ರಶ್ನಗಳನ್ನು ಕೇಳುತ್ತಿದ್ದರು; ಆದರೆ ಆ ಬಲಭೀಮನು ಕೇವಲ ಮೂಕನಂತೆ ಸುಮ್ಮನೆ ನಿಂತುಬಿಟ್ಟಿದ್ದನು. ಜನರ ಮಾತು ಆತನಿಗೆ ಕೇಳುತ್ತಿರುವಂತೆ ತೋರಲಿಲ್ಲ. ಆಗಿನಿಂದ ಆತನ ವೃತ್ತಾಂತವನ್ನು ತಿಳಿಕೊಳ್ಳಬೇಕೆಂದು ನಾನು ಬಹಳವಾಗಿ ಯತ್ನಿಸುತ್ತಿರುವೆನು; ಆದರೆ ಒಂದು ಸುದ್ದಿಯೂ ಗೊತ್ತಾಗಿಲ್ಲ. ಅಲ್ಲಿಯ ಜನರಿಗೇ ಅವನ ವೃತ್ತಾಂತವು ಗೊತ್ತಾಗದ ಬಳಿಕ, ಆದ

ನನಗ ಹ್ಯಾಗೆ ಗೊತ್ತಾಗಬೇಕು? ನಾನು ಆತನ ಬಳಿಗೆ ಹೋಗಿ, ತಮಿಳ, ತೆಲ ಗು, ಕನ್ನಡ,ಆರವು ಈ ನಾಲ್ಕು ಭಾಷೆಗಳಲ್ಲಿಯೂ ಕೇಳಿ ನೋಡಿದೆನು; ಆದರೆ ಆದರಿಂದ ಏನೂ ಪ್ರಯೋಜನವಾಗಲಿಲ್ಲ. ಅಂದಬಳಿಕ ನಾನು ತಮ್ಮ ಮುಂದೆ ಬಂದು ಏನು ಹೇಳಲಿ? ತಾವು ಸ್ವತಃ ಆ ಮನುಷ್ಯನನ್ನು ನೋಡಿದ್ದರಿಂದ"ಇಂಥ ಮನುಷ್ಯನು ಬಂದಿದ್ದಾನೆ"ಂದು ಹೇಳುವ ಅವಶ್ಯವು ನನಗೆ ತೋರಲಿಲ್ಲ. ಆ ಮನುಷ್ಯನ ಸಂಬಂಧದಿಂದ ವಿಶೇಷ ಸಂಗತಿಗಳೇನಾದರೂ ತಿಳಿದರೆ, ಬಂದು ಹೇಳಬೇಕೆಂದು ಬಿಟ್ಟಿದ್ದೆನು. ಅಷ್ಟರಲ್ಲಿ ಈ ವಕೀಲಸಾಹೇಬರು ವಿಜಾಪು ರಕ್ಕೆ ಹೋದಸಂಗತಿಯನ್ನು ಹೇಳಲವಶ್ಯವಾದದ್ದರಿಂದ, ಕೂಡಲೆ ಬಂದು ಹೇಳಿದೆನು. ಇನ್ನೊಂದು ವಿಶೇಷ ಸಂಗತಿಯನ್ನು ಹೇಳುವೆನು. ಆ ಮನು ಷ್ಯನು ಯಾರೆಂಬದು ನನಗೆ ಗೊತ್ತಾಗದೆಯಿದ್ದರೂ, ಆ ಮನುಷ್ಯನಿಗೂ ಮಾಸಾ ಹೇಬರಿಗೂ ಭೆಟ್ಟಿಯಾದದ್ದನ್ನು ನಾನು ನೋಡಿದೆನು, ಅವರಿಬ್ಬರ ಭೆಟ್ಟಿಯಾ ಯಿತೆನ್ನುವದಕ್ಕಿಂತ, ಆ ಕರಿಯ ಮನುಷ್ಯನೇ ಮಾಸಾಹೇಬರ ಭೆಟ್ಟಿಯನ್ನು ಬುದ್ಧಿಪೂರ್ವಕವಾಗಿ ತೆಗೆದುಕೊಂಡನೆಂದು ಹೇಳಬಹುದು; ಯಾಕಂದರೆ ಮಾ ಸಾಹೇಬರು ತಮ್ಮ ಮನೆಯ ಪಾವಟಿಗೆಗಳನ್ನು ಹತ್ತಿಹೋಗುತ್ತಿರುವದನ್ನು ನೋಡಿ, ಆ ಬಲಭೀಮನು, ತನ್ನನ್ನು ಸುತ್ತುಹಾಕಿದಜನರೊಳಗಿಂದ ನುಸಿದು ನೆಟ್ಟಗೆ ಬಾಣಹೊಡಿದಹಾಗೆ ಮಾಸಾಹೇಬರ ಬಳಿಗೆ ಓಡಿಹೋದನು. ಆತ್ತ ಮಾಸಾಹೇಬರ ವೃದ್ಧ ದಾಸಿಯೂ, ಮಾಸಾಹೇಬರೂ ಏನೋ ಗುಜುಗುಟ್ಟುತ್ತಿ ರುವಷ್ಟರಲ್ಲಿ, ಬಲಭೀಮನು ಮಾಸಾಹೇಬರ ತೀರ ಹತ್ತರಕ್ಕೆ ಹೋದನು. ಆಗ ಅವನ ಕಾವಲುಗಾರರು ಓಡಿಹೋಗಿ ಅವನನ್ನು ಹಿಂದಕ್ಕೆ ಜಗ್ಗಿಕೊಂಡರು. ಅದನ್ನು ನೋಡಿ ಮಾಸಾಹೇಬರು ತಮ್ಮ ಜನರಿಗೆ—ಅವನನ್ನು ಬಿಡಿರಿ, ಪಾಪ! ನನ್ನ ಮುಂದೆ ಏನೋ ಹೇಳಲಿಕ್ಕೆ ಬಂದಿದ್ದಾನೆ, ಕೇಳಿಕೊಳ್ಳುವೆನು, ಎಂದು ಹೇಳಿದ್ದರಿಂದ, ಅವನನ್ನು ಕಾವಲುಗಾರರು ಬಿಟ್ಟರು. ಆಮೇಲೆ ಮಾಸಾಹೇ ಬರ ವೃದ್ಧ ದಾಸಿಯು ಆತನನ್ನು ಕರಕೊಂಡು ಮನೆಯೊಳಗೆ ಹೋದಳು. ಆಗಿ ನಿಂದ, ಇಲ್ಲಿಗೆ ನಾನು ಬರುವದಕ್ಕಾಗಿ ಹೊರಡುವವರೆಗೆ ಯಾವ ಸುದ್ದಿಯೂ ನನಗೆ ಗೊತ್ತಾಗಲಿಲ್ಲ. ಮಾಸಾಹೇಬರ ಜನರು ತಮ್ಮೊಳಗೆ ಗುಜುಗುಟ್ಟುತ್ತಿ ದ್ದರು. ಮಾಸಾಹೇಬರಿಗೂ, ಆ ಮನುಷ್ಯನಿಗೂ ಮೊದಲಿನ ಪರಿಚಯವಿರಬ ಹುದೆಂಬದು ಅವರ ಗುಜುಗುಟ್ಟುತ್ತಿರುವದರ ತಾತ್ಪರ್ಯವಾಗಿರುವದು.

ಗುಪ್ತಚಾರನ ಈ ಮಾತುಗಳನ್ನು ರಾಮರಾಜನು ಲಕ್ಷಪೂರ್ವಕವಾಗಿ ಕೇಳುತ್ತಿದ್ದನು. ಕೇಳಕೇಳುತ್ತ ಆತನು ನಡುವೇ ಚಾರನನ್ನು ನಿಲ್ಲಿಸಿ—ರಣ

ಮುಸ್ತಫಾನನು ವಿಜಾಪುರಕ್ಕೆ ಯಾಕೆ ಹೋದನೆಂಬ ಸಂದ್ದಿಯೇನಾದರೂ ನಿನಗೆ ಗೊತ್ತಾಗಿದೆಯೋ? ನೂರಜಹಾನಳನ್ನು ಕಳಿಸಲಿಕ್ಕಷ್ಟೇ ಆತನು ಹೋಗಿರಲಿಕ್ಕಿಲ್ಲೆಂದು ನಿನ್ನನ್ನು ಕೇಳುತ್ತೇನೆ, ಎಂದು ಪ್ರಶ್ನಮಾಡಿದನು. ಅದಕ್ಕೆ ಚಾರನು—ಸರಕಾರ, ನನಗೆ ಬಹಳ ಲಾಂಛನದ ಮಾತು, ನನಗೆ ನಿಜವಾದ ಕಾರಣವು ನಂಬಿಗೆಯಾಗುವಂತೆ ತಿಳಿದಿರುವದಿಲ್ಲೆಂದು ಅಸಮಾಧಾನದಿಂದ ಹೇಳಿಕೊಳ್ಳುವೆನು. ಆ ಸಂಬಂಧದಿಂದ ಅಲ್ಲಿಯ ಜನರ ತರ್ಕವೇನಾಗಿರುತ್ತದೆಂಬದನ್ನು ಹೇಳುತ್ತೇನೆ. "ವಕೀಲರು ವಿಜಾಪುರಕ್ಕೆ ಹೋಗುವದರ ಪರಿಣಾಮವು ನೆಟ್ಟಗಾಗಲಿಕ್ಕಿಲ್ಲ, ಬೇಗನೆ ಯುದ್ಧವು ಆರಂಭವಾಗಬಹುದಾಗಿ ತೋರುತ್ತದೆ, ಎಂದು ಅವರು ಮಾತಾಡುತ್ತಿರುವರು. ಹೀಗೆ ಆ ಜನರು ಆಡಿದ್ದನ್ನು ನಾನು ಕಿವಿಮುಟ್ಟ ಕೇಳಿದೆನಾದ್ದರಿಂದಲೇ ಇದಿಷ್ಟು ಸಂಗತಿಯನ್ನು ಮಹಾರಾಜರ ಕಿವಿಯ ಮೇಲೆ ಹಾಕಬೇಕೆಂದು ಬಂದೆನು, ಎಂದು ಹೇಳಲು, ರಾಮರಾಜನು ವಿಚಾರಮಗ್ನನಾದನು. ಕೆಲಹೊತ್ತಿನಮೇಲೆ ಆತನು ತನ್ನೊಳಗೇ—"ಅದರ ಹೊರತು ಎರಡನೆಯ ಮಾರ್ಗವಿಲ್ಲ" ಎಂದು ನುಡಿದು, ಚಾರನನ್ನು ಕುರಿತು—"ನಾನು ನಿನ್ನ ಸಹಾಯಕ್ಕಾಗಿ ಏಳೆಂಟುಜನರನ್ನು ಕೊಡುತ್ತೇನೆ. ಏನಾದರೂ ಹಂಚಿಕೆ ಮಾಡಿ ನೀವು ಆ ಬಲಭೀಮನನ್ನು ನನ್ನ ಕಡೆಗೆ ಕರಕೊಂಡುಬರ್ರಿ. ನಾನು ಕರೆದಿರುತ್ತೇನೆಂದು ಮೊದಲು ಸಾಮೋಪಚಾರದಿಂದ ಆತನಿಗೆ ಹೇಳಿರಿ, ಆವನು ಬಂದರೆ ಒಳಿತಾಯಿತು, ಇಲ್ಲದಿದ್ದರೆ ಹ್ಯಾಗಾದರೂ ಮಾಡಿ ಅವನನ್ನು ಎಳಕೊಂಡು ಬರ್ರಿ. ಮುಖ್ಯಮಾತು, ಅವನನ್ನು ಕರಕೊಂಡು ಬರ್ರಿ, ಬಿಟ್ಟುಬರಬೇಡಿರಿ ಎಂದು ನಿರ್ಧಾರದಿಂದ ಹೇಳಿ, ಸಹಾಯಕ್ಕೆ ಕೊಡತಕ್ಕ ಜನರನ್ನು ಕೊಟ್ಟನು. ಆ ಕರಿಯಮನುಷ್ಯನು ಧನಮಲ್ಲನೇ ಎಂದು ರಾಮರಾಜನು ನಿಶ್ಚಯವಾಗಿ ತಿಳಿದಿದ್ದನು. ಆತನನ್ನು ಹಿಡಕೊಂಡು ಬಂದರೆ, ಮೇಹೇರಜಾನಳ ವೃತ್ತಾಂತವು ತಿಳಿಯುವದೆಂದು ಆತನು ನಂಬಿದ್ದನು. ರಣಮುಸ್ತಫಾನನು ತನ್ನ ಮಗನೂ, ಆತನ ತಾಯಿಯು ಮೇಹೇರಜಾನಳೂ ಆಗಿರಬಹುದೆಂಬ ರಾಮರಾಜನ ಸಂಶಯವು ಇಂದಿನ ಚಾರನ ಮಾತಿನಿಂದ ಮತ್ತಿಷ್ಟು ದೃಢವಾಯಿತು. ಈ ಸಂಶಯದ ದೃಢೀಕರಣದಿಂದ ಆತನಿಗೆ ಸಮಾಧಾನವಾಗಲಿಲ್ಲ. ಆ ಸ್ತ್ರೀಯು ಮೇಹೇರಜಾನಳೇ ಎಂಬದು ನಿಸ್ಸಂಶಯವಾಗಿ ತನಗೆ ಗೊತ್ತಾಗಬೇಕೆಂದು ಆತನು ಆತುರಪಡುತ್ತಿದ್ದನು. ಮೇಹೇರಜಾನಳೇ ಎಂಬದು ತನಗೆಗೊತ್ತಾದಬಳಿಕ, ತಾನು ಆಕೆಯನ್ನು ಕಂಡು ಯಾವತ್ತು ಸಂಗತಿಯನ್ನು ಕೇಳಿಕೊಳ್ಳಬೇಕೆಂದು ಆತನು ಮಾಡಿದ್ದನು. ತನ್ನನ್ನು ಬಿಟ್ಟು ಹೋದಬಗ್ಗೆ ಆಕೆಗೆ ಪಶ್ಚಾತ್ತಾಪವಾಗಿರಬ

ಹುದೋ? ಹಾಗೆ ಪಶ್ಚಾತ್ತಾಪವಾಗಿರದಿದ್ದರೆ ಆಕೆಯು ಮಗನನ್ನು ಕಟ್ಟಿ ಕೊಂಡು ಇಲ್ಲಿಗೆ ಯಾಕೆ ಬಂದಳು? ಪಶ್ಚಾತ್ತಾಪವೇ ಆಗಿದ್ದ ಪಕ್ಷದಲ್ಲಿ ನಮ್ಮಿಬ್ಬರ ಸಂಬಂಧವು ಮೊದಲಿನಂತೆ ಯಾಕೆ ಕೂಡಲಿಕ್ಕಿಲ್ಲ? ಎಂಬಿವೇ ಮೊದಲಾದ ವಿಚಾರಗಳು ರಾಮರಾಜನ ಮನಸ್ಸಿನಲ್ಲಿ ಉತ್ಪನ್ನವಾದವು. ರಣಮಸ್ತಖಾನನನ್ನು ನೋಡಿ ಈವರೆಗೆ ರಾಮರಾಜನಿಗೆ ಕೌತುಕವಷ್ಟೇ ಆಗುತ್ತಿತ್ತು. ಇಂದು ಆ ಕೌತುಕವು ಪುತ್ರಪ್ರೇಮ, ಪುತ್ರವಾತ್ಸಲ್ಯಗಳ ರೂಪವನ್ನು ಧರಿಸಿತು. ಈವೊತ್ತಿಗೆ ನಮ್ಮ ರಾಜ್ಯದಲ್ಲಿ ಎಷ್ಟೋ ಜನ ಮುಸಲ್ಮಾನ ಸೈನಿಕರನ್ನು ಚಾಕರಿಗೆ ಇಟ್ಟುಕೊಂಡಿರುತ್ತೇವೆ, ಅವರಲ್ಲಿ ಈತನೊಬ್ಬನನ್ನು ಇಟ್ಟುಕೊಳ್ಳೋಣ. ಪ್ರಸಂಗಬಂದರೆ, ಆ ಯಾವತ್ತು ಮುಸಲ್ಮಾನಸೈನಿಕರ ಮೇಲೆ ಈಗಿರುವ ಹಿಂದೂ ಮುಖ್ಯಸ್ಥನನ್ನು ತೆಗೆದು, ಅವರ ಮೇಲೆ ರಣಮಸ್ತಖಾನನನ್ನು ನಿಯಮಿಸಬಹುದು. ತರುಣರಣಮಸ್ತಖಾನನು ಈ ಕೆಲಸಕ್ಕೆ ಯೋಗ್ಯನೂ ಇದ್ದಾನೆ. ಒಂದು ವೇಳೆಯಲ್ಲಿ ಈತನನ್ನು ಸೇನಾಪತಿಯನ್ನಾಗಿಯಾದರೂ ಮಾಡಬಹುದು. ಈತನು ವಿಜಾಪುರದ ಬಾದಶಹನ ಚಾಕರಿಯನ್ನು ಯಾಕೆ ಮಾಡಬೇಕು? ರಣಮಸ್ತಖಾನನಿಗೆ ನನ್ನ ಸಂಬಂಧವು ತಿಳಿದರೆ ಆತನ ಮನಸ್ಸಿಗೆ ಹ್ಯಾಗಾಗಬಹುದು? ನನ್ನ ವಿಷಯವಾಗಿ ಆತನಲ್ಲಿ ಅಭಿಮಾನವು ಉತ್ಪನ್ನವಾಗಬಹುದೋ, ತಿರಸ್ಕಾರವು ಉತ್ಪನ್ನವಾಗಬಹುದೊ? ಛೆ! ತಿರಸ್ಕಾರವು ಯಾಕೆ ಉತ್ಪನ್ನವಾದೀತು? ಅಭಿಮಾನನೇ ಉತ್ಪನ್ನವಾಗುವದು, ಎಂದು ಯೋಚಿಸಿದನು. ಆದರೆ ಇದರ ವಿರುದ್ಧಭಾವನೆಯು ರಣಮಸ್ತಖಾನನಲ್ಲಿ ಹ್ಯಾಗೆ ಉತ್ಪನ್ನವಾಗುತ್ತ ಹೋಯಿತೆಂಬದನ್ನು ನೋಡೋಣ.

ರಣಮಸ್ತಖಾನನ ಪ್ರೇಮವು ನೂರಜಹಾನಳಲ್ಲಿ ವಿಶೇಷವಾಗಿತ್ತು. ಆತನು ಆಕೆಯನ್ನು ವಿಜಾಪುರಕ್ಕೆ ಕರಕೊಂಡು ಹೋಗುವಾಗ ಆ ಪ್ರೇಮವು ಮತ್ತಷ್ಟು ದೃಢವಾಯಿತು. ಆದರೆ ಆಕೆಯು ತಾನುಮಾಡಿದ ಪ್ರತಿಜ್ಞೆಯನ್ನು ಏನುಮಾಡಿದರೂ ಬಿಡಲೊಲ್ಲಳು. ಆಕೆಯು ಹಾದಿಯಲ್ಲಿ ಒಂದೆರಡುಸಾರೆ ರಣಮಸ್ತಖಾನನು ತನಗೆ ಭೆಟ್ಟಿಯಾದಾಗ ಆತನಿಗೆ—ನಬಾಬಸಾಹೇಬ, ನಾನು ಇನ್ನು ಸ್ವತಂತ್ರಳಾದೆನು. ನಿಮ್ಮಿಹೊರತು ನಾನು ಬೇರೆಯವರನ್ನು ಲಗ್ನವಾಗುವದಿಲ್ಲ, ಆದರೆ ಕೂಡಿದ ದರ್ಬಾರದಲ್ಲಿ ನನ್ನ ಲಜ್ಜಾಹರಣಮಾಡಿದ ಆ ದುಷ್ಟ ರಾಮರಾಜನ ನಾಶಮಾಡಿರಿ, ಆವನ ರಾಜ್ಯವನ್ನು ಮಣ್ಣುಗೂಡಿಸಿರಿ, ಎಂದು ಸ್ಪಷ್ಟವಾಗಿ ಹೇಳಿದಳು. ಆದನ್ನು ಕೇಳಿ ರಣಮಸ್ತಖಾನನು, ಈ ಕಠಿಣ ಕಾರ್ಯವನ್ನು ಹ್ಯಾಗೆ ಸಾಧಿಸಬೇಕೆಂಬ ವಿಚಾರದಲ್ಲಿ ತೊಡಗಿದ್ದನು. ಎಷ್ಟೋ ವರ್ಷಗ

ಳಿಂದ ಯಾವತ್ತು ಬಾಮನಿ ಬಾದಶಹರು ವಿಶ್ವಪ್ರಯತ್ನದಿಂದ ಸಾಧಿಸದೆ ಇದ್ದ ಕಾರ್ಯವು ತನ್ನಂಥ ಅಲ್ಪನಿಂದ ಹ್ಯಾಗೆ ಸಾಧಿಸಬೇಕೆಂಬ ವಿಚಾರದಲ್ಲಿ ಆತನು ಮಗ್ನನಾದನು. ಈ ವಿಚಾರದಭರದಲ್ಲಿಯೇ ಆತನು ವಿಜಾಪುರವನ್ನು ಮುಟ್ಟಿದನು. ವಿಜಾಪುರವನ್ನು ಮುಟ್ಟಿದ ಕೂಡಲೆ, ಇನ್ನು ನೂರಜಹಾನಳ ವಿಯೋಗವಾಗುವದೆಂದು ತಿಳಿದು ಆತನು ಬಹಳ ವ್ಯಸನಪಟ್ಟನು. ನೂರಜಹಾನಳು ಕುಲೀನಳು, ಆಕೆಯು ನನ್ನಂಥವನಿಗೆ ಹ್ಯಾಗೆ ಲಭಿಸುವಳು? ಆಕೆಯ ಅಪ್ಪೇಷ್ಟರು ನನ್ನೊಡನೆ ಆಕೆಯ ಲಗ್ನವನ್ನು ಹ್ಯಾಗೆ ಆಗಗೊಟ್ಟಾರು? ಎಂಬ ದುಃಖದಾಯಕವಾದ ವಿಚಾರಗಳು ಆತನ ಮನಸ್ಸನ್ನು ನೋಯಿಸಹತ್ತಿದವು. ತಾನು ಕುಲೀನನಲ್ಲೆಂಬ ವಿಚಾರವು ಆತನ ಮನಸ್ಸನ್ನು ನೋಯಿಸುತ್ತಿದ್ದಷ್ಟು, ಬೇರೆ ಯಾವ ವಿಚಾರಗಳೂ ಆತನ ಮನಸ್ಸನ್ನು ನೋಯಿಸುತ್ತಿದ್ದಿಲ್ಲ. ಆತನಿಗೆ ತನ್ನ ಕುಲದ ಇತಿಹಾಸವು, ಆತನು ಇಪ್ಪತ್ತುನಾಲ್ಕು-ಇಪ್ಪತ್ತೈದು ವರ್ಷದವನಾಗುವ ತನಕ ಗೊತ್ತೇ ಆಗಿದ್ದಿಲ್ಲ. ಆಮೇಲೆ ಅದು ಆತನಿಗೆ ಸ್ವಲ್ಪವ್ಯಟ್ಟಿಗಾದರೂ ಗೊತ್ತಾಯಿತು. ಒಂದು ದಿನ ಆತನು ತನ್ನ ಕುಲವೃತ್ತಾಂತವೇನೆಂದು ತನ್ನ ತಾಯಿಯನ್ನು ಕೇಳಿದನು ಆದಕ್ಕೆ ಆಕೆಯು ತನ್ನ ವೃದ್ಧದಾಸಿಯಾದ ಲೈಲಿಯನ್ನು ಕೇಳೆಂದು ಹೇಳಲು, ರಣಮಸ್ತಖಾನನು ಲೈಲಿಯನ್ನು ಕೇಳಿದನು. ಲೈಲಿಯು ಮಹಾಚತುರಳೂ, ಬಹುಶ್ರುತಳೂ ಇದ್ದಳು. ಆಕೆಯು ರಣಮಸ್ತಖಾನನನ್ನು ಒತ್ತಟ್ಟಿಗೆ ಕರಕೊಂಡು ಹೋಗಿ ಆತನ ಮನಸ್ಸನ್ನು ನೋಯಿಸದಂತೆ ಆತನನ್ನು ಕುರಿತು—ಒಡೆಯರೇ, ಇಂದು ನಾನು ನಿಮಗೆ ಎಲ್ಲ ವೃತ್ತಾಂತವನ್ನು ಹೇಳುತ್ತೇನೆ. ಒಮ್ಮೆ ಆದನ್ನು ಕೇಳಿದ ಬಳಿಕ, ತಿರುಗಿ ಆದರ ಚಕಾರಶಬ್ದವನ್ನೂ ಮೂಸಾಹೇಬರ ಮುಂದೆ ನೀವು ತೆಗೆಯಬೇಡಿರಿ. ಆದನ್ನು ಕೇಳಿ ನಿಮ್ಮ ಮಾಸಾಹೇಬರಿಗೆ ಬಹಳ ವ್ಯಸನವಾಗುತ್ತದೆ. ಅವರು ನಿಮ್ಮ ಸಲುವಾಗಿ ಎಷ್ಟು ಕಷ್ಟಪಟ್ಟರೆಂಬದನ್ನು ನೀವು ಬಲ್ಲಿರಿ. ಆದರ ಉಪಕಾರವನ್ನು ಸ್ವಲ್ಪಮಟ್ಟಿಗಾದರೂ ತೀರಿಸುವ ಇಚ್ಛೆ ನಿಮಗಿದ್ದರೆ, ತಿರುಗಿ ಈ ಮಾತನ್ನು ನೀವು ಅವರ ಮುಂದೆ ತೆಗೆಯಬೇಡಿರಿ. ಅವರಿಗೆ ಈ ಮಾತಿನ ನೆನಪಾಗುವಂತೆ ಸರ್ವಥಾ ನೀವು ಮಾಡಬಾರದು. ನಿಮ್ಮ ತಂದೆ-ತಾಯಿಗಳಿಬ್ಬರೂ ಡೊಡ್ಡ ಕುಲದವರಿರುತ್ತಾರೆ. ನಿಮ್ಮ ಹಿರಿಯರು ನಿಮ್ಮ ತಾಯಂದಿರನ್ನು, ಅವರು ಅವಿವಾಹಿತರಾಗಿರುವಾಗ ಹುಲಿಯ ಬಾಯೊಳಗಿಂದ ಬಿಡಿಸಿದರು. ಆಗಿನ ಕಾಲದ ನಿಮ್ಮ ಹಿರಿಯರ ಶೌರ್ಯವನ್ನು ನೋಡಿ, ನಿಮ್ಮ ತಾಯಿಯವರು ಅವರನ್ನು ಲಗ್ನವಾಗಬೇಕೆಂದು ಇಚ್ಛಿಸಿದರು. ಆದರೆ ಅವೆರಡೂ ಮನೆತನಗಳು ಪರಸ್ಪರ ದ್ವೇಷಿಸುತ್ತಿದ್ದದ್ದರಿಂದ, ನಿಮ್ಮ

ತಾಯಿಯವರ ಲಗ್ನಕ್ಕೆ ಅವರ ತಂದೆಯ, ಅಂದರೆ ನಿಮ್ಮ ಅಜ್ಜಂದಿರ ಒಪ್ಪಿಗೆಯು ದೊರೆಯುವಹಾಗಿದ್ದಿಲ್ಲ; ಆದ್ದರಿಂದ ನಿಮ್ಮ ತಾಯಂದಿರು ಗುಪ್ತರೀತಿಯಿಂದ ನಿಮ್ಮ ಹಿರಿಯರನ್ನು ಲಗ್ನಮಾಡಿಕೊಂಡರು. ಕಾರಣ ನಿಮ್ಮ ಅಜ್ಜಂದಿರಿಗೆ ಬಹಳ ಸಂತಾಪವಾಯಿತು. ಇತ್ತ ನಿಮ್ಮ ಹಿರಿಯರು, ತಮ್ಮ ಮನೆಯವರಿಗೆ ಈ ಲಗ್ನದಸಂಗತಿಯು ತಿಳಿದರೆ ತಪ್ಪುನ್ನು ಮನೆಬಿಡಿಸಿ ಹೊರಗೆ ಹಾಕಿಯಾರೆಂಬ ಭಯದಿಂದ ಅವರೂ ತಮ್ಮ ಲಗ್ನದ ಸಂಗತಿಯನ್ನು ಗುಪ್ತವಾಗಿ ಇಟ್ಟರು. ಕೆಲವು ದಿನಗಳವರೆಗೆ ನಿಮ್ಮ ತಾಯಿ—ತಂದೆಗಳಿಬ್ಬರೂ ಒಂದು ಗುಪ್ತ ಸ್ಥಳದಲ್ಲಿ ಪರಮಾನಂದದಿಂದ ಇದ್ದರು. ನಿಮ್ಮ ಹಿರಿಯರು ಕೆಲವುದಿನ ದಿನಾಲೂ ಆ ಗುಪ್ತ ಸ್ಥಳಕೆ ಬರುತ್ತಿದ್ದರು. ಮುಂದೆ ಬರಬರುತ್ತ ನಾಲ್ಕುದಿನಗಳಿಗೊಮ್ಮೆ, ಎಂಟುದಿನಗಳಿಗೊಮ್ಮೆ ಬರಪತ್ತಿದರು. ಒಂದು ದಿನ ಮಾಸಾಹೇಬರು ನಿದ್ದೆಹತ್ತಿ ಮಲಗಿರುವಾಗ, ಅವರ ಬಳಿಯಲ್ಲಿ ನಿಮ್ಮ ಹಿರಿಯರು ಒಂದು ಪತ್ರವನ್ನು ಬರೆದು ಇಟ್ಟು ಹೊರಟು ಹೋದರು. ಅಂದಿನಿಂದ ಇಲ್ಲಿಯವರೆಗೆ ನಿಮ್ಮ ಹಿರಿಯರು ಮಾಸಾಹೇಬರ ಯೋಗಕ್ಷೇಮವನ್ನು ವಿಚಾರಿಸಿರುವದಿಲ್ಲ. ಮಾಸಾಹೇಬರು ಜೀವಿಸಿರುವರೋ, ಸತ್ತಿರುವರೋ ಎಂಬ ಸುದ್ದಿಯನ್ನು ಸಹ ಅವರು ಕೇಳಿಕೊಂಡಿರುವದಿಲ್ಲ. ಇದಕ್ಕೂ ಹೆಚ್ಚಿಗೆ ನಾನು ಹೇಳಲಾರೆನು. ನಿಮ್ಮ ತಂದೆಯ ಹೆಸರನ್ನು ಮಾತ್ರ ನೀವು ಕೇಳಬೇಡಿರಿ. ಈ ಸಂಗತಿಯು ಮಾಸಾಹೇಬರಿಗೆ, ಮತ್ತು ನನಗೆ ಅಲ್ಲದೆ ಬೇರೆ ಮತ್ತೊಬ್ಬರಿಗೆ ಗೊತ್ತಿಲ್ಲ. ಅದನ್ನು ಇಂದೇ ನಿಮ್ಮ ಮುಂದೆ ಮಾತ್ರ ಹೇಳಿದ್ದೇನೆ. ನಾನು ನಿಮ್ಮ ತಂದೆಯ ಹೆಸರನ್ನು ಗುಪ್ತವಾಗಿಡುವದರಿಂದ ಅದರಲ್ಲೇನಾದರೂ ಮನಸ್ಸಿಗೆ ಹತ್ತುವ ಪ್ರಸಂಗವಿದ್ದೀತೆಂದು ನಿಮಗೆ ತೋರಬಹುದು; ಆದರೆ ಹಾಗೆ ತೋರಗೊಡಬೇಡಿರಿ. ಎಲ್ಲಿಯವರೆಗೆ ನಿಮ್ಮ ಹಿರಿಯರು ನಿಮ್ಮಿಬ್ಬರನ್ನು ತಾವಾಗಿ ಕರೆಸಿಕೊಳ್ಳುವದಿಲ್ಲವೋ, ಅಲ್ಲಿಯವರೆಗೆ ನಿಮ್ಮ ಹಿರಿಯರಿಗೆ ತಮ್ಮ ವೃತ್ತಾಂತವನ್ನು ತಿಳಿಸಬಾರದೆಂದು ಮಾಸಾಹೇಬರು ಈ ಮೊದಲೆ ನಿಶ್ಚಯಿಸಿರುವರು. ನಿಮ್ಮ ಶೌರ್ಯಪ್ರಭಾವವು ನಿಮ್ಮ ಹಿರಿಯರಿಗೆ ತಿಳಿಯಬಂದ ದಿವಸವೇ ಮಾಸಾಹೇಬರು ಅವರ ಪರಿಚಯವನ್ನು ನಿಮಗೆ ಮಾಡಿಕೊಡುವರು. ಬರೇ ಪರಿಚಯವಷ್ಟೇ ಏಕೆ, ಅವರನ್ನು ನಿಮಗೆ ಪ್ರತ್ಯಕ್ಷವಾಗಿ ತೋರಿಸುವರು. ಅಲ್ಲಿಯವರೆಗೆ ಸಂಪೂರ್ಣ ವೃತ್ತಾಂತವನ್ನು ಬೇರೆ ಯಾರಿಗೂ ತಿಳಿಸಲಿಕ್ಕಿಲ್ಲೆಂದು ಹಿಂದಕ್ಕೆ ಮಾಸಾಹೇಬರು ಪ್ರತಿಜ್ಞೆ ಮಾಡಿರುವರು. ಅವರು ನಿಮ್ಮ ಸಲುವಾಗಿ ಎಷ್ಟು ಕಷ್ಟಪಟ್ಟರುವರೆಂಬದನ್ನೂ, ಅವರು ತಮ್ಮ ಗೌರವಕ್ಕೆ ಬಾಧೆ ಬಾರದಂತೆ ಇಲ್ಲಿಯವರೆಗೆ ಕಷ್ಟದಿಂದ ಹ್ಯಾಗೆ ಕಾಲ

ಹರಣ ಮಾಡಿದರೆಂಬದನ್ನು ನಾನು ಪೂರಾ ಬಲ್ಲೆನು. ನಿಮಗಾದರೂ ಬಹು ಮಟ್ಟಿಗೆ ಅದು ಗೊತ್ತಿರುತ್ತದೆ. ಅಂದಬಳಿಕ ಇದಕ್ಕೂ ಹೆಚ್ಚಿಗೆ ನಾನೇನು ಹೇಳಲಿ? ಇಷ್ಟರಿಂದಲೇ ನೀವು ಸಮಾಧಾನಪಡತಕ್ಕದ್ದು, ಎಂದು ಹೇಳಿ ಆಕೆಯು ಕಣ್ಣೀರು ಸುರಿಸಹತ್ತಿದಳು.

ಲೈಲಿಯು ಹೇಳುವ ಈ ವೃತ್ತಾಂತವನ್ನು ರಣಮಸ್ತಖಾನನು ತಟಸ್ಥ ವೃತ್ತಿಯಿಂದ ಕೇಳುತ್ತ ಕುಳಿತಿದ್ದನು. ತನ್ನ ತಂದೆಯು, ತನ್ನ ತಾಯಿಯನ್ನು ನಿಷ್ಕಾರಣವಾಗಿ ಬಿಟ್ಟ ರೀತಿಯನ್ನು ಕೇಳಿ, ನಡುವೆ ಒಂದೆರಡು ಸಾರೆ ರಣಮಸ್ತನಿಗೆ ಸಂತಾಪವಾಗಿ " ಇಂಥವನು ಯಾವನವನು, ಹೆಸರು ಹೇಳಬಾರದೆ ಒಂದು ಕೈ ನೋಡಿಬಿಡುತ್ತೇನೆ" ಎಂದು ಗಟ್ಟಿಯಾಗಿ ನುಡಿಯಬೇಕೆಂದು ಆತನು ಮಾಡಿದ್ದನು; ಆದರೆ ಆತನು ಮಾಸಾಹೇಬರಂಥ ಅತ್ಯಸಂಯಮನದ ಸ್ತ್ರೀಯ ಹೊಟ್ಟೆಯಲ್ಲಿ ಹುಟ್ಟಿದವನಾದದ್ದರಿಂದ, ಅಷ್ಟಕ್ಕೆ ತಡಕೊಂಡು ಸುಮ್ಮನೆ ಎಲ್ಲ ವೃತ್ತಾಂತವನ್ನು ಕೇಳಿಕೊಂಡನು. ಲೈಲಿಯು ಅಳುವದನ್ನು ನೋಡಿ ಆತನ ಹೊಟ್ಟೆಯಲ್ಲಿ ಬಹಳ ಕಷ್ಟವಾಯಿತು. ಏನುಮಾತಾಡಬೇಕೆಂಬದು ಆತನಿಗೆ ತಿಳಿಯದಾಯಿತು. ಅಷ್ಟರಲ್ಲಿ ಲೈಲಿಯು ಮತ್ತೆ ಆತನಿಗೆ—" ಅಪ್ಪಾ, ನಿಮ್ಮ ಅವ್ವನು ಬಹು ದೊಡ್ಡ ವನುಷ್ಯಳು, ಮಹಾ ಪತಿವ್ರತೆಯು, ಆಕೆಯ ಉಗುರಿನ ಯೋಗ್ಯತೆಯನ್ನು ಸಹ ಬೇರೆ ಪತಿವ್ರತಾ ಸ್ತ್ರೀಯರು ಹೋಲಲಾರರು," ಎಂದು ಹೇಳಿದಳು. ಅದನ್ನು ಕೇಳಿ ರಣಮಸ್ತಖಾನನಿಗೆ ಬಹುಮಟ್ಟಿಗೆ ಸಮಾಧಾನವಾಯಿತು. ಆತನು ತನ್ನ ತಾಯಿಯ ಬಳಿಗೆ ಹೋಗಿ ಆಕೆಯ ಚರಣಗಳ ಮೇಲೆ ಮಸ್ತಕವನ್ನಿಟ್ಟು, ತನ್ನನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಿದನು. ತಮ್ಮ ಮನಸ್ಸನ್ನು ನೋಯಿಸುವ ಇಂಥ ಪ್ರಸಂಗವನ್ನು ಇನ್ನು ಪುನಃ ಬರಗೊಡುವದಿಲ್ಲೆಂದು ಆತನು ನಿರ್ಧಾರದಿಂದ ಮಾಸಾಹೇಬರಿಗೆ ಹೇಳಿದನು ಈ ಸಂಗತಿಯು ರಣಮಸ್ತಖಾನನು ವಿಜಯನಗರದ ವಕೀಲನಾಗಿ ಬರುವದಕ್ಕೆ ಮುಂಚೆ ಕೆಲವು ವರ್ಷಗಳ ಹಿಂದೆ ಒದಗಿತ್ತು. ಅದಕ್ಕೂ ಮೊದಲು ನಾಲ್ಕು ವರ್ಷಗಳ ಹಿಂದೆ ಮಾಸಾಹೇಬರೂ ಲೈಲಿಯೂ ರಣಮಸ್ತಖಾನನನ್ನು ಕಟ್ಟಿಕೊಂಡು ಬಂದು ವಿಜಾಪುರದಲ್ಲಿ ಇರಹತ್ತಿದರು. ಮಾಸಾಹೇಬರ ಪರೋಪಕಾರಸ್ವಭಾವ-ಸಾಧುವೃತ್ತಿಗಳ ಮೂಲಕ ಅವರ ಕೀರ್ತಿಯು ನಾಲ್ಕೂಕಡೆಗೆ ಪಸರಿಸುತ್ತ, ರಾಣಿಯ ಮುಖಾಂತರ ಸ್ವತಃ ಬಾದಶಹರವರ ಕಿವಿಯವರೆಗೆ ಹೋಯಿತು. ಮಾಸಾಹೇಬರ ಮೇಲೆ ರಾಣಿಯ ಭಕ್ತಿಯು ಬಹಳ. ಬಾದಶಹರು ಒಮ್ಮೆ ಮಾಸಾಹೇಬರ ದರ್ಶನ ತಕ್ಕೊಳ್ಳುವ ಇಚ್ಛೆಯನ್ನು ಪ್ರಕಟಿಸಿದ್ದರಿಂದ, ಬಾದಶಹನ ರಾಣಿಯು ಆ ಪ್ರಸಂಗವನ್ನು ಒದಗಿಸಿ ಕೊಟ್ಟಳು. ಹೀಗೆ ದರ್ಶನವಾದ

ದಿವಸದಿಂದ ಬಾದಶಹರ ದೃಢಭಕ್ತಿಯು ಮಾಸಾಹೇಬರಲ್ಲಿ ಉಂಟಾಗಿ, ಅವರ ಮಗನನ್ನು ತಾವು ಕೈಹಿಡಿದು ದೊಡ್ಡ ಪದವಿಗೇರಿಸಬೇಕೆಂದು ಅವರು ನಿಶ್ಚಯಿಸಿದರು. ಬಾದಶಹರ ಕೃಪೆಯಿಂದ ರಣಮಸ್ತಖಾನನು ದಿನದಿನಕ್ಕೆ ಉತ್ಕರ್ಷವನ್ನು ಪಡೆಯಹತ್ತಿದನು. ಆತನ ಉತ್ಕರ್ಷವನ್ನು ನೋಡಿ ಉಳಿದ ಮುಸಲ್ಮಾನ ಸರದಾರರು ಹೊಟ್ಟೇಕಿಚ್ಚು ಪಡಹತ್ತಿದರು. ಇದನ್ನು ನೋಡಿ ಮಾಸಾಹೇಬರು ಅಸಮಾಧಾನಪಟ್ಟರು. ಈ ಹೊಟ್ಟೇಕಿಚ್ಚಿನ ಜನರು "ಇವನು ಯಾರು, ಎಲ್ಲಿಯವನು ಯಾರಮಗನು" ಎಂದು ತಮ್ಮ ಮಗನನ್ನು ವಿಚಾರಿಸಹತ್ತಿ ಇಲ್ಲದ ಕುಚೇಷ್ಟೆಯನ್ನು ಎಬ್ಬಿಸಬಹುದೆಂದು ತಿಳಿದು, ತಾವು ಮಗನನ್ನು ಕಟ್ಟಿಕೊಂಡು, ಇವರ ಉಪದ್ರವ ತಗಲದ ಸ್ಥಳದಲ್ಲಿ ಒತ್ತಟ್ಟಿಗೆ ಇರಬೇಕೆಂದು ಅವರು ನಿಶ್ಚಯಿಸಿದರು. ಇದಕ್ಕೆ ವಿಜಯನಗರವು ತಕ್ಕ ಸ್ಥಳವಾಗಿ ಅವರಿಗೆ ತೋರಿತು. ಆಗ ಮಾಸಾಹೇಬರು "ತನ್ನ ಮಗನನ್ನು ವಿಜಯನಗರದ ವಕೀಲನನ್ನಾಗಿ ನಿಯಮಿಸಬೇಕೆ"ಂದು ಬಾದಶಹನನ್ನು ಪ್ರಾರ್ಥಿಸಲು, "ಬಹಳ ತರುಣನೆ"ಂದು ಬಾದಶಹನು ಮೊದಲು ಮಾಸಾಹೇಬರ ಮಾತನ್ನು ಅಲ್ಲಗಳೆದನು. ಆದರೆ ಕಡೆಗೆ ಮಾಸಾಹೇಬರ ಮನಸ್ಸನ್ನು ಮುರಿಯಲಾರದೆ, ಬಾದಶಹನು ರಣಮಸ್ತಖಾನನನ್ನು ವಿಜಯನಗರದ ವಕೀಲನನ್ನಾಗಿ ನಿಯಮಿಸಿ ಕಳಿಸಿದನು. ಅದೇ ರಣಮಸ್ತಖಾನನು ಈಗ ಬಾದಶಹನ ದರ್ಶನಕ್ಕಾಗಿ ನೂರಜಹಾನಳನ್ನು ಕಳಿಸುವ ನೆವದಿಂದ ವಿಜಾಪುರಕ್ಕೆ ಬಂದಿದ್ದನು. ಆಗ ವಿಜಾಪುರದ ದರ್ಬಾರದಲ್ಲಿ ಏನು ನಡೆಯಿತೆಂಬದನ್ನು ಮುಂದಿನ ಪ್ರಕರಣದಲ್ಲಿ ಹೇಳುವೆವು.

೧೭ನೆಯ ಪ್ರಕರಣ—ಔದಾಸೀನ್ಯ.

ರಣಮಸ್ತಖಾನನು ವಿಜಾಪುರಕ್ಕೆ ಹೋಗಿ ನೂರಜಹಾನಳನ್ನು ಆಕೆಯ ಅಪ್ಪರಿಗೆ ಒಪ್ಪಿಸಿದನು. ಆತನು ಒಂದು ದಿನ ಬಾದಶಹನ ದರ್ಶನಕ್ಕೆ ಹೋದಾಗ ವಿಜಯನಗರದ ದರ್ಬಾರದಲ್ಲಿ ನಡೆದ ಸಂಗತಿಯನ್ನೆಲ್ಲ ವಿಜ್ಞಾಪಿಸಲು, ಅದನ್ನು ಕೇಳಿ ಬಾದಶಹನಿಗೆ ಸಂತಾಪವಾಯಿತು. ಸಂತಾಪದ ಭರದಲ್ಲಿ ಆತನು ಈಗಲೇ ವಿಜಯನಗರದ ರಾಜ್ಯದಮೇಲೆ ದಾಳೀಮಾಡಿ ರಾಮರಾಜನ ಸೊಕ್ಕು ಇಳಿಸಬೇಕೆಂದು ಮಾಡಿದನು. ಹಿಂದಕ್ಕೆ ಸ೯೧೪೦೬ನೇ ಇಸವಿಯಲ್ಲಿ ಗೋವಳಕೊಂಡದ ಬಾದಶಹನಾದ ಫಿರೋಜಶಹನ ಕಾಲದಲ್ಲಿ ಇಂಥ ಪ್ರಸಂಗವೇ ಒದಗಿತ್ತು. ಆಗಿನ ವಿಜಯನಗರದ ಅರಸು ದೇವರಾಜನು ಗೋವಳಕೊಂಡದ ರಾಜ್ಯದೊಳಗಿನ ಒಬ್ಬ ಚಲುವೆಯಾದ ಒಕ್ಕಲಿಗನ ಮಗಳನ್ನು ಅಪಹರಿಸಿಕೊಂಡು

ಖಂದಿದ್ದನು. ಅದರ ಸೇಡು ತೀರಿಸುವದಕ್ಕಾಗಿ ಫಿರೋಜಶಹನು ವಿಜಯನಗರದ ರಾಜ್ಯದಮೇಲೆ ದಂಡೆತ್ತಿ ಹೋಗಿ, ದೇವರಾಜನನ್ನು ಸೋಲಿಸಿ, ವಿಜಯನಗರದ ಅರಸು ಮನೆತನಕ್ಕೆ ಸಂಬಂಧಿಸಿದ ಒಬ್ಬ ಕುಮಾರಿಯನ್ನು ತಾನು ಲಗ್ನಮಾಡಿಕೊಂಡು ಆಕೆಯನ್ನು ತನ್ನ ಜನಾನಖಾನೆಯಲ್ಲಿ ಸೇರಿಸಿಕೊಂಡಿದ್ದನು. ಈಗಂತು ರಾಮರಾಜನು ಕೂಡಿದ ದರ್ಬಾರದಲ್ಲಿ ಒಬ್ಬ ದೊಡ್ಡ ಸರದಾರನ ಮಗಳ ಲಜ್ಜಾಹರಣ ಮಾಡಿದ್ದನು. ಆದ್ದರಿಂದ ರಾಮರಾಜನ ಸಮಾಚಾರವನ್ನು ನೆಟ್ಟಗೆ ತಕ್ಕೊಳ್ಳಬೇಕೆಂದು, ಬಾದಶಹನು ಆರಂಭದ ಆವೇಶದಲ್ಲಿ ನಿಶ್ಚಯಿಸಿದನು. ಆ ಸಂಬಂಧದಿಂದ ಆಲೋಚಿಸುವದಕ್ಕಾಗಿ ಮುಖ್ಯ ಮುಖ್ಯ ಮುತ್ಸದ್ದಿಗಳ ಗುಪ್ತ ದರ್ಬಾರವನ್ನು ನೆರಿಸಬೇಕೆಂದು ಯೋಚಿಸಿ, ಅದರಂತೆ ಬೇಗನೆ ದರ್ಬಾರವನ್ನು ನೆರಸಿದನು. ಆದರೆ ದರ್ಬಾರದ ಕೆಲಸವು ಅತ್ಯಂತ ಗುಪ್ತವಾಗಿ ನೆರವೇರಿದ್ದರಿಂದ ಜನರಿಗೆ ಅದರ ಸುದ್ದಿಯೇನೂ ಗೊತ್ತಾಗಲಿಲ್ಲ. ಅದರ ಸಂಬಂಧದಿಂದ ಜನರಲ್ಲಿ ತರ್ಕವಿತರ್ಕಗಳಿಗೆ ಆರಂಭವಾಯಿತು. ವಿಜಯನಗರದ ಸೇಡು ತೀರಿಸುವದಕ್ಕಾಗಿ ಈ ಗುಪ್ತ ದರ್ಬಾರವು ಕೂಡಿರುವದರಿಂದ, ಇನ್ನು ಬೇಗನೆ ವಿಜಯನಗರದ ಸಂಗಡ ಯುದ್ಧವು ಉತ್ಪನ್ನವಾಗುವದೆಂದು ಜನರು ಅಲ್ಲಲ್ಲಿ ಮಾತಾಡಹತ್ತಿದರು. ಆಗ ವಿಜಾಪುರದಲ್ಲಿ ಎಲ್ಲಿ ಹೋದರೂ ಈ ಯುದ್ಧದ ವಿಷಯವನ್ನೇ ಕುರಿತು ಜನರು ಮಾತಾಡುತ್ತಲಿದ್ದರು. ಒಬ್ಬ ಸರದಾರನ ಮಗಳ ಮಾನಖಂಡನ ಮಾಡಿದ್ದನ್ನು ಬಾದಶಹನು ಎಂದಿಗೂ ಸೈರಿಸಿಕೊಳ್ಳಲಾರದೆಂದು ಎಲ್ಲರು ನಿಶ್ಚಯಿಸಿದ್ದರು. ಇನ್ನು ಬೇಗನೆ ವಿಜಯನಗರದ ಮೇಲೆ ಸಾಗಿಹೋಗಬೇಕಾಗುವದೆಂದು, ಪ್ರತಿ ಒಬ್ಬ ಮುಸಲ್ಮಾನನು ಸ್ಫೂರ್ತಿಗೊಂಡನು. ಪ್ರತಿಒಂದು ಮನೆಯಲ್ಲಿ, ಮಸೀದೆಯಲ್ಲಿ ಜನರು ತಮ್ಮ ತಮ್ಮೊಳಗೆ—"ಬಾದಶಹನು ಈ ಪ್ರಸಂಗದಲ್ಲಿ ಹಿಂದಕ್ಕೆ ಸರಿಯಲಾಗದೆ"ಂದು ಪ್ರತಿಪಾದಿಸಹತ್ತಿದರು. ವಿಜಯನಗರದ ದ್ಯೇಲೆ ದಂಡೆತ್ತಿಹೋಗುವದಕ್ಕೆ ಪ್ರತಿಒಬ್ಬರ ಬಾಹುಗಳು ಸ್ಫುರಿಸಹತ್ತಿದವು. ಪ್ರತಿಒಬ್ಬನು ಬಾಯಿಗೆ ಬಂದಂತೆ ಪೌರುಷದ ಮಾತುಗಳನ್ನು ಆಡಹತ್ತಿದನು. ವಿಜಯನಗರವಲ್ಲಿ ಅಪಾರವಾದ ಸಂಪತ್ತು ತುಂಬಿರುವದೆಂಬ ಸುದ್ದಿಯನ್ನು ಅವರು ಕೇಳಿಯೇ ಇದ್ದರು; ಆದ್ದರಿಂದ ಯುದ್ಧದ ಕೊನೆಯಲ್ಲಿ ಆ ಪಟ್ಟಣವನ್ನು ಸುಲಿಯಲಿಕ್ಕೆ ತಮಗೆ ಆಸ್ಪದ ದೊರೆಯಬೇಕೆಂದು ಪ್ರತಿಒಬ್ಬ ಮುಸಲ್ಮಾನ ವೀರನು ದಂಡಿನಲ್ಲಿ ಸೇರಲಿಕ್ಕೆ ಆತುರಪಡಹತ್ತಿದನು. ದಂಡು ಕೂಡಿಸಲಿಕ್ಕೆ ಯಾವಾಗ ಆರಂಭವಾಗುವದೋ ಎಂದು ಅವರು ಎದುರು ನೋಡಹತ್ತಿದರು. ಆದರೆ ಬಾದಶಹನು ಗುಪ್ತ ದರ್ಬಾರದಲ್ಲಿ ನಡಿಸಿದ ಆಲೋಚನೆಯ ಪರಿಣಾಮವು

ಇದಕ್ಕೆ ತೀರ ವಿರುದ್ಧವಾಗಿ ಆಯಿತು. ಬಾದಶಹನು ದೊಡ್ಡ ದರ್ಬಾರುನೆರಸಿ, ರಾಮರಾಜನು ನೂರಜಹಾನಳ ಲಜ್ಜಾಹರಣ ಮಾಡಿದ ಯಾವತ್ತು ವೃತ್ತಾಂತವನ್ನು ದರ್ಬಾರದಲ್ಲಿ ನಿವೇದಿಸುವಂತೆ ರಣಮಸ್ತಖಾನನನ್ನು ಆಜ್ಞಾಪಿಸಿದನು. ಆಗ ರಣಮಸ್ತಖಾನನು ತನ್ನ ವಾಕ್ಚಾತುರ್ಯವನ್ನೆಲ್ಲ ಒಟ್ಟುಗೂಡಿಸಿ, ಅತ್ಯಂತ ಆವೇಶದಿಂದ ಆ ವೃತ್ತಾಂತವನ್ನೆಲ್ಲ ನಿವೇದಿಸಿದನು. ಅದನ್ನು ಕೇಳಿ ಯಾವತ್ತು ದರ್ಬಾರದ ಜನರು ರೊಚ್ಚಿಗೆದ್ದರು. ಈಗಲೇ ರಾಮರಾಜನ ಶಾಸನ ಮಾಡಲಿಕ್ಕೆ ವಿಜಯನಗರದ ಮೇಲೆ ಸಾಗಿಹೋಗತಕ್ಕದ್ದೆಂಬ ಉದ್ಗಾರಗಳು ಅಲ್ಲಲ್ಲಿ ಹೊರಡಹತ್ತಿದವು. ಬಾದಶಹನು ಬಹು ಶಾಂತಮುದ್ರೆಯನ್ನು ತಾಳಿದ್ದನು. ತಮ್ಮ ತಮ್ಮ ಮನಸ್ಸಿಗೆ ಬಂದಂತೆ ಜನರಿಗೆ ಮಾತಾಡ ಗೊಟ್ಟು, ಅವರು ಆಡುವ ಮಾತುಗಳನ್ನೆಲ್ಲ ಆತನು ಸಮಾಧಾನದಿಂದ ಕೇಳಿ ಕೊಳ್ಳುತ್ತಲಿದ್ದನು.

ಈ ಮೇರಗೆ ದರ್ಬಾರದಲ್ಲಿ ಒಮ್ಮೆಲೆ ಎದ್ದ ಜನರ ಉದ್ಗಾರದ ತರಂಗಗಳು ಸ್ವಲ್ಪ ಶಾಂತವಾದ ಮೇಲೆ, ಬಾದಶಹನು ಆಜ್ಞಾಪಿಸಿದ್ದೇನೆಂದರೆ—" ರಣಮಸ್ತ ಖಾನನು ವರ್ಣಿಸಿದ ಸಂಗತಿಯು ತಾಪದಾಯಕವೆಂಬದೇನೋ ನಿಜ; ಆದರೆ ಅಷ್ಟಕ್ಕಾಗಿ ಇಷ್ಟು ರೊಚ್ಚಿಗೇಳುವದು ಸರಿಯಲ್ಲ; ಈ ಸಂಬಂಧದಿಂದ ರಾಮ ದೇವರಾಜನು ನಿನು ಹೇಳುವನೆಂಬದನ್ನು ಮೊದಲು ಕೇಳಿಕೊಂಡು, ಆಮೇಲೆ ಮಾಡತಕ್ಕದ್ದನ್ನು ಮಾಡಬೇಕು." ಬಾದಶಹನ ಈ ಅಪ್ಪಣೆಯನ್ನು ಕೇಳಿ, ದರ್ಬಾರದ ಜನರು ಬಹಳ ನಿರಾಶೆಪಟ್ಟರು. ಬಾದಶಹನು ಹೀಗೆ ಆಜ್ಞಾಪಿಸ ಬಹುದೆಂಬದು ಯಾರ ಕನಸು ಮನಸುಗಳಲ್ಲಿಯೂ ಬಂದಿದ್ದಿಲ್ಲ. ಎಲ್ಲ ಜನರು ಖಿನ್ನರಾದರು. ಅವರಿಗೆ ಪರಮಾಶ್ಚರ್ಯವಾಯಿತು. ಅವರು ಬಾದಶಹನನ್ನುದ್ದೇಶಿಸಿ— " ಇನ್ನೇನು ರಾಮರಾಜನನ್ನು ವಿಚಾರಿಸುವ? ರಣಮಸ್ತಖಾನರು ಎಲ್ಲ ಸಂಗತಿಯನ್ನು ಹೇಳಿಯೇ ಇದ್ದಾರೆ. ಪ್ರತ್ಯಕ್ಷ ನಮ್ಮ ವಕೀಲನು ದರ್ಬಾರದಲ್ಲಿದ್ದು, ಹೀಗೆ ಮಾಡುವದು ಯೋಗ್ಯವಲ್ಲೆಂದು ಆತನು ನಿರ್ಧಾರದಿಂದ ನಿಷೇಧಿಸುತ್ತಿರಲು, ಅದನ್ನು ಲೆಕ್ಕಿಸದೆ ರಾಮರಾಜನು ಒಬ್ಬ ಸರದಾರನ ಮಗಳ ಮಾನಖಂಡನ ಮಾಡಿದ ಬಳಿಕ ಇನ್ನೇನು ಉಳಿಯಿತು? ಈ ಪ್ರಸಂಗದಲ್ಲಿ ರಾಮದೇವರಾಜನನ್ನು ಕೇಳುವ ಕಾರಣವಿಲ್ಲ, ಆತನ ಹಂಗು ಇಡದೆ ವಿಜಯನಗರದ ಮೇಲೆ ದಂಡೆತ್ತಿ ಹೋಗಲು ಸೈನ್ಯಕ್ಕೆ ಅಪ್ಪಣೆಯನ್ನು ಕೊಡಬೇಕು. ಆ ಹಿಂದುರಾಜನು ಬಹಳ ಅಂಗಲಾಚಿ ಹೇಳಿಕೊಂಡರೆ, ಬೇಕಾದರೆ ಆತನಿಂದ ಅಫಾರವಾದ ಕಪ್ಪವನ್ನು ಸ್ವೀಕರಿಸಿ, ಆತನ ಮನೆತನಕ್ಕೆ ಸಂಬಂಸಿದ ಒಬ್ಬ ಕನ್ಯೆಯನ್ನು ಜನಾನಖಾನೆಯಲ್ಲಿ ಸೇರಿಸಿಕೊಳತಕ್ಕದ್ದು, ಎಂದು

ಪೌರುಷದ ಮಾತುಗಳನ್ನು ಆಡಿದ್ದಲ್ಲದೆ, ಅದರಂತೆ ತಮ್ಮ ತಮ್ಮೊಳಗೂ ಮಾತಾಡಿಕೊಳ್ಳಹತ್ತಿದರು! ಆದರೆ ಬಾದಶಹನು ಈ ಪ್ರಸಂಗದಲ್ಲಿ ಬಹು ಸಮಾಧಾನವನ್ನು ತಾಳಿದನು. ಆತನು ತನ್ನ ಮಾತನ್ನು ತಿರುಗಿಸಲಿಲ್ಲ. ರಾಮದೇವರಾಜನ ವಿಚಾರವನ್ನು ಕೇಳಿಕೊಂಡಹೊರತು ಏನೂ ಮಾಡುವ ಹಾಗಿಲ್ಲೆಂದೇ ಸ್ಪಷ್ಟವಾಗಿ ಹೇಳಿದನು. ಅದನ್ನು ಕೇಳಿ ಜನರಿಗೆ ಮತ್ತಿಷ್ಟು ಆಶ್ಚರ್ಯವಾಯಿತು. ಬಾದಶಹನು ಇಂದು ಹೀಗೆ ವಿಲಕ್ಷಣ ರೀತಿಯಿಂದ ನಡೆದದ್ದನ್ನು ನೋಡಿ ಜನರು ಬಾದಶಹನ ಬುದ್ಧಿಯು ಭ್ರಂಶವಾಯಿತೆಂತಲೂ, ಆತನು ರಾಮರಾಜನಿಗೆ ಹೆದರುವನೆಂತಲೂ ಭಾವಿಸಹತ್ತಿದರು. ಈ ಅಂಜುಬುರಕತನದಿಂದ ರಾಮರಾಜನು ಮತ್ತಿಷ್ಟು ಸೆಟೆಯಲು, ಬಾದಶಹರ ಗೌರವಕ್ಕೆ ಬಾಧೆಬರುವದೆಂದು ತಿಳಿದು, ಬಾದಶಹರ ಮನಸ್ಸನ್ನು ತಿರುಗಿಸಲಿಕ್ಕೆ ಅವರ ವಿಶ್ವಾಸದ ಕೆಲವು ಜನರಿಗೆ ಸೂಚಿಸಿದರು. ಆದರೆ ಅಂದು ಬಾದಶಹನ ಮುಂದೆ ಯಾರ ಆಟವೂ ನಡೆಯಲಿಲ್ಲ. ಕಡೆಗೆ ಬಾದಶಹನು ತನ್ನ ಮನಸ್ಸಿನಂತೆ ಪತ್ರವನ್ನು ಬರೆದು ಸಿದ್ಧಮಾಡಿ, ಅದನ್ನು ಒಯ್ದು ರಾಮದೇವರಾಯನಿಗೆ ಕೊಡುವಂತೆ ರಣಮಸ್ತಖಾನನಿಗೆ ಆಜ್ಞಾಪಿಸಿದನು. ಅದಕ್ಕೆ ರಣಮಸ್ತಖಾನನು—"ಇಂಥ ಪತ್ರವನ್ನು ನಾನು ತಕ್ಕೊಂಡುಹೋಗಿ ರಾಮರಾಜನಿಗೆ ಮುಟ್ಟಿಸುವದು ಬಹಳ ಅಪಮಾನಕರವಾದದ್ದರಿಂದ, ಬಾದಶಹರು ದಯಮಾಡಿ ನನ್ನನ್ನು ಕಳಿಸಬಾರದು." ಎಂದು ಪ್ರಾರ್ಥಿಸಿದನು. ಇದಕ್ಕಾಗಿ ಬಾದಶಹನು ರಣಮಸ್ತಖಾನನ ಮೇಲೆ ಸಿಟ್ಟಾಗಿ, ಕಡೆಗೆ ಬೇರೊಬ್ಬ ಸರದಾರನಿಗೆ ಆ ಪತ್ರವನ್ನು ರಾಮರಾಜನಿಗೆ ಒಯ್ದು ಕೊಡುವಂತೆ ಆಜ್ಞಾಪಿಸಿದನು. ತನ್ನ ಆಜ್ಞೆಯನ್ನು ಮೀರಿದ ಶಿಕ್ಷೆಯೆಂದು ಬಾದಶಹನು ರಣಮಸ್ತಖಾನನಿಗೆ ಕೆಲವು ದಿನ ದರ್ಬಾರಕ್ಕೆ ಬರಲಾಗದೆಂದು ಆಜ್ಞಾಪಿಸಲಿಕ್ಕೆ ಸಹ ಹಿಂದುಮುಂದು ನೋಡಲಿಲ್ಲ.

ಬಾದಶಹನ ಈ ಕೃತಿಯಂತು ದರ್ಬಾರದ ಜನರ ಮನಸ್ಸಿಗೆ ಎಷ್ಟುಮಾತ್ರವೂ ಬರಲಿಲ್ಲ. ಈ ಸಂಬಂಧದಿಂದ ಬಾದಶಹನು ಬಹಳ ಅನ್ಯಾಯ ಮಾಡಿದನೆಂದು ಅವರು ಭಾವಿಸಹತ್ತಿದರು. ಆದರೆ ಬಾದಶಹನಮುಂದೆ ಯಾರ ಆಟ ನಡೆಯುವದು? ಅವರೆಲ್ಲರು ಬಾಯಿಮುಚ್ಚಿಕೊಂಡು ತೆಪ್ಪಗೆ ಕುಳಿತುಕೊಳ್ಳಬೇಕಾಯಿತು. ಇತ್ತ ಬಾದಶಹನು ಕಳಿಸಿದ ಸರದಾರನು ವಿಜಯನಗರಕ್ಕೆ ಹೋಗಿ, ರಾಮರಾಜನಿಗೆ ಪತ್ರವನ್ನು ಕೊಟ್ಟನು. ಪತ್ರದೊಳಗಿನ ಸಂಗತಿಯನ್ನು ಓದಿ ರಾಮರಾಜನಿಗೆ ಬಹಳ ಸಮಾಧಾನವಾಯಿತು. ರಾಮರಾಜನ ಗುಪ್ತಚಾರನೂ ಬಾದಶಹನ ಗುಪ್ತ ದರ್ಬಾರದಲ್ಲಿ ನಡೆದ ಸಂಗತಿಯನ್ನು ಹೇಳಿ, ಬಾದಶಹನು

ರಣಮಸ್ತಖಾನನಿಗೆ ಕೆಲವು ದಿನ ದರ್ಬಾರಕ್ಕೆ ಬಾರದಿರುವಂತೆ ಆಜ್ಞಾಪಿಸಿದ್ದನ್ನು ತಿಳಿಸಿದ್ದನು. ಚಾರನ ಈ ಗುಪ್ತವಾದ ಸುದ್ದಿಯನ್ನು ಕೇಳಿಯಂತು ರಾಮರಾಜನು, ತನಗೆ ಬಾದಶಹನು ಹೆದರಿರುವನೆಂದು ಭಾವಿಸಿದನು. ಆ ಪತ್ರವನ್ನು ತಂದ ವಕೀಲನ ಮುಂದೆ ರಾಮರಾಜನು, ರಣಮಸ್ತಖಾನನನ್ನು ಬಹಳವಾಗಿ ನಿಂದಿಸಿದನು. ಆತನು ಆ ವಕೀಲನಿಗೆ ಒಬ್ಬ ಅನುಭವಿಕನಾದ ವಕೀಲನನ್ನು ಕಳಿಸಿಕೊಟ್ಟಿದ್ದರೆ, ಇಂಥ ಪ್ರಸಂಗವೇ ಬರುತ್ತಿದ್ದಿಲ್ಲ. ನಾನು ಮಾಡಿದ್ದು ಅನ್ಯಾಯವಲ್ಲ. ಅಂಥ ಪ್ರಸಂಗದಲ್ಲಿ ಬೇರೆ ಯಾರಿದ್ದರೂ ನನ್ನ ಹಾಗೆಯೇ ಮಾಡುತ್ತಿದ್ದರು. ನಮಗೆ ಸಂಶಯ ಬಂದಬಳಿಕ ಬುರುಕಿ ತೆಗಿಸಿ ನೋಡಿದರೆ ತಪ್ಪೇನು? ವಿಜಾಪುರದ ಬಾದಶಹರೊಬ್ಬರು ನಮ್ಮ ಮಿತ್ರರಿರುವರು. ಆದರೆ ಅಹಮ್ಮದನಗರ—ಗೋವಕೊಂಡಗಳ ಬಾದಶಹರ ಸಂಗಡ ನಮ್ಮ ಮಿತ್ರತ್ವವಿಲ್ಲ. ವಿಜಾಪುರದವರ ಹೆಸರು ಹೇಳಿ ಬೇರೆ ಯಾರಾದರೂ ನಮ್ಮ ವಿರುದ್ಧ ಒಳಸಂಚು ನಡಿಸಿದ ಸಂಶಯ ಬಂದರೆ, ಅದರ ನಿವಾರಣವನ್ನು ನಾವು ಮಾಡಿಕೊಳ್ಳಬಾರದೋ? ಎಂದು ಕೇಳಲು, ಹೊಸದಾಗಿ ಬಂದ ಆ ವಕೀಲನು—ಅಲಬತ್, ಅಲಬತ್, ತಾವು ಸಂಶಯ ನಿವಾರಣವನ್ನು ಮಾಡಿಕೊಳ್ಳಲೇಬೇಕು. ಈ ಮಾತನ್ನು ಮನಸ್ಸಿನಲ್ಲಿ ತಂದುಕೊಂಡೇ ಬಾದಶಹರು ನನ್ನನ್ನು ತಮ್ಮ ಬಳಿಗೆ ಕಳಿಸಿದ್ದಾರೆ. ತಾವು ಈಗ ಹೇಳುವ ಸಂಗತಿಗಳ ಮೇಲಿಂದ ತಮ್ಮಕಡೆಗೆ ಏನೂ ತಪ್ಪು ಇದ್ದಂತೆ ನನಗೆ ತೋರುವದಿಲ್ಲ. ತಮಗೆ ಒದಗಿದ ಪ್ರಸಂಗವೇ ಬಾದಶಹರಿಗೆ ಒದಗಿದ್ದರೆ, ಅವರೂ ತಮ್ಮಂತೆಯೇ ನಡೆಯುತ್ತಿದ್ದರು. ರಣಮಸ್ತಖಾನನಂಥ ಏರಿಕೆಯ ರಕ್ತದ ತರುಣನನ್ನು ವಕೀಲನನ್ನಾಗಿ ಕಳಿಸತಕ್ಕದ್ದೇ ಇದ್ದಿಲ್ಲ; ಆದರೆ ಕೆಲವು ಅಂತಸ್ಥ ಮುರವತ್ತುಗಳಿಂದ ಆತನನ್ನು ಬಾದಶಹರು ನಿಯಮಿಸಿ ಕಳಿಸಬೇಕಾಯಿತು. ನೆಟ್ಟಗಾಯಿತು, ಬಾದಶಹರಿಗೆ ರಣಮಸ್ತಖಾನನ ನಿಜವಾದ ಯೋಗ್ಯತೆಯು ಈಗಾದರೂ ಗೊತ್ತಾದದ್ದು ನೆಟ್ಟಗಾಯಿತು. ತಾವು ಹೇಳಿದ ಮಾತುಗಳನ್ನೆಲ್ಲ ನಾನು ಬಾದಶಹರ ಚರಣದೆಡೆಯಲ್ಲಿ ವಿಜ್ಞಾಪಿಸಿಕೊಳ್ಳುವೆನು. ತಾವೂ ಪತ್ರವನ್ನು ಬರೆದೇ ಬರೆಯುವಿರಿ. ಬೇಗನೆ ಪತ್ರವನ್ನು ಕೊಟ್ಟು ನನ್ನನ್ನು ದಾಟಿಹಾಕಬೇಕು, ಎಂದು ಹೇಳಿದನು. ವಕೀಲನ ಈ ಮಾತುಗಳನ್ನು ಕೇಳಿ ರಾಮರಾಜನಿಗೆ ಬಹಳ ಸಮಾಧಾನವಾಯಿತು. ಆತನು ಆ ವಕೀಲನ ಮಾನ—ಮರ್ಯಾದೆಗಳನ್ನು ಅತ್ಯುತ್ತಮ ರೀತಿಯಿಂದ ಮಾಡಿದನು. ಪತ್ರೋತ್ತರವನ್ನಾದರೂ ಬೇಗನೆ ಬರೆದು ವಕೀಲನ ಕೈಯಲ್ಲಿ ಕೊಟ್ಟನು. ವಕೀಲನು ರಾಮರಾಜನ ಅನುಜ್ಞೆಯನ್ನು ಪಡೆದು ವಿಜಾಪುರಕ್ಕೆ ಹೋದನು.

ವಕೀಲನು ವಿಜಾಪುರಕ್ಕೆ ಹೋಗಿ ರಾಮರಾಜನ ಆ ಪತ್ರವನ್ನು ಬಾದಶಹನಕೈಯಲ್ಲಿ ಕೊಟ್ಟನು. ಬಾದಶಹನು ಅದನ್ನು ಏಕಾಂತದಲ್ಲಿ ಓದಿದನು. ಆ ಪತ್ರದಲ್ಲಿ ರಾಮರಾಜನು—"ಆ ತರುಣ ಸ್ತ್ರೀಯ ಲಜ್ಜಾಹರಣ ಮಾಡುವ ಉದ್ದೇಶವು ನಮ್ಮದಿದ್ದಿಲ್ಲ. ನಮ್ಮ ವಿರುದ್ಧವಾಗಿ ಒಳಸಂಚುಗಳು ನಡೆದು, ಗುಲಬರ್ಗೆಯ ಕಡೆಯಿಂದ ಅಹಮ್ಮದನಗರದ ಕಡೆಗೆ ಇವರು ಪತ್ರಗಳನ್ನು ಒಯ್ಯುತ್ತಾರೆಂಬ ಸಂಶಯವು ನಮಗೆ ಬಂದಿತು. ಹೀಗೆ ಒಳಸಂಚುಗಳು ನಡೆದಿರುವವೆಂದು ಅಲ್ಲಿರ್ದ್ದ ನಮ್ಮ ಗುಪ್ತಚಾರರು ನಮಗೆ ಹೇಳಿದ್ದರು; ಆದ್ದರಿಂದ ಹಾಗೆ ನಾವು ಬುರುಕಿ ತೆಗೆದು ಶೋಧಿಸಿ ನೋಡಬೇಕಾಯಿತು. ನಮ್ಮ ಸ್ಥಿತಿಯಲ್ಲಿ ತಾವು ಇದ್ದರೆ, ತಾವೂ ನಮ್ಮ ಹಾಗೆಯೇ ನಡೆಯಬೇಕಾಗುತ್ತಿತ್ತು. ನಮಗೂ ತಮಗೂ ಸ್ನೇಹವಿರುತ್ತದೆ. ಅದನ್ನು ಮುರಿಯುವ ಇಚ್ಛೆಯು ನಮಗೆ ಎಳ್ಳಷ್ಟಾದರೂ ಇರುವದಿಲ್ಲ. ಆದರೆ ಅಷ್ಟಕ್ಕಾಗಿ ಸುಮ್ಮನೆ ತಮ್ಮ ಹೆಸರಿನಿಂದ ನಮ್ಮನ್ನು ಬೆದರಿಸಿ ಅನ್ಯರು ಬೇಕಾದಹಾಗೆ ಒಳಸಂಚುಗಳನ್ನು ನಡಿಸಿದರೆ, ನಾವು ಬೆದರಿ ಅವನ್ನು ನಡಿಸಗೊಡಬೇಕೆಂದು ನೀವು ಸರ್ವಥಾ ಹೇಳುವದಿಲ್ಲೆಂಬ ನಂಬಿಗೆಯು ನಮಗೆ ಇರುತ್ತದೆ. ಹೀಗೆಂದು ನಾವು ನಿಮ್ಮ ತರುಣ ವಕೀಲರಿಗೆ ಬೇಕಾದಷ್ಟು ಹೇಳಿದೆವು. ಆದರೆ ಅವರು ನಮ್ಮ ಮಾತನ್ನು ಸರ್ವಥಾ ಕೇಳಲಿಲ್ಲ. ಕೂಡಿದ ದರ್ಬಾರದಲ್ಲಿ, ಅದರೊಳಗೆ ನಮ್ಮ ದರ್ಬಾರದಲ್ಲಿ ನಮ್ಮ ಮುಂದೆ ನಮ್ಮ ತಿರಸ್ಕಾರವನ್ನು ಮಾಡಿದರು. ಆಗಲೇ ಅವರನ್ನು ಪ್ರತಿಬಂಧದಲ್ಲಿಡಿಸುತ್ತಿದ್ದೆವು; ಆದರೆ ತಮ್ಮ ಮೋರೆಯನ್ನು ನೋಡಿ ನಾವು ಹಾಗೆ ಮಾಡಲಿಲ್ಲ. ಆ ನಿಮ್ಮ ತರುಣ ವಕೀಲರು, ನಿಮ್ಮ ಹೆಸರು ಹೇಳಿ ನಮ್ಮನ್ನು ಬಹಳವಾಗಿ ಗದ್ದರಿಸಿದರು; ನಾನು ನಾಳೆ ವಿಜಾಪುರಕ್ಕೆ ಹೋಗಿ ಬಾದಶಹರಿಗೆ ಎಲ್ಲ ಸಂಗತಿಯನ್ನು ತಿಳಿಸಿದರೆ, ನಿಮ್ಮ ರಾಜ್ಯದ ಮೇಲೆ ದಂಡೆತ್ತಿ ಬರಲಿಕ್ಕೆ ವಿಲಂಬವಾಗದೆಂಬರ್ಥವನ್ನು ಸೂಚಿಸಿ ನಮ್ಮನ್ನು ಬೆದರಿಸುವ ಪ್ರಯತ್ನವನ್ನೂ ಒಂದೆರಡು ಸಾರೆ ಮಾಡಿದರು; ಆದರೆ ಅದರ ಕಡೆಗೆ ಲಕ್ಷಗೊಡದೆ ನಮಗೆ ಯೋಗ್ಯವೆಂದು ತೋರಿದ ಮಾರ್ಗದಿಂದ ನಮ್ಮ ಸಂಶಯ ನಿವಾರಣವನ್ನು ನಾವು ಮಾಡಿಕೊಂಡು, ಕೂಡಲೇ ನಾವಾಗಿಯೇ ಆ ತರುಣಿಯನ್ನೂ, ಬೇರೆ ಜನರನ್ನೂ ಆ ನಿಮ್ಮ ವಕೀಲರಿಗೆ ಒಪ್ಪಿಸಿಬಿಟ್ಟೆವು. ಪುನಃ ನಮ್ಮ ರಾಜ್ಯದಲ್ಲಿ ಅವರ ಕೂದಲು ಕೊಂಕದಂತೆ ವ್ಯವಸ್ಥೆ ಮಾಡಿದೆವು. ಅವರ ಸಂರಕ್ಷಣಕ್ಕಾಗಿ ಜನರನ್ನು ಕೊಟ್ಟೆವು, ವಿಜಾಪುರದವರೆಗೆ ಸಹ ಅವರನ್ನು ಕಳಿಸುವ ವ್ಯವಸ್ಥೆ ಮಾಡುವೆವೆಂದು ನಿಮ್ಮ ವಕೀಲರಮುಂದೆ ಹೇಳಿದೆವು. ಇದಲ್ಲದೆ, ಮರುದಿನ ನಸಿಕಿನ

ನಲ್ಲಿಯೇ ನಾವು ಸ್ವತಃ ನಿಮ್ಮ ವಕೀಲರ ಬಳಿಗೆಹೋಗಿ, ಅವರಿಗೆ ನಾನಾಪ್ರಕಾರದ ಆಶ್ವಾಸನಗಳನ್ನು ಕೊಟ್ಟಿವು; ಅದಕ್ಕೆ ಅವರು ಒಪ್ಪಿಗೆಯನ್ನು ಇತ್ತರು; ಆದರೆ ತಿರುಗಿ ಮತ್ತೇನು ಅವರಮನಸ್ಸಿನಲ್ಲಿ ಬಂದಿತೋ ಏನೋ, ಅವರು ಸ್ವತಃ ತನ್ಮ್ಮ ತನಕ ಓಡಿ ಬಂದಿದ್ದಾರೆ! ತಾವು ಬಹು ಯೋಗ್ಯವಿಚಾರ ಮಾಡಿದಿರಿ. ಇಲ್ಲದಿದ್ದರೆ ವ್ಯರ್ಥವಾಗಿ ಉಭಯ ಪಕ್ಷಗಳ ಅರ್ಥಹಾನಿ—ಪ್ರಾಣಹಾನಿಗಳಾಗಬೇಕಾಗುತ್ತಿತ್ತು. ತಾವು ತಿರುಗಿ ವಕೀಲನನ್ನು ಕಳಿಸುವಾಗಿ ಯೋಗ್ಯ ಮನುಷ್ಯನನ್ನು ಕಳಿಸುವ ವ್ಯವಸ್ಥೆಯಾಗಬೇಕು. ಹೆಚ್ಚಿಗೆ ಏನೂ ಇಲ್ಲ.'' ಇತ್ಯಾದಿ ಸಂಗತಿಯನ್ನು ಬರೆದನಂತರ, ಕಡೆಗೆ ವಿನೋದದಿಂದ—"ಇದೆಲ್ಲ ಕಾಮದೇವರ ಆಟವಿರುತ್ತದೆ. ನೀವು ನಿಮ್ಮ ವಕೀಲರ ಲಗ್ನವನ್ನು ಆ ಕುಮಾರಿಕೆಯೊಡನೆ ಮಾಡಿರಿ; ಅಂದರೆ ನಮ್ಮ ಮೇಲಿನ ನಿಮ್ಮ ವಕೀಲರ ಸಿಟ್ಟು ಶಾಂತವಾಗುವದು. ಅವರಿಬ್ಬರ ವಿವಾಹವು ಅವರಿಬ್ಬರಿಗೂ ಬಹು ಇಷ್ಟವಾಗುವದೆಂಬದು, ಇಲ್ಲಿರುವಾಗಿನ ಅವರ ವರ್ತನದಿಂದ ನಮಗೆ ನಂಬಿಗೆಯಾಗಿದೆ. ಆ ವಿವಾಹಕ್ಕೆ ನಮ್ಮನ್ನು ಕರೆಸಿದರೆ, ನಾವು ಬಹಳ ಸಂತೋಷದಿಂದ ಬಂದು ಅಕ್ಷತೆಗಳನ್ನು ಹಾಕುವೆವು. ನಿಮ್ಮ ವಕೀಲರಮೇಲೆ ನಮ್ಮ ಪ್ರೇಮವು ವಿಶೇಷವಾಗಿರುತ್ತದೆ. ಅವರಲ್ಲಿ ತಾರುಣ್ಯದ ರಂಗು ಬಹಳವಿರುತ್ತದೆಂಬದಿಷ್ಟೇ ಅವರಲ್ಲಿಯ ದೋಷವು; ಆದರೆ ಕಾಲಾಂತರದಿಂದ ಅದು ಹೊರಟು ಹೋಗಬಹುದು. ಅವರಮೇಲೆ ತಾವು ಸಿಟ್ಟಾಗಿರುವಿರೆಂದು ಕೇಳಿದ್ದೇವೆ. ಆದರೆ ಹಾಗೆ ಮಾಡಬೆ, ಈವರೆಗೆ ಮಾಡಿದ ಅವರ ಚಾಕರಿಗೆ ಲಕ್ಷಗೊಟ್ಟು ಅವರಿಗೆ ಪತ್ನಿಯನ್ನು ದೊರಕಿಸಿಕೊಡತಕ್ಕದ್ದು; ಅದರಂತೆ ಅವರ ಪದವಿಯನ್ನಾದರೂ ಹೆಚ್ಚಿಸತಕ್ಕದ್ದು. ಅವರಿಗೆ ಸರದಾರ ಪದವಿಯನ್ನು ಕೊಡಬೇಕೆಂದು ನಾವು ಮನಃಪೂರ್ವಕವಾಗಿ ಸಿಫಾರಸು ಮಾಡುತ್ತೇವೆ. ನಮ್ಮ ಪದರಿನಲ್ಲಿ ಅವರು ಇರುತ್ತಿದ್ದರೆ, ನಾವು ಹಾಗೆ ನಿಶ್ಚಯವಾಗಿ ಮಾಡುತ್ತಿದ್ದೆವು.''

ಹೀಗೆ ಪತ್ರದ ಕಡೆಯಲ್ಲಿ ಬರೆದಿದ್ದ ವಿನೋದದ ಮಾತುಗಳನ್ನು ಓದಿದಕೂಡಲೆ ಬಾದಶಹನಿಗೆ ನಗೆಬಂದಿತು. ಆತನು ರಣಮಸ್ತಖಾನನನ್ನು ಕರೆಸಿಕೊಂಡು ಪತ್ರವನ್ನು ಓದಿ ತೋರಿಸಿದನು. ಆ ಮೇಲೆ ಮತ್ತೆ ಗುಪ್ತಾಲೋಚನೆಗಳಾದವು. ಬಳಿಕ ಬಾದಶಹನು ಮತ್ತೆ ದರ್ಬಾರುನೆರೆಸಿ—ರಾಮರಾಜನ ಪತ್ರವು ಬಂದು, ಅದರಿಂದ ಬಾದಶಹರ ಸಮಾಧಾನವಾಗಿರುತ್ತದೆ. ಆ ಸಂಬಂಧದಿಂದ ಇನ್ನು ಮಾಡತಕ್ಕದ್ದೇನೂ ಉಳಿಯಲಿಲ್ಲ. ಇದು ರಣಮಸ್ತಖಾನನ ಕಾರಣವಿಲ್ಲದ ಉತಾವಳಿಯ ಪರಿಣಾಮವಾದದ್ದರಿಂದ, ಆತನು ಇನ್ನು ಮೇಲೆ ತನ್ನ

ಸ್ಥಿತಿಯನ್ನು ಸುಧಾರಿಸಿಕೊಳ್ಳತಕದ್ದು. ಈಗ ನಾವು ಪುನಃ ಆತನನ್ನು ವಕೀಲನನ್ನಾಗಿ ವಿಜಯನಗರಕ್ಕೆ ಕಳಿಸುತ್ತೇವೆ; ಆದರೆ ಆತನೊಬ್ಬನ ಮೇಲೆ ನಮ್ಮ ವಿಶ್ವಾಸವಾಗದ್ದರಿಂದ, ಆತನ ಮೇಲೆ ಕಣ್ಣಿಡುವದಕ್ಕಾಗಿ ಖಾನಖಾನಾನಮಹಮೂದಖಾ ಎಂಬವನನ್ನು ಕಳಿಸಿಕೊಡುವೆವು. ಖಾನಖಾನಾನನೇ ಮುಖ್ಯನು; ರಣಮಸ್ತಖಾನನು ಆತನಕೈಕೆಳಗಿನವನಾಗಿ ನಡೆಯತಕ್ಕದ್ದು, ಎಂದು ಜಾಹೀರು ಮಾಡಿದನು. ಇದರಿಂದ ದರ್ಬಾರದ ಜನರ, ವಿಶೇಷವಾಗಿ ತರುಣರ ಉತ್ಸಾಹವು ಕಡಿಮೆಯಾಯಿತು. ಹೀಗೆ ಮಾಡಿದ್ದರಿಂದ ಬರಿಯ ವಿಜಾಪುರದ ಬಾದಶಹನದಷ್ಟೇ ಅಲ್ಲ, ಇಡಿಯ ಮುಸಲ್ಮಾನ ಬಾದಶಹರ ಮಹತ್ವವು ಕಡಿಮೆಯಾಗಿ, ಇದರಿಂದ ರಾಮರಾಜನು ಮತ್ತಿಷ್ಟುಏರುವನೆಂದು ಆ ತರುಣರು ತಿಳಿಕೊಂಡರು. ರಣಮಸ್ತಖಾನನ ಗೌರವವನ್ನೇ ಕಡಿಮೆಮಾಡತಕ್ಕದ್ದಿದ್ದರೆ ಹೀಗೆ ದರ್ಬಾರದಲ್ಲಿ ಮಾಡದೆ, ಬಾದಶಹರು ಗುಪ್ತರೀತಿಯಿಂದ ಮಾತತಕ್ಕದ್ದಿತ್ತೆಂದು ಅವರು ತಮ್ಮೊಳಗೆ ಮಾತಾಡಿಕೊಳ್ಳಹತ್ತಿದರು. ಅದರಂತೆ, ಈಗ ಮೇಲೆಯೊಬ್ಬನನ್ನು ನಿಯಮಿಸಿ ಪುನಃ ರಣಮಸ್ತಖಾನನನ್ನು ವಿಜಾಪುರದ ವಕೀಲನನ್ನಾಗಿ ನಿಯಮಿಸಿ ಕಳಿಸಿದ್ದು ನೆಟ್ಟಗಾಗಲಿಲ್ಲೆಂದು ಆ ತರುಣರ ಮತವಾಯಿತು. ಕೆಲವರು ವೃದ್ಧರಿಗೂ, ವಿಚಾರವಂತರಿಗೂಮಾತ್ರ ಬಾದಶಹನ ಕೃತಿಯು, ಸಮರ್ಪಕವಾಗಿ ತೋರಿತು. ಇಷ್ಟು ಕ್ಷುಲ್ಲಕಕಾರಣಕ್ಕಾಗಿ ಉಭಯಪಕ್ಷದ ಅರ್ಥಹಾನಿ—ಪ್ರಾಣಹಾನಿಗಳನ್ನು ಮಾಡಗೊಡದೆಯಿದ್ದದ್ದು ಬಹು ಯೋಗ್ಯವಾಯಿತೆಂದು ಅವರು ಭಾವಿಸಿದರು. ರಣಮಸ್ತಖಾನನ ಮೇಲೆ ಒಬ್ಬ ತಿಳುವಳಿಕೆಯ ವಕೀಲನನ್ನು ಕಳಿಸಿದ್ದೂ ಅವರಿಗೆ ಸಮರ್ಪಕವಾಗಿ ತೋರಿತು. ಸ್ವತಃ ರಣಮಸ್ತಖಾನನಿಗೆ ಬಾದಶಹನ ಈ ಕೃತಿಯು ಸ್ವಾಭಾವಿಕವಾಗಿಯೇ ಸರಲಿಲ್ಲ. ಆತನು ಬಾದಶಹರಿಗೆ—ನನ್ನ ಮಾನಹಾನಿಯನ್ನು ಇಷ್ಟು ಮಾಡಬಾರದೆಂತಲೂ, ನನ್ನನ್ನು ತಿರುಗಿ ವಿಜಯನಗರಕ್ಕಾದರೂ ಕಳಿಸಬಾರದೆಂತಲೂ, ವಿಜಾಪುರದಲ್ಲಿ ತಮ್ಮ ಬಳಿಯಲ್ಲಿಯೇ ನನ್ನನ್ನು ಇಟ್ಟುಕೊಳ್ಳಿರೆಂತಲೂ ಬಹಳವಾಗಿ ಹೇಳಿಕೊಂಡನು; ಆದರೆ ಬಾದಶಹನು ಆತನ ಪಾತನ್ನು ಕೇಳಲಿಲ್ಲ. ನನ್ನ ಅಪ್ಪಣೆಯನ್ನು ನೀನು ಪಾಲಿಸಲೇಬೇಕೆಂದು ನಿಷ್ಠುರವಾಗಿಹೇಳಿದನು; ಅದರಿಂದ ರಣಮಸ್ತಖಾನನಿಗೆ ವಿಜಯನಗರಕ್ಕೆ ಹೋದ ಹೊರತು ಎರಡನೆಯ ಮಾರ್ಗವೇ ಉಳಿಯದಾಗಲು, ಆವನು ಸುಮ್ಮನೆ ಅದಕ್ಕೆ ಒಪ್ಪಿಕೊಂಡನು. ರಣಮಸ್ತಖಾನನ ಸಂಗಡ ಖಾನಖಾನಾನ ಮಹಮೂದಖಾನನೂ ಹೊರಟನು. ಅವರಿಬ್ಬರೂ ವಿಜಯನಗರಕ್ಕೆ ಬಂದರು. ರಣಮಸ್ತಖಾನನು ಬಹಳ ಲಜ್ಜೆಯಿಂದ ಕುಂಜವನವನ್ನು ಪ್ರವೇಶಿಸಿದನು. ಪಾಪ! ಏನು ಮಾಡ್ಯಾನು! ಬರುವಾಗ ವಿಜಾ

ಪುರದಲ್ಲಿ ನೂರಜಹಾನಳನ್ನು ಕಾಣಲಿಕ್ಕೆ ಸಹ ಆತನಿಗೆ ಸಂಧಿಯು ದೊರೆಯಲಿಲ್ಲ; ಆದರೆ ಆಕೆಯು ತನ್ನ ಪ್ರತಿಜ್ಞೆಯಂತೆ ನಿಶ್ಚಯವಾಗಿ ನಡೆಯುವಳೆಂಬ ನಂಬಿಗೆಯು ಆತನಿಗಿತ್ತು. ವಿಜಾಪುರಕ್ಕೆ ಹೋದನಂತರ ಆಕೆಯ ಸಂಗಡ ಪ್ರತ್ಯಕ್ಷ ಮಾತಾಡುವದಂತು ಇರಲಿ, ಆಕೆಗೆ ಪತ್ರ ಬರೆದು ಕಳಿಸಲಿಕ್ಕೆ ಸಹ ರಣಮಸ್ತಖಾನನಿಗೆ ಅನುಕೂಲವಾಗಲಿಲ್ಲ. ಆತನು ವಿಜಾಪುರದಿಂದ ತಿರುಗಿ ವಿಜಯನಗರಕ್ಕೆ ಬರಲಿಕ್ಕೆ ತಿಂಗಳ ಮೇಲೆ ಬೇಕಾಯಿತು. ಈ ಅವಧಿಯಲ್ಲಿ ಆತನು ತನ್ನ ತಾಯಿಗೆ ಪತ್ರ ಹಾಕಿದ್ದನು. ಆತನ ತಾಯಿಯ ಕಡೆಯಿಂದಲೂ ಆತನಿಗೆ ಪತ್ರಗಳು ಬಂದಿದ್ದವು. ರಣಮಸ್ತಖಾನನು ಕುಂಜವನಕ್ಕೆ ಬಂದಕೂಡಲೆ ಆತನು ಮೊದಲು ತನ್ನ ತಾಯಿಯ ದರ್ಶನ ಮಾಡಿಕೊಂಡು, ಆಕೆಯ ಚರಣಕ್ಕೆ ರಗಿದನು. ಮಗನನ್ನು ನೋಡಿ ತಾಯಿಗೆ ಬಹಳ ಸಂತೋಷವಾದರೂ, ಬಾದಶಹನಿಂದ ಆತನು ನಿರಾಕರಿಸಲ್ಪಟ್ಟದ್ದಕ್ಕಾಗಿ ಆಕೆಯು ದುಃಖಿತಳಾಗಿದ್ದಳು. ರಣಮಸ್ತಖಾನನು ವಿಜಾಪುರದ ದರ್ಬಾರದಲ್ಲಿ ನಡೆದ ಸಂಗತಿಗಳನ್ನು ಒಂದುಳಿಯದಂತೆ ಯಥಾಸ್ಥಿತವಾಗಿ ತಾಯಿಯ ಮುಂದೆ ಹೇಳಿ, ತನ್ನ ಅಪಮಾನವು ಬಹಳವಾಯಿತೆಂದು ಆಕೆಯ ಮುಂದೆ ಆಡಿತೋರಿಸಿದನು. ಇನ್ನು ಮೇಲೆ ರಾಮರಾಜನು ನನ್ನನ್ನು ನಿರಾಕರಿಸುವನೆಂಬದನ್ನಾದರೂ ಆತನು ತನ್ನ ತಾಯಿಯ ಮುಂದೆ ಹೇಳದೆಯಿರಲಿಲ್ಲ.

೧೮ನೆಯ ಪ್ರಕರಣ—ಒಳಸಂಚು.

ಬಾದಶಹನು ಕಳಿಸಿದ ಇಬ್ಬರೂ ವಕೀಲರಿಗೆ ಇರಲಿಕ್ಕೆ ಕುಂಜವನವು ಸಾಲುವಂತಿದ್ದಿಲ್ಲ; ಆದ್ದರಿಂದ ರಾಮರಾಜನು ಖಾನಖಾನಾನಮಹಮೂದಖಾನನಿಗೆ ಬೇರೆ ಸ್ಥಳವನ್ನು ಇರಲಿಕ್ಕೆಕೊಟ್ಟು, ರಣಮಸ್ತಖಾನನನ್ನು ಕುಂಜವನದಲ್ಲಿಯೇ ಇರಗೊಟ್ಟನು. ಇದೊಂದುಪರಿಯಿಂದ ರಣಮಸ್ತಖಾನನಿಗೆ ಯಾರ ಉಪದ್ರವವೂ ಇಲ್ಲದೆ ಸ್ವತಂತ್ರದಿಂದ ಇರಲಿಕ್ಕೆ ಅನುಕೂಲವಾಯಿತು; ಆದರೆ ವಿಜಾಪುರದಿಂದ ಬಂದಂದಿನಿಂದ ಆತನ ವೃತ್ತಿಯಲ್ಲಿ ಬಹಳ ಹೆಚ್ಚುಕಡಿಮೆಯಾಗಿತ್ತು. ರಣಮಸ್ತಖಾನನು ವಿಜಾಪುರದಿಂದ ಬಂದಕೂಡಲೆ ಆತನನ್ನು ರಾಮರಾಜನು ಬುದ್ಧಿಪೂರ್ವಕವಾಗಿ ಒಮ್ಮೆ ತನ್ನ ಬಳಿಗೆ ಕರೆಸಿಕೊಂಡು, ಏಕಾಂತದಲ್ಲಿ ಆತನನ್ನು ಕುರಿತು—ಆದ ಮಾತಿನ ಸಲುವಾಗಿ ನಾನು ಎಷ್ಟು ಮಾತ್ರವೂ ಮನಸ್ಸಿನಲ್ಲಿ ಸಿಟ್ಟು ಹಿಡಿದಿರುವದಿಲ್ಲ. ನಿಮ್ಮ ಈಗಿನ ವಯಸ್ಸಿನಲ್ಲಿ ಇಂಥ ತಪ್ಪುಗಳು ಆಗತಕ್ಕವೇ; ಆದ್ದರಿಂದ ನಾನು ಎಲ್ಲ ಸಂಗತಿಯನ್ನು ಮರೆತು ಬಿಟ್ಟಂತೆ,

ನೀವೂ ಮರೆತು ಬಿಡಿರಿ. ನಿಮ್ಮ ವಿಷಯವಾಗಿ ನನ್ನ ಅಭಿಪ್ರಾಯವೇನಿರುತ್ತ ದೆಂಬದನ್ನು ನಾನು ಬಾದಶಹರಿಗೆ ಬರೆದು ತಿಳಿಸಿದ್ದೆನು. ಅವರು ನನ್ನ ಪತ್ರ ದಂತೆ ನಿಮ್ಮ ಮದುವೆಯನ್ನು ಮಾಡಿಕೊಡತಕ್ಕದ್ದಿತ್ತು ; ನಿಮ್ಮ ಅಧಿಕಾರವ ನ್ನಾದರೂ ಹೆಚ್ಚಿಸತಕ್ಕದ್ದಿತ್ತು ; ಆದರೆ ಹಾಗೆ ಮಾಡದೆಯಿದ್ದದ್ದಕ್ಕಾಗಿ ನನಗೆ ಬಹಳ ಆಶ್ಚರ್ಯವಾಗಿದೆ. ನನ್ನ ಪದರಿನಲ್ಲಿ ನೀವು ಇರುತ್ತಿದ್ದರೆ ನಿಶ್ಚಯ ವಾಗಿ ನಿಮ್ಮ ಲಗ್ನವನ್ನು ಮಾಡಿಕೊಟ್ಟು, ನಿಮ್ಮ ಪದವಿಯನ್ನೂ ಹೆಚ್ಚಿಸುತ್ತಿ ದ್ದೆನು. ಯಾಕಂದರೆ, ರಾಜಕಾರಣದ ದೃಷ್ಟಿಯಿಂದ ನಿಮ್ಮ ನಡತೆಯು ಯೋಗ್ಯವಲ್ಲದಿದ್ದರೂ, ರಾಜ್ಯದ ಗೌರವಕಾಯುವ ದೃಷ್ಟಿಯಿಂದ ಅದು ಯೋ ಗ್ಯವಾದದ್ದೇ ಇತ್ತೆಂಬದನ್ನು ನಾನು ಬಲ್ಲೆನು. ನಿಮಗೆ ಜಾಗರೂಕರಾಗಿರುವ ಬಗ್ಗೆ ಸೂಚನೆಕೊಡುವದಕ್ಕಿಂತ ಹೆಚ್ಚಿನ ಕೆಲಸವನ್ನೇನು ಬಾದಶಹರು ಮಾಡ ತಕ್ಕದ್ದಿದ್ದಿಲ್ಲ. ನಾನು ನಿಮ್ಮ ವಯಸ್ಸಿನಲ್ಲಿರುವಾಗ ನನ್ನ ಸ್ವಭಾವವು ನಿಮ್ಮಂತೆ ಯೇ ಇತ್ತು ; ಆದ್ದರಿಂದ ನೀವು ಮನಸ್ಸಿನಲ್ಲಿ ಖಿನ್ನರಾಗಬೇಡಿರಿ. ನಿಮ್ಮಂಥ ತರುಣನೂ, ಉತ್ಸಾಹಶಾಲಿಯೂ ಆದವನು ನನ್ನ ಬಳಿಯಲ್ಲಿದ್ದರೆ, ಆತ ನನ್ನು ಸೈನ್ಯದಮೇಲೆ ನಿಯಮಿಸುತ್ತಿದ್ದೆನು. ನಿಮ್ಮ ಶೌರ್ಯವನ್ನೂ ನಿಮ್ಮ ತೇಜಸ್ಸನ್ನೂ ನಾನು ಬಲ್ಲೆನು. ಒಟ್ಟಿನಮೇಲೆ, ನಿಮ್ಮ ವೃತ್ತಿಯನ್ನೆಲ್ಲ ನಾನು ಮನಸ್ಸಿನಲ್ಲಿ ತಂದರೆ, ನಾನು ನಿಮ್ಮಷ್ಟು ವಯಸ್ಸಿನಲ್ಲಿದ್ದಾಗಿನ ನನ್ನ ವೃತ್ತಿ ಯ ಸ್ಮರಣವು ಅಚ್ಚಳಿಯದೆ ನನಗೆ ಆಗುತ್ತದೆ; ಕನ್ನಡಿಯಲ್ಲಿ ನೋಡಿದ ಹಾಗೆ ಅದು ನನಗೆ ಸ್ಪಷ್ಟವಾಗಿ ಕಾಣುವದು, ಎಂದು ಹೇಳಿದನು. ರಾಮ ರಾಜನ ಈ ಮಾತುಗಳನ್ನು ಕೇಳಿ ರಣಮಸ್ತಖಾನನಿಗೆ ವಿಷಾದವಾಯಿತೋ, ಸಿಟ್ಟುಬಂತೋ, ಸಂತೋಷವಾಯಿತೋ ಎಂಬದನ್ನು ಹೇಳಲಿಕ್ಕೆ ಬರುವಹಾ ಗಿದ್ದಿಲ್ಲ ; ಯಾಕಂದರೆ ಅವನ ಮುಖಚರ್ಯದಲ್ಲಿ ಯಾವ ವಿಕಾರವೂ ತೋರು ತ್ತಿದ್ದಿಲ್ಲ. ಬಾದಶಹನು ತನಗೆ ಬುದ್ಧಿಗಲಿಸಿದ್ದರಿಂದ ರಣಮಸ್ತಖಾನನಿಗೆ ಬಹಳ ವಿಷಾದವಾಗಿತ್ತು. ರಾಮರಾಜನಿಗೆ ಪ್ರತ್ಯುತ್ತರವಾಗಿ ಏನೂಮಾತಾಡದೆ, ಆವ ನಿಗೆ ಅನುಕೂಲವಾಗುವಂತೆ ಬರಿಯ ತಲೆಹಾಕಿ ರಣಮಸ್ತಖಾನನು ಕುಂಜವ ನಕ್ಕೆ ಹೊರಟುಹೋದನು.

ವಿಜಾಪುರದಿಂದ ಬಂದಂದಿನಿಂದ ರಣಮಸ್ತಖಾನನ ವೃತ್ತಿಯು ಬಹಳ ಉ ದಾಸೀನವಾಯಿತು. ಆತನು ಬಹುತರ ಯಾರ ಸಂಗಡಲೂ ವಿಶೇಷ ಮಾತಾಡ ದಾದನು. ತನ್ನ ತಾಯಿಯ ಸಂಗಡ ಸಹ ಆತನು ಹೆಚ್ಚು ಮಾತಾಡುತ್ತಿ ದ್ದಿಲ್ಲ. ಆಕೆಯಾಗಿಯೇ ಆತನನ್ನು ಕರೆದುಕೊಂಡು ಹೋಗಿ ಏನಾದರೂ

ಕೇಳಿದರೆ ನಾಲ್ಕು ಮಾತುಗಳನ್ನು ಆಡುತ್ತಿದ್ದನು. ಮೊದಲಿನಂತೆ ಆತನು ಆದ ದ್ದನ್ನೆಲ್ಲ ಒಂದುಳಿಯದಂತೆ ತಾಯಿಯ ಮುಂದೆ ಹೇಳಿ, ಏನು ಮಾಡಜೇಕಾದ ದ್ದನ್ನು ತಾಯಿಯನ್ನು ಕೇಳಿ ಮಾಡದಾದನು. ಆತನು ಈಗ ಏಕಾಂತದಲ್ಲಿ ಬಹಳ ಹೊತ್ತುಗಳೆಯಹತ್ತಿದನು. ತಾನು ತಾನು, ಮೂರು ಮೂರು ತಾನು ಕುಂಜವನದಲ್ಲಿ ಆತನು ಕುಳಿತುಕೊಂಡು, ಇಲ್ಲವೆ ಪುಷ್ಕರಣಿಯ ದಂಡೆಗುಂಟ ತಿರುಗಾಡಿ ಕಾಲಹರಣ ಮಾಡುತ್ತಿದ್ದನು. ಆದ್ದರಿಂದ ಬಾದಶಹನಿಂದಾದ ಅಪಮಾನವು ಈತನ ಮನಸ್ಸಿಗೆ ಬಹಳ ಹತ್ತಿತ್ತೆಂದು ಬಹುತರ ಎಲ್ಲರೂ ತರ್ಕಿಸಹತ್ತಿದರು. ಲೈಲಿಯೂ ಆತನ ತಾಯಿಯೂ ಮಾತ್ರ ಹೀಗಾಗಲಿಕ್ಕೆ ಬೇರೆ ಕಾರಣವನ್ನು ಕಲ್ಪಿಸಿದರು. ನೂರಜಹಾನಳ ಮೇಲೆ ಈತನ ಪ್ರೇಮವು ವಿಶೇಷವಾಗಿದ್ದು, ಆಕೆಯು ಪ್ರಾಪ್ತವಾಗುವದು ಅಶಕ್ಯವಾಗಿ ತೋರುವದರಿಂದ ಈತನ ಸ್ಥಿತಿಯು ಹೀಗೆ ಆಗಿರುವದೆಂತಲೂ, ಅದರಲ್ಲಿ ಬಾದಶಹನಿಂದಾದ ಅಪಮಾನವೊಂದು ಕೂಡಿತೆಂತಲೂ ಅವರು ತಿಳಿದರು. ನಿಜವಾದ ಕಾರಣವು ಇಂಥದೇ ಎಂದು ಯಾರಿಗೂ ಗೊತ್ತಾಗುವ ಸಂಭವವಿದ್ದಿಲ್ಲ. ಲೈಲಿಯು ರಣಮಸ್ತಖಾನನ ಮನಸ್ಸಿನಲ್ಲಿದ್ದ ದ್ದನ್ನು ತಿಳಕೊಳ್ಳುವದಕ್ಕಾಗಿ ಪ್ರಯತ್ನಮಾಡುತ್ತಲಿದ್ದಳು. ಒಮ್ಮೆ ಆಕೆಯು ರಣಮಸ್ತಖಾನನನ್ನು ಕುರಿತು ಸಲಿಗೆಯಿಂದ– "ನೀವು ಇಷ್ಟು ಉದಾಸೀನರಾಗಿರುವ ಕಾರಣವೇನು? ನೂರಜಹಾನಳ ಚಿಂತೆಯು ನಿಮ್ಮನ್ನು ಬಾಧಿಸುವದೋ? ನಾನು ಒಮ್ಮೆ ವಿಜಾಪುರಕ್ಕೆ ಹೋಗಿ ನೂರಜಹಾನಳನ್ನು ಕಂಡು ಆಕೆಯ ಮನಸ್ಸಿನಲ್ಲಿದ್ದ ದ್ದನ್ನು ತಿಳಕೊಂಡು ಬರಲೇನು? ಅಥವಾ ನೂರಜಹಾನಳದಾದರೂ ಏನು ಪ್ರತಿಷ್ಠೆಯು? ಆಕೆಯಿಲ್ಲದಿದ್ದರೆ ಆಕೆಯಂಥ ನೂರಾರು ಮಂದಿ ತರುಣಿಯರು ನಿಮ್ಮ ಕಾಲಮೇಲೆ ಉರಳಾಡುತ್ತ ಬಂದಾರು." ಎಂದು ನುಡಿಯಲು, ರಣಮಸ್ತಖಾನನು ಸುಮ್ಮನೆ ಮುಗುಳುನಗೆ ನಕ್ಕನು ಮಾತ್ರ; ಬಾಯಿಂದ ಪಿಟ್ಟೆಂದು ಮಾತಾಡಲಿಲ್ಲ! ಆಗ ಲೈಲಿಯು ನಿರಾಶೆಪಟ್ಟು, ಮಾಸಾಹೇಬರ ಬಳಿಗೆಹೋಗಿ—ನಿಮ್ಮ ಮಗನ ಮನಸ್ಸಿನೊಳಗಿದ್ದ ದ್ದನ್ನು ತಿಳಕೊಳ್ಳುವದು ಸುಲಭವಲ್ಲೆಂದು ಹೇಳಿದಳು. ಅದನ್ನು ಕೇಳಿ ಮಾಸಾಹೇಬರಿಗೆ ಬಹಳ ಅಸಮಾಧಾನವಾಯಿತು. ತಾವು ಸ್ವತಃ ಒಮ್ಮೆ ಮಗನನ್ನು ಕೇಳಿ ನೋಡಬೇಕೆಂದು ಅವರು ಮಾಡಿದರು; ಆದರೆ ಹಾಗೆ ಮಾಡಲಿಕ್ಕೆ ಅವರಿಗೆ ಒಮ್ಮೆಲೆ ಧೈರ್ಯವಾಗಲೊಲ್ಲದು. ಮಗನು ಮೊದಲಿನಂತೆ ಈಗ ಸರಳ ಮನಸ್ಸಿನಿಂದ ಮನಸ್ಸು ಬಿಚ್ಚಿ ತಮ್ಮ ಸಂಗಡ ಮಾತಾಡುವದಿಲ್ಲವಾದ್ದರಿಂದ, ಈಗ ತಾವು ಕೇಳಿದರೆ ಆತನು ಏನು ಉತ್ತರ ಕೊಡುವನೋ ಎಂದು ಅವರು ಶಂಕಿಸಹತ್ತಿದರು; ಆದರೂ ತಾಯಿಯ ಕರುಳು! ಕೇಳದೆ ಸುಮ್ಮನೆ

ಹ್ಯಾಗೆ ಬಿಡಬೇಕು? ಮಾಸಾಹೇಬರು ಹಾಗೆಯೇ ನಾಲ್ಕೈಂಟುದಿನ ಹೋಗಬಿಟ್ಟು, ಆ ಮೇಲೆ ಒಂದುದಿನ ಮಗನನ್ನು ಕರಕೊಂಡು ಹೋಗಿ—ಬಾಳಾ, ರಣಮಸ್ತ, ನೀನು ಇಷ್ಟು ಉದಾಸೀನನು ಯಾಕಾಗಿರುವೆ? ನಿನ್ನ ಮೋರೆಯ ಮೇಲಿನ ಕಳೆಯೇಹೋಯಿತಲ್ಲ! ನಿನ್ನ ಮನಸ್ಸಿನಲ್ಲಿದ್ದದ್ದನ್ನು ನನ್ನ ಮುಂದೆ ಹೇಳುವದಿಲ್ಲವೆ?'' ಎಂದು ಅತ್ಯಂತ ಕಾರುಣ್ಯದಿಂದ ಕೇಳಿದರೂ ರಣಮಸ್ತಖಾನನು ಉತ್ತರಕೊಡದೆ ಬಹಳ ಹೊತ್ತು ಸುಮ್ಮನೆ ಕುಳಿತುಕೊಂಡನು, ಅದನ್ನು ನೋಡಿ ಮಾಸಾಹೇಬರ ನೇತ್ರಗಳು ಅಶ್ರುಪೂರ್ಣವಾಗಲು, ಅವರು ಗದ್ಗದ ಸ್ವರದಿಂದ ಮತ್ತೆ ಮಗನನ್ನು ಕುರಿತು—"ಮಾತಾಡುವದಿಲ್ಲೇನಪ್ಪಾ? ರಣಮಸ್ತ ಮಾತಾಡುವದಿಲ್ಲವೆ? ನೀನು ಹೀಗೆ ಉದಾಸೀನಮಾಡಿದಬಳಿಕ ನನ್ನನ್ನು ಕೇಳುವರಾರು? ನಿನ್ನ ಸ್ಥಿತಿಯನ್ನು ನೋಡಿ ನನಗೆ ಅನ್ನವು ಸವಿಹತ್ತುವದಿಲ್ಲ. ಅಲ್ಲಾನ ಧ್ಯಾನದಲ್ಲಿಯೂ ಮನಸ್ಸು ನಿಲ್ಲದಾಗಿದೆ;'' ಅನ್ನಲು, ರಣಮಸ್ತಖಾನನು ತಟ್ಟನೆ ತಾಯಿಯನ್ನು ಕುರಿತು—ಮಾಸಾಹೇಬ, ನಿಜವಾಗಿಯಂದರೆ, ನನ್ನ ಮನಸ್ಸಿನ ಅಸಮಾಧಾನಕ್ಕೆ ಬೇರೆ ಕಾರಣವೇನು ಇಲ್ಲವೇ ಇಲ್ಲ. ಅಂದಬಳಿಕ ನಾನೇನು ಕಾರಣವನ್ನು ಹೇಳಲಿ? ನನ್ನ ಮನಸ್ಸಿನ ಅಸಮಾಧಾನದ ಕಾರಣವನ್ನು ನಿಮ್ಮ ಮುಂದೆ ಈ ಮೊದಲೆ ಹೇಳಿಬಿಟ್ಟಿದ್ದೇನೆ. ಬಾದಶಹರು ನನ್ನನ್ನು ಅವಮಾನಗೊಳಿಸಿದ್ದು ನನಗೆ ದುಸ್ಸಹವಾಗಿದೆ. ಇದರ ಹೊರತು ಬೇರೆ ಕಾರಣವೇನೂ ಇರುವದಿಲ್ಲ. ನಾನು ಆವೇಶದಿಂದ ಮುಂದಕ್ಕೆ ಸಾಗುತ್ತಿರುವಾಗ, ಬಾದಶಹರು ನನ್ನ ಕಾಲುಗಳನ್ನೇ ಮುರಿದಂತಾಯಿತು. ನನ್ನ ಮಹತ್ವಾಕಾಂಕ್ಷೆಗಳೆಲ್ಲ ಲಯವಾದವು. ಇನ್ನು ವಿಜಾಪುರದ ರಾಜ್ಯದಲ್ಲಿ ಕೆಲಸಮಾಡದೆ, ಬೇರೆ ಯಾವದೊಂದು ರಾಜ್ಯದಲ್ಲಿ ಕೆಲಸಮಾಡಿ ದೈವವನ್ನು ಪರೀಕ್ಷಿಸಬೇಕೆಂದು ಮಾಡಿದ್ದೇನೆ. ನನಗೆ ಏನೂ ತಿಳಿಯದಾಗಿದೆ. ಒಮ್ಮೆಯಂತೂ ವಿಲಕ್ಷಣಕಲ್ಪನೆಗಳು ಮನಸ್ಸಿನಲ್ಲಿ ಬರುತ್ತವೆ. ನನ್ನ ಮನಸ್ಸಿನಲ್ಲಿದ್ದದ್ದನ್ನು ಈಗ ಸ್ಪಷ್ಟವಾಗಿ ಹೇಳಿದ್ದೇನೆ. ಇನ್ನು ಮೇಲೆ ನನ್ನನ್ನು ಏನೂ ಕೇಳಬೇಡಿರಿ. ಅದರಿಂದ ನನ್ನ ಜೀವಕ್ಕೆ ತಾಪವಾಗುತ್ತದೆ, ಎಂದು ನುಡಿದವನೇ ಅಲ್ಲಿಂದ ತಟ್ಟನೆ ಹೊರಟು ಹೋದನು. ತನ್ನ ತಾಯಿಯು ತಿರುಗೆ ಏನು ಮಾತಾಡುವಳೆಂಬದರ ಹಾದಿಯನ್ನು ಸಹ ಆತನು ನೋಡಲಿಲ್ಲ!

ಮಗನು ಹೀಗೆ ತಟ್ಟನೆ ಹೊರಟುಹೋದದ್ದನ್ನು ನೋಡಿ ಮಾಸಾಹೇಬರಿಗೆ ಬಹಳ ಆಶ್ಚರ್ಯವಾಯಿತು; ಆದರೂ ಆವೇಶದ ಭರದಲ್ಲಿ ಹೋಗಿರುವನು, ಇನ್ನೊಮ್ಮೆಕರಿಸಿ ಸಮಾಧಾನದಿಂದ ನಾಲ್ಕು ಒಳ್ಳೆಯ ಮಾತುಗಳನ್ನು ಹೇಳಿದರೆ

ಕೇಳುವನೆಂದು ಮಾಸಾಹೇಬರು ಸಮಾಧಾನಮಾಡಿಕೊಂಡರು. ಅನಕಾ ಕೆಲವು ದಿವಸ ಆತನನ್ನು ಮಾತಾಡಿಸದೆ ಹಾಗೇಬಿಡಬೇಕೆಂದು, ಅವರು ಮಗನ ಉಸಾಬರಿಯನ್ನು ಬಿಟ್ಟುಬಿಟ್ಟರು; ಆದರೆ ಅದರಿಂದ ಹಿತವಾಗಲಿಲ್ಲ. ರಣಮಸ್ತಖಾನನ ಸ್ಥಿತಿಯು ದಿನದಿನಕ್ಕೆ ಕೆಡುತ್ತಹೋಯಿತು. ಆತನು ರಾತ್ರಿಯಲ್ಲಿ ಸಹ ಮನಬಂದಂತೆ ತಿರುಗಹತ್ತಿದನು. ಅದನ್ನು ನೋಡಿ ಮಾತ್ರ ಮಾಸಾಹೇಬರು ಬಹಳ ಚಿಂತೆಗೊಳಗಾದರು. ಇನ್ನು ಮೇಲೆ ಮಗನನ್ನು ಹಾದಿಗೆ ಹಚ್ಚದಿದ್ದರೆ ಪರಣಾಮವಾಗದೆಂದು ಅವರು ತಿಳಕೊಂಡರು. ಲೈಲಿಯೊಡನೆ ಅವರ ಆಲೋಚನೆಗಳು ನಡೆದವು. ಬರಿಯ ಬಾದಶಹನ ಅಪಮಾನದಿಂದ ಹೀಗಾಗಿರದೆ, ನೂರಜಹಾನಳ ಹಳವಂಡವೇ ಮಗನನ್ನು ಈ ಮನೆಗೆ ತಂದುಬಿಟ್ಟಿತೆಂದು ಮಾಸಾಹೇಬರು ನಿಶ್ಚಯಿಸಿದರು. ನೂರಜಹಾನಳ ಸಂಬಂಧದಿಂದ ಏನಾದರೂ ಹೆಚ್ಚು ಕಡಿಮೆಯಾದ್ದರಿಂದ ಮಗನ ಸ್ಥಿತಿಯು ಹೀಗಾಗಿದೆ; ಆದ್ದರಿಂದ ನಾವಿಬ್ಬರೂ ವಿಜಾಪುರಕ್ಕೆ ಹೋಗಿ ನಿಜವಾದ ಸಂಗತಿಯನ್ನು ತಿಳಕೊಂಡು ಬರೋಣವೆಂದು ಮಾಸಾಹೇಬರು ಲೈಲಿಯೊಡನೆ ಆಲೋಚಿಸಿದರು. ಅವರ ಆ ಆಲೋಚನೆಯು ನಿಶ್ಚಿತವಾಯಿತು. ಆ ನಿರ್ಧಾರದ ಸ್ತ್ರೀಯು ಕೂಡಲೆ ಮಗನನ್ನು ಕರೆಸಿ—"ನಾನು ಲೈಲಿಯನ್ನು ಕರಕೊಂಡು ವಿಜಾಪುರಕ್ಕೆ ಹೋಗಿ ಎಲ್ಲ ಸಂಗತಿಯನ್ನು ತಿಳಕೊಂಡು ಬರುತ್ತೇನೆ." ಎಂದು ಹೇಳಿದಳು. ತನ್ನ ತಾಯಿಯ ಕೈಯಿಂದ ಇನ್ನು ಯಾವ ಕೆಲಸವೂ ಆದೀತೆಂದು ರಣಮಸ್ತಖಾನನಿಗೆ ತೋರಲಿಲ್ಲ; ಆದ್ದರಿಂದ ಆತನು ಮಾಸಾಹೇಬರನ್ನು ಕುರಿತು-"ನೀವು ಹೋಗಿ ಮಾಡುವದೇನು? ಬಾದಶಹರು ತಮ್ಮ ಅಪ್ಪಣೆಯನ್ನು ಎಂದೂ ತಿರುಗಿಸುವವರಲ್ಲ. ಒಂದು ಪಕ್ಷದಲ್ಲಿ ಅವರು ತಮ್ಮ ಅಪ್ಪಣೆಯನ್ನು ತಿರುಗಿಸಿದರೂ, ಅದರಿಂದ ವಿಶೇಷ ಪ್ರಯೋಜನವಾಗದು. ಇದಲ್ಲದೆ ಇಲ್ಲಿ ಇರಲಿಕ್ಕೆ ಈಗ ನನ್ನ ಮನಸ್ಸೂ ಒಡಂಬಡುವದಿಲ್ಲ." ಅನ್ನಲು, ಮಾಸಾಹೇಬರು—ಏನೇ ಆಗಲಿ, ನಾವು ವಿಜಾಪುರಕ್ಕೆ ಹೋಗಿ ಬರುವತನಕ ನೀನು ಸ್ವಸ್ಥವಾಗಿರು. ಕೆಲಸವಾಗುವದಿಲ್ಲೆಂದು ಕಂಡುಬಂದರೆ, ಮುಂದೆ ಏನುಮಾಡಬೇಕೆಂಬದನ್ನು ನಾವಿಬ್ಬರೂ ಕೂಡಿ ಆಲೋಚಿಸೋಣ, ಎಂದು ಬಹಳ ಪ್ರಕಾರವಾಗಿ ಹೇಳಿ, ವಿಜಾಪುರಕ್ಕೆ ಹೋಗಲಿಕ್ಕೆ ಮಗನ ಅನುಮತಿಯನ್ನು ಪಡೆದರು. ರಣಮಸ್ತಖಾನನು ಸಂಗಡ ತಕ್ಕಷ್ಟು ಜನರನ್ನು ಕೊಡಲು, ಆ ನಿಶ್ಚಯದ ಸ್ವಭಾವದ ಹೆಣ್ಣುಮಗಳು ಲೈಲಿಯೊಡನೆ ವಿಜಾಪುರಕ್ಕೆ ಹೋದಳು.

ಮಾಸಾಹೇಬರು ವಿಜಾಪುರಕ್ಕೆ ಹೋದಬಳಿಕ ಇತ್ತ ರಣಮಸ್ತಖಾನನನ್ನು

ಕೇಳುವವರೇ ಇಲ್ಲದಾಯಿತು. ಅವರು ಹೋದ ಮೂರು—ನಾಲ್ಕು ದಿನಗಳ ಮೇಲೆ ರಾಮರಾಜನು, ಹಿಂದಕ್ಕೆ ಒಮ್ಮೆ ಬಂದಂತೆ ನಸಕಿನಲ್ಲಿ ಕುಂಜವನಕ್ಕೆ ಬಂದನು. ಆತನು ತಾನು ಬಂದ ಸುದ್ದಿಯನ್ನು ರಣಮಸ್ತಖಾನನಿಗೆ ಹೇಳಿ ಕಳಿಸಲು, ಖಾನನು ಎದುರಿಗೆ ಬಂದು ರಾಮರಾಜನನ್ನು ವಿನಯದಿಂದ ಕರ ಕೊಂಡು ಹೋದನು. ಆಗ ರಾಮರಾಜನು ರಣಮಸ್ತಖಾನನಿಗೆ—"ಖಾನ ಸಾಹೇಬ, ಪುನಃ ಕುಂಜವನವನ್ನು ನೋಡುವಹಾಗಾದ್ದರಿಂದ ಮತ್ತೆ ಬಂದೆನು; ಇದಕ್ಕೆ ನಿಮ್ಮ ಒಪ್ಪಿಗೆ ಇರುವದಷ್ಟೇ? ಎಂದು ಕೇಳಲು, ರಣಮಸ್ತ ಖಾನನು ಅತ್ಯಂತ ವಿನಯದಿಂದ—ಕುಂಜವನವು ತಮ್ಮದು, ನನ್ನ ಪರವಾ ನಿಗೆಯೇತಕ್ಕೆ? ಅವಶ್ಯವಾಗಿ ಒಳಗೆ ಹೋಗಬಹುದು, ಎಂದು ಹೇಳಿದನು. ಅದಕ್ಕೆ ರಾಮರಾಜನು—ನಡೆಯಿರಿ, ನಾವಿಬ್ಬರೂ ಪುಷ್ಕರಣಿಯ ಕಡೆಗೆ ಹೋ ಗೋಣ. ನಿಮ್ಮೊಡನೆ ನಾನು ಕೆಲವು ಮಾತುಗಳನ್ನು ಆಡಬೇಕಾಗಿದೆ. ಏಕಾಂತಕ್ಕೆ ತಕ್ಕ ಸ್ಥಳವಿದ್ದದ್ದರಿಂದ ಅತ್ತ ನೀವು ಬಂದರೆ ಎರಡೂ ಕೆಲಸಗ ಳಾಗುವವು, ಅನ್ನಲು, ರಣಮಸ್ತಖಾನನು—"ನನ್ನೊಡನೆ ಯಾವ ಮಾತು ಗಳನ್ನಾಡುವನೋ," ಎಂದು ಆಲೋಚಿಸುತ್ತ ರಾಮರಾಜನೊಡನೆ ಹೊರಟನು. ಆತನನ್ನು ಕಟ್ಟಿಕೊಂಡು ರಾಮರಾಜನು ಸಂದಿಗೊಂದಿಗಳು ಕೂಡ ಉಳಿಯು ದಂತೆ ಕುಂಜವನವನ್ನೆಲ್ಲ ತಿರುಗಿದನು. ಇವರಿಬ್ಬರು ಹೀಗೆ ತಿರುಗುವದನ್ನು ನೋಡಿ ರಣಮಸ್ತಖಾನನ ಜನರು ಆಶ್ಚರ್ಯಪಟ್ಟು, ತಮ್ಮೊಳಗೆ ಗುಜುಗುಟ್ಟು ಹತ್ತಿದರು. ಕುಂಜವನದಲ್ಲಿ ಓಡಾಡುತ್ತಿರುವಾಗ ರಾಮರಾಜನು ರಣಮಸ್ತ ಖಾನನಿಗೆ—ನಾನು ನಿಮಗೆ ಮತ್ತೆ ಮತ್ತೆ ಹೇಳುವ ಕಾರಣವಿಲ್ಲ. ಹಿಂದಕ್ಕೆ ಆದದ್ದನ್ನು ನೀವು ಮನಸ್ಸಿನಲ್ಲಿ ಹಿಡಿಯಬೇಡಿರಿ. ನಿಮನ್ನು ನೋಡಿದಾಗಿ ನಿಂದ ನಿಮ್ಮ ವಿಷಯವಾಗಿ ನನ್ನಲ್ಲಿ ಆದರವು ಉತ್ಪನ್ನವಾಗಿದೆ. ನಾನು ಬಾದಶಹರ ಕಡೆಗೆ ಕಳಿಸಿದ ಪತ್ರದಲ್ಲಿ ನಿಮಗೆ ಅನುಕೂಲವಾಗಿಯೇ ಬರೆದಿ ದ್ದೇನು. ಅವನು ಅದನ್ನು ನಿಮಗೆ ಹೇಳಿದರೋ ಇಲ್ಲವೋ? ಅವರು ನಿಮ್ಮಲಗ್ನ ಮಾಡದೆ ಕಳಿಸಿದ್ದಕ್ಕಾಗಿಯೂ, ನಿಮ್ಮ ಮೇಲೆ ಒಬ್ಬ ವಕೀಲನನ್ನು ನಿಯಮಿಸಿ ಕಳಿಸಿವ್ದಕ್ಕಾಗಿಯೂ, ನನಗೆ ಬಹಳ ವಿಷಾದವಾಗಿದೆ. ನಿಮ್ಮಂಥ ತರುಣಶೂರ ರು ವಕೀಲಿಯ ಕೆಲಸದಲ್ಲಿ ಕೊಳೆಯುವದು ನನಗೆ ನೆಟ್ಟಗೆ ಕಾಣುವದಿಲ್ಲ. ನೀವು ಸೈನ್ಯದಲ್ಲಿ ಅಧಿಕಾರವನ್ನು ಪಡೆದು ಪರಾಕ್ರಮವನ್ನು ತೋರಿಸುತ್ತ ಸೇನಾಪತಿ ಯ ಪದವಿಯನ್ನು ಹೊಂದಲಿಕ್ಕೆ ತಕ್ಕವರಾಗಿರುತ್ತೀರಿ. ನಮ್ಮ ದಂಡಿನಲ್ಲಿ ಪಠಾಣರೂ, ಬೇರೆ ಮುಸಲ್ಮಾನರೂ ಬಹು ಜನರು ಇದ್ದಾರೆ. ವಿಜಾಪುರದ ದಂಡಿನಲ್ಲಿಯಾವರೂ ಹಿಂದೂ ದಂಡಾಳುಗಳು ಬಹು ಜನರು ಇರುವರು. ಅವರಲ್ಲಿ

ಉತ್ತರ ಹಿಂದುಸ್ಥಾನದ ರಜಪೂತರು ಸಹ ಇರುವರು. ಅವರು ತೀರ ಸ್ವಲ್ಪ ಜನರು ಇರಬಹುದು ; ಆದರೆ ಇರುವದು ನಿಜ. ನಮ್ಮಲ್ಲಿರುವ ಮುಸಲ್ಮಾನ ಸೈನ್ಯದ ಮೇಲೆ ನಿಮ್ಮಂಥವರು ಅಧಿಕಾರಿಗಳಿದ್ದರೆ, ಬಹಳ ಒಪ್ಪುವದು, ಎಂದು ನುಡಿಯುತ್ತಿರಲು, ರಣಮಸ್ತಖಾನನು ರಾಮರಾಜನನ್ನು ಕೆಕ್ಕರಿಸಿ ನೋಡಹತ್ತಿದನು. ಆಗ ರಾಮರಾಜನು ತನ್ನ ಮಾತನ್ನು ಅಷ್ಟಕ್ಕೆಬಿಟ್ಟು ರಣಮಸ್ತಖಾನನಿಗೆ—ನಿಮಗೆ ನನ್ನ ಮಾತುಗಳು ಸೇರದಿದ್ದರೆ ನಾನು ಆಡುವದಿಲ್ಲ. ಸುಮ್ಮನೆ ಮಾತಿಗೆ ಮಾತು ಬಂದು ಆಡಿದೆನು. ಹೇಳರಿ, ನನ್ನ ಮಾತಿನಲ್ಲಿ ಯಾವ ಮಾತು ನಿಮಗೆ ಸೇರಲಿಲ್ಲ ? ಎಂದು ಕೇಳಲು, ರಣಮಸ್ತಖಾನನು—ನಿಮ್ಮ ಮಾತು ಸೇರದಿರಲಿಕ್ಕೆ ನೀವು ಈಗ ಅಯೋಗ್ಯಮಾತು ಆಡಿದ್ದೀನು ? ನೀವು ಒಂದು ಪಕ್ಷದಲ್ಲಿ ಅಂಥ ಮಾತುಗಳನ್ನು ಆಡಿದರೂ ಅವುಗಳಲ್ಲಿ ಯೋಗ್ಯವಾದವನ್ನಷ್ಟು ಮಾತ್ರ ನಾನು ಗ್ರಹಿಸುವೆನು. ಆಡಿರಿ, ನಿಮ್ಮ ಮಾತುಗಳನ್ನೆಲ್ಲ ನಾನು ಕೇಳುತ್ತೇನೆ, ಸಂಕೋಚವಿಲ್ಲದೆ ಮಾತಾಡಿರಿ, ಎನ್ನಲು, ರಾಮರಾಜನು—ಸುಮ್ಮನೆ ನಾನು ಉಪ್ಪಕ್ಕೆ ಮಾತಾಡುತ್ತ ಹೋಗುವದರಿಂದ ಪ್ರಯೋಜನವೇನು ? ಹತ್ತುಮಾತಿಗೆ ಒಂದಾದರೂ ನೀವು ಉತ್ತರಕೊಟ್ಟರೆ, ಮಾತಾಡಲಿಕ್ಕೆ ನೆಟ್ಟಗೆ. ನಿಮಗೆ ಮಾತಾಡಲಿಕ್ಕೇನು ಬಂದದ್ದು ? ಆಡಿರಿ, ನಿಮಗೆ ತಿಳಿದದ್ದನ್ನು ನೀವು ಸ್ಪಷ್ಟವಾಗಿ ಆಡಿರಿ. ಸುಮ್ಮನೆ ವಿನೋದಕ್ಕಾಗಿ ಆಡುವಮಾತುಗಳಿಂತಲೇ ನಾವು ತಿಳಿಯೋಣ, ಅನ್ನಲು ರಣಮಸ್ತಖಾನನು ರಾಮರಾಜನನ್ನು ನೋಡುತ್ತ ಸುಮ್ಮನೆ ನಿಂತುಕೊಂಡನು.

ರಾಮರಾಜ—ಖಾನಸಾಹೇಬ, ಹೀಗೆ ಆಶ್ಚರ್ಯಪಡುವದೇಕೆ ? ನೀವು ನಮ್ಮ ಸೈನ್ಯದಲ್ಲಿ ಚಾಕರಿಗೆ ನಿಂತುಕೊಳ್ಳಿರಿ ; ನಾನು ನಿಮಗೆ ದೊಡ್ಡ ಅಧಿಕಾರ ಕೊಡುತ್ತೇನೆ. ನಮ್ಮ ಒಂದು ಸರದಾರರ ಪಂಗ್ತಿಯಲ್ಲಿ ನಿಮ್ಮನ್ನು ಕೂಡಿಸುತ್ತೇನೆ. ನಿಮ್ಮನ್ನಂತು ನನ್ನ ಅಂಗರಕ್ಷಕರನ್ನಾಗಿ ನಿಯಮಿಸುವೆನು. ಯಾಕೆ ? ಏನೂ ಮಾತಾಡಲೊಲ್ಲರಿ ? ನಾನೇನು ಅಯೋಗ್ಯ ಮಾತುಗಳನ್ನಾಡಿರುವದಿಲ್ಲ. ನಿಮಗೆ ಅಯೋಗ್ಯವಾಗಿ ಕಂಡರೆ ಹೇಳಿರಿ.

ರಣಮಸ್ತಖಾನ (ಹುಬ್ಬು ಗಂಟಿಕ್ಕಿ)—ನಿಮ್ಮ ಯಾವತ್ತು ಮಾತುಗಳನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಗಿದೆ! ನಮ್ಮ ಒಡೆಯನ ಮೇಲೆ ತಿರುಗಿ ಬೀಳಲಿಕ್ಕೆ ಹೇಳಿದರೆ, ನಾನು ತಿರುಗಿ ಬಿದ್ದೇನೆಂಬ ನಂಬಿಕೆಯಾದರೂ ನಿಮಗೆ ಹ್ಯಾಗಾಯಿತು ?

ರಾಮರಾಜ—ತಿರುಗಿಬೀಳುವದೆ? ಒಡೆಯನಮೇಲೆ ತಿರುಗಿಬೀಳುವದೆ ?

ಖಾನಸಾಹೇಬ! ಒಡೆಯನಮೇಲೆ ತಿರುಗಿ ಬೀಳಿರೆಂದು ಯಾರು ನಿಮಗೆ ಉಪದೇಶಿಸಿದರು? ಅಂಥ ನೀಚತನಕ್ಕೆ ನಾನು ಸರ್ವಥಾ ಹೋಗತಕ್ಕವನಲ್ಲ; ಬಾದಶಹರಿಗೆ ನಿಮ್ಮ ಚಾಕರಿಯು ಮನಸ್ಸಿಗೆ ಬಂದಿರುವದಿಲ್ಲ; ನೀವು ಮನಃಪೂರ್ವಕವಾಗಿ ಸ್ವಾಮಿನಿಷ್ಠೆಯಿಂದ ಮಾಡಿದ ಕೆಲಸದ ಅಭಿನಂದನ ಮಾಡದೆ, ಅವರು ನಿಮ್ಮ ಉಪಹಾಸ ಮಾಡಿದರು; ನಿಮ್ಮ ಸ್ವಾತಂತ್ರ್ಯವನ್ನು ನಷ್ಟಪಡಿಸಿ ನಿಮ್ಮ ಮೇಲಧಿಕಾರಿಯಾಗಿ ಬೇರೊಬ್ಬ ವಕೀಲನನ್ನು ಕಳಿಸಿಕೊಟ್ಟರು; ಆದ್ದರಿಂದ ನೀವು ಪ್ರಸಿದ್ಧರೀತಿಯಿಂದ ಬಾದಶಹರಿಗೆ—"ನಿಮ್ಮ ಚಾಕರಿಯನ್ನು ನಾನು ಒಲ್ಲೆನು" ಎಂದು ಹೇಳಿ ನನ್ನನ್ನು ಕೂಡಿಕೊಳ್ಳಿರೆಂದಿಷ್ಟೇ ನಿಮಗೆ ನಾನು ಹೇಳಿದೆನು. ಈ ಸರಳಮಾರ್ಗದಲ್ಲಿ ಒಡೆಯನ ಮೇಲೆ ತಿರುಗಿಬಿದ್ದ ಹಾಗೆ ಎಲ್ಲಿ ಆಗುತ್ತದೆ? ನಾವು ಮಾಡುವ ಕೆಲಸವು ನಮ್ಮ ಯಜಮಾನನ ಮನಸ್ಸಿಗೆ ಬಾರದಿರುವಾಗ, ಮತ್ತೊಬ್ಬರು ನಮ್ಮನ್ನು ಆದರದಿಂದ ಚಾಕರಿಗೆ ಇಟ್ಟುಕೊಳ್ಳುತ್ತಿರಲು, ನಾವು 'ನಮ್ಮ ಮೊದಲಿನ ಯಜಮಾನನಿಗೆ ಸ್ಪಷ್ಟವಾಗಿ ಹೇಳಿ, ಆ ಎರಡನೆಯವರ ಚಾಕರಿ ಮಾಡುವಲ್ಲಿ ದ್ರೋಹವೇನು? ಇದರಿಂದ ಒಡೆಯನ ಮೇಲೆ ತಿರುಗಿ ಬಿದ್ದಹಾಗೆ ಹ್ಯಾಗಾಯಿತು? ಹೀಗೆ ಹೇಳದೆ ನಾನು ನಿಮಗೆ—"ನೀವು ಬಾದಶಹರ ನೌಕರರಾಗಿಯೇ ಇದ್ದು ಗುಪ್ತರೀತಿಯಿಂದ ನಮಗೆ ಸಹಾಯ ಮಾಡಿರಿ; ನಿಮ್ಮ ಬಾದಶಹರು ನಡಿಸಿದ ಒಳಸಂಚುಗಳನ್ನೂ, ಅವರ ಕಡೆಯ ಗುಪ್ತವಾದ ಸುದ್ದಿಗಳನ್ನೂ ನಮಗೆ ಗುಪ್ತರೀತಿಯಿಂದ ಹೇಳಿರಿ" ಎಂದು ಹೇಳಿದ್ದರೆ, ಆ ಮಾತು ಬೇರೆಯಾಗಿತ್ತು. ಆ ಪ್ರಸಂಗದಲ್ಲಿ ಸ್ವಾಮಿದ್ರೋಹವೆಂಬ ನಿಮ್ಮ ಮಾತಿಗೆ ನಾನು ಒಪ್ಪಿಕೊಳ್ಳುತ್ತಿದ್ದೆನು; ಆದರೆ ಈಗ ನಾನು ನಿಮಗೆ ಹಾಗೆಹೇಳುವದಿಲ್ಲ. ಬಾದಶಹನಿಗೆ ನೀವು—"ನಿಮ್ಮ ಚಾಕರಿಯನ್ನು ನಾನು ಮಾಡುವದಿಲ್ಲೆಂ"ದು ಸ್ಪಷ್ಟವಾಗಿ ತಿಳಿಸಿ, ನೀವು ನಮ್ಮ ಕಡೆಗೆ ಬರಬೇಕೆಂದು ನಿಮಗೆ ಹೇಳುತ್ತೇನೆ. ಹೀಗೆ ಹೇಳಲಿಕ್ಕೆ ನಿಮಗೆ ಪ್ರತಿಬಂಧವೇನು? ನನಗಂತು ಯಾವ ಪ್ರತಿಬಂಧವಿದ್ದಂತೆಯೂ ತೋರುವದಿಲ್ಲ.

ರಣಮಸ್ತಖಾನ (ಸ್ವಲ್ಪ ಸಿಟ್ಟಿನಿಂದ)-ತಮ್ಮ ಎಲ್ಲ ಮಾತುಗಳನ್ನು ನಾನು ಈವರೆಗೆ ಲಕ್ಷಪೂರ್ವಕವಾಗಿ ಕೇಳಿಕೊಂಡೆನು. ಇನ್ನು ಯಾವ ಮಾತು ಹೇಳುವ ಅವಶ್ಯಕತೆಯೂ ಉಳಿದಿರುವದಿಲ್ಲ; ಆದರೆ ನನ್ನಷ್ಟಕ್ಕೆ ನಾನು ಏನು ವಿಚಾರ ಮಾಡುವದನ್ನು ಮಾಡುವೆನು. ತಿರುಗಿ ತಾವು ಈ ಸಂಬಂಧದಿಂದ ನನ್ನನ್ನು ಏನೂ ಕೇಳಬಾರದು.

ರಾಮರಾಜ—ನನ್ನ ಮಾತಿನಿಂದ ತಮಗೆ ಸ್ವಲ್ಪ ಸಿಟ್ಟು ಬಂದಂತೆ ತೋರು

ತ್ತದೆ; ಆದರೆ ನಿಜವಾಗಿ ಸಿಟ್ಟು ಬರಲಿಕ್ಕೆ ಕಾರಣವಿಲ್ಲ. ನೀವು ಬಾದಶಹರ ಚಾಕರಿಗೆ ಬೇಸತ್ತಿರುವದರಿಂದ, ನಿಮ್ಮ ಪರಾಕ್ರಮವನ್ನು ಪ್ರಕಟಿಸಲಿಕ್ಕೆ ಮಾರ್ಗ ದೊರೆಯಬೇಕೆಂದು ಸೂಚಿಸಿದೆನಿಷ್ಟೇ. ನಮಗೆ ನಮ್ಮ ಸೈನ್ಯವಿರುತ್ತದೆ, ಸೇನಾಪತಿಗಳಿರುತ್ತಾರೆ, ಎಲ್ಲ ತರದ ಅನುಕೂಲತೆಗಳೂ ಇರುತ್ತವೆ, ಆದರೂ ಬಾದಶಹನ ಸೈನ್ಯದ ಸ್ಥಿತಿಯನ್ನು ಬಲ್ಲ ಶೂರ ವೀರನೊಬ್ಬನ ಅವಶ್ಯಕತೆಯು ನಮಗಿರುತ್ತದೆ. ಅಂತೇ ನಾನು ನಿಮ್ಮನ್ನು ಕೇಳಿದೆನು. ನೀವು ಒಪ್ಪಿಕೊಳ್ಳದಿದ್ದರೆ ಮತ್ತೆ ಯಾರಾದರೂ ಒಪ್ಪಿಕೊಂಡಾರು, ಇದರೊಳಗೇನು? ಅದಿರಲಿ ಬಿಡಿರಿ, ನಿಮಗೆ ಬೇಡಾಗಿದ್ದರೆ ಆ ಮಾತನ್ನೇ ಬಿಟ್ಟುಬಿಡೋಣ.

ಈ ಮೇರೆಗೆ ನುಡಿದು, ರಾಮರಾಜನು ಸುಮ್ಮನಾಗಿ ಕುಂಜವನವನ್ನು ನೋಡುತ್ತ ಸಾಗಿದನು. ರಣಮಸ್ತಖಾನನೂ ಸುಮ್ಮನೆ ಆತನ ಬೆನ್ನು ಹತ್ತಿ ನಡೆದಿದ್ದನು. ರಾಮರಾಜನು ಯಾವತ್ತು ಕುಂಜವನವನ್ನು ತಿರುವಿ ಹಾಕಿದನು. ಪುಷ್ಕರಣಿಯನ್ನಂತು ಎರಡುಸಾರೆ ಆತನು ಸುತ್ತುವರಿದು ಬಂದನು. ಕೆಲವು ಹೊತ್ತಿನ ಮೇಲೆ ರಣಮಸ್ತಖಾನನು ರಾಮರಾಜನನ್ನು ಕುರಿತು—"ಆಗಲೆ ನೀವು ಪ್ರಶ್ನ ಮಾಡಿದಿರಲ್ಲ? ಅದಕ್ಕೆ ಉತ್ತರವನ್ನು ನಾನು ಈಗ ಕೊಡುತ್ತೇನೆ; ಆದರೆ ಇಲ್ಲಿ ಬೇಡ. ನಮ್ಮ ಬಂಗಲೆಯಲ್ಲಿ ನಡೆಯಿರಿ," ಎಂದು ಹೇಳಲು, ರಾಮರಾಜನು ಉತ್ಸುಕತೆಯಿಂದ ರಣಮಸ್ತನ ಮುಖವನ್ನು ನೋಡಿ ಸಂತೋಷಪಟ್ಟು—ಆಗಲಿ, ಬಂಗಲೆಯಲ್ಲಿಯೇ ಹೇಳಿರಿ, ಎಂದು ಬಂಗಲೆಯ ಕಡೆಗೆ ನಡೆದನು. ಬಂಗಲೆಗೆ ಹೋದ ಬಳಿಕ ರಣಮಸ್ತಖಾನನು ರಾಮರಾಜನನ್ನು ಉಚ್ಚಾಸನದಲ್ಲಿ ಕುಳ್ಳಿರಿಸಿ, ಆತನನ್ನು ಕುರಿತು—ನಾನು ನನ್ನಿಷ್ಟಕ್ಕೆ ಈ ಮಾತಿನ ವಿಚಾರ ಮಾಡುತ್ತೇನೆಂದು ಆಗಲೆ ನಿಮಗೆ ಹೇಳಿದ್ದೆನಲ್ಲವೆ? ಆದರೆ ಈಗ ನನ್ನ ನಿಶ್ಚಯವಾಗಿರುತ್ತದೆ. ಬಾದಶಹನ ಚಾಕರಿಯಿಂದ ನನ್ನ ಗೌರವವು ಹೆಚ್ಚುವದಿಲ್ಲೆಂಬದು ನನಗೆ ಪೂರಾ ಗೊತ್ತಾಯಿತು. ಬಾದಶಹನು ನನ್ನ ಅಪಮಾನ ಮಾಡಿದ್ದಕ್ಕಾಗಿ ಆತನ ಸೇಡು ತೀರಿಸಿಕೊಳ್ಳಬೇಕೆಂಬ ಬುದ್ಧಿಯು ನನ್ನಲ್ಲಿ ಉತ್ಪನ್ನವಾಗಹತ್ತಿದೆ; ಆದ್ದರಿಂದ ನಾನು ನಿಮ್ಮ ಚಾಕರಿಯನ್ನು ಮಾಡಲು ಒಪ್ಪಿಕೊಳ್ಳುತ್ತೇನೆ; ಆದರೆ ಸದ್ಯಕ್ಕೆ ನಾನು ಅದನ್ನು ಗುಪ್ತರೀತಿಯಿಂದ ಮಾಡಲು ಒಪ್ಪಿಕೊಳ್ಳುವೆನು. ಇಂದು ನಾನು ಬಾದಶಹನಿಗೆ—"ನಿಮ್ಮ ಚಾಕರಿಯನ್ನು ನಾನು ಮಾಡುವದಿಲ್ಲೆಂ"ದು ಸ್ಪಷ್ಟವಾಗಿ ಹೇಳುವದಿಲ್ಲ. ನಾನು ಪ್ರಸಿದ್ಧರೀತಿಯಿಂದ ಬಾದಶಹನ ಚಾಕರನೂ, ಗುಪ್ತರೀತಿಯಿಂದ ನಿಮ್ಮ ಚಾಕರನೂ ಆಗುವೆನು. ಹೀಗೆ ಮಾಡದೆ ಪ್ರಸಿದ್ಧರೀತಿಯಿಂದೆ

ನಿಮ್ಮ ಚಾಕರಿಯನ್ನು ಮಾಡಿವರೆ ಆಗತಕ್ಕಷ್ಟು ಲಾಭವಾಗದು. ನಾನು ಇಲ್ಲಿ ಬಾದಶಹನ ವಕೀಲನಾಗಿ ಬಂದಿರುವ ದೃಷ್ಟಿಯಿಂದ ಆಗಬಹುದಾದ ಲಾಭಗಳನ್ನು ಮಾಡಿಕೊಂಡರೇ ನಿಮ್ಮ ಹಿತವು ಸಂಪೂರ್ಣವಾಗಿ ಸಾಧಿಸುವದು. ನಿಮ್ಮ ಹಿತಚಿಂತನ ಮಾಡಬೇಕೆಂದು ನಾನು ನಿರ್ಧರಿಸಿರುವೆನು. ಮೂವರು ಬಾದಶಹರ ಒಳಸಂಚುಗಳ ಗೊತ್ತು ನಿಮಗೆ ಹತ್ತಿದರೇ ಲಾಭವಾಗುವದು. ಇಲ್ಲದಿದ್ದರೆ ಲಾಭವೇನು ಆಗುವದು? ನಿಮ್ಮ ರಾಜ್ಯವನ್ನು ನುಂಗಿ ನೀರು ಹಿಡಿದು, ಅದನ್ನು ತನ್ನೊಳಗೆ ಹಂಚಿಕೊಳ್ಳಬೇಕೆಂದು ಮೂವರೂ ಬಾದಶಹರು ಯತ್ನಿಸಹತ್ತಿದ್ದಾರೆ. ಅವರಒಳಸಂಚುಗಳು ನನಗೆ ಗೊತ್ತಾಗುತ್ತ ಹೋದಂತೆ, ನಾನು ಅವನ್ನು ನಿಮಗೆ ತಿಳಿಸುತ್ತಹೋಗಿ ನಿಮ್ಮನ್ನು ಎಚ್ಚರಗೊಳಿಸುವೆನು. ಅದಲ್ಲದೆ ನಡನಡುವೆ ನನ್ನಿಂದಾಗತಕ್ಕ ಸಹಾಯವನ್ನೂ ಮಾಡುತ್ತ ಹೋಗುವೆನು, ಎಂದು ನುಡಿದು, ರಣಮಸ್ತಖಾನನು ಒಮ್ಮೆಲೆ ಸುಮ್ಮನಾಗಿ ಗೂಢವಿಚಾರದಲ್ಲಿ ಮಗ್ನನಾದವನಂತೆ ಕುಳಿತುಕೊಂಡನು.

ಇಷ್ಟು ಅನುಕೂಲವಾಗಿ ರಣಮಸ್ತಖಾನನು ಮಾತಾಡಬಹುದೆಂದು ರಾಮರಾಜನು ತಿಳಿದಿದ್ದಿಲ್ಲ. ಬಹಳವಾದರೆ ಖಾನನು ಪ್ರಸಿದ್ಧರೀತಿಯಿಂದ ತನ್ನ ಚಾಕರಿಯನ್ನು ಮಾಡಲಿಕ್ಕೆ ಒಪ್ಪಿಕೊಳ್ಳಬಹುದೆಂದು ಆತನು ತಿಳಿದಿದ್ದನು; ಆದರೆ "ಕುರುಡ ಬೇಡಿದ್ದು ಒಂದು ಕಣ್ಣು, ದೇವರು ಕೊಟ್ಟದ್ದು ಎರಡು ಕಣ್ಣು" ಎಂಬಂತೆ ರಣಮಸ್ತಖಾನನು ಈಗ ಮಾತಾಡಿದ್ದನ್ನು ಕೇಳಿ ರಾಮರಾಜನಿಗೆ ಪರಮಾಶ್ಚರ್ಯವಾಯಿತು. ಹೀಗೆ ಆತನಿಗೆ ಆಶ್ಚರ್ಯವಾದದ್ದನ್ನು ತಿಳಿದೋ ಏನೋ ಅನ್ನುವಂತೆ, ರಣಮಸ್ತಖಾನನು ರಾಮರಾಜನನ್ನು ಕುರಿತು—ನನ್ನ ಮಾತನ್ನು ಕೇಳಿ ನೀವು ಆಶ್ಚರ್ಯಪಟ್ಟದ್ದು ಸೋಜಿಗವಲ್ಲ! ಆದರೆ ನಾನು ಪ್ರಸಿದ್ಧರೀತಿಯಿಂದ ನಿಮ್ಮನ್ನು ಕೂಡಿಕೊಂಡರೆ, ಯಾವ ಕಾಲದಲ್ಲಿ ನನ್ನ ಘಾತವಾದೀತೆಂಬದನ್ನು ಹೇಳಲಾಗುವದಿಲ್ಲ; ಯಾಕಂದರೆ ಮೂವರು ಬಾದಶಹರಿಗೂ ಸಂಬಂಧಿಸಿದ ಹಲವು ಗೂಢಸಂಗತಿಗಳು ನನಗೆ ಗೊತ್ತಿರುತ್ತವೆ. ಅವುಗಳನ್ನು ನಾನು ನಿಮಗೆ ತಿಳಿಸಿದರೆ, ಸರ್ವಸ್ವದಘಾತವಾದೀತೆಂದು ತಿಳಿದು ಆ ಮೂವರು ಬಾದಶಹರೂ ಏನಾದರೂ ಹಂಚಿಕೆ ಮಾಡಿ, ನನ್ನನ್ನು ಕೊಲ್ಲಿಸದೆ ಬಿಡರು; ಆದ್ದರಿಂದ ಹೀಗಾಗಗೊಡುವದು ಇಷ್ಟವಲ್ಲ. ನಿಷ್ಕಾರಣವಾಗಿ ನನ್ನ ಮಾನಖಂಡನ ಮಾಡಿದ್ದಕ್ಕಾಗಿ ನಾನು ಬಾದಶಹನ ಸೇಡು ತೀರಿಸಿಕೊಳ್ಳುವದು ಅವಶ್ಯವಾಗಿದೆ. ಇದರ ಸಂಗಡ ಬೇರೆ ಸಾಧಿಸಬೇಕಾಗಿರುವ ನನ್ನ ಕಾರ್ಯಗಳನ್ನು ಸಾಧಿಸಿಕೊಳ್ಳಲಿಕ್ಕೆ ಬರಬಹುದು. ಯೋಗ್ಯಪ್ರಸಂಗದಲ್ಲಿ ನಾನು ನಿಮ್ಮನ್ನು ಕೂಡಿಕೊಂಡೆನೆಂದರೆ, ಚೆನ್ನಾಗಿ ಅವರ ಹಲ್ಲು ಮುರಿದಂತಾಗುವದು.

ಆದ್ದರಿಂದ ಆಗಲೆ ನಿಮಗೆ ಹೇಳಿದಂತೆ, ನಾನು ಪ್ರಸಿದ್ಧರೀತಿಯಿಂದ ಬಾದಶಹರ ನೌಕರನೂ, ಗುಪ್ತರೀತಿಯಿಂದ ನಿಮ್ಮ ನೌಕರನೂ ಆಗಿದುವೆನು. ನನಗೆ ಗೊತ್ತಾದ ಗುಪ್ತಸಂಗತಿಗಳನ್ನು ನಿಮ್ಮ ಮುಂದೆ ಹೇಳುತ್ತ ಹೋಗುವೆನು, ಅದರಂತೆ ನೀವು ಸಿದ್ಧತೆಮಾಡಿಕೊಳ್ಳುತ್ತ ಸಾಗಿರೆಂದರಾಯಿತು. ನನ್ನ ಈ ಕೃತಿಯು ನಮ್ಮ ತಾಯಿಯ ಮನಸ್ಸಿಗೆ ಎಷ್ಟು ಮಾತ್ರಕ್ಕೂ ಬರಲಿಕ್ಕಿಲ್ಲ; ಆಕೆಯು ಇದಕ್ಕೆ ಸರ್ವಥಾ ಒಪ್ಪಿಕೊಳ್ಳಲಾರಳು. ನಾನು ಇಂಥ ಕೃತಿಯಲ್ಲಿ ತೊಡಗಿರುವೆನೆಂಬ ಸುದ್ದಿಯು ಹತ್ತಿದರೆ ಸಾಕು, ಆಕೆಯು ನನ್ನ ಮುಖಾವಲೋಕನ ಮಾಡಲಿಕ್ಕಿಲ್ಲ. ಆಕೆಯು ಒಳ್ಳೇ ನಿರ್ಧಾರದವಳೂ, ಅತ್ಯಂತ ಚತುರಳೂ ಇರುವಳು. ಈ ದಿನ ಆಕೆಯು ಇಲ್ಲಿ ಇಲ್ಲದ್ದರಿಂದಲೇ ನಮಗೆ ಸಮಾಧಾನದಿಂದ ಮಾತಾಡಲಿಕ್ಕೆ ಆಸ್ಪದವುಂಟಾಗಿದೆ. ಆಕೆಯು ಇಲ್ಲಿ ಇರುತ್ತಿದ್ದರೆ, ಇಷ್ಟು ಮಾತಾಡಲಿಕ್ಕೂ ಮಾರ್ಗವಿದ್ದಿಲ್ಲ, ಹೇಳಿರಿ, ನಿಮಗೆ ನನ್ನ ಮಾತು ಮಾನ್ಯವಾಗಿರುವದೋ ಇಲ್ಲವೊ ? ಸದ್ಯಕ್ಕೆ ನನಗೆ ನಿಮ್ಮಿಂದ ಸಂಬಳಬೇಕಾಗಿಲ್ಲ, ಅಧಿಕಾರಬೇಕಾಗಿಲ್ಲ. ನನಗೆ ಬಾದಶಹನ ಸೇಡು ತೀರಿಸಿಕೊಳ್ಳಲಿಕ್ಕೆ ಆಸ್ಪದದೊರೆತರೆ ಸಾಕು. ಯಾಕೆ? ಮಾತಾಡಿರಿ, ಈಗ ಸುಮ್ಮನೆ ಯಾಕೆ ಕುಳಿತುಕೊಂಡಿರಿ ? ಇದರಲ್ಲಿ ನಿಮ್ಮ ಹಾನಿಯೇನೂ ಇರುವದಿಲ್ಲ. ಸಂಪೂರ್ಣ ಲಾಭವೇ ಇರುತ್ತದೆ. ಹೂ! ಯಾಕೆ ಮಾತಾಡಲೊಲ್ಲಿರಿ? ಎಂದು ಆತುರಪಡಹತ್ತಿದನು. ಅದಕ್ಕೆ ರಾಮರಾಜನು ಸಂತೋಷಾತಿಶಯದಿಂದ—ನನಗೆ ಮಾತಾಡಲಿಕ್ಕೆ ನೀವು ಆಸ್ಪದವನ್ನೇ ಇಟ್ಟಿಲ್ಲವೆಂದಬಳಿಕ ನಾನೇನು ಮಾತಾಡಲಿ? ಒಂದು ಬೇಡಿದರೆ ಎರಡು ಸಿಕ್ಕುಂತಾದವು. ಸಂತೋಷವು, ಬಹಳ ಸಂತೋಷವು! ನೆಟ್ಟಗಾಯಿತು, ಬಹಳ ನೆಟ್ಟಗಾಯಿತು! ಇದರಲ್ಲಿ ನನ್ನ ಲಾಭವು ಸಂಪೂರ್ಣವಾಗಿರುತ್ತದೆಂಬದೇನು ನನಗೆ ತಿಳಿಯುವದಿಲ್ಲವೆ ? ನಿಮ್ಮ ಮಾತಿಗೆ ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಎತ್ತ ಕಡೆಯಿಂದೇ ಆಗಲಿ, ನಮ್ಮಿಬ್ಬರ ವಿಚಾರೈಕ್ಯವಾಗಬೇಕೆಂಬದೇ ನನ್ನ ಮುಖ್ಯಹೇತುವು.

ರಾಮರಾಜನು ಹೀಗೆ ಒಪ್ಪಿಕೊಂಡದ್ದನ್ನು ನೋಡಿ ರಣಮಸ್ತಖಾನನು—ಸರಿಸರಿ! ನಿಮ್ಮ ಹೇತುವು ಸಾಧಿಸಿದ ಹಾಗಾಯಿತಷ್ಟೇ? ಆದರೆ ಇನ್ನು ಮುಂದಿನ ಸಂಗತಿಗಳ ವಿಚಾರವನ್ನು ನೆಟ್ಟಗೆ ಮಾಡಲಿಕ್ಕೆ ಬೇಕು. ಆ ವಿಚಾರಗಳೇ ನೆಂಬದನ್ನು ನಾನು ಹೇಳುತ್ತೇನೆ ಕೇಳಿರಿ—ಇನ್ನು ಮೇಲೆ ನೀವು ಇತ್ತ ಕಡೆಗೆ ಎಂದೂ ಬರಬಾರದು. ನೀವು ಮೇಲೆ ಮೇಲೆ ಇತ್ತ ಕಡೆಗೆ ಬರಹತ್ತಿದಿರೆಂದರೆ, ನಮ್ಮ ಜನರು ಏನಾದರೂ ಕುತರ್ಕಗಳನ್ನು ಕಲ್ಪಿಸಿ ಅನರ್ಥವನ್ನುಂಟುಮಾಡು

ವರು. ಮಹಮೂದಖಾನನ ಕಡೆಯಿಂದಲೂ, ಸ್ವತಃ ಬಾದಶಹರ ಕಡೆಯಿಂದಲೂ ನನ್ನ ಮೇಲೆ ಗುಪ್ತಚಾರರು ನಿಯಮಿಸಲ್ಪಟ್ಟಿರಬಹುದು. ಅಂಥ ಗುಪ್ತಚಾರರು ನನ್ನ ಸೇವಕರಲ್ಲಿಯೇ ಇರಲಿಕ್ಕಿಲ್ಲೆಂದು ಯಾರು ಹೇಳಬೇಕು? ಇನ್ನು ಮೇಲೆ ಕೆಲಸಬಿದ್ದಾಗ ನಾನೇ ನಿಮ್ಮ ಕಡೆಗೆ ಬರುತ್ತ ಹೋಗುವೆನು. ಇಲ್ಲವೆ ಪ್ರಸಿದ್ಧರೀತಿಯಿಂದ ನನ್ನನ್ನು ನೀವು ಕರಿಸಿಕೊಳ್ಳುತ್ತ ಹೋಗಿರಿ. ನಾನು ಮಹಮೂದಖಾನನ ಒಪ್ಪಿಗೆಯನ್ನು ಪಡೆದು ತಮ್ಮ ಕಡೆ ಬರುತ್ತ ಹೋಗುವೆನು. ನಿಮ್ಮ ಕಡೆಯ ಸುದ್ದಿಗಳನ್ನು ತಿಳಕೊಳ್ಳಲಿಕ್ಕೆ ಅನುಕೂಲವಾಗಬೇಕೆಂದು ಮಹಮೂದಖಾನನಿಗೆ ಹೇಳಿ, ಎರಡುದಿನಕ್ಕೊಮ್ಮೆ ನಿಮ್ಮ ದರ್ಬಾರಕ್ಕೆ ಬರಲಿಕ್ಕೆ ಆತನಿಂದ ಅಪ್ಪಣೆಯನ್ನು ಒಮ್ಮೆಲೆ ತಕ್ಕೊಂಡು ಇಟ್ಟುಬಿಡುವೆನು. ನಿಮ್ಮ ದರ್ಬಾರದಿಂದ ಇತ್ತಕಡೆಗೆ ಬಂದೆನೆಂದರೆ, ನನ್ನ ಮನಸ್ಸಿಗೆ ಯೋಗ್ಯ ತೋರಿದಂತೆ ಮಹಮೂದಖಾನನಿಗೆ ಏನಾದರೂ ಹೇಳಿ ಬಿಡುವೆನು. ನನ್ನ ಸಲುವಾಗಿ ನೀವು ಯಾವಾಗಲೂ ಸಂಶಯವನ್ನು ವ್ಯಕ್ತ ಮಾಡಿರಿ. ಕೂಡಿದ ದರ್ಬಾರದಲ್ಲಿಯಾದರೂ ನೀವು ನನ್ನ ವಿಷಯವಾಗಿ ಸಂಶಯವನ್ನು ಪ್ರಕಟಿಸತಕ್ಕದ್ದು. ನನ್ನೊಡನೆ ಒಳಗಿನ ಸಂಬಂಧವು ಬೇರೆಯಿರುತ್ತದೆಂಬದರ ಗೊತ್ತನ್ನು ಯಾರಿಗೂ ಹತ್ತಗೊಡಬೇಡಿರಿ. ಈಗ ಸದ್ಯಕ್ಕೆ ನನಗೂ ನಿಮಗೂ ಲಗ್ಗೆ ಜಗಳವಾಯಿತೆನ್ನುವ ಹಾಗೆ ತೋರಿಸತಕ್ಕದ್ದು. ಇಲ್ಲಿಂದ ನೀವು ಸಂತಾಪಗೊಂಡು ಹೋಗುತ್ತೀರೆನ್ನುವ ಹಾಗೆ ಜನರಿಗೆ ತೋರಿಸಿರಿ. ತಿರುಗಿ ನೀವು ಇತ್ತಕಡೆಗೆ ಎಂದೂ ಬರಬೇಡಿರಿ, ಎಂದು ಹೇಳಿದನು. ಅದಕ್ಕೆ ರಾಮರಾಜನು—ಆಗಲಿ, ಹಾಗೆಯೇ ಆಗಲಿ. ಒಳ್ಳೇ ಯೋಗ್ಯ ವಿಚಾರವು! ರಣಮಸ್ತಖಾನ, ಚಿಕ್ಕವಯಸ್ಸಿನ ನಿಮ್ಮಲ್ಲಿ ಇಷ್ಟು ರಾಜಕಾರಣ ಕುಶಲತ್ವವು ಇದ್ದೀತೆಂದು ನನಗೆ ತೋರಿದ್ದಿಲ್ಲ. ಇಂದು ಅದು ನಿಮ್ಮಲ್ಲಿದ್ದದ್ದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ನಿಮ್ಮ ವಿಚಾರವು ಬಹು ಸಮರ್ಪಕವಾಗಿರುತ್ತದೆ. ನಾನು ನಿಮ್ಮ ಮಾತಿನಂತೆ ಅಕ್ಷರಶಃ ನಡೆಯುವೆನು; ಆದರೆ ನೀವು ಮೇಲಿಂದ ಮೇಲೆ ನನ್ನನ್ನು ಕಾಣದೆಮಾತ್ರ ಇರಬೇಡಿರಿ. ನಿಮ್ಮನ್ನು ಕಾಣದಿದ್ದರೆ.....ಎಂದು ನುಡಿಯುತ್ತಿರಲು, ರಣಮಸ್ತಖಾನನು ನಡುವೇ ಬಾಯಿಹಾಕಿ—ಅದರ ಸಂಶಯವನ್ನು ನೀವು ಹಿಡಿಯಬಾರದು. ಅದರಂತೆ ನಾನೆಲ್ಲ ನಡೆದುಕೊಳ್ಳುವೆನು. ಸದ್ಯಕ್ಕೆ ನೀವು ಸಂತಾಪಗೊಂಡಂತೆ ಇಲ್ಲಿಂದ ಹೊರಟು ಹೋಗಿರಿ. ನಮ್ಮಿಬ್ಬರಲ್ಲಿ ವೈಮನಸ್ಸು ಉಂಟಾದ ವರ್ತಮಾನವು ಮಹಮೂದಖಾನನಿಗೂ, ಬಾದಶಹರಿಗೂ ಗುಪ್ತಚಾರರ ಮುಖಾಂತರ ಗೊತ್ತಾಗಲಿಕ್ಕೆ ಬೇಕು. ನೀವು ಅತ್ತ ಹೋದನಂತರ ನಾನು ನಿಮಗೆ

ಬಾಯಿಗೆ ಬಂದಹಾಗೆ ಅಂದೇನು. ಅದನ್ನು ನೀವು ಮನಸ್ಸಿಗೆ ಹಚ್ಚಿಕೊಳ್ಳ ಬೇಡಿರಿ. ತಿರುಗಿ ನನ್ನಮೇಲೆ ಸಿಟ್ಟಾದಂತೆ ತೋರಿಸಿರಿ, ಎಂದು ಹೇಳಿದನು. ಅದಕ್ಕೆ ರಾಮರಾಜನು—ಇಲ್ಲ, ಮನಸ್ಸಿಗೆ ಹಚ್ಚಿಕೊಳ್ಳುವದಿಲ್ಲ. ನಿಮ್ಮ ವಿಷಯವಾಗಿ ನನ್ನಲ್ಲಿ ತಿರಸ್ಕಾರವು ಉತ್ಪನ್ನವಾದಂತೆ ತೋರಿಸುವೆನು. ಇಲ್ಲಿಂದ ನಿಮ್ಮನ್ನು ವಿಜಾಪುರಕ್ಕೆ ಕರಿಸಿಕೊಳ್ಳಬೇಕೆಂದು ಬಾದಶಹನಿಗೆ ಸಹ ತಿಳಿಸುವೆನು, ಎಂದು ನುಡಿದನು. ಮತ್ತೆ ಕೆಲವು ಮಾತು ಕಥೆಗಳು ನಡೆದ ಬಳಿಕ ರಾಮರಾಜನು ಸಂತಾಪದಿಂದ ಬಂಗಲೆಯಿಂದ ಹೊರಬಿದ್ದು, ಸಿಟ್ಟಿನಿಂದ ಉರಿಯುತ್ತ ವಿಜಯನಗರದ ಕಡೆಗೆ ಸಾಗಿದನು.

೧೯ನೆಯ ಪ್ರಕರಣ—ಮಾತೃದ್ರೋಹೋಪಕ್ರಮ.

ಈ ಮೇರೆಗೆ ರಾಮರಾಜನು ಸಿಟ್ಟಿನಿಂದ ಹೋಗುವದನ್ನು ರಣಮಸ್ತಖಾನನ ಜನರು ನೋಡಿ ಸಮಾಧಾನಪಟ್ಟರು. ಅವರಿಬ್ಬರು ಕೂಗಿ ಕೂಗಿ ಮಾತಾಡಿ ಕಲಹ ಬೆಳಿಸಿದ್ದನ್ನು ಕೆಲವರು ಕೇಳಿದ್ದರು. ಇವರಿಬ್ಬರ ಕಲಹವು ಆ ರಣಮಸ್ತಖಾನನ ಜನರಿಗೆ ಬಹು ಇಷ್ಟವಾಗಿ ತೋರಿತು. ಅವರಲ್ಲಿ ಕೆಲವರು—"ನಾವು ಹೀಗೆ ಆಗುವದೆಂದು ಮೊದಲೇ ತರ್ಕಿಸಿದ್ದೆವು" ಎಂದು ಹೇಳಿದರು. ಕೆಲವರು—"ಹೀಗಾದದ್ದು ಬಹಳ ನೆಟ್ಟಗಾಯಿತು. ರಾಮರಾಜನು ಬಹು ಸವಿಮಾತಿನವನಾದದ್ದರಿಂದ ನಮ್ಮ ತರುಣ ಸರದಾರನ ಮನಸ್ಸನ್ನು ಎಲ್ಲಿ ಕೆಡಿಸುವನೋ ಎಂಬ ಅಂಜಿಕೆಯು ನಮಗೆ ಬಹಳವಾಗಿ ಇತ್ತು. ತಾನು ಇಂಥ ದೊಡ್ಡ ರಾಜ್ಯದ ಶ್ರೇಷ್ಠ ಅಧಿಕಾರಿ ಎಂದರೇನು? ಸಂಗಡ ಯಾರನ್ನೂ ಕರಕೊಳ್ಳದೆ ತಾನು ಒಬ್ಬನೇ ನಮ್ಮ ಛಾವಣಿಗೆ ಬರುವದೆಂದರೇನು? ಇದೆಲ್ಲ ಅತನ ಕಪಟನಾಟಕದ ಆರಂಭವೆಂದು ನಾವು ತಿಳಿದಿದ್ದೆವು; ಆದರೆ ಇಂದಿನ ಅವರ ಜಗಳದಿಂದ ಒಂದು ಅರಿಷ್ಟವು ಹಿಂಗಿದಹಾಗಾಯಿತು" ಎಂದು ಮಾತನಾಡಿದರು. ಹೀಗೆ ಒಬ್ಬರು ಒಂದು ವಿಧವಾಗಿ, ಮತ್ತೊಬ್ಬರು ಮತ್ತೊಂದು ವಿಧವಾಗಿ ಮಾತಾಡಿ ಎಲ್ಲರೂ ಸಮಾಧಾನಪಟ್ಟರು; ಆದರೆ ರಣಮಸ್ತಖಾನನಿಗೆ ಮಾತ್ರ ಸಮಾಧಾನವಾಗಿದ್ದಿಲ್ಲ. ರಾಮರಾಜನು ಹೋದ ಬಳಿಕ ಅತನು ವಿಚಾರಮಗ್ನನಾದನು. ಈಗ ತಾನು ನಡಿಸಿದ ಒಳಸಂಚನ್ನು ತನ್ನ ತಾಯಿಗೆ ಹೇಳಬೇಕೋ ಹೇಳಬಾರದೋ ಎಂಬ ವಿಚಾರವು ಅತನಲ್ಲಿ ಉತ್ಪನ್ನವಾಯಿತು. ಈವರೆಗೆ ಅತನು ಹೀಗೆ ಎಂದೂ ಆಲೋಚಿಸದೆ, ನಡೆದ ಸಂಗತಿಗಳನ್ನೆಲ್ಲ ಆಗಾಗ್ಗೆ ಸರಳ ಮನಸ್ಸಿನಿಂದ ತನ್ನ ತಾಯಿಯ ಮುಂದೆ ಹೇಳುತ್ತ, ಆಕೆಯ ಆಲೋಚನೆಗಳನ್ನು ಕೇಳಿಕೊಳ್ಳುತ್ತ ಬಂದಿದ್ದನು. ನೂರಜಹಾನಳೊಡನೆ ಪ್ರೇಮಸಲ್ಲಾಪ

ಗಳೂ, ಪ್ರೇಮಸಂಧಿಯೂ ಆದಂದಿನಿಂದ ಆತನ ಈ ಸ್ಥಿತಿಯು ರೂಪಾಂತರಿಸ ಹತ್ತಿತು. ದಿನದಿನಕ್ಕೆ ಆತನು ಹೆಚ್ಚುಹೆಚ್ಚು ಮೂಕನೂ, ಉದಾಸೀನನೂ ಆಗಹತ್ತಿದನು. ನನ್ನ ತಾಯಿಯು ಒಳ್ಳೆಯ ಚತುರಳು, ತೀಕ್ಷ್ಣದೃಷ್ಟಿಯವಳು. ಮೇಲಾಗಿ ಅತ್ಯಂತ ಸಚ್ಛೀಲಳು, ತಗಲುತಾಟುಗಳನ್ನು ತಡೆಯದವಳು; ಅಂದ ಬಳಿಕ ವಿಶ್ವಾಸಘಾತದ ಮಜಲಿಗೆ ಬಂದಿರುವ ನನ್ನ ನೀಚ ಒಳಸಂಚನ್ನು ಆಕೆ ಹ್ಯಾಗೆ ಒಪ್ಪಿಕೊಂಡಾಳು? ಆಕೆಯು ಒಪ್ಪಿಕೊಳ್ಳದ ಬಳಿಕ ನನ್ನ ಕಾರ್ಯವು ಸಾಧಿಸುವ ಬಗೆ ಹೇಗೆ? ಆದ್ದರಿಂದ ನನ್ನ ವಿಚಾರಗಳನ್ನೂ, ಉದ್ದೇಶವನ್ನೂ ನನ್ನ ಹೊರತು ಬೇರೆ ಯಾರಿಗೂ ಗೊತ್ತಾಗದಂತೆ ನಾನೇ ಎಚ್ಚರಪಡುವದು ಅವಶ್ಯವು, ಎಂದು ಆತನು ನಿಶ್ಚಯಿಸಿದನು. ನೂರಜಹಾನಳು ಬರುವದಕ್ಕಿಂತ ಮೊದಲು ರಣಮಸ್ತಖಾನನ ಪ್ರೇಮವು ಆತನ ತಾಯಿಯಲ್ಲಿಯೇ ಒಟ್ಟುಗೂಡಿತ್ತು; ಆದ್ದರಿಂದ ಆತನಿಗೆ ತನ್ನ ತಾಯಿಯು ಪ್ರತ್ಯಕ್ಷ ದೇವತಾಸ್ತ್ರೀಯಂತೆ ಕಾಣುತ್ತಿದ್ದಳು; ಆದರೆ ಆತನು ನೂರಜಹಾನಳ ಮುಂದೆ "ರಾಮರಾಜನ ಶಿರಸ್ಸನ್ನು ತುಂಡರಿಸಿ ನಿನಗೊಪ್ಪಿಸುವೆನೆಂದು" ಪ್ರತಿಜ್ಞೆ ಮಾಡಿದ ದಿವಸ, ಆ ಪ್ರೇಮದಲ್ಲಿ ಸಮನಾಗಿ ಎರಡು ಭಾಗವಾಗಿ, ಒಂದು ಭಾಗವು ನೂರಜಹಾನಳಲ್ಲಿ, ಒಂದು ಭಾಗವು ಮಾಸಾಹೇಬರಲ್ಲಿ ಹಂಚಲ್ಪಟ್ಟವು. ಮುಂದೆ ರಣಮಸ್ತಖಾನನು ನೂರಜಹಾನಳನ್ನು ಕರಕೊಂಡು ವಿಜಾಪುರಕ್ಕೆ ಹೋದ ಬಳಿಕ, ಅಲ್ಲಿ ತನ್ನ ಕುಲಶೀಲಗಳನ್ನು ಸ್ಪಷ್ಟವಾಗಿ ಹೇಳಿ, ನೂರಜಹಾನಳ ಮನಸ್ಸನ್ನು ಒಲಿಸಲಿಕ್ಕೆ ಅನುಕೂಲವಾಗದಿರಲು, ತನ್ನ ತಾಯಿಯು ಈವರೆಗೆ ತನಗೆ ತನ್ನ ಕುಲವೃತ್ತಾಂತವನ್ನು ಯಾಕೆ ಹೇಳಿರಲಿಕ್ಕಿಲ್ಲೆಂದು ಸಂತಾಪಗೊಳ್ಳುವಾಗ ತನ್ನ ತಾಯಿಯಲ್ಲಿದ್ದ ಆತನ ಪ್ರೇಮದ ಅರ್ಧಭಾಗದಲ್ಲಿ ಕೆಲವು ಭಾಗವು ನೂರಜಹಾನಳ ಪ್ರೇಮದಲ್ಲಿ ಕೂಡಿಕೊಂಡಿತು. ಹೀಗೆ ನೂರಜಹಾನಳ ಪ್ರೇಮಾಂಶವು ದಿನದಿನಕ್ಕೆ ಹೆಚ್ಚಾಗುತ್ತ ಹೋದಂತೆ ರಣಮಸ್ತಖಾನನ ಪ್ರೇಮಾಂಶವು ನೂರಜಹಾನಳಲ್ಲಿ ಒಟ್ಟುಗೂಡುತ್ತ ಹೋಗಿ, ತಾಯಿಯಮೇಲಿನ ಆತನ ಮಮತೆಯು ಕಡಿಮೆಯಾಗಲು ಆತನ ದೂಷಿತ ಮನಸ್ಸಿನಲ್ಲಿ ಸ್ವಾರ್ಥಮೂಲವಾದ ವಿಶ್ವಾಸಘಾತಾದಿ ದುರ್ವಿಚಾರಗಳು ಉತ್ಪನ್ನವಾಗಹತ್ತಿದವು. ಆಯಾಕಾಲದಲ್ಲಿ ಹೀಗೆ ತನ್ನ ಮನಸ್ಸಿನರೂಪಾಂತರವಾದದ್ದು ರಣಮಸ್ತಖಾನನಿಗೆ ಅನುಭವಕ್ಕೆ ಬರಲಿಲ್ಲ. ತನ್ನ ತಾಯಿಯು ವಿಜಾಪುರದಿಂದ ತಿರುಗಿಬರದಿದ್ದರೂ ಚಿಂತೆಯಿಲ್ಲೆಂದು ಆತನು ಭಾವಿಸಹತ್ತಿದನು; ಯಾಕಂದರೆ ತನ್ನ ಕಪಟಕೃತಿಯು ಫಲಿಸಲಿಕ್ಕೆ ತಾಯಿಯ ಸಾನ್ನಿಧ್ಯವು ಆತನಿಗೆ ಘಾತಕವಾಗಿ ತೋರಹತ್ತಿತು! ಆದರೆ ರಣಮಸ್ತಖಾನನ ಈ ತೋರಿಕೆಗೂ ಆತನ ತಾಯಿಯ ಬರುವಿಕೆಗೂ ಏನೂ ಸಂಬಂಧವಿದ್ದಿಲ್ಲ. ಆತನ ತಾಯಿಯು ತಾನು ಬ-

ರುವ ಹಾಗೆ ವಿಜಾಪುರದಿಂದ ಹೊರಟು ಕುಂಜವನಕ್ಕೆ ಒಂದು ದಿನ ಬಂದು ಬಿಟ್ಟಳು.

ಮಾಸಾಹೇಬರು ಬರುವುದರೊಳಗಾಗಿ ರಣಮಸ್ತಖಾನನ ಮನಸ್ಸಿನ ನಿಶ್ಚಯವಾಗಿ ಆತನು ತನ್ನ ಒಳಸಂಚಿನಂತೆ ಕೃತಿಗಳನ್ನು ನಡಿಸಹತ್ತಿದನು. ಮಹಮೂದಖಾನನ ಪರವಾನಿಗೆಯನ್ನು ಪಡೆದು ವಿಜಯನಗರದ ದರ್ಬಾರಕ್ಕೆ ದಿನಾಲು, ಇಲ್ಲವೆ ಒಂದುದಿನ ಬಿಟ್ಟು ಒಂದುದಿನ ಹೋಗಹತ್ತಿದನು. ಮಧ್ಯರಾತ್ರಿಯಲ್ಲಿ ಸಹ ಆತನು ಏಕಸ್ಮಾತ್ತಾಗಿ ವಿಜಯನಗರಕ್ಕೆ ಹೋಗುತ್ತಲಿದ್ದನು. ತನ್ನ ವಿಚಾರವನ್ನು ತನ್ನ ತಾಯಿಗೆ ತಿಳಿಸಲಿಕ್ಕಿಲ್ಲೆಂದು ನಿಶ್ಚಯವನ್ನಂತು ಆತನು ಯಾವಾಗೋ ಮಾಡಿಬಿಟ್ಟಿದ್ದನು. ಮಾಸಾಹೇಬರು ಬಂದಬಳಿಕ ರಣಮಸ್ತಖಾನನು ಒಮ್ಮೆ ಅವರ ದರ್ಶನಕ್ಕೆ ಹೋದನು. ಆಗ ಹೆಚ್ಚಿನ ಮಾತಿಲ್ಲ, ಕಥೆಯಿಲ್ಲ, ಸುಮ್ಮನೆ ಕುಳಿತುಕೊಂಡನು. ತಾವು ಹೋಗುವಾಗ ಮಗನ ಮೋರೆಯ ಮೇಲಿದ್ದ ವರ್ಚಸ್ಸು ಸಹ ಈಗ ಇದ್ದಂತೆ ಮಾಸಾಹೇಬರಿಗೆ ತೋರಲಿಲ್ಲ. ರಣಮಸ್ತಖಾನನು ವಿಜಾಪುರದ ಕಡೆಯ ಸುದ್ದಿಯನ್ನು ಕೇಳುವ ವಿಷಯವಾಗಿಯೂ ಆತುರವನ್ನು ತೋರಿಸದಾದನು. ಇದನ್ನು ನೋಡಿ ಮಾಸಾಹೇಬರಿಗೆ ಬಹಳ ವಿಷಾದವಾಯಿತು. ಅವರಾಗಿಯೇ ಕೇಳಿದ ನಾಲ್ಕು ಮಾತುಗಳನ್ನು ಕೇಳಿಕೊಂಡು ರಣಮಸ್ತಖಾನನು ಸುಮ್ಮನೆ ತಾಯಿಯ ಬಳಿಯಿಂದ ಹೊರಟುಹೋದನು. ಹೆಚ್ಚು ಹೊತ್ತು ಕುಳಿತುಕೊಳ್ಳಲಿಲ್ಲಸಹ. ಹೀಗೆ ಮಗನ ಸ್ಥಿತಿಯು ಯಾಕೆ ಆಗಿರಬಹುದೆಂಬ ವಿಚಾರದಲ್ಲಿ ಮಾಸಾಹೇಬರು ಮತ್ತೆ ತೊಡಗಿದರು. ನೂರಜಹಾನಳ ಕಾಲಲ್ಲಿ ತನ್ನ ಮಗನ ಹಾಡು ಹೀಗಾಗಿದ್ದರೆ, ಆಕೆಯ ಪ್ರಾಪ್ತಿಯಂತು ಅತ್ಯಂತ ದುರ್ಲಭವಾಗಿರುವದರಿಂದ, ಮಗನ ಪರಿಣಾಮವು ನೆಟ್ಟಗೆ ಕಾಣುವುದಿಲ್ಲೆಂದು ಅವರು ಚಿಂತಿಸಹತ್ತಿದರು. ಅವರು ತಮ್ಮ ಸೇವಕರನ್ನು ಕರೆಸಿ--"ನಾವು ಊರಿಗೆ ಹೋದ ಬಳಿಕ ಏನು ನಡೆಯಿತು?" ಎಂದು ಕೇಳಲು, ಅವರು—"ರಾಮರಾಜನು ಕುಂಜವನಕ್ಕೆ ಬಂದಂದಿನಿಂದ ಆತನು ರಣಮಸ್ತಖಾನನೊಡನೆ ಜಗಳಾಡಿಸಿಟ್ಟಿನಿಂದ ಹೊರಟುಹೋದವರೆಗೆ ಯಾವತ್ತು ಸುದ್ದಿಯನ್ನು ಹೇಳಿ, ಮಧ್ಯರಾತ್ರಿಯಲ್ಲಿ ಒಮ್ಮೊಮ್ಮೆ ಖಾನರು ವಿಜಯನಗರದ ಕಡೆಗೆ ಹೋಗುವರೆಂಬದನ್ನೂ ಹೇಳಿದರು. ಅದನ್ನು ಕೇಳಿದ ಬಳಿಕಂತು ಮಾಸಾಹೇಬರು ಮತ್ತಿಷ್ಟು ಸಂಶಯಗ್ರಸ್ತರಾದರು. ಅವರು ಮನಸ್ಸಿನಲ್ಲಿ—ರಾಮರಾಜನೊಡನೆ ಆದ ಜಗಳಕ್ಕೂ, ರಣಮಸ್ತಖಾನನು ಮಧ್ಯರಾತ್ರಿಯಲ್ಲಿ ವಿಜಯನಗರದ ಕಡೆಗೆ ಹೋಗಲಿಕ್ಕೂ ಸಂಬಂಧವೇನು? ಮೇಲಾಗಿ ರಣಮಸ್ತಖಾನನು ದಿನಾಲು, ಇಲ್ಲವೆ ಎರಡುದಿನಗಳಿಗೊಮ್ಮೆ ವಿಜಯನಗರದ ದರ್ಬಾರಕ್ಕೆ ಹೋಗುತ್ತಾನೆಂತಲೂ ಜನರು ಹೇಳು

ತ್ತಾರೆ. ಇದರ ಗೂಢವೇನಿರಬಹುದು? ರಾಮರಾಜನು ತನ್ನ ಸವಿಮಾತುಗಳಿಂದ ಮಗನ ಮನಸ್ಸನ್ನು ಮತ್ತೆ ತಿರುಗಿಸಿಕೊಂಡಿರಬಹುದೇನು? ಅಥವಾ ಜಗಳವೇ ಮೋಸದ್ದಿರುವುದೋ? ಮಧ್ಯರಾತ್ರಿಯಲ್ಲಿ ಮಗನು ಹೋಗಲಿಕ್ಕೆ ಗುಪ್ತರಾಜಕಾರಣವಾಗಲಿ, ಪರಸ್ತ್ರೀಲಂಪಟತ್ವವಾಗಲಿ ಕಾರಣವಾಗಿರಬೇಕು; ಆದರೆ ನೂರಜಹಾನಳ ಪ್ರಾಪ್ತಿಯು ಅಶಕ್ಯವಾಗಿ ತೋರಿದ ಕೂಡಲೆ ಅನ್ಯ ಸ್ತ್ರೀಯಲ್ಲಿ ಲಂಪಟವಾಗುವಷ್ಟು ತನ್ನ ಮಗನು ಚಂಚಲಮನಸ್ಸಿನವನೂ, ಕ್ಷುದ್ರನೂ ಅಲ್ಲೆಂಬದು ಮಾಸಾಹೇಬರಿಗೆ ಗೊತ್ತಿತ್ತು. ಆದ್ದರಿಂದ ಮಗನು ಮಧ್ಯರಾತ್ರಿಯಲ್ಲಿ ವಿಜಯನಗರದ ಕಡೆಗೆ ಹೋಗಲಿಕ್ಕೆ ಗುಪ್ತ ಒಳಸಂಚೇ ಕಾರಣವೆಂದು ಅವರು ತರ್ಕಿಸಿದರು. ರಾಮರಾಜನು ಒಳ್ಳೇ ಸವಿಮಾತಿನವನೆಂದು ಮಾಸಾಹೇಬರು ಜನರಿಂದ ಕೇಳಿದ್ದರಲ್ಲದೆ, ಅವರಿಗೂ ಆ ಮಾತಿನ ಅನುಭವವು ಚೆನ್ನಾಗಿ ಬಂದಿತ್ತು; ಆದ್ದರಿಂದ ರಾಮರಾಜನು ಕಡೆಗೆ ತನ್ನ ಮಗನನ್ನು ಗೊತ್ತಿಗೆ ಹಚ್ಚದೆ ಬಿಡನೆಂದು ತಿಳಿದು, ಬೇಗನೆ ಮಗನನ್ನು ಎಚ್ಚರಗೊಳಿಸಬೇಕೆಂದು ಅವರು ನಿಶ್ಚಯಿಸಿ, ತಾವೇ ಈ ಕೆಲಸವನ್ನು ಮಾಡಬೇಕೆಂದು ಗೊತ್ತುಮಾಡಿದರು. ಮಗನನ್ನು ಯಾವ ಉಪಾಯದಿಂದ ಎಚ್ಚರಗೊಳಿಸಬೇಕೆಂದು ಮಾಸಾಹೇಬರು ಆಲೋಚಿಸುತ್ತಲೇ ಇದ್ದರು. ಅವರ ಪರಮೇಶ್ವರ ಪ್ರಾರ್ಥನೆಯೂ, ಜಪವೂ ಎತ್ತೋ ಹೋದವು. ಒಂದುದಿನ ಅವರು ನಸಿಕಿನಲ್ಲಿ ರಣಮಸ್ತಖಾನನು ಎದ್ದಿರುವನೋ ಇಲ್ಲವೋ ನೋಡಿಬರಲಿಕ್ಕೆ ಲೈಲಿಯನ್ನು ಕಳಿಸಿದರು. ಆದರೆ ಖಾನನು ಇನ್ನೂ ಎದ್ದಿದ್ದಿಲ್ಲ. ನಿನ್ನೆ ಮಧ್ಯರಾತ್ರಿಯಲ್ಲಿ ಹೋದವರು ಬೆಳಗು ಮುಂಜಾನೆ ಬಂದದ್ದರಿಂದ ಇನ್ನೂ ಎದ್ದಿರುವುದಿಲ್ಲೆಂದು ಸೇವಕರು ಹೇಳಿದರು. ಲೈಲಿಯು ಖಾನನನ್ನು ಎಬ್ಬಿಸಲಾರದೆ,-"ಎದ್ದಕೂಡಲೆ ಮಾಸಾಹೇಬರು ಕರೆದಿರುವರೆಂದು ಹೇಳಿಕಳಿಸಿಕೊಡಿರಿ," ಎಂದು ಸೇವಕರಿಗೆ ಹೇಳಿ, ತಿರುಗಿ ಬಂದು ಮಾಸಾಹೇಬರ ಮುಂದೆ ಎಲ್ಲ ಸಂಗತಿಯನ್ನು ಹೇಳಿದಳು.

ಇತ್ತ ರಣಮಸ್ತಖಾನನು ತಾಯಿಯ ಸಂಗಡ ನೆಟ್ಟಗೆ ಮಾತಾಡದೆ ತಾನು ತಪ್ಪನೆ ಹೊರಟುಬಂದದ್ದಕ್ಕಾಗಿ ಪಶ್ಚಾತ್ತಾಪಪಡಹತ್ತಿದನು. ಆ ಪಶ್ಚಾತ್ತಾಪದಲ್ಲಿ ಆ ರಾತ್ರಿ ಅತನಿಗೆ ನಿದ್ದೆಹತ್ತಲಿಲ್ಲ. ಅತನು ಹೀಗೆ ಪಶ್ಚಾತ್ತಾಪಪಡುವಾಗ ತಾಯಿಯ ಒಂದು ತಪ್ಪು ಅತನ ಮನಸ್ಸಿಗೆ ಹೊಳೆಯಲು, ಅತನ ಪಶ್ಚಾತ್ತಾಪವು ಕಡಿಮೆಯಾಗಹತ್ತಿತು. ತನ್ನ ತಾಯಿಯ ಪ್ರೇಮವು ತನ್ನ ಮೇಲೆ ವಿಶೇಷವಿರುತ್ತದೇನೋ ನಿಜ; ಆದರೆ ಆಕೆಯು ತನ್ನ ಮನಸ್ಸಿನೊಳಗಿನ ಮಾತುಗಳನ್ನೆಲ್ಲ ನನ್ನ ಮುಂದೆ ಇಲ್ಲಿಯವರೆಗೆ ಎಲ್ಲಿ ಹೇಳಿದ್ದಾಳೆ? ಆಕೆಯು ನನ್ನ ತಂದೆಯ ಹೆಸರನ್ನು ನನ್ನ ಮುಂದೆ ಯಾಕೆ ಹೇಳಬಾರದು? ಹೀಗೆ ಗುಪ್ತವಾಗಿ

ಇಡುವುದು ಯೋಗ್ಯವೋ? ಈಗ ಕೆಲವು ವರ್ಷಗಳ ಹಿಂದೆ ನಾನು ಅತ್ಯಾಗ್ರಹ ಮಾಡಿದಾಗ ನನ್ನ ಕುಲವೃತ್ತಾಂತವನ್ನು ಲೈಲಿಯ ಕೈಯಿಂದ ಹೇಳಿಸಿದ ಹಾಗೆ ಮಾಡಿದಳು. ಅದರಂತೆ ಈಗ ನಾನಾದರೂ ನನ್ನ ಒಳಸಂಚಿನ ಸುದ್ದಿಯನ್ನು ಮಾಸಾಹೇಬರ ಮುಂದೆ ಹೇಳದಿದ್ದರೆ ತಪ್ಪೇನು? ಎಂದು ಆತನು ತನ್ನ ಸಮಾಧಾನಮಾಡಿಕೊಳ್ಳಹತ್ತಿದನು. ಆತನು ತನ್ನ ತಾಯಿಯಲ್ಲಿ ದೋಷಗಳನ್ನು ಕಲ್ಪಿಸಿ, ತನ್ನ ಸಮಾಧಾನಮಾಡಿಕೊಳ್ಳುವಾಗ ಸರಿ ರಾತ್ರಿಯಾಯಿತು; ಆದರೂ ಆತನಿಗೆ ನಿದ್ದೆ ಬರಲಿಲ್ಲ. ಕೂಡಲೆ ಆತನು ತನ್ನ ಕುದುರೆಗೆ ಜೀನು ಹಾಕಿಸಿ ತರಿಸಿ ವಿಜಯನಗರದ ಕಡೆಗೆ ಒಬ್ಬನೇ ಹೋದವನು ಬೆಳಗುಮುಂಜಾನೆ ಬಂದು ಮಲಗಿಕೊಂಡಿದ್ದನು. ಎರಡು ತಾಸು ಹೊತ್ತು ಏರಿದರೂ ಆತನಿಗೆ ಎಚ್ಚರವಾಗಲಿಲ್ಲ. ಇತ್ತ ಮಾಸಾಹೇಬರಂತು, ಮಗನು ಯಾವಾಗ ಎದ್ದಾನೆಂದು ಚಡಪಡಿಸಹತ್ತಿದರು. ಅವರು ಮಗನು ಎದ್ದಿರುವನೋ ಇಲ್ಲವೋ ನೋಡಿ ಬರಲಿಕ್ಕೆ ಒಂದು ತಾಸಿನಲ್ಲಿ ನಾಲ್ಕುಸಾರೆ ಸೇವಕರನ್ನು ಓಡಿಸಾಡಿದರು; ಆದರೆ ಆತನು ಇನ್ನೂ ಎದ್ದಿದ್ದಿಲ್ಲ. ಮಾಸಾಹೇಬರು ಅತ್ಯಂತ ಆತುರರಾಗಿದ್ದರು. ಅವರ ಮನಸ್ಸಿಗೆ ಸಮಾಧಾನವಾಗಲೊಲ್ಲದು. ಇನ್ನು ಆತನು ಏಳುವ ಹಾದಿಯನ್ನು ನೋಡದೆ ತಾವೇ ಆತನ ಕೋಣೆಯವರೆಗೆ ಹೋಗಿ ಆತನನ್ನು ಎಬ್ಬಿಸಿ, ಹೇಳುವದನ್ನು ಹೇಳಿಬಿಡೋಣ, ಎಂದು ನಿಶ್ಚಯಿಸಿ, ಅವರು ಆತನ ಕೋಣೆಯ ಕಡೆಗೆ ಹೊರಟರು. ಇಂದಿನವರೆಗೆ ಮಾಸಾಹೇಬರು ಹೀಗೆ ಎಂದೂ ಮಾಡಿದ್ದಿಲ್ಲ. ಅವರು ರಣಮಸ್ತಖಾನನ ಮಲಗುವ ಕೋಣೆಯ ಬಾಗಿಲಿಗೆ ಹೋಗಿ ಅಲ್ಲಿದ್ದ ಸೇವಕನಿಗೆ—"ನಿಮ್ಮ ಖಾನರನ್ನು ಎಬ್ಬಿಸಿ, ನಾನು ಬಂದಿದ್ದೇನೆಂದು ಅವರಿಗೆ ಹೇಳು" ಎಂದು ಸೂಚಿಸಿದರು. ಮಾಸಾಹೇಬರು ಬಳಿಯಲ್ಲಿರದಿದ್ದರೆ ಕೂಗಿ ಎಬ್ಬಿಸುವ ಧೈರ್ಯವು ಆ ಸೇವಕನಿಗೆಂದೂ ಆಗುತ್ತಿದ್ದಿಲ್ಲ. ಸೇವಕನು ಮಾಸಾಹೇಬರು ಇದ್ದಾರೆಂಬ ಧೈರ್ಯದಿಂದ ರಣಮಸ್ತಖಾನನನ್ನು ಗಟ್ಟಿಯಾಗಿ ಕೂಗಿ ಎಬ್ಬಿಸಿ—"ಮಾಸಾಹೇಬರು ತಮ್ಮನ್ನು ಕಾಣಲಿಕ್ಕೆ ಬಂದಿದ್ದಾರೆಂದು" ಕೂಗಿ ಹೇಳಿದನು. "ಮಾಸಾಹೇಬರು ಬಂದಿದ್ದಾರೆಂಬ" ಶಬ್ದವು ಕಿವಿಗೆ ಬಿದ್ದಕೂಡಲೆ ರಣಮಸ್ತಖಾನನು ತನ್ನ ಪಲ್ಲಂಗದಿಂದ ಕೆಳಗೆ ಬಂದು ನಿಂತು—"ಬಂದೆನು, ಈಗ ಬಂದೆನು. ನಾನು ಅವರ ಕೋಣೆಗೆ ಬರುತ್ತೇನೆಂದು ಹೇಳು. ಅವರು ಇಲ್ಲಿಯವರೆಗೆ ಬರುವ ಆಯಾಸವನ್ನು ಯಾಕೆ ಮಾಡಿಕೊಂಡರು? ಅವರು ತಮ್ಮ ಕೋಣೆಯನ್ನು ಮುಟ್ಟುವುದರೊಳಗಾಗಿ, ನಾನು ಬಂದೆನೆಂದು ಹೇಳು," ಎಂದು ಗಟ್ಟಿಯಾಗಿ ನುಡಿದು, ಹತ್ತರ ಹೂಜಿಯಲ್ಲಿಟ್ಟಿದ್ದ ನೀರಿನಿಂದ ಬಾಯಿಮುಕ್ಕಳಿಸಿ ಕೊಂಡು ಮೋರೆಯನ್ನು ತೊಳಕೊಂಡನು.

ರಣಮಸ್ತಖಾನನು ತನ್ನ ಸೇವಕನಿಗೆ ಹೇಳಿದ್ದನ್ನು ಮಾಸಾಹೇಬರು ಕೇಳಿ ಕ್ಷಣಮಾತ್ರ ವಿಚಾರಮಗ್ನರಾದರು. ತಾವು ಇಲ್ಲಿಯೇ ಇರಬೇಕೋ, ತಮ್ಮ ಕೋಣೆಗೆ ಹೋಗಬೇಕೋ ಎಂದು ಅವರು ಆಲೋಚಿಸತೊಡಗಿದರು. ಕಡೆಗೆ ಅವರು ತಮ್ಮ ಕೋಣೆಗೆ ಹೋಗುವದೇ ನೆಟ್ಟಗೆ, ಅಲ್ಲಿ ಸಮಾಧಾನದಿಂದ ಮಾತಾಡಲಿಕ್ಕೆ ಅನುಕೂಲವಾದಂತೆ ಬೇರೆ ಸ್ಥಳದಲ್ಲಿ ಆಗಲಿಕ್ಕಿಲ್ಲ, ಎಂದು ನಿಶ್ಚಯಿಸಿ ರಣಮಸ್ತಖಾನನಿಗೆ-"ಹಾಗಾದರೆ ನಾನು ಮುಂದೆ ಹೋಗುತ್ತೇನೆ; ನೀನು ಬೇಗನೆ ಬಾ" ಎಂದು ಹೇಳಲು, ಖಾನನು 'ಹೂ' ಎಂದು ಒಪ್ಪಿಗೆಯನ್ನಿತ್ತನು. ಕೂಡಲೆ ಮಾಸಾಹೇಬರು ತಮ್ಮ ಕೋಣೆಗೆ ಹೋಗಿ ತಮ್ಮ ಆಸನದಲ್ಲಿ ಕುಳಿತುಕೊಂಡರು. ರಣಮಸ್ತಖಾನನು ಅವರ ಬೆನ್ನ ಹಿಂದೆಯೇ ಬಂದನು. ಸಿಡ್ಡಿಗೆಟ್ಟಿದ್ದರಿಂದ ಆತನ ಮುಖವು ನಿಸ್ತೇಜವಾಗಿತ್ತು. ಸದಾ ಚಿಂತಾಮಗ್ನನಾಗಿರುತ್ತಿದ್ದದ್ದರಿಂದ ಅವನ ಕಣ್ಣುಗಳು ಒಳನಟ್ಟಿದ್ದವು. ಆತನ ಉಲ್ಲಸಿತ ವೃತ್ತಿಯು ಎತ್ತೋ ಹೊರಟುಹೋಗಿತ್ತು. ನೂರಜಹಾನಳ ಪ್ರಕರಣವು ಉಪಸ್ಥಿತವಾಗುವದಕ್ಕಿಂತ ಮೊದಲಿನ ರಣಮಸ್ತಖಾನನಲ್ಲಿಯೂ, ಈಗಿನ ರಣಮಸ್ತಖಾನನಲ್ಲಿಯೂ ಭೂಮ್ಯಾಕಾಶದಷ್ಟು ಅಂತರವಾಗಿತ್ತು. ಇದನ್ನು ನೋಡಿ ಮಾಸಾಹೇಬರ ಹೊಟ್ಟೆಯಲ್ಲಿ ಬಹಳ ಕಷ್ಟವಾಯಿತು. ಅವರು ಬಾಯಿಂದ ಮಾತಾಡದೆ ಕೈಚಾಚಿ ಮಗನನ್ನು ಹತ್ತರ ಕರೆದರು. ಆತನ ಬೆನ್ನ ಮೇಲೆ ಕೈಯಿಟ್ಟು, ಆತನ ನಿಸ್ತೇಜವಾದ ಮುಖವನ್ನು ದಿಟ್ಟಿಸಿ ನೋಡಿ, ಅವರು ಆತನನ್ನು ಕುರಿತು ಅತ್ಯಂತ ವಾತ್ಸಲ್ಯದಿಂದ-"ಬಾಳಾ, ರಣಮಸ್ತಾ, ನನ್ನ ಜೀವಕ್ಕೆ ನೀನೊಂದೇ ಆಧಾರತಂತುವೆಂಬದನ್ನು ನೀನು ಅರಿಯೆಯಾ? ನಿನ್ನ ಜೀವಕ್ಕೇನಾಗುತ್ತದೆಂಬದನ್ನು ನನ್ನ ಮುಂದೆ ಹೇಳುವದಿಲ್ಲವೆ? ನನ್ನ ಮೇಲಿದ್ದ ನಿನ್ನ ವಿಶ್ವಾಸವು ಎತ್ತ ಹೋಯಿತು? ನನ್ನನ್ನು ನೀನು ಹೀಗೆ ವಂಚಿಸುವ ಕಾರಣವೇನು? ನಿನ್ನ ಮನಸ್ಸನ್ನು ಯಾವ ಚಿಂತಾರೋಗವು ಆವರಿಸಿತು?" ಎಂದು ಇನ್ನೂ ಏನೇನೋ ಕೇಳುತ್ತಿರಲು, ರಣಮಸ್ತಖಾನನು ನಡುವೇಬಾಯಿ ಹಾಕಿ—ಮಾಸಾಹೇಬರೇ, ನೀವು ನನ್ನನ್ನು ಏನೇನೋ ಕೇಳುವಿರಿ; ಆದರೆ ನನಗೆ ಅವುಗಳ ಉತ್ತರವನ್ನು ಹೇಳಲಿಕ್ಕೆ ಬರುವದಿಲ್ಲ. ನನ್ನ ಜೀವಕ್ಕೆ ಏನಾಗಿದೆ ಎಂಬದು ನನಗೇ ಗೊತ್ತಾಗದಿರಲು, ನಿಮಗೇನು ಹೇಳಲಿ? ನನ್ನ ಜೀವಕ್ಕೇನಾಗುತ್ತದೆಂಬದು ನನಗೇ ನಿಶ್ಚಯವಾಗಿ ತಿಳಿಯಲೊಲ್ಲದು, ಎಂದು ಹೇಳಿದನು. ಹೀಗೆ ಮಗನು ನಡುವೆ ಉತ್ತರ ಕೊಟ್ಟಾನೆಂದು ಮಾಸಾಹೇಬರು ತಿಳಿದಿದ್ದಿಲ್ಲ. ಆತನು ತಮ್ಮ ಮಾತುಗಳನ್ನು ಕೇಳುತ್ತ ಸುಮ್ಮನೆ ಕುಳಿತುಕೊಂಡಾನೆಂದು ಅವರು ಮಾಡಿದ್ದರು. ಅಷ್ಟರಲ್ಲಿ ಮಗನ ಈ ಉತ್ತರವನ್ನು ಕೇಳಿ ಅವರು ಕ್ಷಣಮಾತ್ರ ಸುಮ್ಮನೆ ಕುಳಿತುಕೊಂಡರು. ಆಮೇಲೆ ಅವರು ರಣಮಸ್ತಖಾನನಿಗೆ—ಹೀಗೆ

ನೀನು ಮಾತಾಡಿದರೆ ನನಗೆ ಹ್ಯಾಗೆ ಸಮಾಧಾನವಾಗಬೇಕು? ಸಣ್ಣವನಿರು ವಾಗ ನಿನಗೆ ಮಾತಾಡಲಿಕ್ಕೆ ಬರುತ್ತಿದ್ದಿಲ್ಲ, ಏನಾಗುತ್ತದೆಂಬದನ್ನು ಹೇಳಲಿಕ್ಕೆ ಬರುತ್ತಿದ್ದಿಲ್ಲ. ಆಗ ನೀನು ಅಳುವದನ್ನು ನೋಡಿ ತರ್ಕದಿಂದ ನಿನಗಾದ ಬೇನೆ ಬೇಸರಿಕೆಗಳನ್ನೂ, ಹಸಿವೆನೀರಡಿಕೆಗಳನ್ನೂ, ತಿಳಕೊಂಡು ನಾನು ತಕ್ಕ ಉಪಾ ಯಮಾಡಿ ನಿನ್ನನ್ನು ದೊಡ್ಡವನಾಗಮಾಡಿದೆನು. ಈಗ ನಿನಗೆ ಮಾತಾಡಲಿಕ್ಕೆ ಬರು ತ್ತದೆ, ಹೇಳಲಿಕ್ಕೆ ಬರುತ್ತದೆ ಹೀಗಿದ್ದು ನೀನು-"ನನಿಗೆ ತಿಳಿಯುವದಿಲ್ಲೆಂದು" ಉತ್ತರಕೊಟ್ಟರೆ, ನನಗೆ ಹ್ಯಾಗೆ ಸಮಾಧಾನವಾಗಬೇಕು? ನಿನ್ನ ಮನಸ್ಸಿನೊ ಳಗಿರುವಪನ್ನು ನನಗೆ ಹೇಳಬಾರದೆಂದು ನೀನು ಬುದ್ಧಿಪೂರ್ವಕವಾಗಿ ಬಚ್ಚಿಡು ವದೇನು ನನಗೆ ಗೊತ್ತಾಗುವದಿಲ್ಲವೆ? ಛೀ. ಛೀ. ನೀನು ಹೀಗೆ ಮಾಡಬೇಡ. ನಿನ್ನಸಲುವಾಗಿಯೇ ನಾನು ಪ್ರಾಣಧಾರಣ ಮಾಡಿರುವೆನು. ನಿನ್ನಸಲುವಾಗಿ ಯೇ ಸೋಸಬಾರದ ಕಷ್ಟಗಳನ್ನು ನಾನು ಸೋಸಿದೆನು. ನಿನ್ನಸಲುವಾಗಿಯೇ ನಾನು ಆತ್ಮಹತ್ಯೆಯನ್ನು ಮಾಡಿಕೊಂಡಿರುವದಿಲ್ಲ. ನನ್ನ ಪ್ರಾಣದ ವಿಶ್ರಾಂತಿ ಸ್ಥಾನವು ನೀನು. ಅಂಥ ನೀನು ನನಗೆ ಇಂದು ಎರವಾಗುತ್ತೀಯಾ? ಈವರೆಗೆ ನಮ್ಮಿಬ್ಬರಲ್ಲಿ ಭೇದವಿದ್ದಿಲ್ಲ. ಈಗ ಆ ಭೇದವು ಉಂಟಾಗಿದೆ. ನನ್ನ ಮುಂದೆ ನೀನು ಏನೂ ಮುಚ್ಚಿಕೊಳ್ಳತಕ್ಕವನಲ್ಲ. ಇಂದೇ ಯಾಕೆ ಹೀಗೆ ಮಾಡುತ್ತೀ?

ರಣಮಸ್ತ ಖಾನ—ನಾನೇನು ಮಾಡುತ್ತೇನೆ? ಏನೂ ಮಾಡುವದಿಲ್ಲ.

ಮಾಸಾಹೇಬ—ಛೇ. ಛೇ ಛೇ ನೀನು ಏನೂ ಮಾಡುವದಿಲ್ಲೆಂಬ ಮಾತು ಸುಳ್ಳು, ನೀನು ಈಗ ಏನೋ ಒಳಸಂಚು ನಡಿಸಿರುತ್ತೀ. ನನ್ನ ಮುಂದೆ ಮಾತ್ರ ಅದನ್ನು ಹೇಳುವದಿಲ್ಲ. ಬೇಡ, ಬಚ್ಚಿಡಬೇಡ; ನೀನು ಈಗ ಏನು ಒಳಸಂಚು ನಡಿಸಿರುತ್ತೀಯೆಂಬದನ್ನು ನನ್ನ ಮುಂದೆ ಹೇಳು.

ರಣಮಸ್ತಖಾನ—ಒಳಸಂಚು ಯಾತರದು? ನಾನು ಒಳಸಂಚು ನಡೆಸಿ ರುವೆನೇ? ಯಾರಸಂಗಡ? ನಾನು ಯಾರವನೆಂಬದನ್ನೇ ನನಗೆ ಹೇಳಲಿಕ್ಕೆ ಬಾರದಿರುವಾಗ ನನ್ನ ಒಳಸಂಚನ್ನು ಯಾರು ಕೇಳುವರು? ನನ್ನನ್ನು ಒಳಸಂಚಿ ನಲ್ಲಿ ಕೂಡಿಸಿಕೊಳ್ಳುವವರಾದರೂ ಯಾರು? ಮಾಸಾಹೇಬರೇ, ಸುಮ್ಮನೆ ಇ ಲ್ಲದ್ದೊಂದು ಕಲ್ಪಿಸಿ ನನಗೆ ಪ್ರಶ್ನಮಾಡಬೇಡಿರಿ. ಯಃಕಶ್ಚಿತನಾದ ನಾನು ಎಲ್ಲಿಯಾದರೂ ಹ್ಯಾಗಾದರೂ ಹುಟ್ಟಿರುವಂತೆ, ಯಃಕಶ್ಚಿತನಾದ ನಾನು ಎಲ್ಲಿ ಯಾದರೂ ಹ್ಯಾಗಾದರೂ ಸಾಯುವೆನು! ಬೇರೆಯವರಂತೆ ಮಹತ್ಕೃತ್ಯಗಳನ್ನು ಮಾಡಿ ದೊಡ್ಡಿಸ್ತನವನ್ನು ಪಡೆಯುವದು ನನಗೆ ಶಕ್ಯವಿಲ್ಲ. ನಾನು ಏನಾದರೂ ಮಾಡುತ್ತಿದ್ದರಷ್ಟೇ ನಿಮ್ಮ ಮುಂದೆ ಅದನ್ನು ಮುಚ್ಚುವದು! ನನ್ನಿಂದ ಇಂಥ ಮಹತ್ಕೃತ್ಯವಾದೀತು, ಅಂಥಮಹತ್ಕೃತ್ಯವಾದೀತು ಎಂಬ ಆಶೆಯನ್ನೇ ನೀವು

ಬಿಟ್ಟುಬಿಡಿರಿ. ನನಗೆ ಬೇಕಾಗಿರುವ ಹೆಂಡತಿಯನ್ನು ಸಂಪಾದಿಸಿಕೊಳ್ಳಲಾರದ ನಾನು, ಬೇರೆ ಮಹತ್ಕೃತ್ಯಗಳನ್ನೇನು ಮಾಡೇನು ?

ಮಾಸಾಹೇಬ—ರಣಮಸ್ತ, ನೀನಾಡುವ ಮಾತುಗಳ ಮರ್ಮವು ನನಗೆ ತಿಳಿಯುವದಿಲ್ಲೆಂದು ನೀನು ಭಾವಿಸಬೇಡ. ನೀನು ಯಲ್ಲಿಯಾದರೂ ಹ್ಯಾಗಾದರೂ ಹುಟ್ಟಿ ಯಃಕಶ್ಚಿತನಾಗುವಂತೆ ತೋರಿದ್ದರೆ, ನಿನಗೆ ನಾನು ಜನ್ಮವನ್ನೇ ಕೊಡುತ್ತಿದ್ದಿಲ್ಲ. ಪ್ರತಿಜ್ಞೆಯ ಮೂಲಕ ನಿಜವಾದ ಸಂಗತಿಯನ್ನು ಈಗ ನುಡಿಯದೆ ಸುಮ್ಮನಿರುವ ನನ್ನನ್ನು, ನೀನೂ ಮಾತಿನಿಂದ ಛಲಿಸುವೆಯಾ ? ಆಗಲಿ, ರಣಮಸ್ತ, ನೀನು ಈಗ ಬಹಳ ಜಾಣನಾಗಿರುವೆ. ನಿನ್ನ ತಾಯಿಯ ಯೋಗ್ಯತೆಯು ಈಗ ನಿನಗೆ ಇಷ್ಟು ಕ್ಷುಲ್ಲಕವಾಗಿ ತೋರಹತ್ತಿತಲ್ಲವೇ ? ಹಾಗೇ ಆಗಲಿ. ನೀನು ಯಾವ ಒಳಸಂಚಿನೊಳಗೂ ಇಲ್ಲದಿದ್ದರೆ, ನೀನು ದಿನಾಲು ವಿಜಯನಗರದ ದರ್ಬಾರಕ್ಕೆ ಯಾಕೆ ಹೋಗುತ್ತಿರುವೆ ? ನಿನ್ನೆ ರಾತ್ರಿ ಯಾರಿಗೂ ಹೇಳದೆ ಕೇಳದೆ ಎಲ್ಲಿಗೆ ಹೋಗಿದ್ದೆ ? ಹೀಗೆ ನೀನು ಆಗಾಗ್ಗೆ ರಾತ್ರಿ ಹೊರಗೆ ಹೋಗುವದೇಕೆ ?

ರಣಮಸ್ತಖಾನ—ಯಾಕಂದರೆ, ನನ್ನ ತಲೆಯಮೇಲೆ ಮೆಣಸು ಅರೆಯುವದಕ್ಕಾಗಿ ನಿಯಮಿಸಲ್ಪಟ್ಟಿರುವ ಮುಖ್ಯವಕೀಲನಾದ ಮಹಮೂದಖಾನನ ಅಪ್ಪಣೆಯನ್ನು ಮೀರಲಾರದಕ್ಕಾಗಿ ವಿಜಯನಗರದ ದರ್ಬಾರಕ್ಕೆ ಆಗಾಗೆ ನಾನು ಹೋಗುತ್ತೇನೆ; ಮತ್ತು ರಾತ್ರಿ ನಿದ್ದೆಬಾರದ ಹಾಗಾಗಲು, ಹಲವು ವಿಚಾರಗಳು ಉತ್ಪನ್ನವಾಗಿ ಮನಸ್ಸು ವ್ಯಥೆಪಡುತ್ತದೆ. ಆ ವ್ಯಥೆಯನ್ನು ಸಮಾಧಾನಮಾಡಿಕೊಳ್ಳುವದಕ್ಕಾಗಿ ಎಲ್ಲಿಗಾದರೂ ತಿರುಗಾಡಲಿಕ್ಕೆ ಹೋಗುತ್ತೇನೆ. ಹೀಗೆ ತಿರುಗಾಡುವದರಿಂದ ಮನಸ್ಸಿಗೆ ಸಮಾಧಾನವಾಗುವಕಾರಣ ಯಾವಾಗಲೂ ರಾತ್ರಿ ಹೊರಗೆ ಹೋಗುತ್ತಿರುವೆನು !

ಮಾಸಾಹೇಬ—ಅಪ್ಪಾ, ರಣಮಸ್ತಾ, ನೀನು ನನ್ನ ಸಂಗಡ ಇಷ್ಟು ಸ್ಪಷ್ಟವಾಗಿ ಮಾತಾಡೀಯೆಂದು ನಾನು ತಿಳಿದಿದ್ದಿಲ್ಲ. ಆಗಲಿ, ಹ್ಯಾಗಿದ್ದರೂ ಬಿಟ್ಟುಹೋಗುವಮಾತಲ್ಲ. ನಿನ್ನ ಹೊರತು ನನಗೆ ಗತಿಯಿಲ್ಲ. ಆದ್ದರಿಂದ ನಿನ್ನ ಮನಸ್ಸಿನಲ್ಲಿ ಬರುವ ವಿಚಾರಗಳಾದರೂ ಯಾವವು ಹೇಳು. ಅವುಗಳ ಸಂಬಂಧದಿಂದ ನನಗೇನಾದರೂ ಉಪಾಯಗಳು ತೋಚಿದರೆ ಹೇಳುವೆನು. ನಾನು ನಿನ್ನ ಸುಖ-ದುಃಖಗಳ ಪಾಲುಗಾರಳಾಗಿರುವದಿಲ್ಲವೇ ? ಸ್ವತಃ ನನ್ನ ಸುಖ-ದುಃಖಗಳೇನಿರುವವು ಹೇಳು? ನಿನ್ನ ಸುಖ-ದುಃಖಗಳೇ ನನ್ನ ಸುಖ-

ದುಃಖಗಳು! ಈ ಮಾತು ಚಿಕ್ಕಂದಿನಿಂದಲೂ ನಿನ್ನ ಅನುಭವಕ್ಕೆ ಬಂದಿದೆ. ಸಣ್ಣವನಿರುವಾಗ ನೀನು ಸುಖದಿಂದಿದ್ದರೆ ನಾನು ಸುಖದಿಂದಿರುತ್ತಿದ್ದೆನು, ನೀನು ದುಃಖದಿಂದಿದ್ದರೆ ನಾನು ದುಃಖದಿಂದಿರುತ್ತಿದ್ದೆನು. ಈಗ ಮಾತ್ರ ನಿನ್ನ ಸುಖ-ದುಃಖದ ಪಾಲನ್ನು ನನಗೆ ಯಾಕೆ ಕೊಡದಾದೆ?

ರಣಮಸ್ತಖಾನ—ಮಾಸಾಹೇಬ, ನಾನು ಅಜ್ಞಾನಿಯಾಗಿರುವತನಕ ನನ್ನ ಸುಖದುಃಖದ ಪಾಲನ್ನು ನಿಮಗೆ ಕೊಡುವದು ಬಿಡುವದು ನನ್ನ ಕೈಯೊಳಗಿದ್ದಿಲ್ಲ. ಈಗ ನನಗೆ ಚನ್ನಾಗಿ ತಿಳಿಯುತ್ತದೆ. ನಾನು ತರಬದುವಹಾಗಾಗಿದ್ದೇನೆ. ನನಗೆ ಈಗ ಲೇಶವಾದರೂ ಸುಖವಿಲ್ಲದೆ ಬರಿಯ ದುಃಖವೇ ಆಗುತ್ತಿರಲು, ನಿಮ್ಮನ್ನು ಬರಿಯ ದುಃಖಕ್ಕೆ ಪಾಲಗಾರರನ್ನು ನಾನು ಯಾಕೆ ಮಾಡಲಿ? ನಾನು ಸಣ್ಣವನಿರುವಾಗ ನನ್ನ ಬಾಲಲೀಲೆಯಿಂದ ನನಗೂ ನಿಮಗೂ ಕೂಡಿಯೇ ಸುಖವಾಗುತ್ತಿರಬಹುದು; ನನ್ನ ಬೇನೆ ಬೇಸರಿಕೆಗಳಿಂದ ನನಗೂ ನಿಮಗೂ ಕೂಡಿಯೇ ದುಃಖವಾಗುತ್ತಿರಬಹುದು; ಆದರೆ ನನಗೆ ಈಗ ಸುಖವಿಲ್ಲ. ಹೆಜ್ಜೆ ಹೆಜ್ಜೆಗೆ ನನ್ನ ಮಾನಹಾನಿಯಾಗುತ್ತದೆ. ನನಗೆ ಬೇಕಾಗಿರುವ ವಸ್ತುವು ದೊರೆಯುವದಿಲ್ಲ. ಇದರಿಂದ ನನ್ನ ಮನಸ್ಸು ಯಾವಾಗಲೂ ಉದ್ವಿಗ್ನವಾಗಿರುತ್ತದೆ; ಅಂದಬಳಿಕ ನನ್ನ ದುಃಖದ ಕಾರಣವನ್ನೆಲ್ಲ ನಿಮಗೆ ಹೇಳಿ ಸುಮ್ಮನೆ ನಿಮ್ಮ ಮನಸ್ಸನ್ನು ಯಾಕೆ ಉದ್ವಿಗ್ನವಾಗಿ ಮಾಡಬೇಕು? ನನ್ನ ಮಾರ್ಗದಲ್ಲಿರುವ ತೊಂದರೆಗಳು ನನಗೇ ಗೊತ್ತು, ಅವು ನಿಮಗೆ ಹ್ಯಾಗೆ.... (ನಡುವೆ ಅಷ್ಟಕ್ಕೆ ಸುಮ್ಮನಾಗಿ ಮತ್ತೆ) ಇನ್ನು ಮುಂದೆ ನನ್ನ ಉಸಾಬರಿಯನ್ನು ಬಿಟ್ಟುಬಿಡಿರಿ. ಪರಮೇಶ್ವರ ಚಿಂತನದಲ್ಲಿ ಕಾಲಹರಣಮಾಡುವ ನಿಮ್ಮ ಕ್ರಮವನ್ನು ಹಾಗೆಯೇ ನಡಿಸಿರಿ. ಅದರಿಂದಲೇ ನಿಮಗೆ ಸುಖವಾಗುವದು. ನನ್ನ ಬೆನ್ನು ಹತ್ತುವದರಿಂದ ನಿಮಗೆ ಸುಖವಾಗಲಿಕ್ಕಿಲ್ಲ. ನನ್ನ ಕರ್ಮವನ್ನು ನಾನು ಭೋಗಿಸುವೆನು. ನನ್ನ ಚಿಂತೆಯನ್ನು ನೀವು ಬಿಟ್ಟುಬಿಡಿರಿ ನೋಡೋಣ. ನನ್ನಿಂದ ನಿಮಗೆ ಎಂದಿಗೂ ಸುಖವಾಗದು. ಇನ್ನು ನಾನು ಹೋಗುವೆನು. ನೀವು ಕರೆದದ್ದರಿಂದ ನಾನು ನೆಟ್ಟಗೆ ಮೋರೆಯನ್ನು ಸಹ ತೊಳಕೊಳ್ಳದೆ ಹಾಸಿಗೆಯಿಂದ ಎದ್ದ ಕೂಡಲೇ ಹಾಗೆಯೇ ಬಂದಿದ್ದೇನೆ.

ಈ ಮೇರೆಗೆ ನುಡಿದು ರಣಮುಸ್ತಖಾನನು ಎದ್ದು ಹೋಗಿಬಿಟ್ಟನು. ಆತನು ತನ್ನ ತಾಯಿಯಕಡೆಗೆ ಹೊರಳಿ ಸಹ ನೋಡಲಿಲ್ಲ. ಇದನ್ನು ನೋಡಿ ಮಾಸಾಹೇಬರು ಆಶ್ಚರ್ಯಮಗ್ನರಾಗಿ ಸ್ತಬ್ಧವಾಗಿ ಕುಳಿತುಬಿಟ್ಟರು! ತಾವು ಮಗ

ನೊಡನೆ ನಡಿಸುವ ಸಂಭಾಷಣದ ಪರ್ಯವಸಾನವು ಹೀಗಾದೀತೆಂದು ಅವರಿಗೆ ತೋರಿದ್ದಿಲ್ಲ. ತಮ್ಮ್ಯ ಮಗನು ತಮ್ಮ್ಯ ಸಂಗಡ ಇಷ್ಟು ಔದಾಸೀನ್ಯದಿಂದಲೂ, ನೈಷ್ಠುರ್ಯದಿಂದಲೂ, ಕಠೋರತನದಿಂದಲೂ ನಡೆದುಕೊಂಡಾನೆಂದು ಅವರು ಕನಸುಮನಸುಗಳಲ್ಲಿ ಎಣಿಸಿದ್ದಿಲ್ಲ. ಅವರ ಕಲ್ಪನೆಗೆ ಮೀರಿದ ವಿಷಯವನ್ನು ಅವರು ಇಂದು ಕಣ್ಣಿನಿಂದ ನೋಡಿದರು, ಕಿವಿಯಿಂದ ಕೇಳಿದರು, ಮನಸ್ಸಿನಿಂದ ಅನುಭವಿಸಿದರು. ಅವರು ಅತ್ಯಂತ ಶಾನ್ತಹೃದಯರಾದದ್ದರಿಂದ ಮಗನು ಹೊರಟುಹೋದದ್ದು ಸಹ ಅವರಿಗೆ ಗೊತ್ತಾಗಲಿಲ್ಲ. ಐದು ಪಳವಾಯಿತು, ಹತ್ತು ಪಳವಾಯಿತು, ಗಳಿಗೆಯಾಯಿತು, ನಾಲ್ಕು ಗಳಿಗೆಯಾಯಿತು, ಆದರೂ ಅವರು ಹಾಗೆಯೇ ಸ್ತಬ್ಧವಾಗಿ ಕುಳಿತಿದ್ದರು. ಮುಂದೆ ಅವರು ಎಚ್ಚತ್ತು ಮಗನ ಸ್ಥಿತಿಯನ್ನು ಕುರಿತು ಆಲೋಚಿಸತೊಡಗಿದರು. ಮಾಸಾಹೇಬರು ಒಳ್ಳೇ ಚತುರರು, ಬಹು ವಿಚಾರವಂತರು, ದೂರದರ್ಶಿಗಳು, ಶಾಂತಸ್ವಭಾವದವರು. ಅವರು ವಿಚಾರದ ಕೊನೆಯಲ್ಲಿ ತಮ್ಮ್ಯ ಮಗನು ಬಾದಶಹನ ಸೇಡು ತೀರಿಸಿಕೊಳ್ಳುವದಕ್ಕಾಗಿ ರಾಮರಾಜನ ಸಂಗಡ ಒಳಸಂಚು ನಡೆಸಿರುವದೇ ನಿಶ್ಚಯವೆಂದು ತರ್ಕಿಸಿ, ಅವರ ದೋಷದ ಉಪಾಯಗಳನ್ನು ಯೋಚಿಸಹತ್ತಿದರು!

---

೨೦ ನೆಯ ಪ್ರಕರಣ—ದುಸ್ವಪ್ನವು.

ವಾಚಕರು ಮಾಸಾಹೇಬರ ಇಲ್ಲಿಯ ವರೆಗಿನ ಆಚರಣೆಯನ್ನು ನೋಡಿರುವದರಿಂದ, ಅವರ ಯೋಗ್ಯತೆಯನ್ನು ಕುರಿತು ಹೆಚ್ಚಿಗೆ ಬರಿಯಲವಶ್ಯವಿಲ್ಲ. ಮಾಸಾಹೇಬರು ಒಮ್ಮೆ ನಿಶ್ಚಯಮಾಡಿದರೆಂದರೆ, ತಿರುಗಿ ಹಿಂದಕ್ಕೆ ಸರಿಯುತ್ತಿದ್ದಿಲ್ಲ. ತಮ್ಮ್ಯ ಮಗನ ಕೃತಿಗಳನ್ನು ಗುಪ್ತರೀತಿಯಿಂದ ನೋಡಿಸಿ ಅತನ ಒಳಸಂಚಿನ ಸ್ವರೂಪವನ್ನು ತಿಳಕೊಳ್ಳಬೇಕೆಂದು ನಿಶ್ಚಯಿಸಿದ ಕೂಡಲೆ ಅವರು ರಣಮಸ್ತಖಾನನ ನಂಬಿಗೆಯ ಸೇವಕನಾದ ನಜೀರನನ್ನು ಕರೆಸಿ ಅತನಿಂದ ಆಣೆಮಾಡಿಸಿ, ಅತನಿಗೆ ತಮ್ಮ್ಯ ಆಣೆಯನ್ನಿಟ್ಟು ಅತನನ್ನು ಕುರಿತು—"ನಜೀರ, ನಾನು ಈಗ ಹೇಳುವ

ಕೆಲಸವನ್ನು ರಣಮಸ್ತಖಾನನಿಗೆ ಗೊತ್ತಾಗದಂತೆ ನೀನು ಮಾಡತಕ್ಕದ್ದು" ಎಂದು ಹೇಳಿದರು. ಮಾಸಾಹೇಬರಮೇಲೆ ಎಲ್ಲ ಜನರ ಭಕ್ತಿಯು. ಅವರ ಆಜ್ಞೆಗಳನ್ನು ಪಾಲಿಸಲಿಕ್ಕೆ ಎಲ್ಲರು ಆತುರರು. ಬಹಳವೇಕೆ, ಅವರ ಅಪ್ಪಣೆಯನ್ನು ಪಾಲಿಸುವ ಪ್ರಸಂಗವು ಬರಬಹುದೋ ಎಂದು ಎಲ್ಲರು ಹಾದಿಯ ನೋಡುತ್ತಿದ್ದರೆಂದು ಹೇಳಬಹುದು. ಅಂದಬಳಿಕ ನಜೀರನು ಮಾಸಾಹೇಬರ ಅಪ್ಪಣೆಯನ್ನು, ಅದರಲ್ಲಿ ಅವರು ಆಣೆಯಿಟ್ಟು ಮಾಡಿದ ಅಪ್ಪಣೆಯನ್ನು ಈಗ ಹ್ಯಾಗೆ ಪಾಲಿಸದೆಯಿದ್ದಾನು? ಆತನು ಮಾಸಾಹೇಬರನ್ನು ಕುರಿತು—"ಮಾಸಾಹೇಬರೇ, ತಾವು ಹೇಳಿದರೆ ಪ್ರಾಣವನ್ನರ್ಪಿಸಲಿಕ್ಕೂ ನಾನು ಸಿದ್ಧನಾಗಿರುವಾಗ, ಉಳಿದ ಕೆಲಸಗಳ ಪಾಡೇನು? ತಾವು ಹೇಳುವದೊಂದೇ ತಡ. ಇನ್ನು ಗೌಪ್ಯವಾಗಿಡುವ ಸಂಬಂಧದಿಂದ ಕೇಳಿದರೆ, ಈ ನಾಲಿಗೆಯು ಆ ಮಾತನ್ನು ಎಂದಿಗೂ ಉಚ್ಚರಿಸಲಿಕ್ಕಿಲ್ಲ. ಬೇಕಾದರೆ ನಿಮ್ಮ ನಂಬಿಗೆಗಾಗಿ ನನ್ನ ನಾಲಿಗೆಯನ್ನು ಕಿತ್ತು ಈಗ ನಿಮ್ಮ ಮುಂದೆ ಇಡುತ್ತೇನೆ" ಎಂದು ಹೇಳಿದನು. ನಜೀರನ ಈ ಮಾತುಗಳನ್ನು ಕೇಳಿ ಮಾಸಾಹೇಬರಿಗೆ ಬಹಳ ಸಂತೋಷವಾಯಿತು. ಅವರು ನಜೀರನಿಗೆ—"ನೀನು ಅಂಥ ಮನುಷ್ಯನೆಂತಲೇ ನಿನ್ನನ್ನು ಕರೆಸಿದ್ದೇನೆ. ಕೆಲಸವೇನು ಬಹಳವಿಲ್ಲ. ಇಂದಿನರಾತ್ರಿಯಲ್ಲಿ ಅಥವಾ ನಾಳಿನ ರಾತ್ರಿಯಲ್ಲಿ ನಿಮ್ಮ ಒಡೆಯನು ಹೊರಬಿದ್ದ ಕೂಡಲೆ, ನೀನು ಆತನಿಗೆ ಗೊತ್ತಾಗದಂತೆ ಆತನ ಬೆನ್ನಹತ್ತಿಹೋಗಿ ಆತನು ಯಾವದಿಕ್ಕಿಗೆ ಹೋಗುತ್ತಾನೆಂಬದನ್ನು ನನಗೆ ಬಂದು ಹೇಳು. ಆತನು ಕುದುರೆಯಮೇಲಿಂದ ಹೋಗುವವನು, ನೀನು ಕಾಲಲ್ಲಿ ನಡೆದು ಹೋಗುವವನು; ಆದ್ದರಿಂದ ದಿಕ್ಕುನೋಡಿಕೊಂಡು ಬರುವದರ ಹೊರತು ಹೆಚ್ಚಿನಕೆಲಸವೇನು ನಿನ್ನಿಂದ ಆಗಲಿಕ್ಕಿಲ್ಲ; ಕುದುರೆಹತ್ತಿ ಹೋಗುವಂತೆ ನಿನಗೆ ನಾನು ವ್ಯವಸ್ಥೆಮಾಡಿಕೊಡುತ್ತಿದ್ದೇನು. ಆದರೆ ರಾತ್ರಿಯಲ್ಲಿ ಅದು ರಣಮಸ್ತಖಾನನಿಗೆ ಗೊತ್ತಾಗದೆ ಹೋಗಲಿಕ್ಕಿಲ್ಲ. ಆದ್ದರಿಂದ ಕಾಲಿನಿಂದ ನಡೆದುಹೋಗಲಿಕ್ಕೆ ಶಕ್ಯವಿದ್ದಮಟ್ಟಿಗೆ ನೀನು ನಡೆದುಹೋಗಿ, ದಿಕ್ಕನ್ನಷ್ಟು ತಿಳಿದುಕೊಂಡು ಬಾ, ಆ ಮೇಲೆ ಏನು ಮಾಡಬೇಕೆಂಬದನ್ನು ನಿನಗೆ ಹೇಳುತ್ತೇನೆ, ಎಂದು ಹೇಳಿದರು.

ನಜೀರನು ಮಾಸಾಹೇಬರ ಮಾತಿಗೆ ಸಂತೋಷದಿಂದ ಒಪ್ಪಿಕೊಂಡುಹೋದನು; ಆದರೆ ಮಾಸಾಹೇಬರು ಅಷ್ಟಕ್ಕೇ ಸ್ವಸ್ಥವಾಗಿ ಕುಳುತುಕೊಳ್ಳಲಿಲ್ಲ. ನಜೀರನು ಹೇಳುವ ಸುದ್ದಿಯು ನಿಜವೆಂಬದನ್ನು ಬೇರೆ ಸಾಕ್ಷಿಯಿಂದ ಮನಗಾಣುವದು ಅವಶ್ಯವೆಂದು ತಿಳಿದು, ಅವರು ತಮ್ಮ ಸೇವಕರಲ್ಲಿ ನಂಬಿಗೆಯವನಾದ ಕರೀಮಬಕ್ಷನೆಂಬವನನ್ನು ಕರೆದು ಅವನಿಗೊಂದು ಕೆಲಸವನ್ನು

ಒಪ್ಪಿಸಿದರು. ಆತನು ಈದಿನ ಸಂಜೆಗೇ ವಿಜಯನಗರದ ಅರ್ಧ ಹಾದಿಯ ಮೇಲೆ ಎಲ್ಲಿಯಾದರೂ ಕುಳಿತು, ರಣಮಸ್ತಖಾನನು ರಾತ್ರಿ ಆ ಹಾದಿಯಿಂದ ಹೋಗುವನೋ ಹೇಗೆಂಬದನ್ನು ತಿಳಿದುಬಂದು ಮಾಸಾಹೇಬರಿಗೆ ಹೇಳಬೇಕಾಯಿತು. ಕರೀಮಬಕ್ಷನೂ ಮಾಸಾಹೇಬರ ಮಾತಿಗೆ ಸಂತೋಷದಿಂದ ಒಪ್ಪಿಕೊಂಡು, ಇಳಿಯ ಹೊತ್ತಾದಕೂಡಲೆ ವಿಜಯನಗರದ ಹಾದಿಯನ್ನು ಹಿಡಿದನು. ಇವರಿಬ್ಬರೂ ತಮ್ಮ ಮಾತಿಗೆ ಒಪ್ಪಿಕೊಂಡದ್ದಕ್ಕಾಗಿ ಮಾಸಾಹೇಬರಿಗೆ ಬಹಳ ಸಂತೋಷವಾಯಿತು. ಯಾವಾಗ ಹೊತ್ತು ಮುಣುಗೀತೆಂದು ಅವರು ಹಾದಿಯನ್ನೋಡುತ್ತ ಕುಳಿತುಕೊಂಡರು. ಇಂದು ಅವರ ಜಪತಪಗಳೆಲ್ಲ ಹಿಂದಕ್ಕೆ ಬಿದ್ದವು. ಪುತ್ರದೇವನ ಮುಂದೆ ಯಾವ ದೇವರೂ ಸುಳಿಯದಾದರು! ಮಗನು ರಾಮರಾಜನ ಪಾಶದಲ್ಲಿ ಸಿಕ್ಕಿಕೊಂಡನೆಂದು ಅವರು ತಿಳಿದುಕೊಂಡುಬಿಟ್ಟಿದ್ದರು. ಅದನ್ನು ಪರೀಕ್ಷಿಸಿನೋಡಲಿಕ್ಕೆ ಅವರು ಆತುರಪಡುತ್ತಲಿದ್ದರು. ಅವರ ಮನಸ್ಸು ಬಹಳ ಚಂಚಲವಾಯಿತು. ಅವರ ಮನಸ್ಸಿನ ಈ ಸ್ಥಿತ್ಯಂತರವು ಲೈಲಿಗೆ ಗೊತ್ತಾಯಿತು; ಆದರೆ ಕಾರಣವನ್ನು ಈಗೆಯೇ ಯಾಕೆ ಕೇಳಬೇಕು, ಸಂಜೆಗಿಂಜೆಯಮುಂದೆ ಮಾಸಾಹೇಬರನ್ನು ಕೇಳೋಣವೆಂದು ಆಕೆಯು ಸುಮ್ಮನೆಯಿದ್ದಳು. ಮುಂದೆ ಆಕೆಗೆ ಕೇಳಲಿಕ್ಕೆ ಅಸ್ಪದವೇ ದೊರಿಯಲಿಲ್ಲ. ಹೊತ್ತುಮುಣುಗಿ ಸ್ವಲ್ಪ ರಾತ್ರಿಯಾದ ಕೂಡಲೆ ಮಾಸಾಹೇಬರೆ ಮನಸ್ಸಿಗೆ ಏನು ಹೊಳೆಯಿತೋ ಏನೋ, ಅವರು ಲೈಲಿಗೆ—ಇಂದು ಹಗಲೆಲ್ಲ ಜಪಮಾಡಲಿಕ್ಕೆ ನನಗೆ ಅನುಕೂಲವಾಗಲಿಲ್ಲ; ಆದ್ದರಿಂದ ನಾನು ಈಗ ನನ್ನ ಕೋಣೆಯಲ್ಲಿ ಹೋಗಿ ಕುಳಿತುಕೊಳ್ಳುತ್ತೇನೆ. ನನ್ನನ್ನು ಕರೆಯಲಿಕ್ಕೆ, ಇಲ್ಲವೆ ನನ್ನನ್ನೇನಾದರೂ ಕೇಳಲಿಕ್ಕೆ ನೀನು ಸರ್ವಥಾ ಬರಬೇಡ, ಎಂದು ಹೇಳಿ, ಕೋಣೆಯೊಳಗೆ ಹೋಗಿ ಬಾಗಿಲುಹಾಕಿಕೊಂಡು ಕುಳಿತುಕೊಂಡು ಬಿಟ್ಟರು! ಆಯಿತು, ಲೈಲಿಯು ಸಂಜೆಯ ಮುಂದೆ ಕೇಳಬೇಕೆಂದದ್ದು ಅಲ್ಲಿಯೇ ಉಳಿಯಿತು. ಲೈಲಿಯು ಕೆಲಸಬೊಗಸೆಗಳನ್ನೆಲ್ಲ ತೀರಿಸಿಕೊಂಡು, ದಿನಾಲು ತಾನು ಮಲಗಿಕೊಳ್ಳುವ ಸ್ಥಳದಲ್ಲಿ ಬಂದು ಬಿದ್ದುಕೊಂಡಳು. ಲೈಲಿಯಾದರೂ ಸಾಧಾರಣ ಯೋಗ್ಯತೆಯ ಮನುಷ್ಯಳಿದ್ದಿಲ್ಲ. ಆಕೆಯು ಬಹುಜನ ಸಾಧುಸತ್ಪುರುಷರ ಬಳಿಯಲ್ಲಿದ್ದವಳಾದದ್ದರಿಂದ ಸುಜ್ಞಳಿದ್ದಳು; ಆದರೆ ಸ್ವಲ್ಪ ಪುಕ್ಕಸ್ವಭಾವದವಳು. ಆಕೆಗೆ ಸಂಕೋಚ ಬಹಳ. ತಾನು ಮಾಸಾಹೇಬರನ್ನು ಚಿಕ್ಕಂದಿನಿಂದ ಎತ್ತಿ ಆಡಿಸಿದವಳಾಗಿದ್ದರೂ, ಅವರ ಮೇಲೆ ಹೊಟ್ಟೆಯಮಕ್ಕಳಿಗಿಂತ ಆಕೆಯು ಹೆಚ್ಚು ಪ್ರೀತಿಯನ್ನು ಮಾಡುತ್ತಿದ್ದರೂ, ಮಾಸಾಹೇಬರ ತೇಜಸ್ವಿತೆಗೆ ಆಕೆಯು ಅಂಜುತ್ತಿದ್ದಳು. ಪ್ರಸಂಗವಲ್ಲಿ ಒಮ್ಮೆ ಬಾಯಿಬಿಚ್ಚಳೆಂದರೆ ಮಾಸಾಹೇಬರ ಹಂಗು ಇಲ್ಲದೆ ನಿಜ

ವಾದ ಸಂಗತಿಯನ್ನು ಸ್ಪಷ್ಟವಾಗಿ ಹೇಳಲಿಕ್ಕೆ ಲೈಲಿಯು ಹಿಂದು ಮುಂದು ನೋಡುತ್ತಿದ್ದಿಲ್ಲ; ಆದರೆ ಎಲ್ಲ ಪ್ರಸಂಗದಲ್ಲಿ ದಿಟ್ಟತನದಿಂದ ಮಾಸಾಹೇಬರನ್ನು ಹಾಗೆ ತಟ್ಟನೆ ಕೇಳುವ ಧೈರ್ಯವು ಆಕೆಗೆ ಆಗುತ್ತಿದ್ದಿಲ್ಲ. ಮಾಸಾಹೇಬರಾದರೂ ಲೈಲಿಯ ಯೋಗ್ಯತೆಯನ್ನು ಅರಿತಿದ್ದರು. ಆಕೆಯು ಬಹುಶ್ರುತಳೆಂತಲೂ, ಸುಜ್ಞಳೆಂತಲೂ ತಿಳಿದು ಆಕೆಯ ವಿಷಯವಾಗಿ ಅವರು ಆದರಭಾವವುಳ್ಳವರಾಗಿದ್ದರು; ಆದರೆ ಸಲಿಗೆಯಿಂದ ಒಮ್ಮೊಮ್ಮೆ ಆಕೆಯ ಹಂಗನ್ನು ಅವರು ಎಷ್ಟು ಮಾತ್ರವೂ ಇಡುತ್ತಿದ್ದಿಲ್ಲ. ಇರಲಿ ಲೈಲಿಗೆ ಸ್ವಲ್ಪ ಹೊತ್ತಿನಲ್ಲಿ ನಿದ್ದೆ ಹತ್ತಿತು. ಮಾಸಾಹೇಬರು ಜಪಮಾಡುವದನ್ನು ಬಿಟ್ಟು, ಮಗನು ಈ ದಿನ ಹೊರಗೆ ಹೋಗಬಹುದೋ ಎಂದು ಚಡಪಡಿಸುತ್ತ ಕುಳಿತುಕೊಂಡಿದ್ದರು. ಅವರಿಗೆ ಹಿಂದಿನ ವೃತ್ತಾಂತವೆಲ್ಲ ನೆನಪಾಗಿತ್ತು. ಅವರು ವಿಚಾರ ಮಾಡಿಮಾಡಿ ದಣಿದು ಮಲಗಿಕೊಂಡರು; ಆದರೆ ಅವರಿಗೆ ನಿದ್ದೆಯು ಬರಲೊಲ್ಲದು. ಅವರು ಹಲವು ಸಾರಿ ಕಿಡಿಕೆಯಲ್ಲಿ ಹಣಿಕಿ ನೋಡಿದರು. ಸ್ವಚ್ಛವಾದ ಬೆಳದಿಂಗಳಲ್ಲಿ ಯಾರಾದರೂ ಹೋಗುವದು ಕಂಡರೆ ನೋಡಬೇಕೆಂತಲೂ, ಯಾರಾದರೂ ಹೋಗುವ ಸಪ್ಪಳವು ಕಿವಿಗೆ ಬಿದ್ದರೆ ಕೇಳಬೇಕೆಂತಲೂ ಅವರು ಉತ್ಸುಕಪಡುತ್ತಿದ್ದರು. ಅಂದು ಅವರ ಮನಸ್ಸಿನ ಸ್ಥಿತಿಯು ವಿಲಕ್ಷಣವಾಗಿತ್ತು.

ಇತ್ತ ಅದೇ ರಾತ್ರಿ ರಣಮಸ್ತಖಾನನು ತನ್ನ ಕೋಣೆಯಲ್ಲಿ ಅಸಮಾಧಾನದಿಂದ ಹಾಸಿಗೆಯಮೇಲೆ ಹೊರಳಾಡುತ್ತಿದ್ದನು. ಇಂದು ಮುಂಜಾನೆ ಮಾಸಾಹೇಬರ ಸಂಗಡ ಬಹು ನಿಷ್ಠುರತನದಿಂದ ನಡೆದುಕೊಂಡೆನೆಂಬಬಗ್ಗೆ ಆತನಿಗೆ ಬಹಳ ಪಶ್ಚಾತ್ತಾಪವಾಗಿತ್ತು. ಆದರೂ ತಾನು ಹೀಗೆ ನಡೆಯದಿದ್ದರೆ ನಿರ್ವಾಹವೇಯಿದ್ದಿಲ್ಲೆಂದು ಆತನು ಸಮಾಧಾನಮಾಡಿಕೊಳ್ಳುತ್ತಿದ್ದನು. ನೂರಜಹಾನಳ ವೃತ್ತಾಂತವೆಲ್ಲ ಆತನ ಕಣ್ಣಮುಂದೆ ಕಟ್ಟಿದಂತೆ ಆಗಿ, ತಾನು ಯಾವ ಉಪಾಯದಿಂದ ನೂರಜಹಾನಳ ಲಗ್ನವಾಗಬೇಕಾದೀತೆಂದು ಆತನು ಆಲೋಚಿಸತೊಡಗಿದನು. ಆ ಕಾರ್ಯಕ್ಕೆ ತಾನು ಈಗ ರಾಮರಾಜನೊಡನೆ ನಡಿಸಿರುವ ಒಳಸಂಚೇ ಅನುಕೂಲವಾದದ್ದೆಂದು ಆತನು ನಿರ್ಧರಿಸಿದನು. ಅಷ್ಟರಲ್ಲಿ ರಾತ್ರಿಯು ಐದು ತಾಸಿಗೆ ಬಂದಿತ್ತು. ಕೂಡಲೆ ರಣಮಸ್ತಖಾನನು ತನ್ನ ಸೇವಕನಾದ ನಜೀರನನ್ನು ಕರೆದು-ಹೋಗು, ಅಲ್ಲೀಖಾನನಿಗೆ ನನ್ನ ಕುದುರೆಯನ್ನು ಜೀನು ಹಾಕಿಕೊಂಡು ನಿನ್ನಿನ ಸ್ಥಳದಲ್ಲಿ ನಿಲ್ಲಿಸೆಂದು ಹೇಳು. ನಾನು ಇಂದೇ ನಿನ್ನಿನಂತೆಯೇ ಹೊರಗೆ ಹೋಗುತ್ತೇನೆ. ಬೆಳಗು ಮುಂಜಾನೆ ಬರುವೆನು. ಮಾಸಾಹೇಬರು ಕದಾಚಿತ್ ಇಂದು ನನ್ನ ಶೋಧಮಾಡಬಹುದು. ಅವರಿಗೆ ನಾನು ಮಲಗಿಕೊಂಡಿರುವೆನೆಂದು

ಹೇಳು, ಅವರು ನನ್ನನ್ನು ಎಬ್ಬಿಸ ಹೇಳಿದರೆ, "ಯಾರು ಎಬ್ಬಿಸೆಂದರೂ ಎಬ್ಬಿಸ ಬೇಡೆಂದು" ಸಖ್ತ ತಾಕೀದಮಾಡಿ ಮಲಗಿರುತ್ತಾರೆಂದು ಹೇಳಿಬಿಡು, ಎಂದು ಹೇಳಿದನು. ನಜೀರನಿಗೆ ಇಷ್ಟೇ ಬೇಕಾಗಿತ್ತು. ಆತನು ಅಲ್ಲಿಖಾನನ ಬಳಿಗೆ ಓಡುತ್ತ ಹೋಗಿ ರಣಮಸ್ತಖಾನನ ಅಪ್ಪಣೆಯನ್ನು ತಿಳಿಸಿದನು. ಈ ಸುದ್ದಿಯನ್ನು ಮಾಸಾಹೇಬರ ಮುಂದೆ ಯಾವಾಗ ಹೇಳೇನೆನ್ನುವ ಹಾಗೆ ನಜೀರನಿಗೆ ಆಗಿತ್ತು. ಆತನು ಈಗಲೇ ಈ ಸುದ್ದಿಯನ್ನು ಮಾಸಾಹೇಬರಿಗೆ ತಿಳಿಸಿ ಹೋಗಬೇಕೆಂಬ ಉಬ್ಬಿನಿಂದ, ರಣಮಸ್ತಖಾನನ ಬಂಗಲೆಯ ಕಡೆಗೆ ಹೋಗದೆ, ಮಾಸಾಹೇಬರ ಮನೆಯ ಕಡೆಗೆ ತಿರುಗಿದನು. ಅವನು ಹೋಗುವದರೊಳಗೆ ಮಾಸಾಹೇಬರು ಬಾಗಿಲು ಹಾಕಿಕೊಂಡು ಕುಳಿತಿದ್ದರು. ಲೈಲಿಯು ಹೊರಗೆ ಗೊರಿಕೆ ಹೊಡೆಯುತ್ತ ಮಲಗಿಕೊಂಡಿದ್ದಳು. ಮಸಾಹೇಬರು ಕೋಣೆಯಲ್ಲಿರುವಾಗ ಕರಿಯಲಾಗದೆಂದು ನಜೀರನಿಗೆ ಗೊತ್ತಿದ್ದರೂ, ಆತನು ಕಾರ್ಯಗೌರವದಿಂದ ಮಾಸಾಹೇಬರ ಬಾಗಿಲನ್ನು ನೂಕಿದನು. ಕೂಡಲೆ ಮಾಸಾಹೇಬರು—"ಯಾರವರು?" ಎಂದು ಕೇಳಲು, "ನಾನು ನಜೀರನು" ಎಂಬ ಉತ್ತರವು ಮಾಸಾಹೇಬರ ಕಿವಿಗೆ ಬಿದ್ದಿತು. ಕೂಡಲೆ ಮಾಸಾಹೇಬರು ಬಾಗಿಲು ತೆರೆದು ನಜೀರನಿಗೆ—"ಯಾಕೋ? ಏನಾದರೂ ವಿಶೇಷ ಸುದ್ದಿಯು?" ಎಂದು ಕೇಳಿದ ಕೂಡಲೆ, ನಜೀರನು—ಖಾನಸಾಹೇಬರು ನಿನ್ನಿನಂತೆಯೇ ಇಂದೂ ಹೊರಗೆ ಹೋಗುವವರಿದ್ದಾರೆ. ಅವರ ಅಪ್ಪಣೆಯಂತೆ ಅಲ್ಲಿಖಾನನಿಗೆ ಕುದುರೆಯನ್ನು ಜೀನುಹಾಕಿ ಸಂಕೇತ ಸ್ಥಳದಲ್ಲಿ ತಂದು ನಿಲ್ಲಿಸೆಂದು ಇದೇ ಈಗ ನಾನೇ ಹೇಳಿ ಬಂದೆನು. ನನಗೆ ಖಾನಸಾಹೇಬರು ಸಖ್ತತಾಕೀದ ಮಾಡಿದ್ದಾರೆ. ಯಾರು ಬಂದು ಕೇಳಿದರೂ, ಸ್ವತಃ ನೀವು ಬಂದು ಕೇಳಿದರೂ ಒಳಗೆ ಮಲಗಿಕೊಂಡಿರುತ್ತಾರೆಂದು ಹೇಳಬೇಕಂತೆ. ಈ ಸುದ್ದಿಯನ್ನು ನಿಮಗೆ ಹೇಳಿ ಹೋಗಬೇಕೆಂದು ಬಂದೆನು, ಎಂದು ಹೇಳಿದನು. ಅದಕ್ಕೆ ಮಸಾಹೇಬರು ಉತ್ಸಾಹದಿಂದ—"ಶಾಬಾಸ! ಶಾಬಾಸ! ಇನ್ನು ನೀನು ಆತನಿಗೆ ತಿಳಿಯದ ಹಾಗೆ ಆತನ ಬೆನ್ನಹತ್ತಿ ಹೋಗಿ ಆತನು ಯಾವ ದಿಕ್ಕಿಗೆ ಹೋಗುತ್ತಾನೆಂಬದನ್ನು ನನಗೆ ಬಂದು" ಹೇಳು. ಎಂದು ನಜೀರನನ್ನು ಪ್ರೋತ್ಸಾಹಿಸಿ ಕಳಿಸಿಕೊಟ್ಟರು. ನಜೀರನಿಗೆ ಇಂದು ಮೈಯಲ್ಲಿ ಒಂದು ಬೆರಳು ಮಾಂಸ ಬಂದಹಾಗಾಯಿತು.

ಇತ್ತಿತ್ತ ರಣಮಸ್ತಖಾನನ ಸ್ವಭಾವವು ಬಹು ಸಂಶಯಗ್ರಸ್ತವಾಗಿತ್ತು; ಆತನು ಹೊರಹೊರಡುವದಕ್ಕಾಗಿ ಉಡಪುತೊಡಪುಗಳನ್ನು ಧರಿಸಬೇಕಾದ್ದರಿಂದ ನಜೀರನ ಹಾದಿಯನ್ನು ನೋಡಹತ್ತಿದನು. ಸುದ್ದಿ ಹೇಳಿಬರಲಿಕ್ಕೆ ನಜೀರನಿಗೆ

ಇಷ್ಟು ಹೊತ್ತು ಬೇಡೆಂಬದು ಸಹ ಆತನ ಮನಸ್ಸಿನಲ್ಲಿ ತಟ್ಟನೆ ಬಂದಿತು. ನಜೀರನು ಬಂದಕೂಡಲೆ ಆತನನ್ನು ಕುರಿತು ರಣಮಸ್ತಖಾನನು--"ಬರಿಯಸುದ್ದಿಯನ್ನು ಹೇಳಿಬರಲಿಕ್ಕೆ ಇಷ್ಟು ಹೊತ್ತು ಯಾಕೆ?" ಎಂದು ಕೇಳಿದನು. ಕೂಡಲೆ ನಜೀರನ ಮೋರೆಯು ಕಪ್ಪಿಟ್ಟಿತು. ಆತನಿಗೆ ಏನು ಹೇಳಬೇಕೆಂಬದು ತಿಳಿಯದಾಯಿತು; ಅಷ್ಟರಲ್ಲಿ ರಣಮಸ್ತಖಾನನೇ ನಜೀರನಿಗೆ—"ಹೊತ್ತಿಲ್ಲ, ವೇಳೆಯಿಲ್ಲ ತಂಬಾಕದ ಝುರಕೆಗಳನ್ನು ಹೊಡೆಯುತ್ತ ಕುಳಿತುಕೊಂಡಿದ್ದೆಯಾದೀತು, ಮತ್ತೇನಿದೆ?" ಎಂದನು. ಇದು ಅನಾಯಾಸವಾಗಿ ನಜೀರನ ಹೊತ್ತಿಗೆ ಬಿದ್ದಿತು. ಆತನು ದೇಶಾವರಿಯ ನಗೆಯನ್ನು ನಗುತ್ತ ರಣಮಸ್ತಖಾನನ ಉಡಪುತೊಡಪುಗಳನ್ನು ತಂದು ಕೊಡಹತ್ತಿದನು. ರಣಮಸ್ತಖಾನನು ಅವಸರದಿಂದ ಪೋಷಾಕುಹಾಕಿಕೊಂಡನು. ಆತನು ಪುನಃ ನಜೀರನಿಗೆ-"ನಾನು ಎಲ್ಲಿಗೆ ಹೋದೆನೆಂಬದನ್ನು ಮಾಸಾಹೇಬರಿಗೆ ತಿಳಿಸಬೇಡ" ಎಂದು ಗಟ್ಟಿಯಾಗಿ ಹೇಳಿ, ಅಲ್ಲಿಖಾನನು ಸಂಕೇತಸ್ಥಳದಲ್ಲಿ ನಿಲ್ಲಿಸಿದ್ದ ಕುದುರೆಯನ್ನು ಹತ್ತಿ ಹಾದಿಯಹಿಡಿದನು. ನಜೀರನು ಕಾಲಲ್ಲಿ ಬಲು ಹಗುರು ಇದ್ದನು. ರಣಮಸ್ತಖಾನನಾದರೂ ಕುದುರೆಯನ್ನು ಸಾವಕಾಶವಾಗಿ ಬಿಟ್ಟಿದ್ದನು; ಆದ್ದರಿಂದ ನಜೀರನಿಗೆ ರಣಮಸ್ತಖಾನನ ಬೆನ್ನುಹತ್ತಿಹೋಗಿ ಆತನು ಯಾವ ದಿಕ್ಕಿಗೆ ಹೋಗುತ್ತಾನೆಂಬದನ್ನು ನೋಡಿಕೊಳ್ಳಲಿಕ್ಕೆ ಬಹಳ ಅನುಕೂಲವಾಯಿತು. ರಣಮಸ್ತಖಾನನು ವಿಜಯನಗರದ ದಿಕ್ಕನ್ನೇ ಹಿಡಿದಿದ್ದನು. ಆದಸ್ಟು ಗಟ್ಟಿಮುಟ್ಟಿಯಾಗಿ ಗೊತ್ತಾದಕೂಡಲೆ ನಜೀರನು ಬಂದಿರುಗಿ ಮಾಸಾಹೇಬರ ಬಳಿಗೆ ಹೋಗಿ ಆ ಸುದ್ದಿಯನ್ನು ಹೇಳಿದನು. ಅದನ್ನು ಕೇಳಿ ಮಾಸಾಹೇಬರ ಚಿತ್ತವೃತ್ತಿಯು ವಿಲಕ್ಷಣವಾಯಿತು; ಅವರೂ ಅವನ್ನೇನು ಹೊರಗೆ ತೋರಗೊಡದೆ ಅವರು ನಜೀರನನ್ನು ಹೊಗಳಿ—"ಹೋಗು, ಒಡಿ ಒಡಿ ದಣಿದಿರುತ್ತೀ, ಮಲಗಿಕೋ. ಇನ್ನು ಮೇಲೆ ರಣಮಸ್ತಖಾನನು ಯಾವಾಗ ಬರುತ್ತಾನೆಂಬದನ್ನು ನನಗೆ ಬೆಳಗಾದ ಬಳಿಕ ಯಾವಾಗಾದರೂ ಹೇಳು" ಎಂದು ಹೇಳಿದರು. ನಜೀರನು ಬಹಳ ಆನಂದಪಟ್ಟನು. "ತಪ್ಪದೆ ಹೇಳುತ್ತೇನೆ" ಎಂದು ಹೇಳಿ ಆತನು ಹೊರಟುಹೋದನು. ಮಾಸಾಹೇಬರ ಚಿತ್ತವು ಅತ್ಯಂತ ಅಸ್ವಸ್ಥವಾಯಿತು. ರಣಮಸ್ತಖಾನನ ಬೆನ್ನುಹತ್ತಿ ಅಶ್ವಾರೂಢಳಾಗಿ ನಾನೇ ಹೋಗಲಾ, ಅನ್ನುವಹಾಗೆ ಅವರಿಗೆ ಆಯಿತು; ಆದರೆ ಹಾಗೆ ಮಾಡಲಿಕ್ಕೆ ಬರುವಹಾಗಿದ್ದಿಲ್ಲ; ಇದಲ್ಲದೆ ಅವರು ಕರೀಮಬಕ್ಷನನ್ನು ವಿಜಯನಗರದ ಅರ್ಧಹಾದಿಯಮೇಲೆ ಕುಳಿತಿರುವಂತೆ ನಿಯಮಿಸಿ ಕಳಿಸಿದ್ದರು. ಆತನು ಮುಂಜಾನೆಬಂದು ಸುದ್ದಿಯನ್ನು ಹೇಳಿದಬಳಿಕ ಏನುಮಾಡತಕ್ಕದ್ದನ್ನು ಮಾಡೋಣವೆಂದು ಅವರು ನಿಶ್ಚಯಿಸಿದರು. ವಿಚಾರಮಾಡಿಮಾಡಿ ಅವರಿಗೆ ದಣಿವಿಕೆಬಂದಹಾಗಾದ್ದರಿಂದ ಅವರು ಹಾಸಿಗೆಯಮೇಲೆ

ಹೋಗಿ ಬಿದ್ದುಕೊಂಡರು; ಆದರೆ ಅವರಿಗೆ ನಿದ್ದೆ ಬರಲೊಲ್ಲದು! ಜೀವಕ್ಕೆ ಬಹಳ ತಾಪವಾಗಹತ್ತಿತು. ಹೀಗೆ ಕೆಲವು ಹೊತ್ತು ತಳಮಳಿಸುತ್ತಿರಲು, ಬೆಳಗುಮುಂಜಾನೆ ಅವರಿಗೆ ಸ್ವಲ್ಪ ನಿದ್ದೆಹತ್ತಿದಹಾಗಾಗಿ, ಅವರು ವಿಲಕ್ಷಣ ಕನಸ್ಸನ್ನು ಕಂಡರು. ಅದೇನಂದರೆ—

ಒಂದು ಎತ್ತರವಾದ ಪರ್ವತಶಿಖರದ ಮೇಲೆ ಯಾರದೋ ಹಾದಿಯನು ನೋಡುತ್ತ ತಾವು ಒಬ್ಬರೇ ನಿಂತುಕೊಂಡಿರುವಂತೆ ಮಾಸಾಹೇಬರಿಗೆ ತೋರಿತು. ಅಷ್ಟರಲ್ಲಿ ರಾಮರಾಜನು ಅಲ್ಲಿಗೆ ಬಂದನು. ಆತನನ್ನು ನೋಡಿದ ಕೂಡಲೆ ತಮ್ಮ ಸರ್ವಾಂಗವು ತಪ್ತವಾಗಿ ಕೆಂಪಡರಿದ ಕಣ್ಣುಗಳಿಂದ ತಾವು ಆತನನ್ನು ನೋಡುತ್ತಿರುವಂತೆ ಮಾಸಾಹೇಬರಿಗೆ ಭಾಸವಾಯಿತು. ಆಗ ತಾವು ತಮ್ಮ ಹಲ್ಲುಗಳಿಂದ ತಮ್ಮ ತುಟಿಯನ್ನು ಕಚ್ಚುತ್ತಿರುವಂತೆಯೂ, ತಮ್ಮ ಬಿಗಿಯಾದ ಮುಷ್ಟಿಯನ್ನು ಕಸುವಿನಿಂದ ಹಿಂದಕ್ಕೆ ಜಾಗಿಸಿ ಹಿಡಿದಂತೆಯೂ, ಸಿಟ್ಟಿನಿಂದ ಮುಸುಗುಟ್ಟುತ್ತಿರುವಂತೆಯೂ ಅವರಿಗೆ ತೋರಿತು ರಾಮರಾಜನು ಮಾತ್ರ ಅತ್ಯಂತ ಶಾಂತಮುದ್ರೆಯಿಂದ ಮುಗಳುನಗೆ ನಗುತ್ತ ತಮ್ಮ ಕಡೆಗೆ ನೋಡಿದಹಾಗಾಯಿತು. ರಾಮರಾಜನು ನೋಡನೋಡುತ್ತ ತಮ್ಮನ್ನು ಅಪ್ಪಿಕೊಳ್ಳಲಿಕ್ಕೆ ಬರುವಂತೆ ಮಾಸಾಹೇಬರಿಗೆ ತೋರಿತು. ರಾಮರಾಜನು ತಮ್ಮನ್ನು ಅಪ್ಪಿಕೊಳ್ಳಲಿಕ್ಕೆ ಹತ್ತರ ಬಂದರೆ, ಆತನನ್ನು ಪರ್ವತದ ಶಿಖರದ ಕೆಳಗೆ ನೂಕಿಬಿಡಬೇಕೆಂದು ತಾವು ತೀರ ತುದಿತುದಿಗೆ ಹೋಗುವ ಹಾಗೆ ಅವರಿಗೆ ಕಂಡಿತು. ಅಷ್ಟರಲ್ಲಿ ರಾಮರಾಜನು ತೀರ ಹತ್ತರ ಬಂದು ತನ್ನ ಅತ್ಯಂತ ಮಧುರಧ್ವನಿಯಿಂದ-"ಸುಂದರೀ, ಎಂದೂ ತಪ್ಪಿಸಲಿಕ್ಕೆ ಬಾರದಿರುವಾಗ ಯಾಕೆ ತಪ್ಪಿಸಿಕೊಳ್ಳಲುಯತ್ನಿಸುತ್ತೀ? ಎಂದೂ ಆಗದೆ ಇರುವದನ್ನು ಯಾಕೆ ಮಾಡಲಿಕ್ಕೆ ಹೋಗುತ್ತೀ? ಇಗೋ ನೋಡು, ಈತನು ನನ್ನ ಮಗನು" ಹೀಗೆ ಅನ್ನುತ್ತಿರುವಾಗ ರಣಮಸ್ತಖಾನನು ರಾಮರಾಜನ ಬಳಿಯಲ್ಲಿ ನಿಂತಂತೆ ಮಾಸಾಹೇಬರಿಗೆ ಕಂಡಿತು. ತಾವು ಅತಿ ನಿರ್ಬಲರೂ, ನಿಶ್ಚಲರೂ ಆದದ್ದನ್ನು ನೋಡಿ ಮತ್ತಿಷ್ಟು ಮಧುರಹಾಸ್ಯಮಾಡಿ ರಾಮರಾಜನು ತೀರಹತ್ತರಕ್ಕೆ ಬಂದು—ನೋಡು ನೋಡು, ನಾನು ಈತನನ್ನು ಸ್ವಾಧೀನಪಡಿಸಿಕೊಂಡಿದ್ದೇನೆ. ಈತನು ನನ್ನವನು, ನನಗೆ ಸಿಕ್ಕನು. ಈಗ ನೀನಷ್ಟೇಯಾಕೆ ದೂರಹೋಗುತ್ತೀ? ಬಾ, ಬಾ, ಎಂದು ತಮ್ಮನ್ನು ಹಿಡಿಯಲಿಕ್ಕೆ ಬರುವಂತೆ ಮಾಸಾಹೇಬರಿಗೆ ತೋರಿತು. ಅಷ್ಟರಲ್ಲಿ ರಣಮಸ್ತಖಾನನು ಮುಂದಕ್ಕೆ ಬಂದಂತಾಯಿತು. ಆತನ ಬಳಿಯಲ್ಲಿ ನೂರಜಹಾನಳೂ ನಿಂತಂತೆ ತೋರಿತು. ಆಕೆಯು ಏನೋ ರಣಮಸ್ತಖಾನನಿಗೆ ಸನ್ನೆ ಮಾಡಿದಹಾಗಾಯಿತು. ಕೂಡಲೇ ರಣಮಸ್ತಖಾನನು—

ಹೋಗಿರಿ, ಹಾಳಾಗಿ ಹೋಗಿರಿ; ನನ್ನ ಆಯುಷ್ಯವನ್ನು ನೀವಿಬ್ಬರು ಮಣ್ಣು ಗೂಡಿಸಿ ಬಿಟ್ಟಿರಿ, ಎನ್ನುತ್ತ ತಮ್ಮನ್ನೂ ರಾಮರಾಜನನ್ನೂ ಕೂಡಿಯೇ ಪರ್ವತ ಶಿಖರದ ಕೆಳಗೆ ದೂಡಿಕೊಟ್ಟಂತೆ ಮಾಸಾಹೇಬರಿಗೆ ಆಯಿತು. ಹೀಗಾದಕೂಡಲೆ ಮಾಸಾಹೇಬರು ಚಿಟ್ಟನೆಚೀರಿ ಹೊರಸಿನ ಕೆಳಗೆ ಬಿದ್ದರು.

ಹೀಗೆ ಚೀರಿದ್ದನ್ನು ಲೈಲಿಯು ಕೇಳಿ ಗಾಬರಿಯಾಗಿ ಬಂದಳು. ಕರ್ಮ ಧರ್ಮ ಸಂಯೋಗದಿಂದ ಬಾಗಿಲಿಗೆ ಒಳಚಿಲಕ ಹಾಕದ್ದರಿಂದ ಲೈಲಿಯು ಬಾಗಿಲು ತೆರೆದು ಒಳಗೆ ಹೋಗಿ ನೋಡಲು, ಮಾಸಾಹೇಬರು ನೆಲದಮೇಲೆ ಅಸ್ತವ್ಯಸ್ತವಾಗಿ ಬಿದ್ದಿದ್ದರು. ಅವರ ಮೈಮೇಲೆ ಎಚ್ಚರವಿದ್ದಿಲ್ಲ. ಲೈಲಿಯು ಅವಸರದಿಂದ ನೀರುತಂದು ಅವರ ಕಣ್ಣಿಗೆ ಹಚ್ಚಿ ನೆತ್ತಿಗೆ ತಟ್ಟಿದಳು; ಆದರೆ ಬಹಳ ಹೊತ್ತಾದರೂ ಎಚ್ಚರವಾಗಲಿಲ್ಲ. ಇನ್ನೂ ಅವರು ಆಗಾಗ್ಗೆ ಚಿಟ್ಟು ಚಿಟ್ಟನೆ ಚೀರುತ್ತಲೇ ಇದ್ದರು. ಲೈಲಿಯು ಎಚ್ಚರವಾಗಜೇಕೆಂದು ಬಹಳ ಯತ್ನಿಸಿದಳು; ಆದರೆ ವ್ಯರ್ಥವು. ಕಡೆಗೆ ರಣಮಸ್ತಖಾನನನ್ನು ಕರೆಕಳುಹಿದಳು. ಅವರು ರಾತ್ರಿಹೋದವರು ಇನ್ನೂ ಬಂದಿಲ್ಲೆಂದು ಸುದ್ದಿಯು ಬಂದಿತು. ಹೊರಗೆ ತಾಸುಹೊತ್ತು ಏರಿತ್ತು. ಕಡೆಗೆ ಲೈಲಿಯು ತನಗೆ ಗೊತ್ತಿದ್ದ ಬೇರೆಬೇರೆ ಉಪಾಯಗಳನ್ನು ಮಾಡಿದಳು. ಆಗ ಬಹಳ ಹೊತ್ತಿನಮೇಲೆ ಮಾಸಾಹೇಬರಿಗೆ ಎಚ್ಚರವಾಯಿತು; ಆದರೆ ಅವರು ಭ್ರಮಿಷ್ಟರಂತೆ ನಾಲ್ಕೂಕಡೆಗೆ ನೋಡಹತ್ತಿದರು. ತಾವು ಎಲ್ಲಿ ಇರುತ್ತೇವೆಂಬದರ ನಿಶ್ಚಯವು ಅವರಿಗೆ ಆದಂತೆ ತೋರಲಿಲ್ಲ. ಅವರು ಬಹಳಹೊತ್ತು ಲೈಲಿಯನ್ನು ದಿಟ್ಟಿಸಿ ನೋಡಿದರು. ಆದರೆ ತಾವು ಯಾರನ್ನು ನೋಡುತ್ತೇವೆಂಬ ಪ್ರಜ್ಞೆಯು ಅವರಿಗೆ ಇದ್ದಿಲ್ಲ. ಅವರಿಗೆ ಇನ್ನೂ ಕನಸಿನ ಗುಂಗು ಇದ್ದಂತೆ ತೋರಿತು. ಲೈಲಿಯು ಈಗ ನಾಲ್ವತ್ತೈದು ವರ್ಷಗಳಿಂದ ಮಾಸಾಹೇಬರ ಬಳಿಯಲ್ಲಿರುತ್ತ ಬಂದಿದ್ದಳು; ಅವಳಿಗೆ ಇಂಥ ಪ್ರಸಂಗವು ಎಂದೂ ಬಂದಿದ್ದಿಲ್ಲ; ಆದರೆ ಈಗ ಸುಮಾರು ಮೂವತ್ತು ವರ್ಷಗಳಹಿಂದೆ ಒಮ್ಮೆ ಮಾಸಾಹೇಬರು ಹೀಗೆಯೇ ಚೀರಿ ನೆಲದಮೇಲೆ ಬಿದ್ದದ್ದು ಲೈಲಿಗೆ ನೆನಪಾಯಿತು. ಆಗಾದರೂ ಇಷ್ಟುಹೊತ್ತು ಎಚ್ಚರತಪ್ಪಿ ಮಾಸಾಹೇಬರು ಬಿದ್ದಿದ್ದಿಲ್ಲ. ಲೈಲಿಯುಹ್ಯಾಗಾದರೂ ಮಾಡಿ ಮಾಸಾಹೇಬರನ್ನು ಅವರ ಹೊರಸಿನಮೇಲೆ ಮಲಗಿಸಿದಳು. ಆಗ ಮಾಸಾಹೇಬರು ಒಂದೇಸವನೆ ಬಿಕ್ಕಿ ಬಿಕ್ಕಿ ಅಳಹತ್ತಿದರು. ಅದನ್ನು ನೋಡಿ ಲೈಲಿಯು ಮತ್ತಿಷ್ಟು ಗಾಬರಿಯಾದಳು. ಹೀಗೆ ಕೆಲಕಾಲ ಕ್ರಮಿಸಿದ ಮೇಲೆ ಮಾಸಾಹೇಬರು ಹೊರಸಿನಮೇಲೆ ಎದ್ದುಕುಳಿತು ಲೈಲಿಯನ್ನು

ಕುರಿತು—" ಲೈಲೀ, ಆ ನಜೀರನನ್ನು ಕರಕೊಂಡುಬಾ " ಎಂದು ಹೇಳಿದರು. ಹೀಗೆ ಮಾಸಾಹೇಬರು ಎಚ್ಚರಿಕೆಯಿಂದ ಮಾತಾಡಿದ್ದನ್ನು ಕೇಳಿ ಲೈಲಿಗೆ ಪರಮಾನಂದವಾಯಿತು. ಆ ಆನಂದದಲ್ಲಿ ಆಕೆಯು ನಜೀರನನ್ನು ಕರೆಯ ಹೋಗಲಿಕ್ಕೆ ಸ್ವಲ್ಪ ತಡಮಾಡಲು, ಮಾಸಾಹೇಬರು ಲೈಲಿಗೆ — ನಾನು ಹೇಳಿದ್ದು ನಿನಗೆ ಕೇಳಿಸಲಿಲ್ಲವೇನು? ನಜೀರನನ್ನು ಕರಕೊಂಡುಬಾ ನಜೀರನನ್ನು. ಎಂದು ಹೇಳಲು, ಲೈಲಿಯು ನಜೀರನನ್ನು ಕರಕೊಂಡು ಬಂದಳು. ಆಗ ಮಾಸಾಹೇಬರು—

ಮಾಸಾಹೇಬ—ನಿಮ್ಮ ಒಡೆಯನು ನಿನ್ನೆ ರಾತ್ರಿ ಯಾವಾಗ ಬಂದನು? ಇನ್ನೂ ಮಲಗಿಯೇ ಇರುವನೋ ಎದ್ದಿರುವನೋ? ಕರೀಮಬಕ್ಷನು ಇನ್ನೂ ಯಾಕೆ ಬರಲಿಲ್ಲ?

ನಜೀರ—ಮಾಸಾಹೇಬ, ಒಡೆಯರು ನಿನ್ನೆ ರಾತ್ರಿ ಹೋದನರು ಇನ್ನೂ ತಿರುಗಿ ಬಂದೇಯಿಲ್ಲ!

ಮಾಸಾಹೇಬ (ಭಯದಿಂದ ಹೊರಸುಬಿಟ್ಟು ತಟ್ಟನೆ ಇಳಿದು ನಜೀರನ ಬಳಿಗೆ ಬಂದು)—ಏನಂದಿ? ರಣಮಸ್ತಖಾನನು ಇನ್ನೂ ಬಂದಿರುವದಿಲ್ಲವೆ? ಹಾಗಾದರೆ ಕರೀಮಬಕ್ಷನ ಗತಿಯೇನು?

ನಜೀರ (ಸಮಾಧಾನದಿಂದ)—ಅವನೂ ಇನ್ನೂ ಬಂದಿಲ್ಲ.

ಮಾಸಾಹೇಬ—ಅವನೂ ಇನ್ನೂ ಬಂದಿಲ್ಲ? ಅವನೂ ಇನ್ನೂ ಬಂದಿಲ್ಲವೆ? ಏನು? ನೀನು ಅನ್ನುತ್ತೀಯಾದರೂ ಏನು? ಅವನು ಇನ್ನೂ ಬಂದಿಲ್ಲವೆ?

ನಜೀರ (ಅತ್ಯಂತ ನಮ್ರತೆಯಿಂದ)—ಜೀ ಸರಕಾರ, ಅವನೂ ಇನ್ನೂ ಬಂದಿಲ್ಲ.

೨೧ ನೆಯ ಪ್ರಕರಣ—ಕಡೆಯ ಉಪಾಯ.

ನಜೀರನ ಈ ಮಾತನ್ನು ಕೇಳಿ ಮಾಸಾಹೇಬರು ಅತ್ಯಂತ ಚಕಿತರಾಗಿ ಸುಮ್ಮನೆ ನಿಂತುಕೊಂಡು ಬಿಟ್ಟರು. ಅವರು ಯಾವದೋ ವಿಚಾರದಲ್ಲಿ ಮಗ್ನರಾಗಿರುವಂತೆ ತೋರಿತು. ಅವರು ಕೆಲಹೊತ್ತಿನಮೇಲೆ ನಜೀರನನ್ನು ಕುರಿತು-ನಜೀರ, ನೀನು ಈಗಲೇ ಹೊರಡು. ವಿಜಯನಗರದ ಹಾದಿಯಮೇಲೆ ತಿರುಮಲನ ಧರ್ಮಶಾಲೆಯಿರುವದು. ಅಲ್ಲಿಗೆ ಹೋಗಿ ಅಲ್ಲಿ ಕರೀಮಬಕ್ಷನು ಇದ್ದರೆ ನೋಡಿಬಾ. ಯಾರದಾದರೂ ಕುದುರೆಯನ್ನು ತೆಗೆದುಕೊಂಡು ಹೋಗು. ಹಾದಿಯಲ್ಲಿ ಎಲ್ಲಿಯೂ ನಿಲ್ಲಬೇಡ. ನೆಟ್ಟಿಗೆ ಹೋಗು. ಅಲ್ಲಿ ಕರೀಮಬಕ್ಷನು ನಿನಗೆ ಸಿಗಬಹುದು; ಅಥವಾ ಹಾದಿಯಲ್ಲಿ ನಿನಗೆ ಅವನು ಎದುರಾಗಬಹುದು. ನಡೆ, ನನ್ನ ಮೋರೆಯನ್ನು ನೋಡುತ್ತ ನಿಲ್ಲಬೇಡ. ಈಗಲೇ ಮುಂದಕ್ಕೆ ಸಾಗು. ಎಂದು ಹೇಳಲು, ನಜೀರನು ಕೂಡಲೆ ಹೊರಟುಹೋದನು. ಇದನ್ನೆಲ್ಲ ನೋಡುತ್ತ ನಿಂತಿದ್ದ ಜೈಲಿಗೆ ಏನೂ ಗೊತ್ತಾಗಲಿಲ್ಲ. ಅತ್ತ ನಜೀರನು ಹೋದಬಳಿಕ ಆಕೆಯು ಮಾಸಾಹೇಬರನ್ನು ಕುರಿತು-"ಕರೀಮನು ಆ ಧರ್ಮಶಾಲೆಗೆ ಯಾತಕ್ಕೆ ಹೋದನು? ಯಾವಾಗ ಹೋದನು? ಇದರ ಸಂಗತಿಯೇನೂ ನನಗೆ ತಿಳಿಯದಲ್ಲ! ನಿಮ್ಮ ಸ್ಥಿತಿಯು ಇಂದು ಹೀಗೇಕೆ ಆಗಿದೆ? ಎಂದು ಕೇಳಲು, ಮಾಸಾಹೇಬರು-ನೀನು ಇನ್ನು ಒಂದೆರಡು ದಿವಸ ನನ್ನನ್ನು ಏನೂ ಕೇಳಬೇಡ. ನನ್ನ ಜೀವಕ್ಕಾಗುವ ವ್ಯಥೆಯಷ್ಟೇಸಾಕು. ಮತ್ತೆ ನಿನ್ನ ಜೀವವನ್ನೇಕೆ ವ್ಯಥೆಗೆ ಈಡು ಮಾಡುತ್ತೀ? ನನಗೆ ಇನ್ನು ಹುಚ್ಚು ಹಿಡಿಯವದು. ಈಗ ಕಳೆದು ಹೋಗಿರುವ ದಿನಗಳೇ ಒಳ್ಳೆಯವೆಂದುತಿಳಿ. ಇನ್ನು ಬರುವ ದಿನಗಳು ಬಹಳ ಕೆಟ್ಟವು. ಇರಲಿ, ನೀನು ನನಗಿಷ್ಟು ಹಾಲು ತಂದುಕೊಡು ಹೋಗು. ನಿನ್ನಿಂದ ನಾನು ಭ್ರಮಿಷ್ಟಳಂತೆ ಆಗಿದ್ದೇನೆ. ಪ್ರಸಂಗ ಒದಗಿತೆಂದರೆ ನಿನಗೆಲ್ಲ ಸಂಗತಿಗಳು ಗೊತಾಗುತ್ತವವು. ನಿನಗೆ ಗೊತ್ತಾಗದೆ ಯಾವ ಕೆಲಸವಾಗುವಹಾಗಿದೆ? ನನಗಿಷ್ಟು ಕುಡಿಯಲಿಕ್ಕೆ ಹಾಲುತಂದುಕೊಡುತ್ತೀಯಷ್ಟೆ? ಎಂದು ಕೇಳಿದಳು. ಪಾಪ! ಜೈಲಿಯು ತಿರುಗಿ ಮಾತಾಡದೆ ಹಾಲುತರಲಿಕ್ಕೆ ಹೋದಳು. ಇತ್ತ ಮಾಸಾಹೇಬರು

ವಿಚಾರಮಗ್ನರಾಗಿಯೇ ಇದ್ದರು. ಇಷ್ಟು ಹೊತ್ತಾದರೂ ಮಗನು ಬಾರದೆಯಿರುವದು ಅವರಿಗೆ ಸಲಕ್ಷಣವಾಗಿ ತೋರಲಿಲ್ಲ. ಅವರ ಮನಸ್ಸು ಬಹಳ ಅಸ್ವಸ್ಥವಾಯಿತು. ನಾನು ನಿನ್ನೆ ಆಡಿದ ಮಾತಿಗೆ ರಣಮಸ್ತನು ಸಿಟ್ಟಾಗಿ ಎಲ್ಲಿಗಾದರೂ ಹೊರಟುಹೋಗಿರಬಹುದೋ? ಹಾಗಾಗಿದ್ದರೆ ಮುಂದೆ ನನ್ನ ಗತಿಯೇನು? ಛೇ, ನನ್ನ ರಣಮಸ್ತನು ಹೀಗೆ ಮಾಡಲಿಕ್ಕಿಲ್ಲ. ಆತನು ಹೀಗೆ ನನ್ನನ್ನು ಎಂದೂ ಬಿಟ್ಟು ಹೋಗಲಿಕ್ಕಿಲ್ಲ. ಸಿಟ್ಟಾಗಿ ತಾನೆರಡು-ತಾಸು ಹೋಗುವದರೊಳಗೇ ಆತನಿಗೆ ಪಶ್ಚಾತ್ತಾಪವಾದೀತು, ಎಂಬಿನೇ ಮೊದಲಾದ ವಿಚಾರಗಳಿಂದ ಅವರು ತಲ್ಲಣಿಸುತ್ತಿರಲು, ಲೈಲಿಯು ಹಾಲುತಕ್ಕೊಂಡು ಬಂದಳು. ಮಾಸಾಹೇಬರು ಹಾಲನ್ನು ಕುಡಿದರು; ಆದರೂ ಅವರಿಗೆ ಸಮಾಧಾನವಾಗಲಿಲ್ಲ. ಅವರು ತಮ್ಮ ಕೋಣೆಯಿಂದ ಹೊರಬಿದ್ದು ಮಗನ ಬಂಗಲೆಗೆ ಹೋದರು. ಅಲ್ಲಿಂದ ಕುಂಜವನವನ್ನು ಪ್ರವೇಶಿಸಿದರು. ಹೋದ ನಜೀರನು ಇನ್ನೂ ಬರಲಿಲ್ಲವಲ್ಲ? ಕರೀಮನು ಹಾದಿಯಲ್ಲಿ ಭೆಟ್ಟಿಯಾಗಿದ್ದರೆ ನಜೀರನು ಇಷ್ಟು ಹೊತ್ತಿಗೆ ಬರುತ್ತಿದ್ದನು. ಕರೀಮನು ಹಾದಿಯಲ್ಲಿ ಭೆಟ್ಟಿಯಾದಂತೆ ತೋರುವದಿಲ್ಲ. ಇನ್ನು ಏನು ಮಾಡಬೇಕು? ನಾನಾದರೂ ಹೋಗಲಾ! ಏನೂ ಗೊತ್ತಿಲ್ಲದೆ ಹೋಗುವದಾದರೂ ಎತ್ತ? ಎಂದು ಚಡಪಡಿಸುತ್ತ ಕುಂಜವನವನ್ನೆಲ್ಲ ತಿರುಗಿದರಲ್ಲದೆ, ವಿಜಯನಗರದ ಹಾದಿಯ ಕಡೆಗೆ ಹೋಗಿ ನೋಡಿನೋಡಿ ದಣಿದರು. ಇಷ್ಟರಲ್ಲಿ ಮಧ್ಯಾಹ್ನವು ತಿರುಗಿತು. ಆದರೂ ಯಾರೂ ಸುಳಿಯಲಿಲ್ಲ.

ಆಗ ಲೈಲಿಯು ಮಾಸಾಹೇಬರಬಳಿಗೆ ಬಂದು-"ನಿನ್ನಿನಿಂದ ಅನ್ನವಿಲ್ಲ, ಊಟಮಾಡಬೇಕೆಂದು" ಹೇಳಿಕೊಳ್ಳಲು, ಮಾಸಾಹೇಬರು-ಹುಡುಗನಗೊತ್ತು ಹತ್ತುವವರೆಗೆ ಅನ್ನ-ನೀರು ವರ್ಜ್ಯವು. ಆತನು ನನ್ನಮೇಲೆ ಸಿಟ್ಟಾಗಿ ಹೋಗಿರುವನು. ಆತನಗೊತ್ತು ಹಚ್ಚಿ, ಆತನ ಸಂಗಡ ಎರಡು ಮಾತುಗಳನ್ನಾಡಿದ ಬಳಿಕ ಊಟವು, ಅಲ್ಲಿಯವರೆಗೆ ಊಟವಿಲ್ಲ. ಸುಮ್ಮನೆ ಆಗ್ರಹಮಾಡಬೇಡ, ಎಂದು ಸ್ಪಷ್ಟವಾಗಿ ಹೇಳಿದರು. ಲೈಲಿಯು ಎಷ್ಟು ಹೇಳಿಕೊಂಡರೂ ಅವರು ಕೇಳಲಿಲ್ಲ. ಆಗ ಲೈಲಿಯು-ಊಟವಿಲ್ಲದಿದ್ದರೆ ಇಲ್ಲ, ಹೀಗೆ ಬಿಸಲಲ್ಲಿ ಎಡತಾಕುವದನ್ನು ಬಿಟ್ಟು ಒಳಗಾದರೂ ನಡೆಯಿರಿ, ಎಂದು ಹೇಳಿದಳು. ಅದಕ್ಕೂ ಮಾಸಾಹೇಬರು ಕಿವಿಗೊಡಲಿಲ್ಲ. ಕಡೆಗೆ ತಾಯಿಯು ಮಗಳನ್ನು ಸಥಿಯಿಂದ ಸಿಟ್ಟುಮಾಡಿ ಕರಕೊಂಡು ಹೋಗುವಂತೆ, ಲೈಲಿಯು ಮಾಸಾಹೇಬರನ್ನು ಸಿಟ್ಟುಮಾಡಿ ಒಳಗೆ ಕರಕೊಂಡು ಹೋದಳು. ಮಾಸಾಹೇಬರು ಬಹು ಅಶಕ್ತರಾಗಿದ್ದರು. ತಮ್ಮ ಕೋಣೆಯೊಳಗೆ ಹೊದಕೂಡಲೇ ಅವರು ಹೊದಸಿನಮೇಲೆ ಕಣ್ಣುಮುಚ್ಚಿ

ಸುಮ್ಮನೆ ಮಲಗಿಕೊಂಡರು. ಹೀಗಿರುವಾಗ ಹೊತ್ತು ಮುಣಗಿತು, ಕತ್ತಲಾಗಹತ್ತಿತು. ರಣಮಸ್ತಖಾನನೂ ಇಲ್ಲ, ಆತನನ್ನು ನೋಡಲಿಕ್ಕೆ ಹೋದವರೂ ಇಲ್ಲ. ಇನ್ನು ತಾವು ಸ್ವತಃ ಹೋದಹೊರತು ಎರಡನೆಯ ಮಾರ್ಗವಿಲ್ಲೆಂದು ಮಾಸಾಹೇಬರು ನಿಶ್ಚಯಿಸಿದರು; ಆದರೆ ಅವರು ಎಲ್ಲಿಗಂತ ಹೋಗಬೇಕು? ರಣಮಸ್ತಖಾನನು ಇಂಥಲ್ಲಿ ಇರುವನೆಂದು ಗೊತ್ತಾದರೆ ಹೋಗುವದು ನೆಟ್ಟಗೆ. ಏನೂ ಗೊತ್ತಿಲ್ಲದೆ ಹೋಗಿ ಫಲವೇನು? ಎಂಬ ಪ್ರಶ್ನವು ಉತ್ಪನ್ನವಾಗಿ ಅವರು ನಿರಾಶಪಡುತ್ತಿರಲು; ನಜೀರನು ಬಂದ ಸುದ್ದಿಯನ್ನು ಲೈಲಿಯು ಹೇಳಿ, ಆತನನ್ನು ಮಾಸಾಹೇಬರ ಎದುರಿಗೆ ತಂದು ನಿಲ್ಲಿಸಿದಳು. ನಜೀರನು ಬಂದವನು ತೇಗುತ್ತಲೇ ಬಂದಿದ್ದನು. ಅವನಿಗೆ ತಟ್ಟನೆ ಮಾತಾಡಲಿಕ್ಕೆ ಬರಲೊಲ್ಲದು. ಮಾಸಾಹೇಬರು ಆತನನ್ನ ನೋಡಿ, 'ಏನು ಸುದ್ದಿಯನ್ನು ತಂದಿರುವೆ,' ಎಂದು ಕಣ್ಣು ಸನ್ನೆಯಿಂದಲೇ ಕೇಳಿದರು. ಅದನ್ನು ನೋಡಿ ತೇಗುತ್ತಲೇ ನಜೀರನು ಮಾಸಾಹೇಬರನ್ನು ಕುರಿತು—

ನಜೀರ—ಮಾಸಾಹೇಬ, ನನ್ನ ಬೆನ್ನಹಿಂದೆಯೇ ಕರೀಮನು ಬರುತ್ತಾನೆ. ಆತನು ಎಲ್ಲ ಸುದ್ದಿಯನ್ನು ಏಕಾಂತದಲ್ಲಿ ತಮಗೆ ಹೇಳುವನು.

ಮಾಸಾಹೇಬ(ಹಾಸಿಗೆಯಿಂದ ಎದ್ದು ಕುಳಿತು)—ಅವನು ಹೇಳುವದನ್ನು ಹೇಳಲಿ; ಆದರೆ ರಣಮಸ್ತಖಾನನು ಬಂದನೇ? ಆತನು ಸುರಕ್ಷಿತನಾಗಿರುವನೇ?

ನಜೀರ—ಅದೇನೂ ನನಗೆ ಗೊತ್ತಿಲ್ಲ. ನಬಾಬಸಾಹೇಬರು ಕರೀಮನ ಸಂಗಡವಂತು ಇಲ್ಲ. ಅಂದಬಳಿಕ ಅವರು ಎಲ್ಲಿರುವರೊ ಏನೋ ಯಾರಿಗೆಗೊತ್ತು!

ಈ ಮೇರೆಗೆ ಅವರಿಬ್ಬರು ಮಾತಾಡುತ್ತಿರಲು ಕರೀಮನು ಬಂದನೆಂಬ ಸುದ್ದಿಯು ಮಾಸಾಹೇಬರಿಗೆ ಹತ್ತಿತು. ಆಗ ಅವರು ಎಲ್ಲರನ್ನು ಹೊರಗೆ ಕಳಿಸಿ, ಕರೀಮನನ್ನು ಏಕಾಂತದಲ್ಲಿ ಕರೆದರು. ಆಗ ಕರೀಮನು ಮಾಸಾಹೇಬರ ಬಳಿಗೆ ಬಂದು ಮೂರುಸಾರೆ ಕುರ್ನಿಸಾತಮಾಡಿ ಕೈ ಜೋಡಿಸಿಕೊಂಡು-"ಗರೀಬಪರವರ'' ಈ ಗುಲಾಮನಿಂದ ದೊಡ್ಡ ಅಪರಾಧವಾಗಿದೆ; ಕ್ಷಮೆಯಬಗ್ಗೆ ಅಶ್ವಾಸನ ದೊರೆತರೆ ಎಲ್ಲ ಸಂಗತಿಯನ್ನು ಅರಿಕೆ ಮಾಡಿಕೊಳ್ಳುವೆನು, ಅನ್ನಲು, ಮಾಸಾಹೇಬರು-"ಹೇಳುಹೇಳು, ಎಂದು ಆತುರಪಡಹತ್ತಿದರು. ಆಗ ಕರೀಮನು ರುಮಾಲದಿಂದ ಕೈಯನ್ನು ಕಟ್ಟಿಕೊಂಡು ದೈನ್ಯಭಾವದಿಂದ—ಗರೀಬಪರವರ,

ಮಾಲಿಕಸಾಹೇಬರು ತಮಗೆ ಹೇಳಿದಮಾತನ್ನು-ಕಟ್ಟಕಡೆಯಮಾತನ್ನು ಯಾವ ಮೋರೆಯಿಂದ ನಾನು ತಮ್ಮಮುಂದೆ ಹೇಳಲಿ?

ಮಾಸಾಹೇಬ (ಕೂಡಲೇ ಗಾಬರಿಯಾಗಿ)-ಕಡೆಯಮಾತು! ಎಲಾ! ನಮ್ಮ ರಣಮಸ್ತಖಾನನು ನೆಟ್ಟಗಿದ್ದಾ ನಷ್ಟೇ? ಕಡೆಯಮಾತು ಎಂದು ಹೇಳುವೆಯಲ್ಲ? ಹಾಗಂದರೇನು? ಹೇಳುಮೊದಲು ಆತನು ಸುರಕ್ಷಿತವಾಗಿ ಇದ್ದಾನೆಯೋ ಇಲ್ಲವೋ ಹೇಳು, ಆಮೇಲೆ ಮುಂದಿನಮಾತು.

ಕರೀಮ—ಹೋ ಹೋ! ಮಾಸಾಹೇಬ, ಅವರು ಸುರಕ್ಷಿತವಾಗಿದ್ದಾರೆ; ಚಕ್ಕಂದದಿಂದ ಇದ್ದಾರೆ; ಆನಂದದಿಂದ ಇದ್ದಾರೆ; ಆದರೆ ಪುನಃ ಅವರು ತಮ್ಮ ಕಣ್ಣಿಗೆ ಮಾತ್ರ ಬೀಳಲಾರರು.

ಮಾಸಾಹೇಬ—ಎಲ್ಲಿರುತ್ತಾನೆ? ಅದನ್ನು ಮೊದಲು ನನಗೆ ಹೇಳು.

ಕರೀಮ—ಆಗಲೇ ಅವರು ರಾಮರಾಜನ ಸಂಗಡ ವಿಜಯನಗರಕ್ಕೆ ಹೋದರು. ನಾನು ತಮ್ಮ ಅಪ್ಪಣೆಯಂತೆ ತಿರುಮಲನ ಧರ್ಮಶಾಲೆಗೆ ಮುಂಗಡಹೋಗಿ ಅವರ ಹಾದಿಯನ್ನು ನೋಡುತ್ತ ಕುಳಿತುಕೊಂಡೆನು. ಮೊದಲು ನನ್ನನ್ನು ಆ ಧರ್ಮಶಾಲೆಯಲ್ಲಿ ಯಾರೂ ಬರಗೊಡಲೊಲ್ಲರು; ಆದರೆ ನನಗೊಂದು ಹಂಚಿಕೆಯು ತೋಚಿದ್ದರಿಂದ ನಾನು ಕಾವಲುಗಾರರಿಗೆ—"ನನ್ನನ್ನು ರಣಮಸ್ತಖಾನರೇ ಮುಂದೆ ಕಳಿಸಿದ್ದಾರೆ, ಹಿಂದಿನಿಂದ ಅವರು ಬರುವರು" ಎಂದು ಹೇಳಿದೆನು. ನಾನು ಸುಮ್ಮನೆ ಒಂದು ಹಳ್ಳಒಗೆದು ನೋಡಬೇಕೆಂದು ಮಾಡಿದೆನು; ಆದರೆ ಅಷ್ಟರಿಂದ ನನ್ನ ಕೆಲಸವೇ ಆಯಿತು. ನನ್ನ ಮಾತನ್ನು ಕೇಳಿದ ಕೂಡಲೇ ಅವರು ನನ್ನನ್ನು ಒಳ್ಳೇ ಮರ್ಯಾದೆಯಿಂದ ಆದರಪೂರ್ವಕವಾಗಿ ನಡಿಸಿಕೊಳ್ಳಹತ್ತಿದರು. ಆಗ ನಾನು, ನನಗೆಲ್ಲ ಗೊತ್ತಿರುವದೆಂಬದನ್ನು ತೋರಿಸುವ ಉದ್ದೇಶದಿಂದ ಅವರನ್ನು ಕುರಿತು—"ರಾಮರಾಜರು ಯಾವಾಗ ಬರುತ್ತಾರೆ! ನಿನ್ನೆ ಬಂದಹೊತ್ತಿಗೇ ಬರುವರೋ?" ಎಂದು ಸುಮ್ಮನೆ ಕೇಳಿನೋಡಿದೆನು. ಕೂಡಲೆ ಆ ಕಾವಲುಗಾರರ ಮುಖ್ಯಸ್ಥನು ನನ್ನನ್ನು ಕುರಿತು—"ಬರುತ್ತೇವೆಂದು ಹೇಳಿಯಂತು ಕಳಿಸಿದ್ದಾರೆ," ಎಂದು ಹೇಳಿದನು. ನಾನು ಒಗೆದ ಎರಡು ಹಳ್ಳುಗಳಿಂದಲೂ ಕಾರ್ಯವು ಚನ್ನಾಗಿ ಸಾಧಿಸಿತು. ಆಮೇಲೆ ನಾನು ಅವರೊಳಗೆ ಬೆರತುಕೊಂಡು ತಂಬಾಕದ ಝುರಕೆಗಳ ಮೇಲೆ ಝುರಕೆಗಳನ್ನು ಹೊಡೆಯಹತ್ತಿದೆನು. ಅಷ್ಟರಲ್ಲಿ ರಾಮರಾಜರು ಬಂದರೆಂಬ ಸುದ್ದಿಯು ಬಂದಿತು. ಆಗ ಕಾವಲುಗಾರರು ಗಡಬಡಿಸಿ ಓಡಾಡಹತ್ತಿದರು. ರಾಮರಾಜನು ಕಾವಲುಗಾರರನ್ನು ಏನೋ ಅವರ ಮಾತಿನಿಂದ ಕೇಳಲು, ಆ ಕಾವಲುಗಾರರ ಮುಖ್ಯಸ್ಥನು ನನ್ನ ಕಡೆಗೆ

ಬೆರಳುಮಾಡಿ ಏನೋ ಹೇಳಿದನು. ಆಗ ರಾಮರಾಜರು ಅತ್ಯಂತ ತೀಕ್ಷ್ಣದೃಷ್ಟಿಯಿಂದ ನನ್ನನ್ನು ನೋಡಹತ್ತಿದರು. ನಾನು ಸ್ವಸ್ಥವಾಗಿ ಕುಳಿತಿದ್ದೆನು. ಆಗ ಅವರು ನನ್ನನ್ನು ತಮ್ಮ ಹತ್ತರಕ್ಕೆ ಕರೆದು-ನಿನ್ನನ್ನು ಅವರು ಇಂದು ಮುಂದೆ ಯಾಕೆ ಕಳಿಸಿದರು? ಅವರು ಬರಲಿಕ್ಕೆ ಇನ್ನೂ ವಿಲಂಬವಿರುವದೋ ಏನು? ಎಂದು ಕೇಳಿದರು. ಅದಕ್ಕೆ ನಾನು—"ಹೌದು, ಸ್ವಲ್ಪ ತಡಮಾಡಿ ಬರಬಹುದು" ಎಂದು ಇಷ್ಟೇ ಹೇಳಿದನು. ಒಂದು ಸುಳ್ಳು ಮಾತು ಆಡಿದ ಕೂಡಲೆ ಅದನ್ನು ಮುಚ್ಚಲಿಕ್ಕೆ ಎರಡನೆಯ ಸುಳ್ಳು ಆ ಎರಡನೆಯ ಸುಳ್ಳನ್ನು ಮುಚ್ಚಲಿಕ್ಕೆ ಮೂರನೆಯ ಸುಳ್ಳು ಎಂಬಂತೆ ನನ್ನ ಅವಸ್ಥೆಯಾಯಿತು. ನಿಜವಾಗಿಯೇ ಖಾನಸಾಹೇಬರು ಅಲ್ಲಿಗೆ ಬಂದು ನನ್ನ ಈ ಕೃತಿಯು ಅವರಿಗೆ ತಿಳಿದರೆ, ನನ್ನ ಗತಿಯು ಏನಾದೀತೆಂಬದರ ಎಚ್ಚರವು ಆಗ ನನಗೆ ಉಳಿಯಲಿಲ್ಲ. ದುರ್ದೈವದಿಂದ ಖಾನಸಾಹೇಬರು ಅಲ್ಲಿಗೆ ಬಂದುಬಿಟ್ಟರು. ಅವರನ್ನು ನೋಡಿದ ಕೂಡಲೇ ನನ್ನ ಕಣ್ಣುಗಳು ತೆರೆದು ನಾನು ಹಿಂದಹಿಂದಕ್ಕೆ ಸರಿಯಹತ್ತಿದೆನು. ಅಷ್ಟರಲ್ಲಿ ರಾಮರಾಜನು ಖಾನಸಾಹೇಬರನ್ನು ಕುರಿತು—ನೀವು ಮುಂದೆ ಕಳಿಸಿದ ಮನುಷ್ಯನು ಇದೇ ಈಗ ಇಲ್ಲಿಗೆ ಬಂದನು.....ಎಂದು ಇನ್ನೂ ಏನೋ ಮಾತಾಡುತ್ತಿರಲು, ಅಷ್ಟರಲ್ಲಿ ಖಾನಸಾಹೇಬರು—ನಮ್ಮ ಮನುಷ್ಯನು? ನಮ್ಮ ಮನುಷ್ಯನು ಯಾವನವನು? ನಾನಂತು ಯಾರನ್ನೂ ಮುಂದೆ ಕಳಿಸಿರುವುದಿಲ್ಲ. ಎಲ್ಲಿ ಇದ್ದಾನೆ ಅವನು? ಎಂದು ಕೇಳಿದರು. ಆಗ ನನ್ನ ಮೋರೆ ಹುಚ್ಚು ಇಟ್ಟಿತು. ನನಗೆ ಎಲ್ಲಿ ಅಡಗಿಕೊಳ್ಳಲಿ ಎಲ್ಲಿ ಬಿಡಲಿ ಎನ್ನುವ ಹಾಗೆ ಆಯಿತು; ಆದರೆ ಮಾಡಲೇನು? ತೆಪ್ಪಗೆ ಖಾನಸಾಹೇಬರ ಮುಂದೆ ನಿಂತುಕೊಳ್ಳಬೇಕಾಯಿತು. ಕಾವಲುಗಾರರು ನನ್ನನ್ನು ತಬ್ಬಿಕೊಂಡು ತಂದೇಬಿಟ್ಟರು."

ಇಲ್ಲಿಯವರೆಗೆ ಮಾಸಾಹೇಬರು ಕರೀಮನ ಮಾತುಗಳನ್ನು ಸುಮ್ಮನೆ ಕೇಳುತ್ತಲಿದ್ದರು. ಈಗ ದೂತ, ಅವರು ಕರೀಮನಿಗೆ-ಛೀ, ಬುದ್ಧಿಗೇಡೀ! ನೀನು ಇಷ್ಟು ಎವಡನಿದ್ದೀ ಎಂಬದು ನನಗೆ ಗೊತ್ತಿದ್ದಿಲ್ಲ. ಒಳ್ಳೆಯದು, ಮುಂದೇನಾಯಿತು. ಹೇಳು, ಎಂದು ಕೇಳಿದರು. ಅದಕ್ಕೆ ಕರೀಮನು—ಮುಂದೇನಾಗುವುದು? ನಾನು ಖಾನಸಾಹೇಬರ ಎದುರಿಗೆ ನಿಂತುಕೊಂಡ ಕೂಡಲೆ ಅವರು ನನ್ನ ಗುರುತು ಹಿಡಿದು ನನ್ನನ್ನು ಗದ್ದರಿಸಿ—ಎಲ್ಲಾ ಗುಪ್ತಚಾರರನ್ನಾಗಿ ಯಾರು ಕಳಿಸಿದರು ನಿನ್ನನ್ನು? ಮಾಸಾಹೇಬರಲ್ಲವೇ? ಹೌದು, ಅವರೇ ನಿನ್ನನ್ನು ಕಳಿಸಿದರು. ನಿನ್ನ ಮೋರೆಯೇ ಹಾಗೆ ಹೇಳುತ್ತದೆ. ಸುಳ್ಳು ಹೇಳಬೇಡ. ಒಳ್ಳೆಯದು, ಇನ್ನು ಕದ್ದು ಮುಚ್ಚಿಯಾದರೂ ಯಾತಕ್ಕೆ! ಸ್ವಲ್ಪ ನಿಲ್ಲು, ನಿನ್ನ ಮುಂದೆಯೇ

ಮಾಸಾಹೇಬರಿಗೆ ಸ್ಪಷ್ಟವಾಗಿ ಹೇಳಿ ಕಳಿಸಿಬಿಡುತ್ತೇನೆ. ಹಿಡಿರೋ ಇವನನ್ನು ಅನಕಾ ಪ್ರತಿಬಂಧದಲ್ಲಿ. ನಾನು ಪುನಃ ಹೇಳಿದಾಗ ಕರಕೊಂಡು ಬರುವಿರಂತೆ, ಎಂದು ಹೇಳಿ, ಅವರು ರಾಮರಾಜನೊಡನೆ ಏಕಾಂತವಾಡಲಿಕ್ಕೆ ಹೋದರು. ಅಲ್ಲಿ ಬಹಳ ಹೊತ್ತು ಅವರ ಏಕಾಂತವಾಯಿತು. ಆಮೇಲೆ ಖಾನಸಾಹೇಬರು ಪುನಃ ತಮ್ಮ ಬಳಿಗೆ ನನ್ನನ್ನು ಕರಿಸಿಕೊಂಡು ನನಗೆ—" ಲುಚ್ಚಾ ನಿನ್ನನ್ನು ಒಂದು ಗಿಡಕ್ಕೆ ತೂಗಗಟ್ಟಿಸಿ ಈಗ ಹೊಡೆಸುತ್ತಿದ್ದೆನು; ಆದರೆ ನಿನ್ನಿಂದ ಒಂದು ಮಹತ್ವದ ಕೆಲಸ ಮಾಡಿಸಿಕೊಳ್ಳಬೇಕಾಗಿರುತ್ತದೆ. ಆದ್ದರಿಂದ ಬಿಟ್ಟಿದ್ದೇನೆ. ಹೇಗೆ ಮುಂದಕ್ಕೆ ಬಾ. ನಾನು ಹೇಳುವುದನ್ನು ಚನ್ನಾಗಿ ಲಕ್ಷದಲ್ಲಿಟ್ಟುಕೋ. ಮಾಸಾಹೇಬರ ಮುಂದೆ ಹೇಳುವಾಗ ಒಂದು ಶಬ್ದವನ್ನಾದರೂ ತಪ್ಪಬೇಡ ನಾನು ಹೇಳಿದಂತೆ ಒಂದು ಅಕ್ಷರ ಬಿಡದೆ ಅವರ ಮುಂದೆ ಹೇಳು. ಇನ್ನು ಮೇಲೆ ಅವರಿಗೂ ನನಗೂ ಜೆಟ್ಟಿಯಾಗಲಾರದೆಂದು ಸ್ಪಷ್ಟವಾಗಿ ಅವರಿಗೆ ಹೇಳು. ನಾನು ಅವರಿಗೆ ಎರವಾದೆನು, ಅವರು ನನಗೆ ಎರವಾದರು. ನಾನು ವಿಜಾಪುರದ ಬಾದಶಹನ ಚಾಕರಿಯನ್ನು ಬಿಟ್ಟಿನು. ಈಗ ಒಂದೂರಾಜನ--ರಾಮರಾಜನ ನೌಕರನಾಗಿರುತ್ತೇನೆ. ನಾನು ಇನ್ನು ವಿಜಾಪುರದವರ, ಅದೇಕೆ ಎಲ್ಲಾ ಮುಸಲ್ಮಾನ ರಾಜರ ಸೇಡು ತೀರಿಸಿಕೊಳ್ಳತಕ್ಕವನು. ನೀವು ಗುಪ್ತರೀತಿಯಿಂದ ಕೋಧಮಾಡಿಸಿ ತಿಳಕೊಳ್ಳುವುದಕ್ಕಿಂತ ಹೆಚ್ಚು ಸ್ಪಷ್ಟವಾಗಿ ನಾನು ತಿಳಿಸಿರುತ್ತೇನೆಂದು ಮಾಸಾಹೇಬರಿಗೆ ಹೇಳು, ಎಂದು ನನ್ನ ಮುಂದೆ ಖಾನಸಾಹೇಬರು ಹೇಳಿದರು.

ಕರೀಮನ ಈ ಮಾತುಗಳನ್ನು ಕೇಳಿದ ಕೂಡಲೆ ಮಾಸಾಹೇಬರಿಗೆ ದಶ ದಿಕ್ಕುಗಳು ಶೂನ್ಯವಾದವು. ಇತ್ತ ಕರೀಮನು ತಾನು ಹೇಳುವ ಈ ಎಲ್ಲ ಸುದ್ದಿಯನ್ನು ಕೇಳಿದ ಬಳಿಕ ಮಾಸಾಹೇಬರು ತನಗೆ ಯಾವ ಶಿಕ್ಷೆಯನ್ನು ವಿಧಿಸುವರೋ ಏನೋ, ಅಷ್ಟರಲ್ಲಿ ನಾನು ಕಾಲಿಗೆ ಬುದ್ಧಿಯನ್ನು ಹೇಳಿಸಬೇಕೆಂದು ಯೋಚಿಸಿ, ಆತನು ಅಲ್ಲಿಂದ ಪಲಾಯನ ಸೂಕ್ತವನ್ನು ಪರಿಸಿದನು. ಮಾಸಾಹೇಬರು ತಮ್ಮೊಳಗೆ ವಿಚಾರಮಗ್ನರಾಗಿದ್ದರು. ಅವರು ಮನಸ್ಸಿನಲ್ಲಿ—ಇದೇನು! ಇದೆಲ್ಲಿಯ ಬಡಿಗಲ್ಲು ಬಂದಿತು? ನಾನು ಎಚ್ಚತ್ತಿರುವೆನೋ, ಕನಸಿನಲ್ಲಿರುವೆನೋ! ಈತನು ನನ್ನೆದುರಿಗೆ ನಿಂತು ಹೇಳುವುದೇನು, ನಾನು ಜಾಗೃದಾವಸ್ಥೆಯಲ್ಲಿ ಕೇಳುವೆನೋ, ಸ್ವಪ್ನಾವಸ್ಥೆಯಲ್ಲಿ ಕೇಳುವೆನೋ? ನನ್ನ ಮಗನು, ಯಾವನನ್ನು ಒಂದು ಉದ್ದಿಷ್ಟಕಾರ್ಯವ ಸಾಧಿಸುವ ಉದ್ದಿಶ್ಯವಾಗಿ ಜನ್ಮ ದಾರಭ್ಯ ಪರಿಪರಿಯ ಕಷ್ಟಗಳಿಗೆ ಗುರಿಯಾಗಿ ನಾನು ಇಲ್ಲಿಯವರೆಗೆ ಸಂರಕ್ಷಿಸಿದೆನೋ, ಆ ನನ್ನ ಮಗನು ನನ್ನ ಉದ್ದಿಷ್ಟ ಕಾರ್ಯವನ್ನು ಮಣ್ಣುಗೂಡಿಸಿ, ನನ್ನ ಆಶಾತಂತುವನ್ನು ಹರಿದು

ನನ್ನನ್ನು ದೂರ ದಬ್ಬಿಕೊಟ್ಟು ಯಾರ ಕಡೆಗೆ ಹೋದನು ಆತನು ಯಾರ ಸ್ನೇಹವನ್ನು ಬಳಿಸಿದನು? ಯಾರನ್ನು ದ್ವೇಸಿಸಹತ್ತಿದನು? ಯಾರಿಗೆ ಇಂಥ ನಿಷ್ಠುರ ಮಾತುಗಳನ್ನು ಹೇಳಿಕಳಿಸಿದನು? ಇನ್ನು ಮುಂದೆ ನಾನು ಏನು ಮಾಡಲಿ? ಇನ್ನು ನನಗೆ ಬದುಕುವ ಆಶೆ ಏತಕ್ಕೆ? ಪರವರದಿಗಾರ, ಅಲ್ಲಾ ಈ ವರೆಗೆ ನಿನ್ನನ್ನು ಸೇವಿಸಿದ್ದು ವ್ಯರ್ಥವಾಯಿತೇ? ಇಷ್ಟು ದಿವಸ ನನಗೆ ಯಾಕೆ ಆಶೆ ಯನ್ನು ತೋರಿಸಿದಿ? ಇಷ್ಟು ದಿವಸ ನನ್ನ ಕೈಯಿಂದ ಆತನ ಸಂಗೋಪನವನ್ನಾ ದರೂ ಯಾಕೆ ಮಾಡಿಸಿದಿ? ಆತನು ಹುಟ್ಟುತ್ತಲೆ ಸತ್ತು ಹೋಗಿದ್ದರೆ ನೆಟ್ಟಗಾಗು ತ್ತಿದ್ದಿಲ್ಲವೆ? ನಾನು ಆತನ ಮಾಯಾಪಾಶದಲ್ಲಿ ಸಿಕ್ಕಿಕೊಳ್ಳದೆ, ಅನನ್ಯಭಾವದಿಂದ ನಿನ್ನ ಆರಾಧನೆಯನ್ನಾದರೂ ಮಾಡುತ್ತಿದ್ದೆನು. ಪರಮೇಶ್ವರಾ, ಈಗ ನಾನು ಅನನ್ಯಭಾವದಿಂದ ನಿನ್ನಲ್ಲಿ ಲೀನಳಾಗಿರುವುದಿಲ್ಲ ನಿನ್ನಲ್ಲಿ ಅರ್ಧ ಭಾವವನ್ನೂ, ಮಗನಲ್ಲಿ ಅರ್ಧ ಭಾವವನ್ನೂ ಇಟ್ಟಿರುವೆನು. ಈ ತಪ್ಪಿಗಾಗಿಯೇ ನನ್ನನ್ನು ನೀನು ಹೀಗೆ ದಂಡಿಸಿರುವುದಿಲ್ಲವಷ್ಟೆ? ಎಂಥಾ ಭಯಂಕರ ಶಿಕ್ಷೆ ಇದು! ಹೊಟ್ಟೆಯ ಮಗನಿಂದ ಇಂಥ ಭಯಂಕರ ಸಿಕ್ಷೆಯನ್ನು ಅನುಭವಿಸುವುದಕ್ಕಿಂತ ಸಾವು ಬಂದರೆ ನೆಟ್ಟಗಲ್ಲವೆ? ಎಂದು ಆಲೋಚಿಸಹತ್ತಿದರು. ಹೀಗೆ ಆಲೋಚಿಸುವಾಗ ಅವರಿಗೆ ಅಂದು ಮುಂಜಾವಿನಲ್ಲಿ ಬಿದ್ದಿದ್ದ ಸ್ವಪ್ನದ ನೆನಪಾಯಿತು. ತಮ್ಮ್ಮ ಮಗನು ತಮ್ಮ್ಮನ್ನು ಪರ್ವತದ ಕೆಳಗೆ ದೂಡಿಕೊಟ್ಟಿದ್ದರ ಚಿತ್ರವು ಅವರ ಕಣ್ಣಿಗೆ ಕಟ್ಟಿತು. ಅವರು ಮನಸ್ಸಿನಲ್ಲಿ—" ಆ ಕೆಟ್ಟ ಕನಸು ಬಿದ್ದಿದ್ದರಿಂದಲೇ ನಾನು ಇಂಥಾ ಅನ ರ್ಥದ ಸುದ್ದಿಯನ್ನು ಕೇಳಿದೆನು. ಈ ಅನರ್ಥವನ್ನು ಸೂಚಿಸುವುದಕ್ಕಾಗಿಯೇ ನನಗೆ ಆ ಕನಸು ಬಿದ್ದಿರಬಹುದೋ? ಹೌದು, ಹಾಗಲ್ಲದಿದ್ದರೆ ಅಂಥ ಭಯಂ ಕರ ಸ್ವಪ್ನವು ಹ್ಯಾಗೆ ಬೀಳುವುದು? ನಾನು ಇನ್ನು ಏನು ಮಾಡಲಿ! ಈ ಕುಂಜ ವನದ ವಾಸವು ಇನ್ನು ನನಗೆ ಯಾತಕ್ಕೆ? ಇದರ ಸಂಬಂಧವು ನನಗೆ ಏನು? ಇ ನ್ನು ಮೇಲೆ ನನ್ನನ್ನು ಇಲ್ಲಿ ಇರಗೊಡುವವರಾದರೂ ಯಾರು? ಇರಗೊಟ್ಟರೂ ನಾ ನು ಇರಬೇಕೇಕೆ? ಇನ್ನು ನಾನು ಹೋಗುವುದಾದರೂ ಎಲ್ಲಿಗೆ? ಮಗನು ಮುಸ ಲ್ಮಾನರ ಪೈರಿಯನ್ನು ಕೂಡಿಕೊಂಡಿದ್ದರಿಂದ ನಾನು ಯಾವ ಮೋರೆಯಿಂದ ಮುಸಲ್ಮಾನರ ರಾಜ್ಯದಲ್ಲಿ ಆಶ್ರಯವನ್ನು ಪಡೆಯಲಿ? ವಿಜಾಪುರಕ್ಕೆ ಹೋದರೆ, ಜನರು ನನ್ನನ್ನು ಎಷ್ಟು ನಿರಾಕರಿಸಬಹುದಲ್ಲ! ಜನರು ನನ್ನ ಕಡೆಗೆ ಬೆರಳು ಮಾಡಿ—" ಈ ಚಂಡಾಲಳ ಮಾತಿಗೆ ಮರುಳಾಗಿಯೇ ಬಾದಶಹರು ರಣಮಸ್ತ ಖಾನನನ್ನು ದೊಡ್ಡ ಪದವಿಗೇರಿಸಿದರು; ಮತ್ತು ಎಷ್ಟೋ ಜನರು ಅನುಭವಿಕ ರಿದ್ದರೂ, ಅವರನ್ನೆಲ್ಲ ಬಿಟ್ಟು ವಿಜಯನಗರದಂಥ ರಾಜ್ಯದ ದರ್ಬಾರದಲ್ಲಿ ರಣ ಮಸ್ತಖಾನನ್ನು ವಕೀಲನಾಗಿ ಬಾದಶಹರು ಕಳಿಸಿದ್ದು, ಈ ದುಷ್ಟಳ ಮಾತಿನಿಂದ

ಲೇ ಆದರೆ ಕಡೆಗೆ ಆ ಅಧಮ ರಣಮಸ್ತನು ತನ್ನ ಮೋರೆಗೆ ಕಪ್ಪು ಬಡಕೊಂಡದ ಲ್ಲದೆ ಬಾದಶಹರ ಗೌರವಕ್ಕೂ ಬಾಧೆ ತಂದನು, ಎಂದು ಜನರು ದೂರಿಕೊಳ್ಳುವ ರು ಅಂದ ಬಳಿಕ ವಿಜಾಪುರಕ್ಕಂತು ನಾನು ಹೋಗುವಹಾಗಿಲ್ಲ. ಇನ್ನು ಬೇರೆ ಕಡೆಗೆ ಹೋಗುವದೆತ್ತ ? ಬೇರೆ ಕಡೆಗೆ ನಾನು ಹೋಗುವದಾದರೂ ಯಾತಕ್ಕೆ? ಈ ಪುಷ್ಕರಣಿಯಲ್ಲಿ ಹಾರಿಕೊಂಡು ಬಿಟ್ಟರಾಯಿತು. ಈಗ ಮುವತ್ತು ವರ್ಷಗಳ ಹಿಂದೆಯೇ ಮಾಡಬೇಕಾಗಿದ್ದ ಕೆಲಸವನ್ನು ಈಗ ಮಾಡಬೇಕು. ಆಗ ನನ್ನ ಹೊಟ್ಟೆಯಲ್ಲಿ ಮತ್ತೊಂದು ಜೀವವಿದ್ದದ್ದರಿಂದ ಅದರ ಮೋಹವು ಬಾಧಿಸಲು, ಪ್ರಾಣವನ್ನು ಅರ್ಪಿಸುವುದು ನನ್ನಿಂದಾಗಲಿಲ್ಲ. ಆಗಿನ ನನ್ನ ಆಲೆಯೇ ಬೇರೆ ಇತ್ತು. ಯಾವ ಮಗನಿಂದ ರಾಮರಾಜನ ಶಾಸನ ಮಾಡಿಸಬೇಕೆಂದು ನಾನು ಮಾಡಿದ್ದೆನೋ, ಆ ಮಗನೇ ಹೀಗೆ ನನ್ನ ಶಾಸನ ಮಾಡಿದ ಬಳಿಕ ಇನ್ನುಮೇಲೆ ನನಗೆ ಯಾತರ್ಥ ಆಲೆ? ಅಥವಾ ನನ್ನನ್ನು ಶಿಕ್ಷಿಸಲಿಕ್ಕೆ ಮಗನಾದರೂ ಎಷ್ಟರವನು? ಪರವರದಿಗಾರಖುದಾನೇ ನನ್ನ ಅಪರಾಧಕ್ಕಾಗಿ ನನ್ನನ್ನು ಶಿಕ್ಷಿಸಿರುವನು ನಾನು ಪ್ರತ್ಯಕ್ಷ ಪತಿಯ ಸೇಡನ್ನು ಭಯಂಕರ ರೀತಿಯಿಂದ ತೀರಿಸಲು ಯೋಚಿಸಿದ್ದು ಅಪರಾಧವಲ್ಲವೇ? ಅಲ್ಲಾನಿಗೆ ಅನ್ಯಾಯವಾಗಿ ತೋರಿದ್ದರೆ ರಾಮರಾಜನನ್ನು ಆತನೇ ಶಿಕ್ಷಿಸುತ್ತಿದ್ದನು. ಶಿಕ್ಷಿಸುವುದು ರಕ್ಷಿಸುವುದು ಆತನ ಕೆಲಸವಿದ್ದು, ಅದರಲ್ಲಿ ನಾನು ಯಾಕೆ ಕೈಹಾಕಬೇಕು? ಮೊದಲು ನನ್ನ ಮನಸ್ಸಿನಲ್ಲಿ ಪ್ರೇಮದ ಹೊರತು ಎರವನೆಯ ವಿಕಾರವೇ ಇದ್ದಿಲ್ಲ. ಅಂದಬಳಿಕ ಅದರ ಸ್ಥಳದಲ್ಲಿ ನಾನು ಈರ್ಷೆಯನ್ನು ಯಾಕೆ ಬರಗೊಡಬೇಕು? ನನ್ನ ಈ ಅಪರಾಧಕ್ಕಾಗಿ ನನಗೆ ದೇವಾಂತ ಶಿಕ್ಷೆಯಾಗುವುದೇ ನ್ಯಾಯವು.

ಈ ಮೇರೆಗೆ ಮಾಸಾಹೇಬರ ಮನಸ್ಸಿನಲ್ಲಿ ಹಲವು ವಿಚಾರಗಳು ಉತ್ಪನ್ನವಾದವು ಅವರು ಏನೂ ತೋಚದೆ, ಸ್ತಬ್ಧವಾಗಿ ಕುಳಿತುಕೊಂಡುಬಿಟ್ಟರು. ತಮಗೆ ಸುದ್ದಿಯನ್ನು ಹೇಳಿದ ಕರೀಮನು ಯಾವಾಗ ಹೋದನೆಂಬದು ಅವರಿಗೆ ಗೊತ್ತೇ ಆಗಲಿಲ್ಲ. ಅದರಂತೆ ಅವರ ಬಳಿಯಲ್ಲಿ ಲೈಲಿಯು ನಿಂತದ್ದೂ ಅವರಿಗೆ ಗೊತ್ತಾಗಲಿಲ್ಲ. ಮಾಸಾಹೇಬರ ಈ ವಿಚಿತ್ರ ಸ್ಥಿತಿಯನ್ನು ನೋಡಿ ಲೈಲಿಗೆ ಅವರನ್ನು ಮಾತಾಡಿಸುವ ಧೈರ್ಯವಾಗದೆ ಅಕೆಯು ಸುಮ್ಮನೆ ಒತ್ತಟ್ಟಿಗೆ ಆಲೋಚಿಸುತ್ತ ನಿಂತುಬಿಟ್ಟಿದ್ದಳು. ಮಾಸಾಹೇಬರಾದವರೂ ಹೀಗೆ ಎಷ್ಟುಹೊತ್ತು ವಿಚಾರ ಮಾಡುತ್ತ ನಿಂತುಕೊಳ್ಳುವರು? ಶರೀರಕ್ಕಿರುವಂತೆ ಮನಸ್ಸಿಗಾದರೂ ದಣುವಿಕೆಯು ಇದ್ದೇ ಇರುವುದು. ಅವರು ಮುಂದೆ ಸ್ವಲ್ಪ ಹೊತ್ತಿನಲ್ಲಿ ಎಚ್ಚತ್ತು ಲೈಲಿಯ ಕಡೆಗೆ ನೋಡಿದರು. ಆಗ ಅವರು ಶಾಂತ ಮುದ್ರೆಯಿಂದ ಲೈಲಿಯನ್ನು ಕುರಿತು-

ಲೈಲೀ, ಇನ್ನು ಇಲ್ಲಿಯ ನನ್ನ ಅವತಾರವು ಮುಗಿದಂತಾಯಿತು. ನಮ್ಮ ಮನಸ್ಸಿನಲ್ಲಿದ್ದದ್ದು ಬಂದು, ಖುದಾನ ಮನಸ್ಸಿನಲ್ಲಿದ್ದದ್ದು ಮತ್ತೊಂದು. ಖುದಾನು ತನ್ನ ಮನಸ್ಸಿನಂತೆ ಮಾಡಿಬಿಟ್ಟನು. ಇನ್ನು ಮುಂದೆ ನಾವು ಏನು ಮಾಡಬೇಕೆಂಬದನ್ನು ಗೊತ್ತುಮಾಡಿಕೊಂಡು, ಇನ್ನು ಒಂದೆರಡು ತಾಸಿನೊಳಗೆ ನಿನಗೆ ಹೇಳುವೆನು. ಪುನಃ ಅಜ್ಞಾತವಾಸಮಾಡಿದ ಹೊರತು ನಮಗೆ ಬೇರೆ ಮಾರ್ಗವಿಲ್ಲ. ಇನ್ನು ಮೇಲೆ ನಾವು ಮಾಡಬೇಕಾಗಿರುವ ಅಜ್ಞಾತವಾಸವು ಎಂದೆಂದೂ ಯಾರಿಯಾರಿಗೂ ಗೊತ್ತಾಗದಂತೆ ಇರಬೇಕು! ಎಂದು ನುಡಿದು, ಮಾಸಾಹೇಬರು ಸ್ವಲ್ಪ ನಕ್ಕರು. ಅವರ ನಗೆಯ ಅರ್ಥವು ಲೈಲಿಗೆ ತಿಳಿಯಲಿಲ್ಲೆಂತಲ್ಲ. ಮಾಸಾಹೇಬರು ಆಕೆಯ ಮುಂದೆ ಯಾವ ಸುದ್ದಿಯನ್ನೂ ಹೇಳದಿದ್ದರೂ, ಲೈಲಿಯು ಕರೀಮನನ್ನೂ, ನಜೀರನನ್ನೂ ಕೇಳಿ ಎಲ್ಲ ಸುದ್ದಿಯನ್ನು ಕೇಳಿಕೊಂಡಿದ್ದಳು. ಸೇವಕರ ಬಾಯಲ್ಲಿ ಮಾತು ಎಲ್ಲಿ ನಿಲ್ಲುವವು? ಅದರಲ್ಲಿ ರಣಮಸ್ತ ಖಾನನು ಫಿತೂರಾಗಿ ಹಿಂದೂ ಜನರನ್ನು ಕೂಡಿಕೊಂಡಿದ್ದ ಸುದ್ದಿಯು; ಅಂದ ಬಳಿಕ ಅದು ಗುಸ್ತವಾಗಿ ಬಹಳ ಹೊತ್ತು ಹ್ಯಾಗೆ ಉಳಿಯಬೇಕು? ಆ ಸುದ್ದಿಯು ಲೈಲಿಯ ಕಿವಿಗೆ ಮುಟ್ಟಿದ್ದಲ್ಲದೆ ಕುಂಜವನದ ತುಂಬ ಹಬ್ಬಿ, ಸ್ವಲ್ಪ ಹೊತ್ತಿನಲ್ಲಿ ಅದು ಮುಖ್ಯ ವಕೀಲನ ಕಿವಿಯವರೆಗೂ ಹೋಯಿತು. ಇರಲಿ, ಮಾಸಾಹೇಬರ ಮಾತನ್ನು ಕೇಳಿ ಲೈಲಿಯು ತಾನು ಏನೋ ಮಾತಾಡಬೇಕೆನ್ನುತ್ತಿರಲು, ಅದನ್ನರಿತು ಮಾಸಾಹೇಬರು ಪುನಃ ಲೈಲಿಯನ್ನು ಕುರಿತು—ಲೈಲೀ, ನೀನು ಇನ್ನು ಯಾವ ಮಾತನ್ನೂ ಆಡಬೇಡ. ಮಾತಾಡುವದರಲ್ಲೇನೂ ಅರ್ಥವಿರುವದಿಲ್ಲ. ಈಗ ಮೂವತ್ತು ವರ್ಷಗಳ ಹಿಂದೆ ನಾವು ಈ ಕುಂಜವನವನ್ನು ಬಿಟ್ಟುಹೋಗುವಾಗ ಇದ್ದಂತೆಯೇ ಈಗ ಇರುತ್ತೇವೆಂದು ತಿಳಿ. ನಡುವೆ ಆದದ್ದನ್ನೆಲ್ಲ ಮರೆತು ಬಿಡು. ಹೋಗು, ಒಳಗೆಹೋಗು. ನಾನು ಕರೆದಕೂಡಲೆ ಬಾ, ಆಗ ಮಾತಾಡೋಣ ಈಗ ನೀನು ಯಾವ ಮಾತನ್ನೂ ಆಡಬೇಡ, ಎಂದು ಹೇಳಿ ಲೈಲಿಯನ್ನು ಕಳಿಸಿ ಮಾಸಾಹೇಬರು ವಿಚಾರಮಗ್ನರಾದರು. ಅವರ ಮನಸ್ಸಿನಲ್ಲಿ ಬಹು ಭಯಂಕರವಾದ ವಿಚಾರತರಂಗಗಳು ಉತ್ಪನ್ನವಾದವು. ಕಡೆಗೆ ಅವರು ಪುಷ್ಕರಣಿಯಲ್ಲಿ ದುಮುಕಿ ತಾವು ಪ್ರಾಣತ್ಯಾಗ ಮಾಡಬೇಕೆಂದು ನಿಶ್ಚಯಿಸಿದರು. ಹೀಗೆ ನಿಶ್ಚಯ ಮಾಡಿದ ಬಳಿಕ ಅವರ ಮನಸ್ಸಿಗೆ ಸ್ವಲ್ಪ ಸಮಾಧಾನವಾದಂತಾಯಿತು. ಬಳಿಕ ಅವರು, ತಾವು ಪ್ರಾಣತ್ಯಾಗ ಮಾಡುವ ಪೂರ್ವದಲ್ಲಿ ಏನು ಮಾಡಬೇಕೆಂಬದನ್ನು ಕುರಿತು ಆಲೋಚಿಸತೊಡಗಿದರು. ತನ್ನ ನಿಜವಾದ ವೃತ್ತಾಂತವನ್ನೆಲ್ಲ ರಣಮಸ್ತಖಾನನಿಗೆ ತಿಳಿಸಬೇಕೆಂದು ಮುಟ್ಟಿನೊಪಲು ಅವರು ನಿಶ್ಚಯಿಸಿದರು. ನಾನು ಇಂದು ಪ್ರಾಣತ್ಯಾಗ ಮಾಡಿದರೂ ರಣಮಸ್ತಖಾನ

ನಿಗೆ ನಿಜವಾದ ಸಂಗತಿಯನ್ನು ತಿಳಿಸಬೇಕು; ಅಂದರೆ ತಾನು ಯಾರ ಪಕ್ಷವನ್ನು ವಹಿಸಿರುವನೆಂಬದು ಆತನಿಗೆ ಗೊತ್ತಾಗಿ, ಆತನು ರಾಮರಾಜನ ಸೇಡು ತೀರಿಸಿಕೊಳ್ಳದೆ ಬಿಡಲಿಕ್ಕಿಲ್ಲ; ಅಂದ ಬಳಿಕ ನನ್ನ ಸಂಕಲ್ಪವು ಪೂರ್ಣವಾದ ದ್ದನ್ನು ನಾನು ಕಣ್ಣಮುಟ್ಟ ನೋಡದಿದ್ದರೂ, ಪರಲೋಕದಲ್ಲಾದರೂ ಅದು ನನಗೆ ಗೊತ್ತಾದರೆ ನನ್ನ ಸಮಾಧಾನವಾದೀತು. ಏನು ಮಾಡದಿದ್ದರೂ ನಿಜವಾದ ಸಂಗತಿಯನ್ನು ರಣಮಸ್ತಖಾನನಿಗೆ ತಿಳಿಸಿಯಾದರೂ ಬಿಡಬೇಕು. ಅದು ಒಂದು ಬಗೆಯಿಂದ ನನ್ನ ಕರ್ತವ್ಯವೇ ಆಗಿರುವದು.

ಹೀಗೆ ಬಹಳ ಹೊತ್ತು ಆಲೋಚಿಸಿದ ಬಳಿಕ ಮಾಸಾಹೇಬರ ವಿಚಾರವು ಸ್ಥಿರವಾಯಿತು. ಅವರು ನಿಜವಾದ ವೃತ್ತಾಂತವನ್ನು ರಣಮಸ್ತಖಾನನಿಗೆ ತಿಳಿಸಲೇಬೇಕೆಂದು ನಿಶ್ಚಯಿಸಿದರು; ಆದರೆ ಈ ನಿಶ್ಚಯವನ್ನು ಹ್ಯಾಗೆ ಪಾರುಗಾಣಿಸಬೇಕು? ಯಾರ ಕೈಯಿಂದ ಪಾರುಗಾಣಿಸಬೇಕು? ಎಂಬ ವಿಚಾರವು ಅವರಲ್ಲಿ ಉತ್ಪನ್ನವಾಯಿತು. ಈ ಕೆಲಸವನ್ನು ಮಾಡಲಿಕ್ಕೆ ಅವರಿಗೆ ಇಬ್ಬರು ಯೋಗ್ಯರಾಗಿ ತೋರಿದರು. ಒಬ್ಬರು ಸ್ವತಃ ತಾವು, ಎರಡನೆಯವರು ಲೈಲಿಯು. ತಮ್ಮಿಬ್ಬರ ಹೊರತು ಎರಡನೆಯವರಿಗೆ ಯಾವ ಸಂಗತಿಯೂ ಗೊತ್ತಿಲ್ಲದ್ದರಿಂದ ಬೇರೆ ಯಾರಿಂದಲೂ ಆ ಕಾರ್ಯವಾಗುವಂತೆ ಅವರಿಗೆ ತೋರಲಿಲ್ಲ. ಅದರಲ್ಲಿ ತಾವು ಸ್ವತಃ ಎಲ್ಲಿಯೂ ಹೋಗುವಂತೆ ಇದ್ದಿಲ್ಲ. ಅದರಲ್ಲಿ ರಾಮರಾಜನ ರಾಜ್ಯದಲ್ಲಿ ಹೋಗಿ ತಮ್ಮ ಮಗನನ್ನು ಕಾಣುವದಂತು ಅವರಿಗೆ ಶಕ್ಯವೇ ಇದ್ದಿಲ್ಲ. ಆದ್ದರಿಂದ ಅವರ ಹೇತುವನ್ನು ಪೂರ್ಣ ಮಾಡಲಿಕ್ಕೆ ಲೈಲಿಯೊಬ್ಬಳು ಮಾತ್ರ ಅವರಿಗೆ ಸಮರ್ಥಳಾಗಿ ತೋರಿದಳು. ಆಗ ಅವರು ಲೈಲಿಯನ್ನು ಕೂಗಿ ಕರೆದು, ತಮ್ಮ ಎದುರಿಗೆ ಕುಳ್ಳಿರಿಸಿಕೊಂಡು—"ಮಾರ್ಜಿನೇ, ಈಗ ನಿನಗೆ ಕಟ್ಟಕಡೆಯದೊಂದು ಮಹತ್ವದ ಕೆಲಸವನ್ನು ಹೇಳುತ್ತೇನೆ" ಎಂದು ಹೇಳಿದರು. "ಮಾರ್ಜಿನೆ" ಎಂದು ಕರೆದದ್ದನ್ನು ಕೇಳಿದಕೂಡಲೆ ಲೈಲಿಯು ಗಾಬರಿಯಾಗಿ ಸುತ್ತಮುತ್ತು ನೋಡಹತ್ತಿದಳು. ಆಕೆಯು ಹೀಗೆ ನೋಡುವದರ ಭಾವವನ್ನರಿತು ಮಾಸಾಹೇಬರು—"ಮಾರ್ಜಿನೆ, ಬಹುದಿವಸಗಳ ಮೇಲೆ ನಿನ್ನ ನಿಜವಾದ ಹೆಸರಿನಿಂದ ನಾನು ನಿನ್ನನ್ನು ಕರೆದದ್ದನ್ನು ಕೇಳಿ, ನೀನು ಗಾಬರಿಯಾದದ್ದು ಆಶ್ಚರ್ಯವಲ್ಲ; ಆದರೆ ನಿನ್ನ ನಿಜವಾದ ಹೆಸರಿನಿಂದ ಕರೆದ ನನ್ನನ್ನು, ಇನ್ನು ಮೇಲೆ ಜನರು ಮೇಹೇರಜಾನಳೆಂದು ಕರೆಬರೂ ನಾನು ಹೆದರುವಹಾಗಿಲ್ಲ. ಇನ್ನು ಹ್ಯಾಗೂ ಯಾವತ್ತು ನಿಜವಾದ ವೃತ್ತಾಂತವನ್ನು ರಣಮಸ್ತಖಾನನಿಗೆ ನಾವು ಹೇಳಲೇಬೇಕಾಗಿದೆ. ಆ

ಕಾರ್ಯವನ್ನು ನೀನೇ ಮಾಡತಕ್ಕದ್ದು. ಇಷ್ಟು ಹೊತ್ತಿಗೆ ರಣಮಸ್ತಖಾನನಿಗೆ ನಿಜವಾದ ವೃತ್ತಾಂತವನ್ನೆಲ್ಲ ನಾವು ಹೇಳಿಬಿಟ್ಟಿದ್ದರೆ ನೆಟ್ಟಗಾಗುತ್ತಿತ್ತೆಂದು ನನಗೆ ತೋರುತ್ತದೆ. ಹಾಗೆ ಮಾಡಿದ್ದರೆ ಈಗಿನ ಅನರ್ಥದ ಪ್ರಸಂಗವೇ ಒದಗುತ್ತಿದ್ದಿಲ್ಲ. ಬಹಳವಾದರೆ ನನ್ನ ಮಗನು ನನ್ನ ನಿರಾಕರಣವನ್ನು ಮಾಡಿ ನನ್ನನ್ನು ಅಗಲಿ ಹೋಗುತ್ತಿದ್ದನು. ಈಗಿನಂತೆ ರಾಮರಾಜನ ಸ್ನೇಹವನ್ನು ಸಂಪಾದಿಸುತ್ತಿದ್ದಿಲ್ಲ. ತಿರುಗಿ ಕೇಳಿವನೆ ಆತನು ರಾಮರಾಜನ ಶಾಸನದ ಉಪಾಯವನ್ನು ಯೋಚಿಸಬಹುದಾಗಿತ್ತು. ಇಂದು ಹೇಳೋಣ, ನಾಳೆ ಹೇಳೋಣವೆಂದು ನಾವು ದಿನಮೇಕಮಾಡಿದ್ದು ನೆಟ್ಟಗಾಗಲಿಲ್ಲ. ಇರಲಿ, ಹೋದ ಮಾತು ಇನ್ನು ಬರುವಹಾಗಿಲ್ಲ. ಇನ್ನು ನೀನು ಕರೀಮಬಕ್ಷನನ್ನು ಸಂಗಡ ಕರಕೊಂಡು ರಣಮಸ್ತನಿದ್ದಲ್ಲಿಗೆ ಹೋಗಿ ಅವನಿಗೆ ನಮ್ಮ ಯಾವತ್ತು ನಿಜವಾದ ವರ್ತಮಾನವನ್ನು ಹೇಳಿಬಿಡು. ಮಾರ್ಜಿನೇ, ನೀನು ಹೋಗು, ನನ್ನದಿಷ್ಟು ಕಡೆಯ ಕೆಲಸವನ್ನು ಮಾತಿಬಿಡು. ನೀನು ಮಾಡುತ್ತೇನೆಂದು ಒಮ್ಮೆ ಒಪ್ಪಿಕೊಂಡ ಬಳಿಕ ಮುಂದೆ ಎಷ್ಟು ಸಂಕಟಗಳು ಒದಗಿದರೂ ಅದನ್ನು ಲೆಕ್ಕಿಸದೆ ನೀನು ಕೆಲಸಮಾಡತಕ್ಕವಳು. ಹೋಗು, ಇದೇ ಕಡೆಯ ಕೆಲಸವು. ಇನ್ನು ಪುನಃ ನನ್ನ ಕೆಲಸಮಾಡುವ ಪ್ರಸಂಗವು ನಿನಗೆ ಬರಲಿಕ್ಕಿಲ್ಲ, ಎಂದು ಹೇಳಿದಳು. ‘‘ಇದೇ ಕಡೆಯ ಕೆಲಸವು, ಇದೇ ಕಡೆಯ ಕೆಲಸವು’’ ಎಂದು ಮೂರು ಮೂರು ಸಾರೆ ಮೇಹೇರಜಾನಳು ಅಂದದ್ದನ್ನು ಕೇಳಿ ಮಾರ್ಜಿನೆಯು—“ತಾವು ಹೇಳುವ ಕಾರ್ಯವನ್ನು ನಾನು ಅವಶ್ಯವಾಗಿ ಮಾಡುವೆನು; ‘‘ಇದೇ ಕಡೆಯ ಕೆಲಸ’’ ವೆಂದು ನೀವು ಮೇಲೆಮೇಲೆ ಯಾಕೆ ಅನ್ನುತ್ತೀರಿ? ಇನ್ನುಮೇಲೆ ನೀವು ನನ್ನನ್ನು ಬಿಟ್ಟು ಎಲ್ಲಿಗಾದರೂ ಹೋಗುವಿರೋ ಏನು? ನೀವು ನನ್ನನ್ನು ಅಗಲಿಹೋಗುವ ಹಾಗಿದ್ದರೆ, ನಾನು ನಿಮ್ಮ ಕಡೆಯ ಕೆಲಸವನ್ನು ಮಾಡುವದಕ್ಕಿಂತ ನೀವೇ ನನ್ನ ಕಡೆಯ ಕೆಲಸ ಮಾಡಿಬಿಡಿರಿ. ನೀವು ಪುಷ್ಕರಣಿಯಲ್ಲಿ ನನ್ನನ್ನು ನೂಕಿಬಿಟ್ಟರೆ ಕೆಲಸವು ಮುಗಿದುಹೋಗುವದು.

ಮಾರ್ಜಿನೆಯ ಈ ಮಾತುಗಳನ್ನು ಕೇಳಿ ಮೇಹೇರಜಾನಳ ಮನಸ್ಸಿಗೆ ಹ್ಯಾಗೆ ಹ್ಯಾಗೋ ಆಯಿತು! ಈಕೆಗೆ ನನ್ನ ವಿಚಾರವು ಗೊತ್ತಾಗಿರಬಹುದೋ ಎಂಬ ಸಂಶಯವು ಮೇಹೇರಜಾನಳನ್ನು ಬಾಧಿಸಹತ್ತಿತು; ಆದರೆ ವಿಚಾರಾಂತದಲ್ಲಿ ಹಾಗೆ ಗೊತ್ತಾಗುವ ಸಂಭವವಿಲ್ಲೆಂದು ತರ್ಕಿಸಿ ಆಕೆಯು ಮಾರ್ಜಿನೆಯನ್ನು ಕುರಿತು—“ಅಲ್ಲೇ, ಮಾರ್ಜಿನೆ, ಕಡೆಯ ಕೆಲಸವೆಂದರೆ, ಮಹತ್ವದ ಕೆಲಸಗಳಲ್ಲಿ ಕಡೆಯದೆಂದು ನಿನಗಿಷ್ಟು ತಿಳಿಯಬಾರದೇನು? ಈ ಜನ್ಮದಲ್ಲಿ ನಮ್ಮಿಬ್ಬರಿಗೆ

ಭುವಹಾಗಿದೆಯೇ? ನಿನ್ನ ಬಿಟ್ಟರೆ ನನಗೆ ಗತಿಯಿಲ್ಲ, ನನ್ನ ಬಿಟ್ಟರೆ ನಿನಗೆ ಗತಿಯಿಲ್ಲ. ನಿನ್ನನ್ನು ನನ್ನ ಈ ಕೈಗಳಿಂದ ಪುಷ್ಕರಣಿಯಲ್ಲಿ ನೂಕಲಾ? ಹಾಗೆ ಮಾಡುವದಕ್ಕಿಂತ ನಾವಿಬ್ಬರು ತೆಕ್ಕೆಬಿದ್ದು ಒಮ್ಮೆಲೆ ಪುಷ್ಕರಣಿಯಲ್ಲಿ ಹಾರಿಕೊಳ್ಳುವದು ನೆಟ್ಟಗಲ್ಲವೆ? ಕಡೆಗೆ ಹಾಗೆಯೇ ಮಾಡೋಣವಂತೆ ಮೊದಲು ರಣಮಸ್ತಖಾನನಿಗೆ ನಮ್ಮ ನಿಜವಾದ ಸಂಗತಿಯನ್ನಷ್ಟು ಹೇಳಿಬಾ. ಅನ್ನಲು, ಮಾರ್ಜಿನೆಗೆ ಇದ್ದದ್ದರಲ್ಲಿ ಸ್ವಲ್ಪ ಸಮಾಧಾನವಾದಂತಾಯಿತು. ಆಕೆಯು ಮೇಹೇರಜಾನಳ ಅನುಮತಿಯಿಂದ ಕರೀಮಬಕ್ಷನನ್ನು ಸಂಗಡ ಕರಕೊಂಡು ರಣಮಸ್ತಖಾನನ ಕಡೆಗೆ ಹೊರಟುಹೋದಳು.



೬೨ನೆಯ ಪ್ರಕರಣ—ರಾಮರಾಜನ ಹೊಸವಿಚಾರ.

ರಣಮಸ್ತಖಾನನು ಕರೀಮಬಕ್ಷನ ಸಂಗಡ ತನ್ನ ತಾಯಿಗೆ (ಮಸಾಹೇಬರಿಗೆ) ಹಾಗೆ ಸ್ಪಷ್ಟವಾಗಿ ಹೇಳಿಕಳಿಸಿದ್ದನ್ನು ನೋಡಿ ರಾಮರಾಜನಿಗೆ ಪರಮಾನಂದವಾಯಿತು. ರಣಮಸ್ತಖಾನನು ತನ್ನನ್ನು ಕೂಡಿಕೊಂಡದ್ದರಲ್ಲಿ ಮೋಸವೇನೂ ಇಲ್ಲೆಂಬ ನಂಬಿಗೆಯು ಆತನಿಗಾಯಿತು. ತಾನು ದೊಡ್ಡದೊಂದು ವ್ಯೂಹವನ್ನು ರಚಿಸಿ, ಮಾಹಾಕಾರ್ಯವನ್ನು ಸಾಧಿಸಿದೆನೆಂದು ಆತನು ಆನಂದಪಡಹತ್ತಿದನು. ಆತನು ವ್ಯೂಹರಚನೆಯಲ್ಲಿ ಮಹಾ ಸಮರ್ಥನಿದ್ದು, ತನ್ನ ಆ ಸಾಮರ್ಥ್ಯದ ಬಲದಿಂದ ಆತನು ಈವರೆಗೆ ಹಲವು ಕಾರ್ಯಗಳನ್ನು ಸಾಧಿಸುತ್ತ ಬಂದಿದ್ದನು. ಆ ಕಾರ್ಯಗಳಲ್ಲೆಲ್ಲ ರಣಮಸ್ತಖಾನನನ್ನು ತನ್ನ ಕಡೆಗೆ ಒಡಕೊಂಡದ್ದು ಹೆಚ್ಚಿನದೆಂದು ಆತನು ಭಾವಿಸಹತ್ತಿದನು. ಬಾಹಮನಿ ಬಾದಶಹರಲ್ಲಿ ಪರಸ್ಪರ ವೈಮನಸ್ಯವೂ, ಮಾತ್ಸರ್ಯವೂ ಇರುವವರೆಗೆ ತನ್ನ ರಾಜ್ಯಕ್ಕೆ ಭಯವಿಲ್ಲೆಂದು ರಾಮರಾಜನು ತಿಳಕೊಂಡದ್ದು, ಆ ವೈಮನಸ್ಸೂ, ಮಾತ್ಸರ್ಯವೂ ಯಾವಾಗಲೂ ಇರುವಂತೆ ರಾಮರಾಜನು ತಂತ್ರವನ್ನು ಒಡ್ಡುತ್ತ ಬಂದಿದ್ದನು; ಆದರೆ, ಮೂವರು ಬಾಹಮನೀ ಬಾದಶಹರು ಒಂದಾದರೆ ಹ್ಯಾಗೆ ಮಾಡಬೇಕೆಂಬ ಭಯದಿಂದ ಮುಕ್ತನಾಗಲಿಕ್ಕೆ ಆತನು ಈಗ ಹವಣಿಸಹತ್ತಿದ್ದನು. ಮೂವರು ಬಾದಶಹರು ಒಟ್ಟಾಗಿ ಬಂದರೂ ಅವರ ಮಗ್ಗಲು ಮುರಿಯುವಷ್ಟು ಸಾಮರ್ಥ್ಯವನ್ನು ತಾನು ಪಡೆದು, ಒಮ್ಮೆ ಮುಸಲ್ಮಾನ ಬಾದಶಹರಿಗೆ ಜೆನ್ನಾಗಿ ಕೈತೋರಿಸಿದರೆ, ತಾನು ಅಜಿಂಕ್ಯನಾಗಿ ನಿರ್ಭಯನಾಗಿ ಎಲ್ಲರ ಮೇಲೆ ವರ್ಚಸ್ಸು ಕೂಡಿಸ

ಬಹುದೆಂದು ಆತನು ಎಣಿಕೆಹಾಕಿದ್ದನು. ಈ ಎಣಿಕೆಯು ಕೈಗೂಡಲಿಕ್ಕೆ ಮುಸಲ್ಮಾನ ಬಾದಶಹರ ಮರ್ಮಸ್ಥಾನಗಳೂ, ಮುಸಲ್ಮಾನ ಸೈನ್ಯದ ಯುದ್ಧಮಾಡುವ ರೀತಿಯೂ ಗೊತ್ತಿದ್ದ ಒಬ್ಬ ಮುಸಲ್ಮಾನ ಸರದಾರನು ತನ್ನ ಕಡೆಗೆ ಒಡೆದು ಬರುವ ಅವಶ್ಯವಿತ್ತು. ಈವರೆಗೆ ವಿಜಯನಗರದ ಅರಸರು ತಮ್ಮ ದಂಡಿನಲ್ಲಿ ಪಠಾಣ, ಅರಬ ಮೊದಲಾದ ಜಾತಿಯ ಮುಸಲ್ಮಾನ ದಂಡಾಳುಗಳನ್ನು ಚಾಕರಿಗೆ ಇಟ್ಟುಕೊಳ್ಳುತ್ತ ಬಂದಿದ್ದರು. ಆಗಿನ ಕಾಲದಲ್ಲಿ ಮುಸಲ್ಮಾನರು ಮುಸಲ್ಮಾರಮೇಲೆ, ಹಿಂದುಗಳು ಹಿಂದೂಗಳಮೇಲೆ ಶಸ್ತ್ರಹಿಡಿದು ಕಾದಲಿಕ್ಕೆ ಹಿಂದು ಮುಂದು ನೋಡುತ್ತಿದ್ದಿಲ್ಲ. ಹೊಟ್ಟಿತುಂಬ ಅನ್ನಹಾಕಿದವರ ನೌಕರರಾಗಿ ಬೇಕಾದವರು ಬೇಕಾದವರ ಸಂಗಡ ಯುದ್ಧಮಾಡುತ್ತಿದ್ದರು. ಆದ್ದರಿಂದ ಮುಸಲ್ಮಾನ ಬಾದಶಹರ ದಂಡಿನಲ್ಲಿ ಹಿಂದೂ ಜನರೂ, ಹಿಂದೂ ಅರಸರ ದಂಡಿನಲ್ಲಿ ಮುಸಲ್ಮಾನರೂ ಚಾಕರಿಗೆ ನಿಂತುಕೊಂಡು ತಮ್ಮ ತಮ್ಮ ಒಡೆಯರ ಪಕ್ಷದಿಂದ ಯುದ್ಧಮಾಡುತ್ತಿದ್ದರು. ರಾಮರಾಜನಿಗೆ ತನ್ನ ಹಿಂದೂ ದಂಡಾಳುಗಳ ಸಂಬಂಧದಿಂದಂತು ಪೂರ್ಣ ಅಭಿಮಾನವಿದ್ದೇ ಇತ್ತು; ಆದರೆ ಇತ್ತಿತ್ತ ಹಿಂದೂ ದಂಡಾಳುಗಳು ಡೌಲಿಗೆ ಬಿಮ್ಮು, ಸಾಹಸದ ಕಾರ್ಯಗಳಲ್ಲಿ ಸ್ವಲ್ಪ ಮುಗ್ಗರಿಸುತ್ತಿರುವರೆಂಬದು ಆತನ ಮನಸ್ಸಿನಲ್ಲಿ ಕಟಿಯುತ್ತಿತ್ತು; ಆದ್ದರಿಂದಲೇ ಆತನು ತನ್ನಲ್ಲಿದ್ದ ಅರಬ ಪಠಾಣ ಜನರ ದಂಡನ್ನು ಇನ್ನಿಷ್ಟು ಹೆಚ್ಚಿಸಿ ತನ್ನ ಸೈನ್ಯದ ಸಾಮರ್ಥ್ಯವನ್ನು ಒಳಿತಾಗಿ ಹೆಚ್ಚಿಸಬೇಕೆಂದು ಆತುರಪಡುತ್ತಿದ್ದನು.

ಈ ಪಠಾಣರ ಹಾಗು ಅರಬರ ಪರಾಕ್ರಮವು ವಿಜಯನಗರದ ರಾಜ್ಯದ ಉತ್ಕರ್ಷಕ್ಕೆ ಬಹುಮಟ್ಟಿಗೆ ಕಾರಣವಾಗಿದ್ದದ್ದರಿಂದ ಈವರೆಗೆ ವಿಜಯನಗರದ ಅರಸರು ಮುಸಲ್ಮಾನ ದಂಡಾಳುಗಳ ಅನುವರ್ತನಮಾಡುತ್ತ ಬಂದಿದ್ದರೆಂದುಹೇಳಬಹುದು. ಇದರಿಂದ ಮುಸಲ್ಮಾನರು ಒಂದೊಂದು ಪ್ರಸಂಗದಲ್ಲಿ ವಿಜಯನಗರದ ಅರಸರಿಗೂ ತಲೆಭಾರವಾಗುತ್ತಿದ್ದರು. ಮುಸಲ್ಮಾನ ದಂಡಾಳುಗಳಿಗಾಗಿ ವಿಜಯನಗರದ ಅರಸರು ತಮ್ಮರಾಜ್ಯದಲ್ಲಿ ಮಸೀದೆಗಳನ್ನು ಕಟ್ಟಿಸಿಕೊಟ್ಟಿದ್ದರು. ಮುಸಲ್ಮಾನರು ಹಿಂದೂ ಅರಸರಿಗೂ, ಅವರ ಸಿಂಹಾಸನಕ್ಕೂ ಕುರ್ನಿಸಾತ (ವಿಶೇಷ ಪ್ರಕಾರದ ನಮಸ್ಕಾರ) ಮಾಡಲಿಕ್ಕಿಲ್ಲೆಂದು ಹಟಹಿಡಿಯಲು, ವಿಜಯನಗರದರಾಯರು ಅಷ್ಟಕ್ಕಾಗಿ ಮುಸಲ್ಮಾನ ದಂಡಾಳುಗಳನ್ನು ಹೊರಗೆ ಹಾಕಲಿಲ್ಲ. ದರ್ಬಾರದಲ್ಲಿ ಸಿಂಹಾಸನದಮೇಲೆ ಕುರಾಣವನ್ನಿಟ್ಟರೆ ಅದಕ್ಕೆ ಕುರ್ನಿಸಾತಮಾಡುವೆವೆಂದು ಮುಸಲ್ಮಾನ ದಂಡಾಳುಗಳು ಸೂಚಿಸಲು, ಅದಕ್ಕೆ ವಿಜಯನಗರದ ಅರಸರು ಒಪ್ಪಿಕೊಂಡು ಸಿಂಹಾಸನದಮೇಲೆ ಕುರಾಣವಿಡುವ ಪದ್ಧತಿಯನ್ನು ಪ್ರಚಾರದಲ್ಲಿ ತಂದಿ

ದ್ದರು. ಯಾರಾದರೂ ಈ ಸಂಬಂಧದಿಂದ ಮುಸಲ್ಮಾನರನ್ನು ಸಿಟ್ಟಿಗೆ ಎಬ್ಬಿಸಿದರೆ, ಅವರು—ನಾವು ಹಿಂದೂ ಅರಸರಿಗೆ, ಅಥವಾ ಅವರ ಸಿಂಹಾಸನಕ್ಕೆ ಕುರ್ನಿಸಾತವನ್ನು ಮಾಡವೆ, ಕುರಾಣಕ್ಕೆ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳುತ್ತಿದ್ದರು. ತಾತ್ಪರ್ಯವೇನೆಂದರೆ, ವಿಜಯನಗರದ ಅರಸರು ಮುಸಲ್ಮಾನ ದಂಡಾಳುಗಳ ಹಟವನ್ನು ನಡಿಸಿಯಾದರೂ ಅವರನ್ನು ಇಟ್ಟುಕೊಳ್ಳುತ್ತಿದ್ದರು. ರಾಮರಾಜನು ತನ್ನ ಆಳಿಕೆಯಲ್ಲಿ ಹಿಂದೂ ಸೈನ್ಯದೊಡನೆ ಮುಸಲ್ಮಾನ ಸೈನ್ಯವನ್ನೂ ಹೆಚ್ಚಿಸಿ, ತಾನು ಅತ್ಯಂತ ಬಲಾಢ್ಯನಾಗಿ ಮುಸಲ್ಮಾನ ಬಾದಶಹರ ಮಗ್ಗಲು ಮುರಿಯಬೇಕೆಂದು ಹವಣಿಸುತ್ತಿದ್ದನು. ಇಂಥ ಪ್ರಸಂಗದಲ್ಲಿ ರಣಮಸ್ತಖಾನನಂಥ ತರುಣವೀರನು ತನ್ನ ಪಕ್ಷವನ್ನು ಸ್ವೀಕರಿಸಿದ್ದು ಆ ಮಹತ್ವಾಕಾಂಕ್ಷಿಯಾದ ಹಿಂದೂರಾಜನ ಪರಮಾನಂದಕ್ಕೆ ಕಾರಣವಾಯಿತು.

ಕರೀಮಬಕ್ಷನನ್ನು ಕುಂಜವನಕ್ಕೆ ಕಳಿಸಿದ ಬಳಿಕ ರಾಮರಾಜನೂ, ರಣಮಸ್ತಖಾನನೂ ಏಕಾಂತವಲ್ಲಿ ಬಹಳ ಹೊತ್ತು ಮಾತಾಡಿದರು. ಇನ್ನು ಎಲ್ಲ ಮಾತಿನ ನಿರ್ಣಯವಾದಮೇಲೆ ಬಾದಶಹನ ಮುಂದೆಯಾದರೂ ಮುಸಕು ಯಾಕೆಯೆಂದು ರಣಮಸ್ತಖಾನನು ವಿಜಾಪುರದ ಬಾದಶಹನಿಗೊಂದು ಪತ್ರವನ್ನು ಬರೆದು ಅದನ್ನು ಬೇಕಾದ ಒಬ್ಬ ಸೇವಕನ ಸಂಗಡ ಕಳಿಸಿಕೊಡಬೇಕೆಂದು ರಾಮರಾಜನಿಗೆ ಹೇಳಿದನು. ಆ ಪತ್ರದಲ್ಲಿ ರಣಮಸ್ತಖಾನನು ಬಾದಶಹನಿಗೆ—ನಾನು ಈಗ ಹಿಂದುರಾಜನ ನೌಕರನಾಗಿರುವೆನು. ನಾನು ಕುಂಜವನವನ್ನು ಬಿಟ್ಟು ವಿಜಯನಗರದಲ್ಲಿ ಈಗ ಇರಹತ್ತಿದ್ದೇನೆ. ಈ ಪ್ರೊತ್ತಿನಿಂದ ನಾನು ನಿಮ್ಮ ನೌಕರನಲ್ಲ, ತಮ್ಮ ಶತ್ರುವಿನ ನೌಕರನು, ಎಂದು ಸ್ಪಷ್ಟವಾಗಿ ಬರೆದಿದ್ದನು. ಇದನ್ನು ನೋಡಿಯಂತು ರಾಮರಾಜನಿಗೆ ಬಹಳ ಸಮಾಧಾನವಾಯಿತು. ನಾನು ಸಂಪೂರ್ಣವಾಗಿ ಗೆದ್ದೆನೆಂದು ಆತನು ಸಂತೋಷಪಡಹತ್ತಿದನು. ರಣಮಸ್ತಖಾನನು ಹೀಗೆ ಪ್ರಸಿದ್ಧ ರೀತಿಯಿಂದ ತನ್ನನ್ನು ಕೂಡುವದಕ್ಕಿಂತ, ಗುಪ್ತರೀತಿಯಿಂದ ತನಗೆ ಸಹಾಯ ಮಾಡುವದು ನೆಟ್ಟಗಾಗಬಹುದೆಂದು ಒಮ್ಮೆ ರಾಮರಾಜನು ಯೋಚಿಸಿದನು; ಆದರೆ ಗೌಪ್ಯವು ಬಹು ದಿವಸ ಬಾಳಿಯಲಾರದೆಂತಲೂ, ರಣಮಸ್ತಖಾನನ ಸಹಾಯದಿಂದ ತನ್ನ ಸೈನ್ಯವನ್ನು ತಿದ್ದಬೇಕಾಗಿದ್ದಾಗ ಗೌಪ್ಯವು ಕೆಲಸದ್ದಲ್ಲವೆಂತಲೂ ಆತನು ತಿಳಿದು, ರಣಮಸ್ತಖಾನನ ಪತ್ರವನ್ನು ವಿಜಾಪುರದ ಬಾದಶಹನ ಕಡೆಗೆ ಕಳಿಸಿಬಿಟ್ಟನು. ಇನ್ನು ಮೇಲೆ ವಿಜಾಪುರ, ಗೋವಳಕೊಂಡ, ಅಹಮ್ಮದನಗರ ಈ ಮೂವರು ಬಾದಶಹರನ್ನು ಪೀಡಿಸಿ, ಅವರೆಲ್ಲ ಒಟ್ಟಾಗುವಂತೆ ಮಾಡಿ, ಒಟ್ಟಾಗಿ

ತನ್ನ ಮೇಲೆ ಸಾಗಿ ಬಂದ ಅವರನ್ನು ಬಗ್ಗು ಬಡಿಯಬೇಕೆಂದು ರಾಮರಾಜನು ನಿಶ್ಚಯಿಸಿದನು. ಹೀಗೆ ಮಾಡದಿದ್ದರೆ ಮುಸಲ್ಮಾನ ಬಾದಶಹರ ಸೊಕ್ಕು ಇಳಿಯದೆಂತಲೂ, ಅವರ ಸೊಕ್ಕು ಇಳಿಸುವ ಕಾರ್ಯದ ಅಸ್ತಿವಾರವನ್ನು ತಾನು ಬಹಳ ಚೆನ್ನಾಗಿ ಹಾಕಿದನೆಂತಲೂ ಆತನು ಆನಂದಪಡಹತ್ತಿದನು.

ಆದರೆ ಸಂಸಾರದಲ್ಲಿ ಪರಿಶುದ್ಧಾನಂದವು ಮನುಷ್ಯನಿಗೆ ದೊರೆಯುವದು ದುರ್ಲಭವೆಂತಲೇ ಹೇಳಬೇಕಾಗುವದು. ಆನಂದದ ಭರವು ಕುಗ್ಗಿದಮೇಲೆ ಆ ಆನಂದದಲ್ಲಿ ಚಿಂತೆ, ಶಂಕೆ ಮೊದಲಾದ ದುಃಖಬೀಜಗಳ ಮೊಳಿಕೆಯೊಡೆದದ್ದು ಅನುಭವಕ್ಕೆ ಬಾರದೆ ಹೋಗುವದಿಲ್ಲ. ರಾಮರಾಜನ ಸ್ಥಿತಿಯಾದರೂ ಹೀಗೆಯೇ ಆಯಿತು. ರಾಮರಾಜನ ಸ್ವಭಾವವು ಮಹತ್ವಾಕಾಂಕ್ಷಿಯಾಗಿದ್ದಂತೆ ಶಂಕಾಮಯವೂ ಆಗಿತ್ತು. ಮೊದಮೊದಲಿಗೆ ಎಲ್ಲ ಕೆಲಸವು ಅತ್ಯುತ್ತಮ ರೀತಿಯಿಂದ ಸಾಧಿಸಿತೆಂದು ಆತನಿಗೆ ತೋರಿ ಪರಮಾನಂದವಾಯಿತು; ಆದರೆ ಮುಂದೆ ಒಂದೆರಡು ದಿನಗಳಲ್ಲಿ ಆತನನ್ನು ಎರಡು-ಮೂರು ಶಂಕೆಗಳು ಬಾಧಿಸಹತ್ತಿದವು. ಈಗ ನಡೆದದ್ದರಲ್ಲಿ ದೋಸವಿರಲಿಕ್ಕಿಲ್ಲವಷ್ಟೆ? ಈ ರಣಮುಸ್ತಖಾನನು ತನಗೆ ಮಂಕು ಬೂದಿಯನ್ನು ಹಚ್ಚುತ್ತಿರಲಿಕ್ಕಿಲ್ಲವಷ್ಟೇ? ಎಂಬ ಶಂಕೆಯು ಒಂದನೆಯದು. ಈತನ ತಾಯಿಯು ಏನಾದರೂ ಬೋಧಿಸಿ ಈತನ ಮನಸ್ಸನ್ನು ತಿರುಗಿಸಲಿಕ್ಕಿಲ್ಲವಷ್ಟೇ? ಎಂಬ ಶಂಕೆಯು ಎರಡನೆಯದು. ತಾನು ತರ್ಕಿಸಿದಂತೆ ಈತನು ನನ್ನಿಂದ ಮೇಹೇರ ಜಾನಳಲ್ಲಿ ಹುಟ್ಟಿದ್ದೇ ನಿಜವಾಗಿದ್ದ ಪಕ್ಷದಲ್ಲಿ, ಈತನು ತನ್ನ ನಿಜವಾದ ಕುಲ ವೃತ್ತಾಂತವನ್ನರಿತ ಬಳಿಕ ನನ್ನನ್ನು ಘಾತಿಸಲಿಕ್ಕಿಲ್ಲವಷ್ಟೆ? ಎಂಬ ಶಂಕೆಯು ಮೂರನೆಯದು. ಈ ಮೂರು ಶಂಕೆಗಳ ನಿವಾರಣಕ್ಕಾಗಿ ಆತನು ಮೂರು ಉಪಾಯಗಳನ್ನು ಯೋಚಿಸಿದನು. ರಣಮುಸ್ತಖಾನನ ನಡತೆಯನ್ನು ಶೋಧಿಸುವದಕ್ಕಾಗಿ ಗುಪ್ತಚಾರರನ್ನಿಡಬೇಕೆಂದು ಮಾಡಿದನು. ತಾಯಿ ಮಕ್ಕಳ ದರ್ಶನವಾಗದಂತೆ ವ್ಯವಸ್ಥೆಯನ್ನಿಡಬೇಕೆಂದು ನಿಶ್ಚಯಿಸಿದನು. ಆತನ ಕುಲ ವೃತ್ತಾಂತವು ಆತನಿಗೆ ತಿಳಿಯದಂತೆ ಜಾಗರೂಕವಾಗಿರಬೇಕೆಂದು ಗೊತ್ತುಮಾಡಿಕೊಂಡನು. ಈ ಮೂರು ಉಪಾಯಗಳು ಚೆನ್ನಾಗಿ ಸಾಧಿಸಬೇಕಾದರೆ, ರಣಮುಸ್ತಖಾನನನ್ನು ತನ್ನ ಅಂಗರಕ್ಷಕನನ್ನಾಗಿ ನಿಯಮಿಸಿಕೊಳ್ಳಬೇಕೆಂದು ಯೋಚಿಸಿದನು. ಅಂಗರಕ್ಷಕನಾದ ಬಳಿಕ ಯಾವಾಗಲೂ ತನ್ನನ್ನನುಸರಿಸಿಯೇ ಇರಬೇಕಾದದ್ದರಿಂದ, ತಾನು ಒಂದು ಬಗೆಯಿಂದೆ ರಣಮುಸ್ತಖಾನನ ಮೇಲೆ ಕಣ್ಣು ಇಟ್ಟಹಾಗಾಗುತ್ತದೆಂದು ರಾಮರಾಜನು ತಿಳಿದನು. ಇವೆಲ್ಲ ವಿಚಾರಗಳು ಮೊದಲನೆಯ ದಿವಸದ ರಾತ್ರಿ

ಯಲ್ಲಿಯೇ ರಾಮರಾಜನ ಮನಸ್ಸಿನಲ್ಲಿ ಬಂದುಹೋದವು.

ಇವೆಲ್ಲ ವಿಚಾರಗಳು ಬಂದು ಹೋದಮೇಲೆ ಅಕಸ್ಮಿಕವಾಗಿ ಒಂದು ವಿಚಾರವು ರಾಮರಾಜನ ಮನಸ್ಸಿನಲ್ಲಿ ಉತ್ಪನ್ನವಾಯಿತು. ತಾನು ಕುಂಜವನಕ್ಕೆ ಹೋಗಿ ಮೇಹೇರಜಾನಳನ್ನು ಕಾಣಬೇಕೆಂಬ ಇಚ್ಛೆಯು ಆತನಲ್ಲಿ ಉತ್ಪನ್ನವಾಯಿತು. ರಣಮಸ್ತಖಾನನ ರೂಪವು ತನ್ನ ರೂಪವನ್ನು ಅಚ್ಚಳಿಯದೆ ಹೋಲುತ್ತಿರುವದನ್ನು ನೋಡಿ, ಈತನು ನನ್ನ ಮಗನಾಗಿರಬಹುದೆಂಬ ಸಂಶಯವು ರಾಮರಾಜನ ಮನಸ್ಸಿನಲ್ಲಿ ಉತ್ಪನ್ನವಾಗಿತ್ತು. ಈ ಸಂಶಯದಿಂದ ರಾಮರಾಜನು ಒಮ್ಮೆ ಕುಂಜವನಕ್ಕೆ ಹೋಗಿರುವಾಗ ಪ್ರತ್ಯಕ್ಷ ಮೇಹೇರಜಾನಳೇ ಸುಳಿದಾಡಿವ ಹಾಗಾದದ್ದನ್ನು ನೋಡಿದಾಗ ಆತನ ಆ ಸಂಶಯವು ಮತ್ತಿಷ್ಟು ವೃಢವಾಯಿತು. ಮುಂದೆ ತನ್ನ ಸೇವಕರ ಸಹಾಯದಿಂದ ಧನಮಲ್ಲನನ್ನು ಹಿಡತರಿಸಿ ವಿಚಾರಿಸಿದಾಗ ಆತನ ಸಂಶಯ ನಿವಾರಣವಾಗಿ, ಮಾಸಾಹೇಬರೆನಿಸಿಕೊಳ್ಳುವನರು ತನ್ನ ಪ್ರಿಯ ಮೇಹೇರಜಾನಳೇ ಎಂತಲೂ, ಲೈಲಿಯೆನಿಸಿಕೊಳ್ಳುವವಳು ಆಕೆಯ ದಾಸಿಯಾದ ಮಾರ್ಜಿನೆಯೆಂತಲೂ ಆತನು ನಿಶ್ಚಯಿಸಿದ್ದನು. ಆದರೆ ರಣಮಸ್ತಖಾನನು ಕುಂಜವನವಲ್ಲಿರುವವರೆಗೆ ಮೇಹೇರಜಾನಳನ್ನು ಕಾಣಲಿಕ್ಕೆ ರಾಮರಾಜನಿಗೆ ಧೈರ್ಯವಾಗಿದ್ದಿಲ್ಲ. ಈದಿನ ರಣಮಸ್ತಖಾನನು ತನ್ನ ಕೈಯಲ್ಲಿ ಪೂರ್ಣವಾಗಿ ಸಿಕ್ಕುಹೋಗಿರುವದರಿಂದ ಒಬ್ಬಳೇ ಕುಂಜವನವಲ್ಲಿರುವ ಮೇಹೇರಜಾನಳನ್ನು ಕಾಣುವದು ಸುಲಭವೆಂದು ಭಾವಿಸಿ, ಆತನು ಕುಂಜವನಕ್ಕೆ ಹೋಗಬೇಕೆಂದು ನಿಶ್ಚಯಿಸಿದನು. ಮೇಹೇರಜಾನಳನ್ನು ತಾನು ಕಂಡರೆ, ಆಕೆಯು ತನ್ನನ್ನು ಪ್ರೀತಿಸಬಹುದೊ, ನಿರಾಕರಿಸಬಹುದೊ ಎಂಬದು ರಾಮರಾಜನಿಗೆ ತಿಳಿಯುವದಾಯಿತು. ಮೇಹೇರಜಾನಳಿಗೆ ತನ್ನ ಮೇಲೆ ಪ್ರೀತಿಯೇ ಇಲ್ಲದಿದ್ದರೆ ಆಕೆಯು ಇಷ್ಟು ವರ್ಷಗಳ ಮೇಲೆ ಮಗನನ್ನು ಕಟ್ಟಿಕೊಂಡು ಬಂದು ತಾನು ಮೊದಲು ಇರುತ್ತಿದ್ದ ಕುಂಜವನದಲ್ಲಿಯೇ ಬಂದು ಇರುತ್ತಿದ್ದಿಲ್ಲೆಂದು ಭಾವಿಸಿ, ಮೇಹೇರಜಾನಳ ಪ್ರೇಮವು ತನ್ನ ಮೇಲೆ ಇರುವದೆಂದು ಆತನು ಕಲ್ಪಿಸಿದನು. ಹಾಗೆ ಪ್ರೇಮವಿದ್ದಪಕ್ಷದಲ್ಲಿ ಆಕೆಯು ಇಷ್ಟು ದಿವಸ ಯಾವದೊಂದು ನೆವದಿಂದ ಯಾಕೆ ತನ್ನನ್ನು ಕಂಡಿರಲಿಕ್ಕಿಲ್ಲೆಂದು ಶಂಕಿಸಿ, ತನ್ನ ಮೇಲೆ ಆಕೆಯ ಪ್ರೇಮವಿರುವದೊ ಇಲ್ಲವೋ ಎಂದು ಆತನು ಆತುರಪಟ್ಟನು. ತನ್ನ ಮಗನ ಮುಂದೆ ತನ್ನ ಚರಿತ್ರವನ್ನು ಹೇಳಲಿಕ್ಕೆ ಹೆದರಿ ಹೇಗೆ ಸುಮ್ಮನಿರಬಹುದಾದ್ದರಿಂದ, ಹೀಗೆ ತಾನು ಆಕೆಯ ಮಗನಿಲ್ಲದಾಗ ಹೋಗಿ ಮಾತಾಡಿಸಿ ಹೇಳಿಕೊಂಡರೆ, ಆಕೆಯು ಪ್ರಸನ್ನಳಾದರೂ ಆಗಬಹುದೆಂದು ಆತನು ಆಶಿಸಿದ್ದನು.

ಹೀಗೆ ವಿಚಾರಮಾಡುತ್ತಿರುವಾಗ ರಾಮರಾಜನಿಗೆ ಅಂದಿನರಾತ್ರಿ ನಿದ್ರೆಯು ಹತ್ತಿತು. ಮರುದಿನ ಬೆಳಗಾಗಲು, ಅದೇ ವಿಚಾರಗಳು ಆತನ ಮನಸ್ಸಿನಲ್ಲಿ ಹುಟ್ಟಿ ಬಾಧಿಸಹತ್ತಿದವು. ಅಂದಿನರಾತ್ರಿ ಆತನು ಕುಂಜವನಕ್ಕೆ ಹೋಗಬೇಕೆಂದು ನಿಶ್ಚಯಿಸಿದನು. ಸಂಗಡ ಯಾರನ್ನು ಕರಕೊಂಡು ಹೋಗಬೇಕೆಂದು ಆತನು ಆಲೋಚಿಸುತ್ತಿರಲು, ರಣಮಸ್ತಖಾನನು ಬಂದನೆಂದು ಸೇವಕನು ಅರಿಕೆಮಾಡಿಕೊಂಡನು. ಕೂಡಲೆ ರಾಮರಾಜನು ಆತನನ್ನು ಬರಮಾಡಿಕೊಳ್ಳಲು, ಅವರಿಬ್ಬರ ಹಿತಗೋಷ್ಠಿಗಳಿಗೆ ಆರಂಭವಾಯಿತು.

ಈವೊತ್ತಿನವರೆಗೆ ಇವರಿಬ್ಬರ ಭೆಟ್ಟಿಯು ಹಲವು ಸಾರೆ ಆಗಿತ್ತು; ಆದರೆ ಇಂದಿನ ಭೆಟ್ಟಿಯಲ್ಲಿ ರಣಮಸ್ತಖಾನನನ್ನು ನೋಡಿ ರಾಮರಾಜನ ಅಂತಃಕರಣವು ವಾತ್ಸಲ್ಯಪೂರ್ಣವಾದಂತೆ, ಬೇರೆ ಯಾವ ಕಾಲದಲ್ಲಿಯೂ ಆಗಿದ್ದಿಲ್ಲ. ರಾಮರಾಜನು ರಣಮಸ್ತಖಾನನನ್ನು ಬಿಗಿಯಾಗಿ ಅಪ್ಪಿಕೊಳ್ಳಬೇಕೆಂದು ಮಾಡಿದನು. ಆತನು ವಾತ್ಸಲ್ಯಪೂರ್ಣದೃಷ್ಟಿಗಳಿಂದ ರಣಮಸ್ತಖಾನನನ್ನು ಎವೆಯಿಕ್ಕದೆ ನೋಡಹತ್ತಿದನು. ಇದನ್ನು ನೋಡಿ ರಣಮಸ್ತಖಾನನ ಮನಸ್ಸಿಗೆ ಹ್ಯಾಗೆ—ಹ್ಯಾಗೋ ಆಯಿತು. ನಾನು ತನ್ನನ್ನು ಬಂದು ಕೂಡಿದ್ದರಿಂದಲೇ ರಾಮರಾಜನಿಗೆ ಇಷ್ಟು ಸಂತೋಷವಾಗಿರುವದೆಂದು ರಣಮಸ್ತಖಾನನು ತರ್ಕಿಸಿದನು. ಅದರ ಹೊರತು ಬೇರೆ ಕಾರಣವು ರಣಮಸ್ತಖಾನನಿಗೆ ತೋಚಲಿಲ್ಲ. ರಾಮರಾಜನು ಈಪರಿ ತನ್ನನ್ನು ಪ್ರೀತಿಸುವದನ್ನು ನೋಡಿ ರಣಮಸ್ತಖಾನನು ಬಹಳ ಸಂತೋಷಪಟ್ಟನು. ರಾಮರಾಜನು ತನ್ನನ್ನು ಪ್ರೀತಿಸಿದಷ್ಟು ಹಿತವೆಂದು ತಿಳಿದು ಆತನು ರಾಮರಾಜನನ್ನು ಕುರಿತು—ತಾವು ಈಪರಿ ನನ್ನನ್ನು ಪ್ರೀತಿಸುವದನ್ನು ನೋಡಿ ನನಗೆ ಆಗಾಗ್ಗೆ ಬಹು ಚಮತ್ಕಾರವಾಗುತ್ತದೆ. ನಿಜವಾಗಿ ನೋಡಿದರೆ ತನ್ನ ಒಡೆಯನ ಮೆಲೆ ತಿರುಗಿಬಿದ್ದು, ಶತ್ರುಪಕ್ಷದ ಚಾಕರಿಗೆ ನಿಂತವನ ಸಂಗಡ ಬಹು ಎಚ್ಚರದಿಂದ ನಡೆಯಬೇಕಾಗುವದು; ಯಾಕಂದರೆ, ತನ್ನ ಒಡೆಯನಮೇಲೆ ತಿರುಗಿಬಿದ್ದವನು ಪ್ರಸಂಗದಲ್ಲಿ ತನ್ನ ಮೇಲೆಯೂ ಯಾಕೆ ತಿರುಗಿ ಬೀಳಲಿಕ್ಕಿಲ್ಲೆಂಬದನ್ನು ಆಲೋಚಿಸಬೇಕಾಗುವುದು; ಆದ್ದರಿಂದ ಅಂಥ ಫಿತೂರಿಯ ಮನುಷ್ಯನನ್ನು ಹೇಳಿ ಕೇಳಿ ನಾಲ್ಕುಮೊಳ ದೂರದಲ್ಲಿಯೇ ಇಡಬೇಕಾಗುತ್ತದೆ. ಹೀಗಿದ್ದು ನೀವು ನನ್ನನ್ನು.....ಎಂದು ನುಡಿಯುತ್ತಿರಲು, ರಾಮರಾಜನು ನಡುವೆ ಬಾಯಿಹಾಕಿ—ಛೇ, ಛೇ! ಖಾನಸಾಹೇಬ, ನೀವು ಇಂಥ ವಿಚಾರವನ್ನು ಮನಸ್ಸಿನಲ್ಲಿ ತರಕೂಡದು. ನಾನಂತು ನಿಮ್ಮನ್ನು ನನ್ನ

ಅಂಗರಕ್ಷಕರನ್ನಾಗಿ ನಿಯಮಿಸಬೇಕೆಂದು ಮಾಡಿದ್ದೇನೆ. ಅದು ತಮ್ಮ ಮನಸ್ಸಿಗೆ ಬಂದರೆ ಬಹಳ ನೆಟ್ಟಗಾಗುವದು. ತಾವು ಯಾವಾಗಲೂ ನನ್ನ ಬಳಿಯಲ್ಲಿರಬೇಕೆಂತಲೇ ನಾನು ಇಚ್ಛಿಸುವೆನು. ನೀವು ಒಪ್ಪಿಕೊಳ್ಳುವದೊಂದೇ ತಡ, ನಮ್ಮ ಅಂಗರಕ್ಷಕರಾದಿರೆಂದು ತಿಳಿಯಿರಿ; ಅನ್ನಲು ರಣಮಸ್ತಖಾನನು—ಸರಿ ಸರಿ! ಇದೇನು ಕೇಳುವದು? ನಾನು ತಮ್ಮ ನೌಕರನಿರಲು, ತಮ್ಮ ಅಪ್ಪಣೆಗೆ ಹೊರಗಾಗುವೆನೆ? ತಾವು ಒಪ್ಪಿಸಿದ ಕೆಲಸವನ್ನು ಮಾಡಲಿಕ್ಕೆ ನಾನು ಸಿದ್ಧಸಿದ್ದೇನೆ. ತಮ್ಮ ಅಪ್ಪಣೆಯಂತೆ ನಾನು ನಡೆದುಕೊಳ್ಳತಕ್ಕವನು. ನಾನು ತಮ್ಮವನು, ಅಂದಬಳಿಕ ಹೆಚ್ಚಿಗೆ ನಾನೇನು ಹೇಳಲಿ? ಎಂದು ಕೇಳಿದನು. ಅದಕ್ಕೆ ರಾಮರಾಜನು—ಛೇ, ಛೇ, ಛೇ! ನನ್ನ ನೌಕರನೆಂದು ಯಾಕೆ ಅನ್ನುತ್ತೀರಿ? ನೀವು ನನ್ನ ನೌಕರರಲ್ಲ. ತರುಣ ಮಿತ್ರರಿರುತ್ತೀರಿ. ಲೋಕೋಪಚಾರಾರ್ಥವಾಗಿ ನಿಮ್ಮ ಹೆಸರನ್ನು ಯಾವದಾದರೂ ಅಧಿಕಾರದಲ್ಲಿ ಯೋಜಿಸಬೇಕಾಗಿರುವದು; ಆದರೆ ನಿಮಗೆ ನನ್ನನ್ನು ಕೂಡಿದ ಬಗ್ಗೆ ಪಶ್ಚಾತ್ತಾಪವಾಗುತ್ತಿದ್ದರೆ, ಮತ್ತು ಈತನ ಸಂಗತಿಯಿಂದ ನಾನು ಕೆಟ್ಟೆನೆಂದು ನೀವು ಭಾವಿಸುತ್ತಿದ್ದರೆ, ನನಗೆ ನೀವು ಸ್ಪಷ್ಟವಾಗಿ ಹೇಳಿರಿ; ಸಂಕೋಚಪಡಬೇಡಿರಿ. ನಿಮಗೆ ನಾನು ಯಾವಬಗೆಯ ಉಪದ್ರವನ್ನೂ ಕೊಡುವದಿಲ್ಲ. ನಿಮ್ಮ ಮನಸ್ಸಿನೊಳಗಿನ ಆ ವಿಚಾರಗಳು ನಷ್ಟವಾಗುವವರೆಗೆ ಸ್ವಸ್ಥವಾಗಿ ಇರಬೇಕೆಂದು ನಾನು ನಿಮಗೆ ಹೇಳತ್ಕವನು.

ಈ ಮೇರೆಗೆ ರಾಮರಾಜನ, ಹಾಗು ರಣಮಸ್ತಖಾನನ ಸಂಭಾಷಣಗಳಾದ ಬಳಿಕ ಕೆಲವು ಹೊತ್ತಿನಮೇಲೆ ರಣಮಸ್ತಖಾನನು ರಾಮರಾಜನ ಅಂಗರಕ್ಷಕನಾಗಲು ಒಪ್ಪಿಕೊಂಡನು. ಆತನು ರಾಮರಾಜನನ್ನು ಕರಿತು—ಮಹಾರಾಜರೇ, ನೀವು ಈಗ ನನಗೊಪ್ಪಿಸಿದ ಚಾಕರಿಯು ನನಗೆ ಬಹಳ ಸೇರುತ್ತದೆ; ಯಾಕಂದರೆ, ನಾನು ಅಂಗರಕ್ಷಕನಾಗಿರುವಾಗ ನಾನು ಮಾಡುವ ಕೆಲಸವು ಮಹಾರಾಜರ ಕಣ್ಣಿಗೆ ಬಿದ್ದಂತೆ, ಬೇರೆ ಯಾವ ಪ್ರಸಂಗದಲ್ಲಿಯೂ ನನ್ನ ಕೆಲಸವು ಮಹಾರಾಜರ ಕಣ್ಣಿಗೆ ಬೀಳಲಾರದು; ಆದರೆ ನಾನು ತಮ್ಮ ಕಡೆಗೆ ಬಂದ ಕೂಡಲೆ ನನ್ನನ್ನು ಹೀಗೆ ಅಂಗರಕ್ಷಕನಾಗಿ ನಿಯಮಿಸಿದರೆ, ನಿಮ್ಮ ಜನರು ಏನಂದಾರೆಂಬದನ್ನು ತಾವು ವಿಚಾರ ಮಾಡತಕ್ಕದ್ದು. ನಾನು ಆರಂಭದಿಂದಲೇ ಅವರ ಕಣ್ಣಲ್ಲಿ ಒತ್ತುವದು ಸರಿಯಲ್ಲ. ಎಷ್ಟಾದರೂ ನಾನು ಫಿತೂರಿಯಾಗಿ ಬಂದವನು; ಅಂದಬಳಿಕ ಒಮ್ಮೆಲೆ ಎಲ್ಲರು ನನ್ನ ಮೇಲೆ ಹ್ಯಾಗೆ ವಿಶ್ವಾಸವಿಟ್ಟಾರು? ಆದ್ದರಿಂದ ಕ್ರಮಕ್ರಮವಾಗಿ ನನ್ನನ್ನು ಈ ಕೆಲಸದಲ್ಲಿ ಯೋಜಿಸಬೇಕೆಂದು ನಾನು ಹೇಳಿಕೊಳ್ಳುವೆನು. ಸಧ್ಯಕ್ಕೆ ನಾನು ನಿಮ್ಮ ಸೈನ್ಯದೊಳಗಿನ ಪಠಾಣ

ಜನರ ಗುರುತು ಪರಿಚಯ ಮಾಡಿಕೊಳ್ಳುವೆನು. ಸೈನ್ಯದಲ್ಲಿ ಪಠಾಣರ ಸಂಖ್ಯೆಯು ಎಷ್ಟು ಇರುವದು? ಅವರ ವ್ಯವಸ್ಥೆಯು ಹ್ಯಾಗಿರುವದು? ಅವರ ಗುಣಗುಟ್ಟುವಿಕೆಯೂ, ತಕರಾರುಗಳೂ ಏನಾದರೂ ಇರುವವೋ ಹ್ಯಾಗೆ? ಅವರು ಬಹು ದಿವಸ ಕೆಲಸವಿಲ್ಲದೆ ಕುಳಿತುಕೊಂಡಿರುವದರಿಂದ ಅವರಲ್ಲಿ ಆಲಸ್ಯವೂ, ಕೂಳಬಾಕತನವೂ, ಸೇರಿರುವವೋ ಹ್ಯಾಗೆ? ಇವನ್ನು ಮೊದಲು ನಾನು ಪರೀಕ್ಷಿಸುವೆನು. ಬೇರೆ ನೌಕರರಂತೆ ನಾನು ದಿನಾಲು ಮಾಡಿದ ಕೆಲಸವನ್ನು ಹೇಳಲಿಕ್ಕೆ ತಮ್ಮ ಬಳಿಗೆ ಬರುತ್ತ ಹೋಗುವೆನು. ಹೀಗೆ ನಾನು ಬರುತ್ತಿರುವಾಗ ಮೆಲ್ಲಮೆಲ್ಲನೆ ನನ್ನನ್ನು ಏರಿಸುತ್ತ ಕಡೆಗೆ ಈ ಕೆಲಸವನ್ನು ಕೊಟ್ಟರೆ ನೆಟ್ಟಗಾಗುವದು. ಇದರ ಮೇಲೆ ತಮ್ಮ ಅಪ್ಪಣೆಯಾದಂತೆ ನಾನು ನಡೆದುಕೊಳ್ಳಲು ಸಿದ್ಧನಾಗಿರುವೆನೆಂದು ನಾನು ಆಡಿತೋರಿಸುವ ಕಾರಣವಿಲ್ಲ, ಎಂದು ಹೇಳಿದನು. ರಾಮರಾಜನು ರಣಮಸ್ತಖಾನನ ಈ ಮಾತುಗಳನ್ನು ಕೇಳಿ ಕೌತುಕಪಟ್ಟನು. ಈತನು ತಾರುಣ್ಯದಲ್ಲಿಯಾದರೂ ಒಳ್ಳೆಯ ವಿಚಾರವಂತನಿರುವನೆಂದು ತಿಳಿದು ಸಮಾಧಾನಪಟ್ಟನು. ಆತನು ನಕ್ಕು ರಣಮಸ್ತಖಾನನನ್ನು ಕುರಿತು—ಸರಿ ಸರಿ! ನೀವು ಹೇಳುವ ಉಪಾಯವೂ ಸರಿಯಾಗಿರುತ್ತದೆ. ಅದರಂತೆಯೇ ಈಗ ಮಾಡೋಣ. ನಮ್ಮ ಯಾವತ್ತು ಸೈನ್ಯದ ಆಧಿಪತ್ಯವು ನಮ್ಮ ಬಂಧುವಿನ ಕಡೆಗಿರುವದೆಂಬದನ್ನು ನೀವು ಬಲ್ಲಿರಿ. ನೀವು ಈಗ ಹೋಗಿ ಅವರನ್ನು ಕಂಡುಬರ್ರಿ. ಈವೊತ್ತಿನವರೆಗೆ ಆದ ನಮ್ಮ ನಿಮ್ಮ ವ್ಯವಹಾರವೆಲ್ಲ ಅವರಿಗೆ ಗೊತ್ತೇ ಇರುತ್ತದೆ. ಅವರ ಒಪ್ಪಿಗೆಯಿಂದಲೇ ನಾನು ನಿಮ್ಮೊಡನೆ ಆಲೋಚಿಸಿರುವೆನೆಂಬದು ಅವರ ಭೆಟ್ಟಿಗೆ ಹೋದಾಗ ನಿಮಗೆ ಗೊತ್ತಾಗಬಹುದು. ಸೈನ್ಯದ ಸ್ಥಿತಿಗತಿಗಳೆಲ್ಲ ಅವರಿಗೆ ಗೊತ್ತಿರುವದರಿಂದ ನೀವು ಅವಶ್ಯವಾಗಿ ಅವರನ್ನು ಕಾಣತಕ್ಕದ್ದು. ಇನ್ನು ನೀವು ನಡುವೆ ಎಂದಾದರೂ ಒಂದುದಿನ ನನ್ನನ್ನು ಕಾಣಲಿಕ್ಕೆ ಬಾರದಿದ್ದರೂ ನಡೆಯಬಹುದು. ನಾವು ಬೇರೊಂದು ಕೆಲಸದಲ್ಲಿ ತೊಡಗುವವರಿದ್ದೇವೆ. ಎಂದು ಹೇಳಿ ರಾಮರಾಜನು ಆತನಿಗೆ ಹೋಗಲಪ್ಪಣೆಕೊಟ್ಟನು.

ಟಿಸೆಯ ಪ್ರಕರಣ—ಆತ್ಮಹತ್ಯೋಪಕ್ರಮ.

ರಣಮಸ್ತಖಾನನು ತನ್ನನ್ನು ಬಂದು ಕೂಡಿದ್ದರೂ ಆತನ ತಾಯಿಯು ಆತನ ಮನಸ್ಸನ್ನು ಎಲ್ಲಿ ತಿರುಗಿಸುವಳೋ ಎಂಬ ಭಯವು ರಾಮರಾಜನ ಮನಸ್ಸಿ

ನೊಳಗಿಂದ ಹೋಗಿದ್ದಿಲ್ಲ. ಮೆಹೇರಜಾನಳು ತಾನು ಸ್ವತಃ ಆ ಕೆಲಸವನ್ನು ಮಾಡಲಿಕ್ಕೆ ಪ್ರವೃತ್ತಳಾಗದಿದ್ದರೂ, ತನ್ನ ವೃದ್ಧದಾಸಿಯಾದ ಮಾರ್ಜಿನೆಯ ಮುಖಾಂತರ ಆ ಕಾರ್ಯವನ್ನು ಆಕೆಯು ಮಾಡಿಸಬಹುದೆಂದು ಆತನು ತರ್ಕಿಸಿದ್ದನು. ಮೆಹೇರಜಾನಳು ಈ ಕಾರ್ಯಕ್ಕೆ ಉಪಕ್ರಮಿಸುವಮೊದಲೇ ತಾನು ಒಮ್ಮೆ ಕುಂಜವನಕ್ಕೆ ಹೋಗಿ ಮೆಹೇರಜಾನಳ ಮನಸ್ಸನ್ನು ಒಲಿಸಿಕೊಳ್ಳಬೇಕೆಂದು ಆತನು ನಿಶ್ಚಯಿಸಿದನು. ತಾನು ವೇಷಾಂತರದಿಂದ ಇಂದಿನ ರಾತ್ರಿಯೇ ಕುಂಜವನಕ್ಕೆ ಹೋಗಿ, ರಣಮಸ್ತಖಾನನು ನನ್ನನ್ನು ಮಾಸಾಹೇಬರ ಕಡೆಗೆ ಕಳಿಸಿರುವದರಿಂದ, ನನಗೆ ಅವರ ದರ್ಶನಮಾಡಿಸಿರೆಂದು ಕಾವಲುಗಾರರಿಗೆ ಹೇಳಿ ತನ್ನ ಕಾರ್ಯವನ್ನು ಸಾಧಿಸಬೇಕೆಂದು ಆ ರಾಯನು ಯೋಚಿಸಿದನು. ಮಗನು ಏನೋ ಹೇಳಿಕಳಿಸಿರುವನೆಂದು ತಿಳಿದು ಮೋಹದಿಂದ ಮೆಹೇರಜಾನಳು ನನ್ನನ್ನು ಕಂಡೇ ಕಾಣುವಳು. ಈ ಹಂಚಿಕೆಯಿಂದ ಆಕೆಯ ಬಳಿಗೆ ಹೋಗಿ, ಬಹು ಗುಪ್ತ ಸುದ್ದಿಯೆಂಬ ನೆವದಿಂದ ಏಕಾಂತದ ಪ್ರಸಂಗವನ್ನು ಒದಗಿಸಿಕೊಂಡು, ಆಮೇಲೆ ಮೆಹೇರಜಾನಳಿಗೆ ತನ್ನ ಗುರುತುಮಾಡಿಕೊಡಬೇಕೆಂದು ಎಣಿಕೆ ಹಾಕಿದನು. ಮೋಹಾಂಧನೂ, ವಿವೇಕಭ್ರಷ್ಟನೂ ಆದ ರಾಮರಾಜನು ಹೀಗೆ ಯೋಚಿಸಿ ತನ್ನ ನಿತ್ಯಕೃತ್ಯಗಳನ್ನು ಮಾಡುವದಕ್ಕಾಗಿ ಏಳುತ್ತಿರಲು, ದ್ವಾರರಕ್ಷಕನು ಬಂದು—ಒಬ್ಬ ಗುಪ್ತಚಾರನು ತಮ್ಮನ್ನು ಕಾಣಲಿಕ್ಕೆ ಬಂದಿದ್ದಾನೆ. ಆತನು "ಕೃಪಾ" ಎಂಬದು ಗುರುತಿನ ಶಬ್ದವಿರುತ್ತದೆಂದು ಸೂಚಿಸಲು ಹೇಳಿರುವನು, ಎಂದು ನುಡಿದನು. "ಕೃಪಾ" ಎಂಬ ಶಬ್ದವು ಕಿವಿಗೆ ಬಿದ್ದಕೂಡಲೆ ರಾಮರಾಜನು ಕ್ಷಣವಾದರೂ ವಿಲಂಬಮಾಡದೆ ಆ ಚಾರನನ್ನು ಕರಿಸಿಕೊಂಡು, ಏಕಾಂತದಲ್ಲಿ ಆತನನ್ನು ಕುರಿತು-"ಏನು ಸುದ್ದಿಯನ್ನು ತಂದಿರುವೆ, ಬೇಗನೆ ಹೇಳು" ಎಂದು ಕೇಳಲು ಚಾರನು— "ರಣಮಸ್ತಖಾನನು ಎಲ್ಲಿ ಇರುವನೆಂಬದರ ಶೋಧಮಾಡುತ್ತ ಒಬ್ಬ ಮುಸಲ್ಮಾನ ಮುದುಕೆಯೂ, ಆಕೆಯ ಸಂಗಡ ಒಬ್ಬ ಮುಸಲ್ಮಾನ ಸೇವಕನೂ ಬಂದಿದ್ದಾರೆ. ಸದ್ಯಕ್ಕೆ ಅವರು ಊರ ಹೊರಗಿನ ಧರ್ಮಶಾಲೆಯಲ್ಲಿ ಇರುವರು" ಎಂದು ಹೇಳಿದನು. ಅದನ್ನು ಕೇಳಿದಕೂಡಲೆ ರಾಮರಾಜನು ಆ ಮುದುಕೆಯ ಲಕ್ಷಣವನ್ನು ಕೇಳಿಕೊಂಡು ಮಾರ್ಜಿನೆಯೇ ಬಂದಿರುವಳೆಂದು ತಿಳಿದು, ಆ ಚಾರನಿಗೆ—"ನೀನು ಇದೇ ಕಾಲಿನಲ್ಲಿ ತಿರುಗಿ ಹೋಗು. ಅವರಿಬ್ಬರನ್ನು ಇನ್ನು ಎರಡುದಿನ ಧರ್ಮಶಾಲೆಯ ಹೊರಗೆ ಬಿಡಬೇಡೆಂದು ನಾನು ಹೇಳಿರುತ್ತೇನೆಂದು ಸುಬ್ರಹ್ಮಣ್ಯನಿಗೆ ತಿಳಿಸು; ಆತನು ಹಾಗೆ ಮಾಡಲಿಕ್ಕೆ ಒಂದು ಪಕ್ಷದಲ್ಲಿ ಹಿಂದುಮುಂದು ನೋಡಿದರೆ, ಆತನಿಗೆ ಈ

ಉಂಗರವನ್ನು ತೋರಿಸು. ಉಂಗರವನ್ನು ಆತನಿಗೆ ಕೊಡಬೇಡ, ತಿರುಗಿ ತಕ್ಕೊಂಡು ಬಾ. ಉಂಗರವನ್ನು ನೋಡಿದ ಕೂಡಲೆ ಆತನು ಎಲ್ಲ ವ್ಯವಸ್ಥೆಯನ್ನು ಮಾಡುವನು, ನಿನಗೆ ಅದರ ಚಿಂತೆಬೇಡ, ನಡೆ ನಡೆ'' ಎಂದು ಹೇಳಿ ಆತನನ್ನು ಕಳಿಸಿಕೊಟ್ಟನು. ಚಾರನು ಅತ್ತ ಹೋದಕೂಡಲೆ ರಾಮರಾಜನು ತನ್ನ ಮನಸ್ಸಿನಲ್ಲಿ—" ಒಟ್ಟಿಗೆ ನನ್ನದೊಂದು ತರ್ಕವು ನಿಜವಾದಂತಾಯಿತು. ಆಕೆಯು ಮಾರ್ಜಿನಿಯೇ ನಿಶ್ಚಯವು. ರಣಮಸ್ತಖಾನನಿಗೆ ಎಲ್ಲ ಸುದ್ದಿಯನ್ನು ಹೇಳುವದಕ್ಕಾಗಿ ತನ್ನ ಒಡೆಯಳ ಕಡೆಯಿಂದ ಬಂದಿರುವಳು. ಆಕೆಗೂ ರಣಮಸ್ತಖಾನನಿಗೂ ಭೆಟ್ಟಿಯಾಗದಂತೆ ವ್ಯವಸ್ಥೆಯನ್ನು ಮಾಡಿರುವೆನು. ಇನ್ನು ಇಂದೇರಾತ್ರಿ ನಾನು ಕುಂಜವನಕ್ಕೆ ಹೋಗಲೇ ಬೇಕು " ಎಂದು ಯೋಚಿಸಿ, ರಾತ್ರಿಯು ಯಾವಾಗ ಆದೀತೆಂದು ಆತನು ಉತ್ಸುಕತೆಯಿಂದ ಹಾದಿಯ ನೋಡಹತ್ತಿದನು. ಮೂವತ್ತು ವರ್ಷಗಳ ಹಿಂದೆ ಕುಂಜವನಕ್ಕೆ ರಾತ್ರಿಯಲ್ಲಿ ಹೋಗುವಾಗಿನ ಉತ್ಸುಕತೆಯ ಸ್ಮರಣವು ಈಗ ಆತನಿಗೆ ಆಯಿತು ; ಆದರೆ ಆಗಿನ ಔತ್ಸುಕ್ಯದ ಕಾರಣವೂ, ಈಗಿನ ಔತ್ಸುಕ್ಯದ ಕಾರಣವೂ ಭಿನ್ನವಾಗಿದ್ದವೆಂಬದು ಸ್ಪಷ್ಟವು. ಮೆಹೇರಜಾನಳನ್ನು ಕಂಡು ತನ್ನ ಅಪರಾಧವನ್ನು ಕ್ಷಮಿಸುವದಕ್ಕಾಗಿ ಆಕೆಯನ್ನು ಪ್ರಾರ್ಥಿಸಬೇಕೆಂದು ರಾಮರಾಜನು ನಿಶ್ಚಯಿಸಿದನು. ರಾತ್ರಿಯಾದಕೂಡಲೆ ಆತನು ಹಿಂದಿನಂತೆಯೇ ಸಂಗಡ ಯಾರನ್ನೂ ಕರಕೊಳ್ಳದೆ ಕುಂಜವನಕ್ಕೆ ಒಬ್ಬನೇ ಹೊರಟನು.

ಕುಂಜವನದ ಬಾಗಿಲು ಸನಿ ಸನಿಯಕ್ಕೆ ಬರಲು, ಇಷ್ಟು ರಾತ್ರಿಯಲ್ಲಿ ತನ್ನನ್ನು ಕುಂಜವನದೊಳಗೆ ಬಿಡಲಿಕ್ಕಿಲ್ಲೆಂಬ ಶಂಕೆಯು ರಾಮರಾಜನಿಗೆ ಉತ್ಪನ್ನವಾಯಿತು. ಆದರೆ ಇಷ್ಟು ದೂರ ಬಂದು ಹಿಂದಿರುಗಿ ಹೋಗುವದು ನೆಟ್ಟಗಲ್ಲೆಂದು ತಿಳಿದು ವೇಷಾಂತರಿಸಿದ್ದ ಆತನು ಆದದ್ದಾಗಲೆಂದು ದ್ವಾರರಕ್ಷಕನನ್ನು ಕೂಗಿಕೂಗಿ ಎಬ್ಬಿಸಿದನು. ಕಾವಲುಗಾರನು ಅರಸಿದ್ದೆಯಲ್ಲಿದ್ದ ದ್ದರಿಂದ, ಆತನು ಬಹಳ ಹೊತ್ತಿನವರೆಗೆ ರಾಮರಾಜನ ಕೂಗನ್ನು ಲೆಕ್ಕಿಸಲೇ ಇಲ್ಲ. ಕಡೆಗೆ—" ಯಾವನವನು ? ರಾತ್ರಿಯಲ್ಲಿ ಕಿಟಿ ಕಿಟಿ ಹಚ್ಚಿರುತ್ತಾನೆ '' ಎಂದು ಒಟಗುಟ್ಟುತ್ತ ಬಾಗಿಲು ತೆರೆದನು. ಆಗ ರಾಮರಾಜನು ಆತನಿಗೆ-" ರಣಮಸ್ತಖಾನರು ನನ್ನನ್ನು ಮಾಸಾಹೇಬರಕಡೆಗೆ ಕಳಿಸಿರುತ್ತಾರೆ. ಬಹಳ ಅವಸರದ ಕೆಲಸವಿರುತ್ತದಂತೆ. ನೀನು ಹೋಗಿ ಮಾಸಾಹೇಬರಿಗೆ ಸುದ್ದಿಯನ್ನು ತಿಳಿಸಿ, ಅವರಿಗೆ ನನ್ನ ಭೆಟ್ಟಿಯನ್ನು ಮಾಡಿಸು. ಅವರು ನಿದ್ದೆಹತ್ತಿ ಮಲಗಿದ್ದರೂ ಎಬ್ಬಿಸು. ಕೆಲಸವು ಬಹಳ ನಾಜೂಕು ಇರುತ್ತದೆ '' ಎಂದು ಹೇಳಿದನು ; ಆದರೆ ಕಾವಲುಗಾರನು ರಾಮರಾಜನ ಮಾತಿಗೆ ಒಪ್ಪಿಕೊಳ್ಳದೆ,

"ಅಪರಾತ್ರಿಯು, ಎಲ್ಲಿ ಎಬ್ಬಿಸಲೆಂ''ದು ಗುಣಗುಟ್ಟುಹತ್ತಿದನು. ಆತನು ರಾಮರಾಜನಿಗೆ-ಈಗ ನಾನು ಕಾವಲಿಗೆ ಒಬ್ಬನೇ ಇದ್ದೇನೆ. ಬಂಗಲೆಯೊಳಗೂ ಸೇವಕರು ಯಾರೂ ಇಲ್ಲ. ಎಲ್ಲ ಜನರು ದೊಡ್ಡಖಾನಸಾಹೇಬರ ಕಡೆಗೆ ಹೋಗಿದ್ದಾರೆ. ಆ ಮುದುಕಿಯೂ ಇಂದು ಎಲ್ಲಿಯೋ ಹೋಗಿಬಿಟ್ಟಿದ್ದಾಳಿ, ಇನ್ನು ಮಾಸಾಹೇಬರನ್ನು ಎಬ್ಬಿಸಲಿಕ್ಕೆ ಹೋಗಬೇಕಾದರೆ, ಅವರ ಕೋಣೆಯ ಬಾಗಿಲತನಕ ಹೋಗಬೇಕು. ಈಗ ಯಾರು ಹೋಗುವರು? ಈಗ ಆಗುವದಿಲ್ಲ, ಮುಂಜಾನೆ ನೋಡೋಣವಂತೆ ಈಗ ಸರಿರಾತ್ರಿಯಾಗಿರುವದು'' ಎಂದು ಒದರಾಡಹತ್ತಿದನು. ಆಗ ರಾಮರಾಜನು—ಛೇ, ಛೇ, ಹೀಗೆ ಮಾಡಿದರೆ ಹ್ಯಾಗೆ? ಖಾನಸಾಹೇಬರು ನನ್ನನ್ನು ಬುದ್ಧಿಪೂರ್ವಕವಾಗಿ ಇದಕ್ಕೇ ಕಳಿಸಿರುವರೇನು? ಹ್ಯಾಗಾದರೂ ಮಾಡಿ ಈದಿನ ರಾತ್ರಿಯೇ ಮಾಸಾಹೇಬರಿಗೆ ಸುದ್ದಿಯನ್ನು ಮುಟ್ಟಿಸಬೇಕೆಂದು ಅವರು ಹೇಳಿರುವರು. ಹ್ಯಾಗಾದರೂ ಮಾಡು, ನಾನು ಬಂದ ಸುದ್ದಿಯನಷ್ಟು ಮಾಸಾಹೇಬರಿಗೆ ಹಚ್ಚಿ ನಮ್ಮಿಬ್ಬರ ಭೆಟ್ಟಿಯನ್ನು ಮಾಡಿಸಬೇಕು. ನಿನ್ನ ಶ್ರಮವು ವ್ಯರ್ಥವಾಗಲಿಕ್ಕಿಲ್ಲ, ಎಂದು ಹಲವು ವಿಧವಾಗಿ ಹೇಳಿಕೊಳ್ಳಲು, ಆ ಕಾವಲುಗಾರನು ನಿರ್ವಾಹವಿಲ್ಲದೆ ರಾಮರಾಜನಿಗೆ—ಇಲ್ಲಿಯೇ ನೀನು ಬಾಗಿಲು ಕಾಯುತ್ತ ಇರೆಂದು ಗಟ್ಟಿ ಮುಟ್ಟಿಯಾಗಿ ಹೇಳಿ, ಆ ಬಾಗಿಲವನ್ನು ಪುನಃ ಇಕ್ಕದೆ ಮಾಸಾಹೇಬರ ಬಂಗಲೆಯ ಕಡೆಗೆ ಹೊರಟು ಹೋದನು. ಇತ್ತ ರಾಮರಾಜನು ಒಂದೆರಡು ಕ್ಷಣ ಅಲ್ಲಿ ನಿಂತಿರಬಹುದು. ಅಷ್ಟರಲ್ಲಿ ಆತನ ದೃಷ್ಟಿಯು ಪುಷ್ಕರಣಿಯ ಕಡೆಗೆ ಹೋಗಲು, ಅತ್ತಕಡೆಗೆ ಹೋಗುವ ಇಚ್ಛೆಯು ಆತನಿಗೆ ಉತ್ಪನ್ನವಾದದ್ದರಿಂದ, ಆತನು ಯಾವ ವಿಚಾರವನ್ನೂ ಮಾಡದೆ ಅತ್ತಕಡೆಗೆ ಹೋಗಿಬಿಟ್ಟನು.

ಕುಂಜವನಕ್ಕೆ ಬಂದಬಳಿಕ ರಾಮರಾಜನ ಮನಸ್ಸು ಪುಷ್ಕರಣಿಯ ಕಡೆಗೆ ಎಳೆಯತಕ್ಕದ್ದೇ ಎಂಬುದು ಗೊತ್ತಾಗಿ ಹೋಗಿತ್ತು. ಆ ಪುಷ್ಕರಣಿಯ ದಂಡೆಯಲ್ಲಿ ಆತನು ತಾರುಣ್ಯದಲ್ಲಿ ಹಲವು ಸುಖಗಳನ್ನು ಭೋಗಿಸಿದ್ದರಿಂದಾಗಲಿ, ಪುಷ್ಕರಣಿಯಲ್ಲಿ ಅಂಥ ವಿಲಕ್ಷಣವಾದ ಆಕರ್ಷಣಶಕ್ತಿಯಿದ್ದದ್ದರಿಂದಾಗಲಿ ರಾಮರಾಜನು ಈ ವರೆಗೆ ಕುಂಜವನಕ್ಕೆ ಹೋದಾಗೆಲ್ಲ ಪುಷ್ಕರಣಿಗೆ ಹೋಗಿಯೇ ತೀರಿದ್ದನು. ಅದರಲ್ಲಿ ಈದಿನ ಹುಣ್ಣಿವೆಯ ರಾತ್ರಿಯು. ಹಿಟ್ಟುಚಲ್ಲಿದಹಾಗೆ ಬೆಳದಿಂಗಳು ಬಿದ್ದಿತ್ತು. ಹವೆಯು ಸ್ತಬ್ಧವಾಗಿತ್ತು. ಗಿಡದ ಎಲೆಗಳು ಮಿಸುಕುತ್ತಿದ್ದಿಲ್ಲ. ಪುಷ್ಕರಣಿಯ ಸ್ತಬ್ಧವಾದ ಶುಭ್ರಜಲದಲ್ಲಿ ಒಂದಾದರೂ ತರಂಗವು

ಕಣ್ಣಿಗೆ ಬೀಳುತ್ತಿದ್ದಿಲ್ಲ. ಆಕಾಶದಲ್ಲಿ ತಾರಕೆಗಳು ಚಂದ್ರಪ್ರಕಾಶದಲ್ಲಿ ಲುಪ್ತ ಪ್ರಾಯವಾಗಿ ಹೋಗಿದ್ದವು. ಇಂಥ ಶುಭ್ರ ಚಂದ್ರಪ್ರಕಾಶದ ಯೋಗದಿಂದ ರಾಮರಾಜನ ಮೋಹವು ಮತ್ತಿಷ್ಟು ಹೆಚ್ಚಿತು. ಈ ಹೆಚ್ಚಿದ ಮೋಹದಲ್ಲಿ ಮೆಹೇರಜಾನಳ ಅಪ್ರಾಪ್ತಸ್ಥಿತಿಯ ಯೋಗದಿಂದ ಉಂಟಾಗಿದ್ದ ಅಸಮಾಧಾನವು ಬೆರೆತು ಆತನಿಗೆ ಏನೂ ತೋಚದೆ ಆತನು ಪರಾಧೀನನಂತೆ ಪುಷ್ಕರಣಿಯ ದಂಡೆಯಲ್ಲಿ ಸಂಚರಿಸುತ್ತಿದ್ದನು. ತನ್ನನ್ನು ಕುಂಜವನದ ಕಾವಲುಗಾರನು ಹುಡುಕಬಹುದೆಂಬ ಎಚ್ಚರವು ಆತನಿಗೆ ಉಳಿದಿದ್ದಿಲ್ಲ. ಮೆಹೇರಜಾನಳು ಏನು ಅಂದಾಳೆಂಬದನ್ನು ತಿಳಕೊಳ್ಳುವದಕ್ಕಾಗಿ ಆತನು ಬಾಗಿಲು ಕಾಯುತ್ತ ಇರುವದನ್ನು ಬಿಟ್ಟು, ಪುಷ್ಕರಣಿಯ ಕಡೆಗೆ ಹೊರಟು ಬಂದು ಬಿಟ್ಟಿದ್ದನು. ಪುಷ್ಕರಣಿಯ ದಂಡೆಯಲ್ಲಿರುವಾಗ ಮೆಹೇರಜಾನಳಿಗೆ ಸಂಬಂಧಿಸಿದ ತನ್ನ ಹಿಂದಿನ ಇತಿಹಾಸವೆಲ್ಲ ಆತನಿಗೆ ನೆನಪಾಯಿತು. ಆತನು ತನ್ನ ಹಿಂದಿನ ಮನೋಹರವಾದ ಇತಿಹಾಸವನ್ನು ಸ್ಮರಿಸುತ್ತ ಸ್ಮರಿಸುತ್ತ ಒಂದು ವೃಕ್ಷದ ಬುಡಕ್ಕೆ ಬಂದನು. ಅಲ್ಲಿಗೆ ಬಂದ ಕೂಡಲೆ ಆತನಿಗೆ ಏನೋ ನೆನಪಾದಂತಾಗಿ ಆತನು ಸ್ತಬ್ಧವಾಗಿ ನಿಂತುಕೊಂಡನು. ಹಿಂದಕ್ಕೆ ಮೂವತ್ತು ವರ್ಷಗಳ ಹಿಂದೆ ಆತನು ಅದೇ ಮರದ ಬುಡದಲ್ಲಿ ನಿಂತುಕೊಂಡು, ಮೆಹೇರಜಾನಳು ಪುಷ್ಕರಣಿಯೊಳಗಿನ ನೌಕೆಯಲ್ಲಿ ಕುಳಿತು ಹಾಡುವ ಮನೋಹರಗಾಯನವನ್ನು ಕೇಳಿ, ತಾನು ಆ ಗಾಯನಕ್ಕೆ ಪ್ರತ್ಯುತ್ತರವಾಗಿ ಅದೇ ಮರದ ಬುಡದಲ್ಲಿ ನಿಂತು ಸಂಸ್ಕೃತ ಅಷ್ಟಪದಿಯನ್ನು ಅಂದಿದ್ದನು. ಆ ಸುಖಮಯ ಪ್ರಸಂಗದ ಚಿತ್ರವು ಈಗ ರಾಮರಾಜನ ಕಣ್ಣಿಗೆ ಕಟ್ಟುತ್ತು. ಹೀಗೆ ಚಿತ್ರವು ಕಣ್ಣಿಗೆ ಕಟ್ಟಿರುವಾಗ ತಾನು ಪ್ರತ್ಯಕ್ಷ ಆ ಸುಖವನ್ನು ಭೋಗಿಸುವಂತೆ ಆತನಿಗೆ ಭಾಸವಾಯಿತು. ಹೀಗೆ ಸುಖವನ್ನು ಅನುಭವಿಸುತ್ತಿರುವಾಗ ಆತನ ಕಣ್ಣುಗಳು ಒಮ್ಮೆಲೆ ನೀರುತುಂಬಿದವು. ಬರಬರುತ್ತ ಆತನ ಕಣ್ಣೊಳಗಿಂದ ನೀರುಗಳು ಧಾರಾಳವಾಗಿ ಸುರಿಯಹತ್ತಿದವು; ಮುಂದೆ ಆ ಕಣ್ಣೀರು ಸುರಿಯುವದು ನಿಂತು ಆತನ ಎದೆಯು ಧಸಕ್ಕೆಂದಿತು. ಮೆಹೇರಜಾನಳೂ, ಆತನೂ ಪುಷ್ಕರಣಿಯ ಮಧ್ಯದಲ್ಲಿದ್ದ ಧ್ವಜಸ್ತಂಭದತ್ತ ಕಡೆಯಿಂದ ನೌಕೆಯಲ್ಲಿ ಕುಳಿತು ದಂಡೆಯ ಕಡೆಗೆ ಬರುವಾಗ ಮೆಹೇರಜಾನಳು ನುಡಿದ ಶಬ್ದಗಳ ನೆನಪು ಈಗ ಆತನಿಗಾಗಿತ್ತು. ಹಾಗೆ ನೆನಪಾದದ್ದರಿಂದಲೇ ಆತನ ಆನಂದವು ನಷ್ಟವಾಗಿ ಆತನು ತನ್ನೊಳಗೆ—"ಆಗ ಹಾಗೆ ನಾವು ಮುಣುಗಿಹೋಗಿದ್ದರೆ ಏನಾಗುತ್ತಿತ್ತು? ಈ ಮುಂದಿನ ಎಲ್ಲ ತೊಡಕುಗಳು ಉಂಟಾಗುತ್ತಿದ್ದಿಲ್ಲ. ಆಕೆಯೂ ನಾನೂ ಎಲ್ಲಿ

ಯಾದರೂ ಒತ್ತಟ್ಟಿಗೆ ಸುಖದ ಶಿಖರವನ್ನೇರಿ, ಇಲ್ಲವೆ ಯಾರಿಗೆ ಗೊತ್ತು, ದುಃಖದ ಕೂಪದಲ್ಲಿ ಬಿದ್ದಿರುತ್ತಿದ್ದೆವು. ಏನೇ ಆಗಲಿ ನಾವಿಬ್ಬರು ಈ ಲೋಕದಿಂದ ಕೂಡಿಯೇ ಹೋಗಿದ್ದರೆ, ನಮ್ಮಿಬ್ಬರ ಅಕೃತ್ರಿಮ ಪ್ರೇಮವನ್ನು ನೋಡಿ ಪರಮೇಶ್ವರನು ನಿಶ್ಚಯವಾಗಿ ನಮ್ಮನ್ನು ಏಕತ್ರವಾಗಿ ಇಡುತ್ತಿದ್ದನು.

ಹೀಗೆ ಏನೇನೋ ಅಲ್ಲಿಯ ಇಲ್ಲಿಯ ವಿಚಾರಗಳು ರಾಮರಾಜನ ಮನಸ್ಸಿನಲ್ಲಿ ಎಡತಾಕುತ್ತಿರಲು, ಆತನಿಗೆ ತಾನು ಕಾವಲುಗಾರನನ್ನು ಮೆಹೇರಜಾನಳ ಕಡೆಗೆ (ಮಾಸಾಹೇಬರ ಕಡೆಗೆ) ಕಳಿಸಿಕೊಟ್ಟದ್ದು ನೆನಪಾಯಿತು. ಕೂಡಲೆ ಆತನ ಮನಸ್ಸು ಅತ್ತಕಡೆಗೆ ಹರಿಯಹತ್ತಿ, ಆತನು ತನ್ನ ಮನಸ್ಸಿನಲ್ಲಿ—"ಕಾವಲುಗಾರನು ಇಷ್ಟು ಹೊತ್ತಿಗೆ ಮೆಹೇರಜಾನಳನ್ನು ಕಂಡು ಅಲ್ಲಿಗೆ ಬಂದಿರಬಹುದಲ್ಲವೇ? ಆತನು ನನ್ನ ಕುದುರೆಯು ಅಲ್ಲಿಯೇ ಇರುವದನ್ನು ನೋಡಿ ಅತ್ತಿತ್ತ ನನ್ನನ್ನು ಶೋಧಿಸುತ್ತಿರಬಹುದು, ಆದ್ದರಿಂದ ನಾನು ಅಲ್ಲಿಗೆ ಹೋಗತಕ್ಕದ್ದು, ಎಂದು ಯೋಚಿಸಿ, ನಾಲ್ಕು ಹೆಜ್ಜೆ ಮುಂದಕ್ಕೆ ಬಂದಿರಬಹುದು; ಅಷ್ಟರಲ್ಲಿ ಆತನಿಗೆ ಸ್ವಲ್ಪ ದೂರದಲ್ಲಿ ಯಾರೋ ಬರುತ್ತಿರುವಂತೆ ತೋರಿ, ಆತನು ಅಲ್ಲಿಯೇ ನಿಂತುಕೊಂಡನು. ಆತನು ದಿಟ್ಟಿಸಿನೋಡಲು, ಒಂದು ಶುಭ್ರ ವಸ್ತ್ರವೇಷ್ಟಿತಮೂರ್ತಿಯು ಆತನ ಕಣ್ಣಿಗೆ ಬಿದ್ದಿತು. ಈ ಮೂರ್ತಿಯು ಯಾರಿರಬಹುದೆಂಬ ಶಂಕೆಯು ಲೇಶವಾದರೂ ಆತನಿಗಿದ್ದಿಲ್ಲ. ಈ ಮೂರ್ತಿಯು ತನ್ನ ಪ್ರಿಯ ಮೆಹೇರಜಾನಳು, ಅಥವಾ ಈಗಿನ ಹೆಸರಿನಂತೆ ಮಾಸಾಹೇಬರು, ಎಂದು ಆತನು ನಿಶ್ಚಯಿಸಿದನು. ಹಿಂದಕ್ಕೆ ರಣಮಸ್ತಖಾನನ ಸಂಗಡ ಪುಷ್ಕರಣಿಯಲ್ಲಿ ಸಂಚರಿಸುತ್ತಿರುವಾಗ ಒಮ್ಮೆ ಇದೇ ಶುಭ್ರ ಮೂರ್ತಿಯನ್ನು ನೋಡಿದ್ದು ಆತನ ಸ್ಮರಣಕ್ಕೆ ಬಂದಿತು. ಇಷ್ಟು ರಾತ್ರಿಯಲ್ಲಿ ಈಕೆಯು ಇಲ್ಲಿಗೆ ಯಾಕೆ ಬಂದಿರಬಹುದೆಂದು ಆತನು ಆಲೋಚಿಸತೊಡಗಿದನು. ಕಾವಲುಗಾರನು ಹೇಳಿದ್ದರಿಂದ ಆಕೆಯು ಇಲ್ಲಿಗೆ ಬಂದಿರಬಹುದೋ, ಛೇ ಛೇ ಹಾಗೆ ಒರುವ ಸಂಭವವಿಲ್ಲ. ಆಕೆಯು ಕಾವಲುಗಾರನ ಮುಖಾಂತರ ತಾನಿದ್ದಲ್ಲಿಗೆ ನನ್ನನ್ನು ಕರೆಸಿಕೊಳ್ಳುತ್ತಿದ್ದಳು. ಇಲ್ಲವೆ ಮಗನ ಮೇಲಿನ ಸಂತಾಪವು ಕಡಿಮೆಯಾಗದೆ ಇದ್ದ ಪಕ್ಷದಲ್ಲಿ ನನ್ನನ್ನು ಕಾಣಲಿಚ್ಛಿಸದೆ "ಮಗನೂ ಬೇಡ, ಆತನು ಹೇಳಿಕಳಿಸಿದ ಸುದ್ದಿಯೂ ಬೇಡ" ಎಂದು ಆಕೆಯು ನಿರಾಕರಿಸಬಹುದಾಗಿತ್ತು. ಅಂದಬಳಿಕ ಈಕೆಯು ಇಲ್ಲಿಗೆ ಈಗ ಯಾಕೆ ಬಂದಿರಬಹುದು? ಎಂಬ ವಿಚಾರವಲ್ಲಿ ರಾಮರಾಜನು ಮಗ್ನನಾಗಿದ್ದರೂ, ಆತನು ಆ ಶುಭ್ರ ಮೂರ್ತಿಯನ್ನು ಎವೆಯಿಕ್ಕದೆ ನೋಡುತ್ತಿದ್ದನು. ಇಷ್ಟು ರಾತ್ರಿಯಲ್ಲಿ

ಈಕೆಯು ಇಲ್ಲಿಗೆ ಬಂದು ಏನು ಮಾಡುತ್ತಾಳೆಂಬದನ್ನು ನೋಡಿ, ಆಮೇಲೆ ಈಕೆಯ ಎದುರಿಗೆ ನಿಂತುಕೊಂಡು ನನ್ನ ಸಂಶಯವನ್ನು ದೂರಮಾಡಿಕೊಳ್ಳ ತಕ್ಕದ್ದು, ಎಂದು ಯೋಚಿಸಿದನು. ಇತ್ತ ಆ ಶ್ವೇತಮೂರ್ತಿಯು, ಅಥವಾ ಮಾ ಸಾಹೇಬರು ಪುಷ್ಕರಣಿಯ ತೀರದಲ್ಲಿ ನಿಂತು ತಟಸ್ಥವೃತ್ತಿಯಿಂದ ಜಲರಾಶಿ ಯನ್ನು ನೋಡತೊಡಗಿದರು. ಆ ಕಾಲದಲ್ಲಿ ಮಾಸಾಹೇಬರಿಗೆ ಅವರ ಆಯು ಷ್ಯದೊಳಗಿನ ಇತಿಹಾಸವೆಲ್ಲ ನೆನಪಾಯಿತು. ತಾವು ಹಿಂದಕ್ಕೆ ರಾಮರಾಜ ನೊಡನೆ ನೌಕೆಯಲ್ಲಿ ಕುಳಿತು ದಂಪೆಯ ಕಡೆಗೆ ಬರುತ್ತಿರುವಾಗ ಆತನನ್ನು ಕುರಿತು—"ನಾನೂ ನೀವೂ ಒಮ್ಮೆಲೆ ಈ ಪುಷ್ಕರಣಿಯಲ್ಲಿ ಮುಳುಗಿ ಹೋದರೆ ಎಷ್ಟು ನೆಟ್ಟಗಾದೀತಲ್ಲ " ಎಂದು ನುಡಿದದ್ದು ಈಗ ಅವರಿಗೆ ನೆನಪಾಯಿತು. ಮೆಹೇರಜಾನಳ ಆಯುಷ್ಯದಲ್ಲಿ ಸುಖದ ಪ್ರಸಂಗಗಳು ಮುಂಚಿನಂತೆ ಹೊಳೆದು ಹೋಗಿ, ದುಃಖದ ಪ್ರಸಂಗಗಳಲ್ಲಿ ಈಗ ಬಹು ದಿವಸಗಳಿಂದ ಆಕೆಯು ಮು ಣುಗಿಹೋದಂತೆ ಆಗಿತ್ತು. ಮಗನ ಕೈಯಿಂದ ರಾಮರಾಜನ ಸೇಡು ತೀರಿಸಿ ಕೊಳ್ಳಬೇಕೆಂದು ಆಕೆಯು ಹವಣಿಸುತ್ತಿರಲು, ಈಗ ಮಗನು ರಾಮರಾಜನನ್ನೇ ಕೂಡಿಬಿಟ್ಟದ್ದರಿಂದ ಆಕೆಗೆ ಜೀವವು ಬೇಡಾಯಿತು. ಇನ್ನು ಹೋದಲ್ಲಿ ತನ್ನ ಅಪ್ರತಿಷ್ಠೆಯಾಗುವದೆಂದು ಆಕೆಯು ಭಾವಿಸಿದ್ದಳು. ಪುಷ್ಕರಣಿಯಲ್ಲಿ ಹಾರಿ ಕೊಂಡು ಪ್ರಾಣಕೊಡುವದೊಂದೇ ಉಪಾಯವು ಆಕೆಯ ಕೈಯೊಳಗಿದ್ದಂತೆ ಯಿತ್ತು. ಆ ಉಪಾಯದಿಂದ ತನ್ನ ದುಃಖವಿಮೋಚನೆ ಮಾಡಿಕೊಳ್ಳಬೇ ಕೆಂದು ಆಕೆಯು ಪುಷ್ಕರಣಿಗೆ ಈಗ ಬಂದಿದ್ದಳು. ತನ್ನ ಈ ಘೋರಕಾ ರ್ಯಕ್ಕೆ ವಿಘ್ನವೊದಗುವದೆಂದು ತಿಳಿದು, ಆಕೆಯು ತನ್ನ ದಾಸಿಯಾದ ಮಾ ರ್ಜಿನೆಯನ್ನು ರಣಮಸ್ತಖಾನನ ಕಡೆಗೆ ಕಳಿಸಿಕೊಟ್ಟಿದ್ದಳು. ಈಗ ಮೆಹೇ ರಜಾನಳ ಪ್ರಾಣ ವಿಘಾತಕ ಕಾರ್ಯಕ್ಕೆ ವಿಘ್ನಮಾಡುವವರು ಯಾರೂ ಇದ್ದಿಲ್ಲ. ಆಕೆಯು ತನ್ನ ಅಂಗವಸ್ತ್ರವನ್ನು ಸಾವರಿಸಿಕೊಂಡು ಪರಮೇಶ್ವ ರನ ಜಪಮಾಡಹತ್ತಿದಳು. ಆಮೇಲೆ ಮುಸಲ್ಮಾನ ಧರ್ಮದ ಪದ್ಧತಿಯಂತೆ ನಮಾಜು ಮಾಡಹತ್ತಿದಳು. ಇದನ್ನೆಲ್ಲ ನೋಡುತ್ತ ರಾಮರಾಜನು ಸ್ತಬ್ಧ ವಾಗಿ ಮರೆಗೆ ನಿಂತುಕೊಂಡಿದ್ದನು. ಈ ಪ್ರಸಂಗದಲ್ಲಿ ತಾನು ಒಮ್ಮೆಲೆ ಮುಂದಕ್ಕೆ ಹೋಗಿ "ಪ್ರೀಯ ಮೆಹೇರಜಾನ" ಎಂದು ಸಂಬೋಧಿಸಿ, ಆಕೆಯನ್ನು ಅಪ್ಪಿಕೊಳ್ಳಬೇಕೆಂದು ಆತನು ಎಷ್ಟೋ ಸಾರೆ ಯತ್ನಿಸಿದನು ; ಆದರೆ ಆತನ ಕಾಲುಗಳೇ ಏಳಲಿಲ್ಲ! ಎಷ್ಟೋ ಸಾಹಸದ ಕಾರ್ಯಗಳನ್ನು ಮಾಡಿದ ರಾಮರಾಜನಿಗೆ, ಇಷ್ಟು ಕೆಲಸ ಮಾಡುವ ಧೈರ್ಯವು ಆಗಲಿಲ್ಲ. ಈಗ ಅಪ್ಪಿ ಕೊಳ್ಳೋಣ, ಇನ್ನೊಂದುಕ್ಷಣದಮೇಲೆ ಅಪ್ಪಿಕೊಳ್ಳೋಣ, ಈಕೆ ಏನೇನು

ಮಾಡುತ್ತಾಳೋ ನೋಡಿ ಆಪ್ಪಿಕೊಳ್ಳೋಣ, ಎಂದು ಪಾದಿಯನ್ನು ನೋಡುತ್ತ ನಿಂತುಕೊಂಡಿದ್ದನು. ಈಕೆಯು ಈ ನಮಾಜು, ಆತ್ಮಹತ್ಯೆಯ ಪೂರ್ವಚಿಹ್ನ ವೆಂಬದು ರಾಮರಾಜನಿಗೆ ಗೊತ್ತಾಗಲಲ್ಲ. ಆಕೆಯ ಮುಖಚರ್ಯವೂ ಆತನಿಗೆ ಕಾಣುತ್ತಿದ್ದಿಲ್ಲ. ಕೇವಲ ಮನೋಮಯಸಾಕ್ಷಿಯಿಂದಲೇ ಈಕೆಯು ಮೆಹೇರ ಜಾನಳೆಂದು ಆತನು ತಿಳಕೊಂಡಿದ್ದನು; ಮತ್ತು ಆಕೆಯ ಕಡೆಗೆ ನೋಡುತ್ತ ಆತನು ಈಗ ಮುಂದಕ್ಕೆ ಹೋಗಲೇನು, ಇನ್ನಿಷ್ಟು ನಿಂತು ಮುಂದಕ್ಕೆ ಹೋಗ ಲೇನು, ಎಂದು ವಿಚಾರಿಸುತ್ತಿದ್ದನು; ಆದರೆ ಒಂದು ಪೆಜ್ಜೆಯನ್ನಾದರೂ ಇಡು ವದು ಆತನಿಂದಾಗಲಿಲ್ಲ.

ಇತ್ತ ಮಾಸಾಹೇಬರು ನಮಾಜು ಮಾಡಿದ ಮೇಲೆ ಒಮ್ಮೆಲೆ ಅವರ ಮನ ಸ್ಸಿಗೆ ಒಂದು ಪ್ರಕಾರದ ಶಾಂತಿಯು ಉತ್ಪನ್ನವಾಯಿತು ಪುಷ್ಕರಣಿಯಲ್ಲಿ ಹಾರಿ ಕೊಂಡು ಪ್ರಾಣವನ್ನರ್ಪಿಸಬೇಕೆಂಬ ಅವರ ನಿಶ್ಚಯವೂ ಸ್ಥಿರವಾಯಿತು. ಅವರು ತಮ್ಮ ಮೈಮೇಲಿನ ಚಾದರವನ್ನು ತೆಗೆದು ಒಗೆದರು. ಬಳಿಕ ತನ್ನ ಉಟ್ಟ ಸೀರೆಯನ್ನು ನೆಟ್ಟಗೆಮಾಡಿಕೊಂಡು-" ಅಲ್ಲಾಹೋ ಅಕಬರ! ಮುಹಮ್ಮದರ್ರಸು ಲುಲ್ಲಾ" ಎಂದು ಪರಮೇಶ್ವರನ ನಾಮಘೋಷವನ್ನು ಗಟ್ಟಿಯಾಗಿ ಮಾ ಡುತ್ತ, ಒಮ್ಮೆಲೆ ಅವರು ಪುಷ್ಕರಣಿಯಲ್ಲಿ ಹಾರಿಕೊಂಡರು. ಕೂಡಲೆ ರಾಮ ರಾಜನು ಅವರ ಬೆನ್ನ ಹಿಂದೆಯೇ ಹಾರಿಕೊಂಡನೆಂದು ಹೇಳಲವಶ್ಯವಿಲ್ಲ.

ಏಳನೆಯ ಪ್ರಕರಣ:—ಬಾದಶಹನ ಪತ್ರವು.

ಮೇಲೆ ಹೇಳಿದ ಪ್ರಸಂಗವು ಒದಗಿ ಎಂಟು ದಿವಸವಾಗಿರಬಹುದು, ಆಗಿ ರಲಿಕ್ಕಿಲ್ಲ; ಅಷ್ಟರಲ್ಲಿ ವಿಜಾಪುರದ ಬಾದಶಹನು ತನ್ನ ಎರಡನೆಯ ವಕೀಲನ ಮುಖಾಂತರ ರಣಮಸ್ತಖಾನನ ಸಂಬಂಧದಿಂದ ರಾಮರಾಜನಿಗೆ ಸ್ಪಷ್ಟ ವಾಗಿ ಪತ್ರ ಬರೆದು ಕೇಳಿದನು. ಬಾದಶಹನು ತನ್ನ ಆ ಪತ್ರದಲ್ಲಿ ರಾಮ ರಾಜನಿಗೆ—ನಿಮ್ಮ ಕಡೆಗೆ ನಮ್ಮ ವಕೀಲನನ್ನಾಗಿ ಕಳಿಸಿದ್ದ ರಣಮಸ್ತಖಾನ ನನ್ನು, ನೀವು ನಮ್ಮನ್ನು ಕೇಳದೆ ನೌಕರಿಗೆ ಹ್ಯಾಗೆ ಇಟ್ಟುಕೊಂಡಿರಿ? ಆತನು ನಮ್ಮ ಮೇಲೆ ತಿರುಗಿಬಿದ್ದು ನಿಮ್ಮ ಕಡೆಗೆ ಬಂದಿರಬಹುದು; ಅಥವಾ ನೀವೇ ಆತನನ್ನು ಮೋಸಗೊಳಿಸಿ ನಿಮ್ಮಕಡೆ ಮಾಡಿಕೊಂಡಿರಬಹುದು, ಹ್ಯಾಗಿದ್ದರೂ ರಣಮಸ್ತಖಾನನಂಥ ದ್ರೋಹಿಗೆ ನೀವು ಆಶ್ರಯಕೊಡತಕ್ಕದ್ದಿದ್ದಿಲ್ಲ. ಇದ ರಿಂದ ನಮ್ಮ ನಿಮ್ಮ ಸ್ನೇಹ ಸಂಬಂಧಕ್ಕೆ ಕೊರತೆಯುಂಟಾಗಿರುತ್ತದೆ. ನಮ್ಮ ವಿಶ್ವಾಸದವನೆಂದು ರಣಮಸ್ತಖಾನನನ್ನು ನಿಮ್ಮ ಕಡೆಗೆ ವಕೀಲನನ್ನಾಗಿ ನಿಯ

ಹುಸಿ ಕಳುಹಿಸಿರಲು, ಆತನು ಈಗ ವಿಶ್ವಾಸಘಾತಮಾಡಿರುವದರಿಂದ ಸ್ವಾಮಿ ದ್ರೋಹವು ಆತನಿಂದ ಘಟಿಸಿರುವದು. ಆದ್ದರಿಂದ ನೀವು ಈ ಮಾತಿನ ಪೂರ್ಣ ವಿಚಾರಮಾಡಿ, ನಮ್ಮ ಮನುಷ್ಯನನ್ನು ನಮ್ಮ ಕಡೆಗೆ ತಿರುಗಿ ಕಳಿಸಬೇಕು. ನಾವು ಆತನ ಅಪರಾಧಕ್ಕಾಗಿ ಆತನಿಗೆ ದೇಹಾಂತಪ್ರಾಯಶ್ಚಿತ್ತವನ್ನು ಕೊಡುವವರಿದ್ದೇವೆ. ನೀವು ಆ ದ್ರೋಹಿಯನ್ನು ನಮ್ಮ ಕಡೆಗೆ ಕಳಿಸಿಕೊಡದಿದ್ದರೆ, ನಮ್ಮ ನಿಮ್ಮ ಸ್ನೇಹಸಂಬಂಧವನ್ನು ಮುರಿಯುವ ಉದ್ದೇಶದಿಂದ ನೀವು ಬುದ್ಧಿಪೂರ್ವಕವಾಗಿಯೇ ಈ ಕೆಲಸ ಮಾಡುವಿರೆಂದು ನಾವು ತಿಳಿಯುತ್ತೇವೆ. ಇದ್ದದ್ದರಲ್ಲಿ ನೆಟ್ಟಗಾಯಿತು, ರಣಮಸ್ತನು ಹೀಗೆ ಪ್ರಸಿದ್ಧ ರೀತಿಯಿಂದ ನಿಮ್ಮ ನೌಕರಿಗೆ ಸಿಲ್ಲದೆ, ಗುಪ್ತರೀತಿಯಿಂದ ನಮ್ಮ ದ್ರೋಹಬಗೆದಿದ್ದರೆ ನಮಗೆ ಬಹಳ ತ್ರಾಸವಾಗುತ್ತಿತ್ತು. ಆತನು ಹೋದದ್ದರಿಂದ, ಅಥವಾ ನಿಮ್ಮನ್ನು ಕೂಡಿಕೊಂಡದ್ದರಿಂದ ಅಂಥವೇನೂ ನಮ್ಮ ಮಾನಿಯಾಗುತ್ತದೆನ್ನುವ ಹಾಗಿಲ್ಲ; ಆದರೆ ಹೀಗಾದದ್ದು ನಮ್ಮ ನಿಮ್ಮ ಸ್ನೇಹಸಂಬಂಧದ ದೃಷ್ಟಿಯಿಂದ ನೆಟ್ಟಗಾಗಲಿಲ್ಲೆಂಬದಿಷ್ಟೇ ನಾವು ನಿಮಗೆ ತಿಳಿಸುವೆವು. ರಣಮಸ್ತ ಖಾನನು ನಮ್ಮ ತಾಬೇದಾರನು, ನಮ್ಮ ಅಪರಾಧಿಯು; ಆದ್ದರಿಂದ ಆತನನ್ನು ನಮ್ಮ ಎರಡನೆಯ ವಕೀಲನ ವಶಕ್ಕೆ ಒಪ್ಪಿಸಬೇಕು. ನಿಜವಾಗಿ ನೋಡಿದರೆ, ಆತನಿಂದ ನಿಮಗೇನೂ ಪ್ರಯೋಜನವಾಗಲಿಕ್ಕಿಲ್ಲ. ಆತನನ್ನು ನಂಬಿ ನೀವು ಕೆಡುವ ಸಂಭವನೇ ವಿಶೇಷವಾಗಿರುತ್ತದೆ; ಆದರೆ ನಮ್ಮ ನಿಮ್ಮ ಸ್ನೇಹ ಸಂಬಂಧಕ್ಕೆ ಸುಮ್ಮನೆ ಬಾಧೆ ಬರಬಾರದೆಂದು ನಾವು ನಿಮ್ಮನ್ನು ಹೀಗೆ ಕೇಳಿಕೊಂಡಿದ್ದೇವೆ. ನಮ್ಮ ಕೇಳಿಕೆಯಂತೆ ರಣಮಸ್ತನು ನಮ್ಮ ಅಪರಾಧಿಯೆಂದು ತಿಳಿದು, ಆತನನ್ನು ಕೂಡಲೆ ನಮ್ಮ ವಕೀಲನ ಸ್ವಾಧೀನಪಡಿಸಬೇಕು. ಸದ್ಯಕ್ಕೆ ನಿಮಗೆ ನಾವು ಇಷ್ಟೇ ಸೂಚಿಸುವೆವು. ಸುಜ್ಞರಿಗೆ ಹೆಚ್ಚಿಗೆ ಬರೆಯಲವಶ್ಯವಿಲ್ಲ.

ಬಾದಶಹನು ರಾಮರಾಜನಿಗೆ ಬರೆದ ಪತ್ರದ ಸಾರಾಂಶವು ಮೇಲೆ ಬರೆದಂತೆ ಇತ್ತು. ಬಾದಶಹನ ಮೂಲಪತ್ರವು ಆಗಿನಪದ್ಧತಿಯಂತೆ ಬಹು ವಿಸ್ತಾರವಾಗಿ ಬರೆಯಲ್ಪಟ್ಟಿತ್ತು. ಬಾದಶಹನ ವಕೀಲನು ನೆರೆದ ದರ್ಬಾರದಲ್ಲಿ ಆ ಪತ್ರವನ್ನು ರಾಮರಾಜನಿಗೆ ಕೊಟ್ಟನು. ರಾಮರಾಜನು ಅದನ್ನು ತಕ್ಕೊಂಡನು. ಆತನು ತಾನೇ ಕೈಮುಟ್ಟಿ ಅದನ್ನು ಒಡೆದು, ಮನಸ್ಸಿನಲ್ಲಿಯೇ ಓದಿ ಒಮ್ಮೆನಕ್ಕನು. ಉಳಿದವರಿಗೆ ಅದರೊಳಗಿನ ಸಂಗತಿಯೇನೂ ಗೊತ್ತಾಗಲಿಲ್ಲ. ಅವರು ಒಂದೇಸವನೆ ರಾಮರಾಜನ ಕಡೆಗೆ ನೋಡುತ್ತಲಿದ್ದರು. ಆಗ ರಾಮರಾಜನು ಆ ವಕೀಲನನ್ನು ಕುರಿತು—ತಾವು ಕೊಟ್ಟ ಈ ಪತ್ರವು ನಮಗೆ

ಮುಟ್ಟಿತು. ಅದನ್ನು ಕುರಿತು ನಾವು ಪೂರ್ಣವಿಚಾರಮಾಡಿ ಆಮೇಲೆ ಉತ್ತರ ಬರೆಯುವೆವು. ಈಗೇ ಅದರ ಉತ್ತರವನ್ನು ಬರೆಯುತ್ತಿದ್ದೆವು; ಆದರೆ ಹಾಗೆ ಮಾಡಿದರೆ, ಏನೂ ವಿಚಾರಮಾಡದೆ ಉತ್ತರಬರೆದರೆಂದು ನಿಮ್ಮ ಒಡೆಯರು ಅನ್ನಬಹುದು; ಆದ್ದರಿಂದ ವಿಚಾರಕ್ಕಾಗಿ ನಾಲ್ಕುದಿನ ತಡೆದು, ಆಮೇಲೆ ನಮ್ಮ ವಕೀಲನ ಕೈಯಿಂದ ನಿಮ್ಮ ಕಡೆಗೆ ಉತ್ತರವನ್ನು ಕೊಟ್ಟುಕಳಿಸುವೆವು. ಈಗ ತೊಂದರೆ ಕೊಟ್ಟ ಬಗ್ಗೆ ತಾವು ಕ್ಷಮಿಸಬೇಕು, ಎಂದು ಹೇಳಿದನು. ರಾಮರಾಜನ ಆ ನಗೆಯ ರೀತಿಯೂ, ಮಾತಿನ ಬಗೆಯೂ ಬಾದಶಹನ ವಕೀಲನನ್ನು ಸಿಟ್ಟಿಗೆಬ್ಬಿಸುವ ಹಾಗಿದ್ದವು. ಅದನ್ನು ನೋಡಿ ಆ ವಕೀಲನು ಅಲ್ಲಿ ಕುಳಿತುಕೊಳ್ಳಲಾರದೆ, ಹೊರಟುಹೋಗುವದಕ್ಕಾಗಿ ಎದ್ದುನಿಂತುಕೊಂಡನು. ಅಷ್ಟರಲ್ಲಿ ಆತನಿಗೆ ಪ್ರತಿಕೂಲವಾದ ಮತ್ತೊಂದು ಪ್ರಸಂಗವು ಒದಗಿತು. ರಾಮರಾಜನು ತನ್ನ ಬಳಿಯಲ್ಲಿಯೇ ನಿಂತುಕೊಂಡಿದ್ದ ರಣಮಸ್ತ ಖಾನನನ್ನು ನೋಡಿ ನಕ್ಕು, ಬಾದಶಹನ ಆ ಪತ್ರವನ್ನು ಆತನ ಕೈಯಲ್ಲಿ ಕೊಟ್ಟನು. ಅದನ್ನು ನೋಡಿದ ಕೂಡಲೆ ಆ ವಕೀಲನು ಸಿಟ್ಟಿನಿಂದ ಹುಬ್ಬು ಗಂಟಿಕ್ಕಿ, ಏನೋ ಒಟಗುಟ್ಟುತ್ತ ದರ್ಬಾರದ ರೀತಿಯಂತೆ ಕುರ್ನಿಸಾತ ಮೊದಲಾದದ್ದನ್ನೇನೂ ಮಾಡದೆ, ದರ್ಬಾರದಿಂದ ಹೊರಬಿದ್ದುಹೋಗಿ, ಮೇಣಿಯಲ್ಲಿ ಕುಳಿತುಕೊಂಡು ತನ್ನ ಬಿಡಾರಕ್ಕೆ ನಡೆದನು. ವಕೀಲನು ಹೊರಟುಹೋದ ಕೂಡಲೆ, ರಾಮರಾಜನು ಬೇಗನೆ ದರ್ಬಾರು ಮುಗಿಸಿ, ರಣಮಸ್ತಖಾನನಿಗೆ— "ಈ ಪತ್ರವನ್ನು ಮನಸ್ಪಟ್ಟಗೊಟ್ಟ ಓದಿ, ಇನ್ನು ಒಂದು ಪ್ರಹರದ ಮೇಲೆ ತನ್ನ ಬಳಿಗೆ ಬರಬೇಕೆ''ಂದು ಹೇಳಿ ಆತನನ್ನು ಕಳಿಸಿದನು. ಬಾದಶಹನ ಪತ್ರವನ್ನು ಓದಿದಾಗಿನಿಂದ ರಾಮರಾಜನ ವೃತ್ತಿಯು ಒಂದು ವಿಧವಾಯಿತು. ಆ ವೃತ್ತಿಯಲ್ಲಿ ಆನಂದವು ವಿಶೇಷವಾಗಿತ್ತು. ಈ ಪತ್ರದ ಉಪಯೋಗವು ಬಹಳ ಚೆನ್ನಾಗಿ ಆಗುವದೆಂದು ರಾಮರಾಜನು ತಿಳಕೊಂಡನು. ನಿನ್ನನ್ನು ಬೆನ್ನಿಗೆ ಹಾಕಿಕೊಂಡದ್ದರಿಂದ, ತಾನು ಎಂಥ ವಿಪತ್ತಿಗೆ ಗುರಿಯಾಗಬೇಕಾಯಿತೆಂಬದನ್ನು ಆತನು ರಣಮಸ್ತಖಾನನು ಮನಸ್ಸಿನಲ್ಲಿ ತುಂಬಬೇಕಾಗಿತ್ತು. ಅದೇ ಉದ್ದೇಶದಿಂದಲೇ ಆತನು ರಣಮಸ್ತಖಾನನ ಕೈಯಲ್ಲಿ ಬಾದಶಹನ ಪತ್ರವನ್ನು ಕೊಟ್ಟಿದ್ದನು. ರಣಮಸ್ತಖಾನನು ಕೇವಲ ಕೃತಜ್ಞತೆಯಿಂದ ಬಾದಶಹನ ವಿರುದ್ಧವಾಗಿ ತನಗೆ ಸಹಾಯಮಾಡಬೇಕೆಂಬದೇ ರಾಮರಾಜನ ಉದ್ದೇಶವಾಗಿತ್ತು.

ಇತ್ತ ರಣಮಸ್ತಖಾನನು ಆ ಪತ್ರವನ್ನು ಏಕಾಂತದಲ್ಲಿ ಸ್ವಸ್ಥವಾಗಿ ಕುಳಿತು ಲಕ್ಷಪೂರ್ವಕವಾಗಿ ಓದಿ, ತನ್ನೊಳಗೆ ನಕ್ಕನು. ವಿಚಾರಮಾಡಿ ನೋಡಿದರೆ,

ಅದರೊಳಗಿನ ಸಂಗತಿಯು ಆತನ ಎದೆಯೊಡಿಸುವ ಹಾಗೆ ಇದ್ದದ್ದರಿಂದ ಪತ್ರವನ್ನು ಆತನು ಭಯಗ್ರಸ್ತನಾಗಿ ಓದಬೇಕಾಗಿತ್ತು; ಆದರೆ ಭಯದ ಚಿಹ್ನವು ಲೇಶವಾದರೂ ಆತನ ಮುಖದಲ್ಲಿ ತೋರಲಿಲ್ಲ. ಇನ್ನು ರಾಮರಾಜನು ತನ್ನನ್ನು ಬಾದಶಹರ ಕಡೆಗೆ ಕಳಿಸದೆ, ತನ್ನ ಪಕ್ಷವಹಿಸಿ, ಬಾದಶಹನಿಗೆ ಏನಾದರೂ ಪತ್ರಬರೆಯುವರೆಂದು ಆತನು ನಿಶ್ಚಯವಾಗಿ ತಿಳಕೊಂಡಿದ್ದನು; ಆದರೂ ಅವನು ಆ ಪತ್ರವನ್ನು, ಪೆಟ್ಟಿನಮೇಲೆಪೆಟ್ಟು ಎರಡುಸಾರೆ ಓದಿ, ಅದರೊಳಗಿನ ಸಂಗತಿಯನ್ನೆಲ್ಲ ಅಕ್ಷರಶಃ ತನ್ನ ತಲೆಯಲ್ಲಿ ತುಂಬಿಕೊಂಡಂತೆ ಮಾಡಿದನು. ಆಮೇಲೆ ಸ್ವಸ್ಥಮನಸ್ಸಿನಿಂದ ಉಬ್ಬುಪಚಾರಗಳಾದ ಮೇಲೆ, ಆತನು ರಾಮರಾಜನ ಬಳಿಗೆ ಹೋದನು. ಆತನು ಬರುತ್ತಲೆ ರಾಮರಾಜನು ತನ್ನ ಬಳಿಯಲ್ಲಿದ್ದ ಜನರನ್ನೆಲ್ಲ ಹೊರಗೆ ಕಳಿಸಿ, ರಣಮಸ್ತಖಾನನಿಗೆ—ಯಾಕೆ? ಓದಿದಿರೋ ಪತ್ರವನ್ನು? ಅದಕ್ಕೆ ಉತ್ತರವೇನು ಬರಿಯಬೇಕು? ಎಂದು ಕೇಳಿದನು. ಅದಕ್ಕೆ ರಣಮಸ್ತಖಾನನು,

ರಣಮಸ್ತಖಾನ (ಅತ್ಯಂತಸಮ್ರಭಾವದಿಂದ)-ಸರಕಾರ, ತಾವು ಹೀಗೆಯೇ ಉತ್ತರಬರಿಯಿರೆಂದು ನಾನು ಹ್ಯಾಗೆ ಹೇಳಲಿ? ತಾವು ದೊಡ್ಡವರು, ವಿಚಾರವಂತರು, ಕರ್ತೃತ್ವಶಾಲಿಗಳು. ತಮ್ಮ ಮನಸ್ಸಿಗೆ ಬಂದಂತೆ ಉತ್ತರ ಬರೆಯಿರಿ. ತಾವು ಸಮರ್ಥರಿರುತ್ತೀರಿ. ನನ್ನ ಸಲುವಾಗಿ ನಿಮ್ಮ ಮೇಲೆಯೂ, ನಿಮ್ಮ ರಾಜ್ಯದ ಮೇಲೆಯೂ ಭಯಂಕರ ಪ್ರಸಂಗವನ್ನು ತಂದುಕೊಂಡು, ನನ್ನನ್ನು ಕಾಪಾಡಿರೆಂದು ನಾನು ತಮಗೆ ಹ್ಯಾಗೆ ಹೇಳಬೇಕು! ತಮ್ಮ ಸವಿಮಾತಿಗೆ ಮರುಳಾಗಿ ಹಿಂದು ಮುಂದಿನ ವಿಚಾರವಿಲ್ಲದೆ ನಾನು ತಮ್ಮ ಆಶ್ರಯಕ್ಕೆ ಬರಬೇಕಾದರೆ, ಮುಂದೆ ಆದದ್ದು ಆಗಲೆಂಬ ನಿಶ್ಚಯದಿಂದ ಬಂದಿದ್ದೇನೆ. ಅತ್ತ ವಿಜಾಪುರದ ದರ್ಬಾರದಲ್ಲಿದ್ದು, ಒಂದರ ಹಿಂದೊಂದು ಅಪಮಾನವನ್ನು ಸಹಿಸಲಿಕ್ಕೆ ನನ್ನ ಮನಸ್ಸು ಒಪ್ಪದಾಯಿತು. ನಾನು ಉತ್ತರಹಿಂದುಸ್ತಾನ, ಪಂಜಾಬ ಮೊದಲಾದವುಗಳ ಕಡೆಗೆ ಹೋಗಿ, ಯಾವ ಅರಸರ ಬಳಿಯಲ್ಲಾದರೂ ಇದ್ದು, ಹೊಟ್ಟೆಯ ತುಂಬಿಕೊಳ್ಳಬೇಕೆಂದು ಮಾಡಿದ್ದೆನು; ಹಾಗೆ ಮಾಡಿದ್ದರೆ, ಬಾದಶಹರಿಗೆ ನನ್ನ ನೆನಪು ಸಹ ಉಳಿಯುತ್ತಿದ್ದಿಲ್ಲ; ಆದರೆ ತಮ್ಮ ಸವಿಮಾತುಗಳು ನನ್ನನ್ನು ತಮ್ಮಕಡೆಗೆ ಎಳಕೊಂಡವು. ತಮ್ಮಕಡೆಗೆ ಬಂದದ್ದರಿಂದಲೇ ಬಾದಶಹರು ನನ್ನಮೇಲೆ ಇಷ್ಟು ಸಿಟ್ಟಾಗಿರುವರು. ಹಾಗೆ ಅವರು ಸಿಟ್ಟಾದದ್ದರಲ್ಲೇನೂ ಆಶ್ಚರ್ಯವಿಲ್ಲ. ಅವರ ಸ್ಥಿತಿಯಲ್ಲಿ ತಮಗಾದರೂ ಸಿಟ್ಟು ಬರುತ್ತಿತ್ತು. ಒಳ್ಳೇ ವಿಶ್ವಾಸದ ಸ್ಥಳದಮೇಲೆ ನಿಯಮಿಸಲಿಕ್ಕೆ ಯೋಗ್ಯನಾಗುವವರೆಗೆ ಬಾದಶಹರು ನನ್ನ ಯೋಗ್ಯತೆಯನ್ನು ಹೆಚ್ಚಿಸಿರಲು, ನಾನು ಒಮ್ಮೆಲೆ ಶತ್ರುಪಕ್ಷವನ್ನು

ವಹಿಸಿದ ಬಳಿಕ, ಅವರಿಗೆ ಸಿಟ್ಟುಬಾರದೆ ಏನು ಮಾಡೀತು? ಆದ್ದರಿಂದ ಮಹಾರಾಜ, ನೀವು ವಿಚಾರಮಾಡಿ-ಪೂರ್ಣವಿಚಾರಮಾಡಿ, ನನಗೆ ಆಶ್ರಯವನ್ನು ಕೊಡಬೇಕು; ಇಲ್ಲವೆ ಬಾದಶಹರಿಗೆ ಒಪ್ಪಿಸಬೇಕು. ನೀವು ಹ್ಯಾಗೆ ಮಾಡಿದರೂ ನನಗೆ ವ್ಯತ್ಯಾಸವಾಗುವಹಾಗಿಲ್ಲ. ನಾನು ಪೂರಾ ದಷ್ಟತನದಿಂದ ನಿಮ್ಮನ್ನು ಆಶ್ರಯಿಸಿ, ನಿಮ್ಮನ್ನು ಅವಲಂಬಿಸಿ ಕುಳಿತುಕೊಂಡಿರುತ್ತೇನೆ.

ರಾಮರಾಜ—" ನಾನು ಪೂರಾ ದಷ್ಟತನದಿಂದ ನಿಮ್ಮನ್ನು ಆಶ್ರಯಿಸಿದೆನೆ''ಂದು ಯಾಕೆ ಅನ್ನುತ್ತೀರಿ?

ರಣಮಸ್ತಖಾನ—ಹಾಗನ್ನದೆ ಮತ್ತೇನು ಮಾಡಲಿ? ಸರಕಾರ, ನನ್ನಿಂದ ಪೂರಾ ದಷ್ಟತನವಾಗಿದೆ. ನಾನು ಕೇವಲ ರಾಜದ್ರೋಹವನ್ನಷ್ಟೇ ಮಾಡಲಿಲ್ಲ, ನನ್ನಿಂದ ಮಾತೃದ್ರೋಹವೂ ಘಟಿಸಿರುತ್ತದೆ. ನನ್ನ ತಾಯಿಯು ಅತ್ಯಂತ ಧರ್ಮಿಷ್ಠಳು; ಅತ್ಯಂತ ದೃಢಸಂಕಲ್ಪಯುಳ್ಳವಳು. ಆಕೆಯು ನನ್ನ ಸಂರಕ್ಷಣಮಾಡುವಾಗ ಪಟ್ಟ ಶ್ರಮವನ್ನು ಮನಸ್ಸಿನಲ್ಲಿ ತಂದರೆ, ಆಕೆಯ ಕಾಲಿಗೆ ನನ್ನ ಮೈದೊಗಲ ಜೋಡುಮಾಡಿ ಹಾಕಿದರೂ ಆಕೆಯ ಉಪಕಾರವು ತೀರದು! ಹೀಗಿದ್ದು, ಆಕೆಯ ಮನಸ್ಸಿಗೆ ಬಾರದ ಕೆಲಸವನ್ನು ನಾನು ಮಾಡಿದೆನು. ನಿಮ್ಮ ಶಬ್ದಜಾಲದಲ್ಲಿ ಸಿಕ್ಕು, ಆ ಮಾತೃದ್ರೋಹತನವನ್ನು ಕೂಡ ನಿರಾಕರಿಸಿ, ನಿಮ್ಮ ಬಳಿಗೆ ಬಂದು ಬಿಟ್ಟಿನು. ಹೀಗೆ ನಾನು ಬಂದದ್ದನ್ನು ಕೇಳಿ ನನ್ನ ತಾಯಿಯು ಸಂತಾಪಗೊಂಡು ಪ್ರಾಣವನ್ನರ್ಪಿಸಿದಳೋ, ದೇಶತ್ಯಾಗಮಾಡಿದಳೋ ಯಾರಿಗೆ ಗೊತ್ತು? ಆಕೆಯು ಕುಂಜವನದಿಂದ ಹೊರಟುಹೋಗಿ, ಈಗ ಎಂಟುದಿನಗಳಾಗುತ್ತ ಬಂದವು. ತಾಯಿಯ ಈ ಸ್ಥಿತಿಯ ಸ್ಮರಣವಾದಕೂಡಲೆ ನನ್ನ ಕೈಖಡ್ಗದಿಂದ ನನ್ನ ಶಿರಚ್ಛೇದಮಾಡಿಕೊಳ್ಳಬೇಕೆನ್ನುವ ಹಾಗೆ ನನಗೆ ಆಗುತ್ತದೆ. ಈಗ ಅನಾಯಾಸವೇ ಬಾದಶಹರಿಂದ ದೇಹಾಂತ ಪ್ರಾಯಶ್ಚಿತ್ತವು ನನಗೆ ಒದಗುವದರಿಂದ, ನನ್ನನ್ನು ವಿಜಾಪುರಕ್ಕೆ ಕಳಿಸಿಬಿಡಿರಿ; ಅಂದರೆ ಎಲ್ಲ ಪಾಪಿಗಳಿಗಾಗಿ ನನಗೆ ಪ್ರಾಯಶ್ಚಿತ್ತವು ದೊರೆತಂತಾಗುವದು. ರಾಜದ್ರೋಹ-ಮಾತೃದ್ರೋಹಿಗಳಿಗಾಗಿ ದೇಹಾಂತ ಪ್ರಾಯಶ್ಚಿತ್ತದ ಹೊರತು, ಬೇರೆ ಪ್ರಾಯಶ್ಚಿತ್ತವು ಯೋಗ್ಯವಾಗಲಾರದು. ದೇಹಾಂತ ಪ್ರಾಯಶ್ಚಿತ್ತದಿಂದಲಾದರೂ ನನ್ನ ಪಾಪದ ಕ್ಷಾಲನವಾಗುವದೋ ಇಲ್ಲವೋ ಯಾರಿಗೆ ಗೊತ್ತು?

ರಾಮರಾಜ—ಎಲಲಾ! ನಿಮಗೆ ಬಹಳ ಪಶ್ಚಾತ್ತಾಪವಾದಂತೆ ತೋರುತ್ತದೆ. ಆದ್ದರಿಂದ ಈಗ ನಿಮ್ಮ ಸಂಗಡ ಮಾತಾಡುವದರಿಂದ ವಿಶೇಷ ಪ್ರಯೋಜನವಾಗಲಿಕ್ಕಿಲ್ಲ. ನಿಮ್ಮ ತಾಯಿಯು ಇಲ್ಲದ ಹಾಗಾದ್ದರಿಂದ, ನಿಮ್ಮ ಮನಸ್ಸು

ಬಹಳ ನೊಂದಿರುವದು. ಇದರಲ್ಲಿ ಆಶ್ಚರ್ಯವೇನೂ ಇಲ್ಲ- ಮಾತೃವಿಷಯವೇ ಅಂಥಾದ್ದು; ಆದರೆ ನಾವು ನಿಮ್ಮ ಸಲುವಾಗಿ ನಿಮ್ಮ ತಾಯಿಯನ್ನು ಹುಡುಕಿಸಲಿಕ್ಕೆ ಎಷ್ಟು ಮಾತ್ರವೂ ಉದಾಸೀನ ಮಾಡಿರುವುದಿಲ್ಲ. ನೀವು ಹೇಳಿದ ಮಾರ್ಗದಿಂದ ಶೋಧಮಾಡುತ್ತಲೇ ಇರುವೆವು. ಅಂದಮೇಲೆ ನೀವು ಹೀಗೆ ಉದಾಸೀನರಾಗುವದೇಕೆ? ಉದಾಸೀನ ಮಾಡಿದರೆ, ನಿಮ್ಮ ಮಾಸಾಹೇಬರ ಶೋಧವಾದಂತಾಗುವದೋ?

ರಣಮಸ್ತ—ಅವರ ಶೋಧವಾಗುವದರಿಂದಾದರೂ ನನಗೇನು ಪ್ರಯೋಜನವಾಗುವಹಾಗಿದೆ? ಅವರು ಇನ್ನು ನನ್ನ ಮುಖಾವಲೋಕನವನ್ನು ಸಹ ಮಾಡುವಹಾಗಿಲ್ಲ. "ನಾನು ನಿಮ್ಮನ್ನು ಕಾಣಲಿಕ್ಕೆ ಬರುತ್ತೇನೆ" ಎಂದು ಅವರಿಗೆ ನಾನು ಹೇಳಿಕಳಿಸಿದರೆ, ಅವರು ಎಷ್ಟು ಸಿಷ್ಟುರವಾದ ಉತ್ತರ ಕೊಟ್ಟಾರೆಂಬದನ್ನು ಹೇಳಲಿಕ್ಕಾಗದು. ಅವರು ಬಹು ಸಿಧ್ಧಾರದ ಸ್ವಭಾವದವರು. ಹೀಗೆ ಮಾಡಬೇಕು, ಇಲ್ಲವೆ ಹೀಗೆ ಮಾಡಬಾರದು, ಎಂದು ಒಮ್ಮೆ ಸಿಧ್ಧಾರವಾದರೆ ತೀರಿತು. ಮುಂದೆ ಎಂಥ ಪ್ರಸಂಗಗಳು ಒದಗಿದರೂ ಅವರ ನಿಶ್ಚಯದಲ್ಲಿ ಅಂತರವಾಗಲಿಕ್ಕಿಲ್ಲ. ಅವರು ಸುರಕ್ಷಿತವಾಗಿರುವರೆಂಬ ಸುದ್ದಿಯಷ್ಟು ಈಗ ನನಗೆ ತಿಳಿದರೆ ಸಾಕು. ಅವರು ಆತ್ಮಹತ್ಯಮಾಡಿಕೊಂಡಿದ್ದರೂ, ಒಂದು ವಿಧದಿಂದ ನೆಟ್ಟಗಾಯಿತೆಂತಲೇ ನಾನು ತಿಳಿಯುವೆನು! ಯಾಕಂದರೆ, ನನ್ನ ಕೈಯಿಂದ ಇನ್ನು ಏನಾದರೂ ಅನಸ್ವಿತ ಕೃತ್ಯಗಳು ಘಟಿಸಬೇಕಾಗಿದ್ದರೆ, ಅವನ್ನು ನೋಡುವ ಪ್ರಸಂಗವಾದರೂ ಅವರಿಗೆ ತಪ್ಪೀತು.

ಲಾಮರಾಜ (ಚಿಮತ್ಕಾರದ ಧ್ವನಿಯಿಂದ)—ಅವರು ಇಷ್ಟು ದೃಢನಿಶ್ಚಯದ ಸ್ವಭಾವದವರಿರುತ್ತಾರಲ್ಲವೆ? ಅವರು ತಿರುಗಿ ಮುಖಾವಲೋಕನವನ್ನು ಸಹ ಮಾಡಲಿಕ್ಕಿಲ್ಲೆನ್ನುತ್ತೀರಾ?

ರಣಮಸ್ತ—ಇಲ್ಲ, ಅವರು ತಿರುಗಿ ನನ್ನ ಮುಖಾವಲೋಕನವನ್ನು ಸಹ ಮಾಡಲಿಕ್ಕಿಲ್ಲ. ನಾನು ತಮ್ಮ ಪಾಲಿಗೆ ಸತ್ತಿರುವೆನೆಂತಲೇ ಅವರು ತಿಳಕೊಂಡಿರುವರು. ತಮಗೆ ಅವರ ಸ್ವಭಾವದ ಪರಿಚಯವಿಲ್ಲ. ಅವರು ಬಹು ಕ್ರಿಯಾವಂತರು; ಬಹು ಸಿಸ್ಪೃಹಿಗಳು; ಅವರ ಸ್ವಭಾವವು ಪ್ರೇಮಲಸಿದ್ದಷ್ಟೇ ಕಠೋರವೂ ಆಗಿರುವದು. ಪ್ರೇಮುಮಾಡುವ ಪ್ರಸಂಗದಲ್ಲಿ ಅವರು ಅತ್ಯಂತ ಪ್ರೇಮ ಮಾಡುವರು; ಪ್ರೇಮದ ಭರದಲ್ಲಿ ಅವರು ತಮ್ಮ ಜೀವದ ಹಂಗು ಸಹ ತೊರೆಯುವರು; ಆದರೆ ಯಾವದೊಂದು ಕಾರಣದಿಂದ ಅವರು ಒಬ್ಬರನ್ನು ದ್ವೇಷಿಸಹತ್ತಿದರೆಂದರೆ, ತಿರುಗಿ ಅವರ ಮುಖಾವಲೋಕನವನ್ನು ಸಹ ಮಾಡಲಿಕ್ಕಿಲ್ಲ. ನನ್ನ ಮನಸ್ಸಿನೊಳಗಿನ ವಿಚಾರಗಳು ಅನ್ಯರಿಗೆ ಗೊತ್ತಾಗವು. ಮಹಾ

ರಾಜ, ನನ್ನ ತಾಯಿಯೆಂದರೆ ನನ್ನ ಸರ್ವಸ್ವವು; ನನ್ನ ತಾಯಿಯು ನನ್ನ ಪಂಚಪ್ರಾಣವು. ನನ್ನ ತಾಯಿಯು ನನ್ನನ್ನು ಸಂರಕ್ಷಿಸುವಾಗ ಮಣ್ಣಿಗೆ ಮಣ್ಣು ಕೂಡಿದಳು. ಅಂಥವಳ ದ್ರೋಹವನ್ನು ಬಗೆದು ನಾನು ನಿಮ್ಮನ್ನು ಕೂಡಿಕೊಂಡೆನು.

ಮುಂದೆ ಆತನಿಂದ ಮಾತಾಡುವದಾಗಲೊಲ್ಲದು. ಆತನು ಸುಮ್ಮನೆ ಕುಳಿತುಕೊಂಡನು. ಆಮೇಲೆ ಮತ್ತೆ ಅವನು ರಾಮರಾಜನನ್ನು ಕುರಿತು—ಸರಕಾರ, ಇನ್ನು ಹೇಳುವದೇನು! ನೀವು ವಿಚಾರಮಾಡಿರಿ. ನನ್ನನ್ನು ವಿಜಾಪುರಕ್ಕೆ ಕಳಿಸುವದಾದರೆ ಕಳಿಸಿಬಿಡಿರಿ. ನೀವು ನನಗೆ ಆಶ್ರಯ ಕೊಟ್ಟ ಇಡಿಯ ರಾಜ್ಯದಮೇಲೆ ಸಂಕಟವನ್ನಾದರೂ ಯಾಕೆ ತಂದುಕೊಳ್ಳುತ್ತೀರಿ! ಸರ್ವಥಾ ತಂದುಕೊಳ್ಳಬೇಡಿರಿ. ನನ್ನಿಂದ ನಿಮಗೆ ಅಷ್ಟು ಪ್ರಯೋಜನವಾಗದು. ಯಾರಿಗೆ ಗೊತ್ತು, ಮುಂದೆ ಎಲ್ಲಿ ಯಾರೂ ನನ್ನ ಪ್ರಾಮಾಣಿಕತನದ ಬಗ್ಗೆ ನಿಮಗೆ ಸಂಶಯ ಉತ್ಪನ್ನವಾದರೆ, ಕೆಲಸವೇ ಮುಗಿದುಹೋದೀತು? ಆಮೇಲೆ ನಾನು ಇತ್ತಕಡೆಯಿಂದಲೂ ಅತಂತ್ರನು, ಅತ್ತಕಡೆಯಿಂದಲೂ ಅತಂತ್ರನು ಆಗುವೆನು. ಈಪ್ರೊತ್ತೇ ನಿಮ್ಮ ಮನಸ್ಸಿಗೆ ಬಂದಂತೆ ಮಾಡಿಬಿಡಿರಿ. ನನಗೆ ದೇಹಾಂತಪ್ರಾಯಶ್ಚಿತ್ತವಾಗಿಬಿಟ್ಟರೆ, ಮುಂದೆ ನನ್ನ ವಿಷಯವಾಗಿ ಶಂಕಿಸಿಸಲಿಕ್ಕೆ ಯಾರಿಗೂ ಆಸ್ಪದವಾದರೂ ಉಳಿಯಲಿಕ್ಕಿಲ್ಲ....., ಎಂದು ನುಡಿಯುತ್ತಿರಲು, ರಾಮರಾಜನು ನಡುವೇ ಬಾಯಿ ಹಾಕಿ—ಕ್ಷತ್ರಿಯರು ಒಮ್ಮೆ ಬೆನ್ನಿಗೆಹಾಕಿಕೊಂಡರೆಂದರೆ, ಬೆನ್ನು ಬಿದ್ದವನು ವೈರಿಯಾಗಿದ್ದರೂ ಆತನ ಉಪೇಕ್ಷೆಯಾಗಲಾರದು. ಆತನು ಮೃತ್ಯುಸಿನ ಮುಖಕ್ಕೆ ಎಂದೂ ಬೀಳನು; ಅಂದಬಳಿಕ ನೀವಂತು ನಾನು ಕರೆದದ್ದರಿಂದಲೇ ಅಲ್ಲ, ಅಗ್ರಹದಿಂದ ಕರೆದದ್ದರಿಂದ ನನ್ನ ಕಡೆಗೆ ಬಂದವರು. ಇಂಥವರನ್ನು ಇನ್ನು ನಾನು ಶತ್ರುವಿಗೆ ಒಪ್ಪಿಸಬಹುದೋ? ಇಂಥ ಸಂಶಯವಾದರೂ ನಿಮ್ಮ ಮನಸ್ಸಿನಲ್ಲಿ ಹ್ಯಾಗೆ ಉತ್ಪನ್ನವಾಯಿತು? ಛೇ, ಛೇ, ಇಂಥ ಅಂಜಬುರುಕತನವು ನನ್ನಿಂದ ಎಂದೂ ಆಗಲಿಕ್ಕಿಲ್ಲ. ನಿಮ್ಮ ಮೇಲೆ ನನ್ನ ಸಂಪೂರ್ಣ ಪ್ರೇಮವಿರುತ್ತದೆ. ನೀವು ನನಗೆ ಹೊಟ್ಟೆಯ ಮಗನಂತೆ ಕಾಣುವದರಿಂದ, ನಾನು ಇಷ್ಟು ಅಗ್ರಹಮಾಡಿ ನಿಮ್ಮನ್ನು ನನ್ನ ಕಡೆಗೆ ಮಾಡಿಕೊಂಡು ನಾಕರಿಗೆ ಇಟ್ಟುಕೊಂಡಿರುತ್ತೇನೆ. ಯಾವಾಗಲೂ ನೀವು ನನ್ನ ಬಳಿಯಲ್ಲಿಯೇ ಇರಬೇಕೆಂದು ನಿಮ್ಮನ್ನು ಅಂಗರಕ್ಷಕರನ್ನಾಗಿ ನಿಯಮಿಸಿಕೊಂಡಿರುವೆನು. ಇನ್ನು ನಾನು ನಿಮಗೆ ಹೆಚ್ಚಿಗೆಯೇನುಹೇಳಲಿ? ಇಂಥ ನಿಮ್ಮನ್ನು ನಾನು ಬಾದಶಹನಿಗೆ ಒಪ್ಪಿಸುವೆನೇ? ಇದೆಂಥ ನಿಮ್ಮತಿಳಿವಳಿಕೆಯು? ತಿರುಗಿ ನನ್ನ ಮುಂದೆ ಇಂಥ ಮಾತು ಆಡಬೇಡಿರಿ, ಎಂದೂ ಮಾತಾಡ

ಬೇಡಿರಿ. ನನ್ನ ರಾಜ್ಯದಮೇಲೆ, ಅಥವಾ ನನ್ನಮೇಲೆ ಬೇಕಾದ ಪ್ರಸಂಗ ಬರಲಿ, ಅದನ್ನು ನೋಡಿಕೊಳ್ಳಲಿಕ್ಕೆ ನಾನು ಸಮರ್ಥನಿದ್ದೇನೆ. ಈ ಮುಸಲ್ಮಾನರ ರಾಜ್ಯಗಳು ನಮ್ಮ್ಯ ಸುತ್ತುಮುತ್ತು ಮುತ್ತಿಕ್ಕೊಂಡಿರುವಾಗ, ಹಿಂದು ರಾಜ್ಯವನ್ನು ನಾವು ಈ ಮುಸಲ್ಮಾನ ಬಾದಶಹರ ಗದ್ದರಿಕೆಗೆ ಬೆದರಿ ಸಂರಕ್ಷಿಸಿಕೊಂಡಿರುವೆವೋ? ಛೇ ಛೇ! ಇಂಥ ವಿಚಾರವನ್ನು ಸಹ ಮನಸ್ಸಿನಲ್ಲಿ ತಂದುಕೊಳ್ಳಬೇಡಿರಿ. ಇನ್ನು ಮೇಲೆ ನೀವು ಹಿಂದೂ ರಾಜರ ನೌಕರರಾಗಿರುತ್ತೀರಿ, ಹಿಂದುಗಳೇ ಆಗಿರುತ್ತೀರಿ. ನಾವು ಇನ್ನು ನಿಮ್ಮ್ಯ ವಿಷಯವಾಗಿ ಅಭಿಮಾನಪಡುವಂತೆ, ನೀವಾದರೂ ನಮ್ಮ್ಯ ವಿಷಯವಾಗಿ ಅಭಿಮಾನಪಡಿರಿ; ಮತ್ತು ನಿಮ್ಮ್ಯ ವಶಕ್ಕೆ ನಾನು ಈಗ ಕೊಡಬೇಕಾಗಿರುವ ಪಠಾಣಸೈನ್ಯವನ್ನು ಇನ್ನಿಷ್ಟು ಹೆಚ್ಚಿಸಿರಿ. ಬೇರೆ ಸೈನ್ಯಗಳನ್ನು ವ್ಯವಸ್ಥೆಗೊಳಿಸಿರಿ. ಇನ್ನು ಹಿಂದೂರಾಜ್ಯವನ್ನು ರಕ್ಷಿಸುವ ವಿಚಾರಗಳು ನಿಮ್ಮ್ಯ ಮನಸ್ಸಿನಲ್ಲಿ ಸ್ಥಿರವಾಗಲಿ. ಬಾದಶಹರು ನಿಮ್ಮ್ಯನ್ನು ಅವಮಾನಗೊಳಿಸಿದಂತೆ ಇಲ್ಲಿ ಯಾರೂ ನಿಮ್ಮ್ಯನ್ನು ಅವಮಾನಗೊಳಿಸಲಾರರು " ಎಂದು ಹೇಳಿದನು. ಇದನ್ನೆಲ್ಲ ರಣಮಸ್ತಖಾನನು ಸುಮ್ಮನೆ ಕೇಳಿಕೊಂಡು, ಕೃತಜ್ಞತಾಪೂರ್ವಕವಾಗಿ ಸಮಾಧಾನನನ್ನು ಪ್ರಕಟಿಸಿ, ರಾಮರಾಜನ ಅಪ್ಪಣೆಯನ್ನು ಪಡೆದು ಹೊರಟು ಹೋದನು.



೨ಳನೆಯ ಪ್ರಕರಣ:—ನಿಗ್ಗರದ ಉತ್ತರ.

ಗುರುತ್ವಾಕರ್ಷಣದ ವಿರುದ್ಧವಾಗಿ ಮೇಲಕ್ಕೇರಿದ ಕಲ್ಲು ಕೆಳಕ್ಕೆ ಬೀಳತಕ್ಕದ್ದೇ. ಅದಶಂತೆ ಬಹುಜನರ ವಿರುದ್ಧವಾಗಿ ಏರಿದ ಮನುಷ್ಯನು ಎಂದಾದರೊಂದು ದಿನ ಕೆಳಿಗಿಳಿಯತಕ್ಕ ಸಂಭವವು ವಿಶೇಷವಾಗಿರುವದು. ಈ ಮಾತು ರಣಮಸ್ತಖಾನನ ಸಂಬಂಧದಿಂದ ವಿಜಾಪುರದ ದರ್ಬಾರದಲ್ಲಿ ನಿಜವಾಯಿತು. ಒಬ್ಬ ಸರ್ವಸಾಧಾರಣ ಸೈನಿಕನಿಂದ ಪ್ರತ್ಯಕ್ಷ ಬಾದಶಹನವರಿಗೆ ಎಲ್ಲರೂ ರಣಮಸ್ತಖಾನನ ಮೇಲೆ ಹಲ್ಲು ಕಡಿಯಹತ್ತಿದರು. ಈಗ ಎಷ್ಟೋ ದಿವಸಗಳಿಂದ ನಮ್ಮ್ಯ ಬಾದಶಹನು ವಿಜಯನಗರದ ರಾಜ್ಯವನ್ನು ಮಣ್ಣುಗೂಡಿಸುವವಕ್ಕಾಗಿ, ಅಹಮ್ಮದನಗರ ಗೋವಳಕೊಂಡಗಳ ಬಾದಶಹರಸಂಗಡ ನಡಿಸಿದ ಒಳಸಂಚು ಒತ್ತಟ್ಟಿಗುಳಿದು, ತಿರುಗಿ ರಾಮರಾಜನೇ ವಿಜಾಪುರದಮೇಲೆ ಸಾಗಿಬರುವ ಪ್ರಸಂಗವು ಒದಗಿತೆಂದು ಎಲ್ಲರು ಸಂತಾಪಗೊಂಡರು. ರಣಮಸ್ತಖಾನನಿಗೆ ನಮ್ಮ್ಯ ರಾಜ್ಯದೊಳಗಿನ ಎಲ್ಲ ಹುಳುಕುಗಳೂ,

ನಮ್ಮ ಬಾದಶಹರು ಬೇರೆ ಬಾದಶಹರೊಡನೆ ನಡಿಸಿರುವ ಎಲ್ಲ ಒಳಸಂಚು ಗಳೂ ಗೊತ್ತಿರುವದರಿಂದ, ರಾಮರಾಜನಿಗೆ ದೊಡ್ಡ ಸಹಾಯವಾಯಿತೆಂದು ಅವರು ಮಾತಾಡಿಕೊಳ್ಳಹತ್ತಿದರು; ಆದರೂ ಈ ಸಂಧಿಯಲ್ಲಿ ತಾವು ವಿಜ ಯನಗರದಮೇಲೆ ದಂಡೆತ್ತಿ ಹೋಗಿ ರಾಮರಾಜನ ಮಗ್ಗಲು ಮುರಿಯಬೇ ಕೆಂದು ವಿಜಾಪುರದ ದಂಡಾಳುಗಳು ಆಡಹತ್ತಿದರು. ಹೀಗಿರುವಾಗ ಕುಂಜ ವನದಲ್ಲಿದ್ದ ರಣಮಸ್ತಖಾನನ ತಾಯಿಯು ಒಮ್ಮಿಂದೊಮ್ಮೆ ಇಲ್ಲದ ಹಾಗಾ ದಳೆಂಬ ಸುದ್ದಿಯು ವಿಜಾಪುರಕ್ಕೆ ಹೋಯಿತು. ಅದನ್ನು ಕೇಳಿ ಜನರ ತರ್ಕ ವಿತರ್ಕಗಳಿಗೆ ಆರಂಭವಾಯಿತು. ರಾಮರಾಜನೇ ತನ್ನ ಬಂಗಾರದವರಲ್ಲಿ ಯೊಬ್ಬಳನ್ನೂ, ಆಕೆಯ ಮಗನನ್ನೂ ಯುಕ್ತಿಯಿಂದ ವಿಜಾಪುರದ ರಾಜ್ಯ ದಲ್ಲಿ ಸೇರಿಸಿ, ಅಲ್ಲಿಯ ಗುಪ್ತಸಂಗತಿಯನ್ನು ತಿಳಕೊಳ್ಳಲಿಕ್ಕೆ ಇಷ್ಟೆಲ್ಲ ತಂತ್ರ ವನ್ನು ರಚಿಸಿರಬಹುದೆಂದು ಜನರು ತರ್ಕಿಸಹತ್ತಿದರು. ಇಂಥ ಹಲವು ತರ್ಕ ವಿತರ್ಕಗಳೂ, ಸಂಭವಾಸಂಭವದ ಸುದ್ದಿಗಳೂ ಊರತುಂಬ ಹಬ್ಬಿ, ಬಾದ ಶಹನ ಕಿವಿಯವರೆಗೆ ಮುಟ್ಟಿದವು. ಈ ಪ್ರಸಂಗದಲ್ಲಿ ಕೈಗಾದರೆ ನಮ್ಮ ದಿ ಷ್ಟೇ ಅಲ್ಲ, ಎಲ್ಲ ಮುಸಲ್ಮಾನ ಬಾದಶಹರ ಗೌರವನೇ ನಷ್ಟವಾಗಿ, ಬಾದಶಾ ಹಿಗಳು ಮುಣುಗುವ ಪ್ರಸಂಗ ಒದಗಬಹುದೆಂದು ಬಹುಜನರು ಬಾದಶಹನ ಮುಂದೆ ಸ್ಪಷ್ಟವಾಗಿ ಪ್ರತಿಪಾದಿಸಹತ್ತಿದರು. ಬಾದಶಹನಾದರೂ ತನ್ನ ಜನ ರ ಯುದ್ಧೋತ್ಸಾಹವನ್ನು ನೋಡಿ, ಮನಸ್ಸಿನಲ್ಲಿ ಸಂತೋಷಪಟ್ಟನು. ಆತ ನು ವಿಜಯನಗರದ ರಾಜ್ಯವನ್ನು ಮುಣುಗಿಸುವದಕ್ಕಾಗಿ ಬಹು ದಿವಸಗ ಳಿಂದ ಕಪಟೋಪಾಯಗಳನ್ನು ಯೋಚಿಸುತ್ತಿದ್ದು, ಆ ಉಪಾಯಗಳೆಲ್ಲ ಸಿದ್ಧಿ ಸುತ್ತ ಬಂದದ್ದರಿಂದ, ಈಗ ಆತನೊಬ್ಬನೇ ವಿಜಯನಗರದ ರಾಜ್ಯವನ್ನು ನಾಶಮಾಡಬಹುದಾಗಿತ್ತು; ಆದರೂ ಆ ಧೂರ್ತನಾದ ಬಾದಶಹನು ವಿಜ ಯನಗರದ ಪ್ರಚಂಡ ಸೈನ್ಯದ ಕಡೆಗೆ ನೋಡಿ, ಅಪ್ಪಿತಪ್ಪಿ ತನಗೆ ಅಪಜ ಯವಾದರೆ ತನ್ನ ಪರಿಣಾಮವು ನೆಟ್ಟಗಾಗಲಿಕ್ಕಿಲ್ಲವೆಂದು ತಿಳಿದು, ಉಳಿದ ಇಬ್ಬರು ಬಾದಶಹರನ್ನು ತನ್ನ ಕಡಿಗೆ ಮಾಡಿಕೊಳ್ಳುವ ಎತ್ತುಗಡೆಯನ್ನು ಮಾಡತೊಡಗಿದ್ದನು. ಸುದೈವದಿಂದ ಆತನ ಯತ್ನವು ಸಫಲವಾಗುವ ಯೋ ಗವು ಸಮಿಾಪಿಸತೊಡಗಿತ್ತು. ಆತನು ಗೋವಳಕೊಂಡ, ಅಹಮ್ಮದನಗರ ಗಳ ಬಾದಶಹರಿಗೆ ತನ್ನ ವಕೀಲರ ಮುಖಾಂತರವಾಗಿ—"ಈ ಪ್ರಸಂಗದಲ್ಲಿ ನೀವು ನನ್ನ ಮಾತನ್ನು ದುರ್ಲಕ್ಷಿಸಬಾರದೆಂದು ನಿಮಗೆ ನಾನು ಹೇಳಿಕೊ ಳ್ಳುವೆನು. ನಮ್ಮಲ್ಲಿ ಒಕ್ಕಟ್ಟು ಇಲ್ಲದ್ದರಿಂದಲೇ ವಿಜಯನಗರದ ಅರಸರು ನಮ್ಮ ಎದೆಯಮೇಲೆ ಕುಳಿತಂತಾಗಿರುತ್ತದೆ. ನಾವು ಒಕ್ಕಟ್ಟಿನಿಂದ ನಡೆದಿ

ದ್ದರೆ ಕಾಫರರ ಆ ರಾಜ್ಯವು ಇಷ್ಟುಹೊತ್ತಿಗೆ ನಾಮಶೇಷವಾಗುತ್ತಿತ್ತು. ರಾಮರಾಜನಿಂದ ಈವೊತ್ತಿನವರೆಗೆ ನಮಗಾದ ಅಪಮಾನವನ್ನೂ, ನಮ್ಮ ಪ್ರಜೆಗಳಿಗಾದ ಪೀಡೆಯನ್ನೂ ನೆನಪಿಗೆ ತಂದುಕೊಳ್ಳೋಣ. ಅದೆಲ್ಲದರ ಸೇಡು ತೀರಿಸಿಕೊಂಡು ಇಸ್ಲಾಮಿತಖ್ತಿಗಳ ಗೌರವವ ಕಾಯ್ದುಕೊಳ್ಳುವ ಇಚ್ಛೆಯು ನಮ್ಮಲ್ಲಿದ್ದರೆ, ನಮ್ಮ ಒಡಕುಗಳನ್ನೆಲ್ಲ ಮರೆತು, ಈಗ ನಾವು ಒಕ್ಕಟ್ಟಿನಿಂದ ನಡೆಯಲಿಕ್ಕೆಬೇಕು. ನಾವು ಮೂವರು ಒಕ್ಕಟ್ಟಾದರೆ, ಸಂಪತ್ತಿನಿಂದ ತುಂಬಿ ತುಳುಕುವ ವಿಜಯನಗರವನ್ನು ಸುಲಿಯುವುದೂ, ವಿಸ್ತಾರವಾಗಿ ಬೆಳೆದ ಆ ವಿಜಯನಗರದ ರಾಜ್ಯವನ್ನು ನಮ್ಮೊಳಗೆ ಬೇಕಾದಹಾಗೆ ಹಂಚಿಕೊಳ್ಳುವದೂ ಅಸಾಧ್ಯವಲ್ಲ. ಈ ಸಂಬಂಧದಿಂದ ನಾವು ಮೂವರೂ ಒತ್ತಟ್ಟಿಗೆ ಪ್ರತ್ಯಕ್ಷಕೂಡಿ ಆಲೋಚಿಸುವದು ನೆಟ್ಟಗೆ. ಆ ಯೋಗವನ್ನು ತಂದುಕೊಳ್ಳಲಿಕ್ಕೆ ನಾನು ಸಿದ್ಧನಿದ್ದೇನೆ. ನೀವು ಬರಹೇಳಿದರೆ ನಿಮ್ಮಲ್ಲಿಗೆ ನಾನು ಬರುವೆನು. ನೀವು ನಮ್ಮಲ್ಲಿಗೆ ಬಂದರೂ ಸರಿಯೇ. ಬೇರೆ ಯಾರ ರಾಜ್ಯದಲ್ಲಾದರೂ ನಾವು ಮೂವರು ಒತ್ತಟ್ಟಿಗೆ ಕೂಡೋಣವೆಂದರೆ, ಅದಕ್ಕೂ ನಾನು ಒಪ್ಪಿಕೊಳ್ಳುವೆನು. ಆದರೆ ಒಮ್ಮೆ ನಾವೆಲ್ಲರು ಒತ್ತಟ್ಟಿಗೆ ಕೂಡಬೇಕು.'' ಎಂದು ಹೇಳಿಕಳುಹಿಸಿದನು. ಬಾದಶಹನ ಅಂತಃಕರಣಪೂರ್ವಕವಾದ ಈ ವಿನಯೋಕ್ತಿಗಳನ್ನು ಕೇಳಿ ಅಹಮ್ಮದನಗರ-ಗೋವಳಕೊಂಡಗಳ ಬಾದಶಹರು ಒಕ್ಕಟ್ಟು ಬೆಳಸಲಿಕ್ಕೆ ಸಿದ್ಧರಾದರು.

ಹೀಗೆ ಎಲ್ಲ ಕಡೆಯಿಂದಲೂ ಅನುಕೂಲತೆಯು ತೋರಿತು. ವಿಜಾಪುರದವರಂತು ಯುದ್ಧಕ್ಕೆ ಒಂದೇ ಸವನೆ ಆತುರಪಡುತ್ತಿದ್ದರು. ಅವರು ರಾಮರಾಜನು ಬಾದಶಹನ ಪತ್ರಕ್ಕೆ ಎದುರುತ್ತರವನ್ನು ಕೊಟ್ಟು, ಬಾದಶಹನನ್ನು ಸಿಟ್ಟಿಗೆಬ್ಬಿಸಬೇಕೆಂದು ಇಚ್ಛಿಸುತ್ತಿದ್ದರು. ಹೀಗಿರುವಾಗ, ರಾಮರಾಜನು ರಣಮಸ್ತಖಾನನನ್ನು ನಿನಗೆ ಒಪ್ಪಿಸಲಿಕ್ಕೆ ಬರುವದಿಲ್ಲೆಂದು ಸ್ಪಷ್ಟವಾಗಿ ಉತ್ತರವನ್ನು ಬರೆದನು. ಅದನ್ನು ನೋಡಿ ವಿಜಾಪುರದ ದಂಡಾಳುಗಳು ಹಿಗ್ಗಿದರು. ಬಾದಶಹನೂ ಸಂತಾಪಗೊಂಡನು. ಆತನು ಪುನಃ ಅಹಮ್ಮದನಗರ-ಗೋವಳಕೊಂಡಳ ಬಾದಶಹರ ಕಡೆಗೆ ವಕೀಲರನ್ನು ಕಳಿಸಿ, ಇನ್ನು ಯುದ್ಧಪ್ರಸಂಗ ಒದಗುವದು ನಿಶ್ಚಯವಾದ್ದರಿಂದ, ನಾವೆಲ್ಲರು ದೂರದೃಷ್ಟಿಯಿಂದ ನಡಕೊಳ್ಳುವದು ಅವಶ್ಯವೆಂದು ಹೇಳಿ ಕಳುಹಿಸಿದನು. ಅದಕ್ಕೆ ಅವರಿಬ್ಬರು ಬಾದಶಹರೂ ಒಪ್ಪಿಕೊಳ್ಳುವ ಸಂಭವ ತೋರಿದ್ದರಿಂದ, ವಿಜಾಪುರದ ಬಾದಶಹನು ರಾಮರಾಜನಿಗೆ ಕಟ್ಟಕಡೆಯ ಪತ್ರವನ್ನು ಬರೆದನು. ಅದರಲ್ಲಿ ಆತನು—"ನಮ್ಮ ಪ್ರಜೆಗಳೊಳಗಿನವನಲ್ಲ, ನಮ್ಮ ನೌಕರರಲ್ಲಿಯೊಬ್ಬನು

ನಮಗೆ ದ್ರೋಹವನ್ನು ಬಗೆದು ನಿಮ್ಮ ಕಡೆಗೆ ಬಂದಿರುತ್ತಾನೆ. ಇಂಥ ಮನುಷ್ಯನಿಗೆ ನೀವು ಆಶ್ರಯಕೊಡುವದೆಂದರೆ, ಬುದ್ಧಿಪೂರ್ವಕವಾಗಿ ನಮ್ಮೊಡನೆಯಿದ್ದ ನಿಮ್ಮ ಸ್ನೇಹಸಂಬಂಧವನ್ನು ಮುರಿಯೋಣವೆಂದು ನಾವು ತಿಳಕೊಳ್ಳುತ್ತೇವೆ. ಇಂಥ ವಿಚಾರಕ್ಕೆ ನೀವು ಹೋಗುವವರಲ್ಲೆಂಬದನ್ನು ನಾವುಬಲ್ಲೆವು; ಆದರೂ ನಿಮ್ಮ ಕೃತಿಯಿಂದ ಹಾಗೆ ಭಾಸವಾಗುತ್ತದೆ. ಹಿಂದಕ್ಕೆ ಇದೇ ರಣಮಸ್ತನೇ ನಿಮ್ಮ ದರ್ಬಾರದಲ್ಲಿ ನಿಮ್ಮ ಅಪಮಾನಮಾಡಿದನೆಂದು ನೀವೇ ಬರೆದಿದ್ದಿರಿ, ನಮ್ಮ ಗೌರವವನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ರಣಮಸ್ತಖಾನನ ಕೃತಿಯು ಯೋಗ್ಯವಿದ್ದರೂ, ನಿಮ್ಮ ಸ್ನೇಹಸಂಬಂಧವನ್ನು ಕಾಯ್ದುಕೊಳ್ಳುವದಕ್ಕಾಗಿ ನಾವು ಆಗ ನಮ್ಮ ದರ್ಬಾರದಲ್ಲಿ ರಣಮಸ್ತಖಾನನ ಅಪಮಾನಮಾಡಿ, ಆತನ ಅಧಿಕಾರವನ್ನು ಕಸಿದುಕೊಂಡೆವು. ಈ ಸಂಗತಿಯು ನೀವು ಅರಿಯದ್ದಲ್ಲ. ಹೀಗಿದ್ದು, ನಿಮ್ಮ ಸಲುವಾಗಿ ನಮ್ಮಿಂದಾದ ಅಪಮಾನದಿಂದ ರಣವಸ್ತನು ನಮ್ಮ ಮೇಲೆ ತಿರುಗಿಬಿದ್ದು ನಿಮ್ಮ ಕಡೆಗೆ ಬರಲು, ನೀವು ಆತನಿಗೆ ಆಶ್ರಯಕೊಡುವದು ವಿಚಿತ್ರವಲ್ಲವೆ? ನಾವು ಪ್ರತ್ಯಕ್ಷ ಪತ್ರ ಬರೆದು ರಣಮಸ್ತನನ್ನು ಶೀಕ್ಷಿಸುವದು ಅವಶ್ಯವಿರುತ್ತದಾದ್ದರಿಂದ ಆತನನ್ನು ನಮಗೆ ಒಪ್ಪಿಸಿರೆಂದು ಕೇಳಿಕೊಳ್ಳಲು, ನೀವು ಹಾಗೆ ಮಾಡದೆ ರಣಮಸ್ತನಿಗೆ ಆಶ್ರಯಕೊಟ್ಟಿರಿ; ಇದರ ಇಂಗಿತವೇನಿರಬಹುದೆಂಬದನ್ನು ನೀವೇ ವಿಚಾರ ಮಾಡತಕ್ಕದ್ದು! ನಿಮ್ಮ ಉದ್ದೇಶವೇನೇ ಇರಲಿ, ನಮ್ಮ ನಿಮ್ಮ ಸ್ನೇಹಸಂಬಂಧಕ್ಕೆ ಲಕ್ಷಗೊಟ್ಟು ನಮ್ಮ ಇಸಮನ್ನು ನಮಗೆ ಒಪ್ಪಿಸತಕ್ಕದ್ದು. ನೀವು ಹೀಗೆ ಮಾಡದಿದ್ದರೆ, ನಮ್ಮ ನಿಮ್ಮೊಳಗಾದ ಕರಾರುಗಳು ನಿಮ್ಮ ಕೃತಿಯಿಂದ ಮುರಿದಹಾಗಾದವೆಂದು ತಿಳಿದು, ನಾವೇ ವಿಜಯನಗರದತನಕ ಬಂದು, ನಮ್ಮ ಇಸಮನ್ನು ಹಿಡಕೊಂಡು ಹೋಗಬೇಕಾಗುವದು. ಆತನನ್ನು ನಿಮ್ಮ ಆಶ್ರಯದಲ್ಲಿರಗೊಟ್ಟರೆ, ನಮ್ಮ ಗೌರವಕಷ್ಟೇ ಅಲ್ಲ, ಬೇರೆ ಹಲವು ಸಂಗತಿಗಳ ಗೌರವಕ್ಕೆ ಬಾಧೆಬರುತ್ತದೆ. ಹಾಗೆ ಗೌರವಕ್ಕೆ ಬಾಧೆತರಲು ನಾವು ಇಚ್ಛಿಸುವದಿಲ್ಲ; ಆದ್ದರಿಂದ ಈ ಪತ್ರವು ಮುಟ್ಟಿದ ಒಂದುದಿನದೊಳಗೆ ರಣಮಸ್ತನನ್ನು ನಮಗೆ ಒಪ್ಪಿಸಬೇಕು. ಒಪ್ಪಿಸದಿದ್ದರೆ ನಮ್ಮ ಮನಸ್ಸಿಗೆ ಬಂದಂತೆ ನಾವು ಮಾಡುವೆವು. ನಿಮ್ಮ ಇಷ್ಟವಿದ್ದಂತೆಯಂತೂ ನೀವು ಮಾಡೇ ಮಾಡುವಿರಿ ''

ಈ ಮೇರೆಗೆ ಸ್ಪಷ್ಟವಾಗಿ ಬರೆದ ಪತ್ರವು ಪುನಃ ರಾಮರಾಜನ ಕೈಸೇರಿತು. ಅದನ್ನು ಓದಿ ರಾಮರಾಜನು ಗಹಗಹಿಸಿ ನಕ್ಕು, ಕೂಡಲೆ ರಣಮಸ್ತಖಾನನ

ನ್ನು ಕರೆಸಿ, ಅದನ್ನು ಆತನ ಕೈಯಲ್ಲಿ ಕೊಟ್ಟನು. ರಣಮಸ್ತನು ಅದನ್ನು ಓದಿ ಅತ್ಯಂತ ಖಿನ್ನನಾಗಿ, ರಾಮರಾಜನನ್ನು ಕುರಿತು-ಸರಕಾರ, ನನ್ನಂಥ ಯಃಕಶ್ಚಿತ ಮನುಷ್ಯನ ಸಲುವಾಗಿ ತಾವು ತಮ್ಮ ಮೇಲೆಯೂ, ತಮ್ಮ ರಾಜ್ಯದ ಮೇಲೆಯೂ ಸಂಕಟವನ್ನು ಯಾಕೆ ತಂದುಕೊಳ್ಳುವಿರಿ! ನನ್ನ ಅಪರಾಧಕ್ಕಾಗಿ ಬಾದಶಹರು ನನಗೆ ದೇಹಾಂತ ಪ್ರಾಯಶ್ಚಿತ್ತ ಕೊಡುವದೇ ಯೋಗ್ಯವಾಗಿರುವದು. ನನ್ನ ಯೋಗವಿಂದ ನಿಮ್ಮ ರಾಜ್ಯದಮೇಲೆ ಇಂಥ ಕಠಿಣ ಪ್ರಸಂಗ ಒದಗುವದು ಇಷ್ಟವಾದದ್ದಲ್ಲ. ಬಾದಶಹನಿಗೆ ಏನಾದರೂ ನೆವವು ಬೇಕಾಗಿತ್ತು. ಆತನು ಈ ವೊತ್ತಿನವರೆಗೆ ಇಬ್ಬರು ಬಾದಶಹರೊಡನೆ ಗುಪ್ತಾಲೋಚನೆಗಳನ್ನು ನಡಿಸಿ ಎಲ್ಲ ಸಿದ್ಧತೆಯನ್ನು ಮಾಡಿಕೊಂಡಿರುವದರಿಂದ, ನಿಮ್ಮ ಮೇಲೆ ಯುದ್ಧಕ್ಕೆ ಬರಲು ಆತುರಪಡುತ್ತಿರುವನು. ಇಂಥ ಪ್ರಸಂಗದಲ್ಲಿ ಎಲ್ಲ ಗುಟ್ಟನ್ನು ಬಲ್ಲ ನಾನು ನಿಮ್ಮನ್ನು ಕೂಡಿಕೊಳ್ಳಲು, ಬಾದಶಹನು ಹ್ಯಾಗೆ ಸಹಿಸಿಯಾನು? ಆತನು ನನ್ನ ಮೇಲೆ ಸಿಟ್ಟಾಗದೆ ಯಾಕೆ ಬಿಟ್ಟಾನು? ಹ್ಯಾಗೂ ನನ್ನ ಯೋಗದಿಂದ ಯುದ್ಧಕ್ಕೆ ಆಸ್ಪದವು ದೊರೆಯುವಹಾಗಿದೆ. ಆದ್ದರಿಂದಲೇ ಬಾದಶಹನು ಇಷ್ಟು ನಿಷ್ಠುರದಿಂದ ಪತ್ರವನ್ನು ಬರೆದಿದ್ದಾನೆ. ಆದರೆ ನೀವು ಆ ಪತ್ರವನ್ನು ನಿರಾಕರಿಸುವದು ನನಗೆ ನೆಟ್ಟಗೆ ಕಾಣುವದಿಲ್ಲ. ನನ್ನೊಬ್ಬನ ಪ್ರಾಣಹಾನಿಯಿಂದ ಸಾವಿರಾರು ಜನರ ಪ್ರಾಣವನ್ನು ಉಳಿಸುವದು ನ್ಯಾಯವು. ಇನ್ನು ವಿಜಾಪುರದ ಬಾದಶಹನಿಗಾಗಲಿ, ಬೇರೆ ಇಬ್ಬರು ಬಾದಶಹರಿಗಾಗಲಿ, ಆ ಮೂವರು ಒಟ್ಟುಗೂಡಿದ್ದರಿಂದಾಗಲಿ, ನೀವು ಅಂಜುವಿರೆಂದು ನಾನು ಹೇಳುವದಿಲ್ಲ. ಇನ್ನಿಬ್ಬರು ಬಾದಶಹರು ಒಟ್ಟುಗೂಡಿ ಬಂದರೂ ಅವರೆಲ್ಲರನ್ನು ಮುರಿಯುವದಕ್ಕೆ ನೀವು ಸಮರ್ಥರಿರುತ್ತೀರಿ. ಆ ಐವರೂ ಬಾದಶಹರು ಒಟ್ಟುಗೂಡಿ ನಾಲ್ಕೂ ಕಡೆಯಿಂದ ನಿಮ್ಮ ಮೇಲೆ ಏರಿಬಂದರೂ ಅವರೆಲ್ಲರನ್ನು ಗೊತ್ತಿಗೆ ಹಚ್ಚುವಷ್ಟು ಸೈನ್ಯದ ಸಿದ್ಧತೆಯು ನಿಮ್ಮಲ್ಲಿರುತ್ತದೆ. ನೀವು ಎಳ್ಳಷ್ಟು ಹೆದರುವ ಕಾರಣವಿಲ್ಲ. ನಿಮ್ಮ ಸೈನ್ಯವು ಸಂಪೂರ್ಣ ಸಿದ್ಧವಾಗಿರುವದೆಂಬದರಲ್ಲೇನೂ ಸಂಶಯವಿಲ್ಲ. ಇದಲ್ಲದೆ, ನಮ್ಮ ವಿಜಾಪುರದ ಸೈನ್ಯದಲ್ಲಿಯ ದೋಷಗಳು ನನಗೆ ಗೊತ್ತಿರುವದರಿಂದ, ಯಾವ ಕಾಲಕ್ಕೆ ಹ್ಯಾಗೆ ಅದನ್ನು ಎದುರಿಸಬೇಕು, ಯಾವ ಸ್ಥಳದಲ್ಲಿ ಹೇಗೆ ಅದನ್ನು ಹೊಡೆಯಬೇಕು, ಎಂಬದರ ಮರ್ಮವು ನನಗೆ ಗೊತ್ತಿರುತ್ತದೆ. ಹೀಗೆ ಮರ್ಮವರಿತು ಯುದ್ಧ ಮಾಡಿದರೆ, ಮೂವರು ಬಾದಶಹರೇ ಯಾಕೆ, ಐವರು, ಏಳು ಮಂದಿ ಬಾದಶಹರು ಒಟ್ಟುಗೂಡಿ ಬಂದರೂ ಏಗುವದೇನು? ಆದರೆ ನನ್ನನ್ನು ಬಾದಶಹರಿಗೆ ಒಪ್ಪಿಸುವದರಿಂದ ಎಲ್ಲ ಸಂಕಟಗಳ ನಿವಾದರಣವಾಗುತ್ತಿದ್ದರೆ, ನೀವಾದರೂ ಯಾಕೆ ಆಗ್ರಹ ಮಾಡಬೇಕು? ತಮ್ಮ ಸಲುವಾಗಿ

ನಾನು ಮಾಡಬೇಕಾಗಿರುವ ಕೆಲಸಗಳನ್ನು ಮಾಡಿಬಿಟ್ಟಿರುವೆನು. ಇನ್ನು ನಾನು ಹೋದರೂ.....

ಈ ಮೇರೆಗೆ ರಣಮಸ್ತಖಾನನು ನುಡಿಯುತ್ತಿರಲು, ರಾಮರಾಜನು ಆತನನ್ನು ಮುಂದಕ್ಕೆ ಮಾತಾಡಗೊಡದೆ—" ನೀವು ಹೀಗೆ ಮಾತಾಡಬೇಕೆಂದು ನಾನು ನಿಮ್ಮನ್ನು ಕರೆಸಿ ಪತ್ರವನ್ನು ಓದಗೊಟ್ಟಿರುವದಿಲ್ಲ. ಒಂದು ಮೋಜಿನ ಕಾಗದವೆಂದು ನಿಮ್ಮನ್ನು ಕರೆಸಿ ಪತ್ರವನ್ನು ತೋರಿಸಿದೆನು. ಏನಾದರೂ ಉತ್ತರವನ್ನು ಬರೆದು ಕಳಿಸಬೇಕೆಂದು ತೋರಿದರೆ, ನಾನು ಉತ್ತರ ಬರೆದು ಕಳಿಸೇನು, ಇಲ್ಲದಿದ್ದರೆ ಉತ್ತರವನ್ನೇ ಕಳಿಸಲಿಕ್ಕಿಲ್ಲ. ಪತ್ರವನ್ನು ತಂದವನನ್ನು ಪ್ರತಿಬಂಧದಲ್ಲಿರಿಸಿಬಿಟ್ಟೀನು. ನಿಮ್ಮಂಥವರನ್ನು ಬಾದಶಹನಿಗೆ ಒಪ್ಪಿಸುವದು ವಿಶ್ವಾಸಘಾತದ ಲಕ್ಷಣವಾಗಿರುತ್ತದೆ. ಬೆನ್ನು ಬಿದ್ದವನನ್ನು ಹೊಟ್ಟೆಯ ಮಕ್ಕಳಂತೆ ನೋಡುವದು ನಮ್ಮ ಹಿಂದೂ ಜನರ ಶೀಲವಾಗಿರುವದು ; ಇನ್ನುವೇಲೆ ಇಂಥ ಮಾತುಗಳನ್ನು ನೀವು ಆಡಲಾಗದು. ನಿಮ್ಮನ್ನು ನಾವು ನಮ್ಮವರೆಂದು ತಿಳಿದಿದ್ದೇವೆ, ಎಂದು ನುಡಿಯುತ್ತಿರಲು, ರಾಮರಾಜನಲ್ಲಿ ರಣಮಸ್ತಖಾನನ ವಿಷಯವಾಗಿ ಪುತ್ರಪ್ರೇಮವು ಉಕ್ಕಿಬರಲು, ಆತನು ರಣಮಸ್ತಖಾನನ ಎರಡು ಭುಜಗಳ ಮೇಲೆ ತನ್ನ ಕೈಗಳನ್ನಿಟ್ಟು ಅತ್ಯಂತ ವಾತ್ಸಲ್ಯದಿಂದ—ರಣಮಸ್ತ, ಯಾವ ಕಾರಣದಿಂದಲೋ ಏನೋ, ನಿನ್ನನ್ನು ನೋಡಿದ ಕೂಡಲೆ ನನ್ನ ಪ್ರೇಮವು ಹೆಚ್ಚುತ್ತದೆ. ನಿನ್ನನ್ನು ನೋಡಿದಾಗಿನಿಂದ, ನೀನು ನನ್ನ ಬಳಿಯಲ್ಲಿರಬೇಕೆಂಬ ಇಚ್ಛೆಯು ನನ್ನಲ್ಲಿ ಉತ್ಪನ್ನವಾಗಿರುತ್ತದೆ. ನೀನು ನಮ್ಮ ದರ್ಬಾರದಲ್ಲಿ ಅಂದು ಆ ಹುಡುಗಿಯ ಮೇಲುಗಟ್ಟು ಸಿಟ್ಟಿನಿಂದ ಮಾತಾಡಿದಾಗಿನಿಂದಂತು, ನಿನ್ನ ಮೇಲಿನ ನನ್ನ ಪ್ರೇಮವು ಹತ್ತುಪಟ್ಟು ಹೆಚ್ಚಾಯಿತು. ನಿನಗೆ ಜನ್ಮ ಕೊಟ್ಟ ತಂದೆಯೂ, ನಿನ್ನನ್ನು ಹಡೆದ ತಾಯಿಯೂ ಪರಮಧನ್ಯರೆಂದು ನಾನು ತಿಳಿಯುವೆನು, ಎಂದು ನುಡಿದನು. ರಾಮರಾಜನು ಇಷ್ಟು ಪ್ರೇಮದಿಂದ ಮಾತಾಡುತ್ತಿರುವಾಗ ದರ್ಬಾರದ ನೆನಪು ಮಾಡಿಕೊಡಲು, ಕೂಡಲೆ ರಣಮಸ್ತಖಾನನ ವೃತ್ತಿಯಲ್ಲಿ ಹೆಚ್ಚುಕಡಿಮೆಯಾಯಿತು. ಆತನ ಹುಬ್ಬುಗಳು ಗಂಟಿಕ್ಕಿದವು. ಆತನು ತ್ರಸ್ತದೃಷ್ಟಿಯಿಂದ ನೆಲವನ್ನು ನೋಡಹತ್ತಿದನು. "ತಾನು ರಾಮರಾಜನ ಶಿರಸ್ಸನ್ನು ತಂದು ನಿನ್ನ ಲಗ್ನ ಮಾಡಿಕೊಳ್ಳುವೆನೆಂದು" ನೂರಜಹಾನಳ ಮುಂದೆ ಪ್ರತಿಜ್ಞೆ ಮಾಡಿದ್ದು ಆತನಿಗೆ ನೆನಪಾಯಿತು. ಇತ್ತ ರಾಮರಾಜನು ರಣಮಸ್ತಖಾನನ ಮುಖಮುದ್ರೆಯಲ್ಲಿ ಅಂತರವಾದದ್ದನ್ನು ನೋಡಿ, ನೂರಜಹಾನಳ ಪ್ರಾಪ್ತಿಗೆ ಬಾದಶಹನು ಪ್ರತಿಬಂಧವಾದನೆಂಬ ಸಿಟ್ಟಿನಿಂದ ಈತನ ಮುಖಮುದ್ರೆಯು ಹೀಗೆ ತ್ರಸ್ತವಾಗಿರುವದೆಂದು ಭಾವಿಸಿ, ನಕ್ಕು ರಣ-

ಮಸ್ತನನ್ನು ಕುರಿತು—"ನೀವು ಇಷ್ಟು ಸಂತಾಪಗೊಳ್ಳುವ ಕಾರಣವಿಲ್ಲ. ವಿಜಾಪುರದವರೊಡನೆ ಯುದ್ಧಪ್ರಸಂಗವನ್ನು ತಂದುಕೊಳ್ಳಲಿಕ್ಕೆ, ಆ ನಿನ್ನ ಅರಗಿಳಿಯೊಡನೆ ನಿನ್ನ ಲಗ್ನಮಾಡಲು ಆಸ್ಪದ ದೊರೆಯಬೇಕೆಂಬದೇ ಮುಖ್ಯ ಕಾರಣವೆಂದು ನೀನು ತಿಳಿದುಕೋ; ಆದ್ದರಿಂದ ವಿಜಾಪುರವನ್ನು ಪ್ರವೇಶಿಸಿದ ಕೂಡಲೆ ನಿನ್ನ ಅರಗಿಳಿಯನ್ನು ಹಿಡಕೊಂಡು ಬರುವದು ನನ್ನ ಮೊದಲನೆಯ ಕೆಲಸವು, ಎಂದು ಹೇಳಿದನು.

ತನ್ನ ಅರಗಿಳಿಯನ್ನು (ನೂರಜಹಾನಳನ್ನು) ರಾಮರಾಜನು ಹಿಡಕೊಂಡು ಬರುವದು ಅಪಮಾನಾಸ್ಪದವೆಂದು ತಿಳಿದು, ರಣಮಸ್ತಖಾನನು ಸಂತಾಪಗೊಳ್ಳಲು, ಆತನ ಕೈಯು, ಆತನ ಟೊಂಕದಲ್ಲಿ ಅಲೆದಾಡುತ್ತಿದ್ದ ಖಡ್ಗದ ಕಡೆಗೆ ಹೋಯಿತು. ಇದನ್ನು ನೋಡಿ ರಾಮರಾಜನು—ನಾನು ಅರಗಿಳಿಯನ್ನು ಹಿಡಿಯಬೇಕೆಂದು ಕೂಡಲೆ ಈತನು ಇಷ್ಟು ಸ್ಫೂರ್ತಿಗೊಂಡನೆಂದು" ತಿಳಿದು—"ಬಹದ್ದರ; ಆ ಅರಗಿಳಿಯನ್ನು ಹಿಡಕೊಂಡು ಬರುವ ವಿಷಯದಲ್ಲಿ ನೀನು ಇಷ್ಟು ಉತ್ಕಂಠನಾಗಿರುವೆಯೆಂದು ತಿಳಿದೇ ನಾನು ಹಾಗೆ ಮಾತಾಡಿದೆನು. ನಿನ್ನ ಈ ಉತ್ಕಂಠೆಯನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತದೆ. ನಿನಗೆ ನಿನ್ನ ಅರಗಿಳಿಯ ಚಿಂತೆ ಬೇಡ. ನಾನು ಜೀವದಿಂದಿರುವದರೊಳಗೆ ಆ ಅರಗಿಳಿಯೊಡನೆ ನಿನ್ನ ಲಗ್ನಮಾಡಿ, ನೀನು ಆನಂದಪಡುವದನ್ನು ಕಣ್ಣುತುಂಬ ನೋಡುವೆನು. ಇದು ನನ್ನ ಪ್ರತಿಜ್ಞೆಯೆಂದು ತಿಳಿ, ಅನ್ನಲು ಈ ಮಾತಿನಿಂದ ರಣಮಸ್ತಖಾನನ ಸಿಟ್ಟು ಹೆಚ್ಚಿದರೂ ಅದನ್ನು ಆತನು ನುಂಗಿಕೊಂಡು—ಹೌದು, ನಾನು ನಿಮ್ಮ ಮುಂದೆ ಇನ್ನು ಯಾಕೆ ಮುಚ್ಚಲಿ? ನೀವು ಅನ್ನುವಂತೆ ನನ್ನ ಮನಸ್ಸಿನ ಸ್ಥಿತಿಯಾಗಿರುತ್ತದೆಂಬದು ನಿಜವು. ನನ್ನ ಅರಗಿಳಿಯ ಸಂಬಂಧದಿಂದ ನನ್ನ ಉಪಮರ್ದವಾಗದಿದ್ದರೆ, ನಾನು ನಿಮ್ಮ ಪಕ್ಷವನ್ನೇ ಸ್ವೀಕರಿಸುತ್ತಿದ್ದಿಲ್ಲ. ಆ ಉಪಮರ್ದವು ನನ್ನನ್ನು ನಿಮ್ಮ ಕಡೆಗೆ ಎಳಕೊಂಡು ಬಂದಂತೆ ಆಗಿರುತ್ತದೆ. ಆ ಉಪಮರ್ದವನ್ನು ನಾನು ಮರೆಯಬೇಕಾದರೆ, ಸ್ವಪರಾಕ್ರಮದಿಂದ ಅರಗಿಳಿಯನ್ನು ಹಿಡತರಲೇಬೇಕು, ಎಂದು ನುಡಿಯುತ್ತಿರಲು, ರಾಮರಾಜನು ನಡುವೇ ಬಾಯಿಹಾಕಿ—ಅಲಬತ, ಅಲಬತ ಹಾಗೆ ಆಗಲೇಬೇಕು. ನಾನು ಆ ಕೆಲಸವನ್ನು ಅವಶ್ಯವಾಗಿ ಮಾಡುವೆನು. ಈಗ ನಾನು ಬಾದಶಹನಿಗೆ ಉತ್ತರವನ್ನು ಬರೆದು, ಅದರಲ್ಲಿ ನಿನ್ನ ಆ ಅರಗಿಳಿಯನ್ನು ನಮಗೆ ಒಪ್ಪಿಸಬೇಕೆಂತಲೂ, ಹಾಗೆ ಒಪ್ಪಿಸದಿದ್ದರೆ ಅದನ್ನು ಹಿಡಕೊಂಡು ಬರುವದಕ್ಕಾಗಿ ನಾವೇ ವಿಜಾಪುರದಮೇಲೆ ಸಾಗಿಬರುವೆವೆಂತಲೂ ಕಾಣಿಸುವೆನು. ನಿನ್ನನ್ನು ಹಿಡಕೊಂಡು ಹೋಗಲಿಕ್ಕೆ ವಿಜಯನಗರದಮೇಲೆ ಸಾಗಿಬರುವ ಬಾದಶಹನಿಗೆ, ಹೀಗೆ ಬರೆಯದಿದ್ದರೆ ಹ್ಯಾಗೆ?

ಈ ಮೇರೆಗೆ ನುಡಿದು ರಾಮರಾಜನು ಬಾದಶಹನಿಗೆ ಉತ್ತರವನ್ನು ಬರೆದನು. ಅದರಲ್ಲಿ ಆತನು ರಣಮಸ್ತಖಾನನನ್ನು ತಮಗೆ ಒಪ್ಪಿಸುವದು ನಮ್ಮ ಹಿಂದೂ ಜನರ ಶೀಲಕ್ಕೆ ವಿರುದ್ಧವಾಗಿರುತ್ತದೆ. ನಮ್ಮ ಆಶ್ರಯವನ್ನು ಪಡೆದವನು, ನಮ್ಮಲ್ಲಿ ಸಂರಕ್ಷಣಮಾಡುವ ಸಾಮರ್ಥ್ಯವಿರುವವರೆಗೆ ನಮ್ಮ ಬಳಿಯಲ್ಲಿಯೇ ಇರತಕ್ಕವನು. ನಮ್ಮ ಸಂಪೂರ್ಣ ಉಚ್ಛೇದವಾದಾಗ, ಆತನಿಗೆ ನಮ್ಮ ಆಶ್ರಯವು ತಪ್ಪೀತು ; ನೀವು ಸುಮ್ಮನೆ ಇಲ್ಲದ ಆಗ್ರಹತೊಟ್ಟು ನಮ್ಮ ಸಂಗಡ ಯುದ್ಧಕ್ಕೆ ಸಿದ್ಧವಾಗಬಾರದು. ರಣಮಸ್ತಖಾನನು ಹೇಳಿ ಕೇಳಿ ನಿಮ್ಮ ನೌಕರಿಯನ್ನು ಬಿಟ್ಟು ನಮ್ಮಲ್ಲಿ ನೌಕರನಾದರೆ, ವಿಶ್ವಾಸಘಾತವು ಹ್ಯಾಗಾಯಿತೋ ನಮಗೆ ತಿಳಿಯದು. ನಮಗೂ ನಿಮಗೂ ಸ್ನೇಹವಿರುತ್ತದೆ. ಆ ಸ್ನೇಹವನ್ನು ಕೆಡಿಸಿಕೊಳ್ಳಲಿಕ್ಕೆ ಏನೂ ಕಾರಣವಿಲ್ಲ. ಏನಾದರೂ ಇಲ್ಲದ ನೆವಮಾಡಿ ಸ್ನೇಹ ಸಂಬಂಧವನ್ನು ಕೆಡಿಸಿಕೊಳ್ಳಬೇಕೆಂದು ನೀವು ಮಾಡಿರುವಂತೆ ತೋರುತ್ತದೆ. ಹೀಗಿದ್ದರೆ, ನಿಮ್ಮ ಇಚ್ಛೆಯು, ನಿಮ್ಮ ಮನಸ್ಸಿಗೆ ಬಂದಂತೆ ಮಾಡಿರಿ. ನೀವು ನಮ್ಮ ಸಂಗಡ ಸ್ನೇಹದಿಂದಿರುವದೇ ನಿಜವಿದ್ದರೆ, ನಿಮ್ಮ ಒಬ್ಬ ನೌಕರನು ನಮ್ಮ ಕಡೆಗೆ ಬಂದಿರಲು, ನಿಮಗೆ ಇಷ್ಟು ವೈಷಮ್ಯವೇಕೆ? ನಮ್ಮ ನಿಮ್ಮ ಸ್ನೇಹಸಂಬಂಧವೇ ದೃಢವಾಗಿದ್ದ ಪಕ್ಷದಲ್ಲಿ ರಣಮಸ್ತಖಾನನು ನಿಮ್ಮ ವಿರುದ್ಧವಾಗಿ ನಮ್ಮ ಮುಂದೆ ಏನು ಹೇಳುವನು? ಆತನು ಹೇಳಿದ್ದರಿಂದ ಪ್ರಯೋಜನವಾದರೂ ಏನಾಗುವದು? ಆತನು ನಿಮ್ಮ ವಿಶ್ವಾಸಘಾತವನ್ನಾದರೂ ಹ್ಯಾಗೆ ಮಾಡುವನು? ನೀವು ಪತ್ರದಲ್ಲಿ ಬರೆದಂತೆ ರಣಮಸ್ತಖಾನನನ್ನು ನಾವು ನಿಮ್ಮ ಕಡೆಗೆ ಕಳಿಸುವವೇಯಿಲ್ಲ. ತಿರುಗಿ ನಾವು ನಿಮ್ಮನ್ನೊಂದು ಮಾತು ಕೇಳಿಕೊಳ್ಳುವೆವು. ನಮ್ಮ ದರ್ಬಾರದಲ್ಲಿ ರಣಮಸ್ತಖಾನನು ಯಾವ ಹುಡುಗೆಯ ಪಕ್ಷವನ್ನು ಕಟ್ಟಿ ತನ್ನ ತೇಜಸ್ವಿತೆಯನ್ನು ತೋರಿಸಿದನೋ, ಆ ಹುಡುಗೆಯನ್ನು ಈ ಪತ್ರ ಮುಟ್ಟಿದಕೂಡಲೆ ನಮ್ಮ ಕಡೆಗೆ ಕಳಿಸಿಕೊಡಬೇಕು. ರಣಮಸ್ತಖಾನನೊಡನೆ ಆಕೆಯ ಲಗ್ನ ಮಾಡುವದನ್ನು ನಾವು ನಿಶ್ಚಯಿಸಿರುತ್ತೇವೆ. ರಣಮಸ್ತಖಾನನು ಆ ಹುಡುಗೆಯ ಲಗ್ನ ಮಾಡಿಕೊಳ್ಳಲಿಕ್ಕೆ ಕುಲ-ಶೀಲ-ಶೌರ್ಯಾದಿಗಳಿಂದ ಯೋಗ್ಯನಿರುತ್ತಾನೆ. ಕುಲ-ಶೀಲಗಳಿಂದಂತು ಆತನು ಆ ಹುಡುಗೆಯ ಮನೆತನಕ್ಕಿಂತ ಎಷ್ಟೋ ಪಾಲು ಹೆಚ್ಚಿನವನಿರುತ್ತಾನೆ; ಆದ್ದರಿಂದ ತಾವು ಮನಸ್ಸಿನಲ್ಲಿ ಯಾವ ಪ್ರಕಾರದ ಶಂಕೆಗೂ ಆಸ್ಪದಕೊಡದೆ ರಣಮಸ್ತಖಾನನು ನಮ್ಮನೌಕರಿ ಬಿಟ್ಟು ವಿಜಯನಗರದ ರಾಯರ ನೌಕರನಾದನೆಂಬ ವಿಕಲ್ಪದಿಂದ ಆತನ ಮೇಲೆ ಸಿಟ್ಟಾಗದೆ, ಆ ಹುಡುಗೆಯನ್ನು ನಮ್ಮ ಕಡೆಗೆ ಕಳಿಸತಕ್ಕದ್ದು. ಆ ಹುಡುಗೆಯ

ತಂದೆ—ತಾಯಿಗಳನ್ನು ಹುಡುಗೆಯ ಸಂಗಡ ಲಗ್ನ ಸಮಾರಂಭಕ್ಕೆ ಕಳಿಸಿದರೆ ವಿಹಿತವೇ ಆಗುವದು. ಉಭಯತರ ಯೋಗ್ಯತೆಗೆ ಒಪ್ಪುವಂತೆ ನಾವು ರಣ ಮಸ್ತಖಾನನ ವಿವಾಹವನ್ನು ಮಾಡುವೆವು. ರಣಮಸ್ತಖಾನನು, ನಮ್ಮಲ್ಲಿ ಸಾಧಾರಣ ನೌಕರನಾಗಿರದೆ, ಪ್ರಮುಖ ಸರದಾರನಾಗಿ ನಿಯಮಿಸಲ್ಪಟ್ಟಿರುವನು. ಮುಂದಾದರೂ ಅವನ ಮಾನ—ಮರ್ಯಾದೆಗಳು ಹೆಚ್ಚುತ್ತಹೋಗುವವು. ಆತನು ತಮಗೆ ಯಾವ ತರದ ಕೇಡನ್ನೂ ಬಗೆದಿರುವದಿಲ್ಲ. ಅವನಿಗೆ ನಮ್ಮ ನೌಕರಿಯು ನಿಮ್ಮ ನೌಕರಿಗಿಂತ ನೆಟ್ಟಗೆ ಕಂಡದ್ದರಿಂದ, ಅವನು ಪ್ರಸಿದ್ಧರೀತಿಯಿಂದ ನಿಮ್ಮ ನೌಕರಿಯನ್ನು ಬಿಟ್ಟುಕೊಟ್ಟು ನಮ್ಮಲ್ಲಿ ಇರಹತ್ತಿದನು. ಈ ಅಲ್ಪಕಾರಣದ ಮೂಲಕ ಯುದ್ಧಕ್ಕೆ ಸನ್ನದ್ಧರಾಗುವದನ್ನು ನೋಡಿದರೆ, ನೀವು ಜಗಳಕ್ಕೆ ಯಾವದಾದರೊಂದು ಕಾರಣವನ್ನು ಹುಡುಕುತ್ತಿದ್ದಿರೆಂಬಂತೆ ನಮಗೆ ತೋರುತ್ತದೆ. ಎಷ್ಟೋ ದಿವಸಗಳಿಂದ ನೀವು ಅಹಮ್ಮದನಗರ—ಗೋವಳಕೊಂಡಗಳ ರಾಜರ ಸಂಗಡ ನಡೆಸಿರುವ ಒಳಸಂಚುಗಳು ನಮಗೆ ಗೊತ್ತಿಲ್ಲವೆಂತಿಲ್ಲ; ಆದರೆ ನೀವಾಗಿ ಮೊದಲು ನಮ್ಮ ಮೇಲೆ ಶಸ್ತ್ರವೆತ್ತುವವರೆಗೆ ನಾವು ನಿಮ್ಮ ಗೊಡವೆಗೆ ಹೋಗಬಾರದೆಂದು ಮಾಡಿದ್ದೆವು. ಈಗ ನೀವೇ ಮೊದಲು ಯುದ್ಧಕ್ಕೆ ಅಣಿಯಾದ್ದರಿಂದ ನಿರ್ವಾಹವಿಲ್ಲದೆ, ನಾವೂ ಯುದ್ಧಕ್ಕೆ ಹೊರಡುವ ಪ್ರಸಂಗಬಂದದೆ. ಆದರೆ ಈ ಸಾರೆಯ ಕಾಳಗವು ಯಾವ ಮನೆಗೆ ಬಂದೀತೆಂಬುದನ್ನು ನಾವು ಹೇಳಲಾರೆವು. ನಾವು ಕ್ಷಮೆ, ದಯೆ ಮೊದಲಾದವುಗಳನ್ನು ಕಟ್ಟಿಇಟ್ಟು, ವಿಜಾಪುರವನ್ನು ಪ್ರವೇಶಿಸಿ, ಕುರಿಗಳಂತೆ ಅಲ್ಲಿಯ ಪ್ರಜೆಗಳನ್ನು ಸಂಹರಿಸಿ, ನಗರವನ್ನು ಸುಟ್ಟು ಸೂರೆಗೈದೇವು; ಇನ್ನು ಹಿಂದು ಮುಂದು ನೋಡಲಿಕ್ಕಿಲ್ಲ. ಆದರೆ ಒಬ್ಬ ನೂರಜಹಾನಳನ್ನು ಕಳಿಸಿಕೊಡುವದರಿಂದ ಈ ಪ್ರಸಂಗವು ಹಿಂಗಬಹುದಾದದ್ದರಿಂದ, ಆಕೆಯನ್ನು ಕೂಡಲೇ ಕಳಿಸಿಕೊಡಬೇಕು" ಎಂಬ ಸಂಗತಿಯನ್ನು ಬರೆದ ಪತ್ರವನ್ನು ರಣಮಸ್ತಖಾನನಿಗೆ ತೋರಿಸಿ, ಆತನ ಸಮಕ್ಷ ರಾಮರಾಜನು ಅದನ್ನು ಒಬ್ಬ ದೂತನ ಕೈಯಲ್ಲಿ ಕೊಟ್ಟು ವಿಜಾಪುರಕ್ಕೆ ಕಳಿಸಿದನು.

೨೬ನೆಯ ಪ್ರಕರಣ:—ರಾಮರಾಜನ ಸ್ವಚ್ಛಂದವೃತ್ತಿಯು.

ರಣಮಸ್ತಖಾನನನ್ನು ತಮ್ಮಕಡೆಗೆ ಕಳಿಸಬೇಕೆಂದು ರಾಮರಾಜನಿಗೆ ಬರೆದಪತ್ರಕ್ಕೆ ಆತನು ಏನು ಉತ್ತರ ಬರೆಯುವನೆಂಬುವದು ವಿಜಾಪುರದ ಬಾದಶಹನಿಗೆ ಗೊತ್ತಾದಹಾಗೆ ಆಗಿತ್ತು. ಬಾದಶಹನು ರಾಮರಾಜನ ಉತ್ತರಕ್ಕೆ

ಮಹತ್ವ ಕೊಡದೆ, ತನ್ನ ಸಮರಸನ್ನಾಹವನ್ನು ಮಾಡುವಹಾಗೆ ಮಾಡುತ್ತಲೇ ಇದ್ದನು. ಇಬ್ಬರು ಬಾದಶಹರೊಡನೆ ನಡೆಸಿದ ಆತನ ಒಳಸಂಚು ಪೂರ್ಣ ಸಿದ್ಧವಾದಹಾಗೆ ಆಗಿತ್ತು. ಬಾಮನೀಬಾದಶಹರಲ್ಲಿ ನಾಲ್ಕು ಶಾಖೆಗಳಾಗಿ, ಅವರಲ್ಲಿ ಪರಸ್ಪರಮಾತ್ಸರ್ಯವು ಹೆಚ್ಚಿದ್ದರಿಂದ ಪರಸ್ಪರರು ಹೊಡದಾಡಿ ಎಲ್ಲರೂ ಬಲಹೀನರಾದಂತೆ ಆಗಿತ್ತು. ಈ ಬಾದಶಹರು ಒಬ್ಬರು ಮತ್ತೊಬ್ಬರನ್ನು ಮುರಿಯುವುದಕ್ಕಾಗಿ ಪರಧರ್ಮದ ಅರಸರನ್ನು ಪ್ರಾರ್ಥಿಸಿ ತಮ್ಮ ಸಹಾಯಕ್ಕೆ ಕರಕೊಳ್ಳಲಿಕ್ಕೆ ಹೇಸುತ್ತಿದ್ದಿಲ್ಲ. ವಿಜಾಪುರದ ಅಲ್ಲಿಅದಿಲಶಹನು ತನ್ನ ಶತ್ರುಗಳನ್ನು ಹಣ್ಣು ಮಾಡುವದಕ್ಕಾಗಿ ಎರಡುಸಾರೆ ರಾಮರಾಜನ ಸಹಾಯವನ್ನು ಕೇಳಿಕೊಂಡು, ಅವನ ಕಡೆಯಿಂದ ತನ್ನ ಶತ್ರುಗಳ ಮೇಲೆ ದಾಳಿಮಾಡಿಸಿದನು. ಈ ದಾಳಿಯಲ್ಲಿ ರಾಮರಾಜನು ಸಂಪೂರ್ಣ ಜಯಶಾಲಿಯಾದದ್ದನ್ನು ನೋಡಿ, ಮೊದಮೊದಲು ಅಲ್ಲಿಅದಿಲಶಹನಿಗೆ ಬಹಳ ಸಮಾಧಾನವಾಯಿತು. ಆದರೆ ಈ ಸಮಾಧಾನವು ಬಹಳ ಹೊತ್ತುನಿಲ್ಲಲಿಲ್ಲ. ರಾಮರಾಜನು ಈ ಜಯದಿಂದ ಬಹಳ ಉನ್ಮತ್ತನಾದನು. ತುಂಗಭದ್ರೆಯಿಂದ ರಾಮೇಶ್ವರದವರೆಗೆ ಈಗ ಆತನ ರಾಜ್ಯವು ವಿಸ್ತೃತವಾಗಿ, ಎಲ್ಲ ಮುಸಲ್ಮಾನ ಬಾದಶಹರು ಆತನಿಗೆ ಅಂಜಿನಡೆಯಹತ್ತಿದರು. ಈ ಸ್ಥಿತಿಯಲ್ಲಿ ರಾಮರಾಜನು ಜಾಗರೂಕನಾಗಿ ಕಣ್ಣು ತೆರೆದು ನಡೆದಿದ್ದರೆ ಬಹಳ ನೆಟ್ಟಗಾಗುತ್ತಿತ್ತು? ಆದರೆ, ಮದ—ಮೋಹಗಳೆಂಬ ಇಬ್ಬರು ಪ್ರಬಲವೈರಿಗಳ ಇರುಕಿನಲ್ಲಿ ಸಿಕ್ಕ ಆತನು ತೀರ ಅಂಧನಾಗಿದ್ದನು. ತಾನು ಬಾಯಿಂದ ಅಂದಂತೆ ಆಗುವದೆಂತಲೂ, ಕೈಯಿಂದ ಮಾಡತೊಡಗಿದ್ದು ಸಾಧಿಸುವದೆಂತಲೂ ಆತನು ನಂಬಿದ್ದನು. ಈ ನಂಬಿಗೆಯು ಆತನ ಉನ್ಮತ್ತತನಕ್ಕೆ ಕಾರಣವಾಗದಿದ್ದರೆ, ಆತನ, ಹಾಗು ವಿಜಯನಗರದ ರಾಜ್ಯದ ವಿಜಯವೂ, ವಿಸ್ತಾರವೂ ಯಾವಾಗಲೂ ಆಗುತ್ತಲೇ ಹೋಗುತ್ತಿದ್ದವು; ಆದರೆ ದುರ್ದೈವದಿಂದ ಹಾಗಾಗಲಿಲ್ಲ. ಆತನನ್ನು ಉನ್ಮತ್ತತನವು ಸಂಪೂರ್ಣವಾಗಿ ಮುಸುಕಿಬಿಟ್ಟಿತು. ತನ್ನ ವಿರುದ್ಧವಾಗಿ ಮೂವರು ನಾಲ್ವರು ಬಾದಶಹರು ಒಟ್ಟಾಗುತ್ತಿರುವರೆಂಬ ಸುದ್ದಿಯು ಆತನಿಗೆ ಗೊತ್ತಾಗಿದ್ದರೂ, ಅದರ ಮಹತ್ವವು ಆತನಿಗೆ ತೋರುವಷ್ಟು ತೋರಲಿಲ್ಲ. ಹದಿನೆಂಟುಮಂದಿ ಬಾದಶಹರು ಒಟ್ಟಾದರೇನಾಯಿತು? ಅವರೆಲ್ಲರ ಮಗ್ಗಲು ಮುರಿಯೋಣವೆಂದು ಆತನು ಭಾವಿಸಹತ್ತಿದನು. ಹೀಗೆ ಬರಿಯ ಭಾವಿಸುತ್ತಿದ್ದನೆಂಬದಿಷ್ಟೇ ಅಲ್ಲ, ಇಂಥ ಪ್ರಸಂಗವು ಒಮ್ಮೆ ಬಂದು ಹೋಗಲೆಂದು ಆತನು ಇಚ್ಛಿಸಹತ್ತಿದನು! ಹೀಗೆ ಈ ಎಲ್ಲ ಬಾದಶಹರ ಎಲವು ಒಮ್ಮೆ ದುಂಡಗೆ ಮಾಡಿದೆನೆಂದರೆ, ಮುಂದೆ ಉತ್ತರದಕಡೆಗೆ ಸಹ ತನ್ನ ರಾಜ್ಯ

ವನ್ನು ಹಬ್ಬಿಸಲಿಕ್ಕೆ ಪ್ರತಿಬಂಧವಾಗದೆಂದು ಆತನು ತಿಳಿದಿದ್ದನು.

ರಾಮರಾಜನ ಈ ವಿಚಾರವು ಅಯೋಗ್ಯವಾದದ್ದೆಂದು ಹೇಳುವ ಹಾಗಿದ್ದಿಲ್ಲ. ಒಂದು ದೃಷ್ಟಿಯಿಂದ ಅದು ಯೋಗ್ಯವಾದದ್ದಾಗಿತ್ತು; ಆದರೆ ತನ್ನ ಸಾಮರ್ಥ್ಯದ ವಿಷಯವಾಗಿ ಇದ್ದ ಆತನ ವಿಶ್ವಾಸವು ಇರುವಷ್ಟಕ್ಕಿಂತ ಬಹಳ ಹೆಚ್ಚು ಇತ್ತು. ಆತನ ಸೈನ್ಯವು ಬಹು ಪ್ರಚಂಡವಾದದ್ದೆಂಬದೇನೋ ನಿಜ; ಆದರೆ ಆ ಸೈನ್ಯದಲ್ಲಿ ಈಗ ವ್ಯವಸ್ಥೆಯಿದ್ದಿಲ್ಲ. ಸೈನಿಕರು ಸೋಮಾರಿಗಳೂ, ಡಾಂಭಿಕರೂ, ಚಕ್ಕಂದಕ್ಕೆ ಮೆಚ್ಚಿದವರೂ ಆಗಿದ್ದರು. ಈ ಸ್ಥಿತಿಯ ಜ್ಞಾನವು ರಾಮರಾಜನಿಗೆ ಆಗಿದ್ದಿಲ್ಲ. ತಾರುಣ್ಯದಲ್ಲಿಯ ಸಾಮರ್ಥ್ಯದ ಯೋಗದಿಂದ ಬಹು ದಿವಸಗಳವರೆಗೆ ವಿಜಯವನ್ನು ಸಂಪಾದಿಸುತ್ತಬಂದಿದ್ದ ಒಬ್ಬಾನೊಬ್ಬ ವೃದ್ಧನು, ಮೊದಲಿನಂತೆ ಈಗಾದರೂ ತನ್ನ ಶರೀರ ಸಾಮರ್ಥ್ಯದ ಸಹಾಯದಿಂದ ಜಯವನ್ನು ಸಂಪಾದಿಸುವೆನೆಂದು ವಿಶ್ವಾಸವಿಡುವಂತೆ ರಾಮರಾಜನ ಸ್ಥಿತಿಯು ಆಗಿತ್ತು. ವಿಜಯನಗರದ ರಾಜ್ಯವು ಸ್ಥಾಪಿಸಲ್ಪಟ್ಟ ಎರಡೂವರೇನೂರು ವರ್ಷಗಳು ಆಗುತ್ತ ಬಂದಿದ್ದವು. ಇಷ್ಟು ದಿವಸ ಅದು ಮುಸಲ್ಮಾನರ ಅಬ್ಬರಕ್ಕೆ ಸೊಪ್ಪು ಹಾಕದೆ ತನ್ನ ಅಸ್ತಿತ್ವವನ್ನು ಕಾಯ್ದುಕೊಂಡು ಭರದಿಂದ ಬೆಳೆಯುತ್ತ ಬಂದಿತ್ತು. ಆದರೆ ಸೃಷ್ಟಿಕ್ರಮವಿಡಿದು ಬಹು ದಿವಸ ಅವಾಢವ್ಯವಾಗಿ ಬೆಳೆದ ವೃಕ್ಷವೂ ಒಳಗಿಂದೊಳಗೆ ಟೊಕಳಿಹಾಯುವಂತೆ ದಕ್ಷಿಣದಲ್ಲಿ ಇಷ್ಟು ವರ್ಷ ವಿಸ್ತರಿಸಿದ್ದ ವಿಜಯನಗರದ ರಾಜ್ಯವು ಒಳಗಿಂದೊಳಗೆ ಶಿಥಿಲವಾಗಿತ್ತೆಂದು ಹೇಳಬಹುದು. ದೊಡ್ಡ ವೃಕ್ಷದ ನೆರಳೆಂದು ಬಹುಜನರು ಆಶ್ರಯಿಸಿದ್ದರೂ, ಗಿಡವು ಬಿರುಗಾಳಿಯಿಂದ ಬೀಳುವಾಗ ಗಿಡದ ಬುಡದಲ್ಲಿರುವವರು ತಪ್ಪಿಸಿಕೊಂಡು ಹೋಗುವಂತೆ, ವಿಜಯನಗರದ ದಂಡಿನಲ್ಲಿ ಸೇರಿಕೊಂಡಿದ್ದ ಜನರಲ್ಲಿ ಪ್ರಸಂಗದೊಳಗೆ ಕಾಲು ದೆಗೆಯುವವರೇ ಬಹಳ ಜನರಿದ್ದರಲ್ಲದೆ, ರಾಜ್ಯದ ಸಂರಕ್ಷಣಕ್ಕೆ ಹೆಣಗುವವರು ಬಹಳ ಜನರು ಇದ್ದಿಲ್ಲ. ಯಾವ ಮಾತಿನಲ್ಲಿಯೇ ಆಗಲಿ, ಅವಾಢವ್ಯವ್ಯವಹಾರದ ಲಕ್ಷಣವು ಹೀಗೆಯೇ ಸರಿಯೆಂದು ಸಾಧಾರಣವಾಗಿ ಹೇಳಬಹುದು. ತನ್ನ ಸೈನ್ಯದ ಜನರಲ್ಲಿ ಮೊದಲಿನ ಸಾಮರ್ಥ್ಯವು ಉಳಿದಿದ್ದಿಲ್ಲೆಂಬ ಮಾತು ರಾಮರಾಜನಿಗೆ ಗೊತ್ತಿದ್ದಂತೆ ತೋರಲಿಲ್ಲ. ಮೂರು ನಾಲ್ಕು ಜನ ಬಾದಶಹರು ಒಟ್ಟುಗೂಡಿಬಂದರೆ, ತನ್ನ ಸೈನ್ಯವು ತಡೆಯಲಿಕ್ಕಿಲ್ಲೆಂಬ ಮಾತಾದರೂ ಆತನಿಗೆ ಗೊತ್ತಿರಬೇಕಾಗಿತ್ತು; ಆದರೆ ಅದೂ ಗೊತ್ತಿದ್ದಂತೆ ತೋರಲಿಲ್ಲ. ಈ ಮಾತು ಆತನಿಗೆ ಗೊತ್ತಿರುವದೊತ್ತಟ್ಟಿಗುಳಿದು, ತಾನು ದಿಗ್ವಿಜಯ ಮಾಡಬೇಕೆಂತಲೂ, ಆಸೇತುಹಿಮಾಚಲ ತನ್ನ ರಾಜ್ಯವನ್ನು ಹಬ್ಬಿಸ

ಬೇಕೆಂತಲೂ, ತನ್ನ ಅಶ್ವಮೇಧದ ಕುದುರೆಯನ್ನು ಇಡಿಯ ಭರತಖಂಡದಲ್ಲಿ ತಿರುಗಿಸಿ, ತಾನು ಸಾರ್ವಭೌಮನಾಗಬೇಕೆಂತಲೂ ಆತನು ಭಾವಿಸುತ್ತಿದ್ದನು. ತಾನು ಜಯಶಾಲಿಯಾಗುವೆನೆಂಬದೊಂದೇಗುಂಗು ಆತನ ತಲೆಯಲ್ಲಿ ಹೊಕ್ಕು ಬಿಟ್ಟಿದ್ದರಿಂದ, ತನ್ನ ಗುಂಗಿಗೆ ಪ್ರತಿಕೂಲ ಸಂಕಟಗಳೇನಿರುವವೆಂಬ ವಿಚಾರದ ಕಡೆಗೆ ಆತನ ಮನಸ್ಸು ತಿರುಗಲೇ ಇಲ್ಲ. ಆತನ ಅಣ್ಣನಾದ ತಿರುಮಲನಾದರೂ ಯೋಗ್ಯವಿಚಾರಗಳನ್ನು ರಾಮರಾಜನಿಗೆ ಸೂಚಿಸಬಹುದಾಗಿತ್ತು. ತಿರುಮಲನು ಯಾವತ್ತೂ ಸೈನ್ಯದ ಮುಖ್ಯಾಧಿಕಾರಿಯಾಗಿದ್ದನು; ಆದರೆ ಸೈನ್ಯದ ಅಂತಃಸ್ಥಿತಿಯು ಆತನಿಗೂ ಗೊತ್ತಿದ್ದಿಲ್ಲೆಂದು ಹೇಳಬಹುದಾಗಿತ್ತು. ಇಷ್ಟುದಿನ ಮುಸಲ್ಮಾನರಿಗೆ ಸೊಪ್ಪುಹಾಕದೆಯಿದ್ದ ನಮ್ಮ ಸೈನ್ಯವು ಈಗ ಹ್ಯಾಗೆ ಅದಕ್ಕೆ ಬಗ್ಗುವದೆಂಬ ವಿಚಾರದಿಂದ ಆತನು ಸಂತುಷ್ಟನಾಗಿದ್ದನು. ಅದರಲ್ಲಿ ರಣಮಸ್ತಖಾನನು ತಮ್ಮ್ಮ ಕಡೆಗಾದದ್ದರಿಂದ, ವಿಜಾಪುರದ ರಾಜ್ಯದೊಳಗಿನ ಒಹುಮಹತ್ವದ ಒಬ್ಬ ಮನುಷ್ಯನನ್ನು ತಾವು ಒಡಕೊಂಡಿರುವದರಿಂದ, ತಮಗೆ ವಿಶೇಷತರದ ಅನುಕೂಲತೆಯಾದಂತಾಗಿದೆಯೆಂದು ಆತನು ಹಿಗ್ಗುತ್ತಲಿದ್ದನು; ಆದರೆ ಆ ರಣಮಸ್ತನೇ ತಮಗೂ ತಮ್ಮ ರಾಜ್ಯಕ್ಕೂ ಮೃತ್ಯುಸ್ವರೂಪಿಯಾಗಿರುವೆನೆಂಬದು ಆತನಿಗೇನುಗೊತ್ತು?

ಈ ಮೇರೆಗೆ-ಮದಮೋಹಗಳೆಂಬ ಎರಡು ವಿಕಾರಗಳಿಂದ ಪೀಡಿತನಾದ ರಾಮರಾಜನು ತಾನು ಅಶ್ವಮೇಧ ಮಾಡಬೇಕೆಂಬ ಗುಂಗಿನಲ್ಲಿರುವಾಗ ಆತನಿಗೆ ಶತ್ರುಗಳ ಕಡೆಯ ಒಳಸಂಚುಗಳ ಸುದ್ದಿಗಳು ಸಹ ಗೊತ್ತಾಗದಂತಾದವು. ಒಂದು ಪಕ್ಷದಲ್ಲಿ ಆ ಸುದ್ದಿಗಳು ಗೊತ್ತಾದರೆ ಆತನು—"ಮಾಡಲಿ, ಅವರು ಬೇಕಾದದ್ದು ಮಾಡಲಿ. ಈ ಬಾದಶಹನು ಬಾದಶಹನ ಮಗಳನ್ನು ಲಗ್ನಮಾಡಿಕೊಂಡರೆ, ಆ ಬಾದಶಹನು ಈ ಬಾದಶಹನ ಮಗನಿಗೆ ತನ್ನ ತಂಗಿಯನ್ನು ಕೊಟ್ಟರೆ, ಸೈನ್ಯದ ಸಾಮರ್ಥ್ಯ ಹೆಚ್ಚಿದ ಹಾಗಾಗುವದೋ? ಆ ಮಕ್ಕಳಿಗೆ ಮಾಡಬೇಕಾಗಿದ್ದ ಒಕ್ಕಟ್ಟನ್ನು ಗಟ್ಟಿಮುಟ್ಟಿಯಾಗಿ ಮಾಡಿಕೊಂಡು ಒಮ್ಮೆಲೆ ಜಿಟ್ಟಿಯ ಹಿಂಡಿನಂತೆ ನಮ್ಮ ಮೇಲೆ ಸಾಗಿಬರಬೇಕೆಂದು ಹೇಳಬೇಕು. ವಿಜಯನಗರದ ರಾಯರನ್ನು ಕೆಣಕುವದು ಅವರಿಗೆ ಸುಲಭವಾಗಿ ಕಂಡದೆ; ಆದರೆ ಕೆಣಕಿನೋಡಲಿ, ಜಿಟ್ಟಿಗಳ ಹಿಂಡು ಬೆಂಕಿಯಲ್ಲಿ ಪಟಪಟ ಬಿದ್ದು ನಾಶವಾಗುವಂತೆ, ಅವರು ನಾಶವಾಗಬೇಕಾದೀತು" ಎಂದು ದರ್ಬಾರದ ಜನರ ಸಮಕ್ಷ ನುಡಿದು, ಅವರಿಂದ—"ಮಹಾಪ್ರಭೋ. ಹೌದು, ಆ ಮುಸಲರ ಗತಿಯು ಹೀಗೆಯೇ ಆಗಬೇಕೆಂದು ಈಶ್ವರೀಸಂಕೇತವಿರುತ್ತದೆ. ಅಂತೇ ಅವರಿಗೆ ಅಂಥ ಬುದ್ಧಿಯು ಉತ್ಪನ್ನವಾಗಿರುವದು,

ಆಗಲಿ, ಒಮ್ಮೆ ಈ ಎಲ್ಲ ಮಹಮ್ಮದೀಯರ ಉಚ್ಛೇದವಾಗಿ ಹೋಗಲಿ. ಅಂದರೆ, ಭರತಖಂಡದಲ್ಲಿ ಸರ್ವತ್ರ ವೈದಿಕಧರ್ಮದ ಪ್ರಸಾರವಾಗುವದು'' ಎಂದು ಹೊಗಳಿಸಿಕೊಳ್ಳುವದರಲ್ಲಿಯೇ ಆ ರಾಯನ ಕಾಲಹರಣವಾಗಹತ್ತಿತು.

ಇದಕ್ಕೆ ವಿರುದ್ಧವಾದ ಸ್ಥಿತಿಯು ಮುಸಲ್ಮಾನ ಬಾದಶಹರದಿತ್ತು. ವಿಜಾಪುರದ ಅಲ್ಲಿಅದಿಲಶಹನು ಈಗ ಬಹು ದಿವಸಗಳಿಂದ ನಡಿಸಿದ್ದ ಕಪಟೋಪಾಯಗಳಿಂದ ಆತನೊಬ್ಬನೇ ವಿಜಯನಗರದ ರಾಜ್ಯವನ್ನು ಗೊತ್ತಿಗೆ ಹಚ್ಚಬಹುದಾಗಿತ್ತು, ಆದರೂ ಆತನು ಧೂರ್ತತ್ವದಿಂದ ಅಹಮ್ಮದನಗರ—ಗೋವಳಕೊಂಡಗಳ ಬಾದಶಹರ ಸಂಗಡ ಒಕ್ಕಟ್ಟು ಜೆಳಿಸಿದ್ದನು. ವಿಜಯನಗರದ ದಂಡಿನವರ ಹುಳುಕು ಬಾದಶಹನಿಗೆ ಗೊತ್ತಿದ್ದರೂ, ಆ ಪ್ರಚಂಡ ಸೈನ್ಯದಿಂದ ಎಲ್ಲಿಯಾದರೂ ತನಗೆ ಅಪಾಯ ಉಂಟಾದರೆ, ತನ್ನ ಪರಿಣಾಮವು ನೆಟ್ಟಗಾಗಲಿಕ್ಕಿಲ್ಲೆಂದು ಆತನು ಜಾಗರೂಕನಾಗಿದ್ದನು. ತಾವು ಮೂವರು ಒಕ್ಕಟ್ಟಾಗಿಯೇ ಹಿಂದುಗಳ ಪ್ರಚಂಡ ರಾಜ್ಯವನ್ನು ನಾಶ ಮಾಡಬೇಕೆಂದು ಆತನು ನಿಶ್ಚಯಿಸಿದನು. ಪರಸ್ಪರರಲ್ಲಿ ವಿಶ್ವಾಸವು ಉತ್ಪನ್ನವಾಗುವದಕ್ಕಾಗಿ ಅಹಮ್ಮದನಗರದ ಹುಸೇನ ನಿಜಾಮಶಹನು, ತನ್ನ ಮಗಳಾದ ಚಾಂದಬಿಬಿ ಎಂಬವಳನ್ನು ವಿಜಾಪುರದ ಅಲ್ಲಿಅದಿಲಶಹನಿಗೆ ಲಗ್ನ ಮಾಡಿಕೊಟ್ಟನು. ಅಲ್ಲಿಅದಿಲಶಹನು ತನ್ನ ತಂಗಿಯನ್ನು ಹುಸೇನನಿಜಾಮಶಹನ ಮಗನಿಗೆ ಲಗ್ನಮಾಡಿಕೊಟ್ಟನು. ಈ ಎಲ್ಲ ಸಂಬಂಧಗಳು ಕೇವಲ ರಾಜಕಾರಣದ ಸಲುವಾಗಿಯೇ ಆದವು. ಈ ಲಗ್ನಸಮಾರಂಭದ ನೆವದಿಂದ ಇವರ ವಕೀಲರು ಅವರ ಕಡೆಗೆ, ಅವರ ವಕೀಲರು ಇವರಕಡೆಗೆ ಎಡತಾಕಹತ್ತಿದರು. ಅವರ ಆಲೋಚನೆಗಳು ಮುಗಿದವು. ಬೇದರದ ಬರೀದಶಹನೆಂಬ ನಾಲ್ಕನೆಯ ಬಾದಶಹನೂ ಅವರನ್ನು ಬಂದುಕೂಡಿದನು. ಎಲ್ಲರೂ ತಮ್ಮ ತಮ್ಮ ಸೈನ್ಯಗಳನ್ನು ತಕ್ಕೊಂಡು ವಿಜಾಪುರಕ್ಕೆ ಬರಬೇಕೆಂತಲೂ, ಇಂಥ ಇಂಥವರು ಇಂಥ ಇಂಥಕಡೆಯಿಂದಸಾಗಿ ಹೋಗಬೇಕೆಂತಲೂ ಆಲೋಚನೆಗಳು ಆಗಹತ್ತಿದವು. ಇತ್ತ ರಾಮರಾಜನನ್ನು ವಿಚಾರಮಗ್ನನನ್ನಾಗಿ ಮಾಡುವದಕ್ಕಾಗಿ ವಿಜಾಪುರದ ಬಾದಶಹನು ರಣಮಸ್ತಖಾನನನ್ನು ಕಳಿಸಿಕೊಡುವನೆವದಿಂದ ಪತ್ರಗಳನ್ನು ಓಡಾಡಿಸಹತ್ತಿದನು. ರಣಮಸ್ತಖಾನನನ್ನು ಕಳಿಸುವದಿಲ್ಲೆಂದು ರಾಮರಾಜನು ಉತ್ತರವನ್ನು ಕಳಿಸಿದಬಳಿಕ, ಬಾದಶಹನು ಮತ್ತೆ ತನ್ನ ವಕೀಲನನ್ನು ಕಳಿಸಿ ವಿಜಯನಗರದ ರಾಜ್ಯದ ಹದ್ದಿನಲ್ಲಿರುವ ಕೆಲವು ಕೋಟೆಗಳನ್ನು ಕೊಡಬೇಕೆಂದು ರಾಮರಾಜನನ್ನು ಕೇಳಿದನು. ತನ್ನ ವಕೀಲನನ್ನು ಅಪಮಾನಗೊಳಿಸಿ

ಕಳಿಸಿಕೊಡಬೇಕೆಂತಲೇ ಬಾದಶಹನು ಹೀಗೆ ರಾಮರಾಜನ ಒಳಿಗೆ ವಕೀಲನನ್ನು ಕಳಿಸಿಕೊಟ್ಟಿದ್ದನು. ಯಾಕಂದರೆ, ಒಡಂಬಡಿಕೆಯ ಕರಾರುಗಳನ್ನು ಮುರಿಯಲಿಕ್ಕೆ ರಾಮರಾಜನಿಂದ ಕೆಲವು ಕಾರಣಗಳು ಒದಗಿದವೆಂದು ತೋರಿಸುವದು ಬಾದಶಹನ ಉದ್ದೇಶವಾಗಿತ್ತು.

ಸಂಕಟಗಳು ಒದಗಬಹುದೆಂಬ ಸಂಶಯವಿರುವವರೆಗೆ ರಾಮರಾಜನು ಯಾವ ಲಕ್ಷವಿಲ್ಲದವನಂತೆ ವರ್ತಿಸಿದನು; ಆದರೆ ಶತ್ರುಗಳ ಸೈನ್ಯಗಳು ವಿಜಾಪುರದಲ್ಲಿ ಒಟ್ಟುಗೂಡಿದವೆಂಬದನ್ನು ಕೇಳಿದ ಕೂಡಲೆ ಎಚ್ಚತ್ತು ತನ್ನ ಸೈನ್ಯವನ್ನು ವ್ಯವಸ್ಥಗೊಳಿಸಹತ್ತಿದನು. ಶತ್ರುಗಳ ಪ್ರಚಂಡ ಸೈನ್ಯದ ಮುಂದೆ ತನ್ನ ಸೈನ್ಯವು ತಡೆಯಲಿಕ್ಕಿಲ್ಲೆಂದು ಆತನಿಗೆ ತೋರಹತ್ತಿತು. ಆವನು ಈ ಪ್ರಸಂಗದಲ್ಲಿ ತಾನು ಕೈಕಾಲುಗೆಡುವದು ಯೋಗ್ಯವಲ್ಲೆಂದು ತಿಳಿದು, ತುಂಗಭದ್ರೆಯ ಕಾಲಹೊಳೆಯಿರುವ ಕಡೆಯಿಂದ ಶತ್ರುಗಳು ಬಾರದಂತೆ ಮಾಡಿ, ಪ್ರಸಂಗನೋಡಿ ತಾನು ತುಂಗಭದ್ರೆಯನ್ನು ಆ ಮಾರ್ಗದಿಂದ ದಾಟಿಹೋಗಿ, ಶತ್ರುಗಳ ಮೇಲೆ ಬೀಳಬೇಕೆಂದು ಮಾಡಿದನು. ಈ ಕೆಲಸಕ್ಕಾಗಿ ತಿರುಮಲನನ್ನು ನಿಯಮಿಸಿದನು. ವೇಂಕಟಾದ್ರಿ, ಇಳೋತ್ತಮರಾಯರೆಂಬವರ ಕೈಯಲ್ಲಿ ದೊಡ್ಡ ದೊಡ್ಡ ಸೈನ್ಯಗಳನ್ನು ಕೊಟ್ಟು, ಬೇರೆ ಬೇರೆ ಕಡೆಯಲ್ಲಿ ಶತ್ರುಗಳನ್ನು ತಡಬಲು ನಿಯಮಿಸಿದನು. ತಾನು ಸ್ವತಃ ಮಧ್ಯಭಾಗದಲ್ಲಿದ್ದು, ತನ್ನ ಸಂರಕ್ಷಣಕ್ಕಾಗಿ ರಣಮಸ್ತಖಾನನಿಂದ ನಡಿಸಲ್ಪಡುತ್ತಿರುವ ಪಠಾಣ ಸೈನ್ಯವನ್ನು ಇಟ್ಟುಕೊಳ್ಳಬೇಕೆಂದು ಮಾಡಿದನು. ರಾಮರಾಜನು ರಣಮಸ್ತಖಾನನನ್ನು ಬೇರೆ ಕಡೆಗೆ ಕಳಿಸಲಿಲ್ಲ. ಪ್ರಸಂಗದಲ್ಲಿ ಈ ಸ್ವಾಮಿದ್ರೋಹಿಯಾದ ರಣಮಸ್ತನೇ ಬಾದಶಹನ ಮೇಲಿನ ಸಿಟ್ಟಿನಿಂದ ತನಗೆ ಮನಮುಟ್ಟಿ ಸಹಾಯ ಮಾಡಬಹುದೆಂದು ಆ ರಾಯನು ತಿಳಿದುಕೊಂಡನು. ಆತನು ರಣಮಸ್ತನಿಗೆ—"ನಿನ್ನನ್ನು ವಿಜಾಪುರಕ್ಕೆ ಕಳಿಸದೆ ಇದ್ದದ್ದರಿಂದ ಎಲ್ಲ ಬಾದಶಹರು ಒಟ್ಟುಗೂಡಿ ನಮ್ಮ ಮೇಲೆ ಯುದ್ಧಕ್ಕೆ ಬರಬೇಕಾಯಿತು. ಆದರೆ ಪೃಥ್ವಿಯೊಳಗಿನ ಎಲ್ಲ ಬಾದಶಹರು ಒಟ್ಟುಗೂಡಿ ಬಂದರೂ ನಾವು ಹೆದರುವ ಹಾಗಿಲ್ಲ. ನಾವು ಸ್ವಸ್ಥ ಕುಳಿತುಕೊಳ್ಳುವದರಿಂದ ಯುದ್ಧವು ನಡೆಯದೆಂದು ತಿಳಿದು, ನಾವು ಈಗ ಮುಂದಕ್ಕೆ ಸಾಗಿ ಹೋಗಬೇಕಾಗಿರುವದು. ಮುಂದಕ್ಕೆ ಸಾಗಿ ಹೋದ ಕೂಡಲೆ ತುಂಗಭದ್ರೆಯ ಕಾಲಹೊಳೆಯ ಕಡೆಯಲ್ಲಿಯೇ ಶತ್ರುಗಳ ದೂಳ ಹಾರಿಸಬೇಕು; ಅಂದರೆ ಅವರು ಮುಂದಕ್ಕೆ ಸಾಗಿ ಬರಲಾರರು" ಅನ್ನಲು, ಅದಕ್ಕೆ ರಣಮಸ್ತಖಾನನು ತಲೆಯಲ್ಲಾಡಿಸಿ—ನನ್ನ ಮೇಲೆ ನಿಮ್ಮ ವಿಶ್ವಾಸವು ಕುಳಿತುಕೊಳ್ಳುವಂತೆ ನನ್ನ ಕೈಯಿಂದ ಏನಾದರೂ

ಕೆಲಸವಾಗಬೇಕಾಗಿರುವದು; ಆದ್ದರಿಂದ ನನ್ನನ್ನು ಆ ತುಂಗಭದ್ರೆಯ ಕಾಲ ಹೊಳೆಯ ಕಡೆಗೆ ಕಳಿಸಿ ನನ್ನ ಪರಾಕ್ರಮವನ್ನು ನೋಡಿರಿ. ಶತ್ರುಗಳನ್ನು ಎಲ್ಲಿಯೋ ಒತ್ತಟ್ಟಿಗೆ ಒಯ್ದು, ಅವರಲ್ಲಿ ಒಬ್ಬನೂ ಉಳಿಯದಂತೆ ವ್ಯವಸ್ಥೆ ಮಾಡುವೆನು'' ಎಂದು ಹೇಳಿದನು. ಈ ಮಾತುಗಳನ್ನು ಕೇಳಿ ರಾಮರಾಜನಿಗೆ ಕೌತುಕವಾಯಿತು. ಆದರೆ ಆತನು ರಣಮಸ್ತಖಾನನನ್ನು ಕುರಿತು—"ನೀನು ಇನ್ನೂ ಹುಡುಗನು. ನಿನ್ನನ್ನು ಅಂಥ ಮಹತ್ವದ ಸ್ಥಳಕ್ಕೆ ಕಳಿಸಿದರೆ, ನಮ್ಮ ಸೈನಿಕರು ಹ್ಯಾಗೆ ಒಡಂಬಟ್ಟಾರು? ಆ ಕೆಲಸವನ್ನು ನನ್ನ ಬಂಧುವಾದ ತಿರುಮಲನು ಮಾಡುವನು. ಆತನೇ ಆ ಕೆಲಸಮಾಡಲಿಕ್ಕೆ ಖಂಬೀರನು. ನೀನು ಮಧ್ಯಭಾಗದಲ್ಲಿಯೇ ಇರಬೇಕಾಗಿರುವದು. ನಿನ್ನ ಪರಾಕ್ರಮವನ್ನು ನಾನು ಕಣ್ಣುಮುಟ್ಟ ನೋಡಬೇಕಾಗಿದೆ'' ಎಂದು ಹೇಳಿದನು. ಆಗ ರಣಮಸ್ತಖಾನನು ನಿರ್ವಾಹವಿಲ್ಲದೆ—"ಹಾಗೇ ಆಗಲಿ, ನನ್ನ ಪರಾಕ್ರಮವನ್ನು ತಾವು ಕಣ್ಣುಮುಟ್ಟ ನೋಡಬಹುದು. ಅದನ್ನು ತಮಗೆ ತೋರಿಸುವ ಇಚ್ಛೆಯು ನನಗೆ ವಿಶೇಷವಾಗಿರುತ್ತದೆ. ಶತ್ರುವು ಮೈಮೇಲೆ ಬಂದು ಬೀಳಲಂದರಾಯಿತು. ಆಗ ನನ್ನ ಹಾಗು ನನ್ನ ಸೈನ್ಯದ ಪರಾಕ್ರಮವು ಗೊತ್ತಾಗುವದು'' ಎಂದು ಹೇಳಿದನು. ರಣಮಸ್ತಖಾನನು ಹೀಗೆ ಸಮಾಧಾನದಿಂದ, ಆದರೆ ದಿಮಾಕಿನಿಂದ ಕೊಟ್ಟ ಉತ್ತರವನ್ನು ಕೇಳಿ, ರಾಮರಾಜನು ಬಹಳ ಸಂತೋಷಪಟ್ಟು—"ನೀನು ನಿಜವಾದ ಶೂರನ ಹೊಟ್ಟೆಯಲ್ಲಿ ಹುಟ್ಟಿರುವೆ'' ಎಂದು ನುಡಿದನು. ಹೀಗೆ ನುಡಿಯುವಾಗ ರಣಮಸ್ತನನ್ನು ಆತನು ಅತ್ಯಂತ ವಾತ್ಸಲ್ಯದಿಂದ ಎವೆಯಿಕ್ಕದೆ ನೋಡಿದನು. ಈ ಸಂಭಾಷಣಗಳಾದ ಒಂದೆರಡು ದಿನಗಳ ಮೇಲೆ ಶತ್ರುಗಳ ಸೈನ್ಯಗಳು ವಿಜಾಪುರದಿಂದ ಹೊರಟು ಮುಂದಕ್ಕೆ ಸಾಗಿಬಂದವೆಂಬ ಸುದ್ದಿಯು ಬಂದಿತು. ವಿಜಯನಗರದಲ್ಲಿದ್ದ ವಿಜಾಪುರದ ವಕೀಲನು ಹೊರಟುಹೋದನು. ಇನ್ನು ಮೇಲೆ ಯುದ್ಧವು ನಿಶ್ಚಯವಾಗಿ ಆರಂಭವಾಗುವದೆಂದು ಎಲ್ಲರಿಗೆ ಗೊತ್ತಾಯಿತು; ಆದರೆ ರಾಮರಾಜನು ತನ್ನ ಮತದಿಂದ ಪರಮಾವಧಿಯಾಗಿ ಸೈನ್ಯವನ್ನು ಸಜ್ಜುಗೊಳಿಸಿದ್ದರಿಂದ, ಆತನಿಗೆ ಯಾತರ ಹೆದರಿಕೆಯೂ ಇದ್ದಿಲ್ಲ.

ರಾಮರಾಜನು ಸ್ವಚ್ಛಂದವೃತ್ತಿಯವನು. ಒಮ್ಮೆ ಏನಾದರೂ ಮಾಡಬೇಕೆಂದು ಅವನ ಮನಸ್ಸಿನಲ್ಲಿ ಹೊಕ್ಕರೆ, ಅದನ್ನು ಅವನು ಮಾಡಿಯೇ ತೀರುವನು. ರಣಮಸ್ತಖಾನನು ತನ್ನ ಮಗನೆಂತಲೂ, ಮಾಸಾಹೇಬರು ತನ್ನ ಪ್ರಿಯ ಮೆಹೇರಜಾನಳೆಂತಲೂ, ಲೈಲಿಯು ಆಕೆಯ ದಾಸಿಯೆಂತಲೂ ಆತನು ನಿಶ್ಚಯಿಸಿದ್ದನು. ಧನಮಲ್ಲನು ಆತನ ನಿಶ್ಚಯವನ್ನು ಬಲಪಡಿಸಿದ್ದನು. ಆದ್ದರಿಂದ

ತಾನು ಒಮ್ಮೆ ಪ್ರತ್ಯಕ್ಷ ಮೇಹೇರಜಾನಳನ್ನು ಕಂಡು ಆಕೆಯ ಕ್ಷಮೆ ಬೇಡಬೇಕೆಂದು ಒಮ್ಮೆ ರಾತ್ರಿ ಆತನು ಕುಂಜವನಕ್ಕೆ ಹೋದದ್ದನ್ನು ವಾಚಕರು ಬಲ್ಲರು, ಆಗ ಮಾಸಾಹೇಬರು ಪುಷ್ಕರಣಿಯಲ್ಲಿ ಹಾರಿಕೊಂಡರೆಂತಲೂ, ಅವರ ಹಿಂದೆಯೇ ರಾಮರಾಜನು ಹಾರಿಕೊಂಡನೆಂತಲೂ ವಾಚಕರು ನೆನಪಿನಲ್ಲಿಟ್ಟುಕೊಂಡಿರಬಹುದು. ಈ ಪ್ರಸಂಗ ಒದಗಿದ ಬಳಿಕ ಕುಂಜವನದಲ್ಲಿ ರಣಮಸ್ತ ಖಾನನ ಜನರು ಯಾರೂ ಉಳಿದಿದ್ದಿಲ್ಲ. ಒಂದು ರೀತಿಯಿಂದ ಈಗ ಕುಂಜವನವು ಹಾಳುಬಿದ್ದಂತೆ ಆಗಿತ್ತು. ಇತ್ತ ಮೂವರು ಬಾದಶಹರು ವಿಜಯನಗರದ ಮೇಲೆ ಸಾಗಿಬರುತ್ತಿರುವರೆಂಬ ಸುದ್ದಿಗಳು ಬರತೊಡಗಿದ್ದವು. ಈ ಸ್ಥಿತಿಯಲ್ಲಿ ರಾಮರಾಜನು ನಿಶ್ಚಿಂತಪುರುಷನಂತೆ ಕುಂಜವನಕ್ಕೆ ಹೋಗಿ, ಅಲ್ಲಿಯ ಕಾವಲುಗಾರರಿಗೆ—"ನೀವು ಕುಂಜವನವನ್ನೂ, ಅಲ್ಲಿಯ ಬಂಗಲೆಗಳನ್ನೂ, ಪುಷ್ಕರಣಿಯನ್ನೂ ಮೊದಲಿನಂತೆ ಇನ್ನು ನಾಲ್ಕು ದಿನಗಳಲ್ಲಿ ಶೃಂಗರಿಸಲಿಕ್ಕೆ ಬೇಕೆಂದು" ಆಜ್ಞಾಪಿಸಿದನು. ಸಾವಿರಾರು ಜನರನ್ನು ಬಿಟ್ಟಿಯಹಿಡಿದರೂ ಚಿಂತೆಯಿಲ್ಲ, ಕುಂಜವನವು ಮೊದಲಿನಂತೆ ಆಗಲಿಕ್ಕೆ ಬೇಕೆಂತಲೂ, ಹಾಗೆ ಆಗದಿದ್ದರೆ ನಿಮಗೆ ಶಾಸನವಾದೀತೆಂತಲೂ, ನಿಷ್ಠುರವಾಗಿ ಹೇಳಿದನು. ಯುದ್ಧ ಪ್ರಸಂಗ ಒದಗಿರಲು ರಾಮರಾಜನು ಹೀಗೆ ತೋಟಪಟ್ಟಿಗಳ ವ್ಯವಸ್ಥೆ ಮಾಡುವದನ್ನು ನೋಡಿ, ಕಾವಲಗಾರರಿಗೆ ಆಶ್ಚರ್ಯವಾಯಿತು; ಆದರೆ ರಾಮರಾಜನಿಗೆ ವಿರುದ್ಧವಾಗಿ ಯಾರು ಮಾತಾಡಬೇಕು? ಅವರು ಈ ಕುಂಜವನದಲ್ಲಿಯೇ ಯುದ್ಧದ ಒಳಸಂಚುಗಳೇನಾದರೂ ನಡೆಯಬೇಕಾಗಿರಬಹುದೆಂದು ತಿಳಿದರು. ಹ್ಯಾಗಿದ್ದರೂ ಅವರು ರಾಮರಾಜನ ಅಪ್ಪಣೆಯಂತೆ ನಡೆಯಲೇ ಬೇಕಾಗಿತ್ತು. ಅವರು ಹಗಲು ರಾತ್ರಿ ಶ್ರಮಪಟ್ಟು ನಾಲ್ಕು ದಿನಗಳಲ್ಲಿ ಕುಂಜವನವನ್ನು ಶೃಂಗರಿಸಿದರು. ಮೂರನೆಯ ದಿವಸ ಸಂಜೆಗೇ ಮೇಹೇರಜಾನಳೂ, (ಮಾಸಾಹೇಬರೂ) ಮಾರ್ಜಿನೆಯೂ ಎಲ್ಲಿಂದಲೋ ಕುಂಜವನಕ್ಕೆ ಬಂದು ತಾವು ಹಿಂದಕ್ಕೆ ಇದ್ದ ಬಂಗಲೆಯಲ್ಲಿ ಇರತೊಡಗಿದರು. ಹೀಗೆ ಇವರಿಬ್ಬರು ಹೆಣ್ಣು ಮಕ್ಕಳು ಎಲ್ಲಿಗೋ ಹೋದವರು, ಅಕಸ್ಮಾತ್ತಾಗಿ ಬಂದದ್ದನ್ನು ನೋಡಿ ಕಾವಲುಗಾರರಿಗೆ ಪರಮಾಶ್ಚರ್ಯವಾಯಿತು. ಅವರಿಗೆ ಮಾಸಾಹೇಬರು ಪುಷ್ಕರಣಿಯಲ್ಲಿ ಹಾರಿಕೊಂಡರೆಂಬದು ಗೊತ್ತಿದ್ದಿಲ್ಲ. ಮಾಸಾಹೇಬರು ತಮ್ಮ ದಾಸಿಯೊಡನೆ ಎಲ್ಲಿಯೋ ಹೋದರೆಂದು ಅವರು ತಿಳಕೊಂಡಿದ್ದರು.

ಪುಷ್ಕರಣಿಯಲ್ಲಿ ಹಾರಿಕೊಂಡ ಮಾಸಾಹೇಬರನ್ನು ರಾಮರಾಜನು ಹೊರಗೆ ತೆಗೆದು, ಕುಂಜವನದಿಂದ ಹೊರಡಿಸಿ ಬೇರೆ ಕಡೆಯಲ್ಲಿಡಿಸಿದ್ದನು; ಆವರೆ ಅವರಿಗೆ ತನ್ನ ಗುರುತು ಹತ್ತಗೊಟ್ಟಿದ್ದಿಲ್ಲ; ಅವರೊಡನೆ ತಾನು ಮಾತಾಡಿ

ದ್ದಿಲ್ಲ. ತಮ್ಮನ್ನು ರಾಮರಾಜನೇ ತೆಗೆದನೆಂದು ಮಾಸಾಹೇಬರಿಗೂ ಗೊತ್ತಾಗಿ ದ್ದಿಲ್ಲ. ಅವರು ಎಚ್ಚರದಪ್ಪಿಬಿದ್ದವರು ತಿರುಗಿ ಎಚ್ಚತ್ತು ನೋಡುವಾಗ ಯಾವ ಮನೆಯಲ್ಲಿಯೋ ಮಂಚದಮೇಲೆ ಮಲಗಿದ್ದರು. ತಾವು ಪುನಃ ಬದುಕಿ ಉಳಿ ದದ್ದಕ್ಕಾಗಿ ಅವರಿಗೆ ಪರಮಾವಧಿ ವ್ಯಸನವಾಗಿತ್ತು. ಅದರಲ್ಲಿ ಅವರು ಕುಂಜ ವನವನ್ನು ಸ್ಮರಿಸಲು ಕೂಡ ಇಚ್ಛಿಸದಿರುವಾಗ, ಈಗ ಪುನಃ ಕುಂಜವನದ ವಾ ಸವು, ಅದರಲ್ಲಿ ತಾವು ಹಿಂದಕ್ಕೆ ತಾರುಣ್ಯದಲ್ಲಿ ಇದ್ದ ಬಂಗಲೆಯಲ್ಲಿಯೇ ಇರುವ ಪ್ರಸಂಗವು ಒದಗಿದ್ದರಿಂದ ಅವರಿಗೆ ಬಹಳ ವ್ಯಸನವಾಯಿತು. ಅವರಿಗೆ ಅನ್ನ-ನೀರುಗಳು ಬೇಡಾದವು. ಲೈಲಿಯ ಸಂಗಡ ಸಹ ಅವರು ಅಪರೂಪವಾಗಿ ಮಾ ತಾಡಹತ್ತಿದರು. ಹೀಗಿರುವಾಗ ಧನಮಲ್ಲನು ಅವರ ಕಣಿಗೆ ಬಿದ್ದನು. ಅವನನ್ನು ಕಂಡಕೂಡಲೆ ಭಯದಿಂದ ಮಾಸಾಹೇಬರ (ಮೇಹೇರಜಾನಳ) ಸರ್ವಾಂಗದಲ್ಲಿ ಕಂಪವು ಉತ್ಪನ್ನವಾಯಿತು. ಈ ಕೃಷ್ಣ ಸರ್ಪವು ಹಿಂದಕ್ಕೆ ಒಂದು ಸಾರೆ ಅಕ ಸ್ಮಾತ್ ಬಂದು, ನಡುವೆ ಕೆಲವು ದಿನ ಅಕಸ್ಮಾತ್ ಗುಪ್ತವಾಗಿ, ಈಗ ಮತ್ತೆ ಎ ಲ್ಲಿಂದ ಬಂತೆಂದು ಅವರು ಚಿಂತಿಸಿದರು. ಪುನಃ ಈತನು ಮೊದಲಿನಂತೆ ರಾಮ ರಾಜನ ನೌಕರನಾಗಿ ನನ್ನನ್ನು ಕಾಯಲಿಕ್ಕೆ ಬಂದಿರುವನೆಂದು ಅವರು ತರ್ಕಿ ಸಿದರು. ಧನಮಲ್ಲನು ಮೊದಲಿನಂತೆ ಮೂಕನಾಗಿಯೇ ಇದ್ದನು. ಇದನ್ನೆಲ್ಲ ಮ ನಸ್ಸಿನಲ್ಲಿ ತಂದು ಮಾಸಾಹೇಬರು ತಮ್ಮ ಲೈಲಿಯನ್ನು ಕುರಿತು—ಲೈಲಿ, ಈ ಅರಿಷ್ಟವು ಮತ್ತೆ ಎಲ್ಲಿಂದ ಬಂದಿತು? ಇದನ್ನು ನೋಡಿದ ಕೂಡಲೆ ನನ್ನ ಹೃದ ಯವು ತಲ್ಲಣಿಸುತ್ತದೆ. ಈ ದುರುಳನಿಂದ ನನ್ನ ಅಂತವಾಗುವದೆಂಬ ಭಾವನೆ ಯು ನನಗಾಗಹತ್ತಿದೆ. ಈತನನ್ನು ಹೊರಗೆ ಹಾಕುವುದಂತು ನನ್ನ ಕೈಯೊಳ ಗಿಲ್ಲ; ಆದರೆ ನೀನು ಈತನು ನನ್ನ ಕಣ್ಣಿಗೆ ಬೀಳದಂತೆ ಮಾಡು, ಎಂದು ಹೇಳಿ ದರು. ಈಗ ಲೈಲಿಯ ಕೈಯಿಂದ ಏನೂ ಆಗುವಹಾಗಿದ್ದಿಲ್ಲ; ಆದರೆ ಕರ್ಮ ಧರ್ಮ ಸಂಯೋಗದಿಂದ ರಾಮರಾಜನೇ ಧನಮಲ್ಲನಿಗೆ ಬಂಗಲೆಯೊಳಗೆ ಹೋಗಲಾಗ ದೆಂದು ಆಜ್ಞಾಪಿಸಿದ್ದನು. ಮಾಸಾಹೇಬರು ಹೊರಗೆ ಬಾರದಂತೆಯೂ, ಹೊರಗೆ ಬಂದರೂ ಪುಷ್ಕರಣಿಯ ಕಡೆಗೆ ಅವರು ಹೋಗದಂತೆಯೂ, ಪುಷ್ಕರಣಿಯ ಕಡೆಗೆ ಹೋದರೂ ಪುಷ್ಕರಣಿಯಲ್ಲಿ ಅವರು ಕಾಲು ಇಡದಂತೆಯೂ, ಪುಷ್ಕರಣಿಯಲ್ಲಿ ಕಾಲು ಇಟ್ಟರೂ ಅವರು ಪುಷ್ಕರಣಿಯಲ್ಲಿ ಹಾರಿಕೊಳ್ಳದಂತೆಯೂ, ಅವರು ಪುಷ್ಕ ರಣಿಯಲ್ಲಿ ಹಾರಿಕೊಂಡರೂ ನೀನು ಕೂಡಲೆ ಅವರನ್ನು ಹೊರಗೆ ತೆಗೆದು ನನಗೆ ಸುದ್ದಿಯನ್ನು ಮುಟ್ಟಿಸುವಂತೆಯೂ ವ್ಯವಸ್ಥೆ ಮಾಡಬೇಕೆಂದು ರಾಮರಾಜನು ಧನಮಲ್ಲನಿಗೆ ಹೇಳಿದ್ದನು. ಆದ್ದರಿಂದ ಧನಮಲ್ಲನು ಬಂಗಲೆಯ ಹೊರಗೇ ಅವ ನ್ನ. ಸುತ್ತುಮುತ್ತು ಕಾಯುತ್ತಲಿದ್ದನು.

ಹೀಗಿರುವಾಗ, ರಾಮರಾಜನು ಬಂದನೆಂಬ ಸುದ್ದಿಯನ್ನು ಒಬ್ಬಸೇವಕನು ಮಾಸಾಹೇಬರ ಬಳಿಗೆ ಬಂದು ಹೇಳಿದನು. ಅದನ್ನು ಕೇಳಿದ ಕೂಡಲೆ ಮಾಸಾಹೇಬರ ಹುಬ್ಬುಗಳು ಗಂಟಿಕ್ಕಿದವು. ಅವರ ಸರ್ವಾಂಗವು ಸಂತಪ್ತವಾಯಿತು. ಮುಖವು ಕೆಂಪಾಯಿತು. ತುಟಿಗಳು ಥರಥರ ನಡುಗಹತ್ತಿದವು. ಅವರು ಆ ಸೇವಕನಿಗೆ—" ಹೋಗು, ನೀನು ಹೋಗಿ ಅವರಿಗೆ ಸ್ಪಷ್ಟವಾಗಿ ಹೇಳು. ನಾನು ಪರಪುರುಷರ ಮುಖವನ್ನು ನೋಡುವುದಿಲ್ಲ. ನಾನು ಪರಾಧೀನಳಿರುವೆನೆಂದು ತಿಳಿದು, ಬಲಾತ್ಕಾರದಿಂದ ಅವರು ಒಳಗೆ ಬಂದರೆ, ಅದರ ಪರಿಣಾಮವು ನೆಟ್ಟಗಾಗಲಿಕ್ಕಿಲ್ಲ" ಎಂದು ನುಡಿದು, ಮಾಸಾಹೇಬರು ತಮ್ಮ ಬುರುಕಿಯನ್ನು ಮೈತುಂಬ ಹೊದ್ದುಕೊಂಡರು. ಈ ಪ್ರಸಂಗವನ್ನು ನೋಡಿ ಲೈಲಿಯು ಇನ್ನು ಪರಿಣಾಮವು ನೆಟ್ಟಗಾಗದೆಂದು ಭಾವಿಸಿ, ಒಮ್ಮೆ ಮಾಸಾಹೇಬರನ್ನೂ, ಒಮ್ಮೆ ಸೇವಕನನ್ನೂ ನೋಡುತ್ತ ನಿಂತುಕೊಂಡಳು. ಇತ್ತ ಸೇವಕನು ಇಂಥ ಉದ್ಧಟತನದ ಉತ್ತರವನ್ನು "ಮಹಾರಾಜರ ಮುಂದೆ ಹ್ಯಾಗೆ ಹೇಳಬೇಕೆಂದು ಯೋಚಿಸುತ್ತ ಕೆಲವು ಹೊತ್ತು ಸುಮ್ಮನೆ ನಿಂತುಕೊಂಡನು. ರಾಮರಾಜನ ಬಳಿಗೆ ಹೋಗಲಿಕ್ಕೆ ಆತನ ಕಾಲುಗಳು ಏಳದಾದವು. ಕಡೆಗೆ ಆತನು ದಾಸಿಯ ಕಡೆಗೆ ಹೊರಳಿ, ಆಕೆಯನ್ನು ಕುರಿತು—" ಮಹಾರಾಜರಿಗೆ ಈ ಮಾತುಗಳನ್ನು ನಾನು ಹ್ಯಾಗೆ ಹೇಳಲಿ? ಮಹಾರಾಜರನ್ನು ಇಲ್ಲಿಂದ ಹೊರಗೆ ಹಾಕಲಿಕ್ಕೆ ಯಾರು ಸಮರ್ಥರು? ನಾನು ಹೋಗಿ ಹೀಗೆ ಇದ್ದಕ್ಕಿದ್ದ ಹಾಗೆ ಹೇಳಿದರೆ ಅವರು ನನ್ನ ತಲೆ ಹಾರಿಸುವುದರಲ್ಲಿ ಸಂಶಯವಿಲ್ಲ. ನೀವು ಮೊದಲು ಮಹಾರಾಜರನ್ನು ಒಳಗೆ ಬರಗೊಡಿರಿ ಆಮೇಲೆ ಏನು ಹೇಳುವುದನ್ನು ಅವರ ಮುಂದೆ ಹೇಳಿಬಿಡಿರಿ; ಆದರೆ ಇಂಥ ಭಯಂಕರವಾದ ಉತ್ತರವನ್ನು ಹೇಳುವ ಪ್ರಸಂಗವನ್ನು ನನ್ನ ಪಾಲಿಗೆ ಮಾತ್ರ ತರಬೇಡಿರಿ" ಎಂದು ಹೇಳಿದನು. ಅದಕ್ಕೆ ಮಾಸಾಹೇಬರು ಏನೂ ಮಾತಾಡಲಿಲ್ಲ; ಆದರೆ ಅವರ ಬಲವನ್ನು ನೋಡಿ ಲೈಲಿಯು, ಆ ಸೇವಕನನ್ನು ಕುರಿತು-ಅಪ್ಪಾ, ನೀನೇನು, ಹೇಳಿಕೇಳಿ ನೌಕರನು. ಕೈಯೊಳಗಿನ ಕಲ್ಲು ಇದ್ದ ಹಾಗೆ. ಅವರ ಮಾತನ್ನು ಇಲ್ಲಿ ಹೇಳಿದಂತೆ, ಇವರ ಮಾತನ್ನು ಅಲ್ಲಿ ಹೇಳಿ ಬಿಡೆಂದರಾಯಿತು. ಸುಮ್ಮನೆ ನಿನ್ನ ತಲೆ ಯಾಕೆ ಹಾರಿಸುವರು? ಹೋಗು, ಈಗ ಹೇಳಿದಷ್ಟು ನಿಮ್ಮ ಮಹಾರಾಜರ ಮುಂದೆ ಹೇಳು ಹೋಗು, ಎಂದು ಹೇಳಿದಳು; ಆದರೂ ಆ ಸೇವಕನ ಕಾಲುಗಳು ಏಳಲೊಲ್ಲವು ಆತನು ಸ್ವಲ್ಪ ಹೊತ್ತು ಅಲ್ಲಿಯೇ ನಿಂತುಕೊಂಡು—ಮಾಸಾಹೇಬ, ನಿಮ್ಮ ಈ ಮಾತುಗಳ ಪರಿಣಾಮವು ನೆಟ್ಟಗಾಗಲಿಕ್ಕಿಲ್ಲ ಎಂದನು. ಅವನ್ನು ಕೇಳಿ ಮಾಸಾಹೇಬರು ಸ್ವಲ್ಪ ಹೊತ್ತು ಸಂತಾಪದಿಂದ ಏನೂ ಮಾತಾಡಲಿಲ್ಲ. ಆಮೇಲೆ ಅವರು ಆ ಸೇವಕನನ್ನು ಕುರಿ

ತು ತಟ್ಟನೆ—" ನನ್ನನ್ನು ಛಲಿಸಬೇಕೆಂದು ನಿಮ್ಮ ಮಹಾರಾಜರು ನಿನ್ನನ್ನು ನನ್ನ ಬಳಿಗೆ ಕಳಿಸಿರುವರೋ ಏನು? ನಾನು ಕೊಟ್ಟ ಉತ್ತರವನ್ನು ನಿನ್ನ ಒಡೆಯನಿಗೆ ಹೇಳು. ಮತ್ತು ಸ್ಪಷ್ಟವಾಗಿ ಬೇಗೆಯೂ ತಿಳಿಸು—ವೈರಿಗಳ ಕಡೆಯ ಹೆಣ್ಣುಮಕ್ಕಳನ್ನು ಬೇಗೆ ಪ್ರತಿಬಂಧದಲ್ಲಿಟ್ಟು, ಈವರೆಗೆ ಯಾವ ಬಿಂದೂ ಅರಸನೂ ಪೀಡಿಸಿರುವುದಿಲ್ಲ; ಅಂಥ ನೀಚ ಕೆಲಸವನ್ನು ಈಗ ನೀವು ಮಾಡಿ ಕೀರ್ತಿಯನ್ನು ಸಂಪಾದಿಸುವಿರಿ. ಇದರಿಂದ ನಿಮ್ಮ ವಂಶದ, ಹಾಗು ಇಡಿಯ ಕ್ಷತ್ರಿಯ ಕುಲದ ಉದ್ಧಾರವು ಬಹಳ ಚನ್ನಾಗಿ ಆಗುವುದು!"

ಮಾಸಾಹೇಬರ ಈ ಮಾತುಗಳನ್ನು ಕೇಳಿ, ಇನ್ನು ಈ ಹೆಣ್ಣು ಮಗಳ ಮುಂದೆ ನಿಂತುಕೊಳ್ಳುವುದರಲ್ಲಿ ಅರ್ಥವಿಲ್ಲೆಂದು ತಿಳಿದು, ಆ ಸೇವಕನು ರಾಮರಾಜನ ಬಳಿಗೆ ಹೋಗಿ ತನ್ನಿಂದಾದಷ್ಟು ಸೌಮ್ಯ ರೀತಿಯಿಂದ, ಎಡಬಿಡಚಾಗುತ್ತ ಮಾಸಾಹೇಬರು ಕೊಟ್ಟ ಉತ್ತರವನ್ನು ಹೇಳಿದನು. ಅದರಿಂದ ರಾಮರಾಜನ ಸಮಾಧಾನವಾಗಲಿಲ್ಲ. ಸೇವಕನು ಏನೋ ಮುಚ್ಚುತ್ತಾನೆಂದು ತಿಳಿದು ರಾಮರಾಜನು ಆತನನ್ನು ಕುರಿತು—" ನೀನು ಯಥಾಸ್ಥಿತವಾಗಿ ಇದ್ದದ್ದನ್ನೆಲ್ಲ ಹೇಳು. ಒಂದು ಮಾತನ್ನು ಸಹ ಮುಚ್ಚಬೇಡ, ಎಂದು ಗದ್ದರಿಸಿದನು. ಆಗ ಸೇವಕನು ನಿರುಪಾಯನಾಗಿ, ಮಾಸಾಹೇಬರು ಆಡಿದ ಎಲ್ಲ ಮಾತುಗಳನ್ನು ಇದ್ದಕ್ಕಿದ್ದ ಹಾಗೆ ಹೇಳಿದನು. ಅದನ್ನು ಕೇಳಿ ರಾಮರಾಜನು ಅರ್ಧ ತಾಸು ಸುಮ್ಮನೆ ನಿಂತುಕೊಂಡನು. ಆಮೇಲೆ ಆತನು ಸೇವಕನಿಗೆ—ಆಕೆಯ ವೃದ್ಧ ದಾಸಿಯಾದ ಲೈಲಿಯು ಇರುತ್ತಾಳಲ್ಲ, ಆಕೆಯನ್ನು ಇತ್ತಕಡೆಗೆ ಕರಕೊಂಡು ಬಾ ಎಂದು ಹೇಳಿದನು. ಅದರಂತೆ ಸೇವಕನು ಹೋಗಿ ಲೈಲಿಯನ್ನು ಕರೆದನು. ಲೈಲಿಯು ಮಾಸಾಹೇಬರ ಕಡೆಗೆ ನೋಡಿ ಏನೋ ಮಾತಾಡಬೇಕೆನ್ನುತ್ತಿರಲು, ಮಾಸಾಹೇಬರು—ಹೋಗು, ನೀನು ಹೋಗಲಿಕ್ಕೇನೂ ಪ್ರತಿಬಂಧವಿಲ್ಲ; ಆದರೆ ಆತನು ನನ್ನ ಬಳಿಗೆ ಬರಲಾಗದು. ಸರ್ವಥಾ ಇಲ್ಲಿಗೆ ಬರಲಾಗದೆಂದು ಆತನಿಗೆ ಸ್ಪಷ್ಟವಾಗಿ ಹೇಳು. ಬಂದರೆ ನಾನು ಮುಖಾವಲೋಕನವನ್ನು ಮಾಡಲಿಕ್ಕಿಲ್ಲೆಂತಲೂ ತಿಳಿಸು ಎಂದು ಹೇಳಲು ಲೈಲಿಯು ದಿಟ್ಟತನದಿಂದ ರಾಮರಾಜನ ಎದುರಿಗೆ ಬಂದು ನಿಂತುಕೊಂಡಳು.

---

೨೭ ನೆಯ ಪ್ರಕರಣ—ಆಶಾಭಂಗ.

ಲೈಲಿಯು ಬಂದಾಗ ರಾಮರಾಜನು ಒಬ್ಬನೇ ಕುಳಿತಿದ್ದನು. ಲೈಲಿಯು ಬಂದಕೂಡಲೆ ರಾಮರಾಜನು ತನ್ನ ಸೇವಕರಿಗೆ ಹೊರಗೆ ತೋಟದಲ್ಲಿ ಹೋಗಿರೆಂದು ಹೇಳಿ, ಲೈಲಿಯನ್ನು ಕುರಿತು--ಮಾರ್ಜಿನೇ, ಮಾರ್ಜಿನೇ, ಹೇಳು ನನಗೆ ಎಲ್ಲ ನಿಜವಾದ ವೃತ್ತಾಂತವನ್ನು ಹೇಳು. ನಿನ್ನ ಗುರತನ್ನು ನಾನು ಎಷ್ಟೋದಿನಗಳ ಹಿಂದೆ ಹಿಡಿದಿರುವೆನು, ಇನ್ನು ಮುಚ್ಚಿಕೊಳ್ಳುವುದರಲ್ಲೇನೂ ಅರ್ಥವಿಲ್ಲ. ನೀವು ಇಲ್ಲಿಂದ ಹೋದ ಬಳಿಕ ಏನೇನಾಯಿತೆಂಬದನ್ನೆಲ್ಲ ನನ್ನ ಮುಂದೆ ಹೇಳು. ಇಂದು ಆಕೆಯ ಮುಖದಿಂದಲೇ ಎಲ್ಲಾ ವೃತ್ತಾಂತವನ್ನು ಕೇಳಬೇಕೆಂದು ನಾನು ಬಹಳವಾಗಿ ಅಪೇಕ್ಷಿಸಿದ್ದೆನು; ಆದರೆ ಆಕೆಯು ಹಾಗೆ ಹೇಳಲಿಚ್ಛಿಸುವುದಿಲ್ಲ; ಸದ್ಯಕ್ಕೆ ಆಕೆಯನ್ನು ನಾನು ಬಲಾತ್ಕರಿಸುವುದಿಲ್ಲ. ನೀನಂತು ಎಲ್ಲ ವೃತ್ತಾಂತವನ್ನು ಹೇಳಲೇಬೇಕು. ಹೇಳು ಸ್ವಲ್ಪವಾದರೂ ಮುಚ್ಚಬೇಡ. ನೀವು ಇಲ್ಲಿಂದ ಹೋದ ಬಳಿಕ ಎಲ್ಲಿಗೆ ಹೋದಿರಿ? ಮುಂದೆ ಏನಾಯಿತು? ನಾನು ನಿಮ್ಮನ್ನು ಇಲ್ಲಿ ಎಷ್ಟು ಹುಡುಕಿಸಿದೆನು. ನೀವು ಸಿಕ್ಕಿದರೆ, ನಿಮ್ಮ ಬೆನ್ನ ಹಿಂದೆಯೇ ಬಂದು ನಿಮ್ಮನ್ನು ಕರಕೊಂಡು ಬರುತ್ತಿದ್ದೆನು; ನಿಮ್ಮನ್ನು ಅಡ್ಡಹಾದಿಗೆ ಹೋಗಗೊಡುತ್ತಿದ್ದಿಲ್ಲ; ಆದರೆ ಏನು ಮಾಡಲಿ? ನಿಮ್ಮ ಗೊತ್ತೇಹತ್ತಲಿಲ್ಲ; ಆದ್ದರಿಂದ ನಾನು ಮಿಡುಕುತ್ತ ಸುಮ್ಮನೆ ಕುಳಿತುಕೊಳ್ಳಬೇಕಾಯಿತು. ನನಗೊಂದು ಮುಖ್ಯಮಾತು ಗೊತ್ತಾಗಬೇಕಾಗಿದೆ. ಅದು ನನಗೆ ಗೊತ್ತಾದಂತೆ ಆಗಿದ್ದರೂ, ನಿಮ್ಮ ಮುಖದಿಂದ ಕೇಳಿಕೊಳ್ಳಬೇಕಾಗಿರುವುದು. ನೀವು ನಿಜವಾದ ಸಂಗತಿಯನ್ನು ಹೇಳಿದರೆ, ನನಗೆ ಎಷ್ಟೊಂದು ಆನಂದವಾಗುವಹಾಗಿದೆ ಹೇಳು. ಮಾರ್ಜಿನೇ, ಸುಮ್ಮನೆ ನಿಂತುಕೊಳ್ಳಬೇಡ. ಬಾಯಿಬಿಚ್ಚಿ ಮಾತಾಡು ಎಂದನು. ರಾಮರಾಜನ ಮುಖದಿಂದ ‘‘ಮಾರ್ಜಿನೆ’’ ಎಂಬ ಶಬ್ದವು ಹೊರಬಿದ್ದದ್ದನ್ನು ಕೇಳಿ ಲೈಲಿಯು ಮೆಟ್ಟಬಿದ್ದಳು. ಆಕೆಗೆ ಏನೂ ತೋಚದ್ದರಿಂದ, ರಾಮರಾಜನ ಮೋರೆಯನ್ನು ನೋಡುತ್ತ ಸುಮ್ಮನೆ ನಿಂತುಕೊಂಡಳು.

ಆಗ ರಾಮರಾಜನು ಮತ್ತೆ ಲೈಲಿಗೆ--“ಹೂ, ಮಾತಾಡು ರಣಮಸ್ತಖಾನನು ಯಾರು? ಆತನ ವೃತ್ತಾಂತವನ್ನು ಕೇಳಿಕೊಳ್ಳಲಿಕ್ಕೆ ನಾನು ಅತ್ಯಂತ ಆತುರನಾಗಿದ್ದೇನೆ. ನಾನು ಆತನನ್ನೇ ಕೇಳಬೇಕೆಂದು ಮಾಡಿದ್ದೆನು. “ನೀನು ಎಲ್ಲಿಯವನು? ನಿನ್ನ ತಾಯಿ-ತಂದೆಗಳು ಯಾರು? ಅವರು ವಿಜಾಪುರದವರೇಯೋ? ಮತ್ತೆ ಎಲ್ಲಿಂದಾದರೂ ವಿಜಾಪುರಕ್ಕೆ ಬಂದವರೋ, ಎಂದು ಆತನನ್ನು ಕೇಳಿ, ಆತನಿಗೆ

ತನ್ನ ಜನ್ಮವೃತಾಂತವು ಗೊತ್ತಿಲ್ಲದಪಕ್ಷದಲ್ಲಿ, ನಾನೇ ನಿಜವಾದ ಸಂಗತಿಯನ್ನು ಆತನಿಗೆ ಹೇಳಬೇಕೆಂದು ಮಾಡಿದ್ದೆನು; ಆದರೆ ಮೊದಲು ಮೆಹೇರಜಾನಳನ್ನು ಕಂಡು ಆಕೆಯಿಂದ ಯಾವತ್ತು ಸಂಗತಿಯನ್ನು ತಿಳಕೊಂಡು, ಆಕೆಯ ಮನಸ್ಸಿಗೆ ಬಂದರೆ ಅವನ ಜನ್ಮವೃತಾಂತವನ್ನು ಆತನ ಮುಂದೆ ಹೇಳಬೇಕು, ಇಲ್ಲದಿದ್ದರೆ ಬಿಡಬೇಕು, ಎಂಬ ವಿಚಾರವು ಉತ್ಪನ್ನವಾದದ್ದರಿಂದ ಅಷ್ಟಕ್ಕೆ ಬಿಟ್ಟಿನು. ಈಗ ಮೇಹೇರಜಾನಳನ್ನು ಕೇಳುವದಕ್ಕಾಗಿಯೇ ನಾನು ಇಲ್ಲಿಗೆ ಬಂದಿದ್ದೇನೆ. ಅದೇ ಉದ್ದೇಶದಿಂದಲೇ ನಿಮ್ಮನ್ನು ವಿಜಯನಗರದಿಂದ ಇಲ್ಲಿಗೆ ನಿನ್ನೆ ಕಳಿಸಿದೆನು. ನೀವು ಮೊದಲು ಇದ್ದಾಗಿನಂತೆಯೇ ಕುಂಜವನದ ಸ್ಥಿತಿಯು ಈಗ ಆಗಿದೆಯೋ ಇಲ್ಲವೋ ನೋಡಿರಿ. ಇದನ್ನು ನೋಡಿ ನಿಮಗೆ ಹಿಂದಿನದೆಲ್ಲ ನೆನಪಾಗಿ ನನಗೆ ನೀವು ಅನುಕೂಲವಾದೀರೆಂದು ತಿಳಿದು, ಈಗ ನಾಲ್ಕುದಿವಸಗಳಲ್ಲಿ ಕುಂಜವನವನ್ನು ಬಹು ಶ್ರಮಪಟ್ಟು ವ್ಯವಸ್ಥೆಗೊಳಿಸಿದ್ದೇನೆ. ನಿಮ್ಮಮೇಲೆ ನನ್ನ ಪ್ರೇಮವು ಮೊದಲು ಇದ್ದಂತೆ ಈಗಲೂ ಇರುತ್ತದೆ. ನಾನು ಮಹತ್ವಾಕಾಂಕ್ಷೆಯಿಂದ ಕೃಷ್ಣದೇವರಾಯರ ಮಗಳನ್ನು ಲಗ್ನವಾದದ್ದೇನೋ ನಿಜ. ಆದರೆ ರಾಜಕನ್ಯೆಯ ಮನಸ್ಸನ್ನು ಒಲಿಸಿಕೊಳ್ಳಲಿಕ್ಕೆ ನಾನು ಎಂದೂ ಯತಿಸಿರುವದಿಲ್ಲ. ನಿಜವಾದ ಪ್ರೇಮವು ಹುಟ್ಟಿದರೆ ಒಮ್ಮೆಯೇ ಹುಟ್ಟುವದು. ಹುಟ್ಟಿದಬಳಿಕ ಅದು ನಾಶಹೊಂದಲಾರದು, ರೂಪಾಂತರಿಸಲಾರದು. ಮಾರ್ಜಿನೇ; ಮಾರ್ಜಿನೇ, ಮೇಹೇರಜಾನಳ ಮೇಲಿದ್ದ ನನ್ನ ಪ್ರೇಮದ ಪರಿವರ್ತನಗಳು (ನಕಲುಗಳು) ಬೇಕಾದಷ್ಟು ಆಗಬಹುದು; ಆದರೆ ಮೇಹೇರಜಾನಳ ಮೇಲಿನ ನನ್ನ ನಿಜವಾದ ಪ್ರೇಮವು ಮೇಹೇರಜಾನಳಲ್ಲಿಯೇ ಉಳಿದಿರುವದು. ಅದ ಮರವು ನನಗೆ ಎಂದಿಗೂ ಆಗದು'' ಎಂದನು.

ಈ ಮೇರೆಗೆ ನುಡಿಯುವಾಗ ರಾಮರಾಜನ ಕಣ್ಣುಗಳಲ್ಲಿ ನೀರುಬಂದವು. ಆತನು ಮಾತಾಡಲಾರದೆ ಸುಮ್ಮನೆ ಕುಳಿತುಕೊಂಡನು. ಇದನ್ನು ನೋಡಿ ಮಾರ್ಜಿನೆಯ ಮನಸ್ಸು ಕರಗಿತು- ಆಕೆಯು ರಾಮರಾಜನಿಗೆ ಎಲ್ಲ ನಿಜವಾದ ಸಂಗತಿಯನ್ನು ಹೇಳಿ, ಆತನನ್ನು ಸಮಾಧಾನಗೊಳಿಸಬೇಕೆಂದು ಮಾಡಿದಳು. ಇನ್ನು ಆಕೆಯು ಮಾತಾಡತಕ್ಕವಳು, ಅಷ್ಟರಲ್ಲಿ ರಾಮರಾಜನ- "ಮಾರ್ಜಿನೇ, ನಿನ್ನ ಒಡೆಯಳು ಎಷ್ಟು ನಿಷ್ಠುರಳು! ಆಕೆಗೆ ನಿಜವಾದ ಪ್ರೇಮದ ಗುರುತೇ ಇದ್ದಂತೆ ತೋರುವದಿಲ್ಲ. ಒಂದು ಕಾರ್ಯದ ನಿಮಿತ್ತದಿಂದ ನಾನು ಮಾಡಿದ ಕಡ್ಡಿಯಷ್ಟು ತಪ್ಪನ್ನೇ ಗುಡ್ಡದಷ್ಟುಮಾಡಿ ಆಕೆಯು ನಿರ್ದಯಳಾದಳು. ನನ್ನಿಂದಾದ ಉಪಕಾರವನ್ನೆಲ್ಲ ಮರೆತು, ನನಗೆ ಆಗದವಳಂತೆ ಆಕೆಯು ಒಮ್ಮೆಲೆ ಹೊರಟುಹೋಗಿಬಿಟ್ಟಳು. ಎಂದು ನುಡಿ

ದನು. ಈ ಮಾತುಗಳು ಲೈಲಿಯ ಮನಸ್ಸನ್ನು ತಿರುಗಿಸಿದವು. ರಾಮರಾಜನು ತನ್ನ ಒಡೆಯಳಿಗೆ, ನಿಷ್ಠುರಳೂ, ಪ್ರೇಮರಹಿತಳೂ, ನಿರ್ದಯಳೂ ಎಂದು ಪೆಸರಿಟ್ಟದ್ದು ಮಾರ್ಜಿನೆಯ ಮನಸ್ಸಿಗೆ ಬರಲಿಲ್ಲ. ಅತ್ಯಂತ ಪ್ರೇಮಲಸ್ವಭಾವದ ತನ್ನ ಪ್ರಿಯ ಮೇಹೇರಜಾನಳು, ತನ್ನ ಕುಲಶೀಲಗಳನ್ನೂ, ಆಪ್ತೇಷ್ಟರನ್ನೂ ಲಕ್ಷಿಸದೆ, ಸರ್ವಸ್ವವನ್ನು ಈತನಿಗೆ ಒಪ್ಪಿಸಿ, ತನ್ನ ಕುತ್ತಿಗೆಯನ್ನು ಈತನ ಕೈಯಲ್ಲಿ ಕೊಟ್ಟಿರುವಾಗ, ಈತನೇ ನಿಷ್ಠುರತನದಿಂದ ಮೇಹೇರಜಾನಳ ಕುತ್ತಿಗೆಯನ್ನು ಕೊಯ್ದಿರಲು, ತಿರುಗಿ ಮೆಹೇರಜಾನಳನ್ನೇ ಈತನು ಪಳಿಯುತ್ತಾನಲ್ಲ, ಎಂದು ಆಕೆಯು ರಾಮರಾಜನಮೇಲೆ ಸಿಟ್ಟಾದಳು. ನಿಜವಾದ ವೃತಾಂತವನ್ನು ಈತನ ಮುಂದೆ ಹೇಳುವದಂತು ಇರಲಿ, ಈತನಿಗೆ ನಮ್ಮ ಗುರುತು ಕೂಡ ಹತ್ತಗೊಡಬಾರದೆಂದು ತಿಳಿದು, ಆಕೆಯು ಸುಮ್ಮನೆ ನಿಂತುಕೊಂಡುಬಿಟ್ಟಳು. ತಾನು ಇಷ್ಟು ದೈನ್ಯದಿಂದ ಹೇಳಿಕೊಂಡರೂ, ಕಣ್ಣೀರು ಹಾಕಿದರೂ ಮಾರ್ಜಿನೆಗೆ ದಯಹುಟ್ಟಲಿಲ್ಲೆಂದು ತಿಳಿದು, ರಾಮರಾಜನು ಸ್ವಲ್ಪ ತ್ರಾಸಗೊಂಡು ಮಾರ್ಜನೆಗೆ—ಯಾಕೆ? ಸುಮ್ಮನೆ ನಿಂತೆ? ಮಾತಾಡುವದಿಲ್ಲವೇನು? ನಾನೇನು ಕಲ್ಲೆನಮುಂದೆ ಮಾತಾಡುತ್ತಿರುವೆನೋ? ಮಾತಾಡು, ಹೇಳು, ನಾನು ಕೇಳಿದ್ದನ್ನೆಲ್ಲ ಹೇಳು, ಎಂದು ಕೇಳಿದನು. ಅದಕ್ಕೆ ಮಾರ್ಜಿನೆಯು ತಟ್ಟನೆ ರಾಮರಾಜನನ್ನು ಕುರಿತು,

ಮಾರ್ಜಿನೆ—ಏನು ಹೇಳಲಿ? ನೀವು ಏನು ಕೇಳುತ್ತೀರೆಂಬದೇ ನನಗೆ ತಿಳಿಯಲೊಲ್ಲದು. ಅಂದಬಳಿಕ ಅದರ ಉತ್ತರವನ್ನು ನಾನು ಹ್ಯಾಗೆಕೊಡಬೇಕು?

ರಾಮರಾಜ—ನಿನಗೆ ತಿಳಿಯಲೊಲ್ಲದೋ? ನಾನು ಏನು ಕೇಳುತ್ತೇನೆಂಬದು ನಿನಗೆ ತಿಳಿಯಲೊಲ್ಲದೋ? ಮಾರ್ಜಿನೇ, ನನಗೆ ಉಳಿದದ್ದನ್ನೇನೂ ಹೇಳಬೇಡ, ಒಂದೇಮಾತು ಹೇಳು. ಈ ರಣಮಸ್ತಖಾನನು ಅವನೇ ಏನು? ನೀವು ಇಲ್ಲಿಂದ ಹೋದಬಳಿಕ ಈತನು ಎಷ್ಟುದಿವಸಗಳಮೇಲೆ, ಎಲ್ಲಿ ಹುಟ್ಟಿದನು? ಎಂದು ನುಡಿಯುತ್ತಿರಲು, ಮಾರ್ಜಿನೆಯು ನಡುವೇಬಾಯಿಹಾಕಿ,

ಮಾರ್ಜಿನೆ—ಸುಮ್ಮನೆ ಯಾಕೆ ನನ್ನನ್ನು ಕೇಳುತ್ತೀರಿ? ನನಗೆ ಏನೂ ಗೊತ್ತಿಲ್ಲ; ಮತ್ತು ನೀವು ಏನು ಕೇಳುತ್ತೀರೆಂಬದೂ ನನಗೆ ತಿಳಿಯಲೊಲ್ಲದು.

ರಾಮರಾಜ—ಹೀಗೆ ಹೇಳುವದಕ್ಕಿಂತ "ನಾನು ಏನೂ ಹೇಳುವದಿಲ್ಲವೆಂದು" ಸ್ಪಷ್ಟ ಹೇಳಬಾರದೆ?

ಮಾರ್ಜಿನೆ—ನನಗೆ ಏನೂ ಗೊತ್ತಿಲ್ಲದಬಳಿಕ ನಾನು ಹೇಳಲಾದರೂ ಏನು? ನಾವು ನಿಮಗೆ ಯಾರಹಾಗೆ ಕಾಣುತ್ತೇವೆ? ನಮ್ಮನ್ನು ನೀವು ಯಾರೆಂದು ತಿಳಿದಿ

ರುತ್ತೀರಿ? ನಮ್ಮ ಮಾಸಾಹೇಬರನ್ನು ನೀವು ಯಾರೆಂದು ಭಾವಿಸಿರುತ್ತೀರಿ? ನಮ್ಮ ಮಾಸಾಹೇಬರು ಒಬ್ಬ ಬಡವಿಧವೆಯು. ಪತಿಯು ಮರಣಹೊಂದಿದಬಳಿಕ, ಪಾಪ! ಅಲ್ಲಾನ ಧ್ಯಾನಮಾಡುತ್ತ ಅವರು ಕಾಲಹರಣ ಮಾಡುತ್ತಿರುವರು. ಉತ್ತರ ಹಿಂದುಸ್ಥಾನದ ಕಡೆಗಿದ್ದವರು, ಈಗ ದಕ್ಷಿಣ ಹಿಂದುಸ್ಥಾನದ ಕಡಗೆ ಬಂದಿರುತ್ತಾರೆ. ಅವರು ತಮ್ಮ ಮಗನ ಮೂರ್ಖತನದಿಂದ ಹೀಗೆ ಸಂಕಟಕ್ಕೆ ಗುರಿಯಾಗಿರುತ್ತಾರೆ.

ಇದನ್ನು ಕೇಳಿ ರಾಮರಾಜನಿಗೆ ಏನೂ ತೋಚದಾಯಿತು. ಆತನು ಲೈಲಿಗೆ—ನೀನು ನನಗೆ ನಮ್ಮ ಮೇಹೇರಜಾನಳ ಭೆಟ್ಟಿಯನ್ನು ಮಾಡಿಸಿಬಿಡು. ನಾನು ಆಕೆಯನ್ನೇ ಕೇಳುವೆನು, ಎಂದು ಹೇಳಿದನು. ಇದನ್ನು ಕೇಳಿ ಮಾರ್ಜಿನೆಯು ಏನೂ ತೋಚದೆ ಸುಮ್ಮನೆ ನಿಂತುಕೊಂಡಳು. ಆ ಮೇಲೆ ಆಕೆಯು ರಾಮರಾಜನಿಗೆ—ನಿಮ್ಮ ಮೇಹೇರಜಾನಳು! ನಿಮ್ಮ ಮೇಹೇರಜಾನಳು ಯಾರೆಂಬದೇ ನನಗೆ ಗೊತ್ತಾಗಲೊಲ್ಲದು; ಅಂದಬಳಿಕ ನಾನು ಆಕೆಯ ಬಳಿಗೆ ನಿಮ್ಮನ್ನು ಹ್ಯಾಗೆ ಕರಕೊಂಡು ಹೋಗಲಿ? ಅನ್ನಲು, ರಾಮರಾಜನು ಈಕೆಯು ಒಳ್ಳೆಯ ಮಾತಿನಿಂದ ಹಾದಿಗೆ ಬರುವಹಾಗೆ ಕಾಣುವದಿಲ್ಲ, ಸ್ವಲ್ಪ ಗುಡುಗುಹಾಕಿ ನೋಡೋಣವೆಂದು,

ರಾಮರಾಜ—ನೀನು ಯಾರಸಂಗಡ ಈ ಹುಡುಗಾಟಿಕೆ ಮಾಡುತ್ತೀಯೆಂಬುದು ನಿನಗೆ ಗೊತ್ತಿರುವವಷ್ಟೆ?

ಲೈಲಿ—ಇಲ್ಲ, ನನಗೆ ಯಾವದೂ ಗೊತ್ತಿಲ್ಲ. ನೀವು ಯಾರೆಂಬದನ್ನು ನಾನರಿಯೆ.

ರಾಮರಾಜ—ನಿನ್ನ ನೂರುವರ್ಷಗಳು ತುಂಬಿದವೆಂದು ತಿಳದುಕೋ.

ಲೈಲಿ—ನಿಜವಾಗಿಯೇ ನನ್ನ ನೂರುವಷಗಳು ತುಂಬಿದ್ದರೆ, ಪರವರದಿಗಾರ ಖುದಾನು ನನ್ನನ್ನು ಅನುಗ್ರಹಿಸಿದನೆಂತಲೇ ನಾನು ತಿಳಿಯುವೆನು. ನನಗಂತು ನನ್ನ ಜೀವವು ಬೇಡಾಗಿರುತ್ತದೆ.

ರಾಮರಾಜ—ಇನ್ನು ಮೇಲೆ ನಾನೇ ರಣಮಸ್ತಖಾನನಿಗೆ ಅವನ ಜನ್ಮವೃತಾಂತವನ್ನು ಹೇಳುವೆನು.

ಲೈಲಿ—ಏನೂ ಚಿಂತೆಯಿಲ್ಲ: ಅವಶ್ಯವಾಗಿ ಹೇಳಿರಿ. ಅದನ್ನು ಕೇಳಿ ಆತನಿಗೆ ಆನಂದವಾದರೆ ನೆಟ್ಟಗೇ ಆಯಿತು. ಮಾಸಾಹೇಬರಿಗೂ, ಆತನಿಗೂ ಇನ್ನು ಯಾವ ಸಂಬಂಧವೂ ಉಳಿದಿರುವುದಿಲ್ಲ. ತಮ್ಮ ಮಗನು ಸ್ವಾಮಿದ್ರೋಹಿ

ಯಾದದ್ದರಿಂದ, ಆತನು ತಮ್ಮ ಪಾಲಿಗೆ ಸತ್ತನೆಂದು ಮಾಸಾಹೇಬರು ತಿಳಿ ಕೊಂಡಿರುವರು.

ಮುದುಕಿಯು ಯಾವದಕ್ಕೂ ಗುಟ್ಟುಕೊಡುವುದಿಲ್ಲೆಂಬ ಮಾತು ರಾಮ ರಾಜನಿಗೆ ಗಟ್ಟಿಮುಟ್ಟು ಗೊತ್ತಾಯಿತು. ಇನ್ನು ಹೆಚ್ಚು ಅರೆದಾಡುದರಲ್ಲಿ ಅರ್ಥವಿಲ್ಲೆಂದು ತಿಳಿದು, ಅಲ್ಲಿಂದ ಹೊರಟುಹೋಗಬೇಕೆಂದು ಆತನು ನಿಶ್ಚ ಯಿಸಿದನು. ಇಷ್ಟು ಪ್ರಯತ್ನಮಾಡಿದರೂ ತನ್ನ ಕೋರಿಕೆಯು ಕೈಗೂಡದ್ದ ರಿಂದ, ಆತನಿಗೆ ಬಹು ವಿಷಾದವಾಯಿತು. ಆತನಿಗೆ ಆ ಸ್ಥಾನವನ್ನು ಬೇ ಗನೇ ಬಿಡಲಿಕ್ಕೆ ಬೇರೆ ಕಾರಣಗಳೂ ಒದಗಿದವು. ಯುದ್ಧಪ್ರಸಂಗವಿರಲು, ವೈರಿಗಳ ಕಡೆಯ ಸುದ್ದಿಗಳನ್ನು ತಿಳಿಕೊಂಡು ಬರುವದಕ್ಕಾಗಿ ವಿಜಯನಗರದ ಗುಪ್ತಚಾರರು ಅಲ್ಲಲ್ಲಿ ತಿರುಗುತ್ತಿದ್ದರಷ್ಟೇ. ಅವರಲ್ಲಿ ಒಬ್ಬನು ವಿಜಾಪುರದ ಕಡೆಯಿಂದ ಅವಸರದಿಂದ ಬಂದು, ರಾಮರಾಜನಿಗೆ ಬೇಗನೆ ಸುದ್ದಿಯನ್ನು ಮುಟ್ಟಿಸಬೇಕೆಂದು ವಿಜಯನಗರಕ್ಕೆ ಹೋಗಿದ್ದನು. ಆದರೆ ರಾಮರಾಜನು ಕುಂಜವನದಲ್ಲಿರುವನೆಂಬದು ಗೊತ್ತಾದ್ದರಿಂದ ಆ ಸೇವಕನು ಕುಂಜವನಕ್ಕೇ ಬಂದು, ರಾಮರಾಜನಿಗೆ ತಾನು ಬಂದಿರುವ ಸುದ್ದಿಯನ್ನು ಹೇಳಿಕಳಿಸಿದನು. ಆಗ ರಾಮರಾಜನು ಆತನನ್ನು ಕರೆಸಿಕೊಂಡು, ಹೊಸಸುದ್ದಿಯೇನೆಂದು ಕೇ ಳಲು, ಸೇವಕನು—ಮಹಾರಾಜರೇ ಶತೃಗಳು ಮೂವರಿದ್ದವರು ನಾಲ್ವರಾದರು. ಹುಸೇನಶಹನು ಉಳಿದ ಮೂವರು ಬಾದಶಹರನ್ನು ಕೂಡಿಕೊಳ್ಳುವನೋ, ಇಲ್ಲವೋ, ಎಂಬದು ಈವರೆಗೆ ಅನುಮಾನಪಕ್ಷವಾಗಿತ್ತು; ಆದರೆ ಆತನೂ ಈಗ ಕೂಡಿಕೊಂಡನು. ಆತನು ತನ್ನ ಸೈನ್ಯದೊಡನೆ ಹೊರಟಿರುವನು. ಇಷ್ಟು ಹೊತ್ತಿಗೆ ಆತನು ಅರ್ಧ ಹಾದಿಗೆ ಸಹ ಬಂದಿರಬಹುದು ಎಂದು ಹೇಳಿದನು. ಇದನ್ನು ಕೇಳಿದ ಕೂಡಲೆ ರಾಮರಾಜನು ಮನಸ್ಸಿನಲ್ಲಿ ಬೆದರಿದರೂ, ಹೊರಗೆ ಅದರ ಲಕ್ಷಣ ತೋರಗೊಡದೆ—ಇದೇ ಏನು ನಿನ್ನ ಮಹತ್ವದ ಸುದ್ಧಿಯು! ಯಾವ ಶಹನು ಕೂಡಿ ನಮ್ಮನ್ನೇನು ಮಾಡುವನು? ಎಲ್ಲಾ ಶಹರೂ ಒಟ್ಟುಗೂಡಿ ಒಮ್ಮೆಲೆ ನಮ್ಮ ಮೇಲೆ ಸಾಗಿ ಬಂದುಬಿಡಲಿ. ಅಂದರೆ ಅವರೆಲ್ಲರಿಗೆ ಒಮ್ಮೆ ಚೆನ್ನಾಗಿ ಕೈತೋರಿಸಿಬಿಡೋಣ. ಮುಸಲ್ಮಾನರ ನಾಶಕಾಲವೇ ಒದಗಿದಂತೆ ಕಾಣುತ್ತದೆ. ಹಿಂದಕ್ಕೆ ಪರಶುರಾಮನು ಇಪ್ಪತ್ತೊಂದು ಸಾರೆ ಕ್ಷತ್ರಿಯ ಸಂಹಾ ರಮಾಡಿ ಪೃಥ್ವಿಯನ್ನು ನಿಃಕ್ಷತ್ರಿಯವಾಗಿ ಮಾಡಿದಂತೆ ಈಗ ನಾವು ಪೃಥ್ವಿಯನ್ನು ನಿರ್ಮುಸಲ್ಮಾನವಾಗಿ ಮಾಡೋಣ! ಹೋಗು, ವೈರಿಗಳ ಸೈನ್ಯಗಳು ಎಲ್ಲಿಯ ವರೆಗೆ ಬಂದವೆಂಬದನ್ನು ನೋಡಿ ಬಂದು ಹೇಳು. ಅಂಥ ಮಹತ್ವದ ಸುದ್ದಿಗಳೇ ನಾದರೂ ಇದ್ದರೆ, ನನ್ನತನಕ ಹೇಳಲಿಕ್ಕೆ ಬಾ. ಹಾಗೆ ಮಾಡದೆ, ಇಂಥ ಕ್ಷುಲ್ಲಕ

ಸುದ್ದಿಗಳನ್ನು ಹೇಳಲಿಕ್ಕೆ ಬಂದು ತೊಂದರೆಯನ್ನು ಕೊಡಬೇಡ, ಎಂದು ನುಡಿದನು. ಈ ಮಾತುಗಳನ್ನು ಕೇಳಿ ಸೇವಕನು ಆಶ್ಚರ್ಯಪಡುತ್ತ ಹೊರಟುಹೋದನು. ರಾಮರಾಜನೂ ಅಸಮಾಧಾನದಿಂದ ಕುಂಜವನವನ್ನು ಬಿಟ್ಟು ವಿಜಯನಗರಕ್ಕೆ ಬಂದು ಮುಟ್ಟಿದನು.

ವಿಜಯನಗರಕ್ಕೆ ಬಂದ ಬಳಿಕ ಎಷ್ಟೋಮಹತ್ವದ ಸುದ್ದಿಗಳನ್ನು ರಾಮರಾಜನು ಕೇಳಿದನು. ಶತ್ರುಗಳ ಸೈನ್ಯಗಳು ಬೇಗನೆ ವಿಜಯನಗರದ ಗಡಿಯನ್ನು ಬಂದು ಮುಟ್ಟುವವೆಂಬದನ್ನೂ, ತುಂಗಭದ್ರೆಯ ಕಾಲಹೊಳೆಯ ಸ್ಥಳವನ್ನು ಹುಡುಕುವದಕ್ಕಾಗಿ ಶತ್ರುಗಳ ಗುಪ್ತಚಾರರು ತಿರುಗಾಡುತ್ತಿರುವರೆಂಬವನ್ನೂ, ಆ ಸ್ಥಳವು ಗೊತ್ತಾಗುವವರೆಗೆ ಶತ್ರುಗಳು ಪತ್ರಗಳನ್ನು ಕಳಿಸುತ್ತ, ಉತ್ತರಗಳನ್ನು ಬರಮಾಡಿಕೊಳ್ಳುತ್ತ ಕಾಲಹರಣಮಾಡುವಂತೆ ತೋರುತ್ತದೆಂಬದನ್ನೂ, ರಾಮರಾಜನು ಕೇಳಿದನು. ತಾನಾದರೂ ಶತ್ರುಗಳ ಗುಪ್ತಚಾರರನ್ನು ಶೋಧಿಸುವದಕ್ಕಾಗಿಯೂ, ಶತ್ರುಗಳ ದಂಡಿನ ಚಲನವಲನಗಳನ್ನು ನೋಡಿಕೊಂಡು ಬರುವದಕ್ಕಾಗಿಯೂ, ಗುಪ್ತಚಾರರನ್ನು ನಿಮಿಷಿಸಿರುವನೆಂಬಬಗ್ಗೆ ರಾಮರಾಜನಿಗೆ ಸಮಾಧಾನವಾಯಿತು. ತಾನು ಶತ್ರುಗಳನ್ನು ತುಂಗಭದ್ರೆಯ ದಾಟಗೊಡದೆ, ತುಂಗಭದ್ರೆಯಲ್ಲಿಯೇ ಅವರ ನಾಶ ಮಾಡಿದರಾಯಿತೆಂದು ಆತನು ತಿಳಿಕೊಂಡನು. ಮೊದಲ ಉಸಲಿಗೇ ಶತ್ರುಗಳಿಗೆ ಚೆನ್ನಾಗಿ ಕೈ ತೋರಿಸಿದರೆ, ಅವರು ಚಿವುಗುಟ್ಟುತ್ತ ಕುಳಿತುಕೊಳ್ಳುವರು. ಆಮೇಲೆ ತಾವು ಮುಂದಕ್ಕೆ ಸಾಗಿಹೋಗಬೇಕು, ಅಂದರೆ ಪೂರ್ಣವಾಗಿ ಶತ್ರುಗಳ ನಿಃಪಾತವಾಗುವದು. ಪರಮೇಶ್ವರನ ಮನಸ್ಸಿನಲ್ಲಿ ಭರತ ಖಂಡದ ತುಂಬೆಲ್ಲ ಹಿಂದೂರಾಜ್ಯವಾಗುವದು, ಇದ್ದದ್ದರಿಂದಲೇ ಈ ಎಲ್ಲ ಮುಸಲ್ಮಾನ ಬಾದಶಹರಿಗೆ ಈ ಕುಬುದ್ಧಿಯು ಹುಟ್ಟಿರುತ್ತದೆ, ಇಲ್ಲದಿದ್ದರೆ ಎಂದೂ ಹುಟ್ಟುತ್ತಿದ್ದಿಲ್ಲ, ಎಂದು ಆತನು ನಂಬಿಬಿಟ್ಟಿದ್ದನು. ಈ ವಿಚಾರದ ಹೊರತು, ಸೋಲಿನ ವಿಚಾರವು ರಾಮರಾಜನ ಮನಸ್ಸಿನಲ್ಲಿ ಬರುತ್ತಿದ್ದಿಲ್ಲವೆಂತಲೇ ಹೇಳಬಹುದು. ತಾನು ಸ್ವತಃ ಸೈನಾಧಿಪತ್ಯವನ್ನು ಕೈಕೊಂಡು, ತನ್ನ ಇಬ್ಬರು ಶೂರಬಂಧುಗಳನ್ನು ಎಡಬಲಗಳಲ್ಲಿ ಸಸೈನ್ಯವಾಗಿ ಇರಿಸಿಕೊಂಡು, ತಾನು ಮಧ್ಯದಲ್ಲಿ ಸೈನ್ಯದೊಡನೆ ನಿಂತು, ವೈರಿಗಳಿಗೆ ಎದುರಾಗಬೇಕೆಂದು ಆತನು ನಿಶ್ಚಯಿಸಿದನು.

ಸೈನ್ಯದೊಳಗಿನ ವೀರರಲ್ಲಿ ತನಗೆ ಭೆಟ್ಟಿಯಾದವರಿಗೆಲ್ಲ ರಾಮರಾಜನು ಶ್ರೀ ವಿಜಯವಿಠ್ಠಲನು, ನನಗೆ ಅತ್ಯುತ್ತಮ ಪ್ರಸಂಗವನ್ನು ಒದಗಿಸಿ ಕೊಟ್ಟಿರುತ್ತಾನೆ. ಈ ಪ್ರಸಂಗದಲ್ಲಿ ನಾವು ಭಾರತೀಯ ವೀರರಂತೆ ಯುದ್ಧಮಾ

ಡಿದರೆ, ಭರತಖಂಡದ ತುಂಬ ನಮ್ಮ ಸಾಮ್ರಾಜ್ಯವಾಗಬಹುದು. ಈ ಪ್ರಸಂಗದಲ್ಲಿ ನಾವು ಮುಗ್ಗರಿಸಿದರೆ, ನಮ್ಮ ಇದ್ದ ರಾಜ್ಯವೂ ಹೋಗುವದು. ಮನುಷ್ಯನಿಗೇನು, ರಾಜ್ಯಕ್ಕೇನು, ಇಂಥ ಮಹತ್ವದ ಪ್ರಸಂಗವು ಒಂದೆಂದರೆ ಒಂದೇಸಾರೆ ಬರುವದು. ಆ ಪ್ರಸಂಗದಲ್ಲಿ ಮನುಷ್ಯನು ತನ್ನ ಪ್ರತಾಪದಿಂದ ತಲೆಯನ್ನಾದರೂ ಎತ್ತಬೇಕು, ಹೇಡಿತನದಿಂದ ರಸಾತಲಕ್ಕಾದರೂ ಇಳಿಯಬೇಕು. ಅಂಥ ಪ್ರಸಂಗವೇ ಈಗ ನಿಮಗೆ, ನಿಮ್ಮ ರಾಜ್ಯಕ್ಕೆ ಒದಗಿರುತ್ತದೆಂದು ತಿಳಿಯಿರಿ. ಈ ಪ್ರಸಂಗದಲ್ಲಿ ನೀವು ಎದೆಗೊಟ್ಟು ಕಾದಿ ಜಯಶೀಲರಾಗಿ ಎಲ್ಲರ ಎದೆಯಮೇಲೆ ಕೂಡುವಿರೋ, ಹೇಡಿತನದಿಂದ ಹಿಂದಕ್ಕೆ ಸರಿದು, ವೈರಿಗಳ ತುಳತದಿಂದ ಹುಡಿಯಾಗಿ ಹಾರಿಹೋಗುವಿರೋ? ನಿಮ್ಮ ಸಾಮ್ರಾಜ್ಯದ ಗೌರವವನ್ನು ಕಾಯ್ದುಕೊಳ್ಳಿರಿ. ಈ ಕಾಲಕ್ಕೆ ನೀವು ನಿಮ್ಮ ಗೌರವವನ್ನು ಕಾಯ್ದುಕೊಂಡರೆ, ನಿಮ್ಮ ಶತ್ರುಗಳು ಇನ್ನೂ ಐವತ್ತು ವರ್ಷ ತಲೆ ಮೇಲಕ್ಕೆತ್ತದ ಹಾಗಾಗುತ್ತದೆ. ತಲೆ ಮೇಲಕ್ಕೆತ್ತುವದೇಕೆ, ಶತ್ರುಗಳೇ ಉಳಿಯುವದಿಲ್ಲೆಂದು ತಿಳಿಯಿರಿ. ಅದರಿಂದ ನಿಮ್ಮ ಸಾಮ್ರಾಜ್ಯವು ಬಳೆಯಬಹುದು; ಮತ್ತು ಆಸೇತುಹಿಮಾಚಲ ಏಕಛತ್ರಾಧಿಪತ್ಯವಾಗಬಹುದು. ಈ ಮುಸಲ್ಮಾನರು ಈಗ ೩೦೦ ವರ್ಷಗಳಲ್ಲಿ ಉತ್ತರಹಿಂದುಸ್ಥಾನದೊಳಗೆ ಮನಸ್ಸಿಗೆ ಬಂದಂತೆ ಕುಣಿಯುತ್ತ ಬಂದಿರುತ್ತಾರೆ. ಅವರನ್ನು ಮಾತಾಡಿಸುವವರು ಯಾರೂ ಇಲ್ಲದಾಗಿದೆ. ಇನ್ನು ನಾವು ಆ ಕೆಲಸವನ್ನು ಮಾಡಬೇಕೆಂದು ಶ್ರೀ ನರಸಿಂಹನ ಇಚ್ಛೆಯಿದ್ದಂತೆ ತೋರುತ್ತದೆ. ಆದ್ದರಿಂದ ನೀವು ಯುದ್ಧದಲ್ಲಿ ಹಿಂಜರಿಯದೆ, ವಿಜಯನಗರದ ಸಾಮ್ರಾಜ್ಯದ ಗೌರವವನ್ನು ಕಾಯಿರಿ, ಎಂದು ಹೇಳುತ್ತಿದ್ದನು.

ರಾಮರಾಜನು ಸ್ವಭಾವತಃ ಬಹು ಉದ್ಧಟನು. ಆತನ ಔದ್ಧತ್ಯದಮೂಲಕ ಬರಿಯ ಮುಸಲ್ಮಾನರೇ ಅಲ್ಲ, ಸ್ವಜನರಲ್ಲಿ ಬಹುಜನರು ಆತನ ಶತ್ರುಗಳಾಗಿದ್ದರು; ಆದರೆ ರಾಮರಾಜನ ಮುಂದೆ ಅವರ ಆಟ ನಡೆಯುವಹಾಗಿಲ್ಲದ್ದರಿಂದ ಅವರು ಸುಮ್ಮನೆ ಕೈಮುಚ್ಚಿಕೊಂಡು ಕುಳಿತುಕೊಂಡಂತೆ ಆಗಿತ್ತು. ರಾಮರಾಜನು ಸದಾಶಿವರಾಜನನ್ನು ಸರಿಯಿಟ್ಟು ತಾನೇ ಅರಸನಾಗಿ ಕಾರಭಾರವನ್ನು ನಡಿಸುತ್ತಿದ್ದನಷ್ಟೆ? ಅವನು ವರ್ಷದಲ್ಲಿ ಒಂದುದಿನ ಮಾತ್ರ ಸದಾಶಿವರಾಯನ ಪಾದವಂದನಮಾಡಿ ಅತನಿಗೆ ಅರಸುತನದ ಮರ್ಯಾದೆಯನ್ನು ನಡಿಸುತ್ತಿದ್ದನು. ಈ ಕಾರಣದಿಂದ ಸದಾಶಿವರಾಜನ ಪಕ್ಷದವರು ರಾಮರಾಜನ ವೈರಿಗಳಾಗಿದ್ದರು. ಕೆಲವರು ರಾಮರಾಜನ ಉದ್ಧಟತನಕ್ಕಾಗಿ ಅತನನ್ನೂ, ಅತನ ಇಬ್ಬರು ಬಂಧುಗಳನ್ನೂ, ಅಂದರೆ ತಿರುಮಲ-ವೇಂಕಟಾದ್ರಿಗಳನ್ನೂ ದ್ವೇಷಿಸುತ್ತಿದ್ದರು. ಕೆಲ

ವರು ರಣಮಸ್ತಖಾನನನ್ನು ಹಿಂದುಮುಂದಿನ ವಿಚಾರವಿಲ್ಲದೆ ರಾಮರಾಜನು ಏರಿಸುತ್ತ ನಡೆದದ್ದನ್ನು ನೋಡಿ, ಮಾತ್ಸರ್ಯತಾಳಿ ದ್ವೇಷಿಗಳಾಗಿದ್ದರು; ಆದರೆ ನಾಲ್ವರು ಮುಸಲ್ಮಾನ ಬಾದಶಹರು ಒಟ್ಟುಗೂಡಿ ತಮ್ಮ ಮೇಲೆ ಸಾಗಿಬರುವದನ್ನು ನೋಡಿ ವಿಜಯನಗರದವರು ತಮ್ಮೊಳಗಿನ ಅಂತಃಕಲಹಗಳನ್ನು ಮರೆತರು. ಅವರು ಮುಸಲ್ಮಾನರ ಮೇಲೆ ಮುಗಿಬಿದ್ದು ಹೋಗಿ, ಅವರನ್ನು ದಿಕ್ಕಾಪಾಲಾಗಿ ಯಾವಾಗ ಓಡಿಸೇವೆಂದು ಸ್ಫೂರ್ತಿಗೊಳ್ಳಹತ್ತಿದರು. ಈ ಸಂಬಂಧದಿಂದ ರಣಮಸ್ತಖಾನನ ಉತ್ಕಂಠೆಯನ್ನೂ, ಈರ್ಷೆಯನ್ನೂ ವರ್ಣಿಸುವದಂತು ತೀರ ಅಸಾಧ್ಯವಾಗಿತ್ತು. ಆತನು ವಿಜಯನಗರದ ರಾಜ್ಯದ ಅಭಿಮಾನವನ್ನು ವಹಿಸುವಾಗ ತಾನು ಮುಸಲ್ಮಾನ ಜಾತಿಯವನೆಂಬದನ್ನು ಸಹ ಮರೆಯುವಂತೆ ತೋರುತ್ತಿತ್ತು. ಆತನು ಜನರಿಗೆ—ನಾನು ವಿಜಯನಗರದ ರಾಯರನ್ನು ಕೂಡಿದ್ದರಿಂದ, ಸ್ವಜನದ್ರೋಹಿಯೂ, ಸ್ವಾಮಿದ್ರೋಹಿಯೂ ಆದೆನೆಂದು ಜನರು ಅನ್ನಬಹುದು; ಆದರೆ ನಾನು ಅಂಥ ದ್ರೋಹವನ್ನೇನೂ ಮಾಡಿರುವದಿಲ್ಲೆಂದು ಸ್ಪಷ್ಟವಾಗಿ ಹೇಳುವೆನು. ವಿಜಾಪುರದ ಬಾದಶಹರ ಹಿತವನ್ನು ನಾನು ಮನಮುಟ್ಟಿ ಸಾಧಿಸುತ್ತಿರಲು, ಬಾದಶಹರು ನಿಷ್ಕಾರಣವಾಗಿ ನನ್ನನ್ನು ಅಪಮಾನಗೊಳಿಸಿದರು. ಅದರ ಸೇಡು ತೀರಿಸುವದಕ್ಕಾಗಿ, ನಾನು ಹೇಳಿ ಕೇಳಿ ರಾಯರನ್ನು ಕೂಡಿಕೊಂಡಿದ್ದೇನೆ. ಒಹು ಜನ ಮುಸಲ್ಮಾನರು ಹಿಂದೂ ಜನರ ದಂಡಿನಲ್ಲಿರುವರಷ್ಟೇ? ಅವರಲ್ಲಿ ನಾನೊಬ್ಬನು. ಆದರೆ ಬಾದಶಹರಿಂದಾದ ಅಪಮಾನದಿಂದ ಬಾದಶಹರ ಮೇಲೆ ರೊಚ್ಚಿಗೆದ್ದವನು. ನಾನು ಒಳಗಿಂದೊಳಗೆ ರಾಮರಾಜರಿಗೆ ಸಹಾಯ ಮಾಡಿದ್ದರೆ, ಸ್ವಾಮಿದ್ರೋಹವು ನನ್ನ ಪಾಲಿಗೆ ಬರುತ್ತಿತ್ತು. ಹಾಗೇನು ನಾನು ಮಾಡಿರುವುದಿಲ್ಲ. ನಾನು ಇತ್ತ ಬಂದದ್ದರಿಂದ ಮುಸಲ್ಮಾನ ಬಾದಶಹರ ಹಾನಿಯು ಎಷ್ಟರ ಮಟ್ಟಿಗೆ ಆಗಿರುತ್ತದೆಂಬದನ್ನು, ಮಹಾರಾಜರು ಯುದ್ಧದಲ್ಲಿಯ ನನ್ನ ಪರಾಕ್ರಮವನ್ನು ನೋಡಿ ತರ್ಕಿಸಬಹುದು, ಎಂದು ನುಡಿಯುತ್ತಿದ್ದನು. ಅದನ್ನು ಕೇಳಿ ರಾಮರಾಜನು—"ರಕ್ತ ಸಂಬಂಧವಿದ್ದ ಕಡೆಗೆ ಮನಸ್ಸು ಒಲಿಯತಕ್ಕದ್ದು" ಎಂದು ತರ್ಕಿಸಿ, ಕೌತುಕಪಡುತ್ತಿದ್ದನು. ಕೌತುಕದ ಭರದಲ್ಲಿ ಆತನು ಏಕಾಂತದಲ್ಲಿ ರಣಮಸ್ತಖಾನನನ್ನು ಅಪ್ಪಿಕೊಂಡು "ತಮ್ಮಾ, ನೀನು ನನ್ನ ಹೊಟ್ಟೆಯ ಮಗನು" ಎಂದು ಹೇಳಿ, ಎಲ್ಲ ವೃತ್ತಾಂತವನ್ನು ಆತನಿಗೆ ತಿಳಿಸಬೇಕೆಂದು ಮಾಡಿದ್ದನು. ಆದರೆ ಯಾರಿಗೆ ಗೊತ್ತು? ತನ್ನ ವೃತ್ತಾಂತವನ್ನು ಕೇಳಿ ಆತನಿಗೆ ಸಮಾಧಾನವಾಗುವದೊತ್ತಟ್ಟಿಗುಳಿದು, ಆತನು ಸಿಟ್ಟಿಗೆದ್ದರೆ ಮಾಡುವದೇನು? ಎಂದು ಶಂಕಿಸಿ, ರಾಮರಾಜನು ಅಷ್ಟಕ್ಕೆ ಸುಮ್ಮನಾಗುತ್ತಿದ್ದನು. ವಿಜಯನಗರದ ರಾಜ್ಯದಲ್ಲಿ ಅರಬ, ಹಾಗು ಪಠಾಣ ಜನರ

ವರ್ಜಸ್ಸು ವಿಶೇಷವಾಗಿತ್ತು. ಹಿಂದೂಜನರು ಬಹುದಿನ ಸಾಮ್ರಾಜ್ಯ ಸುಖವನ್ನು ಅನುಭವಿಸಿದ್ದರಿಂದ ಪೌಲಿಗೆ ಬಿದ್ದಿದ್ದರು. ಅವರಿಗೆ ಅಹಂಭಾವ ಬಹಳ. ಯುದ್ಧಪ್ರಸಂಗ ಒದಗಿದಾಗ ಅವರನ್ನು ಒಟ್ಟುಗೂಡಿಸಬೇಕಾದರೆ ಸಾಕುಬೇಕಾಗುತ್ತಿತ್ತು. ಆದ್ದರಿಂದ ಯುದ್ಧಾರಂಭಕ್ಕೆ ಮುಸಲ್ಮಾನ ಸೈನಿಕರೇ ವೈರಿಗಳಿಗೆ ಎದುರಾಗಬೇಕಾಗುತ್ತಿತ್ತು. ಹಿಂದಿನಿಂದ ಹಿಂದೂ ಸೈನ್ಯದ ಯೋಜನೆಯಾಗುವ ಪ್ರಸಂಗ ಬರುತ್ತಿತ್ತು. ಈವರೆಗಾದ ಅನೇಕ ಕಾಳಗಗಳಲ್ಲಿ ಕೇವಲ ಮುಸಲ್ಮಾನ ದಂಡಾಳುಗಳ ಸಹಾಯದಿಂದಲೇ ವಿಜಯನಗರದವರಿಗೆ ಜಯವು ದೊರೆತ್ತಿತ್ತು. ಇದರಿಂದ ಮುಸಲ್ಮಾನ ಸೈನಿಕರ ವರ್ಜಸ್ಸು ವಿಜಯನಗರದ ರಾಜ್ಯದಲ್ಲಿ ಹೆಚ್ಚಲಿಕ್ಕೆ ಕಾರಣವಾಗಿತ್ತು; ಆದ್ದರಿಂದ ಮುಸಲ್ಮಾನ ಸೈನ್ಯದ ಮುಖ್ಯಸ್ಥನಾಗಿರುವ ರಣಮಸ್ತಖಾನನ ಮನಸ್ಸನ್ನು ಸೋಯಿಸುವದು ಈ ಪ್ರಸಂಗವಲ್ಲಿ ಹಿತಕರವಲ್ಲೆಂದು ತಿಳಿದು, ರಣಮಸ್ತಖಾನನ ಜನ್ಮವೃತ್ತಾಂತವನ್ನು ಮತ್ತೆ ಯಾವಾಗಾದರೂ ಅವಸರಿಗೆ ಹೇಳೋಣವೆಂದು ರಾಮರಾಜನು ಸುಮ್ಮನಿರುತ್ತಬಂದಿದ್ದನು.

೨ನೆಯ ಪ್ರಕರಣ—ರಣಮಸ್ತಖಾನನ ಕಪಟನಾಟಕವು.

ರಣಮಸ್ತಖಾನನು ತನ್ನ ಮಗನೆಂಬದು ರಾಮರಾಜನಿಗೆ ತೊಂಬತ್ತರೊಂಬತ್ತುಪಾಲು ಗೊತ್ತಾದಂತಾಗಿತ್ತು. ಅದರಲ್ಲಿ ರಣಮಸ್ತನ ರೂಪ ತೇಜಸ್ವಿತೆಗಳು ರಾಯನ ಮನಸ್ಸನ್ನು ಪೂರ್ಣವಾಗಿ ಆಕ್ರಮಿಸಿದ್ದರಿಂದ, ರಣಮಸ್ತನೆಂದರೆ ರಾಮರಾಜನು ಜೀವಕಳೆದುಕೊಳ್ಳುತ್ತಿದ್ದನು. ರಣಮಸ್ತನು ಒಂದು ಕ್ಷಣಮರೆಯಾದರೆ ರಾಮರಾಜನಿಗೆ ಚಡಪಡಿಕೆಯಾಗುತ್ತಿತ್ತು. ರಾಯನು ಪ್ರೇಮಾಂಧನಾಗಿ ಹೋಗಿದ್ದನು; ಆದರೆ ರಣಮಸ್ತನ ಮನಸ್ಸು ಮಾತ್ರ ಶುದ್ಧವಾಗಿದ್ದಿಲ್ಲ. ಆ ದುಷ್ಟನು ನೂರಜಹಾನಳ ಮುಂದೆ ಮಾಡಿದ್ದ ತನ್ನ ಪ್ರತಿಜ್ಞೆಯನ್ನು ಕೊನೆಗಾಣಿಸಲು ಹೊಂಚುಹಾಕಿ ಕುಳಿತಿದ್ದನು. ಕಪಟನಾಟಕದ ಹೊರತು ರಾಮರಾಜನ ಶಿರಸ್ಸು ಹಾರಿಸುವದು ಆಗದೆಂದು ಅತನು ತಿಳಿದಿದ್ದನು. ವಿಜಾಪುರಕ್ಕೆ ಹೋದಾಗ, ಆ ದುಷ್ಟರಣಮಸ್ತನ ಅಪಮಾನವಾವಂತೆ ಜನರಿಗೆಲ್ಲ ತೋರಿತು. ಆದರೆ ಬಾದಶಹನ, ಹಾಗು ರಣಮಸ್ತನ ಗುಪ್ತಾಲೋಚನೆಗಳು ನಡೆದು, ಕಪಟನಾಟಕವನ್ನು ರಚಿಸುವುದಕ್ಕಾಗಿಯೇ ಆ ಪ್ರಸಂಗವು ಒದಗಿತ್ತು. ರಣಮಸ್ತನನ್ನು ಮುಖ್ಯವಾಗಿ ಒಂದು ಚಿಂತೆಯು ಯಾವಾಗಲೂ ಬಾಧಿಸುತ್ತಿತ್ತು. ತನ್ನ ಕುಲೀನತೆಯ ಸಂಬಂಧದಿಂದ ಶಂಕಿಸಿ, ನೂರಜಹಾನಳು ತನ್ನನ್ನು ಎಲ್ಲಿ ಲಗ್ನವಾಗದೆ ಬಿಡುವಳೋ ಎಂದು ಆತನು ಯಾವಾಗಲೂ ಆಲೋಚಿಸುತ್ತಿದ್ದನು. ಆ ಆಲೋ-

ಜನೆಯೊಂದೇ ಆತನ ಶರೀರದ ಕ್ಷೀಣತೆಗೆ ಕಾರಣವಾಗಿತ್ತು. ಅದರಲ್ಲಿ ಮಾಸಾ ಹೇಬರು ವಿಜಾಪುರಕ್ಕೆ ಹೋಗಿಬಂದು, ನೂರಜಹಾನಳ ಪ್ರಾಪ್ತಿಯಸಂಬಂಧ ದಿಂದ ನಿರಾಶೆಯನ್ನು ಪ್ರಕಟಿಸಿದಾಗಿನಿಂದಂತು, ಆತನ ಚಿಂತೆಯು ಮತ್ತಿಷ್ಟು ಹೆಚ್ಚಿತು ; ಆದರೂ ತಾನು ತನ್ನ ಪ್ರತಿಜ್ಞೆಯನ್ನು ನೆರವೇರಿಸಿ, ನೂರಜಹಾನಳ ಪಾಣಿಗ್ರಹಣದ ಪಾತ್ರತೆಯ ಪಡೆಯುವುದನ್ನಂತು ಪಡೆಯಬೇಕೆಂದು ಆತನು ನಿಶ್ಚಯಿಸಿದ್ದನು. ಈತನ ನಿಶ್ಚಯಕ್ಕೆ ರಾಮರಾಜನ ಪುತ್ರವ್ಯಾಮೋಹವು ಅನಾಯಾಸವಾಗಿ ಅನುಕೂಲಿಸಿತು. ವಿನಾಶಕಾಲಕ್ಕನುರಿಸಿ ರಣಮಸ್ತನ ಹುಚ್ಚು ರಾಮರಾಜನ ತಲೆಗೇರಿದಂತೆ, ರಣಮಸ್ತನ ಇಷ್ಟಾರ್ಥಪೂರ್ತಿಯು ಸಮಿಾಪಿಸಹತ್ತಿತ್ತು. ಧೂರ್ತನಾದ ವಿಜಾಪುರದ ಬಾದಶಹನಂತು ಅಂತರಂಗದಲ್ಲಿ ರಣಮಸ್ತನಿಗೆ ಪೂರ್ಣ ಅನುಕೂಲವಾಗಿ, ಬಹಿರಂಗದಲ್ಲಿ ಆತನನ್ನು ಸಂಪೂರ್ಣನಿರಾಕರಿಸುತ್ತಿದ್ದನು. ರಮಣಸ್ತನ ಕೃತಿಗಳೆಲ್ಲ ಬಾದಶಹನ ಅತಿ ಗುಪ್ತವಾದ ಆಲೋಚನೆಯಿಂದಲೇ ನಡೆದಿದ್ದವು. ವಿಜಯನಗರದ ರಾಜಕಾರಣದ ಸುದ್ದಿಗಳೆಲ್ಲ ರಣಮಸ್ತಖಾನನ ಮುಖಾಂತರ ಬಾದಶಹನ ಕಿವಿಗೆ ಮುಟ್ಟುತ್ತಿದ್ದವು; ಆದರೆ ಇದರ ಗಂಧವು ಕೂಡ ಯಾರಿಗೂ ಗೊತ್ತಾಗಿದ್ದಿಲ್ಲ. ರಮಣಸ್ತನ ಒಕ್ಕಸಂಜುಗಳು ಬಾದಶಹನಿಗೂ, ಆತನ ಮುಖ್ಯಮಂತ್ರಿಗಳಿಗೂ ಮಾತ್ರಗೊತ್ತಿದ್ದವು. ಉಳಿದ ಮುಸಲ್ಮಾನರೆಲ್ಲ ರಮಣಸ್ತನನ್ನು ದ್ರೋಹಿಯಂತಲೇ ಭಾವಿಸಿದ್ದರು. ಸ್ವತಃ ಮಾಸಾಹೇಬರಿಗೂ ಈ ಗುಪ್ತಸಂಚಿನ ಸುದ್ದಿಯಿದ್ದಿಲ್ಲ.

ಹೀಗಿರುವಾಗ, ರಾಮರಾಜನು ರಣಮಸ್ತಖಾನನನ್ನು ಒಲಿಸಿಕೊಳ್ಳುವದಕ್ಕಾಗಿ ಶುದ್ಧಾಂತಃಕರಣದಿಂದ ಮನಃಪೂರ್ವಕವಾಗಿ ಪ್ರೀತಿಸುತ್ತಿರಲು, ದುಷ್ಟ ರಮಣಸ್ತನು ಆ ರಾಯನನ್ನು ಸಂಪೂರ್ಣವಾಗಿ ಮೋಸಗೊಳಿಸಿದನೆಂದು ಹೇಳಬಹುದು. ವಿಜಾಪುರದ ಎಲ್ಲಮುಸಲ್ಮಾನ ಬಾದಶಹರ ಸೈನ್ಯಗಳು ವಿಜಯನಗರದ ಮೇಲೆ ಸಾಗಿಬರುತ್ತಿರುವಾಗ, ಆ ಸೈನ್ಯಗಳಿಗೆ ಅನುಕೂಲವಾಗಿ ವಿಜಯನಗರದ ಸೈನ್ಯದಲ್ಲಿ ಕಪಟ ವ್ಯೂಹವನ್ನು ರಚಿಸಲಿಕ್ಕೆ ರಮಣಸ್ತನು ಆರಂಬಿಸಿದನು. ರಾಮರಾಜನು ತನ್ನನ್ನು ಅಂಗರಕ್ಷಕನಾಗಿ ನಿಯಮಿಸಿಕೊಂಡದ್ದರಿಂದ, ರಣಮಸ್ತನಿಗೆ ಅಂತರಂಗವಲ್ಲಿ ಸಂತೋಷವಾಗಿತ್ತು. ತಾನು ಹಲವು ಪಠಾಣರ ಹಾಗು ಅರಬರ ಗುಪ್ತಚಾರರನ್ನು ಕಳಿಸಿ, ವೈರಿಗಳಕಡೆಯ ಗುಪ್ತಸಂಗತಿಗಳ ಗೊತ್ತು ಹಚ್ಚಿಸತೊಡಗಿರುವೆನೆಂದು ರಣಮಸ್ತನು ರಾಮರಾಜನ ಮುಂದೆ ಹೇಳುತ್ತಲಿದ್ದನು ; ಆ ಹೇಳಿಕೆಯಂತೆ ಎರಡು ದಿನಕ್ಕೆ ಮೂರು ದಿನಕ್ಕೆ ಒಮ್ಮೆ ಹೊಸ ಹೊಸ ಸುದ್ದಿಗಳನ್ನು ಹುಟ್ಟಿಸಿ, ತನ್ನ ಚಾರರ ಮುಖಾಂತರ ರಾಮರಾಜನಿಗೆ ತಿಳಿಸಹತ್ತಿದನು. ಆ ಸುದ್ದಿಗಳಲ್ಲಿ ಎಷ್ಟೋ ಸುದ್ದಿಗಳು ಅಸಂಭವವಾದವುಗಳಿ

ದ್ದರೂ, ಅವು ರಣಮಸ್ತನ ಚಾರರಮುಖದಿಂದ ಹೊರಟವಾದ್ದರಿಂದ, ರಾಮರಾಜನಿಗೆ ಸಂಭವವಾಗಿ ತೋರುತ್ತಿದ್ದವು. ವಿಜಯನಗರದ ದೂರದರ್ಶಿಗಳಾದ ಮುತ್ಸದ್ದಿಗಳು, ಆ ಸುದ್ದಿಗಳ ಅಸಂಭವತೆಯನ್ನು ತೋರಿಸಲು, ರಾಮರಾಜನು ರಣಮಸ್ತನ ಸಮಕ್ಷ ಅವರ ಮಾತನ್ನು ನಿರಾಕರಿಸಿ, ಉಪಹಾಸ ಮಾಡಹತ್ತಿದನು. ಆದ್ದರಿಂದ ಮುಂದೆ ರಾಮರಾಜನಿಗೆ ಹಿತವಚನಗಳನ್ನು ಹೇಳುವವರೇ ಇಲ್ಲದಾದರು. ಈ ಮೊದಲೆ ರಾಮರಾಜನು ಶತ್ರುಗಳ ಸೈನ್ಯವನ್ನು ತುಂಗಭದ್ರೆಯ ಕಾಲಹೊಳೆಯಲ್ಲಿ ತರುಬಬೇಕೆಂದು ಯೋಚಿಸಿದ್ದನಷ್ಟೇ; ಆದರೆ ಬಾದಶಹನು ಶತ್ರುವನ್ನು ಬೈಲಿಗೆಳೆಯಬೇಕೆಂದು ಯೋಚಿಸುತ್ತಿದ್ದನು.

ಬಾದಶಹನ ಈ ವಿಚಾರಕ್ಕನುಸರಿಸಿ ರಮಣಸ್ತನು ಕಪಟನಾಟಕವನ್ನು ರಚಿಸಬೇಕಾಗಿತ್ತು. ಹೀಗಿರುವಾಗ, ಒಂದು ದಿನ ರಮಣಸ್ತಖಾನನು ರಾಮರಾಜನ ಬಳಿಗೆ ತನ್ನ ಇಬ್ಬರು ಗುಪ್ತಚಾರರನ್ನು ಕರಕೊಂಡು ಬಂದನು. ಅವರಲ್ಲಿ ಒಬ್ಬನು ಅರಬಸಿದ್ದನು; ಮತ್ತೊಬ್ಬನು ಪಠಾಣನಿದ್ದನು. ರಾಮರಾಜನ ಬಳಿಗೆ ಬೇಕಾದಾಗ ಹೋಗಲಿಕ್ಕೆ ರಣಮಸ್ತನಿಗೆ ಪ್ರತಿಬಂಧವಿದ್ದಿಲ್ಲ. ರಣಮಸ್ತನು ರಾತ್ರಿ ಆ ಗುಪ್ತಚಾರರೊಡನೆ ರಾಮರಾಜನ ಬಳಿಗೆ ಹೋಗಿ—"ಸರಕಾರ, ಇವರಿಬ್ಬರೂ ಇದೇ ಈಗ ಬೇರೆ ಬೇರೆ ಸ್ಥಾನಗಳಿಂದ ಶತ್ರುಗಳ ಕಡೆಯ ಸದ್ದಿಗಳನ್ನು ತಂದಿದ್ದಾರೆ. ಸುದ್ದಿಗಳು ಬಹು ಮಹತ್ವವಿರುತ್ತವೆ. ತಾವು ಅವನ್ನಷ್ಟು ಕೇಳಿಕೊಂಡು ಅವರನ್ನು ಕಳಿಸಿಕೊಡಬೇಕು; ಆಮೇಲೆ ಏನು ಮಾಡಬೇಕೆಂಬದನ್ನು ಕುರಿತು ಆಲೋಚಿಸೋಣ, ಎಂದು ಹೇಳಿದನು. ಅದನ್ನು ಕೇಳಿ ರಾಮರಾಜನು ಸ್ವಾಭಾವಿಕವಾಗಿಯೇ ಅತ್ಯುತ್ಕಂಠೆಯಿಂದ ಆ ಯವನದೂತರಿಗೆ, ಸುದ್ದಿಯೇನೆಂದು ಕೇಳಿದನು. ಅದಕ್ಕೆ ಅವರು—ಸರಕಾರ, ಅಲ್ಲಿ ಅದಿಲಶಹನು ಈ ವರೆಗೆ ತುಂಗಭದ್ರೆಯ ಕಾಲಹೊಳೆಯ ಮಾರ್ಗವಾಗಿ ನಮ್ಮ ಮೇಲೆ ಸಾಗಿಬರಬೇಕೆಂದು ಮಾಡಿದ್ದನಷ್ಟೆ; ಆದರೆ ಅದು ಕೇವಲ ತೋರಿಕೆಗೆ ಮಾಡಿದ್ದು, ಆತನು ಉತ್ತರದಿಕ್ಕಿನಲ್ಲಿ ಬೇರೊಂದು ಕಡೆಯಲ್ಲಿ ತುಂಗಭದ್ರೆಯನ್ನು ದಾಟಿ, ನಮ್ಮರಾಜ್ಯದಲ್ಲಿ ಬರಬೇಕೆಂದು ಮಾಡಿದ್ದಾನೆ. ಈಗ ಆತನು ನಿಲ್ಲಿಸಿರುವ ಸ್ಥಳದಲ್ಲಿಯೇ ತನ್ನ ಸೈನ್ಯವನ್ನು ತೋರಿಕೆಗಾಗಿ ನಿಲ್ಲಿಸಿ, ಆರಿಸಿದ ಬೇರೆ ಕೆಲವು ಡಂಡಾಳುಗಳನ್ನೂ, ತನ್ನ ಖಾಸ ಸೈನ್ಯವನ್ನೂ ತಕ್ಕೊಂಡು ಉತ್ತರಕಡೆಯ ಸ್ಥಳದಲ್ಲಿ ಹೊಳೆಯನ್ನು ದಾಟಿ, ನಮ್ಮ ರಾಜ್ಯವನ್ನು ಸೇರುವವನಿದ್ದಾನೆ, ಆತನು ಪ್ರವೇಶಿಸಬೇಕೆಂದು ಮಾಡಿರುವ ಸ್ಥಳದಲ್ಲಿ ನಮ್ಮ ಸೈನ್ಯವು ಇರುವದಿಲ್ಲ. ಆ ಸ್ಥಳವನ್ನು ನಾವು ತೋರಿಸುವೆವು. ಮುಂದೆ ಏನು ಮಾಡಬೇಕೆಂಬದನ್ನು ತಾವು ಯೋಚಿಸಬೇಕು. ನಿಮ್ಮ ಶೂರಭಂಧುಗಳ

ಸೈನ್ಯದೊಡನೆ ಈಗ ನಿಂತಿರುವ ಸ್ಥಳದಲ್ಲಿ ಶತ್ರುಗಳು ಹೊಳಿಯನ್ನು ದಾಟುವ ದಿಲ್ಲೆಂಬದು ನಿಶಯವು. ನಿಮ್ಮ ಬಂಧುಗಳ ಭಯವು ಅವರಿಗೆ ವಿಶೇಷವಾಗಿರುತ್ತದೆ.

ಗುಪ್ತಚಾರರ ಈ ಮಾತುಗಳನ್ನು ಕೇಳಿ ರಾಮರಾಜನು ಅವರನ್ನು ಕುರಿತು ಏನೋ ವಿಚಾರಿಸಬೇಕೆನ್ನುತ್ತಿರಲು, ಧೂರ್ತನಾದ ರಣಮಸ್ತಖಾನನು ಅದಕ್ಕೆ ಆಸ್ಪದಕೊಡದೆ, ಕಣ್ಣಸನ್ನೆಯಿಂದ ಚಾರರಿಗೆ ಹೊರಗೆಹೋಗಿ ನಿಲ್ಲಲು ಆಜ್ಞಾಪಿಸಿದನು. ಅವರಾದರೂ ತಟ್ಟನೆ ಅಲ್ಲಿಂದ ಹೊರಟುಹೋದರು. ಅವರು ರಾಮರಾಜನಿಗೆ ಪ್ರಶ್ನೆಮಾಡಲಿಕ್ಕೆ ಆಸ್ಪದವನ್ನೇ ಕೊಡಲಿಲ್ಲ. ಅವರಿಬ್ಬರು ಚಾರರು ಹೋದ ಕೂಡಲೆ ರಣಮಸ್ತಖಾನನು ರಾಮರಾಜನನ್ನು ಕುರಿತು—"ಹುಜೂರ,..... ಎಂದು ಮಾತಾಡುತ್ತಿರಲು, ರಾಮರಾಜನು ನಡುವೇ ಬಾಯಿಹಾಕಿ—ಎಲಾ, ನಾನು ನಿನ್ನನ್ನು ಮಗನೆಂದು ಭಾವಿಸಿರಲು ನೀನು "ಹುಜೂರ" "ಸರಕಾರ" ಎಂದು ಕರೆಯುತ್ತೀಯಲ್ಲ! ಇನ್ನು ಮೇಲೆ ಹಾಗೆ ಕರೆಯಬೇಡ, ಎಂದು ಹೇಳಿದನು. ರಣಮಸ್ತನು ತಂದ ಸುದ್ದಿಯಿಂದ ರಾಮರಾಜನಿಗೆ ಪ್ರೇಮೋದ್ರೇಕವಾದಂತಾಗಿತ್ತು. ರಣಮಸ್ತನ ಕಪಟವು ಆತನಿಗೆ ಹೊಳೆಯಲಿಲ್ಲ. ರಾಮರಾಜನ ಜನ ಪ್ರೇಮೋದ್ಗಾರಗಳನ್ನು ಕೇಳಿ ರಣಮಸ್ತಖಾನನು ನಕ್ಕು—ತಾವು ನನ್ನನ್ನು ಮಗನೆಂದು ಭಾವಿಸುತ್ತಿದ್ದರೂ, ನಾನು ನಿಮ್ಮ ನೌಕರನೆಂಬವನ್ನು ನಾನು ಹ್ಯಾಗೆ ಮರೆಯಬೇಕು? ಆದಿರಲಿ, ನಾನು ಹ್ಯಾಗೆ ಕರೆದರೇನು? ನನ್ನ ಮೇಲೆ ತಮ್ಮ ಪ್ರೇಮವಿರುವದೊಂದು ಮುಖ್ಯ ಮಾತು. ನನಗೆ ಈಗ ತೋರುವದೇನೆಂದರೆ, ಚಾರರು ಹೇಳಿರುವ ಸುದ್ದಿಯ ಉಪಯೋಗವನ್ನು ನಾವು ಬೇಗನೆ ಮಾಡಿಕೊಂಡರೇ ಪ್ರಯೋಜನವಾಗುವದು. ನೀವು ಈಗ ಸೈನ್ಯವನ್ನು ವಿಭಾಗಿಸಿದ್ದು ಶತ್ರುಗಳಿಗೆ ಅನಾಯಾಸವಾಗಿ ಅನುಕೂಲಿಸಿದಂತೆ ಕಾಣುತ್ತದೆ. ತಾವು ಆಜ್ಞಾಪಿಸಿದರೆ ನಾನು ನನ್ನ ಸೈನ್ಯದೊಡನೆ ಆ ಉತ್ತರದಿಕ್ಕಿನ ಕಾಲಹೊಳೆಯ ಕಡೆಗೆ ಹೋಗಿ ಶತ್ರುಗಳ ಸಮಾಚಾರವನ್ನು ತಕ್ಕೊಳ್ಳುವೆನು. ಆ ಸ್ಥಳದ ಗುರುತು ನನಗೆ ಚನ್ನಾಗಿರುತ್ತದೆ. ಅಲ್ಲಿ ಕಾಲಹೊಳೆಯು ಸುಲಭವಾದದ್ದಿದ್ದರೂ, ಹಾದಿಯು ಬಹು ಕಿರಿದು ಇರುತ್ತದೆ. ಬಹಳವಾದರೆ ನಾಲ್ಕು ಜನರು ಮಾತ್ರ ಸಾಲಾಗಿ ಆ ಹಾದಿಯಲ್ಲಿ ಬರಬಹುದು. ಹಾದಿಯ ಎಡಬಲಗಳಲ್ಲಿ ಮಡವುಗಳು ಇರುವವು. ಹಾದಿಯು ಸುಲಭವಾದದ್ದೆಂದು ತಿಳಿದು ದಂಡಾಳುಗಳು ಕುರಿಯಹಾಗೆ ನುಗ್ಗಬಹುದು. ಆಗ ನಾವು ಅಲ್ಲಿ ಇರದಿದ್ದರೆ ಕಷ್ಟಪಟ್ಟಾದರೂ ಅವರು ಹೊಳೆಯನ್ನು ದಾಟಿ ಬರಬಹುದು;

ಆದರೆ ನಾವು ಅಲ್ಲಿಗೆ ಹೊತ್ತಿಗೆ ಹೋಗಿ ಮುಗಿಬಿದ್ದರೆ, ಶತ್ರುಗಳಿಗೆ ಜಲಸಮಾಧಿಯು ದೊರೆಯುವದು. ಇವರಮೇರೆ ತಮ್ಮ ಅಪ್ಪಣೆಯಂತೆ ನಡೆದುಕೊಳ್ಳುವೆನು, ಎಂದು ಹೇಳಿದನು. ಅದಕ್ಕೆ ರಾಮರಾಜನು ರಣಮುಷ್ಕನ ಬೆನ್ನ ಮೇಲೆ ಕೈಯಾಡಿಸಿ,

ರಾಮರಾಜ—ನೀನು ನನ್ನನ್ನು ಅಗಲಿ ದೂರ ಹೋಗಲಾಗದು. ನನ್ನ ಮೇಲೆ ಶತ್ರುಗಳು ಏರಿಬಂದ ಪಕ್ಷದಲ್ಲಿ ನೀನು ಹತ್ತರ ಇರಬೇಕು. ನನ್ನ ಏಡ ಬಲದಲ್ಲಿ ನನ್ನ ಇಬ್ಬರು ಬಂಧುಗಳೂ, ಮಧ್ಯದಲ್ಲಿ ನನ್ನ ಬಳಿಯಲ್ಲಿ ನೀನೂ ಇರಲೇ ಬೇಕು. ನನ್ನ ಸಂರಕ್ಷಣವ ವ್ಯವಸ್ಥೆಯನ್ನು ನಾನು ಮಾಡಿಕೊಳ್ಳುವದಕ್ಕಿಂತ, ನಿನ್ನ ಶೌರ್ಯವನ್ನು ಕಣ್ಣುಮುಟ್ಟಿ ನೋಡುವ ವ್ಯವಸ್ಥೆಯನ್ನು ನಾನು ಮೊದಲು ಮಾಡಿಕೊಳ್ಳಬೇಕಾಗಿರುತ್ತದೆ; ಯಾಕಂದರೆ ಪರಾಕ್ರಮದಲ್ಲಿ ನನ್ನ ಆವರಕ್ಕೆ ನೀನು ಪಾತ್ರನಿರುತ್ತೀಯೆಂದು ನಾನು ಈ ಮೊದಲೇ ತರ್ಕಿಸಿರುವದು ನಿಜವೆಂಬ ನನ್ನ ಅನುಭವಕ್ಕೆ ಬರಬೇಕಾಗಿರುತ್ತದೆ.

ರಣಮುಷ್ಕಖಾನ—ತಮ್ಮ ಸಂರಕ್ಷಣವ ವ್ಯವಸ್ಥೆಯನ್ನು ಎರಡನೆಯವರು ಯಾಕೆ ಮಾಡಬೇಕು? ನಾಲಾರು ಜನರು ಒಮ್ಮೆಲೆ ನಿಮ್ಮ ಮೈಮೇಲೆ ಬಂದರೂ ನೀವು ಅವರಿಗೆ ಸೊಪ್ಪುಹಾಕುವಹಾಗಿಲ್ಲ. ತಮ್ಮ ಬಳಿಯಲ್ಲಿ ನಾನೂ ಇರುವದರಿಂದ ನನ್ನ ಶೌರ್ಯವು ತಮ್ಮ ಕಣ್ಣಿಗೆ ಬಿದ್ದು ನನ್ನ ಲಾಭವು ಮಾತ್ರ ಆಗುವದು.

ರಾಮರಾಜ--ನೀನು ಅಂಥ ಸಮರ ಪಾಂಡಿತ್ಯವನ್ನು ತೋರಿಸುವೆ ಎಂಬದನ್ನು ನಾನು ಬಲ್ಲೆನು. ನೀನು ನನ್ನ ಬಳಿಯಲ್ಲಿಯೇ ಇರು. ನಿನ್ನ ಚಾರರು ಹೇಳಿರುವ ಸುದ್ದಿಯು ಉಪಯೋಗವನ್ನು ಹ್ಯಾಗೆ ಮಾಡಿಕೊಳ್ಳಬೇಕೆಂಬದನ್ನು ನಾನು ಪೂರ್ಣವಾಗಿ ಆಲೋಚಿಸಿರುತ್ತೇನೆ. ಶತ್ರುಗಳು ತುಂಗಭದ್ರೆಯ ಹೊಳೆಯನು ದಾಟುವ ಹಾದಿಯನ್ನು ನಾನು ನೋಡುವದೇ ಇಲ್ಲ. ನಾವೇ ತುಂಗಭದ್ರೆಯನ್ನು ದಾಟಿಹೋಗಿ ತುಂಗ-ಕೃಷ್ಣೆಗಳ ಮಧ್ಯದಲ್ಲಿ ಅವರೊತನೆ ಕಾದಿ, ಅವರನ್ನು ಹಿಂದಕ್ಕಟ್ಟುವೆವು. ತುಂಗಭದ್ರೆಯತನಕ ಅವರನ್ನು ಬಾರದಂತೆ ಮಾಡಿಬಿಟ್ಟರೆ ಕಾಲ ಹೊಳೆಗಳ ವಾದವೇ ನಿಂತುಹೋಗುವುದು. ಶತ್ರುಗಳು ಹ್ಯಾಗೂ ಕೃಷ್ಣೆಯನ್ನು ದಾಟಿ ಬಂದೇ ಇರುವರು. ಇತ್ತಕಡೆಯಿಂದ ನಾವು ದಾಟುತ್ತ ಹೋಗುತ್ತೇವೆ. ನಾವು ಮುಗಿಬಿದ್ದು ಹೋದೆವೆಂದರೆ ಅವರಿಗೆ ಓಡಿಹೋಗಲಿಕ್ಕೆ ದಿಕ್ಕುಗಳು ಸಾಲಲಿಕ್ಕಿಲ್ಲ. ನಾವು ಅವರನ್ನು ನಮ್ಮ ಸೀಮೆಯಲ್ಲಿಯಾವರೂ ಯಾಕೆ ಬರಗೊಡಬೇಕು?

ಈ ಮೇರೆಗೆ ನುಡಿದು ರಾಮರಾಜನು ಕೂಡಲೆ ತಿರುಮಲ-ವೇಂಕಟಾದ್ರಿಗಳ ಕಡೆಗೆ ಪತ್ರಗಳನ್ನು ಬರೆದು ಅವನ್ನು ರಾವುತರಕೂಡ ಕಳಿಸಿದನು. ಆ ಪತ್ರಗಳಲ್ಲಿ ಅತನು ಅವರಿಗೆ ಸ್ಪಷ್ಟವಾಗಿ—"ನಾವು ನಮ್ಮ ಮೂರೂ ಸೈನ್ಯಗಳನ್ನು ತುಂಗಭದ್ರೆಯ ದಾಟಿಸಿಕೊಂಡುಹೋಗಿ ಶತ್ರುಗಳ ದೂಳಹಾರಿಸಿಬಿಡಬೇಕು. ತುಂಗಾ—ಕೃಷ್ಣೆಗಳ ಮಧ್ಯದಲ್ಲಿ ಯವನರನ್ನು ಹಿಡಿದು ಬಿಟ್ಟರೆ, ಅವರಿಗೆ ಓಡಿಹೋಗಲಿಕ್ಕೆ ಭೂಮಿಯು ಸಾಲಲಿಕ್ಕಿಲ್ಲ. ಆಗ ಪುನಃ ತಲೆಯೆತ್ತದಂತೆ ಅವರನ್ನು ಚೆನ್ನಾಗಿ ಥಳಿಸೋಣ" ಎಂದು ಬರೆದಿದ್ದನು. ಶತ್ರುಗಳಮೇಲೆ ಯಾರು ಯಾವಕಡೆಯಿಂದ ದಾಳಿಮಾಡಬೇಕೆಂಬದನ್ನು ಆ ಪತ್ರದಲ್ಲಿ ರಾಯನು ಸ್ಪಷ್ಟವಾಗಿ ಕಾಣಿಸಿದ್ದನು. ರಾಮರಾಜನು ಪತ್ರಗಳನ್ನು ರಣಮಸ್ತಖಾನನಿಗೆ ಓದಿ ತೋರಿಸಿಯೇ ಕಳಿಸಿದ್ದನಲ್ಲದೆ, ಅದರೊಗಿನ ಯೋಜನೆಯನ್ನು ಸಕಾರಣ ಶ್ಲಾಘಿಸಿದ್ದನು. ರಾಮರಾಜನ ಪತ್ರಗಳು ಆತನ ಬಂಧುಗಳ ಕಡೆಗೆ ಹೋದ ಸ್ವಲ್ಪ ಹೊತ್ತಿನಲ್ಲಿಯೇ, ರಣಮಸ್ತಖಾನನು ಆ ಸುದ್ದಿಯನ್ನೆಲ್ಲ ಬರೆದಿದ್ದ ಪತ್ರವನ್ನು ತನ್ನ ಇಬ್ಬರು ಸೇವಕರ ಕೈಯಲ್ಲಿ ಕೊಡಲು, ಅವರು ತುಂಗಭದ್ರೆಯನ್ನು ದಾಟಿ ಬಾದಶಹನ ಠಾಣ್ಯದ ಕಡೆಗೆ ನಡೆದರು. ಹೀಗೆ ವಿಜಯನಗರದಲ್ಲಿ ನಡೆದ ಪ್ರತಿಒಂದು ಮಹತ್ವದ ಸುದ್ದಿಯನ್ನು ರಣಮಸ್ತಖಾನನು ಶತ್ರುಗಳಿಗೆ ಗುಪ್ತವಾಗಿ ತಿಳಿಸುತ್ತಿದ್ದನು; ಆದರೆ ಅತ್ಯಂತ ಚಾಣಾಕ್ಷನಾದ ರಾಮರಾಜನು ಸಹ ಪ್ರೇಮಾಂಧನಾದದ್ದರಿಂದ, ರಣಮಸ್ತನ ಈ ಘಾತಕವನ್ನು ಅರಿಯದೆ ಹೋದನು. ಅತನು ಹಾಗೆ ಅಂಧನಾಗದೆ, ತನ್ನ ಸ್ವಾಭಾವಿಕವಾದ, ಧೂರ್ತತನದಿಂದ ನಡೆದಿದ್ದರೆ, ಕನ್ನಡಿಗರ ಈ ಕರ್ಮಕಥೆಯನ್ನು ಬರೆಯುವ ಪ್ರಸಂಗವು ಬರುತ್ತಿತ್ತೋ ಇಲ್ಲವೋ ಯಾರಿಗೆ ಗೊತ್ತು!

ರಾಮರಾಜನ ಪತ್ರಗಳು ತಿರುಮಲ—ವೇಂಕಟಾದ್ರಿಗಳಿಗೆ ಮುಟ್ಟಲು, ಅವನ್ನು ಓದಿ ಅವರಿಗೆ ಬಹಳ ಸಮಾಧಾನವಾಯಿತು. ಶತ್ರುಗಳು ಮೈಮೇಲೆ ಬರುವವರೆಗೆ ತಾವು ಕೈ ಮುಚ್ಚಿಕೊಂಡು ಹಾದಿಯ ನೋಡುತ್ತ ಕುಳಿತುಕೊಳ್ಳುವದು ಹೇಡಿತನದ ಲಕ್ಷಣವೆಂದು ತಿಳಿದು, ತಾವು ಮುಂದಕ್ಕೆ ಸಾಗಿಹೋಗುವ ಬಗ್ಗೆ ತಿರುಮಲನು ರಾಮರಾಜನಿಗೆ ಪತ್ರವನ್ನು ಬರೆಯತಕ್ಕವನಿದ್ದನು. ಅಷ್ಟರಲ್ಲಿ ರಾಮರಾಜನ ಈ ಪತ್ರವು ಅತನ ಕೈಸೇರಿತು. ಆದ್ದರಿಂದ ಅತನ ಆನಂದವು ಹೊಟ್ಟೆಯಲ್ಲಿ ಹಿಡಿಸದಾಯಿತು. ಅತನು ತನ್ನ ಸೈನ್ಯಕ್ಕೆ ಇಷ್ಟುಹೊತ್ತಿಗೆ ತುಂಗಭದ್ರೆಯನ್ನು ದಾಟಹೋಗಬೇಕೆಂದು ಆಜ್ಞಾಪಿಸಿ, ಆ ಸುದ್ದಿಯನ್ನು ವೇಂಕಟಾದ್ರಿಗೆ ತಿಳಿಸಿ ಅದೇ ಹೊತ್ತಿಗೇ ಅತನು ತುಂಗಭದ್ರೆಯನ್ನು ದಾಟಿಬರುವಂತೆ

ಮಾಡಿದನು. ತಿರುಮಲನು ರಾಮರಾಜನಿಗೂ ತಾನು ಮಾಡಿದ ವ್ಯವಸ್ಥೆಯನ್ನು ತಿಳಿಸಿ, ಅದೇ ಕಾಲದಲ್ಲಿಯೇ ತಮ್ಮ ಸೈನ್ಯವನ್ನು ನಿರ್ಬಾಧವಾಗಿ ಮುಂದಕ್ಕೆ ನೂಕಬೇಕೆಂದು ರಾಮರಾಜನಿಗೆ ಹೇಳಿಕೊಂಡನು. ಇದರಿಂದ ರಾಯರ ಮೂರು ದಂಡುಗಳೂ ನಿಯಮಿತ ವೇಳೆಯಲ್ಲಿ ತುಂಗಭದ್ರೆಯನ್ನು ದಾಟಲನುವಾದವು. ಈ ಸುದ್ದಿಯೂ ರಣಮಸ್ತನ ಮುಖಾಂತರ ಶತೃಗಳಿಗೆ ಮುಟ್ಟಿತು. ಈ ಮೂರೂ ಸೈನ್ಯಗಳ ಸಂಖ್ಯೆಯು ಅಪಾರವಾಗಿತ್ತು. ಸೈನಿಕರು—" ಜಯ ನರಹರಿ! ಜಯ ವಿಠ್ಠಲಸ್ವಾಮಿ! ಜಯ ವಿರೂಪಾಕ್ಷ! ಜಯ ನರಸಿಂಹ " ಎಂದು ಜಯಘೋಷ ಮಾಡುತ್ತ ತುಂಗಭದ್ರೆಯನ್ನು ಪ್ರವೇಶಿಸಿದರು. ಕಾಲ ಹೊಳೆಯೂ ಅವರ ಗೊತ್ತಿನದಾದ್ದರಿಂದ, ಅವರ ಸೈನ್ಯವು ಬೇಗನೆ ಆಚೆಯ ದಂಡೆಯನ್ನು ಕಂಡಿತು. ಸೈನಿಕರು ನಾವಿನ ಸೇತುವೆಯನ್ನೂ ಉಪಯೋಗಿಸಿದರು. ರಾಮರಾಜನ ಈ ಸೈನ್ಯದ ಚಲನವಲನವು ಈ ಮೊದಲೆ ವಿಜಾಪುರದ ಅಲ್ಲಿಅದಿಲಶಹನಿಗೂ, ಅಹಮ್ಮದನಗರದ ಹುಸೇನ ನಿಜಾಮಶಹನಿಗೂ ಗೊತ್ತಾದದ್ದರಿಂದ, ಅವರೂ ತಮ್ಮ ಸೈನ್ಯವನ್ನು ಒಮ್ಮೆಲೆ ಒಟ್ಟುಗೂಡಿಸಿ ಮಾಡತಕ್ಕ ವ್ಯವಸ್ಥೆಯನ್ನು ಮಾಡಿದರು. ಈ ಪ್ರಚಂಡ ಸೈನ್ಯವು ತಮ್ಮ ಮೇಲೆ ಆಕಸ್ಮಾತ್ ಸಾಗಿಬರುವದನ್ನು ನೋಡಿ, ತಾವು ಅಂಜಿ ಹಿಂದಕ್ಕೆ ಸರಿಯುವಂತೆ ಹೂಲಿಯ ಎಬ್ಬಿಸಬೇಕೆಂದು ಮುಸಲ್ಮಾನರು ಮೊದಲೇ ಯೋಚಿಸಿದ್ದರು. ಹಾಗೆ ವಿಜಯನಗರದ ಸೈನಿಕರು ತುಂಗಭದ್ರೆಯನ್ನು ದಾಟಿದ ಕೂಡಲೆ, ಶತೃ ಸೈನ್ಯವು ಹಿಂದೆಗೆಯಹತ್ತಿತು. "ತಾವು ಹಿಂದಕ್ಕೆ ಸರಿಯುತ್ತ ಹೋಗಿ, ಹೊಡತಕ್ಕೆ ಅನುಕೂಲವಾದ ಸ್ಥಳವನ್ನು ಮುಟ್ಟಿದ ಕೂಡಲೆ ಹಿಂದಿರುಗಿನಿಂತು ಶತೃಗಳ ಮೇಲೆ ಬೀಳಬೇಕು, ಆ ಮೇಲೆ ಆಗುವದು ಆಗಲಿ " ಎಂದು ಮುಸಲ್ಮಾನರು ನಿಶ್ಚಯಿಸಿದ್ದರು. ವಿಜಯನಗರದ ಸೈನ್ಯದ ವಿಷಯವಾಗಿ ಅವರು ನಿರ್ಭಯರಾಗಿದ್ದರೆನ್ನುವಹಾಗಿದ್ದಿಲ್ಲ; ಆದರೆ ಅವರು ರಚಿಸಿದ ಕಪಟನಾಟಕದ ಧೈರ್ಯವು ಅವರಿಗೆ ವಿಶೇಷವಾಗಿತ್ತು.

ತಾವು ತುಂಗಭದ್ರೆಯ ದಾಟಿ ಮುಂದಕ್ಕೆ ಸಾಗಿ ಹೋದಕೂಡಲೆ ಶತೃಗಳು ಓಡಿಹೋಗುತ್ತಿರುವದನ್ನು ನೋಡಿ ರಾಮರಾಜನೂ, ಆತನ ಬಂಧುಗಳೂ ಬಹಳ ಹಿಗ್ಗಿದರು. ತಾವು ಮುಂದಕ್ಕೆ ಸಾಗಿ ಬಂದದ್ದು ಬಹಳ ನೆಟ್ಟಗಾಯಿತೆಂದು ಅವರು ಉತ್ಸಾಹಗೊಂಡರು. ಇನ್ನು ಶತೃ ಸೈನ್ಯವನ್ನು ಒಂದೇಸವನೆ ಬೆನ್ನಟ್ಟಿಹೋದರೆ ಕಾರ್ಯವು ಚೆನ್ನಾಗಿ ಸಾಧಿಸುವದೆಂದು ತಿಳಿದು, ಅವರು ತಮ್ಮ ಸೈನಿಕರನ್ನು—" ಎಲೇ, ಬೇಟೆಯನ್ನು ಹೊಡೆಯಿರಿ—ಬೇಟೆಯನ್ನು ಹೊಡೆಯಿರಿ, ಜಯನರಹರಿ? ಜಯವಿಠ್ಠಲಸ್ವಾಮಿ? " ಎಂದು ವಿಜಯಘೋಷ

ಕುತ್ತ ಪ್ರೋತ್ಸಾಹಗೊಳಿಸಹತ್ತಿದರು. ಶತ್ರು ಸೈನ್ಯದ ಮೇಲೆ ಬಾಣಗಳ
ಯಾಗಹತ್ತಿತು; ಶತ್ರುಗಳಿಗೆ ಓಡಿಹೋಗಲಿಕ್ಕೆ ಭೂಮಿಯು ಸಾಲಲೊಲ್ಲದೆ
ಸಹಾಗೆ ತೋರಿತು. ಹೀಗೆ ಶತ್ರುಗಳು ಓಡಿಹೋಗುವ ಸೋಗುಮಾಡಿದ
ಲ್ಲ ವಿಜಯನಗರದ ದಂಡಾಳುಗಳ ಆನಂದವು ಹೊಟ್ಟೆಯಲ್ಲಿ ಹಿಡಿಸದಾ
ು. ಆಗ ರಾಮರಾಜನು ತನ್ನ ಬಳಿಯಲ್ಲಿದ್ದ ರಣಮಸ್ತಖಾನನನ್ನು
ಸು ಡೌಲಿನಿಂದ—ನಿನ್ನ ಮಾತುಕೇಳಿ ನಾವು ಉತ್ತರದಿಕ್ಕಿನ ತುಂಗಭದ್ರೆ
ಕಾಲಹೊಳೆಯನ್ನು ಕಾಯುತ್ತ ಕುಳಿತುಕೊಂಡಿದ್ದರೆ ಹೀಗಾಗುತ್ತಿತ್ತೋ?
ನೋಡು, ಶತ್ರುಸೈನ್ಯವು "ಕಚ್ಚಿಗೊಂದುಕೈ ಮಚ್ಚಿಗೊಂದುಕೈ" ಅನ್ನುವ
ಓಡಹತ್ತಿದೆ! ಇನ್ನು ಅವರು ಹೋಗುವಷ್ಟೆತ್ತ? ಅವರನ್ನು ರಸಾತಳಕ್ಕೆ
ುವೆನು, ಕೃಷ್ಣೆಯನ್ನು ದಾಟಿಹೋದರೂ, ಅವರ ನಾಶವಾಗುವದು.
ದೆಯಿದ್ದರೂ ಅವರ ನಾಶವಾಗುವದು. ಅನ್ನಲು, ರಣಮಸ್ತಖಾನನೂ
ಉತ್ತರಕೊಡದೆ, ಸುಮ್ಮನೆ ರಾಮರಾಜನಿಗೆ ಮುಜುರೆಮಾಡಿ ನಕ್ಕನು. ಆ
ುಂದ ಆತನು ರಾಮರಾಜನಿಗೆ-"ಮಹಾರಾಜರೇ, ತಮ್ಮ ಅನುಭವ, ತಮ್ಮ
ರ್ಯ, ತಮ್ಮ ರಾಜಕಾರಣಪಟುತ್ವ ಇವನ್ನು ಎಷ್ಟು ವರ್ಣಿಸಿದರೂ
ವೇ ಇರುವದು," ಎಂಬರ್ಥವನ್ನು ಪ್ರಕಟಿಸಿದನು. ಮನಸ್ಸಿನಲ್ಲಿ
ಶ್ರೀ ರಾಮರಾಜನು ಮೋಸಹೋಗುತ್ತಿರುವಬಗ್ಗೆ ಖಾನನನಿಗೆ ಬಹಳ ಸಮಾ
ವಾಗಿತ್ತು. ಹೀಗೆ ಆತನು ಸಮಾಧಾನಪಡುತ್ತಿರುವಾಗ ರಾಮರಾಜನು
ುಸ್ತನಿಗೆ—

ರಾಮರಾಜ—ರಣಮಸ್ತಖಾನ, ನೀನು ವೀರಪುತ್ರನಿರುತ್ತೀ. ಈ ಯುದ್ಧ
ನಾನು ನಿನಗೊಂದು ಮಹತ್ವದ ಕಾರ್ಯವನ್ನು ಹೇಳುವವನಿದ್ದೇನೆ.
ನ್ನು ನೀನು ಮಾಡಲೇಬೇಕು.

ರಣಮಸ್ತ—ನೀವು ನನ್ನನ್ನು ದೂರಹೋಗಗೊಟ್ಟರಷ್ಟೇ ನಾನು ಮಹ
ರ್ಯವನ್ನು ಮಾಡುವದು? ನನ್ನ ಬಳಿಯಲ್ಲಿಯೇ ಇರಬೇಕೆಂದು ನೀವು
ಹಪಡುತ್ತಿರುವಿರಿ. ನಿಮ್ಮ ಸುತ್ತು ಮುತ್ತು ಅನೇಕವೀರರು ದಕ್ಷತೆಯಿಂದ
ನ್ನು ರಕ್ಷಿಸುತ್ತಿರಲು, ಪರಾಕ್ರಮವನ್ನು ತೋರಿಸುವ ಪ್ರಸಂಗವು ನನಗೆ
ಿ ಬರಬೇಕು? ನನ್ನನ್ನು ನೀವು ಹರಿಯಬಿಡುವದಿಲ್ಲ. ನನ್ನನ್ನು ಬಿಟ್ಟು
ಗಲೇಬೇಡೆಂದು ನೀವು ಅನ್ನುತ್ತೀರಿ, ಅಂದಬಳಿಕ ನಾನೇನುಮಾಡಲಿ?

ರಾಮರಾಜ—ಇಲ್ಲ, ನಿನಗೆ ನಾನು ಹೋಗಬೇಡನ್ನುವದಿಲ್ಲ. ಯೋಗ್ಯ
ಂಗ ಒದಗಿದ ಕೂಡಲೆ ನಿನ್ನನ್ನು ಕಳಿಸುವೆನು. ಕಾರ್ಯವನ್ನು ಸಾಧಿಸ
ಮಾತ್ರ, ನೀನು ಸಿದ್ಧವಾಗಿರಲಿಕ್ಕೆಬೇಕು.

ರಣಮಸ್ತ—ನಾನು ಸಿದ್ಧನೇ ಇರುತ್ತೇನೆ. ಅದರ ವಿಷಯವಾಗಿ ತಮಗೆ ಸಂಶಯವೇತಕ್ಕೆ? ನಾನು ಸಾಧಿಸಬೇಕಾಗಿರುವ ಕಾರ್ಯವು ಯಾವದೆಂಬದನ್ನು ಹೇಳಿಬಿಡಬೇಕು.

ರಾಮರಾಜ—ಅನ್ಯಾಯವಾಗಿ ನಿನಗೆ ದೇಹಾಂತಶಾಸನ ಮಾಡಬೇಕೆಂದು ಮಾಡಿರುವ ವಿಜಾಪುರದ ಬಾದಶಹನನ್ನು ನೀನು ಸೆರೆಹಿಡಿದು ತಂದುಕೊಡ ಬೇಕು. ಅದು ಸಾಧಿಸದಿದ್ದರೆ, ಆತನ ರುಂಡವನ್ನಾದರೂ ತಂದುಕೊಡಬೇಕು.

ರಾಮರಾಜನ ಮುಖದಿಂದ ಹೊರಟ ಈ ಮಾತುಗಳನ್ನು ಕೇಳಿ ರಣಮಸ್ತ ಖಾನನು ಚಕಿತನಾದಂತೆ ತೋರಿತು. ಆತನು ಸಂತಾಪದಿಂದ ಅವಡುಗಚ್ಚಿ—ಏನನ್ನುವಿರಿ? ನಾನು ಇಂಥ ಕೃತಜ್ಞನಾಗಲಾ?'' ಎಂದು ಕೇಳಿದನು. ಅದಕ್ಕೆ ರಾಮರಾಜನು—"ಇದರಲ್ಲಿ ಕೃತಘ್ನತನವೇನು? ನಿನ್ನನ್ನು ನಾನು ಬಾದಹನಿಗೆ ಒಪ್ಪಿಸಿದ್ದರೆ, ಆತನು ನಿನ್ನ ಶಿರಚ್ಛೇದಮಾಡಿಸದೆ ಬಿಡುತ್ತಿದ್ದನೋ? ಅಂದಬಳಿಕ ನನ್ನ ಪಕ್ಷವನ್ನು ವಹಿಸಿದ ನೀನು, ಯುದ್ಧದಲ್ಲಿ ನನ್ನ ಸಲುವಾಗಿ ಬಾದತಹನ ಶಿರಚ್ಛೇದಮಾಡಿದರೆ ಕೃತಘ್ನತನವು ಹ್ಯಾಗಾಗುವದು? ಅದರಲ್ಲಿ ನಾನು ನಿನಗೆ ಒಮ್ಮೆಲೆ ಶಿರಚ್ಛೇದಮಾಡೆಂತಲೂ ಹೇಳುವದಿಲ್ಲ. ಸೆರೆ ಹಿಡಿಯುವದು ಸಾಧಿಸದಿದ್ದರೆ, ಶಿರಚ್ಛೇದ ಮಾಡೆಂದು ಹೇಳಿದೆನು. ನನ್ನ ಪಕ್ಷವಹಿಸಿ ನೀನು ಈ ಕಾರ್ಯಮಾಡಿದೆಯೆಂದರೆ, ನಿನ್ನ ಅಖಂಡ ಕಲ್ಯಾಣಮಾಡುವೆನು. ನೀನು ವಿಜಾಪುರದ ಬಾದಶಹನು ಸಹ ಆಗಬಹುದು. ಇದಲ್ಲದೆ ನಿನಗೊಂದು ಮಹತ್ವದ ಸುದ್ದಿಯನ್ನೂ ಹೇಳುವವನಿದ್ದೇನೆ.'

ಈ ಮೇರಗೆ ಸಂಭಾಷಣವು ನಡೆದಿರಲು, ಶತ್ರುಗಳು ಕೃಷ್ಣೆಯ ದಂಡೆಯಲ್ಲಿ ತಳಊರಿದರೆಂಬ ಸುದ್ದಿಯನ್ನು ಚಾರರು ರಾಮರಾಜನ ಮುಂದೆ ಹೇಳಿದರು. ಅದನ್ನು ಕೇಳಿ ರಾಮರಾಜನು ಸಮಾಧಾನಪಟ್ಟು, ತಾನು ಇನ್ನು ಶತ್ರುಗಳ ಮೇಲೆ ಬೀಳುವ ಮೊದಲು ತನ್ನ ಸೈನ್ಯವನ್ನು ವಿಶ್ರಮಿಸಗೊಡಬೇಕೆಂದು ನಿಶ್ಚಯಿಸಿದನು. ಹಾಗೆ ತನ್ನ ಸೈನ್ಯದವರು ವಿಶ್ರಾಂತಿಗೊಳ್ಳದಿದ್ದರೆ, ಈಗ ಬೆನ್ನಟ್ಟುವಾಗ ದಣಿದಿರುವವರಿಗೆ ಶತ್ರುಗಳಮೇಲೆ ಬಿದ್ದಾಗ ಶೌರ್ಯದಿಂದ ಕಾದಲಿಕ್ಕೆ ನೆಟ್ಟಗಾಗಲಿಕ್ಕಿಲ್ಲೆಂಬ ವಿಚಾರವು ಆತನಲ್ಲಿ ಉತ್ಪನ್ನವಾಯಿತು. ಆಗ ರಾಮರಾಜನು ವಿಶ್ರಮಿಸುವದಕ್ಕಾಗಿ ತನ್ನ ಸೈನ್ಯಕ್ಕೆ ಅಪ್ಪಣೆಯನ್ನಿತ್ತು, ಈವರೆಗೆ ತನ್ನ ಕೈಸೇರಿರುವ ವೈರಿಗಳ ದೇಶವನ್ನು ಸುಲಿಯಬಹುದೆಂದು ಅವರಿಗೆ ಹೇಳಿದನು!

೨೯ನೆಯ ಪ್ರಕರಣ—ಮಾಸಾಹೇಬರದುರವಸ್ಥೆ.

ಇನ್ನು ಕುಂಜವನದಲ್ಲಿದ್ದ ಮಾಸಾಹೇಬರ ಸಮಾಚಾರವನ್ನಷ್ಟು ತಕ್ಕೊಳ್ಳೋಣ. ರಾಮರಾಜನು ಮಾಸಾಹೇಬರ, ಅಥವಾ ಲೈಲಿಯ ಮನಸ್ಸನ್ನು ಒಲಿಸಿಕೊಳ್ಳಲಾರದೆ ಹತಾಶನಾಗಿ ಹೋದನಂತರ, ಮಾಸಾಹೇಬರು ಬಹು ಕಷ್ಟದಿಂದ ಕಾಲಹರಣ ಮಾಡಹತ್ತಿದರು. ಕುಂಜವನದಲ್ಲಿ ತಮ್ಮನ್ನು ಸೆರೆಯಲ್ಲಿಟ್ಟಿದ್ದು ಅವರಿಗೆ ಅತ್ಯಂತ ದುಸ್ಸಹವಾಗಿತ್ತು. ತಾವು ಈ ಪ್ರತಿಬಂಧದಿಂದ ಪಾರಾಗಿ ಹೋಗುವದು ಅಶಕ್ಯವೆಂದು ತಿಳಿದು, ಅವರು ದಿನದಿನಕ್ಕೆ ಚಿಂತೆಯಿಂದ ಕ್ಷೀಣವಾಗಹತ್ತಿದರು. ಮೊದಲಿನಂತೆ ಧನಮಲ್ಲನು ಕಷ್ಣಸರ್ಪದ ಹಾಗೆ ಅವರನ್ನು ಕಾಯುತ್ತಲಿದ್ದನು. ಧನಮಲ್ಲನ ಮನಸ್ಸನ್ನೊಲಿಸಕೊಳುವದು ಅವರಿಗೆ ತೀರ ಅಸಾಧ್ಯವಾಗಿ ತೋರಿತು. ಲೈಲಿಯೂ ಈ ಕೆಲಸದಲ್ಲಿ ಕೈ ಊರಿದಳು. ಹೀಗೆಯೇ ಅವರಿಬ್ಬರು ಕಾಲಹರಣ ಮಾಡುತ್ತಿರಲು, ಇತ್ತ ಯುದ್ಧಪ್ರಸಂಗವು ಒದಗಿದ್ದರಿಂದ ಸೈನ್ಯದೊಡನೆ ರಾಮರಾಜನು ದಂಡಯಾತ್ರೆಗೆ ಹೊರಟನು. ಈ ಯಾವ ಸುದ್ದಿಯೂ ಮಾಸಾಹೇಬರಿಗೆ, ಅಥವಾ ಲೈಲಿಗೆ ಗೊತ್ತಾಗಿದ್ದಿಲ್ಲ. ಹೀಗಿರುವಾಗ ಒಂದುದಿನ ಮಾಸಾಹೇಬರು ಲೈಲಿಯನ್ನು ಕುರಿತು—ಮಾರ್ಜಿನೇ, ಏನಾದರೂ ಮಾಡು, ಧನಮಲ್ಲನ ಮನಸ್ಸನ್ನು ಒಲಿಸಿಕೊಂಡು ನನ್ನನ್ನಷ್ಟು ಬಂಧಮುಕ್ತಮಾಡು; ನಾವು ಎಲ್ಲಿಂದ ಬಂದೆವೋ ಅಲ್ಲಿಗೇ (ಉತ್ತರಹಿಂದುಸ್ತಾನಕ್ಕೆ) ಹೋಗೋಣ, ಇಲ್ಲವೆ ಇಬ್ಬರೂ ತೆಕ್ಕೆಬಿದ್ದು ಕೃಷ್ಣೆಯಲ್ಲಿ ಹಾರಿಕೊಂಡು ಜೀವಕೊಡೋಣ. ನಿನು ಮುದುಕೆಯಾಗಿರುತ್ತೀ; ನನಗೆ ಬದುಕುವ ಆಶೆಯಿಲ್ಲ; ಆದ್ದರಿಂದ ನೀನು ಇಷ್ಟು ಕೆಲಸಮಾಡು, ಎಂದು ಹೇಳಿದರು- ಮಾರ್ಜಿನೆಯು ಎಷ್ಟು ಸಮಾಧಾನ ಮಾಡಿದರೂ ಮೆಹೇರಜಾನಳು (ಮಾಸಾಹೇಬರು) ಕೇಳಲಿಲ್ಲ. ಹೀಗೆಯೇ ಕೆಲವುದಿನಗಳು ಹೋದವು. ಒಂದುದಿನ ಮೆಹೇರಜಾನಳಿಗೆ ಏನು ತಿಳಿಯಿತೋ ಏನೋ, ಆಕೆಯು ಒಮ್ಮೆಲೆ ಮಾರ್ಜಿನೆಯನ್ನು ಕರೆದು—"ಧನಮಲ್ಲನ ಮನಸ್ಸನ್ನು ಒಲಿಸಿಕೊಳ್ಳೆಂದು ನಾನು ನಿನಗೆ ಬಹು ದಿವಸಗಳಿಂದ ಹೇಳುತ್ತ ಬಂದೆನು; ಆದರೆ ನಿನ್ನಿಂದ ಆ ಕೆಲಸವಾಗಲಿಲ್ಲ; ಆದ್ದರಿಂದ ಈಗ ನಾನೇ ಆ ಕೆಲಸಕ್ಕೆ ಕೈಹಾಕುತ್ತೇನೆ. ಯಾವತ್ತು ಅಂಜಿಕೆಯನ್ನು ಬಿಟ್ಟು ನಾನು ಆತನನ್ನು ಮಾತಾಡಿಸುವೆನು. ಹೋಗು, ಧನಮಲ್ಲನನ್ನು ಕರಕೊಂಡುಬಾ, ಎಂದು ಹೇಳಿದಳು. ತನ್ನ ಒಡೆಯಳ ಈ ಮಾತುಗಳನ್ನು ಕೇಳಿ ಮಾರ್ಜಿನೆಯು ಚಕಿತಳಾಗಿ, ಮೆಹೇರಜಾನಳನ್ನು ಎವೆಯಿಕ್ಕದೆ ನೋಡಹತ್ತಿ

ದಳು. ಆಗ ಮೆಹೇರಜಾನಳು ಮತ್ತೆ ಮಾರ್ಜಿನೆಗೆ—ಯಾಕೆ? ಹೀಗೇಕೆ ನನ್ನ ಕಡೆಗೆ ನೋಡುತ್ತೀ? ಕರಕೊಂಡುಬಾ ಅವನನ್ನು. ನನ್ನ ಮುಂದೆ ನಿಲ್ಲಿಸಿ, ನೀನು ಹೋಗು. ಆತನು ನಿಶ್ಚಯವಾಗಿ ನಮಗೆ ಅನುಕೂಲವಾದಾನೆಂದು ನನಗೆ ತೋರುತ್ತದೆ.'"

ಮಾರ್ಜಿನೆ (ವಾತ್ಸಲ್ಯದಿಂದ)—ತಂಗೀ, ಮೆಹೇರಜಾನ, ಆ ಧನಮಲ್ಲನ ಹೃದಯವು ವಜ್ರಕ್ಕಿಂತ ಕಠಿಣವು. ನೀನು ಎಷ್ಟು ಹೇಳಿಕೊಂಡರೂ ಅದು ದ್ರವಿಸಲಾರದು. ಆತನ ಮನಸ್ಸಿನಲ್ಲಿ ಏನಿರುವದು ಏನಿರುವದಿಲ್ಲೆಂಬದು ಈ ವರೆಗೆ ಯಾರಿಗಾದರೂ ಗೊತ್ತಾಗಿರುತ್ತದೆಯೋ?

ಮೆಹೇರಜಾನ—ಮಾರ್ಜಿನೇ, ಅದನ್ನೆಲ್ಲ ನಾನು ಬಲ್ಲೆನು. ಅದರ ಅನುಭವವು ನನಗಿರುವದಿಲ್ಲವೋ? ಆದರೆ ಇದೊಂದು ಕಡೆಯ ಉಪಾಯವನ್ನಷ್ಟು ಮಾಡಬೇಕೆಂದು ನಾನು ನಿಶ್ಚಯಿಸಿರುತ್ತೇನೆ! ಸಾಧಿಸದಿದ್ದರೆ, ನಮಗೆ ಇದಕ್ಕೂ ಹೆಚ್ಚಿನ ಕಷ್ಟವೇನು ಒದಗಬೇಕಾಗಿದೆ? ಸಾಧಿಸಿದರೆ ಇಲ್ಲಿಂದ ಪಾರಾಗಿಯಾದರೂ ಹೋದೇವು. ಈಗ ನೀನು ಹೋಗು, ನನ್ನ ಸಂಗಡ ಚರ್ಚಿಸುತ್ತ ಕುಳಿತುಕೊಳ್ಳಬೇಡ. ಧನಮಲ್ಲನ ಹೆಸರು ಕೇಳಿದರೆ ನನ್ನ ಸರ್ವಾಂಗದಲ್ಲಿ ಕಂಪವು ಉತ್ಪನ್ನವಾಗುತ್ತಿರಲು, ಆತನನ್ನು ಈಗ ಏಕಾಂತದಲ್ಲಿ ಭೆಟ್ಟಿಯಾಗುತ್ತೇನೆಂದಬಳಿಕ, ನನ್ನ ಮನಸ್ಸು ಎಷ್ಟು ಕಲ್ಲಾಗಿರುತ್ತೆಂಬುದನ್ನು ನೀನೇ ತರ್ಕಿಸು. ಹೋಗು-ಹೋಗು, ಜೀವದ ಹಂಗುಬಿಟ್ಟವರಿಗೆ ಯಾವ ಕೆಲಸಮಾಡುವದುತಾನೆ ಕಠಿಣವು! ಹೋಗು, ಆಲೋಚಿಸುತ್ತ ಕುಳಿತುಕೊಳ್ಳಬೇಡ. ಇಲ್ಲದಿದ್ದರೆ ನಾನೇ ಅವನ ಬಳಿಗೆ ಹೋಗುತ್ತೇನೆ.

ಹೀಗೆ ನುಡಿದು ಮೆಹೇರಜಾನಳು ಮೇಲಕ್ಕೆ ಎದ್ದುಬಿಟ್ಟಳು. ಇದನ್ನು ನೋಡಿ ಮಾರ್ಜಿನೆಯು, ಇಂದಿನ ಪ್ರಸಂಗವು ವಿಲಕ್ಷಣವಾಗಿ ತೋರುತ್ತದೆ; ಆದ್ದರಿಂದ ನಾನು ಈಗ ಹಟಹಿಡಿಯುವದು ಯೋಗ್ಯವಲ್ಲೆಂದು ತಿಳಿದು ಆಕೆಯು ಮೇಲಕ್ಕೆದ್ದಳು. ಮಾರ್ಜಿನೆಯು ತಟ್ಟನೆ ಹೋಗಿ ಧನಮಲ್ಲನನ್ನು ಗಟ್ಟಿಯಾಗಿ ಕೂಗಿ ಕರೆದಳು. ಧನಮಲ್ಲನು ಹತ್ತರ ಬಂದಕೂಡಲೆ ಆಕೆಯು-" ಧನಮಲ್ಲಾ, ನಿನಗೆ ಮಾತಾಡಲಿಕ್ಕೆ ಬರುತ್ತದೆಂಬದನ್ನೂ, ನಿನ್ನ ಕಿವಿಗಳು ಕೇಳುತ್ತವೆಂಬದನ್ನೂ ನಾವು ಬಹುದಿವಸದಿಂದ ಬಲ್ಲೆವು. ಆದ್ದರಿಂದ ನೀನು ಈಗ ಈ ಗತ್ತನ್ನು ಬಿಟ್ಟುಬಿಡು. ಈಗ ಮಾಸಾಹೇಬರು ನಿನ್ನನ್ನು ಕರೆಯುತ್ತಾರೆ. ತಟ್ಟನೆಹೋಗು; ಅವರು ಏನು ಹೇಳುತ್ತಾರೆಂಬದನ್ನು ಕೇಳಿಕೋ. ಅವರ ಸಂಗಡ ಹುಚ್ಚು ಹುಚ್ಚು ಬಡಿಯಬೇಡ. ಎಚ್ಚರತನದಿಂದ ನಡಕೊಳ್ಳಬೇಡ. ಈವೊತ್ತಿನ ವರೆಗೆ ಅವರು ನಿನ್ನನ್ನು ಪ್ರತ್ಯಕ್ಷ

ಕರಿಸಿ ಏನೂ ಹೇಳಿರುವದಿಲ್ಲ. ಈವೊತ್ತು ಏನೋ ಹೇಳುತ್ತಾರೆ, ಅವರ ಮನಸ್ಸನ್ನು ನೋಯಿಸಬೇಡ. ನನಗೆ ಸಹ ಅವರು—" ನೀನು ಆತನ ಸಂಗಡ ಬರಬೇಡ, ಆತನನ್ನೊಬ್ಬನನ್ನೇ ಕಳಿಸಿಕೊಡು " ಎಂದು ಹೇಳಿದ್ದಾರೆ; ಆದ್ದರಿಂದ ಬೇಗನೆ ಹೋಗು, ಎಂದು ಹೇಳಿದಳು. ಅದನ್ನು ಕೇಳಿದ ಕೂಡಲೆ ಧನಮಲ್ಲನ ಮುಖಮುದ್ರೆಯು ಪ್ರಫುಲ್ಲಿತವಾಯಿತು. ಆ ಮುಖದಲ್ಲಿ ಮುಗುಳುನಗೆಯು ಒಪ್ಪಿತು. ಆತನು ಆಶ್ಚರ್ಯಮಗ್ನನಾದದ್ದರಿಂದ ಮಾರ್ಜಿನೆಯನ್ನು ಕೆಕ್ಕರಿಸಿ ನೋಡಹತ್ತಿದನು. ಆಗ ಮಾರ್ಜಿನೆಗೆ ಸ್ವಲ್ಪ ಧೈರ್ಯಬಂದಂತಾಗಿ, ಆಕೆಯು ಆತನಿಗೆ—ಹೋಗು-ಹೋಗು, ನನ್ನನ್ನು ಕೆಕ್ಕರಿಸಿ ನೋಡಬೇಡ. ಮಾಸಾಹೇಬರು ಒಳ್ಳೇ ಉತ್ಕಂಠೆಯಿಂದ ನಿನ್ನ ಹಾದಿಯನ್ನು ನೋಡುತ್ತಿರುವರು ಹೋಗು, ಎಂದು ಹೇಳಿದಳು. ಕೂಡಲೆ ಧನಮಲ್ಲನು ಮೇಹೇರಜಾನಳ ಬಳಿಗೆ ಹೋಗಿ, ಆಕೆಯನ್ನು ಎವೆಯಿಕ್ಕದೆ ನೋಡುತ್ತ ನಿಂತುಕೊಂಡನು. ಮೇಹೇರಜಾನಳ ಸರ್ವಾಂಗವು ಬುರುಕಿಯಿಂದ ಮುಚ್ಚಿಹೋಗಿತ್ತು. ಆಕೆಯು ಧನಮಲ್ಲನು ಬಂದ ಸುಳುವನ್ನರಿತು, ತಟ್ಟನೆ ತನ್ನ ಮೋರೆಯಮೇಲಿನ ಬುರುಕಿಯನ್ನು ತೆಗೆದು ಒಮ್ಮೆಲೆ ಆತನನ್ನು ಕುರಿತು—ಧನಮಲ್ಲ, ಇಲ್ಲಿಯವರೆಗಿನ ಮೇಹೇರಜಾನಳು ಬೇರೆ, ಇನ್ನು ಮೇಲಿನ ಮೇಹೇರಜಾನಳು ಬೇರೆಯೆಂದು ತಿಳಿ. ಇಲ್ಲಿಯವರೆಗೆ ನಾನು ನಿನಗೆ ಹೆದರುತ್ತಿದ್ದೆನು. ಈಗ ನೀನು ನನಗೆ ಒಡಹುಟ್ಟಿದ ಅಣ್ಣನಂತೆಯಿರುತ್ತೀ ನೀನಾದರೂ ನಿನ್ನ ಒಡಹುಟ್ಟಿದ ತಂಗಿಯೆಂತಲೇ ತಿಳಿದು ನನ್ನ ಮಾನವನ್ನು ಕಾಯಿ. ನಿನಗೆ ನಾನು ಶರಣು.....

ಈ ಮೇರೆಗೆ ನುಡಿಯುವಾಗ ಮೆಹೇರಜಾನಳ ಕಂಠವು ಬಿಗಿದು, ಮಾತುಗಳು ಹೊರಡದಾದವು. ಆಕೆಯ ಕಣ್ಣುಗಳಿಂದ ನೀರುಗಳು ಸುರಿಯಹತ್ತಿದವು. ಆಕೆಯು ಕೆಳಗೆ ನೋಡುತ್ತ ಸುಮ್ಮನೆ ಕುಳಿತುಕೊಂಡಳು. ಧನಮಲ್ಲನು ಆಕೆಯನ್ನು ಚಮತ್ಕಾರ ದೃಷ್ಟಿಯಿಂದ ನೋಡಹತ್ತಿದನಲ್ಲದೆ, ಬಾಯಿಂದ ಪಿಟ್ಟೆಂದು ಮಾತಾಡಲಿಲ್ಲ. ಆಗ ಮೆಹೇರಜಾನಳು—ಧನಮಲ್ಲಾ, ನಿನಗೆ ಮಾತಾಡಲಿಕ್ಕೆ ಬರುತ್ತದೆಂಬದು ನನಗೆ ಗೊತ್ತಿರುತ್ತದೆ; ಆದ್ದರಿಂದ ನನ್ನಮುಂದೆ ನಿನ್ನ ನಿಜವಾದ ಸ್ವರೂಪವನ್ನು ಮುಚ್ಚಬೇಡ. ಈವೊತ್ತಿನವರೆಗೆ ಆದದ್ದನ್ನೆಲ್ಲ ಮರೆತುಬಿಡು. ನನ್ನನ್ನು ಒಡಹುಟ್ಟಿದ ತಂಗಿಯೆಂದು ತಿಳಿದು, ನನ್ನ ಮಾನವನ್ನು ಕಾಯಿ. ನನಗೆ ಈ ಕಾರಾಗೃಹ ವಾಸವು ಅತ್ಯಂತ ದುಸ್ಸಹವಾಗಿರುವದು. ನನ್ನನ್ನು ಬಂಧನದಿಂದ ಮುಕ್ತಳನ್ನಾಗಿಯಾದರೂ ಮಾಡು, ಇಲ್ಲವೆ ಇದೇ ಈ ನಿನ್ನ ಕೈಯಿಂದ ನನ್ನ ಕುತ್ತಿಗೆಯನ್ನು ಹಿಚಕಿ ನನ್ನ ಹೆಣವನ್ನು ಈ ಪುಷ್ಕರಿಣಿಯಲ್ಲಿ ಚಲ್ಲಿಯಾದರೂ

ಬಿಡು. ನನಗೆ ಈ ಕಾರಾಗೃಹವಾಸವು ಸಾಕು. ಯಾಕೆ, ಮಾತಾಡು, ಏನುಮಾಡುತ್ತೀಯೆಂಬದನ್ನು ಸ್ಪಷ್ಟವಾಗಿ ಹೇಳು, ಎಂದು ನುಡಿದು, ಆಕೆಯು ತನ್ನ ಮೈಮೇಲಿನ ಬುರುಕಿಯನ್ನು ದೂರಚಲ್ಲಿಕೊಟ್ಟು, ಆತನ ಎದುರಿಗೆ ಹೋಗಿ ನಿಂತುಕೊಂಡಳು. ಆಗ ಧನಮಲ್ಲನು ಸೌಮ್ಯಸ್ವರದಿಂದ—ಏನು? ಈ ಕೈಯಿಂದ ನಿಮ್ಮ ಕುತ್ತಿಗೆಯನ್ನು ಹಿಚಕಲಾ? ನೀವು ನನ್ನನ್ನು ಇಲ್ಲಿಯವರೆಗೆ ಕೃಷ್ಣಸರ್ಪವೆಂದು ತಿಳಿಯುತ್ತ ಬಂದಿರುವಿರಿ. ನಾನು ಕೃಷ್ಣಸರ್ಪದಂತೆ ನಡೆದದ್ದೂ ನಿಜವು; ಆದರೆ ನಿಮ್ಮನ್ನು ಕಡಿಯಲಿಕ್ಕೆಂದು ಹಾಗೆ ನಾನು ನಡೆಯಲಿಲ್ಲ. ನಿಮಗೆ ಸುತ್ತುಹಾಕಿ ಆ ವಿನಂದದಲ್ಲಿ—

ಈ ಮಾತುಗಳನ್ನು ಕೇಳಿದ ಕೂಡಲೆ ಮೆಹೇರಜಾನಳು ಮೆಟ್ಟಿಬಿದ್ದ, ದೂರ ಸರಿದು ನಿಂತುಕೊಂಡಳು. ಕೂಡಲೆ ಧನಮಲ್ಲನು ಮೆಹೇರಜಾನಳಿಗೆ—ಯಾಕೆ, ಹೀಗೆ ಈಗ ಮೆಟ್ಟಿಬೀಳುವದೇಕೆ? ನಾನು ಕಚ್ಚಿ ಪ್ರಾಣಹರಣಮಾಡುವದು ನಿಮ್ಮನ್ನಲ್ಲ? ಬೇರೊಬ್ಬರನ್ನು! ಆದರೆ ನಿಮ್ಮನ್ನು ನಾನು ಸುತ್ತುಹಾಕಿ ಅನಂದಪಡತಕ್ಕವನು. ನಿಮ್ಮನ್ನು ಹುಡುಕಲಿಕ್ಕೆ ನಾನು ಎಷ್ಟುಕಷ್ಟಪಟ್ಟಿನು? ಮೂವತ್ತು-ಮೂವತ್ತೈದು ವರ್ಷಗಳವರೆಗೆ ಹಿಂದುಸ್ಥಾನವನ್ನೆಲ್ಲ ತಿರುಗಿದೆನು. ಸಾವಿರಾರುಸ್ಥಳಗಳಲ್ಲಿ ನಿಮ್ಮನ್ನು ಹುಡುಕಿದೆನು. ಕಡೆಗೆ ಹುಡುಕುತ್ತ, ಹುಡುಕುತ್ತ ನೀವು ವಿಜಾಪುರಕ್ಕೆ ಹೋಗಿರುವಿರೆಂಬ ಸುದ್ದಿಯನ್ನು ಕೇಳಿ ಅಲ್ಲಿಗೆ ಹೋದೆನು. ಅಲ್ಲಿಗೆ ನಾನು ಹೋಗುವದರೊಳಗಾಗಿ ನೀವು ಇಲ್ಲಿಗೆ ಬಂದಿದ್ದಿರಿ. ಆಗ ನಾನು ಇಲ್ಲಿಗೆ ಬಂದೆನು. ನಿಮ್ಮ ಬಳಿಯಲ್ಲಿಯೇ ಇರಬೇಕೆನ್ನುವ ಹಾಗೆ ನನಗೆ ಆಗುತ್ತದೆ. ನಾನು ಕೃಷ್ಣಸರ್ಪವೇನೋ ನಿಜ; ಆದರೆ ಆ ಸರ್ಪವು ತಡಿಯುವದು ಬೇರೊಬ್ಬನನ್ನು; ಸುತ್ತುಹಾಕಿಕೊಂಡು ಕುಳಿತುಕೊಳ್ಳುವದು ನಿಮ್ಮನ್ನು ಹೊತ್ತುಬಂದಾಗ ಆ ಸರ್ಪವು ತನ್ನ ವೈರಿಯ ಸಮಾಚಾರವನ್ನು ತಕ್ಕೊಳ್ಳುವದು ನೀವು ಸರ್ಪಕ್ಕೆ ವೈರಿಯಲ್ಲ, ಚಂದನಗಿಡವಿದ್ದಹಾಗೆ. ಸರ್ಪವು ಚಂದನಗಿಡವನ್ನು ಸುತ್ತಿಕೊಳ್ಳುವದಲ್ಲದೆ, ಆ ಗಿಡವನ್ನು ನಾಶಮಾಡುವದೆಯೇ.

ಧನಮಲ್ಲನ ಈ ಮಾತುಗಳನ್ನು ಕೇಳಿ ಮೇಹೇರಜಾನಳು ಆಶ್ಚರ್ಯಪಟ್ಟಳು. ಧನಮಲ್ಲನ ಪಾಪಬುದ್ಧಿಯು ಕೂಡಲೆ ಆ ಚಾಣಾಕ್ಷಸ್ತ್ರೀಯ ಲಕ್ಷದಲ್ಲಿ ಬಂದಿತು. ಈ ದಷ್ಟನು ತನ್ನ ಯಾವ ವೈರಿಯನ್ನು ಕಡಿದು ನಾಶಮಾಡುತ್ತಿರಬಹುದು? ಈ ದುಷ್ಟನನ್ನು ನಾನಾಗಿ ಕರಿಸಿಕೊಂಡು ಮೂಲಮಾಡಿಕೊಂಡಹಾಗಾಯಿತಲ್ಲ! ಇನ್ನು ಈ ಅರಿಷ್ಟನಿವಾರಣವನ್ನು ಹ್ಯಾಗೆ ಮಾಡಿಕೊಳ್ಳಬೇಕು? ಮಾರ್ಜಿನ

ಯನ್ನಾದರೂ ಕೂಗಿ ಕರೆಯಲಾ? ಎಂಬ ವಿಚಾರಗಳು ಉತ್ಪನ್ನವಾಗುತ್ತಿರಲು, ಧನಮಲ್ಲನು—"ನಾನು ನಿಮ್ಮ ಬಿಡುಗಡೆಯನ್ನು ಮಾಡಲ್ಯಾ? ಮಾಡುವೆನು, ಮಾಡುವೆನು; ಆದರೆ ಮೊದಲು ನನ್ನ ವೈರಿಯ ಜೀವವನ್ನು ಹಿಂಡಿದ ಬಳಿಕ ನಿಮ್ಮ ಬಿಡುಗಡೆ ಮಾಡುವೆನು. ಸದ್ಯಕ್ಕೆ ನಿಮ್ಮನ್ನು ಬಿಟ್ಟುಕೊಡುವಹಾಗಿಲ್ಲ. ನಮ್ಮ ವೈರಿಯು ನಿಮ್ಮ ಬಳಿಗೆ ಒಬ್ಬನೇ ಬರಲಿ, ಅವನನ್ನು ನಿಮ್ಮ ಸಮಕ್ಷಮ ಕೊಂದು ನಿಮ್ಮನ್ನು ಇಲ್ಲಿಂದ ಬಿಡಿಸಿಕೊಂಡು ಹೋಗುವೆನು. ನನ್ನ ವೈರಿಯು ನಾಳೆ ನಾಡದು ಇಷ್ಟರಲ್ಲಿ ಬಂದಾನು. ನನ್ನ ಪಾಲನ್ನು ಆ ದುಷ್ಟ ವೈರಿಯು ಅಪಹರಿಸಿದ ಬಳಿಕ ನಾನು ಹ್ಯಾಗೆ ಸೈರಿಸಲಿ? ಧನಮಲ್ಲನು ನನ್ನನ್ನು ಅತಿ ನಿಷ್ಠುರವಾಗಿ ಕಾಯುವನೆಂದು ನೀವು ತಿಳಿದಿರಬಹುದು; ಆದರೆ ಧನಮಲ್ಲನು ನಿಮ್ಮ ಸಲುವಾಗಿ ನಿಷ್ಠುರನಾಗಬಹುದೆ? ನನ್ನ ವೈರಿಯಾದ ರಾಮರಾಜನು ನಿಮ್ಮನ್ನು ಹುಡುಕಿಸುವದನ್ನು ಬಿಟ್ಟು, ನನಗೆ ಬಾಯಿಗೆ ಬಂದಹಾಗೆ ಮಾತಾಡಿ ಈಗ ಮೂವತ್ತು ಮೂವತ್ತೈದು ವರ್ಷಗಳ ಹಿಂದೆ ನನ್ನನ್ನು ಹೊರಗೆ ಹಾಕಿದನು. ನಾನು ನಿಮ್ಮ ಮೇಲಿನ ಆಶೆಯಿಂದ ಕಷ್ಟಪಟ್ಟು ಒಂದೇಸವನೆ ಹುಡುಕಿ ನಾಯಿಯಹಾಗೆ ನಿಮ್ಮ ಬಾಗಿಲಕಾಯುತ್ತ ಇಲ್ಲಿ ಬಿದ್ದಿರುತ್ತೇನೆ; ಆದರೆ ನಾಯಿಯು ರಾಮರಾಜನ ಅನ್ನಕ್ಕೆ ಜೋತು ನಿಮ್ಮನ್ನು ಕಾಯುತ್ತಿರುತ್ತದೆಂದು ತಿಳಿಯಬೇಡಿರಿ. ಕೇವಲ ನಿಮ್ಮ ಆಶೆಯಿಂದಲೇ ನಾಯಿಯು ನಿಮ್ಮ ಬಾಗಿಲು ಕಾಯುತ್ತಿರುವದು. ಕೃಷ್ಣಸರ್ಪವು ರಾಮರಾಜನ ಪ್ರಾಣಹರಣಮಾಡಿ ಮೆಹೇರಜಾನರೂಪವಾದ ಚಂದನ ವೃಕ್ಷವನ್ನು ಸುತ್ತುಹಾಕಿದರೆ ಅದರ ಕೆಲಸ ತೀರಿತು; ಎಂದು ನುಡಿದು, ಆ ದುಷ್ಟ ಧನಮಲ್ಲನು ಮೆಹೇರಜಾನಳನ್ನು ಎವೆಯಿಕ್ಕದೆ ನೋಡಹತ್ತಿದನು. ಇದನ್ನು ನೋಡಿ, ಧನಮಲ್ಲನ ಕೆಟ್ಟ ಮಾತುಗಳನ್ನು ಕೇಳಿ, ಮೆಹೇರಜಾನಳ ಸರ್ವಾಂಗವು ಕಂಪಿಸಹತ್ತಿತು. ಆ ಮಹಾಪತಿವ್ರತೆಯು ತನ್ನ ದುರ್ದೈವವನ್ನೂ, ದುರವಸ್ಥೆಯನ್ನೂ ಹಳಿದುಕೊಳ್ಳಹತ್ತಿದಳು. ಇತ್ತ ಕಾಮುಕನಾದ ದುಷ್ಟ ಧನಮಲ್ಲನು ವಿವೇಕಭ್ರಷ್ಟನಾಗತೊಡಗಿದ್ದನು. ಅಷ್ಟರಲ್ಲಿ ಮಾರ್ಜಿನೆಯು ಅಲ್ಲಿಗೆ ಬಂದಳು. ಆಕೆಯ ಸಂಗಡ ಒಬ್ಬ ತರುಣಿಯು ಬಂದಿದ್ದಳು. ಆ ತರುಣಿಯ ಸರ್ವಾಂಗವು ಬುರುಕೆಯಿಂದ ಮುಚ್ಚಿಹೋಗಿತ್ತು ಆ ತರುಣಿಯನ್ನು ಕಳಿಸಬಂದ ರಾಮರಾಜನ ಭೃತ್ಯನು ಆ ತರುಣಿಯನ್ನು ಮಾಸಾಹೇಬರಿಗೆ ಒಪ್ಪಿಸಹೇಳಿ ಮಾರ್ಜಿನೆಯ ಒಪ್ಪಿಗೆಯಿಂದ ಹೊರಟುಹೋದನು.

ಹೀಗೆ ಜನರು ಬಂದದ್ದರಿಂದ ಧನಮಲ್ಲನು ಸುಮ್ಮನೆ ಹೊರಟುಹೋದನು. ಆಗ ಮೆಹೇರಜಾನಳಿಗೆ ದೊಡ್ಡಕುತ್ತಿನಿಂದ ಪಾರಾದಂತೆ ಸಮಾಧಾ

ನವಾಯಿತು. ಆಕೆಯು ಮಾರ್ಜಿನೆಗೆ—ಮಾರ್ಜಿನೇ, ದುರ್ದೈವಿಗಳಾದ ನಮ
ಬಳಿಗೆ ವಿಪತ್ತನ್ನನುಭವಿಸುವದಕ್ಕಾಗಿ ಮತ್ತೆ ಯಾವ ದುರ್ದೈವಿಯು ಬಂದಳು
ರಾಮರಾಜನು ನೋವಿನಮೇಲೆ ಬರೆ ಕೊಟ್ಟಹಾಗೆ ಮಾಡುವದಕ್ಕಾಗಿಯೆ
ಒಬ್ಬೊಬ್ಬರಂತೆ ತರುಣ ಸ್ತ್ರೀಯರನ್ನು ಹಿಡಿದು ನನ್ನ ಬಳಿಗೆ ಕಳಿಸುವನೆ
ಏನು? ಎಂದು ನುಡಿಯುತ್ತಿರಲು, ಹೊಸದಾಗಿ ಬಂದ ತರುಣಿಯು ತ
ಮೋರೆಯ ಮೇಲಿನ ಬುರುಕೆಯನ್ನು ಚಲ್ಲಿಕೊಟ್ಟು ಮಾಸಾಹೇಬರ ಎದು
ಗೆ ನಿಂತುಕೊಂಡಳು. ತನ್ನ ಮಗನ ಸರ್ವಸ್ವದ ನಾಶಕ್ಕೂ, ತನ್ನ ದುಃಖ
ಹೆಚ್ಚಳಕ್ಕೂ ಕಾರಣಳಾದ ನೂರಜಹಾನಳು ಅಕಸ್ಮಿಕವಾಗಿ ತನ್ನ ಎದುರ
ನಿಂತದ್ದನ್ನು ನೋಡಿ ಮೆಹೇರಜಾನಳಿಗೂ, ಮಾರ್ಜಿನೆಗೂ ಬಹಳ ಆಶ್ಚರ್ಯ
ವಾಯಿತು. ಅತ್ತ ನೂರಜಹಾನಳಾದರೂ ತಾನು ಒಮ್ಮಿಂದೊಮ್ಮೆ ಮಾಸ
ಹೇಬರ ಬಳಿಗೇ ಬಂದದ್ದಕ್ಕಾಗಿ ಆಶ್ಚರ್ಯಪಡುತ್ತಿದ್ದಳು. ಮಾಸಾಹೇಬರನ್ನ
ನೋಡಿ ಆಕೆಯ ಮನಸ್ಸಿಗೆ ಬಹಳ ಸಮಾಧಾನವಾಯಿತು. ತನ್ನನ್ನು ಮದ
ವೆಯಾಗುವದಕ್ಕಾಗಿ ರಣಮಸ್ತಖಾನನು ಮಾಡಿದ ಭಯಂಕರ ಪ್ರತಿಜ್ಞೆಯ
ನ್ನು ಆತನು ಹ್ಯಾಗೆ ನೆರವೇರಿಸುವನೆಂಬದರ ಆಲೋಚನೆಯೊಂದೇ ನೂರ
ಹಾನಳ ಮನಸ್ಸಿನಲ್ಲಿ ಇತ್ತು. ರಣಮಸ್ತಖಾನನು ರಾಮರಾಜನನ್ನು ಕೂ
ಕೊಂಡದ್ದು ತನ್ನ ಪ್ರತಿಜ್ಞೆಯನ್ನು ಪೂರ್ಣಮಾಡುವದಕ್ಕಾಗಿಯೇ ಎಂದು ಆ
ಯು ತಿಳಿದಿದ್ದಳು; ಯಾಕಂದರೆ ರಣಮಸ್ತಖಾನನ ಸ್ವಾಭಿಮಾನ-ಸ್ವಜಾತ್ಯ
ಮಾನಗಳ ಪರಿಚಯವೂ, ತನ್ನ ಮೇಲಿದ್ದ ಆತನ ಅಕೃತ್ರಿಮಪ್ರೇಮದ ಪರಿ
ಯವೂ ನೂರಜಹಾನಳಿಗೆ ಇದ್ದವು; ಆದ್ದರಿಂದ ಆಕೆಯು ರಣಮಸ್ತಖಾನ
ನ್ನು ಮನಮುಟ್ಟಿ ಪ್ರೀತಿಸುತ್ತಿದ್ದಳು. ರಣಮಸ್ತಖಾನನ ತಾಯಿಯಾದ್ದರಿಂ
ಮಾಸಾಹೇಬರ ಮೇಲಿನ ನೂರಜಹಾನಳ ವಿಶ್ವಾಸವು ಕಡಿಮೆಯಾಗಿದ್ದಿಲ್ಲ
ಆದರೆ ಮಾಸಾಹೇಬರು ಮಾತ್ರ ನೂರಜಹಾನಳನ್ನು ನೋಡಿ ಹುಬ್ಬು ಗಂ
ಕ್ಕಿದರು. ತನ್ನ, ಹಾಗೂ ತನ್ನ ಮಗನ ಸರ್ವಸ್ವದ ನಾಶಕ್ಕೆ ಈಕೆಯೇ ಕಾ
ಣಳಾದಳೆಂಬ ಕಾರಣದಿಂದ ಮೆಹೇರಜಾನಳ ಮನಸ್ಸಿನಲ್ಲಿ ನೂರಜಹಾನಳ ವಿ
ಯವಾಗಿ ತಿರಸ್ಕಾರವು ಉತ್ಪನ್ನವಾಯಿತು. ಮೇಲಾಗಿ ಮತ್ತೊಂದು ಮಾತಿ
ಸಂಶಯವು ಮೆಹೇರಜಾನಳ ಮನಸ್ಸಿನಲ್ಲಿ ಉತ್ಪನ್ನವಾಗಿ, ಆಕೆಯ ಮನಸ್ಸ
ಮತ್ತಿಷ್ಟು ವ್ಯಗ್ರವಾಯಿತು. ರಾಮರಾಜನು ನೂರಜಹಾನಳನ್ನು ಸ್ವಾಧೀ
ಪಡಿಸಿಕೊಂಡು ತನ್ನನ್ನು ಛಲಿಸುವದಕ್ಕಾಗಿಯೇ ಬುದ್ಧಿಪೂರ್ವಕವಾಗಿ ಆಕೆಯ
ನ್ನು ತನ್ನ ಬಳಿಗೆ ಕಳಿಸಿರುವನೆಂದು ಮೆಹೇರಜಾನಳು ಕಲ್ಪಿಸಿದಳು; ಆದ್ದರಿಂ
ಆಕೆಯು ನೂರಜಹಾನಳ ಯೋಗಕ್ಷೇಮವನ್ನೇನೂ ವಿಚಾರಿಸದೆ ಮಾರ್ಜಿನೆ

ಲೈಲೀ, ನನ್ನನ್ನು ಛಲಿಸುವದರಲ್ಲಿ ಇದಿಷ್ಟು ಕಡಿಮೆಯಾಗಿತ್ತು; ಆದ್ದರಿಂದ ನನ್ನ ದುರ್ದೈವವು ಈಕೆಯನ್ನು ಇಲ್ಲಿಗೆ ಬರಮಾಡಿತು. ಬಹಳ ನೆಟ್ಟಗಾಯಿತು; ಇನ್ನು ನೀವಿಬ್ಬರೂ ಇಲ್ಲಿಂದ ಹೊರಟುಹೋಗಿರಿ. ಈಕೆಯನ್ನು ಎರಡನೆಯ ದೊಂದು ಕೋಣೆಯಲ್ಲಿ ಇಡು, ನನ್ನ ಬಳಿಯಲ್ಲಿ ಬೇಡ. ನನ್ನ ಜಪಕ್ಕೆ ಸುಮ್ಮನೆ ವಿಘ್ನವಾಗಬೇಡ, ಎಂದು ಹೇಳಿ ನೂರಜಹಾನಳ ಕಡೆಗೆ ಬೆನ್ನುಮಾಡಿ ಕುಳಿತುಕೊಂಡಳು.

ತನ್ನ ಒಡೆಯಳ ಸ್ವಭಾವವನ್ನು ಸಾರ್ಜಿನೆಯು ಪೂರ್ಣಬಲ್ಲವಳಾಗಿದ್ದಳು; ಆದ್ದರಿಂದ ಆಕೆಯು ಎರಡನೆಯ ಮಾತಾಡದೆ ನೂರಜಹಾನಳನ್ನು ಕರಕೊಂಡು ಬೇರೊಂದು ಕೋಣೆಗೆ ಹೋದಳು. ಹೀಗೆ ಮಾಡುವದು ಮಾರ್ಜಿನೆಗೆ ಯೋಗ್ಯವಾಗಿ ತೋರಲಿಲ್ಲ; ಆದರೆ ಮೆಹೇರಜಾನಳ ದುರವಸ್ಥೆಯನ್ನು ಅರಿತ ಆ ಪ್ರೇಮಲಸ್ವಭಾವದ ವೃದ್ಧದಾಸಿಯು, ಆಕೆಯ ಮನಸ್ಸಿನಂತಿರುದ್ಧವಾಗಿ ನಡೆಯಲಾರದೆ ನೂರಜಹಾನಳನ್ನು ಬೇರೊಂದು ಕೋಣೆಗೆ ಕರಕೊಂಡು ಹೋದಳು. ನೂರಜಹಾನಳೂ ಅತ್ಯಂತ ಅಭಿಮಾನವ ಸ್ವಭಾವದವಳಿದ್ದಳು. ಆಕೆಗೆ ಮಾಸಾಹೇಬರ ಈ ರೀತಿಯು ಸರಿಬೀಳಲಿಲ್ಲ. ಮಾಸಾಹೇಬರು ನೂರಜಹಾನಳಕಡೆಗೆ ಬೆನ್ನು ಮಾಡಿ ಕುಳಿತುಕೊಳ್ಳುವದರೊಳಗೆ ನೂರಜಹಾನಳು ಹೊರಗೆ ಹೋಗುವದಕ್ಕಾಗಿ ಬಾಗಿಲಕಡೆಗೆ ತಿರುಗಿದ್ದಳು. ತಮ್ಮ ಸರ್ವಸ್ವದ ನಾಶಕ್ಕೆ ನೂರಜಹಾನಳೇ ಕಾರಣಳೆಂಬ ಸಿಟ್ಟು, ಮೆಹೇರಜಾನಳಂತೆ ಮಾರ್ಜಿನೆಯ ಮನಸ್ಸಿನಲ್ಲಿಯೂ ಇತ್ತು; ಆದ್ದರಿಂದ ಆಕೆಯು ನೂರಜಹಾನಳನ್ನು ಕುರಿತು—"ಅವ್ವಾ, ಈವರೆಗೆ ನಮ್ಮ ಸರ್ವಸ್ವದ ನಾಶಮಾಡಿ, ಇಂಥ ವಿಪತ್ಕಾಲದಲ್ಲಿ ಮತ್ತೆ ನಮ್ಮ ಡಂಕುತೀರಿಸಿಕೊಳ್ಳುವದಕ್ಕೆ ಯಾಕೆಬಂದೆಯೆಂದು ಕೇಳಲು, ನೂರಜಹಾನಳು ಕ್ರುದ್ಧದೃಷ್ಟಿಯಿಂದ ಮಾರ್ಜಿನೆಯನ್ನು ನೋಡುತ್ತ ತಟ್ಟನೆ ಆಕೆಗೆ—ನೀವಿಬ್ಬರೂ ಇಲ್ಲಿ ಇರುತ್ತೀರೆಂಬದು ನನ್ನ ಪಾದರಕ್ಷೆಗೆ ಕೂಡ ಗೊತ್ತಿದ್ದಿಲ್ಲ. ಆ ದುಷ್ಟ ರಾಮರಾಜನು ಕಳಿಸಿಕೊಟ್ಟದ್ದರಿಂದ ನಾನು ಪರಾಧೀನಳಾಗಿ ಇಲ್ಲಿಗೆ ಬಂದೆನು, ಎಂದು ದುರುತ್ತರವನ್ನು ಕೊಟ್ಟಳು. ಇಂಥ ದುರುತ್ತರವನ್ನು ಕೊಡಲಿಕ್ಕೆ ನೂರಜಹಾನಳಿಗೆ ಅಂಥ ಕಾರಣವೇನೂ ಇದ್ದಿಲ್ಲ; ಆದರೆ ಮೆಹೇರಜಾನಳ ನಡತೆಯನ್ನು ನೋಡಿದ್ದರಿಂದಲೂ, ಮಾರ್ಜಿನೆಯ ಮಾತುಗಳನ್ನು ಕೇಳಿದ್ದರಿಂದಲೂ ಸಂತಾಪಸ್ವಭಾವದ ಆ ತರುಣಿಯಮುಖದಿಂದ ಸಿಟ್ಟಿನ ಭರದಲ್ಲಿ ಅಂಥ ದುರುತ್ತರವು ತಾನೇ ಹೊರಟು ಹೋಯಿತು. ಈ ದುರುತ್ತರವನ್ನು ಕೇಳಿದಕೂಡಲೇ ಮಾರ್ಜಿನೆಯಾದರೂ ಅಲ್ಲಿ ನಿಲ್ಲದೆ ಸಂತಾಪದಿಂದ ಹೊರಟುಹೋದಳು; ಆವರೆ ಮಾರ್ಜಿನೆಯ ಈ ಸಿಟ್ಟು ಬಹಳಹೊತ್ತು ನಿಲ್ಲಲಿಲ್ಲ. ಮಾಸಾಹೇಬರ ಮನಸ್ಸಿನ ಸ್ಥಿತಿಯಾದರೂ

ಬೇಗನೆ ಬದಲಾಯಿತು. ನೂರಜಹಾನಳು ಹೋದಕೂಡಲೇ ಮಾಸಾಹೇಬರು ಮನಸ್ಸಿನಲ್ಲಿ—"ಈ ಹುಡುಗಿಯು ಇಂಥ ಪ್ರಸಂಗದಲ್ಲಿ ರಾಮರಾಜನ ಕೈಯಲ್ಲಿ ಹ್ಯಾಗೆ ಸಿಕ್ಕಿರಬಹುದು? ಏನಾದರೂ ಪ್ರಸಂಗವದಗಿ ಆತರುಣಿಯು ಆತನ ಸೆರೆಯಾಳಾಗಿರಬಹುದೋ? ಪಾಪ! ಹೀಗಾಗಿದ್ದರೆ ಆಕೆಯೂ ನನ್ನಂತೆ ಪರಾಧೀನಳಾಗಿರುವಳು. ಇಂಥ ಪ್ರಸಂಗದಲ್ಲಿ ಎರಡು ಒಳ್ಳೆಯ ಮಾತುಗಳನ್ನಾದರೂ ಆಡಿ ಆಕೆಯನ್ನು ಸಮಾಧಾನಗೊಳಿಸುವದು ಯೋಗ್ಯವು. ನಾನು ಆಕೆಯ ಸಂಗಡ ಪ್ರತ್ಯಕ್ಷಮಾತಾಡದಿದ್ದರೂ, ಮಾರ್ಜಿಯ ಮುಖಾಂತರ ಆಕೆಯ ಯೋಗಕ್ಷೇಮವನ್ನು ವಿಚಾರಿಸತಕ್ಕದ್ದು. ಎಂಬ ವಿಚಾರಗಳು ಉತ್ಪನ್ನವಾದವು. ಮಾರ್ಜಿನೆಯು ಬಂದಕೂಡಲೆ ಮಾಸಾಹೇಬರು ಆಕೆಗೆ ತಮ್ಮ ವಿಚಾರವನ್ನೆಲ್ಲ ತಿಳಿಸಿ, ನೂರಜಹಾನಳ ಯೋಗಕ್ಷೇಮವನ್ನು ವಿಚಾರಿಸಹೇಳಿದರು.

೩೦ ನೆಯ ಪ್ರಕರಣ—ನೂರಜಹಾನಳಸಾಹಸ.

ಮಾರ್ಜಿನೆಯು ದೊಡ್ಡಮನಸ್ಸಿನವಳಿದ್ದಳು. ತಾವಿಬ್ಬರು ನೂರಜಹಾನಳ ಮನಸ್ಸನ್ನು ನೋಯಿಸಿದಬಗ್ಗೆ ಆಕೆಗೆ ಅಸಮಾಧಾನವಾಗಿತ್ತು; ಆದರೆ ತನ್ನ ಮೆಹೇರಜಾನಳಮನಸ್ಸಿನ ವಿರುದ್ಧನಡೆಯಲಾರದೆ, ನೂರಜಹಾನಳ ಸಂಗಡ ಆಕೆಯು ನಿಷ್ಠುರತನದಿಂದ ನಡಕೊಂಡಿದ್ದಳು. ಆಕೆಯು ಅದನ್ನು ಮರೆತು ನೂರಜಹಾನಳ ಬಳಿಗೆ ಹೋದಳು. ಅತ್ತ ನೂರಜಹಾನಳಿಗೂ ತಾನು ದುರುತ್ತರ ಕೊಟ್ಟ ಬಗ್ಗೆ ಪಶ್ಚಾತ್ತಾಪವಾಗಿತ್ತು. ಮಾರ್ಜಿನೆಯು ತನ್ನ ಬಳಿಗೆ ಪುನಃ ಬಂದ ಕೂಡಲೆ ನೂರಜಹಾನಳು ಸೌಮ್ಯದಿಂದ ಆಕೆಯನ್ನು ಬರಮಾಡಿಕೊಂಡು ಅಮ್ಮಾ, ಮಾರ್ಜಿನೇ, ನೀನು ಹಿರಿಯಮನುಷ್ಯಳು, ಮಾಸಾಹೇಬರು ನನಗೆ ತಾಯಿಯಸಮಾನವು. ಹೀಗಿದ್ದು ನಾನು ನಿಮಗೆ ದುರುತ್ತರ ಕೊಟ್ಟದ್ದು ತಪ್ಪಾಯಿತು. ರಾಮರಾಜನ ಕೈಯಲ್ಲಿ ನಾನು ಆಕಸ್ಮಾತ್ತಾಗಿ ಸಿಕ್ಕು ಸೆರೆಯಾಳಾದದ್ದರಿಂದ ನನಗೆ ಬಹಳ ವ್ಯಸನವಾಗಿರಲು, ನಿಮ್ಮಿಬ್ಬರನ್ನು ನೋಡಿ ನನಗೆ ಒಂದು

ಆಧಾರದೊರೆತಂತಾಯಿತೆಂದು ತಿಳಿದಿದ್ದೆನು; ಆದರೆ ನೀವು ನಿಷ್ಕಾರಣದ ದಿಂದ ನನ್ನನ್ನು ನಿಷ್ಕಾರಣವಾಗಿ ದೂಡಿಕೊಡಲು, ನಾನು ರೇಗಿಗೆದ್ದು ಹಾಗೆ ಮಾತಾಡಿದೆನು. ನನ್ನಿಂದ ದೊಡ್ಡ ತಪ್ಪಾಯಿತು. ನಾನು ದುರ್ದೈವಿಯು, ಸಂಕಟದಲ್ಲಿ ಸಿಕ್ಕಿದ್ದೇನೆ. ನಾನು ಒಂದು ಮಾಡಲಿಕ್ಕೆ ಹೋದರೆ ದೈವವು ಮತ್ತೊಂದು ಮಾಡಿತು. ನನ್ನ ದುರ್ದೈವವೇ ನನ್ನನ್ನು ಇತ್ತ ಕರಕೊಂಡು ಬಂದಿತು, ಎಂದು ನುಡಿಯುತ್ತಿರಲು, ನೂರಜಹಾನಳ ಕಣ್ಣಲ್ಲಿ ನೀರುಗಳು ಬಂದವು. ಅದನ್ನು ನೋಡಿ ಮಾರ್ಜಿನೆಯ ಹೃದಯವು ಕರಗಿತು. ಆಕೆಯು ನೂರಜಹಾನಳನ್ನು ಎದೆಗವಚಿಕೊಂಡು—"ತಂಗೀ, ಹೆದರಬೇಡ. ನೀನು ಇಲ್ಲಿಗೆ ಹ್ಯಾಗೆ ಬಂದೆ ಎಂಬದನ್ನು ನನ್ನ ಮುಂದೆ ಹೇಳು; ಅಂದರೆ ನಾನು ಅದನ್ನೆಲ್ಲ ಮಾಸಾಹೇಬರ ಮುಂದೆ ಹೇಳಿ ಅವರ ಸಿಟ್ಟು ಇಳಿಸುವೆನು, ಎಂದು ಹೇಳಲು, ನೂರಜಹಾನಳು ತನ್ನ ಯಾವತ್ತು ವೃತ್ತಾಂತವನ್ನು ಹೇಳತೊಡಗಿದಳು-"ಮಾರ್ಜಿನೇ ನೀನು ಹಿರಿಯ ಮನುಷ್ಯಳು. ಈಗಿನ ಹುಡುಗರ ಚಾಳಿಯನ್ನು ನೋಡಿ ಸಿಟ್ಟಾಗಬೇಡ, ನಗಬೇಡ. ರಣಮಸ್ತಖಾನನು ನನ್ನನ್ನು ವಿಜಾಪುರಕ್ಕೆ ಕಳಿಸಿ ಹೋದ ಬಳಿಕ, ವಿಶೇಷವಾಗಿ ನೀನೂ ಮಾಸಾಹೇಬರೂ ನಮ್ಮ ಮನೆಗೆ ನನ್ನನ್ನು ರಣಮಸ್ತಖಾನನಿಗೆ ಕೊಡಬೇಕೆಂದು ಕೇಳಲಿಕ್ಕೆ ಬಂದು ಹೋದ ಬಳಿಕ, ರಣಮಸ್ತಖಾನನ ಆಶೆಯು ನನಗೆ ತಪ್ಪಿದಂತೆ ಆಯಿತು; ಯಾಕಂದರೆ, ಆತನ ಕುಲವೃತ್ತಾಂತವು ಯಾರಿಗೂ ಗೊತ್ತಿಲ್ಲ; ಆತನು ಕುಲೀನನೆಂಬದು ಗೊತ್ತಾದರೂ, ಆತನು ಮಾಡಿದ ಪ್ರತಿಜ್ಞೆಯು ನೆರವೇರುವದು ಅಸಂಭವವಾಗಿತ್ತು. ಮುಂದೆ ಬರಬರುತ್ತ ರಣಮಸ್ತಖಾನನ ನೆನಪು ಸಹ ನನಗೆ ವಿಶೇಷವಾಗಿ ಆಗದಾಯಿತು; ಆದರೆ ರಾಮರಾಜನ ಸಂಗಡ ಮೂವರು ಬಾದಶಹರೂ ಯುದ್ಧವನ್ನು ಹೂಡಿ ಸೈನ್ಯದೊಡನೆ ವಿಜಯನಗರದ ಮೇಲೆ ಸಾಗಲು, ನನಗೆ ಪುನಃ ರಣಮಸ್ತಖಾನರ, ಅಥವಾ ನಮ್ಮ ನಬಾಬಸಾಹೇಬರ ನೆನಪು ಆಯಿತು. ನಬಾಬಸಾಹೇಬರು ತಮ್ಮ ಪ್ರತಿಜ್ಞೆಯನ್ನು ಈಡೇರಿಸಬಹುದೆಂಬ ಆಶೆಯು ನನಗೆ ಉತ್ಪನ್ನವಾಯಿತು. ತಮ್ಮ ಪ್ರತಿಜ್ಞೆಯನ್ನು ಕೊನೆಗಾಣಿಸುವದಕ್ಕಾಗಿಯೇ ಅವರು ರಾಮರಾಜನ ಕಡೆಗಾಗಿರುವರಂದು ನನ್ನ ಭಾವನೆಯಾಯಿತು. ಹೊತ್ತು ನೋಡಿ ಅವರು ರಾಮರಾಜನ ಕುತ್ತಿಗೆಯನ್ನು ಕೊಯ್ಯದೆ ಬಿಡರೆಂದು ನಾನು ಈಗಲೂ ಪೂರ್ಣವಾಗಿ ನಂಬಿದ್ದೇನೆ. ರಾಮರಾಜನ ಮೇಲೆ ನನ್ನ ಸಿಟ್ಟು ಇದ್ದಷ್ಟೇ ರಣಮಸ್ತಖಾನರ ಮೇಲೆ ನನ್ನ ಪ್ರೇಮವಿರುತ್ತದೆ. ಯುದ್ಧ ಪ್ರಸಂಗವು ಒದಗಿದ್ದರಿಂದ ಆ ಪ್ರೇಮವು ಮತ್ತಿಷ್ಟು ಜಾಗ್ರತವಾಯಿತು. ನಮ್ಮ ಮನೆಯೊಳಗಿನ ಗಂಡಸರೆಲ್ಲ ಯುದ್ಧಕ್ಕೆ ಹೋದದ್ದರಿಂದ ಬರಿಯ ಹೆಣ್ಣುಮಕ್ಕಳೆ

ಮನೆಯಲ್ಲಿ ಉಳಿದೆವು. ನನಗೆ ಯುದ್ಧವಾರ್ತೆಗಳೇನೂ ತಿಳಿಯದಾದವು. ರಾಮರಾಜನ ನಾಶನನ್ನು ಕಣ್ಣುಮುಚ್ಚಿ ನೋಡುವ ಇಚ್ಛೆಯು ನನಗೆ ಉತ್ಪನ್ನವಾಯಿತು. ಮಾರ್ಜಿನೇ, ನನ್ನ ಸ್ವಭಾವವು ನಿನಗೆ ಅಲ್ಪ ಸ್ವಲ್ಪವಾದರೂ ಗೊತ್ತೇ ಇರುತ್ತದೆ. ನನ್ನ ಮನಸ್ಸಿನಲ್ಲಿ ಆ ಇಚ್ಛೆಯು ಉತ್ಪನ್ನವಾದ ಕೂಡಲೆ ಅದನ್ನು ಪೂರ್ಣಮಾಡಿಕೊಳ್ಳುವದನ್ನು ನಾನು ನಿಶ್ಚಯಿಸಿದೆನು; ಮನೆಯಲ್ಲಿ ಗಂಡಸರು ಇಲ್ಲದ್ದರಿಂದ, ನನ್ನನ್ನು ಕೇಳುವವರೇ ಇಲ್ಲದಾಯಿತು. ಆಗ ನಾನು ಗಂಡಸರ ಯುದ್ಧದ ಉಡಪು-ತೊಡಪುಗಳನ್ನೂ, ಶಸ್ತ್ರಾಸ್ತ್ರಗಳನ್ನೂ ಸಜ್ಜುಮಾಡಿಕೊಂಡು, ಮನೆಯಲ್ಲಿ ಬಿಟ್ಟುಹೋಗಿದ್ದ ಒಂದು ಕುದುರೆಯನ್ನು ಸಿದ್ಧಗೊಳಿಸಿ ಪುರುಷವೇಷದಿಂದ ನಾನು ಮನೆಯನ್ನು ಬಿಟ್ಟೆನು.

ಮಾರ್ಜಿನೇ, ನನ್ನ ಸಹಾಸಕ್ಕಾಗಿ ನೀನು ಮನಸ್ಸಿನಲ್ಲಿ ನನ್ನನ್ನು ಹಳಿಯುತ್ತಿರಬಹುದು; ನನಗೆ ಹೆಸರೂ ಇಡುತ್ತಿರಬಹುದು; ಆದರೆ ನಾನು ಅಂಥ ಸಾಹಸವನ್ನೇ ಮಾಡಿರುವದರಿಂದ ನೀನು ಎಷ್ಟು ಹೇಳಿದರೂ, ನನಗೆ ಎಷ್ಟು ಹೆಸರಿಟ್ಟರೂ ನಾನು ನಿನಗೆ ಬೇಡೆನ್ನುವದಿಲ್ಲ. ನಾನು ವಿಜಯನಗರದ ಹಾದಿಯನ್ನು ಹಿಡಿದು ಮುಂದಕ್ಕೆ ಸಾಗಿದೆನು. ನನ್ನನ್ನು ಮಾರ್ಗಸ್ಥರು ಕೌತುಕದಿಂದ ನೋಡುತ್ತಲಿದ್ದರು; ಆದರೆ ಸುದೈವದಿಂದಲೋ ದುರ್ದೈವದಿಂದಲೋ ಯಾರೂ ನನ್ನ ಗುರುತು ಹಿಡಿಯಲಿಲ್ಲ. ಕೆಲವು ಮಾರ್ಗವನ್ನು ಕ್ರಮಿಸಿ ಹೋದಬಳಿಕ ನನಗೆ ಹಾದಿಯಲ್ಲಿ ಮುಸಲ್ಮಾನ ಸೈನ್ಯಕ್ಕೆ ಸಾಮಗ್ರಿಗಳನ್ನು ಒಯ್ಯುವ ಕೆಲವು ಬಂಡಿಗಳು ಭೆಟ್ಟಿಯಾದವು. ಆ ಬಂಡಿಗಳನ್ನು ಮುಸಲ್ಮಾನ ಸೈನಿಕರು ರಕ್ಷಿಸುತ್ತಲಿದ್ದರು. ಪ್ರಾಯಶ್ಚಿತ್ತೆಲ್ಲ ಯುದ್ಧಕ್ಕೆ ಹೋದದ್ದರಿಂದ ಮುದುಕರು ಬಂಡಿಗಳ ಸಂರಕ್ಷಣವ ಕಾರ್ಯವನ್ನು ಮಾಡಬೇಕಾಗಿತ್ತು. ಮುದುಕರಾದ ಮುಸಲ್ಮಾನ ರಕ್ಷಕರಿಬ್ಬರು ನನ್ನನ್ನು ನೋಡಿ ಕೌತುಕಪಟ್ಟು—"ನೀನು ಯಾರು? ಇಷ್ಟು ಹುಡುಗತನದಲ್ಲಿ ನಿನಗೆ ಯುದ್ಧವು ಯಾಕೆ ಬೇಕಾಯಿತು? ನೀನು ಮನೆಯಲ್ಲಿ ಹೇಳಿಕೇಳಿ ಹೊರಟಿರುವೆಯೋ? ಕೇಳದೆ ಹೊರಟಿರುವೆಯೋ?" ಎಂದು ಪ್ರಶ್ನಿಮಾಡಿದರು. ಅದಕ್ಕೆ ನಾನು—"ನಮ್ಮ ಮನೆಯೊಳಗಿನವರಿಲ್ಲರು ನನ್ನನ್ನು ಬಿಟ್ಟು ಯುದ್ಧಕ್ಕೆ ಹೋದರು. ನನಗೆ ಯುದ್ಧಕ್ಕೆ ಹೋಗುವ ಇಚ್ಛೆಯಾದ್ದರಿಂದ ನಾನೇ ಹೊರಟುಬಂದಿದ್ದೇನೆ. ನಾನು ವಿಜಾಪುರದೊಳಗಿನವನೊಬ್ಬ ಸರದಾರನ ಮಗನು" ಎಂದು ಹೇಳಿದೆನು. ಅದನ್ನು ಕೇಳಿ ಆ ವೃದ್ಧರಿಗೆ ಆಶ್ಚರ್ಯವಾದಂತೆ ತೋರಿತು. ನನ್ನ ದನಿಯಿಂದ ಅವರಿಗೆ ನಾನು ಹೆಂಗಸೆಂಬ ಸಂಶಯಬಂದಂತೆ ತೋರಿತು. ಅದನ್ನರಿತು ನಾನು ಅವರೊಡನೆ ಮಾತಾಡು

ವದನ್ನೇ ಕಡಿಮೆ ಮಾಡಿದೆನು. ಮುಂದೆ ಅವರೂ ಅಷ್ಟು ಲಕ್ಷಗೊಡಲಿಲ್ಲ. ಸಂಜೆಯವರೆಗೆ ಹಾದಿಯನ್ನು ನಡೆದು ಹೋದ ಬಳಿಕ ಆ ಕಾವಲುಗಾರರು ನನ್ನನ್ನು ಕುರಿತು—" ಬಚ್ಚಾ, ನೀನು ಬಹಳ ದಣಿದಂತೆ ತೋರುತ್ತದೆ; ಆದ್ದರಿಂದ ಯಾವದಾದರೂ ಒಂದು ಬಂಡಿಯಲ್ಲಿ ಮಲಗಿಕೋ, ಎಂದು ಹೇಳಿದರು. ನನಗೂ ಅಷ್ಟೇ ಬೇಕಾಗಿತ್ತು. ಮುಂಜಾವಿನಿಂದ ಒಂದೇಸವನೆ ಕುದುರೆಯ ಮೇಲೆ ಕುಳಿತು ನನ್ನ ಟೊಂಕವು ನೋಯುತಿತ್ತು. ನಾನು ಸ್ವಲ್ಪ ಸಂಕೋಚಿಸಿದಂತೆ ತೋರಿಸಿ ಕಡೆಗೆ ಒಂದು ಬಂಡಿಯಲ್ಲಿ ಮಲಗಿಕೊಂಡೆನು. ಬಂಡಿಗಳು ಮಧ್ಯ ರಾತ್ರಿಯವರೆಗೆ ಹಾದಿಯನ್ನು ನಡೆದು ಹೋದವು. ಬಂಡಿಯಹೊಡೆಯುವವರು ತೂಕಡಿಸುತ್ತ ಸಾಗಿದರು. ಅವರು ಹಾದಿಯನ್ನು ಕ್ರಮಿಸುತ್ತಿರುವಾಗ, ಹಾದಿಯ ತಪ್ಪಿದಂತೆ ಕಾಣುತ್ತದೆಂದು ಯಾರೋ ಒಬ್ಬರು ಶಂಕಿಸಿದರು. ಅವರು ಅತ್ತಿತ್ತ ಹಾದಿಯ ನೋಡುತ್ತಿರಲು, ಅಷ್ಟರಲ್ಲಿ ಯಾರೋ ಒಬ್ಬರು ಅವರಿಗೆ ಬೆಟ್ಟಿಯಾಗಿ, ನಿಮಗೆ ಹಾದಿಯನ್ನು ತೋರಿಸುತ್ತೇನೆಂದು ಹೇಳಿ ಬಂಡಿಗಳನ್ನು ಸಾಗಿಸಿಕೊಂಡು ಹೋದನು. ಮುಂದೆ ತಾಸೆರಡು ತಾಸು ಬಂಡಿಗಳು ಹೋಗಿರಬಹುದು, ಅಷ್ಟರಲ್ಲಿ ಬಂಡಿಗಳನ್ನು ಸಾಗಿಸಿಕೊಂಡು ಹೋಗುವವನು ಸಿಳ್ಳು ಹೊಡೆದನು. ಮುಂದೆ ಸ್ವಲ್ಪ ಹೊತ್ತಿನಲ್ಲಿ ಇಪ್ಪತ್ತು ಇಪ್ಪತ್ತೈದು ಜನರು ಬಂಡಿಯನ್ನು ಸುತ್ತುಗಟ್ಟಿದರು. ಅವರ ಮಾತುಗಳು ನನಗೆ ತಿಳಿಯಲಿಲ್ಲ. ಅವೇನೋ ಕನ್ನಡ ಮಾತುಗಳಂತೆ! ಮುಂದೆ ಸ್ವಲ್ಪ ಹೊತ್ತಿನಲ್ಲಿ ಮತ್ತೆ ಇಪ್ಪತ್ತು ಇಪ್ಪತ್ತೈದು ಜನರು ಬಂದರು. ಅವರು ವಿಜಯನಗರದ ದಂಡಾಳುಗಳೆಂದು ಗೊತ್ತಾಯಿತು. ಅವರಲ್ಲಿ ಇಪ್ಪತ್ತು ಇಪ್ಪತ್ತೈದು ಜನರು ನಮ್ಮ ಬಂಡಿಗಳನ್ನು ಕಾಯಲಿಕ್ಕೆ ನಿಂತು, ಉಳಿದವರು ಎತ್ತಕಡೆಗೋ ಹೊರಟುಹೋದರು. ನಮ್ಮವರು ಸ್ವಲ್ಪ ಜನರು, ಮೇಲೆ ಮುದುಕರು; ಆದ್ದರಿಂದ ವಿಜಯನಗರದ ದಂಡಾಳುಗಳ ಮುಂದೆ ಅವರ ಆಟ ನಡೆಯಲಿಲ್ಲ. ಜನರ ಈ ಗದ್ದಲವನ್ನು ನೋಡಿ ನಾನು ಬಂಡಿಯಲ್ಲಿ ಸುಮ್ಮನೆ ಮಲಗಿಬಿಟ್ಟಿನು. ಬಂಡಿಯ ಒಂದೊಂದು ಮಗ್ಗಲಿಗೆ ಒಬ್ಬೊಬ್ಬರಂತೆ ಅವರು ಕಾಯಲಿಕ್ಕೆ ನಿಂತಿದ್ದರಿಂದ ನನಗೆ ಮಿಸಿಕಾಡಲಿಕ್ಕೆ ಸಹ ಆಸ್ಪದದೊರೆಯಲಿಲ್ಲ ಹೀಗೆ ನಾನು ಬಗೆಹರಿಯದ ಚಿಂತೆಯಿಂದ ಮಲಗಿರಲು, ಬೆಳ್ಳಗೆ ಬೆಳಗಾಯಿತು.

ಬೆಳಗಾದ ಕೂಡಲೆ ವಿಜಯನಗರದ ದಂಡಿನವರು ಬಂಡಿಗಳನ್ನು ಶೋಧಿಸಲುಪಕ್ರಮಿಸಿದರು. ಆಗ ನಾನು ಮೇಲಕ್ಕೆ ಎದ್ದು ನಿಂತುಕೊಳ್ಳಲು, ಅವರೆಲ್ಲರ ದೃಷ್ಟಿಯು ನನ್ನ ಕಡೆಗೆ ತಿರುಗಿ, ಅವರು ನನ್ನ ಸುತ್ತುಮುತ್ತು ನೆರೆದು ಚೇಷ್ಟೆ ಮಾಡಹತ್ತಿದರು. ಅವರ ಕನ್ನಡ ಮಾತುಗಳು ನನಗೆ ಸರ್ವಥಾ ತಿಳಿಯುತ್ತಿ

ದ್ದಿಲ್ಲ. ಅಂಥ ಮಾತುಗಳನ್ನು ನಾನು ಹಿಂದಕ್ಕೆ ವಿಜಯನಗರದ ದರ್ಬಾರದಲ್ಲಿ ರಾಮರಾಜನ ಮುಂದೆ ನಿಂತಾಗೂ, ನನ್ನನ್ನು ಆತನ ದಂಡಾಳುಗಳು ಹಿಡ ಕೊಂಡು ಹೋಗುತ್ತಿರುವಾಗೂ ಮಾತ್ರ ಒಮ್ಮೆ ಕೇಳಿದ್ದೆನು. ನನ್ನನ್ನು ನೋ ಡಿ ಅವರು "ಈತನು ಹೆಂಗಸಿರಬಹುದೆಂದು" ಶಂಕಿಸುತ್ತಲಿದ್ದರು. ಅಷ್ಟರಲ್ಲಿ ನನ್ನ ತಲೆಯ ಮುಂಡಾಸವು ಕೆಳಗೆ ಬಿದ್ದು, ನನ್ನ ತಲೆಕೂದಲುಗಳು ಬೆನ್ನ ಮೇಲೆ ಹರವಲು, ಅವರು ನಿಶ್ಯಂಕರಾಗಿ ಮನಸ್ಸಿಗೆ ಬಂದಂತೆ ನನಗೆ ಚೇಷ್ಟೆ ಮಾಡಿ ನಗಹತ್ತಿದರು. ಮುಂದೆ ಅವರು ನನ್ನನ್ನು ರಾಮರಾಜನ ಮುಂದೆ ನಿಲ್ಲಿಸಲು, ರಾಮರಾಜನು ಕೂಡಲೆ ನನ್ನ ಗುರುತುಹಿಡಿದನು. ಆಗ ಆ ದು ಷ್ಟನು ನನ್ನನ್ನು ಎಷ್ಟು ಹೆಂಗಿಸಿ ಉಪಹಾಸಮಾಡಿ ಮಾತಾಡಿರಬಹುದೆಂಬದನ್ನು ನೀನೇ ತರ್ಕಿಸು. ಅದನ್ನೆಲ್ಲ ನಾನು ಹೇಳಲಾರೆನು. ಕಡೆಗೆ ಆತನು ಯುದ್ಧ ಮುಗಿದ ಬಳಿಕ ನನ್ನನ್ನು ರಣಮುಸ್ತಖಾನನಿಗೆ ಲಗ್ನಮಾಡಿಕೊಡಬೇಕಾಗಿದೆ ಯೆಂದು ಹೇಳಿ, ನನ್ನನ್ನು ಇಲ್ಲಿಗೆ ಕಳಿಸಿಕೊಟ್ಟನು; ಅಂದ ಬಳಿಕ ಮಾರ್ಜಿನೇ, ನಿಮ್ಮ ಬಳಿಗೆ ನಾನು ಬಂದದ್ದರಲ್ಲಿ ನನ್ನ ಅಪರಾಧವೇನಿದೆ ನೀನೇ ಹೇಳು?

ಈ ಮೇರೆಗೆ ನೂರಜಹಾನಳು ತನ್ನ ವೃತ್ತಾಂತವನ್ನೆಲ್ಲ ಹೇಳಿದ್ದನ್ನು ಕೇಳಿ ಮಾರ್ಜಿನೆಯು ಆಶ್ಚರ್ಯಪಟ್ಟು, ಇಂಥ ಸಾಹಸಮಾಡಿದ್ದಕ್ಕಾಗಿ ಆಕೆಯು ನೂರಜಹಾನಳಿಗೆ ಬಹಳ ಸಿಟ್ಟು ಮಾಡಿದಳು. ನೂರಜಹಾನಳು ಪಟ್ಟ ಕಷ್ಟವನ್ನು ನೆನೆದು ಮಾರ್ಜಿನೆಯು ಬಹಳವಾಗಿ ಮರುಗಿದಳು. ಆಕೆಯು ನೂರಜಹಾನಳಿಗೆ—ನಾನು ಮಾಸಾಹೇಬರ ಬಳಿಗೆ ಹೋಗಿ ಅವರ ಸಿಟ್ಟನ್ನು ಇಳಿಸುವೆನು, ಚಿಂತೆಮಾಡಬೇಡ, ಎಂದು ಹೇಳಿ, ಮಾಸಾಹೇಬರ ಬಳಿಗೆ ಹೋಗಿ ಎಲ್ಲ ವೃತ್ತಾಂತವನ್ನು ಹೇಳಿದಳು. ಅದನ್ನು ಕೇಳಿ ಮಾಸಾಹೇಬರು ಬಹಳ ಆಶ್ಚರ್ಯಪಟ್ಟರು. ನೂರಜಹಾನಳ ದುರವಸ್ಥೆಯನ್ನು ಕೇಳಿ ಅವರು ಮರುಗಿದರು. ನೂರಜಹಾನಳು ಕಣ್ಣೀರುಹಾಕಿದಳೆಂಬದನ್ನು ಕೇಳಿ ಅವರು ಮಾರ್ಜಿನೆಗೆ—ಹೋಗು, ನೂರಜಹಾನಳನ್ನು ಕರಕೊಂಡು ಬಾ, ಎಂದು ಹೇಳಿ ದರು. ಮಾರ್ಜಿನೆಯು ಕೂಡಲೆ ಹೋಗಿ ನೂರಜಹಾನಳನ್ನು ಕರಕೊಂಡು ಮಾಸಾಹೇಬರ ಬಳಿಗೆ ಬಂದಳು. ಮಾಸಾಹೇಬರು ನೂರಜಹಾನಳನ್ನು ಕರೆದು ಆದರಿಸಿದರು. ಸಮದುಃಖಿಗಳಾದ ಅವರಲ್ಲಿ ಪರಸ್ಪರ ಸಖ್ಯವು ಹೆಚ್ಚುತ್ತ ಹೋ ಯಿತು. ತನ್ನ ಮಗನು ರಾಮರಾಜನನ್ನು ಕೂಡಿಕೊಂಡು ಬಾದಶಹರ ದ್ರೋ ಹವನ್ನು ಚಿಂತಿಸಿರುವನೆಂದು ಮಾಸಾಹೇಬರು ತಿಳಕೊಂಡಿದ್ದರು; ಆದರೆ ರಾಮರಾಜನ ಘಾತವಾಡಿ ಬಾದಶಹನ ಹಿತವಾಡುವದಕ್ಕಾಗಿಯೇ ರಣಮಸ್ತ ಖಾನನು ರಾಮರಾಜನನ್ನು ಕೂಡಿರುವನೆಂದು ನೂರಜಹಾನಳು ಹೇಳಹತ್ತಿ

ದಳು. ಹಿಂದಕ್ಕೆ ನೂರಜಹಾನಳ ಮುಂದೆ ತಮ್ಮ ಮಗನು ಕುಂಜವನದ ಏಕಾಂತದಲ್ಲಿ ಮಾಡಿದ ಪ್ರತಿಜ್ಞೆಯನ್ನು ಮರೆಗೆ ನಿಂತು ಮಾಸಾಹೇಬರು ಕೇಳಿದ್ದರಿಂದ, ನೂರಜಹಾನಳ ಮಾತು ಅವರಿಗೆ ಅಷ್ಟು ಅಶಕ್ಯವಾಗಿ ತೋರಲಿಲ್ಲ. ಹಾಗೆ ಇದ್ದರೂ ಇರಬಹುದೆಂದು ಭಾವಿಸಿ, ಅವರು ಸ್ವಲ್ಪ ಸಮಾಧಾನಪಟ್ಟು, ತಾವು ರಾಮರಾಜನ ಈ ಪ್ರತಿಬಂಧದಿಂದ ಪಾರಾಗಿ ಹೋಗಲಿಕ್ಕೆ ಹಂಚಿಕೆಯನ್ನು ಯೋಚಿಸಹತ್ತಿದರು. ಧನಮಲ್ಲನನ್ನು ಒಲಿಸಿಕೊಂಡ ಹೊರತು ಯಾವ ಹಂಚಿಕೆಯೂ ಕೈಗೂಡುವಹಾಗಿದ್ದಿಲ್ಲ. ಧನಮಲ್ಲನ ದುಷ್ಟಬುದ್ಧಿಯನ್ನು ಮಾಸಾಹೇಬರು ಅರಿತಿದ್ದರೂ, ಕಾರ್ಯವು ಸಾಧಿಸುವವರೆಗೆ ಆತನ ಅನುವರ್ತನ ಮಾಡಲೇ ಬೇಕೆಂದು ತಿಳಿದು, ಅವರು ತಮ್ಮ ಸಿಟ್ಟನ್ನೆಲ್ಲ ನುಂಗಿಕೊಂಡು ಧನಮಲ್ಲನನ್ನು ರಮಿಸುತ್ತಲಿದ್ದರು. ನೂರಜಹಾನಳೂ ಧನಮಲ್ಲನನ್ನು ಸವಿಮಾತುಗಳಿಂದ ಮೋಹಗೊಳಿಸಹತ್ತಿದಳು. ಆಕೆಯು ಆ ದುಷ್ಟನಿಗೆ ದೊಡ್ಡ ದೊಡ್ಡ ಉಚಿತಗಳ ಆಶೆಯನ್ನು ತೋರಿಸಹತ್ತಿದಳು. ಇದರಿಂದ ಧನಮಲ್ಲನ ವೃತ್ತಿಯಲ್ಲಿ ಹೆಚ್ಚು ಕಡಿಮೆಯಾಯಿತು. ಆತನು ತನ್ನ ಮೌನವನ್ನು ಬಿಟ್ಟು ಕೊಟ್ಟಿದ್ದನು. ಯುಕ್ತಿಯಿಂದ ಯುದ್ಧದ ವಾರ್ತೆಗಳನ್ನು ಕೇಳಿ, ಅವನ್ನೆಲ್ಲ ಮೆಹೇರಜಾನ-ನೂರಜಹಾನರಿಗೆ ಆತನು ಹೇಳುತ್ತಲಿದ್ದನು; ಆದರೆ ಆತನು ತನ್ನ ಅಜ್ಜಗಾವಲುಮಾತ್ರ ಸಡಿಲಿಸಿದ್ದಿಲ್ಲ. ಇವರು ತನ್ನ ಕಣ್ಣು ತಪ್ಪಿಸಿ ಓಡಿಹೋಗುವ ಹವಣಿಕೆಯಲ್ಲಿದ್ದಾರೆಂದು ಆತನು ತಿಳಿದುಕೊಂಡಿದ್ದನು. ನೂರಜಹಾನಳು ಹೋದರೂ ಚಿಂತೆಯಿಲ್ಲ, ಮಾಸಾಹೇಬರು (ಮೆಹೇರಜಾನಳು)ಮಾತ್ರ ಹೋಗಲಾಗದೆಂದು ಆತನು ಜಾಗರೂಕನಾಗಿದ್ದನು. ಆತನು ಆ ಸ್ತ್ರೀಯರಿಗೆ—"ನಾನು ನಿಮ್ಮ ಬಿಡುಗಡೆಯನ್ನು ನಿಶ್ಚಯವಾಗಿ ಮಾಡುತ್ತೇನೆ. ನನ್ನ ಕಾವಲು ಇರುವತನಕ ನಿಮ್ಮ ಕೂದಲು ಕೂಡ ಕೊಂಕಲಾರದು. ನಿಮ್ಮ ಬಿಡುಗಡೆಮಾಡಲಿಕ್ಕೆ ಯೋಗ್ಯಸಂಧಿಯುಮಾತ್ರ ಒದಗಲಿಕ್ಕೆಬೇಕು. ಆ ಸಂಧಿಯು ಒದಗುವವರೆಗೆ ಸಮಾಧಾನತಾಳಿರಿ". ಎಂದು ಹೇಳುತ್ತಲಿದ್ದನು. ನಿರುಪಾಯತಾಗಿ ಆ ದೈವಹೀನಪ್ರಾಣಿಗಳು ಕಷ್ಟದಿಂದ ಕಾಲಹರಣ ಮಾಡಹತ್ತಿದವು.

೩೧ನೆಯ ಪ್ರಕರಣ—ರಣಮಸ್ತನ ಐಂದ್ರಜಾಲವು!

ಈ ಮೇರೆಗೆ ಕುಂಜವನದಲ್ಲಿ ಆ ದೈವಹೀನಪ್ರಾಣಿಗಳು ಕಷ್ಟದಿಂದ ಕಾಲಹರಣ ಮಾಡುತ್ತಿರಲು, ಇತ್ತ ರಾಮರಾಜನು ವೈರಿಗಳ ಕಡೆಯ ಸುದ್ದಿಯನ್ನು ಹೇಳಬಂದ ರಣಮಸ್ತಖಾನನ ಮುಂದೆ, ನೂರಜಹಾನಳು ಅಕಸ್ಮಾತ್ತಾಗಿ ತನ್ನ

ಕೈಗೆಸಿಕ್ಕ ಸುದ್ದಿಯನ್ನು ಹೇಳಿದನು. ನೂರಜಹಾನಳ ಹೆಸರು ಕೇಳಿದ ಕೂಡಲೆ ರಣಮಸ್ತನು ಕಕ್ಕಾಬಿಕ್ಕಿಯಾದನು. ಈ ಪ್ರಸಂಗದಲ್ಲಿ ನೂರಜಹಾನಳು ರಾಮರಾಜನ ಕೈಗೆ ಹ್ಯಾಗೆ ಸಿಕ್ಕಿರಬಹುದೆಂದು ಆತನು ಆಲೋಚಿಸಹತ್ತಿದನು. ಅಷ್ಟರಲ್ಲಿ ರಾಮರಾಜನು ರಣಮಸ್ತನನ್ನು ಕುರಿತು—ರಣಮಸ್ತ, ನಿನ್ನ ಅರಗಿಳಿಯು ಸಿಕ್ಕಿತೆಂದು ಉಬ್ಬಬೇಡ. ಆದನ್ನು ನಾನು ಎಲ್ಲಿ ಇಟ್ಟಿರುವನೆಂಬದನ್ನು ಈ ಯುದ್ಧವು ಮುಗಿಯುವ ವರೆಗೆ ನಿನ್ನ ಮುಂದೆ ಹೇಳುವದಿಲ್ಲ. ಯುದ್ಧವು ಮುಗಿದಕೂಡಲೆ ನೂರಜಹಾನಳೊಡನೆ ನಿನ್ನ ಲಗ್ನವನ್ನು ಮಾಡುವೆನು. ಈಗೇ ನೀನು ನೂರಜಹಾನಳ ಮೋಹದಲ್ಲಿ ಸಿಕ್ಕರೆ, ನಿನ್ನ ಯುದ್ಧದ ಔತ್ಸುಕ್ಯವು ಕಡಿಮೆಯಾಗಬಹುದು; ಅನ್ನಲು, ಅದನ್ನು ಕೇಳಿ ರಣಮಸ್ತನಿಗೆ ವಿಲಕ್ಷಣ ಸಂತಾಪವಾಯಿತು. ರಾಮರಾಜನು ನೂರಜಹಾನಳನ್ನು ತನ್ನ ರಾಣೀವಾಸದಲ್ಲಿ ಸೇರಿಸಿಕೊಂಡಿರಬಹುದೆಂದು ಕಲ್ಪಿಸಿ ಆತನು ಕ್ರೋಧಪರವಶನಾಗಿ ಕೆಂಪಡರಿದ ಕಣ್ಣುಗಳಿಂದ ರಾಮರಾಜನನ್ನು ನೋಡಹತ್ತಿದನು.

ರಣಮಸ್ತನ ಈ ಮನೋಭಾವವನ್ನರಿತ ರಾಮರಾಜನು ಕೂಡಲೆ ಆತನನ್ನು ಕುರಿತು—ರಣಮಸ್ತ, ಶಾಂತನಾಗು. ನಿನ್ನ ಅರಗಿಳಿಯು ಪರಪುರುಷರ ಕಣ್ಣಿಗೆ ಸಹ ಬೀಳದಂತೆ ಯೋಗ್ಯವ್ಯವಸ್ಥೆ ಮಾಡಿರುವೆನು. ನೂರಜಹಾನಳು ಇನ್ನು ಸರ್ವಥಾ ನಿನ್ನವಳೇ ಇರುತ್ತಾಳೆಂದು ತಿಳಿದುಕೋ. ಆಯಿತು, ಇನ್ನು ನಾನು ಹೆಚ್ಚಿಗೆ ಮಾತಾಡುವದಿಲ್ಲ. ಈಗ ನೀನು ಯುದ್ಧದ ಯಾವ ಸುದ್ದಿಯನ್ನು ತಂದಿರುತ್ತೀಯೆಂಬದನ್ನು ಹೇಳು. ಶತ್ರುಗಳ ಕಡೆಯ ಸುದ್ದಿಯೇನು? ಕೃಷ್ಣೆಯನ್ನು ದಾಟಿ ತಾಳೀಕೋಟೆಯ ಹತ್ತರ ಎಲ್ಲರೂ ಬಂದು ಕುಳಿತು ಒಬ್ಬರೊಬ್ಬರ ಆದರಸತ್ಕಾರ ಮಾಡುವಲ್ಲಿ ಮಗ್ನರಾಗಿರುತ್ತಾರೆಂದು ನಾನು ಕೇಳುತ್ತೇನೆ. ನಾವು ತುಂಗಭದ್ರೆಯನ್ನು ದಾಟಿ ಇಲ್ಲಿ ಬಂದು ಕುಳಿತಿದ್ದರೂ, ಅವರ ಆದರಸತ್ಕಾರಗಳೇ ಮುಗಿಯಲೊಲ್ಲವಲ್ಲ! ತಮ್ಮ ಅನ್ನ ಸಾಮಗ್ರಿಗಳ ಬಂಡಿಗಳು ಯಾವ ಕಡೆಗೆ ಹೋಗುತ್ತವೆಂಬದರ ಅರವು ಸಹ ಅವರಿಗೆ ಇದ್ದಂತೆ ತೋರುವದಿಲ್ಲ. ಅವರು ಮಾಡುತ್ತಾರಾದರೂ ಏನು? ಮೂರು ನಾಲ್ಕು ಜನರು ಒಟ್ಟುಗೂಡಿ ಬಂದಿದ್ದರೂ ಮುಂದಕ್ಕೆ ಸಾಗಿಬರುವ ಧೈರ್ಯವು ಅವರಿಗೆ ಆಗಲೊಲ್ಲದಲ್ಲ. ಅವರು ಏನು ಆಲೋಚಿಸುತ್ತಿರುವರು? ಹಿಂದಿರುಗಿ ಹೋಗಬೇಕೆಂದು ಆಲೋಚಿಸುತ್ತಿರುವರೋ ಏನು? ನಮ್ಮನ್ನು ನೋಡಿದ ಕೂಡಲೆ ಅವರ ಎದೆಯೊಡೆದು ನೀರಾಯಿತೇನು? ನಾವು ಹಾದಿಯ ನೋಡುವತನಕ ನೋಡಿ ಆಮೇಲೆ

ಮ್ಮೆಲೆ ಅವರ ಮೈಮೇಲೆ ಬಿದ್ದು ದೂಳಹಾರಿಸುವೆವು. ಅವರಿಗೆ ನೀರುಬೇಡ
ಕ್ಕಿ ಸಹ ಆಸ್ಪದ ಕೊಡಲಿಕ್ಕಿಲ್ಲ. ಯಾಕೆ ರಣಮಸ್ತ, ಮೂಢನಹಾಗೆ ಸು
ುನೆ ನಿಂತುಕೊಂಡೆಯಲ್ಲ, ಮಾತಾಡು.

ರಾಮರಾಜನ ಈ ಮಾತುಗಳನ್ನು ಕೇಳಿ ರಣಮಸ್ತನು ತೋರಿಕೆಗಾಗಿ
ುಗುಳು ನಗೆ ನಕ್ಕು ರಾಮರಾಜನ ಸಾಮಾರ್ಥ್ಯಾತಿಶಯವನ್ನು ಒಪ್ಪಿ
ಂಡಂತೆ ತೋರಿಸಿದನು. ರಾಮರಾಜನು ತನ್ನ ಇಬ್ಬರು ಬಂಧುಗಳೊ
ಿ ಮಹಾ ಸೈನ್ಯವನ್ನು ಕಟ್ಟಿಕೊಂಡು ಮುಸಲ್ಮಾನರ ಮೇಲೆ ಬೀಳುವದ
ದ ಮುಸಲ್ಮಾನರ ಪರಿಣಾಮವಾಗಲಿಕ್ಕಿಲ್ಲೆಂದು, ಆ ಘಾತಕಸ್ವಭಾವದ
ರಮಸ್ತನು ತಿಳಕೊಂಡಿದ್ದನು. ಹ್ಯಾಗಾದರೂ ಮಾಡಿ ರಾಮರಾಜನ ಇ
ರು ಬಂಧುಗಳನ್ನು ಬೇರೆ ಕಡೆಗೆ ಕಳಿಸಿ ರಾಯನ ಸೈನ್ಯದ ಕಸುವು ಕಡಿ
ಮಾಡಬೇಕೆಂದು ಆತನು ಯೋಚಿಸುತ್ತಿದ್ದನು. ತನ್ನ ಈ ಯೋಚನೆಯ
ು ಸಾಧಿಸುವದಕ್ಕಾಗಿ ಆ ದುಷ್ಟರಣಮಸ್ತನು ರಾಮರಾಜನನ್ನು ಕುರಿತು
ನಯದಿಂದ—ಮಹಾರಾಜರೇ, ಮುಸಲ್ಮಾನರು ಮುಂದುವರಿದು ಬರುವ ಹಾ
ುನ್ನು ನೋಡುತ್ತ ತಾವು ಸುಮ್ಮನೆ ಕುಳಿತುಕೊಳ್ಳಬಾರದು. ತುಂಗಭ
ಯ ಬೇರೆಯೊಂದು ಕಡೆಯ ಕಾಲಹೊಳೆಯು ವೈರಿಗಳಿಗೆ ಗೊತ್ತಾದಹಾಗೆ
ೀರುತ್ತದೆ. ನೀವು ಇಲ್ಲಿ ಸ್ವಸ್ಥವಾಗಿ ಕುಳಿತುಕೊಳ್ಳುವದನ್ನು ನೋಡಿ ಮು
ಾನ್ಮಾನರು ತುಂಗಭದ್ರೆಯ ಕಾಲಹೊಳೆಯ ದಾರಿಯಿಂದ ನಮ್ಮರಾಜ್ಯವನ್ನು
ವೇಶಿಸಿ, ವಿಜಯನಗರದ ವರೆಗೆ ಸಾಗಿಹೋಗ ಬೇಕೆಂದು ಎಣಿಕೆಹಾಕಿರು
ುರೆ. ಅವರು ನಿಮ್ಮ ತೋರಿಕೆಗಾಗಿ ಸ್ವಲ್ಪ ಸೈನ್ಯವನ್ನು ಇಲ್ಲಿ ಇಟ್ಟು,
ುಮ್ಮ ಸೈನ್ಯದ ಮುಖ್ಯಭಾಗವನ್ನು ಆ ಕಾಲಹೊಳೆಯ ಕಡೆಗೆ ಸಾಗಿಸಿರು
ುರು. ಆ ಕಾಲಹೊಳೆಯು ಇಲ್ಲಿಂದ ಮೂರು ದಿನಗಳ ಹಾದಿಯಮೇಲೆ ಇ
ತ್ತದೆಂದು ನನಗೆ ಸದ್ದಿಯು ಗೊತ್ತಾಗಿರುತ್ತದೆ; ಆದ್ದರಿಂದ ತಾವು ತಮ್ಮ
ನ್ಯದ ಬಹುದೊಡ್ಡ ಭಾಗವನ್ನು ಆ ಕಾಲಹೊಳೆಯ ಕಡೆಗೆ ಶತ್ರುಗಳಿಗೆ ಎದು
ುರುವದಕ್ಕಾಗಿ ಕಳಿಸಿದರೆ ಬಹಳ ನೆಟ್ಟಗಾಗುವದು. ಶತ್ರುಗಳು ಹುಡುಕಿ
ಂಡಿರುವ ಕಾಲಹೊಳೆಯನ್ನು ತೋರಿಸಲಿಕ್ಕೆ ನನ್ನ ಚಾರರು ಸಿದ್ಧರಿರು
ುರೆ. ಈ ಪ್ರಸಂಗದಲ್ಲಿ ತಾವು ಉದಾಸೀನ ಮಾಡಿದರೆ, ಏನು ಪರಿಣಾ
ವಾದೀತೆಂಬದನ್ನು ಹೇಳಲಾಗದು; ಇದರಮೇಲೆ ತಮ್ಮ ಇಚ್ಛೆಯು, ಎಂದು
ಳಿದನು. ಅದನ್ನು ಕೇಳಿ ರಾಮರಾಜನು ನಕ್ಕು ರಣಮಸ್ತಖಾನನನ್ನು
ರಿತು—"ರಣಮಸ್ತ, ನೀನು ಹೇಳುವದೆಲ್ಲ ಸರಿ; ಆದರೆ ನಾನು ವೈರಿಗಳ
ು ಇಲ್ಲಿಂದ ಉಲುಕಗೊಟ್ಟರಷ್ಟೇ ಅವರು ಕಾಲಹೊಳೆಯ ಕಡೆಗೆ ಹೋಗುವದು?

ನಾನು ಇಲ್ಲಿಯೇ ಅವರಮೇಲೆ ಬಿದ್ದು ಅವರ ನಾಶಮಾಡಿಬಿಡುವೆನು; ಅಂದ ಬಳಿಕ ವೈರಿಗಳು ವಿಜಯನಗರದಮೇಲೆ ಸಾಗಿ ಹೋಗುವ ಭಯವೇಕೆ? ಇಂದು ರಾತ್ರಿ, ಅಥವಾ ನಾಳೆ ರಾತ್ರಿ ವೈರಿಗಳಮೇಲೆ ಬೀಳುವದಕ್ಕಾಗಿ ನಮ್ಮ ಸೈನ್ಯಕ್ಕೆ ಅಪ್ಪಣೆ ಕೊಡುವೆನು. ಅಷ್ಟರಲ್ಲಿ ಅವರು ಇಲ್ಲಿಂದ ಓಡಿಹೋದರೆ ಅವರ ಬೆನ್ನಟ್ಟಿ ಹೋಗತಕ್ಕದ್ದು. ರಣಮಸ್ತ, ನೀನು ನಿಶ್ಚಿಂತನಾಗಿರು! ನೀನು ನಿನ್ನ ಸೈನ್ಯವನ್ನು ಹಿಂಬದಿಯಲ್ಲಿ ಇಟ್ಟಿರುವೆಯಷ್ಟೇ? ನೆಟ್ಟಗಾಯಿತು. ನಿನ್ನ ಸೈನ್ಯವನ್ನು ಆರಂಭಕ್ಕೆ ಶತ್ರುಗಳ ಬಾಯಿಗೆ ಕೊಡತಕ್ಕದ್ದಲ್ಲ. ಕಟ್ಟಕಡೆಯ ಪ್ರಸಂಗದಲ್ಲಿ ಆ ನಿನ್ನ ಸೈನ್ಯವನ್ನು ಉಪಯೋಗಿಸಿಕೊಳ್ಳತಕ್ಕದ್ದು, ಎಂದು ಹೇಳಿದನು. ಅದನ್ನು ಕೇಳಿ ರಣಮಸ್ತಖಾನನಿಗೆ ಅಂತರಂಗದಲ್ಲಿ ಅಸಮಾಧಾನವಾದರೂ ಅದನ್ನು ಬಹಿರಂಗದಲ್ಲಿ ತೋರಗೊಡದೆ, ರಾಮರಾಜನ ಅನುಮತಿಯನ್ನು ಪಡೆದು, ಆತನು ಅಲ್ಲಿಯೇ ಸಮೀಪದಲ್ಲಿದ್ದ ತನ್ನ ಬಿಡಾರಕ್ಕೆ ಹೋದನು.

ರಾಮರಾಜನ ಸೈನ್ಯದ ದೊಡ್ಡ ಭಾಗವನ್ನು ಬೇರೆ ಕಡೆಗೆ ಕಳಿಸಬೇಕೆಂದು ಮಾಡಿದ ತನ್ನ ಹಂಚಿಕೆಯು ವ್ಯರ್ಥವಾದದ್ದರಿಂದ ರಣಮಸ್ತಖಾನನಿಗೆ ಬಹಳ ಅಸಮಾಧಾನವಾಯಿತು. ಅದರಲ್ಲಿ, ನೂರಜಹಾನಳನ್ನು ರಾಮರಾಜನು ಎಲ್ಲಿ ಇಟ್ಟಿರುವನೋ ಎಂಬದೊಂದು ಸಂಶಯವು ಅವನನ್ನು ವಿಶೇಷವಾಗಿ ಬಾಧಿಸಹತ್ತಿತು. ನೂರಜಹಾನಳು ಅನ್ನ ಸಾಮಗ್ರಿಯ ಬಂಡಿಗಳೊಳಗೆ ಪುರುಷವೇಷದಿಂದ ಬಂದು ರಾಮರಾಜನ ಕೈಸೇರಿದ್ದನ್ನು ರಣಮಸ್ತನು ತನ್ನ ವಿಶ್ವಾಸದ ಸೇವಕನ ಮುಖದಿಂದ ಕೇಳಿಕೊಂಡಿದ್ದನು. ರಾಮರಾಜನು ಸ್ತ್ರೈಣನಾದದ್ದರಿಂದ, ನೂರಜಹಾನಳನ್ನು ತನ್ನ ಅಂತರ್ಗೃಹದಲ್ಲಿ ಸೇರಿಸಿಕೊಂಡಿರಬಹುದೆಂದು ಆತನು ಶಂಕಿಸಹತ್ತಿದನು. ಹೀಗೆ ಇತ್ತ ಈತನು ಶಂಕೆ ಪ್ರತಿ ಶಂಕೆಗಳಿಗೆ ಗುರಿಯಾಗಿ ತಳಮಳಿಸುತ್ತಿರಲು, ಅತ್ತ ರಾಮರಾಜನು ರಣಮಸ್ತನ ಮೇಲಿನ ಪುತ್ರವಾತ್ಸಲ್ಯದಿಂದ ಮೋಹಿತನಾಗಿ, ರಣಮಸ್ತನಿಗೆ "ನಾನು ನಿನ್ನ ತಂದೆ" ಎಂದು ಈಗ ಹೇಳಿಬಿಡುವದು ನೆಟ್ಟಗೆಂದು ಆಲೋಚಿಸತೊಡಗಿದನು. ನಾನು ತನ್ನ ತಂದೆಯೆಂಬದು ರಣಮಸ್ತಖಾನನಿಗೆ ಗೊತ್ತಾದರೆ, ಆತನು ಯುದ್ಧದಲ್ಲಿ ಅಭಿಮಾನದಿಂದ ಕಾದಬಹುದೆಂದು ರಾಯನು ಭಾವಿಸಿದನು. ಕೂಡಲೆ ಆತನು ಮಧ್ಯರಾತ್ರಿಯಲ್ಲಿಯೇ ರಣಮಸ್ತಖಾನನನ್ನು ಕರೆಯಕಳುಹಿಸಿದನು. ರಣಮಸ್ತಖಾನನು ನಿದ್ದೆ ಹತ್ತಿ ಮಲಗಿದ್ದರೂ ಎಬ್ಬಿಸಿ ಕರಕೊಂಡು ಬರಬೇಕೆಂದು ರಾಮರಾಜನು ತನ್ನ ಸೇವಕನಿಗೆ ಹೇಳಿದನು. ಅದರಂತೆ ಸೇವಕನು ಹೋಗಿ ಕರೆಯಲು, ರಣಮಸ್ತನು ಕೂಡಲೆ ರಾಮರಾಜನ ಬಳಿಗೆ ಬಂದು—"ತಾವು

ಇಷ್ಟು ಮಧ್ಯರಾತ್ರಿಯಲ್ಲಿ ಒಮ್ಮಿಂದೊಮ್ಮೆ ಕರೆಸಿದ ಕಾರಣವೇನೆಂದು ರಾಮರಾಜನನ್ನು ಕೇಳಹತ್ತಿದನು. ರಣಮಸ್ತನು ಪ್ರತ್ಯಕ್ಷನಾಗಿ ತನ್ನ ಎದುರಿಗೆ ಬಂದು ನಿಂತದ್ದನ್ನು ನೋಡಿ ರಾಮರಾಜನ ಮನಸ್ಸು ತಿರುಗಿತು. ಇವನ ಜನ್ಮ ವೃತ್ತಾಂತವನ್ನು ಈಗೇ ಹೇಳಿದರೆ ಈತನು ಎಲ್ಲಿ ಕ್ಷುಬ್ಧನಾಗುವನೋ ಎಂದು ರಾಯನ ಶಂಕಿಸತೊಡಗಿದನು. ಈಗ ಬೇಡವೇಬೇಡ, ಯುದ್ಧ ಮುಗಿದ ಬಳಿಕ ಹೇಳೋಣವೆಂದು ಆತನು ನಿಶ್ಚಯಿಸಿ, ಇನ್ನು ರಣಮಸ್ತನ ಸಂಗಡ ಯಾವ ಪ್ರಸಕ್ತಿಯನ್ನು ಕುರಿತು ಮಾತಾಡಬೇಕೆಂದು ರಾಯನು ಎಣಿಕೆಹಾಕಹತ್ತಿದನು. ಈ ಸ್ಥಿತಿಯಲ್ಲಿ ಆತನು ಸ್ತಬ್ಧವಾಗಿ ಬಹಳ ಹೊತ್ತು ಕುಳಿತುಕೊಳ್ಳಬೇಕಾಯಿತು; ಆದರೂ ಯೋಗ್ಯಪ್ರಸಕ್ತಿಯು ಆತನ ಮನಸ್ಸಿಗೆ ಹೊಳೆಯಲೊಲ್ಲದು. ಆಗ ಆತನು ಏನಾದರೂ ಮಾತಾಡಬೇಕೆಂದು ತಿಳಿದು ರಣಮಸ್ತನನ್ನು ಕುರಿತು—ರಣಮಸ್ತ, ಆಗಲೇ ನೀನು ಸೈನ್ಯವನ್ನು ಬೇರೆ ಕಡೆಗೆ ಕಳಿಸಬೇಕೆಂದು ಹೇಳಿದೆಯಲ್ಲ, ಆ ಮಾತನ್ನು ಕುರಿತು ನಾನು ಬಹಳವಾಗಿ ಆಲೋಚಿಸಿದೆನು; ಆದರೆ ನಾವು ಈಗ ತಡಮಾಡದೆ ಶತ್ರುಗಳಮೇಲೆ ಬೀಳುವದರಲ್ಲಿಯೇ ಲಾಭವಿರುತ್ತದೆಂದು ನನಗೆ ತೋರುತ್ತದೆ. ಶತ್ರುಗಳು ತಮ್ಮ ಸ್ಥಳ ಬಿಟ್ಟು ಕದಲುವದರೊಳಗೆ ಈ ಕಾರ್ಯವಾಗಲಿಕ್ಕೆ ಬೇಕು, ಅನ್ನಲು ರಣಮಸ್ತನು ವಿಚಾರಮಾಡುವವನಂತೆ ಸುಮ್ಮನೆ ಕುಳಿತು, ಬಳಿಕ ಗಟ್ಟಿಯಾಗಿ ನಕ್ಕು, ರಾಮರಾಜನಿಗೆ—ಸರಕಾರ, ತಾವು ಈಗ ಶತ್ರುಗಳ ಮೇಲೆ ಬಿದ್ದರೆ ಅವರಿಗೇ ಅನುಕೂಲವಾಡಿಕೊಟ್ಟಂತಾಗಬಹುದೆಂದು ನನಗೆ ತೋರುತ್ತದೆ; ಯಾಕಂದರೆ ಅದರಿಂದ ಅವರಿಗೆ ಅನಾಯಾಸವಾಗಿ [illegible]ನೆವಸಿಕ್ಕಂತೆ ಆಗಿ, ಅವರು ಹಿಂದೆಗೆಯುತ್ತ ತಮ್ಮ ಸಂಕೇತದ ಕಾಲಹೊಳೆಯ ಸ್ಥಳದ ಕಡೆಗೆ ಹೋಗಿ ವಿಜಯನಗರದ ಮೇಲೆ ನುಗ್ಗಬಹುದು. ನೀವು ಮುಂದಕ್ಕೆ ಸಾಗಿಬರಬಾರದೆಂದು ಕೆಲವು ಶತ್ರುಸೈನ್ಯವು ನಿಮ್ಮ ಸಂಗಡ ಕಾದುತ್ತ ನಿಲ್ಲಬಹುದು. ನೀವು ಹೇಳುವ ವಿಚಾರವು ಯೋಗ್ಯವಿದ್ದರೂ ನಮ್ಮ ಸೈನ್ಯದಲ್ಲಿ ಎರಡು ಭಾಗಗಳನ್ನು ಮಾಡಿ, ಒಂದು ಭಾಗವನ್ನು ತುಂಗಭದ್ರೆಯ ನಿಟ್ಟಿನ ಕಡೆಗೆ ಕಳಿಸುವದು ನೆಟ್ಟಗೆ ಕಾಣುತ್ತದೆ. ಹಾಗೆ ಮಾಡಿದರೆ ವಿಜಯನಗರದ ಕಡೆಗೆ ಹೋದ ಶತ್ರುಸೈನ್ಯವು ನಮ್ಮ ಎರಡೂ ನಿಟ್ಟಿನ ಸೈನ್ಯಗಳ ನಡುವೆ ಸಿಕ್ಕು ಅದಕ್ಕೆ ತುಂಗಭದ್ರೆಯಲ್ಲಿ ಜಲಸಮಾಧಿಯು ದೊರೆಯುವದು. ಇಲ್ಲದಿದ್ದರೆ ನಮ್ಮ ಬಳಿಯಲ್ಲಿ ಇಷ್ಟು ಪ್ರಚಂಡ ಸೈನ್ಯವೂ, ಇಂಥ ಅತ್ಯುತ್ತಮ ವ್ಯವಸ್ಥೆಯೂ ಇದ್ದು ವ್ಯರ್ಥವಾಗಬಹುದು. ನನಗೆ ಬಹು ಪ್ರಯತ್ನದಿಂದ ಸಂಪೂರ್ಣ ಗೊತ್ತಾಗಿದ್ದ ಶತ್ರುಗಳ ಕಡೆಯ ವಿಶ್ವಸನೀಯವಾದ ಮಹತ್ವದ ಸುದ್ದಿಯನ್ನು ತಮ್ಮ ಮುಂದೆ ಹೇಳಿಯೂ ಹೇಳದ ಹಾಗೆ ಆಗಿ

ರುತ್ತದೆ. ನನ್ನ ಮೇಲೆ ತಮ್ಮ ವಿಶ್ವಾಸವಿಲ್ಲದ್ದರಿಂದ ಹೀಗಾಗುತ್ತದೆಯೋ, ಅಥವಾ ತಮಗೆ ವಿಚಾರ ಮಾಡುವ ಮನಸ್ಸು ಇಲ್ಲವೇ ಇಲ್ಲವೋ, ಅಥವಾ ನಾನು ಹೇಳಿದಂತೆ ಮಾಡಲಿಕ್ಕೆ ನಿಮಗೆ ಧೈರ್ಯವಾಗಲೊಲ್ಲದೋ ಇದಾವದೂ ನನಗೆ ತಿಳಿಯದಾಗಿದೆ. ಬಾದಶಹನ ಮೇಲೆ ತಿರುಗಿಬಿದ್ದು ನಿಮ್ಮ ಕಡೆಗೆ ಬಂದಿರುವ ನಾನು, ನನ್ನ ಮೇಲೆಯೂ ಯಾಕೆ ತಿರುಗಿಬೀಳಲಿಕ್ಕಿಲ್ಲೆಂಬ ಸಂಶಯವು ನಿಮಗೆ ಬರಬಹುದೆಂಬದರಲ್ಲಿ ಆಶ್ಚರ್ಯವೇನೂ ಇಲ್ಲ. ನನ್ನ ಮಾತಿನಲ್ಲಿ ಅವಿಶ್ವಾಸವಿದ್ದರೆ, ತಾವು ನನ್ನ ಮಾತು ಕೇಳಬಾರದು.

ರಣಮಸ್ತನ ಈ ಮಾತುಗಳನ್ನು ಕೇಳಿದಕೂಡಲೆ ರಾಮರಾಜನು ಒಮ್ಮೆಲೆ ತಾನು ಕುಳಿತ ಸ್ಥಳದಿಂದ ಎದ್ದು ಖಾನನ ಬಳಿಗೆ ಹೋಗಿ, ಆತನ ಬೆನ್ನ ಮೇಲೆ ಕೈಯಾಡಿಸುತ್ತ—"ತಮ್ಮಾ, ಹೀಗೆ ಯಾಕೆ ಅನ್ನುತ್ತೀ? ನಿನ್ನಮೇಲೆ ನನ್ನ ವಿಶ್ವಾಸವಿದ್ದಷ್ಟು ಇಡಿಯ ನನ್ನ ರಾಜ್ಯದಲ್ಲಿ ಬೇರೆ ಯಾರ ಮೇಲೆಯೂ ಇರುವದಿಲ್ಲ. ಹೊಟ್ಟಿಯ ಮಗನಮೇಲೆ ಅದರಲ್ಲಿಯೂ ನಿನ್ನ ಹಾಗೆ ಇರುವ ಹೊಟ್ಟಿಯ ಮಗನಮೇಲೆ ಯಾವ ತಂದೆಯು ವಿಶ್ವಾಸವಿಡಲಿಕ್ಕಿಲ್ಲ? ಎಂದು ನುಡಿಯುತ್ತಿರುವಾಗ, ರಾಮರಾಜನು ಭಯಪಟ್ಟು ತಾನು ಹೀಗೆ ನುಡಿಯತಕ್ಕದ್ದಿದ್ದಿಲ್ಲವೆಂದು ನಾಲಿಗೆ ಕಚ್ಚಿಕೊಂಡನು. "ಹೊಟ್ಟಿಯ ಮಗನಮೇಲೆ" ಎಂಬ ಶಬ್ದವು ಕಿವಿಗೆ ಬಿದ್ದಕೂಡಲೆ ರಣಮಸ್ತಖಾನನು ಸಂತಪ್ತನಾಗಿ ರಾಮರಾಜನನ್ನು ನೋಡಹತ್ತಿದನು. ಆಗ ರಾಮರಾಜನು ರಣಮಸ್ತನಿಗೆ—ಹೌದು ನಾನು ನಿನ್ನಮೇಲೆ ಹೊಟ್ಟಿಯ ಮಗನಂತೆಯೇ ಪ್ರೇಮ ಮಾಡುತ್ತೇನೆಂಬದು ನಿನಗೆ ಗೊತ್ತಿಲ್ಲವೆ? ಹೊಟ್ಟಿಯ ಮಗನ ಮಾತನ್ನು ನಂಬುವಾಗ ಸಹ ಒಮ್ಮೊಮ್ಮೆ ವಿಚಾರಮಾಡಬೇಕಾಗುತ್ತದೆ; ಅದರಂತೆ ಈಗ ನಾನು ನಿನ್ನ ಮಾತಿನಂತೆ ನಡೆಯುವ ಮೊದಲು ವಿಚಾರಮಾಡಿದೆನು. ನೀನು ಇಷ್ಟು ನಂಬಿಗೆಯಿಂದ ಹೇಳಿದ ಬಳಿಕ ನಿನ್ನ ಮಾತಿನಂತೆ ನಮ್ಮ ಸೈನ್ಯದಲ್ಲಿ ಎರಡು ಭಾಗ ಮಾಡಿ, ನೀನು ಹೇಳಿದ ಕಡೆಗೆ ಒಂದು ಭಾಗವನ್ನು ಕಳಿಸುವೆನು, ಈಗಾದರೂ ಆಯಿತೆ? ಎಂದು ಕೇಳಿದನು. ತನ್ನ ಸಂಗಡ ರಾಮರಾಜನು ಇಷ್ಟು ಸಲಿಗೆಯಿಂದ ಯಾಕೆ ನಡೆಯುತ್ತಿರುವನೆಂಬ ಬಗ್ಗೆ ರಣಮಸ್ತಖಾನನು ಮೊದಲೇ ಶಂಕಿಸುತ್ತಿರಲು, ಅದರಲ್ಲಿ ರಾಮರಾಜನು "ನನ್ನ ಹೊಟ್ಟಿಯ ಮಗನ ಹಾಗೆ ನಿನ್ನಮೇಲೆ ಪ್ರೇಮ ಮಾಡುತ್ತೇನೆಂದು" ಈ ದಿನ ನುಡಿದದ್ದನ್ನು ಕೇಳಿ, ಆ ಖಾನನು ಬಹಳ ಅಸಮಾಧಾನಪಟ್ಟನು. ತನ್ನ ತಂದೆಯು ಯಾರು ಎಂಬದು ರಣಮಸ್ತನಿಗೆ ಮೊದಲೇ ಗೊತ್ತಿಲ್ಲದಿರುವಾಗ, ರಾಮರಾಜನು ಹೀಗೆ ನುಡಿಯುವದು ಖಾನನಿಗೆ ಬಹು ಅಪ-

ಮಾನಾಸ್ಪದವಾಗಿ ತೋರಿ, ಆತನು ಬಹು ಕ್ರುದ್ಧನಾದನು ; ಆದರೆ ಕ್ರೋಧಕ್ಕೆ ಇದು ಸಮಯವಲ್ಲೆಂದು ತಿಳಿದು, ಆತನು ಅದನ್ನು ಬಹುಕಷ್ಟದಿಂದ ನುಂಗಿಕೊಂಡನು; ಆದರೂ ರಾಮರಾಜನು ಆತನ ಮನಸ್ಸಿನ ಸ್ಥಿತಿಯನ್ನು ತಿಳಿದು ಆ ವಿಷಯವನ್ನು ಬದಲಿಸುವದಕ್ಕಾಗಿ ರಣಮಸ್ತಖಾನನಿಗೆ—" ಒಳ್ಳೇದು, ಹಾಗಾದರೆ ಈಗ ನೀನು ಮಲಗಿಕೊಳ್ಳುಹೋಗು. ಈಗಲೇ ನಾನು ತಿರುಮಲ-ವೇಂಕಟಾದ್ರಿಗಳನ್ನು ಕರೆಸಿ, ನೀನು ಹೇಳಿದ ಸ್ಥಳದಲ್ಲಿ ಸೈನ್ಯದೊಡನೆ ಹೋಗಿ ಕುಳಿತುಕೊಳ್ಳುವಂತೆ ಅವರನ್ನು ಆಜ್ಞಾಪಿಸುವೆನು. ನೀನು ಅವರ ಸಂಗಡ ಹೋಗಿ ಆ ಸ್ಥಳವನ್ನು ಮಾತ್ರ ಅವರಿಗೆ ತೋರಿಸಬೇಕಾಗುವದು. ಹೋಗು, ಅವರು ಬಂದ ಕೂಡಲೆ ನಿನ್ನನ್ನು ಕರಿಸುವೆನು'' ಎಂದು ಹೇಳಿದನು. ಅದನ್ನು ಕೇಳಿದಕೂಡಲೆ ರಣಮಸ್ತಖಾನನಿಗೆ ಬಹಳ ಸಮಾಧಾನವಾಯಿತು.

ಇತ್ತ ರಾಮರಾಜನು ತಾನು ಹೇಳಿದಂತೆ ತನ್ನ ಬಂಧುಗಳ ಕಡೆಗೆ ನಿಜವಾಗಿಯೇ ಸೇವಕರನ್ನು ಕಳಿಸಿದನು. ಸೇವಕರು ಹೋದಕೂಡಲೆ, ತಿರುಮಲ—ವೇಂಕಟಾದ್ರಿಗಳು ರಾಮರಾಜನ ಬಳಿಗೆ ಬಂದರು. ಅಷ್ಟು ಹೊತ್ತಿಗೆ ರಣಮಸ್ತನ ಮೋಸದ ತಂತ್ರದಿಂಪ ಸೈನ್ಯವನ್ನು ವಿಭಾಗಿಸಲಿಕ್ಕೆ ಅನುಕೂಲವಾದ ಸುದ್ದಿಗಳು ರಾಮರಾಜನ ಕಿವಿಗೆ ಮುಟ್ಟಿದವು. ಶತ್ರುಗಳು ಯಾವ ಕಡೆಗೋ ಒತ್ತರದಿಂದ ಹೋಗುತ್ತಿರುವರೆಂದು ಚಾರರು ರಾಯನಿಗೆ ಸುದ್ದಿಯನ್ನು ಹೇಳಿದ್ದರು, ರಾಮರಾಜನು ರಣಮಸ್ತಖಾನನ ವಿಚಾರಗಳನ್ನೂ, ಸುದ್ದಿಗಳನ್ನೂ ತನ್ನ ಬಂಧುಗಳಿಗೆ ತಿಳಿಸಿದನು. ಇಷ್ಟರಲ್ಲಿ ರಾಮರಾಜನ ಚಾರರು ಬಂದು—" ಮುಸಲ್ಮಾನ ಸೈನ್ಯವು ಹಿಂದಕ್ಕೆ ಕಾಲದೆಗೆದು ಎಲ್ಲಿಗೋ ಹೋಗುತ್ತಿರುವದೆ''ಂಬ ಸುದ್ದಿಯನ್ನು ಹೇಳಿದರು. ಮುಸಲ್ಮಾನ ಸೈನಿಕರು ರಣಮಸ್ತನ ತಂತ್ರದಿಂದಲೇ ಓಡಿಹೋಗುವ ಸೋಗು ಹಾಕಿದ್ದರು. ಈ ಮೋಸವು ರಾಮರಾಜನಿಗೂ, ಆತನ ಬಂಧುಗಳಿಗೂ ತಿಳಿಯಲಿಲ್ಲ. ಅವರು ರಣಮಸ್ತನ ಮಾತನ್ನು ನಿಜವೆಂದು ಸಂಪೂರ್ಣವಾಗಿ ನಂಬಿ, ತಮಗೆ ಮುಂಗಡ ತಿಳಿದ ಈ ಮಹತ್ವದ ಸುದ್ದಿಯ ಉಪಯೋಗವನ್ನು ಮಾಡಿಕೊಳ್ಳಬೇಕೆಂದು ಆ ಮೂವರು ಬಂಧುಗಳು ನಿಶ್ಚಯಿಸಿದರು. ರಾಮರಾಜನು ಕೂಡಲೆ ರಣಮಸ್ತಖಾನನನ್ನು ಕರಿಸಿ, ನೀನು ಇವರಿಬ್ಬರ ಸೈನ್ಯದ ಸಂಗಡ ಹೋಗಿ ಇವರಿಗೆ ಆ ಕಾಲಹೊಳೆಯ ಸ್ಥಳವನ್ನು ತೋರಿಸು, ಎಂದು ಆಜ್ಞಾಪಿಸಿದನು. ಅದಕ್ಕೆ ರಣಮಸ್ತನು ಹಿಂದೆ—ಮುಂದೆ ನೋಡಹತ್ತಲು, ರಾಮರಾಜನು ಆತನನ್ನು ಕುರಿತು—ಯಾಕೆ, ಇಷ್ಟು ಅಸಂತೋಷವೇಕೆ? ನೀನು ಈ ಕೆಲಸವನ್ನು ಬಹಳ

ಉತ್ಸುಕತೆಯಿಂದ ಮಾಡಲಿಕ್ಕೆ ಬೇಕು, ಅನ್ನಲು ರಣಮಸ್ತನು—ಸರಕಾರ, ನನ್ನ ಅಸಂತೋಷಕ್ಕೆ ಒಂದೇ ಕಾರಣವಿರುವುದು. ತಮ್ಮನ್ನು ಅಗಲಿ ದೂರ ಹೋಗಲಿಕ್ಕೆ ನನ್ನ ಮನಸ್ಸು ಮೆಚ್ಚುವದಿಲ್ಲ. ನನ್ನನ್ನು ತಾವು ಅಂಗರಕ್ಷಕನನ್ನಾಗಿ ನಿಯಮಿಸಿಕೊಂಡಿದ್ದು, ನಮ್ಮನ್ನು ಅಗಲಿ ಎಲ್ಲಿಯೂ ಹೋಗಲಾಗದೆಂದು ತಾವು ನನ್ನನ್ನು ಈ ಮೊದಲೆ ಆಜ್ಞಾಪಿಸಿರುವದರಿಂದ ಸ್ವಲ್ಪ ಅನುಮಾನಿಸಿದೆನು, ಎಂದು ಹೇಳಿದನು.

ರಣಮಸ್ತನ ಈ ಮಾತುಗಳನ್ನು ಕೇಳಿ, ರಾಮರಾಜನಿಗೆ ಬಹಳ ಚಾತುರ್ಯವಾಯಿತು. ಆತನು ಕೂಡಲೇ ರಣಮಸ್ತನನ್ನು ಕುರಿತು—ಸರಿ ಸರಿ, ಒಳ್ಳೆಯ ಮಾತು ಸೂಚಿಸಿದೆ. ನನ್ನ ಇಚ್ಛೆಯಾದರೂ ನೀನು ನನ್ನನ್ನು ಅಗಲಿ ಹೋಗಬಾರದೆಂತಲೇ ಇರುವದು. ನಿನ್ನ ನಂಬಿಗೆಯ ಇಬ್ಬರು ಚಾರರನ್ನು ಇವರ ಸಂಗಡ ಆ ಸ್ಥಳವನ್ನು ತೋರಿಸಲಿಕ್ಕೆ ಕಳಿಸಿಕೊಡೆಂದರಾಯಿತು, ಎಂದು ಹೇಳಿದನು. ಕೂಡಲೆ ರಣಮಸ್ತನು ತನ್ನ ನಂಬಿಗೆಯ ಇಬ್ಬರು ಸೇವಕರನ್ನು ತಿರುಮಲ—ವೇಂಕಟಾದ್ರಿಗಳ ತಮ್ಮ ತಮ್ಮ ಸೈನ್ಯಗಳನ್ನು ಕಟ್ಟಿಕೊಂಡು ಆ ಸೇವಕರೊಡನೆ ನಡೆದರು. ಇತ್ತ ಸ್ವತಃ ರಾಮರಾಜನ ಆಧಿಪತ್ಯಕ್ಕೆ ಒಳಪಟ್ಟಿದ್ದ ಸೈನ್ಯವೂ, ರಣಮಸ್ತಖಾನನ ಸೈನ್ಯವೂ ಮಾತ್ರ ಉಳಿದವು. ರಾಮರಾಜನು ತಾನುಮಾಡಿದ ಈ ವ್ಯವಸ್ಥೆಯಲ್ಲ ತನಗೆ ಬಹು ಅನುಕೂಲವಾದದ್ದೆಂದು ತಿಳಿದು ಸಂತೋಷಪಟ್ಟನು. ರಾಮರಾಜನು ಶತ್ರುಗಳ ಸುಳಿದಾಟವನ್ನು ಕಣ್ಣುಮುಚ್ಚಿ ನೋಡುವನೋ ಅನ್ನುವಂತೆ ಆತನ ಚಾರರೂ, ರಣಮಸ್ತಖಾನನ ಚಾರರೂ ಆಗಾಗ್ಗೆ ಶತ್ರುಗಳಕಡೆಯ ಸುದ್ದಿಗಳನ್ನು ಹೇಳುತ್ತಲಿದ್ದರು. ಹೀಗೆ ಒಂದೆರಡು ದಿನ ರಾಮರಾಜನು ಸಮಾಧಾನದಿಂದ ಕಾಲಹರಣ ಮಾಡಿರಬಹುದು; ಆದರೆ ಅಷ್ಟರಲ್ಲಿ ಆತನ ಮನಸ್ಸು ವಿಕಲ್ಪಕ್ಕೆ ಒಳಗಾಯಿತು. ಆತನು ರಣಮಸ್ತಖಾನನನ್ನು ಕರಿಸಿ—"ಶತ್ರುಗಳು ಹೀಗೆ ದಾಂಡುಮಾಡಿದರೆ ಹ್ಯಾಗಾದೀತು? ನಾವು ಅವರ ಮೇಲೆ ಈ ಕಡೆಯಿಂದ ಸಾಗಿಹೋದರೆ ಹ್ಯಾಗಾದೀತು ಇತ್ಯಾದಿ ಹಲವು ಪ್ರಶ್ನಗಳನ್ನು ಕೇಳಿದಮೇಲೆ-" ರವಣಮಸ್ತ, ನಮ್ಮನ್ನು ಮೋಸಗೊಳಿಸುವದಕ್ಕಾಗಿ ಶತ್ರುಗಳು ಹೀಗೆ ಹಿಂದೆಗೆಯುವ ಸೋಗು ಹಾಕಿರಬಹುದೇನು? ಒಟ್ಟುಗೂಡಿದ ನಮ್ಮ ಸೈನ್ಯದ ಕಸುವು ಕಡಿಮೆ ಮಾಡುವದಕ್ಕಾಗಿ ಅವರು ಈ ಹಂಚಿಕೆ ತೆಗೆದಿರಬಹುದೋ?" ಎಂದು ಪ್ರಶ್ನಮಾಡಿದನು. ಅದನ್ನು ಕೇಳಿದ ಕೂಡಲೆ ರಣಮಸ್ತನ ಮೋರೆಯು ಹುಚ್ಚಿಟ್ಟಿತು; ಆದರೆ ಅಷ್ಟರಲ್ಲಿ ಆ ನೀಚನು ಗಟ್ಟಿಯಾಗಿ ನಕ್ಕು-" ಸರಕಾರ, ಪ್ರತ್ಯಕ್ಷ ತಮಗೆ ಎದುರಾಗಿ ಬರುವ ಧೈರ್ಯವು ಮುಸಲ್ಮಾನ

ಸೈನ್ಯಕ್ಕೆ ಸರ್ವಥಾ ಆಗಲಾರದು. ಮುಸಲ್ಮಾನರು ಬೇಕಾದವರ ಸಂಗಡ ಯುದ್ಧಮಾಡಬಹುದು; ಆವತ್ತು ಅವರು ತನುಗೆ ಎದುರಾಗಿ ಮಾತ್ರ ಯುದ್ಧಮಾಡುವದು ತೀರ ಅಸಂಭವವು ಆದ್ದರಿಂದ ತಾವು ನಿಶ್ಚಿಂತರಾಗಿರಬೇಕು. ನಾವೇನು ಸುಮ್ಮನೆ ಕುಳಿತುಕೊಂಡಿರುವದಿಲ್ಲ. ಸರ್ವ ಸನ್ನಾಹದೊಡನೆ ಪೂರ್ಣಜಾಗರೂಕರಾಗಿದ್ದೇವೆ. ಶತ್ರುಗಳು ನಮ್ಮ ಮೇಲೆ ಸಾಗಿಯೊಂದುಬರಲಿ, ಅವರ ದೂಳಹಾರಿಸಿಬಿಡೋಣ. ಮುಸಲ್ಮಾನ ಬಾದಶಹರು ನಿಮಗೆ ಎಷ್ಟು ಹೆದರುವರೆಂಬದನ್ನು ನಾನು ಪೂರಾ ಬಲ್ಲೆನು. ರಾಮರಾಜರು ಇರುವವರೆಗೆ ನಾವು ನಾಲ್ವರು ಬಾದಶಹರು ಒಟ್ಟುಗೂಡಿಯಂತು ಇರಲಿ, ಉತ್ತರ ಹಿಂದೂಸ್ಥಾನದ ಮುಸಲ್ಮಾನರನ್ನು ಸಹಾಯಕ್ಕೆ ಕರಕೊಂಡರೂ ನಮ್ಮ ಆಟವೇನೂ ನಡೆಯದು, ಎಂದು ಅವರು ನಿಶ್ಚಯಿಸಿಕೊಂಡಿರುವರು. ಅವರು ಹೀಗೆ ಅಂಜುವದು ಆಶ್ಚರ್ಯವಲ್ಲ. ತಮ್ಮ ಪ್ರತಾಪವೇ ಅಂಥಾದ್ದು. ತಾವು ಯಾವತ್ತು ರಾಜ್ಯದ ಸಂರಕ್ಷಕರಾಗಿರಲು, ನಮ್ಮಂಥ ಪಾಮರರಾದ ಅಂಗರಕ್ಷಕರು ತಮ್ಮನ್ನು ರಕ್ಷಿಸುವೆವೆಂಬ ಮಾತು ವ್ಯರ್ಥವಾದದ್ದು; ಆದರೂ ತಮ್ಮಸಲುವಾಗಿ ರಣಾಂಗಣದಲ್ಲಿ ದೇಹವಿಡಲು ನಾವು ಹಿಂದೆ ಮುಂದೆ ನೋಡುವಹಾಗಿಲ್ಲ. ಈಗ ಬಹಳ ಮಾತುಗಳಿಂದ ಪ್ರಯೋಜನವೇನು? ಪ್ರಸಂಗ ಬಂದಾಗ ಪರೀಕ್ಷಿಸಬಹುದು.

ರಣಮಸ್ತನ ಈ ಮುಖಸ್ತುತಿಯಿಂದ ರಾಮರಾಜನಂಥ ಚಾಣಾಕ್ಷನು ಕೂಡ ಕಾಲಮಹಿಮೆಯಿಂದ ಉಬ್ಬಿದನು. ರಣಮಸ್ತನು ತನ್ನ ಸಲುವಾಗಿ ಪ್ರಾಣ ಕೊಡಲು ಸಿದ್ಧನಾದದ್ದನ್ನು ನೋಡಿ ಆ ರಾಯನು ಬಹು ಸಮಾಧಾನಪಟ್ಟು, ರಣಮಸ್ತನನ್ನು ಮುಂದಕ್ಕೆ ಕರೆದು, ಆತನನ್ನು ಪುತ್ರವಾತ್ಸಲ್ಯದಿಂದ ಬಿಗಿಯಾಗಿ ಅಪ್ಪಿಕೊಂಡು, ಸೆತ್ತಿಯನ್ನು ಮೂಸಿನೋಡಿ, ಆತನನ್ನು ಕುರಿತು ಏನೋ ಮಾತಾಡಬೇಕೆನ್ನುತ್ತಿರಲು, ಒಬ್ಬ ಚಾರನು ಅವಸರದಿಂದ ಬಂದು ರಾಯನನ್ನು ಕುರಿತು—ಪ್ರಭುವೆ, ಈ ಮೊದಲೆ ಶತ್ರುಗಳು ಕಾಲುದೆಗೆದದ್ದರಲ್ಲಿ ಏನೋ ಮೋಸವಿದ್ದಂತೆ ತೋರುತ್ತದೆ. ಈಗ ಎರಡು ದಿನ ವಿಜಯನಗರದ ಕಡೆಗೆ ನುಗ್ಗಿದ್ದ ಶತ್ರುಸೈನ್ಯವು ಈಗ ಒಮ್ಮೆಲೆ ಇತ್ತಕಡೆಗೆ ಭರದಿಂದ ಸಾಗಿಬರಹತ್ತಿದೆ. ನಮ್ಮ ಸೈನ್ಯದ ಕುಸುವು ಕಡಿಮೆಮಾಡುವದಕ್ಕಾಗಿ ಶತ್ರುಗಳು ಈ ಹಂಚಿಕೆಮಾಡಿ, ತಮ್ಮ ಹಂಚಿಕೆಯು ಸಾಧಿಸಿದ ಕೂಡಲೆ ಈಗ ಎಲ್ಲರು ಒಟ್ಟುಗೂಡಿ ನಮ್ಮ ಅಲ್ಪಸಂಖ್ಯಾಕವಾದ ಸೈನ್ಯದಮೇಲೆ ಬೀಳಬೇಕೆಂದು ಯೋಚಿಸಿದ ಹಾಗೆ ತೋರುತ್ತದೆ. ಇದ್ದ ಸಂಗತಿಯನ್ನು ಸನ್ನಿಧಿಗೆ ಅರಿಕೆಮಾಡಿಕೊಂಡಿದ್ದೇನೆ; ಎಂದು ನುಡಿಯುತ್ತಿರಲು, ರಣಮಸ್ತನು ನಡುವೇ ಬಾಯಿಹಾಕಿ—

"ಎಲಾ, ಇಷ್ಟೇಕೆ ಅಂಜಿಕೆಯೋ ನಿನಗೆ? ನಮ್ಮ ತಿರುಮಲ-ವೆಂಕಟಾದ್ರಿಗಳ ಸೈನ್ಯವು ಒಳಿತಾಗಿ ತಳಿಸಿದ್ದರಿಂದ, ಶತ್ರುಸೈನ್ಯವು ತೇಕುತ್ತ ತಿರುಗಿ ಓಡಿಬರಹತ್ತಿರಬಹುದು; ಇಲ್ಲದಿದ್ದರೆ ಇಷ್ಟು ಬೇಗನೆ ಶತ್ರುಸೈನ್ಯವು ತಿರುಗುವದುಂಟೆ? ಹೋಗು, ಇನ್ನೊಮ್ಮೆ ನೆಟ್ಟಗೆ ನೋಡಿಬಂದು ಹೇಳು, ಎಂದು ನುಡಿಯಲು, ವಿನಾಶದ ಪಥವನ್ನು ಹಿಡಿದಿದ್ದ ರಾಮರಾಜನು ರಣಮಸ್ತನ ಮಾತಿಗೇ ಸೋಅಂದನು. ಆಗ ಚಾರನು ಅಸಮಾಧಾನದಿಂದ ಹೊರಟುಹೋಗಲು, ಮುಂದೆ ಸ್ವಲ್ಪ ಹೊತ್ತಿನಲ್ಲಿ ಮತ್ತೊಬ್ಬ ಚಾರನು ಬಹು ದೂರದಿಂದ ರಾಮರಾಜನ ಬಳಿಗೆ ಬಂದು—"ಶತ್ರುಗಳು ಬಹು ಒತ್ತರದಿಂದ ನಮ್ಮ ಮೇಲೆ ಸಾಗಿಬರುತ್ತಿರುವರು" ಎಂದು ಹೇಳಿದನು. ಆ ಮಾತನ್ನೂ ರಾಮರಾಜನು ಸಮಾಧಾನದಿಂದ ಕೇಳಿಕೊಂಡು—"ಶಾಬಾಸ! ಇದಂತು ಬಹು ಆನಂದದಾಯಕ ಸುದ್ದಿಯು! ಆ ಯವನರು ನಮ್ಮ ಅಳವಿನಲ್ಲಿಯಂತು ಬರಲಿ, ಅವರಿಗೆ ನಮ್ಮ ಕೈತೋರಿಸೋಣ. ರಣಮಸ್ತ ನಡೆ. ಸೈನ್ಯವನ್ನು ಸಜ್ಜುಗೊಳಿಸಿ, ವೈರಿಗಳಿಗೆ ಎದುರಾಗಲು ಸಿದ್ಧವಾಗುವದಕ್ಕಾಗಿ ಅದಕ್ಕೆ ಅಪ್ಪಣೆಯನ್ನು ಕೊಡು. ನಾನು ಅರ್ಧಗಳಿಗೆಯೊಳಗಾಗಿ ಪೋಷಾಕು ಹಾಕಿಕೊಂಡು ಸೈನ್ಯದ ಸಿದ್ಧತೆಯನ್ನು ಕಣ್ಣುಮುಟ್ಟ ನೋಡುವದಕ್ಕಾಗಿ ಬರುತ್ತೇನೆ" ಎಂದು ಹೇಳಿದನು.

೩೨ನೆಯ ಪ್ರಕರಣ—ಯುದ್ಧಪ್ರಸಂಗವು.

ಬಳಿಕ ರಾಮರಾಜನು ತನ್ನ ಕುದುರೆಗೆ ಜೀನು ಹಾಕಿಕೊಂಡು ಬರುವಂತೆ ಸೇವಕನಿಗೆ ಆಜ್ಞಾಪಿಸಿ, ತನ್ನ ಉಡಪು—ತೊಡಪುಗಳನ್ನೂ, ಶಸ್ತ್ರಾಸ್ತ್ರಗಳನ್ನೂ ತರಹೇಳಿದನು. ಸ್ವಲ್ಪಹೊತ್ತಿನಲ್ಲಿಯೇ ಆತನ ಉಡಪು-ತೊಡಪುಗಳೂ, ಶಸ್ತ್ರಾಸ್ತ್ರಗಳೂ ಬಂದವು. ರಾಮರಾಜನು ಮೊದಲು ರೇಶಿಮೆಯ ತಿಳುವಾದ ವಸ್ತ್ರದ ಚಣ್ಣವನ್ನು ಹಾಕಿಕೊಂಡು, ಮೊಳಕಾಲತನಕ ಬರುವ ಅಂಥಾದೇ ಒಂದು ಅಂಗಿಯನ್ನು ತೊಟ್ಟುಕೊಂಡನು. ಆಮೇಲೆ ಉಕ್ಕಿನತಂತಿಯ ಕುಂಡಿಯ ಚಣ್ಣವನ್ನೂ, ಅಂಥಾದೇ ಒಂದು ಅಂಗಿಯನ್ನೂ ತೊಟ್ಟು, ಅದರಮೇಲೆ ಕಾಲತನಕ ಉದ್ದಾದ ಒಂದು ಅಂಗಿಯನ್ನು ಹಾಕಿಕೊಂಡನು. ರೇಶಿಮೆಯ ಹೆಣಕಿಯ ಆ ಅಂಗಿಯು ಗಂಟುಗಂಟು ಹಾಕಿದ ಜಾಳಿಗೆಯಂಥಾ ಅರಿವೆಯುದಿತ್ತು. ಈ ಅಂಗಿಯನ್ನು ಹಾಕಿಕೊಂಡ ಬಳಿಕ ಎಲ್ಲಕ್ಕೂ ಮೇಲೆ ತೀರ ಜೀನುಗಾದ ಮಲಮಲಿ

ಯಂಥ ಅರಿವೆಯ ಕಾಲತನಕ ಬರುವ ಬಿಳಿಯ ಅಂಗಿಯನ್ನು ತೊಟ್ಟುಕೊಂಡನು. ಆಮೇಲೆ ಟೊಂಕಕ್ಕೆ ಒಂದು ರೇಶಿಮೆಯ ಪಟ್ಟವನ್ನು ಸುತ್ತಿಕೊಂಡು, ಅದರಲ್ಲಿ ಒಂದು ಕತ್ತಾರಿಯನ್ನೂ, ತನುಂಚಾ ಎಂಬ ಶಸ್ತ್ರವನ್ನೂ ಸಿಗಿಸಿಕೊಂಡನು. ಆತನ ಬೆನ್ನಿಗೊಂದು ಬತ್ತಳಿಕೆಯೂ, ಹೆಗಲಿಗೊಂದು ಹೆದೆಯೇರಿಸಿದ ಧನುಷ್ಯವೂ ಒಪ್ಪುತ್ತಿದ್ದವು. ಈಗ ಇಪ್ಪತ್ತು ವರ್ಷಗಳ ಹಿಂದೆ ತನಗೆ ಒಬ್ಬ ಪೋರ್ತುಗೀಜ ವ್ಯಾಪಾರಿಯು ಕಾಣಿಕೆಯಾಗಿ ಕೊಟ್ಟಿದ್ದ ಒಂದು ಟುಲೇಡೋಪಟ್ಟಣದ ಖಡ್ಗವನ್ನು ರಾಮರಾಜನು ತನ್ನ ಎಡಗೈಯಲ್ಲಿ ಹಿಡಕೊಂಡನು. ಆಮೇಲೆ ಒಬ್ಬ ಸೇವಕನು ಆತನ ತಲೆಗೆ ಒಂದು ಜರಿ ಟೋಪು ಹಾಕಿ, ಅದರ ಮೇಲೆ ತುರಾಯಿ ಹಚ್ಚಿದ ಆತನ ಸಣ್ಣ ಮುಂಡಾಸವನ್ನು ಹಾಕಿದನು. ಬಳಿಕ ಅವನ ಕೊರಳಿಗೆ ಬಹು ಬೆಲೆಯುಳ್ಳ ಒಂದು ರತ್ನಹಾರವು ಇಡಿಸಲ್ಪಟ್ಟಿತು. ಈ ಹಾರವ ಮಧ್ಯದಲ್ಲಿ ರತ್ನಖಚಿತವಾದದ್ದೊಂದು ಪದಕವಿತ್ತು. ಆ ಪದಕದ ನಟ್ಟನಡುವೆಯಿದ್ದ ಬಹು ದೊಡ್ಡ ನೀಲರತ್ನವು ಅತ್ಯಂತ ಯಶಸ್ವಿಯಾದದ್ದೆಂದು ಭಾವಿಸಲ್ಪಟ್ಟಿತ್ತು. ಅದು ಕೊರಳಲ್ಲಿರುವತನಕ ಪ್ರತ್ಯಕ್ಷ ಯಮನ ಭಯವು ಕೂಡ ತನಗೆ ಇಲ್ಲವೆಂದು ರಾಮರಾಜನು ತಿಳಿದಿದ್ದನು. ಆ ತಿಳುವಳಿಕೆಯಂತೆ ಅವನು ಈಗ ಕೇವಲ ನಿರ್ಭೀತನಾಗಿದ್ದನು. ಈ ಪ್ರಕಾರದ ಯುದ್ಧದ ಉಡಪು-ತೊಡಪುಗಳಿಂದ ರಾಮರಾಜನು ಸಿದ್ಧನಾಗಿ, ತನ್ನ ಡೇರೆಯ ಹೊರಗೆ ನಿಲ್ಲಿಸಿದ್ದ ಕುದುರೆಯನ್ನು ಹತ್ತಿದನು. ಆ ಕುದುರೆಯ ಮೈತುಂಬ ರೇಶಿಮೆಯ ಗಂಟುಗಂಟುಗಳುಳ್ಳ ಝೂಲವನ್ನು ಹಾಕಿದ್ದರಲ್ಲದೆ, ಅದರ ತಲೆಗೆ ಅಂಥಾದ್ದೇ ಒಂದು ಆವರಣವಿದ್ದು ಅದರ ತಲೆಯಮೇಲ್ಲೊಂದು ಮುತ್ತಿನ ತುರಾಯಿಯೂ, ಹಣೆಯಲ್ಲೊಂದು ಬಹು ಬೆಲೆಯುಳ್ಳ ಪದಕವೂ ಒಪ್ಪುತ್ತಿದ್ದವು. ಕುದುರೆಯ ಜೂಲದ ಗಂಟುಗಳು ಬಹು ಸಮಿಸಮಿಾಪವಾಗಿದ್ದಿದ್ದರಿಂದ, ಕತ್ತಿಯ ಕಡತವು ಕುದುರೆಯ ಮೈಗೆ ಹತ್ತುವಂತೆ ಇದ್ದಿಲ್ಲ.

ಹೀಗೆ ಅಶ್ವರೂಢನಾಗಿದ್ದ ರಾಮರಾಜನ ಸವಾರಿಯು ತನ್ನ ಸೈನ್ಯವನ್ನು ನಿರೀಕ್ಷಿಸುವದಕ್ಕಾಗಿ ಹೊರಟಿತು. ಎಲ್ಲಕ್ಕೂ ಮುಂದುಗಡೆಯಲ್ಲಿ ಆನೆಗಳ ಮೇಲೆ ಕುಳಿತು ಯುದ್ಧಮಾಡುವ ಸೈನ್ಯವನ್ನು ಸಾಲಾಗಿ ನಿಲ್ಲಿಸಿದ್ದರು. ಅದರ ಹಿಂದೆ ಕುದುರೆಯ ಸವಾರರನ್ನೂ ಅವರ ಹಿಂದೆ ಕಾಲಾಳುಗಳನ್ನೂ ನಿಲ್ಲಿಸಿದ್ದರು. ಆನೆಗಳ ಮೈತುಂಬ ರೇಶಿಮೆಯ, ಅಥವಾ ತೊಗಲಿನ, ಅದರ ನಡನಡುವೆ ಧಾತುಗಳ ಚೂರುಗಳನ್ನು ಕೂಡ್ರಿಸಿದ ಝೂಲಗಳಿದ್ದವು. ಆನೆಗಳ ತಲೆಯ ಮೇಲೆ ಬಂಗಾರದ ಮುಲಾಮು ಮಾಡಿದ ಧಾತುಗಳ ತಗಡಿನ ಶಿರಸ್ತ್ರಾಣಗಳಿ

ದ್ದವು. ಇದರಂತೆ ಕುದುರೆಯು ಮೈಗಳಾದರೂ ಇಂಥ ಝೂಲಗಳಿಂದ ಸಂಪೂರ್ಣವಾಗಿ ಮುಚ್ಚಿಹೋಗಿದ್ದವು. ಈ ಆನೆ ಕುದುರೆಗಳ ಮೇಲೆ ಕುಳಿತುಕೊಂಡಿದ್ದ ಯೋಧರು ಕವಚ ಶಿರಸ್ತ್ರಾಣಗಳಿಂದ ಒಪ್ಪುತ್ತಲಿದ್ದರು. ಅವರ ಟೊಂಕದಲ್ಲಿ ಒಂದು ಕಠಾರಿಯೂ, ಒಂದು ಚಪ್ಪ ಕೊಡಲಿಯೂ, ಒಂದು ಖಡ್ಗವೂ, ಕೈಯಲ್ಲಿ ಬರ್ಚಿಯೂ ಇದ್ದು, ಕೆಲವರ ಬೆನ್ನಲ್ಲಿ ಬತ್ತಳಿಕೆಯೂ, ಹೆಗಲಲ್ಲಿ ಹೆದೆಯೇರಿಸಿದ ಧನುಷ್ಯವೂ, ಒಪ್ಪುತ್ತಿದ್ದವು. ದಂಡಾಳುಗಳಲ್ಲಿ ಕನ್ನಡಿಗರು, ತೆಲುಗರು, ಮೈಸೂರಿನವರು, ಮಲಿಯಾಳದವರು, ತಮಿಳರು, ಮುಸಲ್ಮಾನರು ಮುಂತಾದವರು ಇದ್ದರು. ಪ್ರತಿಒಂದು ದಂಡಿನವರು ತಮ್ಮ ತಮ್ಮ ಪ್ರಾಂತದ ನಾಯಕನ ಕೂಡ ಬಂದಿದ್ದರು. ಒಂದೊಂದು ಆನೆಯಮೇಲೆ ಮೂರು ನಾಲ್ಕು ಜನರು ಕುಳಿತು ಡಾಲುಬರ್ಚಿಗಳನ್ನು ಧರಿಸಿದ್ದರು. ಕಾಲಾಳುಗಳಲ್ಲಿ ಕೆಲವರು ಬಿಲ್ಲು-ಬಾಣಗಳನ್ನೂ ಕೆಲವರು ತುಬಾಕಿಗಳನ್ನೂ ಹಿಡಿದಿದ್ದರು. ಇವರು ನಡುವಿನಲ್ಲಿ ಕಠಾರಿಯನ್ನೂ, ಚಪ್ಪ ಕೊಡಲಿಯನ್ನೂ ಸಿಗಸಿದ್ದರು. ಹೀಗೆ ಶಸ್ತ್ರಾಸ್ತ್ರಗಳಿಂದ ಸಜ್ಜಾಗಿ ನಿಂತಿದ್ದ, ಹಾಗು ಮಹಾ ಸಮುದ್ರದ ಹಾಗೆ ಬಹು ದೂರದವರೆಗೆ ಪಸರಿಸಿದ್ದ ತನ್ನ ಸೈನ್ಯವನ್ನು ನೋಡುತ್ತ ರಾಮರಾಜನು ಮನಸ್ಸಿನಲ್ಲಿ ಬಹಳವಾಗಿ ಹಿಗ್ಗಿದನು. ಇಂಥ ಪ್ರಚಂಡ ಸೈನ್ಯದ ಮುಂದೆ ಶತ್ರುಗಳ ಆಟವೇನು ನತೆಯದಾವ್ದರಿಂದ, ಅವರನ್ನು ಸಹಜವಾಗಿ ದಿಕ್ಕುಗೆಡಿಸಿ ಓಡಿಸಬಹುದೆಂದು ಆ ರಾಯನು ಭಾವಿಸಿ ಆನಂದಭರಿತನಾದನು. ಆತನು ಸೈನ್ಯದ ಪ್ರತಿಒಂದು ತುಂಡಿನ ಮುಖ್ಯಸ್ಥನೊತನೆ ಸ್ವಲ್ಪ ಸ್ವಲ್ಪ ಮಾತಾಡುತ್ತ, ಉತ್ತೇಜಕ ಭಾಷಣದಿಂದ ಅವರನ್ನು ಪ್ರೋತ್ಸಾಹಿಸುತ್ತ ಮುಂದಕ್ಕೆ ಸಾಗುತ್ತಲಿದ್ದನು. ರಾಮರಾಜನ ಸೈನ್ಯದವರಿಗೆಲ್ಲ ಅಲ್ಪ ಸ್ವಲ್ಪ ಧನುರ್ವಿದ್ಯೆಯ ಜ್ಞಾನವಿರುತ್ತಿದ್ದರೂ, ಕೇವಲ ಧನುರ್ವಿದ್ಯೆಯಲ್ಲಿ ಪ್ರವೀಣವಾದದ್ದೊಂದು ಸ್ವತಂತ್ರ ಸೈನ್ಯವನ್ನು ರಾಯನು ಸಿದ್ಧಮಾಡಿದ್ದನು. ಆ ಸೈನ್ಯದ ಯುದ್ಧಪ್ರಾವೀಣ್ಯವು ಶ್ಲಾಘನೀಯವಾಗಿತ್ತು. ಅದರಂತೆ ರಾಮರಾಜನ ಸೈನ್ಯದಲ್ಲಿ ತೋಫಖಾನೆಯೂ, ತುಬಾಕಿಗಳ ಹಾರಿಸುವವರದೊಂದು ಸೈನ್ಯವೂ ಇದ್ದವು. ಹಿಂದೂ ಸೈನಿಕರಲ್ಲದೆ ಪಠಾಣ ಹಾಗು ಅರಬರ ಒಂದೊಂದು ಸೈನ್ಯಗಳು ರಾಮರಾಜನ ದಂಡಿನಲ್ಲಿ ಇದ್ದವು. ಇವೆರಡೂ ದಂಡುಗಳ ಅಧಿಪತಿಯು ರಣಮಸ್ತ ಖಾನನಾಗಿದ್ದನು. ಯಾವತ್ತು ಸೇನಾಸಮುದ್ರವನ್ನು ನೋಡುತ್ತ ನೋಡುತ್ತ ರಾಮರಾಜನ ಸವಾರಿಯು ರಣಮಸ್ತಖಾನನ ಸೈನ್ಯದ ಬಳಿಗೆ ಬಂದಿತು. ರಣಮಸ್ತಖಾನನ ಈಗಿನ ಉಡಪು-ತೊಡಪುಗಳು ಬೇರೆ ತರದವಾಗಿದ್ದವು. ಯುದ್ಧ ವೇಷದಿಂದ ಆ ತರುಣ ಸರದಾರನ ಸೌಂದರ್ಯವು ತುಂಬಿ ಹೊರಸೂಸುತ್ತಲಿತ್ತು. ಆತನನ್ನು ನೋಡಿ ರಾಮರಾಜನು ಬಹು ಕೌತು

ಕಪಟ್ಟನು. ರಣಮಸ್ತಖಾನನ ಆ ಎರಡೂ ಪಲಟಣಗಳಲ್ಲಿ ಮುಸಲ್ಮಾನರ ಯಾವತ್ತು ಪ್ರಕಾರದ ಆಯುಧಗಳಿದ್ದವು. ಆ ಮುಸಲ್ಮಾನ ಸೈನ್ಯದಲ್ಲಿ ತುರ್ಕರು, ಸಿದ್ದಿಗಳು, ಅರಬರು, ಕಾಬೂಲದ ಪಠಾಣರು ಇದ್ದರು. ಅವರ ವರ ಬೇರೆ ಬೇರೆ ಪ್ರಕಾರದ ಪೋಷಾಕುಗಳನ್ನು ನೋಡುವಾಗ ಪ್ರೇಕ್ಷಕರ ಮನೋರಂಜನವಾಗುತ್ತಿತ್ತು. ಅವರಲ್ಲಿ ಪಠಾಣರ ಭವ್ಯದೇಹಗಳೂ, ಅರಬರ ಎತ್ತರವಾದ, ಆದರೆ ತೆಳ್ಳಗಿನ ದೇಹಗಳೂ, ಸಿದ್ದೀಜನರ ಗಿಡ್ಡಾದ ಕಪ್ಪು ದೇಹಗಳೂ ಬಹು ವಿಚಿತ್ರವಾಗಿ ತೋರುತ್ತಿದ್ದವು. ಈ ಯಾವತ್ತು ಮುಸಲ್ಮಾನ ಸೈನಿಕರು ಕೇವಲ ದುಡ್ಡಿನ ಸಲುವಾಗಿ ರಾಮರಾಜನ ಪಕ್ಷದಿಂದ ಕಾದುತ್ತ, ಆತನ ಆಜ್ಞೆಯಂತೆ ನಡಕೊಳ್ಳುತ್ತಿದ್ದರು. ರಾಮರಾಜನು ಆ ಮುಸಲ್ಮಾನ ಸೈನ್ಯವನ್ನು ನೋಡಿ ರಣಮಸ್ತಖಾನನೊಡನೆ ನಾಲ್ಕು ಮಾತುಗಳನ್ನಾಡಿ, ಆ ದುಷ್ಟಖಾನನ ಮುಖಾಂತರ ಆತನ ಸೈನಿಕರನ್ನು ಕುರಿತು ನಾಲ್ಕು ಉತ್ತೇಜನಪರ ಮಾತುಗಳನ್ನಾಡಿಸಿ, ರಣಮಸ್ತಖಾನನೊಡನೆ ತನ್ನ ಶಿಬಿರದ ಕಡೆಗೆ ಸಾಗಿದನು.

ಯಾವತ್ತು ಸೈನ್ಯದ ಅವಲೋಕನದಿಂದ ರಾಮರಾಜನ ಉತ್ಸಾಹವು ಅಭಿವೃದ್ಧವಾಗಿತ್ತು. ಶತ್ರುಗಳು ಈಗ ಮೈ ಮೇಲೆ ಏರಿಬಂದರೆ, ಯಾವ ಪಲಟಣದವರು ಯಾವ ಕಡೆಗೆ ನಿಂತುಕೊಳ್ಳಬೇಕು. ಯಾವಾಗ್ಗೆ ಏನು ಮಾಡಬೇಕು, ಎಂಬದನ್ನು ಕುರಿತು ಯಥಾಸ್ಥಿತವಾಗಿ ಆಜ್ಞೆಗಳನ್ನು ಕೊಡುತ್ತ, ಆತನು ತನ್ನ ಶಿಬಿರವನ್ನು ಸೇರಿದನು. ಬಹುತರ ಯಾವತ್ತು ಸೈನ್ಯಭಾಗಗಳ ಮುಖ್ಯಸ್ಥರು ರಾಮರಾಜನ ಸಂಗಡ ಆತನನ್ನು ಶಿಬಿರಕ್ಕೆ ಕಳಸುವದಕ್ಕಾಗಿ ಆತನ ಸಂಗಡ ಬಂದಿದ್ದರು. ಅವರೆಲ್ಲರನ್ನು ರಾಮರಾಜನು ಪ್ರೋತ್ಸಾಹಿಸಿ ಅವರನ್ನು ಕುರಿತು—ವೀರರೇ, ಶತ್ರುಗಳು ಈಗ ಮೈ ಮೇಲೆ ಏರಿಬಂದರೆಂದರೆ ಅವರನ್ನು ಹಿಂದಕ್ಕೆ ದೂಡುತ್ತ ದೂಡುತ್ತ ವಿಜಾಪುರದವರಿಗೆ ಬಾಗಿ, ಆ ಪಟ್ಟಣವನ್ನು ಕೈವಶಮಾಡಿಕೊಳ್ಳಬೇಕೆಂಬ ಮಾತನ್ನು ಅಕ್ಷರಲ್ಲಿಟ್ಟು, ನೀವು ಯುದ್ಧಮಾಡತಕ್ಕದ್ದು. ವಿಜಾಪುರವು ಸ್ವಾಧೀನವಾದ ಬಳಿಕ ಅದನ್ನು ಸುಲಿಯುವದಕ್ಕಾಗಿ ನಿಮಗೆ ಐದು ದಿವಸಗಳವರೆಗೆ ಪರವಾನಗೆಯನ್ನು ಕೊಡುವೆವು. ಆ ಸುಲಿಗೆಯಲ್ಲಿ ಅವರವರಿಗೆ ಸಿಕ್ಕ ಪದಾರ್ಥಗಳು ಅವರವರವೇ, ಎಂದು ತಿಳಿಯಲಾಗುವದು; ಎಂದು ನಿಮ್ಮ ನಿಮ್ಮ ಜನರೊಳಗ ತಿಳಿಸತಕ್ಕದ್ದು, ಎಂದು ಹೇಳಿದನು. ರಾಮರಾಜನಿಗೆ ಸ್ವಂಯ ಪರಾಕ್ರಮವ ವಿಷಯವಾಗಿಯೂ, ತನ್ನ ಸೈನ್ಯದ ಸಾಮರ್ಥ್ಯದ ವಿಷಯವಾಗಿಯೂ ಅಳಿತಾಗಿ ಅನುಭವವಿತ್ತು. ಇಲ್ಲಿಯವರೆಗೆ ರಾಮರಾಜನ ಪೂರ್ವಜರು ಬಾಹಮ

ನಿಯ ಬಾದಶಹರನ್ನು ಒಬ್ಬೊಬ್ಬರನ್ನಾಗಿ ಹಣಿದು ತಮ್ಮ ರಾಜ್ಯವನ್ನು ಸುರಕ್ಷಿತವಾಗಿ ಇಟ್ಟುಕೊಂಡಿದ್ದರಲ್ಲದೆ, ತಮ್ಮ ರಾಜ್ಯದ ವಿಸ್ತಾರವನ್ನೂ, ಮಹತ್ವವನ್ನೂ ಭರದಿಂದ ಹೆಚ್ಚಿಸಿ, ತಮ್ಮ ವರ್ಚಸ್ಸನ್ನು ಎಲ್ಲರ ಮೇಲೆ ಕೂಡ್ರಿಸಿದ್ದರು; ಆದರೆ ಈಗ ಆ ಬಾಹಮನಿ ಬಾದಶಹರೆಲ್ಲ ಒಟ್ಟುಗೂಡಿ ಯುದ್ಧಕ್ಕೆ ಬಂದಿರುವದರಿಂದ, ಬಹು ಎಚ್ಚರದಿಂದ ಅವರೊಡನೆ ಯುದ್ಧಮಾಡಬೇಕಾಗುವದೆಂಬ ವಿಚಾರವು ರಾಮರಾಜನ ಮನಸ್ಸಿನಲ್ಲಿ ಬರಲೊಲ್ಲದು. ನಾನು ಅವರನ್ನು ಒಂದೇ ಹೊಡತಕ್ಕೆ ಹೊಡೆದು ಹಾಕೇನೆಂಬ ಮಬ್ಬಿನಲ್ಲಿಯೇ ಆತನು ತಲೆದೂಗುತ್ತಲಿದ್ದನು; ಆದ್ದರಿಂದ ತನ್ನ ಎಡಬಲ ಭಾಗಗಳ ರಕ್ಷಕರಾದ ತಿರುಮಲ-ವೇಂಕಟಾದ್ರಿಗಳು ಈಗ ಬೇರೆ ಕಡೆಗೆ ಹೋಗಿದ್ದರೂ, ತಾನೊಬ್ಬನೇ ಶತ್ರುಸೈನ್ಯದ ಮೇಲೆ ಬೀಳಬೇಕೆಂದು ರಾಮರಾಜನು ನಿಶ್ಚಯಿಸಿದನು; ಆದರೂ ತನ್ನ ಬಂಧುಗಳನ್ನು ಕರೆಸಿಕೊಂಡರೆ ಯವನರ ಪಾರುಪತ್ಯವು ಬೇಗನೆ ಆಗುವದೆಂದು ತಿಳಿದು, ತನ್ನ ಬಳಿಯಲ್ಲಿ ನಿಂತಿದ್ದ ರಣಮಸ್ತನಿಗೆ ತನ್ನ ಬಂಧುಗಳನ್ನು ಕರೆಸುವದಕ್ಕಾಗಿ ಸವಾರರನ್ನು ಕಳಿಸಲು ಸೂಚಿಸಿದನು; ಆದರೆ ವಿಶ್ವಾಸಘಾತಕಿಯಾದ ರಣಮಸ್ತನು ರಾಮರಾಜನ ಮುಂದೆ ಹಾಗೆ ಮಾಡುವೆನೆಂದು ಒಪ್ಪಿಕೊಂಡರೂ, ತಿರುಮಲ-ವೇಂಕಟಾದ್ರಿಗಳ ಕಡೆಗೆ ಆತನು ಸವಾರರನ್ನು ಕಳಿಸಲಿಲ್ಲ.

ಈ ಮೇರೆಗೆ ರಾಮರಾಜನು ತನ್ನ ಸೈನ್ಯದ ಸಿದ್ಧತೆಯನ್ನು ಮಾಡಿಕೊಂಡು ಕುಳಿತುಕೊಂಡನು. ಆತನಿಗೆ ತನ್ನ ಸೈನ್ಯದಲ್ಲಿ ಯಾವ ಪ್ರಕಾರದ ದೋಷವೂ ಕಂಡುಬರಲಿಲ್ಲ. ತನ್ನ ಸೈನ್ಯದ ಸಿದ್ಧತೆಯ ಅಭಿಮಾನವು ತಲೆಗೇರಿದ್ದರಿಂದ ಶತ್ರು ಬಲದ ಕಲ್ಪನೆಯು ಕೂಡ ಆತನ ಮನಸ್ಸಿಗೆ ಹೊಳೆಯಲಿಲ್ಲ. ಹ್ಯಾಗೂ ತಿರುಮಲ-ವೇಂಕಟಾದ್ರಿಗಳನ್ನು ಕರೆಕಳುಹಿಸಿರುವೆನೆಂದು ಆತನು ಭಾವಿಸಿ, ನಿಶ್ಚಿಂತನಾಗಿದ್ದನು. ಅಷ್ಟರಲ್ಲಿ ಶತ್ರುಸೈನ್ಯವು ತಾವು ಬೀಡಬಿಟ್ಟುಕೊಂಡು ಕುಳಿತಿದ್ದ ಸ್ಥಳದಿಂದ ಸುಮಾರು ಮೂರು ಹರದಾರಿ ಮುಂದಕ್ಕೆ ಸಾಗಿಬಂದಿತೆಂಬ ವರ್ತಮಾನವನ್ನು ಚಾರರು ರಾಯಸಿಗೆ ಹೇಳಿದರು. ಅದನ್ನು ಕೇಳಿ ರಾಮರಾಯನ ಒಂದು ಭ್ರಾಂತಿಯು ದೂರವಾಗಿ, ಆತನು ಸ್ವಲ್ಪ ಕಣ್ಣು ತೆರೆದನು. ತಿರುಮಲ-ವೇಂಕಟಾದ್ರಿಗಳಿಂದ ಪೆಟ್ಟು ತಿಂದು ಮುಸಲ್ಮಾನ ಸೈನ್ಯವು ಓಡಿಬಂದಿಲ್ಲೆಂಬದು ಈಗ ಆತನಿಗೆ ಗೊತ್ತಾಯಿತು. ಈ ಪ್ರಸಂಗದಲ್ಲಿ ಶತ್ರುಗಳು ಮುಂದಕ್ಕೆ ಸಾಗಿಬರುವ ಹಾದಿಯನ್ನು ನೋಡುತ್ತ ಕುಳಿತುಕೊಳ್ಳದೆ, ತಾನು ಮುಂದಕ್ಕೆ ಸಾಗಿಹೋಗಬೇಕೆಂದು ರಾಮರಾಜನು ಯೋಚಿಸಿದನು. ಈಗ ರಾಮರಾಜನ ಸೈನ್ಯವು ಮುದ್ಗಲ್ಲಕೋಟೆಯ ಬಳಿಯಲ್ಲಿ ಇತ್ತು.

ಶತ್ರುಸೈನ್ಯವು ತನ್ನ ಬಂಧುಗಳ ಕಣ್ಣು ತಪ್ಪಿಸಿ ತಿರುಗಿ ಬಂದು ತನ್ನನ್ನು ಗಂಟುಬಿದ್ದಿತೆಂದು ಆತನು ತಿಳಿದನು; ಆದರೆ ಆತನು ಎದೆಗುಂದಲಿಲ್ಲ. ತನ್ನ ಸೈನ್ಯವು ಒಟ್ಟುಗೂಡಿದ ನಾಲ್ವರು ಬಾದಶಹರ ಸೈನ್ಯಕ್ಕೂ ಎದುರಾಗಲು ಸಮರ್ಥವಾಗಿರುತ್ತದೆಂಬ ನಂಬಿಗೆಯು ಆತನಿಗೆ ಸಂಪೂರ್ಣವಾಗಿ ಇತ್ತು! ಅಂದ ಬಳಿಕ ಕೇಳುವದೇನು? ಆತನು ಕೂಡಲೆ ತನ್ನ ಸೈನ್ಯಕ್ಕೆ ಮುಂದಕ್ಕೆ ಸಾಗಲು ಆಜ್ಞಾಪಿಸಿದನು. ಆಗ ಆತನ ನಿಜವಾದ ಹಿತಚಿಂತಕರು ಆತನಿಗೆ—'ಮಹಾರಾಜ, ತಮಗೆ ತಿರುಮಲ-ವೇಂಕಟಾದ್ರಿಗಳ ಬೆಂಬಲವಿಲ್ಲ. ಅವರನ್ನು ಕರೆಯಕಳುಹಿ, ಅವರು ಬಂದ ಬಳಿಕ ತಾವು ಮುಂದಕ್ಕೆ ಸಾಗಿಹೋಗ ತಕ್ಕದ್ದು. ಇಲ್ಲದಿದ್ದರೆ, ಶತ್ರುಗಳು ತಾವಾಗಿ ನಮ್ಮ ಮೈಮೇಲೆ ಸಾಗಿಬಂದ ಬಳಿಕ ನಿರ್ವಾಹವಿಲ್ಲದೆ ಏನು ಮಾಡುವದನ್ನು ಮಾಡಬೇಕು. ಈಗ ನಾವು ಮುದ್ದಲ್ಲಕೋಟೆಯ ಆಶ್ರಯದಲ್ಲಿರುವೆವು. ಆ ಆಸರವನ್ನು ಬಿಟ್ಟು ಮುಂದಕ್ಕೆ ಹೋಗುವ ಸಾಹಸವನ್ನು ಮಾಡಬಾರದು", ಎಂದು ಹೇಳಿದರು. ಆದರೆ ರಾಮರಾಜನಿಗೆ ಅವರ ಮಾತುಗಳು ಎಷ್ಟು ಮಾತ್ರವೂ ಸೇರಲಿಲ್ಲ. ನಾನು ಈಗ ಯೋಚಿಸಿರುವದೇ ಯೋಗ್ಯವಾಗಿರುತ್ತದೆ. ನಾನು ಮುಂದಕ್ಕೆ ಸಾಗಿ ಹೋಗದಿದ್ದರೆ, ನನ್ನ ಅಂಜುಬುರುಕತನವು ವ್ಯಕ್ತವಾಗುವದು. ಈಗ ಅಂಜಲಿಕ್ಕೆ ಅಂಥ ಪ್ರಸಂಗವೇನು ಬಂದಿರುವದಿಲ್ಲ. ಸುಮ್ಮನೆ ಯಾಕೆ ಅಂಜಬೇಕು? ನಾವು ಮುಂದಕ್ಕೆ ಸಾಗಿಹೋಗಿ ಶತ್ರುಗಳು ಎದುರಾದ ಕೂಡಲೆ ಅವರನ್ನು ಸೋಲಿಸಿ, ಅವರನ್ನು ಓಡಿಸಿಕೊಂಡು ಹೋಗಿ ವಿಜಾಪುರವನ್ನು ಸೇರದಿದ್ದರೆ, ನಮ್ಮ ಪೌರುಷವೇನು? ಎಂಬ ಅಭಿಮಾನೋಕ್ತಿಗಳನ್ನು ಆಡುತ್ತ, ತನ್ನ ಯಾವತ್ತೂ ಸೇನಾಪತಿಗಳಿಗೆ ತಳವನ್ನು ಕಿತ್ತಲು ಒತ್ತಾಯದಿಂದ ಆಜ್ಞಾಪಿಸಿದನು. ರಾಮರಾಜನ ಈ ಅಪ್ಪಣೆಗೆ ರಣಮಸ್ತನು ಒಳಿತಾಗಿ ಉತ್ತೇಜನ ಕೊಡುವನು, ಉಳಿದವರು ಪ್ರತಿಬಂಧ ಮಾಡುವರು. ರಾಮರಾಜನು ರಣಮಸ್ತನನ್ನು ಹೊಗಳುವನು; ಸ್ವಾಮಿಭಕ್ತರಾದ ತನ್ನ ಜನರನ್ನು ತಿರಸ್ಕರಿಸುವನು. ಇದರಿಂದ ರಾಮರಾಜನ ನಿಜವಾದ ಹಿತಚಿಂತಕರ ಮನಸ್ಸುಗಳು ನೊಂದವು. ಅವರು ತಿರುಮಲ-ವೇಂಕಟಾದ್ರಿಗಳು ಬರುವವರೆಗೆ ಮುದ್ದಲಕೋಟೆಯ ಆಶ್ರಯವನ್ನು ಬಿಟ್ಟು ಮುಂದಕ್ಕೆ ಹೋಗಲಾಗದೆಂದು ನಿಶ್ಚಯಿಸಿದರು; ಆದರೆ ರಾಮರಾಜನು ಮುಂದಕ್ಕೆ ಸಾಗಿಹೋಗಲೇಬೇಕೆಂದು ಒತ್ತಾಯ ಮಾಡಹತ್ತಿದನು. ಆತನ ಹಟಮಾರಿತನ ದುರಭಿಮಾನಗಳ ಮುಂದೆ ಯಾರ ಆಟವೂ ನಡೆಯಲೊಲ್ಲದು. ರಾಮರಾಜನು ತನ್ನ ಸೈನ್ಯದ ತಳವನ್ನೇ ಮೊದಲು ಎಬ್ಬಿಸಿ ಬಿಟ್ಟದ್ದರಿಂದ, ಉಳಿದವರು ನಿರ್ವಾಹ

ವಿಲ್ಲದೆ ಮುಂದಕ್ಕೆ ಸಾಗಬೇಕಾಯಿತು. ವಿನಾಶ ಕಾಲಕ್ಕೆ ವಿಪರೀತ ಬುದ್ಧಿ ಯೆಂಬ ಮಾತು ಇಲ್ಲಿ ಚೆನ್ನಾಗಿ ವ್ಯಕ್ತವಾಗುವದು.

ರಾಮರಾಜನ ಸೈನ್ಯವು ವಾಯಪುರೆದ ಬಳಿಯಲ್ಲಿ ಬಂದಿತು. ಶತ್ರುಗಳ ಸೈನ್ಯವೂ ಎದುರಿನಿಂದ ಅಲ್ಲಿಗೆ ಬಂದಿತು. ಎರಡೂ ಸೈನ್ಯಗಳು ಒಂದಕ್ಕೊಂದು ತಾಕಲಾಡಿ ಘನಚಕ್ರದ ಕಾಳಗಕ್ಕೆ ಆರಂಭವಾಯಿತು. ಈ ಯುದ್ಧ ವಾರ್ತೆಯು ಕೇವಲ ಏಕ ಪಕ್ಷೀಯ ಯವನರ [ಮುಸಲ್ಮಾನ] ಇತಿಹಾಸಕಾರರಿಂದಲೇ ನಮಗೆ ತಿಳಿದಿರುವದು ದುರ್ದೈವದ ಸಂಗತಿಯು. ಮುಸಲ್ಮಾನ ಇತಿಹಾಸಕಾರರು ಜಯಶಾಲಿಗಳಾದ ಮುಸಲ್ಮಾನರ ಪಕ್ಷವನ್ನೇ ಕಟ್ಟಿ ಹಿಂದೂ ಜನರನ್ನು ನಿರಾಕರಿಸಿ ಬರೆಯುವ ಸಂಭವವು ವಿಶೇಷವಾಗಿರುತ್ತದೆ. ಫೇರಿಸ್ತನೆಂಬ ಮುಸಲ್ಮಾನ ಇತಿಹಾಸಕಾರನು ರಾಮರಾಜನ ಸೈನ್ಯದ ಸಂಖ್ಯೆಯನ್ನು ಬೇರೆ ಬೇರೆ ಪ್ರಸಂಗಗಳಲ್ಲಿ ಬೇರೆ ಬೇರೆ ವಿಧವಾಗಿ ಕೊಟ್ಟಿರುತ್ತಾನೆ. ಒಂದು ಸ್ಥಳದಲ್ಲಿ ಆತನು ರಾಮರಾಜನ ಸೈನ್ಯದಲ್ಲಿ ೯,೦೦,೦೦೦ ಕಾಲಾಳೂ, ೪೫,೦೦೦ ಕುದುರೆ ಸವಾರರೂ, ೨,೯೦೦ ಆನೆಗಳೂ ೧೫,೦೦೦ ಬೇರೆ ಸೈನಿಕರೂ ಇದ್ದರೆಂದು ಉಲ್ಲೇಖಿಸಿರುವನು. ಈ ಸೈನ್ಯಕ್ಕೆ ಸರಿಯಾಗಿಯೇ ಮುಸಲ್ಮಾನ ಸೈನ್ಯವಾದರೂ ಇರಬಹುದು. ಮುಸಲ್ಮಾನರ ಸೈನ್ಯವು ಮೂರು ತುಂಡುಗಳಾಗಿ ವಿಭಾಗಿಸಲ್ಪಟ್ಟಿತ್ತು. ಹಿಂದೂ ಸೈನ್ಯದ ಬಲಗಡೆಯ ಮಗ್ಗುಲ ಮೇಲೆ ಸಾಗಿಹೋಗುವದಕ್ಕಾಗಿ ವಿಜಾಪುರದ ಅಲ್ಲಿ ಅದಿಲಶಹನ ಸೈನ್ಯವೂ, ಎಡಗಡೆಯ ಮಗ್ಗುಲಿಗೆ ಸಾಗಿಹೋಗುವದಕ್ಕಾಗಿ ಬೆದರದ ಅಲ್ಲಿ ಬರೀದಶಹನ ಸೈನ್ಯವೂ, ಮಧ್ಯ ಕೇಂದ್ರದ ಮೇಲೆ ಸಾಗಿಬರುವದಕ್ಕಾಗಿ ಅಹಮ್ಮದನಗರದ ಹುಸೇನ ನಿಜಾಮಶಹನ ಸೈನ್ಯವೂ ಯೋಜಿಸಲ್ಪಟ್ಟಿದ್ದವು. ಈ ಮೂವರೂ ತಮ್ಮ ತಮ್ಮ ತೋಫಖಾನೆಗಳನ್ನು ಮಧ್ಯದಲ್ಲಿಟ್ಟು, ಅವು ಹಿಂದುಗಳಿಗೆ ಕಾಣದಹಾಗೆ ಅವುಗಳ ಮುಂದೆ ಧನುರ್ಧಾರಿಗಳ ಸೈನ್ಯವನ್ನು ನಿಲ್ಲಿಸಿದ್ದರು. ಪ್ರತಿ ಒಂದು ಪಥಕದವರು ತಮ್ಮ ಬಾರಾ ಇಮಾಮನ ನಿಶಾನೆಯನ್ನು ಸೈನ್ಯದ ಮುಂದೆ ಹಿಡಿದಿದ್ದರು. ನಿಜಾಮಶಹನ ತೋಫಖಾನೆಯು ದೊಡ್ಡದಿತ್ತು. ಅವುಗಳಲ್ಲಿ ತೋಪುಗಳು ಸಣ್ಣವು-ದೊಡ್ಡವು ಕೂಡಿ ೬೦೦ ಇದ್ದವು. ಸಣ್ಣ ತೋಪುಗಳನ್ನು ಹಿಂದುಗಡೆಯಲ್ಲಿ ನಿಲ್ಲಿಸಿ, ದೊಡ್ಡ ತೋಪುಗಳನ್ನು ಮುಂದುಗಡೆಯಲ್ಲಿ ನಿಲ್ಲಿಸಿದ್ದರು. ಈ ಮೇರೆಗೆ ತೋಪುಗಳನ್ನು ನಿಲ್ಲಿಸಿರುವದು ಹಿಂದು ಜನರಿಗೆ ಗೊತ್ತಾಗಿದ್ದಿಲ್ಲ. ಅದು ಗೊತ್ತಾಗಬಾರದೆಂತಲೇ ಮುಸಲ್ಮಾನರು ಧನುರ್ಧಾರಿಗಳನ್ನು ತೋಪುಗಳಮುಂದೆನಿಲ್ಲಿಸಿ ಮರೆಮಾಡಿದ್ದರು. ಮುಸಲ್ಮಾನ ಧನುರ್ಧಾರಿಗಳು ಬಾಣಗಳನ್ನು ಬಿಡಹತ್ತಿದ ಕೂಡಲೆ ಹಿಂದುಜನರು

ಅವರ ಮೇಲೆ ಬಾಣಗಳನ್ನು ಸುರಿಸಹತ್ತಿದರು. ಹಿಂದೂ ಧನುರ್ಧಾರಿಗಳಿಗೆ ತಮ್ಮ ಧನುರ್ಧಾರಿಗಳು ಈಡಾಗಲಾರರೆಂಬದು ಮುಸಲ್ಮಾನರಿಗೆ ಗೊತ್ತಿದ್ದರೂ, ಹಿಂದೂ ಸೈನಿಕರನ್ನು ತಮ್ಮ ಮೇಲೆ ಎಳಕೊಂಡು, ಕೂಡಲೆ ತಮ್ಮ ಬಿಲ್ಲಾಳುಗಳನ್ನು ಹಿಂದಕ್ಕೆ ಸರಿಸಿಕೊಂಡು ತೋಪುಗಳನ್ನು ಹಾರಿಸಿ, ಹಿಂದೂ ಸೈನ್ಯದ ಸಂಹಾರವನ್ನು ಮಾಡಿ ಜರ್ಜರಗೊಳಿಸಬೇಕೆಂದು ಮುಸಲ್ಮಾನರು ಯೋಚಿಸಿದ್ದರು; ಆ ಯೋಚನೆಯು ಚನ್ನಾಗಿ ಫಲಸಿತು. ಈ ಮುಸಲ್ಮಾನ ಧನುರ್ಧಾರಿಗಳ ಆಟವು ನವ್ಮ ಮುಂದೆ ಏನೂ ನಡೆಯಲಾರದೆಂಬ ನಂಬಿಗೆಯಿಂದ ರಾಮರಾಜನು ತಮ್ಮ ಧನುರ್ಧಾರಿಗಳನ್ನು ಭರದಿಂದ ಮುಂದಕ್ಕೆ ನೂಕಿದನು. ಹಿಂದೂ ಜನರು ತಮ್ಮ ಅಳವಿನೊಳಗೆ ಬಂದರೆಂಬದನ್ನು ನೋಡಿದ ಕೂಡಲೆ ಮುಸಲ್ಮಾನರು ತಮ್ಮ ಧನುರ್ಧಾರಿಗಳಿಗೆ ಕಾಲುದೆಗೆಯಲು ಸೂಚಿಸಿದರು. ಕೂಡಲೆ ಮುಸಲ್ಮಾನ ಧನುರ್ಧಾರಿಗಳು ಸೋತು ಓಡುವವರಂತೆ ವಿಜಾಪುರದ ಕಡೆಗೆ ಸರಿಯ ಹತ್ತಿದರು. ಅದನ್ನು ನೋಡಿ ಹಿಂದೂ ಜನರು ಉಬ್ಬಿ ಜಯಘೋಷಮಾಡುತ್ತ ಆವೇಶದಿಂದ ಮುಂದಕ್ಕೆ ಸಾಗಿ ಹೋದರು. ಕೂಡಲೆ ಮುಸಲ್ಮಾನರು ತಮ್ಮ ತೋಪುಗಳನ್ನು ಹಾರಿಸಿ, ಹಿಂದೂ ಜನರ ಸಂಹಾರವನ್ನು ಮಾಡಹತ್ತಿದರು.

ಹೀಗಾಗಿ ಶೂರರಾದ ಹಿಂದೂ ಧನುರ್ಧಾರಿಗಳು ಪಟಪಟ ಸಾಯಹತ್ತಿದರು. ಇಷ್ಟರಿಂದ ರಾಮರಾಜನ ಸೈನಿಕರೇನು ಹಿಂಜರಿಯಲಿಲ್ಲ. ಕೂಡಲೆ ಮುಸಲ್ಮಾನ ತೋಪುಗಳಿಗೆ ಎದುರಾಗಿ ಹಿಂದು ಜನರ ತೋಪುಗಳು ಮುಂದಕ್ಕೆ ಬಂದು ಹಾರಹತ್ತಿದವು. ಇದರಿಂದ ಎರಡೂ ಸೈನ್ಯಗಳಲ್ಲಿ ಭಯಂಕರವಾದ ಸಂಹಾರಕಾರ್ಯವು ನಡೆಯಿತು. ಅಷ್ಟರಲ್ಲಿ ಬೇರೆ ಚಾರರ ಮುಖಾಂತರವಾಗಿ ಶತ್ರುಗಳ ಮೋಸವು ಗೊತ್ತಾಗಿ, ತಿರುಮಲ-ವೇಂಕಟಾದ್ರಿಗಳೂ ತಮ್ಮ ಸೈನ್ಯಗಳೊಡನೆ ವೇಗದಿಂದ ಬಂದು, ಮುಸಲ್ಮಾನ ಸೈನ್ಯದ ಎಡಬಲಗಳಲ್ಲಿ ಭಯಂಕರ ರೀತಿಯಿಂದ ಏರಿಹೋದರು. ಮಧ್ಯಭಾಗದಲ್ಲಿಯಂತೂ ರಾಮರಾಜನು ಸ್ವತಃ ಆನೆಯ ಮೇಲೆ ಕುಳಿತುಕೊಂಡು ಸಂಚರಿಸುತ್ತ ತನ್ನ ದಂಡಾಳುಗಳಿಗೆ ಧೈರ್ಯಹೇಳುತ್ತಲಿದ್ದನು. ಆತನ ಅಲೌಕಿಕ ಧೈರ್ಯದಿಂದ ಬಹಳ ಪ್ರಯೋಜನವಾಯಿತು. ಅವನ ಸೈನ್ಯದವರು ಒಳಿತಾಗಿ ಸ್ಫುರಣಗೊಂಡರು. ಶತ್ರುಗಳ ತೋಪುಗಳು ಸುಮ್ಮನಾದವು. ರಾಮರಾಜನು ಶತ್ರುಗಳನ್ನು ಹಿಂದಕ್ಕೆ ಸರಿಸುತ್ತ ನಡೆದನು. ಶತ್ರುಗಳು ಹಿಂದಕ್ಕೆ ಸರಿಯುತ್ತ ಹೋದಂತೆ ರಾಮರಾಜನು ವಿಲಕ್ಷಣ ರೀತಿಯಿಂದ ಆವೇಶಗೊಂಡನು. ವೃದ್ಧ ರಾಮರಾಜನ ಈಗಿನ ಮಹಾ ಶೌರ್ಯಕ್ಕೆ ಭಾರತೀಯ ವೀರಾಗ್ರಣಿ ಭೀಷ್ಮನ

ಶೌರ್ಯವನ್ನು ಹೋಲಿಸಬಹುದು. ಈಗಿನ ಕಾಲದಲ್ಲಿ ರಾಮರಾಜನ ವಯಸ್ಸು ೯೦ ವರ್ಷದ್ದಿತ್ತೆಂದು ಕೆಲವರು ಹೇಳಿರುತ್ತಾರೆ; ಆದರೆ ಇದು ಅತಿಶಯೋಕ್ತಿಯೆಂದು ಭಾವಿಸಿದರೂ, ರಾಮರಾಜನು ಈ ಕಾಲದಲ್ಲಿ ವೃದ್ಧಾಪ್ಯದೆಸೆಯನ್ನು ಹೊಂದಿದ್ದನೆಂದು ಹೇಳಲಿಕ್ಕೆ ಬಾಧಕವಿಲ್ಲ. ಉಭಯ ಸೈನಿಕರು ಎದೆಗೆಯೆದೆಯಾನಿಸಿ ಕಾದುತ್ತಲಿದ್ದರು. ಇನ್ನು ಮೇಲೆ ತನಗೆ ಪೂರ್ಣಜಯಪ್ರಾಪ್ತಿಯಾಗುವದೆಂಬ ನಂಬಿಗೆಯು ರಾಮರಾಜನಲ್ಲಿ ಉತ್ಪನ್ನವಾಗತೊಡಗಿತ್ತು; ಮುಸಲ್ಮಾನರು ಇನ್ನು ಓಡಿಹೋಗತಕ್ಕವರು; ಅಷ್ಟರಲ್ಲಿ ದುರ್ದೈವದಿಂದ ರಾಮರಾಜನು ಹತ್ತಿಕೊಂಡಿದ್ದ ಆನೆಗೆ ಗಾಯವಾಗಿ ಅದು ದೊಪ್ಪನೆ ನೆಲಕ್ಕೆ ಕುಳಿತಿತು. ಆದರೆ ರಾಮರಾಜನು ಎದೆಗುಂದಲಿಲ್ಲ; ಆತನು ಅಂಬಾರಿಯಿಂದ ಕೆಳಗೆ ಇಳಿದು, ತನ್ನ ಸಲುವಾಗಿ ಒಂದು ಸಿಂಹಾಸನವನ್ನು ಸಿದ್ಧಮಾಡುವದಕ್ಕಾಗಿ ತನ್ನ ಸೈನಿಕರಿಗೆ ಆಜ್ಞಾಪಿಸಿದನು. ಮುಂದೆ ಸ್ವಲ್ಪ ವೇಳೆಯಲ್ಲಿ ಸಿಂಹಾಸನವು ಸಿದ್ಧವಾಗಲು, ರಾಮರಾಜನು ಅದರ ಮೇಲೆ ಕುಳಿತು ಸೈನ್ಯದಲ್ಲಿ ಮಹಾಪರಾಕ್ರಮವನ್ನು ಮಾಡಿದವರಿಗೆ ಕೈಗೆ ಬಂದಂತೆ ಉಚಿತಗಳನ್ನು ಕೊಡಹತ್ತಿದನು. ಶತ್ರುಗಳ ತೋಫಖಾನೆಯಲ್ಲಿ ಜೀವನೇನು ಉಳಿದಿರುವದಿಲ್ಲೆಂದು ಆತನು ಸಂಪೂರ್ಣವಾಗಿ ನಂಬಿಕೊಂಡಿದ್ದನು. ರಾಮರಾಜನ ಸೈನಿಕರಾದರೂ ಆವೇಶದಿಂದ ಕಾದುತ್ತಲಿದ್ದರು. ಅಷ್ಟರಲ್ಲಿ ಶತ್ರುಗಳ ಕಡೆಯ ಒಳ್ಳೇ ಜಾಣರಾದ ಗೋಲಂದಾಜಗಳು ತಮ್ಮ ತೋಪುಗಳಲ್ಲಿ ತಾಂಬ್ರದ ದುಡ್ಡುಗಳನ್ನೂ ಚೂರುಗಳನ್ನೂ ತುಂಬಿ ಒಮ್ಮೆಲೆ ಹಾರಿಸಹತ್ತಿದರು. ಇದರಿಂದ ರಾಮರಾಜನ ಸೈನಿಕರು ಏಕಸ್ಮಾತ್ತಾಗಿ ಗಾಯಪಟ್ಟು ನೆಲಕ್ಕೆ ಉರುಳಹತ್ತಿದರು. ಈ ಸುದ್ದಿಯನ್ನು ರಾಮರಾಜನ ಕಡೆಯ ಜನರು ರಾಮರಾಜನಿಗೆ ಹೇಳಿ, ಇನ್ನು ನೀವು ವೇಗನೆ ಕುದುರೆಯನ್ನು ಹತ್ತಿ ಹಿಂದಕ್ಕೆ ಸರಿಯಬೇಕೆಂದು ಸೂಚಿಸಿದರು; ಆದರೆ ಹೀಗೆ ಮಾಡುವದರಿಂದ ತನ್ನ ದಂಡಾಳುಗಳು ಎದೆಗೆಟ್ಟಾರೆಂದು ತಿಳಿದು ಸಾಯುವವರೆಗೆ ಶತ್ರುಗಳಿಗೆ ಬೆನ್ನು ತೋರಿಸಬಾರದೆಂದು ರಾಯನು ನಿಶ್ಚಯಿಸಿ, ತನ್ನ ಸಿಂಹಾಸನವನ್ನು ಬಿಟ್ಟು ಏಳದಾದನು.

ರಾಮರಾಜನ ಈ ನಿಶ್ಚಯವು ಕಡೆತನಕ ತಡೆಯಲಿಲ್ಲ. ತಾಂಬ್ರದ ದುಡ್ಡುಗಳ, ಹಾಗು ಚೂರುಗಳ ಹೊಡತವನ್ನು ತಾಳಲಾರದೆ, ಹಿಂದು ಜನರು ಹಿಂದಕ್ಕೆ ಸರಿಯಹತ್ತಿದರು. ಅವರು ಹಿಂದಕ್ಕೆ ಸರಿಯುತ್ತ ಹೋದಂತೆ ಮುಸಲ್ಮಾನರು ಮುಂದಕ್ಕೆ ಬರಹತ್ತಿದರು. ಅಷ್ಟರಲ್ಲಿ ಹುಸೇನನಿಜಾಮಶಹನಿಗೆ, ರಾಮರಾಜನು ಸೈನ್ಯ ಮಧ್ಯದಲ್ಲಿ ಸಿಂಹಾಸನದ ಮೇಲೆ ಕುಳಿತಿರುವನೆಂಬ ಸುದ್ದಿಯು ಹತ್ತಿತು.

ಕೂಡಲೆ ಆತನು ರಾಮರಾಜನ ತಲೆಯನ್ನು ತಂದುಕೊಟ್ಟವರಿಗೂ, ಆ ಕಾರ್ಯ ಕ್ಕಾಗಿ ಸಹಾಯ ಮಾಡಿದವರಿಗೂ ಬಹು ದೊಡ್ಡ ಇನಾಮು ಕೊಡುವೆನೆಂದು ಡಂಗುರ ಸಾರಿದನು. ಆಗ ನಿಜಾಮಶಹನ ದಂಡಿನವರು ಆವೇಶದಿಂದ ಹಿಂದು ಗಳ ಸೈನ್ಯವನ್ನು ನುಗ್ಗಿದರು. ಅಷ್ಟರಲ್ಲಿ ನಿಜಾಮಶಹನ ಆನೆಯು ಬೆದರಿ ರಾಮರಾಜನಿದ್ದ ಕಡೆಗೇ ಓಡಿಬಂದಿತು. ಹಿಂದುಗಳು ನಿಜಾಮಶಹನನ್ನು ಕೊಲ್ಲಬೇಕೆಂದು ಆನೆಯನ್ನು ಮುತ್ತಲು, ಅದು ಮತ್ತಿಷ್ಟು ಬೆದರಿ ಕರ್ಮ ಧರ್ಮ ಸಂಯೋಗದಿಂದ ರಾಮರಾಜನು ಕುಳಿತಿರುವಲ್ಲಿಗೆ ಬಂದಿತು. ಕೂಡಲೆ ರಾಮರಾಜನ ಜನರು ರಾಮರಾಜನನ್ನು ಪಲ್ಲಕ್ಕಿಯಲ್ಲಿ ಹಾಕಿಕೊಂಡು ವೇಗ ದಿಂದ ಹಿಂದಕ್ಕೆ ಓಡಹತ್ತಿದರು. ಹುಸೇನಶಹನ ಆನೆಯು ಪಲ್ಲಕ್ಕಿಯ ಬೆನ್ನ ಹತ್ತಿಯೇ ಸಾಗಿತ್ತು.

ಒನೆಯ ಪ್ರಕರಣ—ದಂಪತಿಗಳ ಅಂತವು.

ಈ ಮೇರೆಗೆ ನಿಜಾಮಶಹನ ಆನೆಯು ತಮ್ಮ ಒಡೆಯನ ಪಲ್ಲಕ್ಕಿಯನ್ನು ಬೆನ್ನಟ್ಟಿರಲು, ರಾಮರಾಜನ ಜನರು ರಾಮರಾಜನನ್ನು ಪಲ್ಲಕ್ಕಿಯಿಂದ ಇಳಿಸಿ ರಥದಲ್ಲಿ ಕುಳ್ಳಿರಿಸಿಕೊಂಡು ವೇಗದಿಂದ ಸಾಗಿದರು. ಹೀಗೆ ರಾಮರಾ ಜನು ಓಡಿಹೋಗುವದನ್ನು ನೋಡಿ ಆತನ ಸೈನಿಕರೂ ಓಡಿಹೋಗುವ ಮನಸ್ಸು ಮಾಡಿದರು. ಈ ದುರ್ಬುದ್ಧಿಯು ಸೈನಿಕರಿಗೆ ಉತ್ಪನ್ನವಾಗುವ ದೊಂದೇ ತಡ, ವಿಜಯನಗರದ ದಂಡಾಳುಗಳು ವಿಜಯನಗರದ ಕಡೆಗೆ ಓಡಹತ್ತಿದರು. ಅಂದ ಬಳಿಕ ಕೇಳುವದೇನು, ಮುಸಲ್ಮಾನ ಸೈನಿಕರು ಹಿಂದುಗಳನ್ನು ಬೆನ್ನಟ್ಟಿ ಸಂಹರಿಸಹತ್ತಿದರು. ಅಕಸ್ಮಾತ್ತಾಗಿ ಹೀಗೆ ಯಾಕಾ ಯಿತೆಂಬದು ಯಾರಿಗೂ ತಿಳಿಯಲೊಲ್ಲದು. ವಿಜಯನಗರದ ಸೈನಿಕರು ಆಶ್ಚ ರ್ಯಚಕಿತರಾದರು; ಆದರೆ ಓಡಿಹೋಗುವದರ ಹೊರತು ಬೇರೆ ವಿಚಾರವೇ ಅವರಿಗೆ ಹೊಳೆಯಲಿಲ್ಲವು. ಹೀಗೆ ಒಂದು ಒಂದೂವರೆ ತಾಸಿನವರೆಗೆ ಓಡುವ ಕೆಲಸವು ನಡೆಯಿತು. ಅಷ್ಟರಲ್ಲಿ ಹಿಂದೂ ದಂಡಾಳುಗಳಿಗೆ ಅಕಸ್ಮಾತ್ತಾಗಿ ಮತ್ತೊಂದು ಗಂಡಾಂತರವು ಒದಗಿತು. ವಿಶ್ವಾಸ ಘಾತಕಿಯಾದ ರಣಮಸ್ತ ಖಾನನು ತನ್ನ ಅರಬ-ಪಠಾಣ ಸೈನ್ಯವನ್ನು, ಓಡಿಬರುವ ಹಿಂದುಗಳ ಸೈನ್ಯದ ಮೇಲೆ ನೂಕಿದನು. ಹಿಂದೆ ಮುಸಲ್ಮಾನ ಬಾದಶಹರ ಸೈನ್ಯ, ಮುಂದೆ ರಣ ಮಸ್ತಖಾನನ ಸೈನ್ಯ ಹೀಗೆ ಅಡತೊತ್ತಿನಲ್ಲಿ ಸಿಕ್ಕ ಅಡಿಕೆಯಂತೆ ಹಿಂದು ಸೈನಿಕರು ಜಿಬ್ಬಿಯಾಗಹತ್ತಿದರು. ಅವರಿಗೆ ಹಿಂದಿರುಗಿ ಕಾದಲಿಕ್ಕೆ ಬರಲೊಲ್ಲದು; ಮುಂದಕ್ಕೆ ಓಡೋಹೆಗಲಿಕ್ಕೂ ಬರಲೊಲ್ಲದು. ಹೀಗಾಗಿ ಭಯಂಕರವಾದ

ಕೊಲೆಗೆ ಆರಂಭವಾಯಿತು. ಹಿಂದೂ ಸೈನಿಕರ ಹೆಣಗಳ ರಾಶಿಗಳು ಬಿದ್ದವು. ಸಾವಿರಾರು ಆನೆ-ಕುದುರೆಗಳು ದಿಂಡುರುಳಿದವು. ಇಂಥ ಪ್ರಸಂಗದಲ್ಲಿ ರಾಮರಾಜನ ಮುನ್ನೂರು ಜನ ಸ್ವಾಮಿ ಭಕ್ತ ದಂಡಾಳುಗಳು ತಮ್ಮ ಒಡೆಯನನ್ನಾದರೂ ಮುದ್ಗಲ ಕೋಟೆಯವರೆಗೆ ಸುರಕ್ಷಿತವಾಗಿ ಕರಕೊಂಡು ಹೋಗಬೇಕೆಂದು ನಿಶ್ಚಯಿಸಿ, ರಾಮರಾಜನ ರಥವನ್ನು ದಕ್ಷತೆಯಿಂದ ರಕ್ಷಿಸುತ್ತ ಅದನ್ನು ಭರದಿಂದ ಸಾಗಿಸಿಕೊಂಡು ಹೋಗುತ್ತಲಿದ್ದರು; ಆದರೆ ಭವಿತವ್ಯವನ್ನು ತಪ್ಪಿಸುವದು ಯಾರಿಂದಲೂ ಆಗದೆಂಬ ನ್ಯಾಯದಂತೆ, ರಾಮರಾಜನ ರಥವು ರಣಮಸ್ತಖಾನನ ಕಣ್ಣಿಗೆ ಬಿದ್ದಿತು. ಆಗ ದುಷ್ಟ ರಣಮಸ್ತನು ಬಹು ಸಮಾಧಾನಪಟ್ಟು, ಇಂಥ ಪ್ರಸಂಗದಲ್ಲಿ ಸಾಧಿಸಿದರೇ ತನ್ನ ಪ್ರತಿಜ್ಞೆಯು ಸಾಧಿಸುವದೆಂದು ತಿಳಿದು ಆತನು ನೂರಾಐವತ್ತು ಜನರೊಡನೆ ರಾಮರಾಜನ ರಥವನ್ನು ಬೆನ್ನಟ್ಟಿ ನಡೆದನು. ರಾಮರಾಜನ ಜನರು ತಮ್ಮ ಒಡೆಯನನ್ನು ರಕ್ಷಿಸುವ ವಿಷಯವಾಗಿ ನಿಶ್ಚಯಮಾಡಿಕೊಂಡಿದ್ದರು. ತಮ್ಮಲ್ಲಿ ಒಬ್ಬನಾದರೂ ಜೀವದಿಂದಿರುವವರೆಗೆ ರಾಮರಾಜನ ಕೂದಲಿಗೆ ದಕ್ಕಿಹತ್ತ ಗೊಡಲಿಕ್ಕಿಲ್ಲೆಂದು ಅವರು ನಿರ್ಧರಿಸಿಕೊಂಡಿದ್ದರು. ಇತ್ತ ರಣಮಸ್ತಖಾನನೂ ತನ್ನ ಪ್ರತಿಜ್ಞೆಯನ್ನು ನೆರವೇರಿಸಲು ಆತುರಪಡುತ್ತಲಿದ್ದನು. ಮುದ್ಗಲ ಕೋಟೆಯೊಳಗೆ ರಾಮರಾಜನು ಹೋಗುವದರೊಳಗಾಗಿ ಎಲ್ಲಿಯಾದರೂ ಕಂದಕದ ಬಳಿಯಲ್ಲಿ ರಾಮರಾಜನಿಗೆ ಗಂಟುಬಿದ್ದು, ಆತನ ಕುತ್ತಿಗೆ ಕೊಯ್ಯಬೇಕೆಂದು ಆ ವಿಶ್ವಾಸಘಾತಕಿಯು ನಿಶ್ಚಯಿಸಿದ್ದನು. ರಣಮಸ್ತನು ತನ್ನ ಸರಿವಾರದೊಡನೆ ತೀರ ಸನಿಯಕ್ಕೆ ಬಂದದ್ದನ್ನು ನೋಡಿ, ರಾಮರಾಜನ ರಕ್ಷಕರಾದ ಮುನ್ನೂರು ಜನರಲ್ಲಿ ನೂರಾ ಐವತ್ತು ಜನರು ರಣಮಸ್ತನ ಸಂಗಡ ಕಾದುವದಕ್ಕಾಗಿ ನಿಂತು ಉಳಿದ ನೂರಾಐವತ್ತು ಜನರು ರಾಮರಾಜನ ರಥವನ್ನು ಸಾಗಿಸಿಕೊಂಡು ಹೋಗಹತ್ತಿದರು. ಇದನ್ನು ನೋಡಿ ರಣಮಸ್ತನು ತನ್ನ ಸೈನ್ಯವನ್ನು ದ್ವಿಭಾಗಿಸಿ, ಎಪ್ಪತ್ತೈದು ಜನರನ್ನು ಹಿಂದಕ್ಕೆ ಕಾದಲು ಬಿಟ್ಟು, ಉಳಿದ ಎಪ್ಪತ್ತೈದು ಜನರನ್ನು ತನ್ನ ಸಂಗಡ ಕರಕೊಂಡು ರಾಮರಾಜನ ರಥದಮೇಲೆ ಸಾಗಿಹೋದನು. ದೈವವು ರಾಮರಾಜನಿಗೆ ತೀರ ಪ್ರತಿಕೂಲವಾಗಿತ್ತು. ರಣಮಸ್ತನ ಜನರ ದಾಳಿಯಲ್ಲಿ ರಾಮರಾಜನ ರಥದ ಒಂದು ಕುದುರೆಯ ಕಾಲು ಕಡಿದುಬಿದ್ದು ರಥವು ನಿಂತುಬಿಟ್ಟಿತು. ರಾಮರಾಜನ ಜನರು ರಣಮಸ್ತನ ಜನರೊಡನೆ ಕಾದಹತ್ತಿದರು. ತಮ್ಮ ಒಡೆಯನ ದುರವಸ್ಥೆಯಿಂದ ರಾಮರಾಜನ ರಕ್ಷಕರು ಹತಾಶರಾಗಿ, ದಿಕ್ಕುಗೆಟ್ಟು ಓಡಹತ್ತಿದರು. ಆಗ ರಣಮಸ್ತನು ರಾಮರಾಜನ ಬಳಿಗೆ ಹೋದನು; ಆದರೆ

ರಾಮರಾಜನು ಹೆದರದೆ ಕಾದುತ್ತಿರುವಾಗ ಆತನದೊಂದು ಕೈಯು ಕತ್ತರಿಸಿ ಬಿದ್ದಿತು. ಆಗ ರಣಮಸ್ತನು ರಾಮರಾಜನನ್ನು ಹಿಡಿದು ನಿಲ್ಲಿಸಿ,

ರಣಮಸ್ತ—ನೂರಜಹಾನಳನ್ನು ಎಲ್ಲಿ ಇಟ್ಟಿರುವೆ, ಮೊದಲು ಹೇಳು.

ರಾಮರಾಜ—ತಮ್ಮಾ, ರಣಮಸ್ತ, ನೀನು ನನ್ನಮೇಲೆ ತಿರುಗಿಬೀಳುವೆಯಾ? ನೀನು ನನ್ನ.....

ರಣಮಸ್ತ—ನನ್ನ ಮುಂದೆ ಬೇರೆ ಯಾವ ಮಾತೂ ಆಡಬೇಡ. ನೂರಜಹಾನಳನ್ನು ಎಲ್ಲಿ ಇಟ್ಟಿರುತ್ತೀ ಮೊದಲು ಹೇಳು, ಇಲ್ಲದಿದ್ದರೆ ನಿನ್ನ ಶಿರಚ್ಛೇದ ಮಾಡುವೆನು.

ರಾಮರಾಜ—ನೀನೆ? ನೀನು ನನ್ನ ಶಿರಚ್ಛೇದ ಮಾಡುವೆಯಾ?

ರಣಮಸ್ತ—ಹೌದು, ಮಾಡುವೆನು; ಆದರೆ ಮೊದಲು ನೂರಜಹಾನಳು ಎಲ್ಲಿ ಇರುತ್ತಾಳೆ ಹೇಳು.

ರಾಮರಾಜ—ನೂರಜಹಾನಳೆ? ನೂರಜಹಾನಳು ಆ ಕುಂಜವನದಲ್ಲಿರುತ್ತಾಳೆ.

ರಣಮಸ್ತ —ಕುಂಜವನದಲ್ಲಿರುವಳೆ? ಶಾಬಾಸ! ಒಳ್ಳೇದಾಯಿತು, ಬಹಳ ಒಳ್ಳೇದಾಯಿತು. ಬಹು ಯೋಗ್ಯವಾದ ಸ್ಥಳದಲ್ಲಿ ಆಕೆಯನ್ನು ಇಟ್ಟಿರುವೆ. ಇನ್ನು ಮೇಲೆ ನೀನು ಈ ಜಗತ್ತಿನಲ್ಲಿ ಇರಲವಶ್ಯವಿಲ್ಲ. ಇಲ್ಲಿ ನಿನ್ನ ಕೆಲಸವೇನೂ ಇಲ್ಲ. ನೂರಜಹಾನಳ ಪ್ರಾಪ್ತಿಗಾಗಿ ನಾನು ನಿನ್ನ ಶಿರಚ್ಛೇದ ಮಾಡಲೇಬೇಕಾಗಿರುವದು.

ಈ ಮೇರೆಗೆ ನುಡಿದು ರಣಮಸ್ತಖಾನನು ಒಮ್ಮೆಲೆ ರಾಮರಾಜನ ತಲೆಯ ಮೇಲಿನ ಮುಂಡಾಸವನ್ನು ಹಾರಿಸಿ, ಆತನ ಚಂಡಿಕೆ ಹಿಡಿದು, ಖಡ್ಗದಿಂದ ಅವನ ರುಂಡವನ್ನು ದಿಂಡದಿಂದ ಬೇರೆಮಾಡಿದನು. ಆಗ ಅವನ ರುಂಡವು—ತಮ್ಮಾ, ರಣಮಸ್ತ, ನೀನು ನನ್ನ.....ಎಂದು ಏನೋ ನುಡಿಯುತ್ತಿತ್ತು. ತಮ್ಮ ಒಡೆಯನ ಈ ಕೃತಿಯನ್ನು ನೋಡಿ ರಣಮಸ್ತನ ಜನರು ಆತನನ್ನು ಬಹಳವಾಗಿ ಶ್ಲಾಘಿಸಿದರು. ರಣಮಸ್ತನು ರಕ್ತಸುರಿಯುತ್ತಿರುವ ರಾಮರಾಜನ ಶಿರಸ್ಸನ್ನು ಕುದುರೆಯ ರಿಕೀಬಿಗೆ ಕಟ್ಟಿ, ತನ್ನ ಜನರೊಡನೆ ಕುಂಜವನದಕಡೆಗೆ ಸಾಗಿದನು. ರಣಮಸ್ತನಿಗೆ ತುಂಗಭದ್ರೆಯ ಕಾಲಹೊಳೆಯು ಜೆನ್ನಾಗಿ ಗೊತ್ತಿದ್ದರಿಂದ, ಆತನು ಆ ಕಾಲಹೊಳೆಯಲ್ಲಿ ಕುದುರೆಯನ್ನು ನೂಕಿದನು. ಆಗ ತುಂಗಭದ್ರೆಯ ಪವಿತ್ರೋದಕದಲ್ಲಿ ರಾಮರಾಜನ ರುಂಡದ ರಕ್ತವು ತೊಳೆಯುತ್ತಲಿತ್ತು. ಬರಬರುತ್ತ ಆ ಕೊಲೆಗಡಕನು ಕುಂಜವನದ ಸನಿಯಕ್ಕೆ ಬಂದನು. ರಣಮಸ್ತನ ಕುದುರೆಯು ಯುದ್ಧದಲ್ಲಿ ಬಹಳ

ವಾಗಿ ದಣಿದಿತ್ತು. ತುಂಗಭದ್ರೆಯನ್ನು ದಾಟುವಾಗಂತು ಅದು ತೀರ ಹಣ್ಣಾಗಿತ್ತು. ಆದರೆ ನೂರಜಹಾನಳ ಧ್ಯಾನಮಗ್ನನಾದ ರಣಮಸ್ತನು, ಕುದುರೆಯ ಕಡೆಗೆ ನೋಡದೆ ಅದನ್ನು ವೇಗದಿಂದ ಸಾಗಿಸಿಕೊಂಡು ಹೋಗಿ ಕುಂಜವನವನ್ನು ಪ್ರವೇಶಿಸಿದನು.

ಆಗ ಇಳಿಯಹೊತ್ತಿನ ಸಮಯವಾಗಿತ್ತು. ಸೂರ್ಯಾಸ್ತಕ್ಕೆ ಇನ್ನು ತಾಸು-ಒಂದೂವರೆ ತಾಸಿನ ಅವಕಾಶವಿರಬಹುದು. ಮೆಹೇರಜಾನ-ನೂರಜಹಾನರಲ್ಲಿ ಮೊದಲಿನಂತೆ ಸಖ್ಯವು ಉತ್ಪನ್ನವಾಗಿರಲು, ಅವರು ಆಗ ಪುಷ್ಕರಣಿಯ ದಂಡೆಯಮೇಲೆ ಒಬ್ಬರೊಬ್ಬರಿಗೆ ಸಮಾಧಾನದ ಮಾತುಗಳನ್ನು ಹೇಳುತ್ತ ಕುಳಿತುಕೊಂಡಿದ್ದರು. ರಣಮಸ್ತನು ಬಾದಶಹನ ಮೇಲೆ ತಿರುಗಿಬಿದ್ದು ರಾಮರಾಜನನ್ನು ಕೂಡಿಕೊಂಡದ್ದಕ್ಕಾಗಿ ಇಬ್ಬರೂ ವ್ಯಸನಬಡುತ್ತಲಿದ್ದರು. ನೂರಜಹಾನಳಿಗೆ ಮಾತ್ರ ರಣಮಸ್ತನು ಫಿತೂರ ಆದದ್ದು ಅಷ್ಟು ವಿಶ್ವಸನೀಯವಾಗಿ ತೋರುತ್ತಿದ್ದಿಲ್ಲ. ಆಕೆಯು ಮೆಹೇರಜಾನಳನ್ನು ಕುರಿತು—" ಮಾಸಾಹೇಬ, ನವಾಬಸಾಹೇಬರು ರಾಮರಾಜನನು ಕೂಡಿಕೊಂಡಿದ್ದು ಅವನ ನಾಶಕ್ಕಾಗಿಯೇ ಎಂಬಂತೆ ನನಗೆ ತೋರುತ್ತದೆ. ಕೂಡಿದ ದರ್ಬಾರದಲ್ಲಿ ನನ್ನ ಮಾನಖಂಡನ ಮಾಡಿದ್ದಕ್ಕಾಗಿ ರಣಮಸ್ತಖಾನರು ಘೋರ ಪ್ರತಿಜ್ಞೆಯನ್ನು ಮಾಡಿರಲು, ಅವರು ರಾಮರಾಜನ ನೌಕರರಾಗಿ ಇರಬಹುದೆ? ಎಂದು ಕೇಳಿದಳು. ಆಕೆಯ ಈ ಪ್ರಶ್ನವು ಮೆಹೇರಜಾನಳಿಗೆ (ಮಾಸಾಹೇಬರಿಗೆ) ವಿಶ್ವಸನೀಯವಾಗಿ ತೋರಲಿಲ್ಲ. ಈ ವಿಷಯವನ್ನು ಕುರಿತು, ಪುಷ್ಕರಣಿಯ ತೀರದಲ್ಲಿ ಅವರ ಸಂಭಾಷಣಗಳು ನಡೆದಿದ್ದವು. ಇತ್ತ ರಣಮಸ್ತನು ಕುಂಜವನವನ್ನು ಪ್ರವೇಶಿಸಿ ನೆಟ್ಟಗೆ ಬಂಗಲೆಗೆಬರಲು, ಅಲ್ಲಿ ಮಾರ್ಜಿನೆಯು ಆತನಿಗೆ ಭೆಟ್ಟಿಯಾದಳು. ಆಗ ರಣಮಸ್ತನು ಆಕೆಯನ್ನು ಕುರಿತು,

ರಣಮಸ್ತ—ಲೈಲೀ, ನೀನೊಬ್ಬಳೇ ಇಲ್ಲಿಯಾಕೆ? ಮಾಸಾಹೇಬರು ಎಲ್ಲಿ ಇರುತ್ತಾರೆ? ನೂರಜಹಾನಳು-ನನ್ನ ಅರಗಿಳಿಯು-ಎಲ್ಲಿ ಇರುತ್ತದೆ? ಇಷ್ಟು ದಿನ ಕಪಟನಾಟಕವನ್ನು ಹೂಡಿ ಸಂಪಾದಿಸಿದ ಯಶಸ್ಸನ್ನು ಕಾಣಿಕೆಯಾಗಿ ಅವರ ಮುಂದೆ ಇಡಲಿಕ್ಕೆ ನಾನು ತಂದಿರುತ್ತೇನೆ. ಹೋಗು, ಒಂದು ಬೆಳ್ಳಿಯ ತಬಕವನ್ನು ತಕ್ಕೊಂಡು ಬಾ, ಕಾಣಿಕೆಯ ವಸ್ತುವನ್ನು ಅದರಲ್ಲಿಟ್ಟು ಅವರ ಮುಂದೆ ಇಡೋಣ.

ಲೈಲಿ (ಆಶ್ಚರ್ಯದಿಂದ ಮುಂದುಗಾಣದೆ)—ಒಡೆಯರೇ, ನಿಮ್ಮ ಮಾತುಗಳ ಅರ್ಥವು ನನಗೆ ತಿಳಿಯಲೊಲ್ಲದು; ಆದರೆ ನೀವು ಹೀಗೆ ರಕ್ತದಿಂದ ಸ್ನಾನ ಮಾಡಿ ಎಲ್ಲಿಂದ ಬಂದಿರಿ? ಅದರ ವೃತ್ತಾಂತವಾದರೂ ಏನು?

ರಣಮಸ್ತ—ಆ ವೃತ್ತಾಂತವನ್ನು ಬೇಗನೆ ಕೇಳಿಕೊಳ್ಳಬೇಕೆಂಬ ಇಚ್ಛೆಯು ನಿನಗೆ ಇದ್ದರೆ, ನನ್ನ ಅರಗಿಳಿಯು ಎಲ್ಲಿ ಇರುತ್ತದೆಂಬದನ್ನು ಹೇಳು. ನನ್ನನ್ನು ಅತ್ತಕಡೆಗೆ ಕರೆದುಕೊಂಡು ಹೋಗು. ಆ ನೂರಜಹಾನಳು ಎಲ್ಲಿರುತ್ತಾಳೆ? ಮಾಸಾಹೇಬರು ಎಲ್ಲಿರುತ್ತಾರೆ?

ಲೈಲಿ—ಅವರಿಬ್ಬರೂ ಅತ್ತ ಆ ಪುಷ್ಕರಣಿಯ ತೀರದಲ್ಲಿ ಹೋಗಿ ಕುಳಿತುಕೊಂಡಿರುತ್ತಾರೆ.

ರಣಮಸ್ತ—ಓಗೋ! ಅವರಿಬ್ಬರೂ ಒತ್ತಟ್ಟಿಗೇ ಇರುವರೇನು? ಹಾಗಾದರೆ ಬಹಳ ಸೆಟ್ಟಗಾಯಿತು. ನಾನು ಅತ್ತಕಡೆಗೇ ಹೋಗುತ್ತೇನೆ.

ಓಗೆಂದು ರಣಮಸ್ತನು ಕುದುರೆಯಿಂದ ಕೆಳಗೆ ದುಮುಕಿ, ರಾಮರಾಜನ ರುಂಡವನ್ನು ತನ್ನ ಕರವಸ್ತ್ರದಲ್ಲಿ ಸುತ್ತಿ ಹಿಡಿದುಕೊಂಡು, ನೆಟ್ಟಗೆ ಪುಷ್ಕರಣಿಯ ತೀರಕ್ಕೆ ಹೋದನು. ಅಲ್ಲಿ ಅವರಿಬ್ಬರು ಮೇಲೆ ಹೇಳಿದಂತೆ ರಣಮಸ್ತನ ಫಿತೂರಿಯನ್ನು ಕುರಿತು ಮಾತಾಡುತ್ತ ಕುಳಿತುಕೊಂಡಿದ್ದರು. ಮೆಹೇರಜಾನಳು ನೂರಜಹಾನಳಿಗೆ—ತಂಗೀ, ನಿನ್ನ ಮಾತು ನನಗೆ ನಂಬಿಗೆಯಾಗಿ ತೋರುವದಿಲ್ಲ. ಒಂದು ಪಕ್ಷದಲ್ಲಿ ರಣಮಸ್ತನು ರಾಮರಾಜನ ಮೇಲೆ ತಿರುಗಿಬಿದ್ದರೂ ಆತನು ರಾಮರಾಜನ ಶಿರಸ್ಸನ್ನು ತರುವ ಬಗೆ ಹ್ಯಾಗೆ? ಎಂದು ಪ್ರಶ್ನಮಾಡುತ್ತಿರಲು, ಅದಕ್ಕೆ ನೂರಜಹಾನಳು ಉತ್ತರಕೊಡುವ ಮೊದಲೇ ರಣಮಸ್ತನು ರಾಮರಾಜನ ಶಿರಸ್ಸನ್ನು ಅವರಿಬ್ಬರ ನಡುವೆ ದೊಪ್ಪನೆ ಒಗೆದು—"ಇದೇ ಆ ರಾಮರಾಜನ ಶಿರಸ್ಸು; ನನ್ನ ಪ್ರತಿಜ್ಞೆಯನ್ನು ಪೂರ್ಣಮಾಡಿದ ನಿಶಾನೆಯಿದು; ಇದನ್ನು ನಿಮ್ಮಿಬ್ಬರಿಗೂ ಕಾಣಿಕೆಯಾಗಿ ಅರ್ಪಿಸಿರುತ್ತೇನೆ! ಅರಗಿಳಿಯೇ, ಯಾವನು ನೆರೆದ ದರ್ಬಾರದಲ್ಲಿ ನಿನ್ನ ಮಾನಖಂಡನ ಮಾಡಿದನೋ, ಅವನ ತಲೆಯಿದು ನೋಡು! ಇದನ್ನು ಕೈಮುಟ್ಟಿ ನಾನು ಕೊಯ್ದು ತಂದಿರುತ್ತೇನೆ," ಎಂದು ನುಡಿಯುತ್ತಿರಲು, ಮೆಹೇರಜಾನಳು ಆ ರುಂಡವ ಗುರುತುಹಿಡಿದು, ಅತ್ಯಂತ ದುಃಖದಿಂದ ತಟ್ಟನೆ ರಣಮಸ್ತನಿಗೆ,

ಮೆಹೇರಜಾನ—ಮಗುವೇ, ನೀನು-ನೀನು ಈ ಶಿರಸ್ಸನ್ನು ಕೈಮುಟ್ಟಿ ತುಂಡರಿಸಿದೆಯಾ?

ರಣಮಸ್ತ—ಹೌದಹುದು. ಮಾಸಾಹೇಬ, ಯಾವನ ದ್ವೇಷಮಾಡುವಂತೆ ನೀವು ಚಿಕ್ಕಂದಿನಿಂದ ನನಗೆ ಕಲಿಸಿದಿರೋ, ಆ ದುಷ್ಟ ರಾಮರಾಜನ ಶಿರಸ್ಸನ್ನು ನಾನು ಕೈಮುಟ್ಟಿ ತುಂಡರಿಸಿದೆನು.

ಮೆಹೇರಜಾನ—ತಮ್ಮಾ, ಮಗುವೇ, ಅಲ್ಲೋ, ಇವನು ನಿಮ್ಮ

ತಂದೆಯು! ಆದರೆ ಇನ್ನು ಪ್ರಯೋಜನವೇನು? ಈಗಾಗುವ ಪ್ರಯೋಜನವು ಇಷ್ಟೇ.....

ಈ ಮೇರೆಗೆ ನುಡಿಯುವ ಮೆಹೇರಜಾನಳ ಮಾತು ಕೇಳಿ ರಣಮಸ್ತನ ಮನಸ್ಸಿಗೆ ಹ್ಯಾಗಾದರೂ ಆಗಿರಲಿ; ಆದರೆ ಮೆಹೇರಜಾನಳು ಆ ಶಿರಸ್ಸನ್ನು ಬಲಗೈಯಿಂದ ಎತ್ತಿ ಹಿಡಿದು, ಅದನ್ನು ಒಮ್ಮೆ ದಿಟ್ಟಿಸಿ ನೋಡಿದಳು. ಇನ್ನು ಮೇಲೆ ಈಕೆಯು ಏನುಮಾಡುವಳೆಂಬದರ ತರ್ಕಮಾಡುವದರೊಳಗೆ ಆ ಪತಿಘಾತಕಳಾದ ಕರ್ಕಶಸ್ವಭಾವದ ಮೆಹೇರಜಾನಳು, ತನ್ನ ಪತಿಯ ರುಂಡದೊಡನೆ ಆ ಪುಷ್ಕರಣಿಯ ಗಂಭೀರಜಲದಲ್ಲಿ ಹಾರಿಕೊಂಡಳು. ಹೀಗೆ ಆ ದಂಪತಿಗಳಿಬ್ಬರ ಅಂತವಾಯಿತು.

ಒಳನೆಯ ಪ್ರಕರಣ:—ಸರ್ವಸ್ವದ ನಾಶ.

ಇದನ್ನು ನೋಡಿ ರಣಮಸ್ತಖಾನನು ದಂಗುಬಡಿದು ಏನೂ ತೋಚದೆ ಒಂದು ಕಲ್ಲಿನ ಗೊಂಬೆಯಂತೆ ಉಲುಕಾಡದೆ ಸುಮ್ಮನೆ ನಿಂತುಬಿಟ್ಟನು. ಇಷ್ಟು ಹೊತ್ತಿನತನಕ ಆತನ ಮುಖದಲ್ಲಿ ತೋರುತ್ತಿದ್ದ ಆನಂದ ವಿಜಯ, ಕೃತಕೃತ್ಯತೆ ಮೊದಲಾದ ವಿಕಾರಗಳ ಲಕ್ಷಣಗಳು ಮೆಹೇರಜಾನಳ ಕಟ್ಟಕಡೆಯ ಮಾತಿನಿಂದಲೂ, ಕೃತಿಯಿಂದಲೂ ಲಯಹೊಂದಿದವು. ಉಳಿದ ಪ್ರಸಂಗದಲ್ಲಿ ಆತನ ತಾಯಿಯು ಬದಿಯ ಪುಷ್ಕರಣಿಯಲ್ಲಿಯೇ ಏಕೆ, ಒಂದು ದೊಡ್ಡ ಕೊಳ್ಳದಲ್ಲಿ ಹಾರಿಕೊಂಡಿದ್ದರೂ, ಆಕೆಯನ್ನು ಕಡೆಗೆತೆಗೆಯುವದಕ್ಕಾಗಿ ರಣಮಸ್ತಖಾನನು ಆಕೆಯ ಹಿಂದೆಯೇ ಹಾರಿಕೊಳ್ಳುತ್ತಿದ್ದನು; ಆದರೆ ಈ ಪ್ರಸಂಗದಲ್ಲಿ ಆತನು ಕೇವಲ ನಿರ್ಜೀವನೂ, ನಿಶ್ಚಲನೂ, ನಿರ್ವಿಕಾರನೂ, ನಿರ್ವಿಚಾರಿಯೂ ಆಗಿದ್ದನು. ಆತನು ಕಲ್ಲಗೊಂಬೆಯಂತೆ ಎಷ್ಟೊಂದು ಹೊತ್ತು ನಿಂತುಬಿಟ್ಟಿದ್ದನು. ಇತ್ತ ನೂರಜಹಾನಳ ಸ್ಥಿತಿಯೂ ಹಾಗೆಯೇ ಆಗಿತ್ತು. ರಾಮರಾಜನು ರಣಮಸ್ತಖಾನನ ತಂದೆಯೆಂಬ ಕಲ್ಪನೆಯು ಆಕೆಯ ಮನಸ್ಸಿನಲ್ಲಿ ಎಂದೂ ಹೊಳೆದಿದ್ದಿಲ್ಲ. ಈ ವೀರನು ತನ್ನ ಮುಂದೆ ಮಾಡಿದ ಪ್ರತಿಜ್ಞೆಯನ್ನು ನೆರವೇರಿಸಿದ್ದರಿಂದ, ಈತನನ್ನು ಮದುವೆಯಾಗಬೇಕೆಂದು ಆಕೆಯು ನಿಶ್ಚಯಿಸಿದ್ದಳು; ಆದರೆ ರಣಮಸ್ತನು ಒಬ್ಬ ಹಿಂದುರಾಜನ ವ್ಯಭಿಚಾರದಿಂದ ಹುಟ್ಟಿ, ಪಿತೃವಧದಂಥ ನೀಚಕಾರ್ಯ ಮಾಡಿದವನೆಂಬ ವಿಚಾರವು ಮನಸ್ಸಿನಲ್ಲಿ ಹೊಳೆದಕೂಡಲೆ, ಆಕೆಯು ರಣಮಸ್ತನ ನೆರಳಿಗೆ ನಿಲ್ಲಲಿಕ್ಕೆಸಹ ಹೇಸಿಕೊಳ್ಳಹತ್ತಿದಳು. ಆಕೆಯು ಯಾವ ಉಪಾಯದಿಂದ ರಣಮಸ್ತನ ಬಳಿ

ಯಿಂದ ತಪ್ಪಿಸಿಕೊಂಡು ಹೋಗಬೇಕೆಂದು ಯೋಚಿಸುತ್ತಿದ್ದಳು. ಅಷ್ಟರಲ್ಲಿ ರಣಮಸ್ತನು ಎಚ್ಚತ್ತು ನೂರಜಹಾನಳಕಡೆಗೆ ನೋಡಿ—ನೂರಜಹಾನ, ನಿನ್ನ ಸಲುವಾಗಿ ನಾನು ಇಂಥ ಪರಾಕ್ರಮವನ್ನೂ, ಸಾಹಸವನ್ನೂ ಮಾಡಿದೆನು; ನಿನ್ನ ಮುಂದೆ ಮಾಡಿದ ಪ್ರತಿಜ್ಞೆಯನ್ನು ಪೂರ್ಣಮಾಡಿರುತ್ತೇನೆ. ಇನ್ನು ವಿಲಂಬ ವೇಕೆ? ನಮ್ಮಿಬ್ಬರ ಲಗ್ನವಾಗಲಿ, ಎಂದು ನುಡಿದು ನೂರುಜಹಾನಳ ಕೈ ಹಿಡಿಯ ಹೋಗಲು, ಆಕೆಯು ತಟ್ಟನೆ ಹಿಂದಕ್ಕೆ ಸರಿದು, ಗಾಬರಿಯಾಗಿ ರಣ ಮಸ್ತನನ್ನು ಕುರಿತು—ಇದೇನು ನಿಮ್ಮ ತಂದೆಯ ಶಿರಚ್ಛೇದ ಮಾಡಿದ ಕೈಯಿಂ ದಲೇ ನೀವು ನನ್ನ ಕೈಹಿಡಿಯುವರೇನು? ನಿಮ್ಮ ಪ್ರೇಮಲಸ್ವಭಾವದ ಮಾತೃ ಶ್ರೀಯು ತನ್ನ ಪತಿಯ ಶಿರಸ್ಸಿನೊಡನೆ ಇದೇ ಈಗ ಜಲಸಮಾಧಿಯನ್ನು ಹೊಂದಿರಲು, ಅದನ್ನೆಲ್ಲ ಮರೆತು, ಈದೇ ಕ್ಷಣದಲ್ಲಿ ಇಂಥ ಮಾತುಗಳನ್ನು ಆಡುವಿರಾ? ನೋಡಿರಿ, ನಿಮ್ಮ ವೃದ್ಧದಾಸಿಯಾವ ಲೈಲಿಯು ಇತ್ತಕಡೆಗೆ ಬರುತ್ತಾಳೆ, ಅನ್ನಲು ರಣಮಸ್ತನು ಮಾರ್ಜಿನೆಯಕಡೆಗೆ ನೋಡಿ, ಆಕೆಯ ಕೈಯನ್ನು ಹಿಡಿದು ಆಕೆಯನ್ನು ದರದರ ಎಳೆಯುತ್ತ ತಂದು—ಲೈಲೀ, ಹಿಂದ ಕ್ಕೆ ನೀನು ನನ್ನ ಜನ್ಮ ವೃತ್ತಾಂತವನ್ನು ಗೂಢವಿಟ್ಟು ಹೇಳಿದೆಯಲ್ಲ, ಈಗ ಅದನ್ನು ಸ್ಪಷ್ಟವಾಗಿ ಹೇಳು, ಇಲ್ಲದಿದ್ದರೆ ಮಾಸಾಹೇಬರನ್ನು ಬಿಂಬಾಲಿಸಿ ಹೋಗುವಂತೆ ನಿನ್ನ ಕುತ್ತಿಗೆ ಬಿಚಿಕಿ ಈ ಪುಷ್ಕರಣಿಯಲ್ಲಿ ಹಾಕುವೆನು ಎಂದನು.

ಮಾಸಾಹೇಬರು ಪುಷ್ಕರಣಿಯಲ್ಲಿ ಹಾರಿಕೊಂಡದ್ದನ್ನು ಮಾರ್ಜಿನೆಯು ದೂರಿಂದನೋಡಿದ್ದಳಾದ್ದರಿಂದ, ಆಕೆಗೆ ತನ್ನ ಜೀವವು ಜೇಡಾಗಿತ್ತು. ರಣ ಮಸ್ತನು ತನ್ನನ್ನು ನೋಡಿ ಕೈಹಿಡಿಯದಿದ್ದರೆ ಆಕೆಯು ಇಷ್ಟು ಹೊತ್ತಿಗೆ ಪುಷ್ಕ ರಣಿಯಲ್ಲಿ ಹಾರಿಕೊಂಡು ಬಿಡುತ್ತಿದ್ದಳು. ನಿರಿಚ್ಛಾದ ಆಕೆಯು ಈಗ ರಣ ಮಸ್ತನ ಆಗ್ರಹದ ಪ್ರಶ್ನಕ್ಕೆಲ್ಲುತ್ತರವನ್ನು ಹೇಳಿಬಿಡಬೇಕೆಂದು ನಿಶ್ಚಯಿಸಿ, ರಣ ಮಸ್ತನ ಜನ್ಮ ವೃತ್ತಾಂತವನ್ನು ಸಾದ್ಯಂತವಾಗಿ ಅವಸಿಗೆ ಹೇಳಿದಳು. ಇದನ್ನು ಕೇಳುತ್ತಿರುವಾಗ ರಣಮಸ್ತನ, ಹಾಗು ನೂರಜಹಾನಳ ಚಿತ್ತವೃತ್ತಿಗಳು ಹ್ಯಾಗಾ ಗಿರಬಹುದೆಂಬದನ್ನು ವರ್ಣಿಸುವದು ಸಾಧ್ಯವಲ್ಲ. ಪ್ರತ್ಯಕ್ಷ ತಂದೆಯು ನನ್ನನ್ನು ಅಕೃತ್ರಿಮರೀತಿಯಿಂದ ಪ್ರೀತಿಸುತ್ತಿರಲು, ನಾನು ಈ ಕೈಯಿಂದ ಆತನ ಶಿರಚ್ಛೇದ ಮಾಡಿ ಮಹಾ ಪಾತಕಕ್ಕೆ ಗುರಿಯಾದೆನಲ್ಲ! ಎಂದು ವಿಚಾರ ಮಾಡುತ್ತ ರಣಮಸ್ತನು ಸುಮ್ಮನೆ ಕುಳಿತುಬಿಟ್ಟನು. ಇತ್ತ ನೂರಜಹಾನಳು ರಣಮಸ್ತಖಾನನ ಕುಲವೃತ್ತಾಂತವನ್ನು ಕೇಳಿ, ಆತನನ್ನು ಬಹಳವಾಗಿ ತಿರ ಸ್ಕರಿಸಹತ್ತಿ, ತಾನು ಇನ್ನು ಈತನಬಳಿಯಲ್ಲಿಂದ ಹ್ಯಾಗೆ ಪಾರಾಗಿ ಹೋಗ ಬೇಕೆಂದು ಯೋಚಿಸುತ್ತ ಸುಮ್ಮನೆ ಕುಳಿತುಕೊಂಡಳು. ಹೀಗೆ ಇವರಿಬ್ಬರು

ವಿಚಾರಮಗ್ನರಾಗಿರಲು, ಮಾರ್ಜಿನೆಯು ಈ ಸಂಧಿಯನ್ನು ಸಾಧಿಸಿ ಪುಷ್ಕರಣಿಯಲ್ಲಿ ಹಾರಿಕೊಂಡಳು. ಆಕೆಯು ಹಾರಿಕೊಂಡ ಸಪ್ಪಳಕ್ಕೆ ರಣಮಸ್ತನು ಎಚ್ಚತ್ತು ನೂರಜಹಾನಳ ಕೈಯನ್ನು ಕಸುವಿನಿಂದ ಹಿಡಿದನು. ಈ ಕಾಲದಲ್ಲಿ ರಣಮಸ್ತನು ಉನ್ಮತ್ತನಾಗಿದ್ದನು. ಆತನ ಮೈಮೇಲೆ ಪೂರಾ ಎಚ್ಚರವು ಇದ್ದಿಲ್ಲ. ಆತನು ನೂರಜಹಾನಳನ್ನು ಕುರಿತು—ನಿನ್ನ ಸಲುವಾಗಿ ನಾನು ಇದನ್ನೆಲ್ಲ ಮಾಡಿದೆನು. ಇನ್ನು ಈ ಮಂಗಲಭೂಮಿಯಲ್ಲಿ ನಮ್ಮಿಬ್ಬರ ಲಗ್ನವಾಗಲಿ, ನೋಡು, ನಮ್ಮ ಲಗ್ನದ ಸಮಾರಂಭವನ್ನು ನೋಡಿ ಸಂತೋಷಪಟ್ಟು ನಮ್ಮನ್ನು ಆಶೀರ್ವದಿಸುವದಕ್ಕಾಗಿ ನನ್ನ ತಾಯಿ ತಂದೆಗಳಿಬ್ಬರೂ ಪುಷ್ಕರಣಿಯಮೇಲೆ ಹ್ಯಾಗೆ ಬಂದು ಕುಳಿತುಕೊಂಡಿದ್ದಾರೆ! ಎಂದು ನುಡಿದವನೇ ಅರ್ಧ ಸತ್ತಂತೆ ಆಗಿದ್ದ ನೂರಜಹಾನಳನ್ನು ಎತ್ತಿಕೊಂಡು ಆ ರಾಕ್ಷಸ ಸದೃಶನಾದ ರಣಮಸ್ತನು ಪುಷ್ಕರಣಿಯಲ್ಲಿ ಹಾರಿಕೊಂಡನು ಅಂದಿನ ಕಗ್ಗತ್ತಲೆಯ ರಾತ್ರಿಯಲ್ಲಿ ಆತನು ಹಾರಿಕೊಂಡ ಶಬ್ದವು ಪುಷ್ಕರಣಿಯಲ್ಲಿ ಪ್ರತಿಧ್ವನಿತವಾಯಿತು.

ಇತ್ತ ಹಿಂದೂ ದಂಡಾಳುಗಳು ರಾಮರಾಜನ ಶಿರಚ್ಛೇದವಾದದ್ದನ್ನು ಕೇಳಿ ದಿಕ್ಕು ದಿಕ್ಕಿಗೆ ಓಡಹತ್ತಿದರು. ಆಗ ಮುಸಲ್ಮಾನರು ಮಾಡಿದ ಕೊಲೆಯನ್ನು ವರ್ಣಿಸಲಸಾಧ್ಯವು. ಇಷ್ಟು ಭಯಂಕರ ರೀತಿಯಿಂದ ಹಿಂದೂ ಸೈನ್ಯದ ನಾಶಮಾಡುವ ಪ್ರಸಂಗ ಬಂದೀತೆಂದು ಮುಸಲ್ಮಾನರು ತಿಳಿದಿದ್ದಿಲ್ಲ. ಇಂಥ ಅನರ್ಥಕಾರಕವಾದ ಅಪಜಯಕ್ಕೆ ತಾವು ಗುರಿಯಾದೇವೆಂದು ಹಿಂದೂ ಸೈನಿಕರೂ ತಿಳಿದಿದ್ದಿಲ್ಲ. ಮುಸಲ್ಮಾನರ ಪರಾಭವವಾಗಿ ಬೇಗನೆ ಅವರು ತಮ್ಮ ಮಾಂಡಲಿಕರಾಗಿ ವಿಜಯನಗರದ ಸಾಮ್ರಾಜ್ಯವು ಕೃಷ್ಣೆಯ ಆಚೆಗಷ್ಟೇ ಅಲ್ಲ, ಉತ್ತರ ಹಿಂದೂಸ್ಥಾನದಲ್ಲಿಯೂ ಪಸರಿಸಿ, ಮೊಗಲರು ಸಹ ತಮ್ಮ ಮಾಂಡಲಿಕರಾಗುವರೆಂಬ ಸುಖಕರ ಕಲ್ಪನೆಯಿಂದ ವಿಜಯನಗರದ ಜನರ ಮಸ್ತಕಗಳು ತುಂಬಿಹೋಗಿದ್ದವು. ಆದರೆ ಒಂದು ದುರ್ದೈವವು ಆ ಕಲ್ಪನೆಗಳನ್ನೆಲ್ಲ ಮಣ್ಣುಗೂಡಿಸಿ ಸರ್ವಸ್ವದ ನಾಶವನ್ನುಂಟುಮಾಡಿತು. ಯುದ್ಧಭೂಮಿಯಿಂದ ಹತಾಶರಾಗಿ ರಾಜಧಾನಿಗೆ ಬಂದ ಸೈನಿಕರು ದೀನವಾಣಿಯಿಂದ ತಮ್ಮ ದುಸ್ಥಿತಿಯನ್ನು ವರ್ಣಿಸಲು, ನಾಲ್ಕೂಕಡೆಯಲ್ಲಿ ಹಾಹಾಕಾರವು ಉತ್ಪನ್ನವಾಯಿತು. ಅರಮನೆಯಲ್ಲಿದ್ದ ರಾಜನವಂಶಿಕರು ತಮ್ಮ ಕೈಗೆ ಸಿಕ್ಕಿ ಸಂಪತ್ತನ್ನು ತಕ್ಕೊಂಡು ರಾಜಧಾನಿಯನ್ನು ಬಿಡತೊಡಗಿದರು. ಇದನ್ನು ನೋಡಿ ನಾಗರಿಕರು ಹೌಹಾರಿದರು. ಅದರಲ್ಲಿ, ರಣಾಂಗಣದಿಂದ ಪಾರಾಗಿ ಬಂದ ತಿರುಮಲರಾಯನು, ಅರಮನೆಗೆ ಬಂದಕೂಡಲೆ, ಮೊದಲು ಸೆರೆಮನೆಯ

ಲ್ಲಿಟ್ಟಿದ್ದ ಸದಾಶಿವರಾಯನನ್ನು ಕರಕೊಂಡು ಅಗಣಿತ ಸಂಪತ್ತಿಯೊಡನೆ ರಾಜಧಾನಿಯಿಂದ ಹೊರಟುಹೋದನು. ಪ್ರತ್ಯಕ್ಷ ಸೇನಾಪತಿಯೇ ಹೀಗೆ ಓಡಿಹೋದ ಬಳಿಕ ಉಳಿದವರು ಏನು ಮಾಡಬೇಕು? ಯಾವನ ಕೈಗೆ ಏನು ಸಿಕ್ಕಿತೋ ಅದನ್ನು ತಕ್ಕೊಂಡು ಜನರು ರಾಜಧಾನಿಗೆ ಶರಣುಹೊಡೆದು ನಡೆಯಹತ್ತಿದರು. ಪಟ್ಟಣದೊಳಗಿನ ಸೆಟ್ಟರು—ಸಾವಕಾರರು ಮಾತ್ರ ಎಲ್ಲಿಗೂ ಹೋಗಲಿಕ್ಕೆ ಬಾರದಾಯಿತು. ಆನೆ-ಕುದುರೆ-ಒಂಟೆ-ಎತ್ತು-ಕತ್ತೆ ಮುಂತಾದ ವಾಹನಗಳು ಯುದ್ಧಕ್ಕೆ ಹೋದದ್ದರಿಂದ, ಅವರಿಗೆ ವಾಹನಗಳೇ ಸಿಗದಾದವು. ಅವರು ತಮ್ಮ ಸಂಪತ್ತನ್ನೆಲ್ಲ ಹೂಳಿಕೊಂಡು ಕುಳಿತರು. ಪಟ್ಟಣದೊಳಗಿನ ಸಶಸ್ತ್ರರಾದ ತರುಣರು ಆತ್ಮ ಸಂರಕ್ಷಣವನ್ನು ಮಾಡಿಕೊಳ್ಳುವದಕ್ಕೆ ಸಜ್ಜಾಗಿ ನಿಂತರು ಈ ಅರಾಜಕ ಸ್ಥಿತಿಯಲ್ಲಿ ಲಮ್ಬಾಣಿಗಳು, ಕೊರಚರು ಮುಂತಾದ ಕಾಡುಜನರು ಹಗಲುಹಾಡಿ ಸಾವುಕಾರರ ಮನೆಗೆ ದರವಡೆಗಳನ್ನಿಕ್ಕಹತ್ತಿದರು. ಹೀಗೆ ಒಂದು ದಿವಸದಲ್ಲಿ ವಿಜಯನಗರದ ಅಂತಃಸ್ಥಿತಿಯು ಕೆಟ್ಟುಹೋಗಲು, ಮುಂದೆ ಮೂರು ದಿವಸ ಒಂದೇಸವನೆ ಅಂತಃ ಶತ್ರುಗಳ ಸುಲಿಗೆಯ ಕೆಲಸವು ನಡೆಯಿತು. ಮುಂದೆ ನಾಲ್ಕನೆಯ ದಿವಸ ಶತ್ರುಗಳು ಪಟ್ಟಣವನ್ನು ಪ್ರವೇಶಿಸಿ ಘೋರಕೃತ್ಯಗಳನ್ನು ನಡಿಸಿದರು. ಬರಿಯ ಪಟ್ಟಣವನ್ನು ಸುಲಿದು ಸಂಪತ್ತು ಒಯ್ಯುವದರಿಂದಷ್ಟೇ ಅವರು ತೃಪ್ತರಾಗುವಂತೆ ಇದ್ದಿಲ್ಲ. ವಿದ್ಯಾನಗರವನ್ನು ಸಮೂಲನಾಶಮಾಡಲು, ಅವರು ಪ್ರತಿಜ್ಞೆ ಮಾಡಿರುವಂತೆ ತೋರಿತು. ಅವರು ಮೊದಲು ನಿರ್ದಯತನದಿಂದ ಕೈಗೆ ಸಿಕ್ಕವರನ್ನು ಕೊಂದುಹಾಕಿದರು. ತೋಪುಗಳನ್ನು ಹೂಡಿ ಅರಮನೆಯನ್ನು ನಾಶಮಾಡಿದರು, ದೇವಸ್ಥಾನಗಳನ್ನು ಕೆಡವಿದರು. ನೂರಾರು ಮೂರ್ತಿಗಳನ್ನು ಒಡೆದರು. ನೃಸಿಂಹನ ಪ್ರಚಂಡ ಮೂರ್ತಿಯನ್ನು ಛಿನ್ನವಿಚ್ಛಿನ್ನವಾಗಿ ಮಾಡಿದರು. ದೊಡ್ಡ ದೊಡ್ಡ ಸಭಾಮಂಟಪಗಳನ್ನು ನೆಲಸಮಮಾಡಿದರು. ಕೋಟಿಗಟ್ಟಲೆ ವೆಚ್ಚಮಾಡಿ ರಚಿಸಿದ ಕಲಾಕೌಶಲ್ಯಗಳ ನಾಶಮಾಡಲಿಕ್ಕೆ ಮುಸಲ್ಮಾನರಿಗೆ ಎಂಟುದಿನಗಳು ಸಹ ಹತ್ತಲಿಲ್ಲ. ವಿಜಯನಗರವನ್ನು ರಕ್ಷಿಸುವವರು ಯಾರೂ ಉಳಿಯಲಿಲ್ಲ. ಈ ಐಶ್ವರ್ಯಯುಕ್ತ ನಗರದಲ್ಲಿ ಸಂಪತ್ತು ಎಷ್ಟು ತುಂಬಿರುವದೆಂಬದರ ಕಲ್ಪನೆಯು, ಈ ಸುಲಿಗೆಯ ಪ್ರಸಂಗವು ಒದಗುವವರೆಗೆ ಯಾರಿಗೂ ಆಗಿದ್ದಿಲ್ಲೆಂದು ಹೇಳಬಹುದು. ಕೋಟೋ ಎಂಬ ಹೆಸರಿನ ಇತಿಹಾಸಕಾರನು ಹೇಳುವದೇನಂದರೆ—"ಈ ಸುಲಿಗೆಯಲ್ಲಿ ಅಗಣಿತ ಸಂಪತ್ತು ಸುಲಿಯಲ್ಪಟ್ಟಿತು. ಅದರಲ್ಲಿ ಸಿಕ್ಕ ಒಂದು ರತ್ನವು ಕೋಳಿಯ ತತ್ತಿಯಷ್ಟು ಇತ್ತು. ಈ ರತ್ನವನ್ನು ರಾಮರಾಜನು ತನ್ನ ಕುದುರೆಯ ಶಿರೋಭೂಷಣದಲ್ಲಿ ಕೂಡ್ರಿಸಿದ್ದನು. ಈ ರತ್ನವು ಮುಂದೆ ಅದಿಲಶಹನ ವಶವಾಯಿತು." ಕುದುರೆಯ

ಶಿರೋಭೂಷಣದಲ್ಲಿಯೇ ಇಷ್ಟು ದೊಡ್ಡ ರತ್ನವಿದ್ದ ಬಳಿಕ ರಾಜಗೃಹದಲ್ಲಿಯೂ, ಧನಿಕರ ಮನೆಗಳಲ್ಲಿಯೂ ಎಷ್ಟು ಸಂಪತ್ತು ಕೂಡಿ ಬಿದ್ದಿತ್ತೆಂಬದನ್ನು ನಮ್ಮಂಥ ದರಿದ್ರರು ಕಲ್ಪಿಸುವದು ಅಸಾಧ್ಯವೇ ಸರಿ! ಅರಸರೇನು, ದರಿದ್ರರೇನು ಕರ್ಮ ಫಲವನ್ನು ಭೋಗಿಸಿಯೇ ತೀರಬೇಕು!

ಸಂಪೂರ್ಣ.